JJSO

(B)025240

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹನ್ನೆರಡನೇ ವಿಧಾನಸಭೆಯ ಮೊದಲನೇ ಅಧಿವೇಶನ
FIRST SESSION OF THE TWELFTH LEGISLATIVE ASSEMBLY

ಸಂಪುಟ – 5 (ಕ್ರಮಾಂಕ 1-4) **Volume - 5 (No 1-4)**

(16ನೇ ಜೂನ್ 2004, 17ನೇ ಜೂನ್ 2004, 18ನೇ ಜೂನ್ 2004
ಹಾಗೂ 28ನೇ ಜೂನ್ 2004)
(16th June 2004, 17th June 2004, 18th June 2004
and 28th June 2004)

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

(B) 025240

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹನ್ನೆರಡನೇ ವಿಧಾನಸಭೆಯ ಮೊದಲನೇ ಅಧಿವೇಶನ
FIRST SESSION OF THE TWELFTH LEGISLATIVE ASSEMBLY

ಂಪುಟ – 5 (ಕ್ರಮಾಂಕ 1–4) **Volume - 5 (No 1-4)**

(16ನೇ ಜೂನ್ 2004, 17ನೇ ಜೂನ್ 2004, 18ನೇ ಜೂನ್ 2004
ಹಾಗೂ 28ನೇ ಜೂನ್ 2004)

(16th June 2004, 17th June 2004, 18th June 2004
and 28th June 2004)

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

109-1

ಕರ್ನಾಟಕ ವಿಧಾನಸಭೆ
ಹನ್ನೆರಡನೇ ವಿಧಾನಸಭೆಯ
(ಮೊದಲನೇ ಅಧಿವೇಶನ)

ಅಧ್ಯಕ್ಷರು
ಶ್ರೀ ಕೃಷ್ಣ

ಕಾರ್ಯದರ್ಶಿ
ಶ್ರೀ ಟಿ. ರಾಜಣ್ಣ

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

ವಿಷಯಾನುಕ್ರಮಣಿಕೆ

ಸಂಪುಟ–5 (ಕ್ರಮಾಂಕ 1 ರಿಂದ 4)

(16ನೇ ಜೂನ್ 2004, 17ನೇ ಜೂನ್ 2004, 18ನೇ ಜೂನ್ 2004 ಮತ್ತು 28ನೇ ಜೂನ್ 2004)

ಬುಧವಾರ, ದಿನಾಂಕ 16ನೇ ಜೂನ್ 2004

ಪುಟ ಸಂಖ್ಯೆ

1) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 1

ಅ) ಗೋವಾದಲ್ಲಿ ಸಾವಿರಾರು ಜನ ಕನ್ನಡಿಗರನ್ನು ಹೊರಗೆ ಹಾಕಿದ್ದು ಅವರೆಲ್ಲ ಬೀದಿ ಪಾಲಾಗಿರುವ ಬಗ್ಗೆ.
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
– ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)

ಆ) ಶಾಲಾ ಪಠ್ಯಪುಸ್ತಕಗಳನ್ನು ಸಕಾಲದಲ್ಲಿ ಸರಬರಾಜು ಮಾಡದಿರುವುದು 5
– ಶ್ರೀ ಎ ಟಿ ರಾಮಸ್ವಾಮಿ
– ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಇ) ಬೆಳೆ ವಿಮೆ ಪರಿಹಾರ ಹಣವನ್ನು ಬಿಡುಗಡೆ ಮಾಡುವುದು 5
– ಶ್ರೀ ಸಿ ಎಂ ಉದಾಸಿ
– ಶ್ರೀ ಪಿ ಜಿ ಆರ್ ಸಿಂಧ್ಯಾ (ಕೈಗಾರಿಕಾ ಸಚಿವರು)

ಈ) ರಾಜ್ಯದಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ವೈಜ್ಞಾನಿಕವಾಗಿ ಜಾರಿಗೆ ತರುವುದು 6–10
– ಶ್ರೀ ಕೆ ಎಸ್ ಈಶ್ವರಪ್ಪ
– ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ
– ಶ್ರೀ ಪಿ ಜಿ ಆರ್ ಸಿಂಧ್ಯಾ (ಕೈಗಾರಿಕಾ ಸಚಿವರು)

ಉ) ತೀರ್ಥಹಳ್ಳಿಯಲ್ಲಿ ನಡೆದ ದರೋಡೆ ಪ್ರಕರಣದ ಬಗ್ಗೆ ಪ್ರಸ್ತಾಪ ಮತ್ತು ಉತ್ತರ ಹಾಗೂ ಗೋವಾ ಕನ್ನಡಿಗರ ಸಮಸ್ಯೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ 11–12
– ಶ್ರೀ ಅರಗ ಜ್ಞಾನೇಂದ್ರ
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಊ) ವಿರಾಜಪೇಟೆ ತಾಲ್ಲೂಕಿನಿಂದ ಕೇರಳಕ್ಕೆ ಮರಳು ಸಾಗಾಣಿಕೆಯಾಗುತ್ತಿರುವುದು 12
– ಶ್ರೀ ಹೆಚ್ ಡಿ ಬಸವರಾಜ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಖ) ಸಕಲೇಶಪುರ ತಾಲ್ಲೂಕಿನಲ್ಲಿ ಭಾರಿ ಮಳೆಯಿಂದಾಗಿ ಜನಜೀವನ ಹಾಗೂ ದೈನಂದಿನ ಬದುಕಿಗೆ ಅಡ್ಡಿ ಉಂಟಾಗಿರುವುದರ ಬಗ್ಗೆ. 13–14
– ಶ್ರೀ ಹೆಚ್ ಎಂ ವಿಶ್ವನಾಥ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಗ) ಚಿಕ್ಕಮಗಳೂರು ಕ್ಷೇತ್ರದಲ್ಲಿ ಅರಣ್ಯ ಒತ್ತುವರಿ ನೆಪದಲ್ಲಿ ಭೂ ಹಿಡುವಳಿದಾರರನ್ನು ಮತ್ತು ಕಂದಾಯ ಭೂಮಿಯಲ್ಲಿ ಸಾಗುವಳಿ ಮಾಡತಕ್ಕಂತಹ ರೈತರನ್ನು ಒಕ್ಕಲು ಎಬ್ಬಿಸತಕ್ಕಂತಹ ಕೆಲಸವನ್ನು ಅರಣ್ಯ ಇಲಾಖೆ ಮಾಡುತ್ತಿರುವುದರ ಬಗ್ಗೆ 15–16
– ಶ್ರೀ ಸಿ ಟಿ ರವಿ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

2) ನಿಯಮ 69ರ ಮೇರೆಗೆ ಚರ್ಚೆ (ಮುಂದು) 17–30

ವಿಷಯ ಬರಗಾಲ ಪೀಡಿತ ಪ್ರದೇಶಗಳಲ್ಲಿ "ಕೂಲಿಗಾಗಿ ಕಾಳು" ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಬಡ ಕೂಲಿ ಕಾರ್ಮಿಕರಿಗೆ ಹಂಚಲೆಂದು ಮೀಸಲಾದ ಅಕ್ಕಿಯು ಅವರಿಗೆ ತಲುಪದೆ, ದೊಡ್ಡ ಹಗರಣವಾಗಿರುವ ಬಗ್ಗೆ
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಜಿ ವಿ ಶ್ರೀರಾಮರೆಡ್ಡಿ

3) ಮುಖ್ಯಮಂತ್ರಿಗಳ ಹೇಳಿಕೆ 31–34

ವಿಷಯ ತಾತ್ಕಾಲಿಕ ಗುರುತಿನ ಪಡಿತರ ಚೀಟಿದಾರರಿಗೆ ಪಡಿತರ ಪದಾರ್ಥಗಳನ್ನು ಸರಬರಾಜು ಮಾಡುವ ಬಗ್ಗೆ
– ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)
– ಶ್ರೀ ಬಿ ಎಸ್ ಯಡಿಯೂರಪ್ಪ
– ಶ್ರೀ ಜಿ ವಿ ಶ್ರೀರಾಮರೆಡ್ಡಿ

4) ನಿಯಮ 69ರ ಮೇರೆಗೆ ಮುಂದುವರೆದ ಚರ್ಚೆ ಮತ್ತು ಸರ್ಕಾರದಿಂದ ಉತ್ತರ 35–90

ವಿಷಯ ಬರಗಾಲ ಪೀಡಿತ ಪ್ರದೇಶಗಳಲ್ಲಿ "ಕೂಲಿಗಾಗಿ ಕಾಳು" ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಬಡ ಕೂಲಿ ಕಾರ್ಮಿಕರಿಗೆ ಹಂಚಲೆಂದು ಮೀಸಲಾದ ಅಕ್ಕಿಯು ಅವರಿಗೆ ತಲುಪದೆ, ದೊಡ್ಡ ಹಗರಣವಾಗಿರುವ ಬಗ್ಗೆ.
– ಶ್ರೀ ಕೆ ಜಯಪ್ರಕಾಶ್ ಹೆಗ್ಡೆ

– ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು
– ಶ್ರೀಮತಿ ಸುನೀತಾ ವೀರಪ್ಪಗೌಡ
– ಶ್ರೀ ಹೆಚ್ ಆಂಜನೇಯ
– ಶ್ರೀ ನೆಲ ನರೇಂದ್ರ ಬಾಬು
– ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ
– ಶ್ರೀ ಎಂ ಪಿ ರೇಣುಕಾಚಾರ್ಯ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಗುರುವಾರ, ದಿನಾಂಕ 17ನೇ ಜೂನ್ 2004

1 ಅಧ್ಯಕ್ಷರ ಅಪ್ಪಣೆ ಮೇರೆಗೆ 91–112

ಕೂಲಿಗಾಗಿ ಕಾಳು ಯೋಜನೆಗೆ ಸಂಬಂಧಪಟ್ಟಂತೆ ನಡೆದಿದೆ ಎನ್ನಲಾದ ಅಕ್ಕಿ ಹಗರಣದ ತನಿಖೆ ನಡೆಸಲು ಜಂಟಿ ಸದನ ಸಮಿತಿ ರಚಿಸಲು ವಿರೋಧ ಪಕ್ಷದವರಿಂದ ಒತ್ತಾಯ ಹಾಗೂ "ಧರಣಿ"
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಬಿ ಎಸ್ ಯಡಿಯೂರಪ್ಪ
(ವಿರೋಧ ಪಕ್ಷದ ನಾಯಕರು)
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)
– ಶ್ರೀ ಜೆ ಸಿ ಮಾಧುಸ್ವಾಮಿ
– ಶ್ರೀ ಜಿ ವಿ ಶ್ರೀರಾಮರೆಡ್ಡಿ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ಸಚಿವರು)
– ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)
– ಶ್ರೀ ಕೆ ಜಯಪ್ರಕಾಶ್ ಹೆಗ್ಡೆ
– ಶ್ರೀ ಮಲ್ಲಿಕಾರ್ಜುನ ಖರ್ಗೆ
(ನೀರಾವರಿ ಮತ್ತು ಸಾರಿಗೆ ಸಚಿವರು)

ಶುಕ್ರವಾರ, ದಿನಾಂಕ 18ನೇ ಜೂನ್ 2004

1 ಕೂಲಿಗಾಗಿ ಕಾಳು ಯೋಜನೆಗೆ ಸಂಬಂಧಪಟ್ಟಂತೆ ನಡೆದಿದೆ ಎನ್ನಲಾದ ಅಕ್ಕಿ ಹಗರಣದ ತನಿಖೆ ನಡೆಸಲು ಸದನ ಸಮಿತಿ ರಚಿಸುವಂತೆ ಒತ್ತಾಯ ಮತ್ತು ವಿರೋಧ ಪಕ್ಷದವರಿಂದ "ಧರಣಿ"
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)
– ಶ್ರೀ ಬಿ ಎಸ್ ಯಡಿಯೂರಪ್ಪ
(ವಿರೋಧ ಪಕ್ಷದ ನಾಯಕರು)
– ಶ್ರೀ ವಾಟಾಳ್ ನಾಗರಾಜ್

2 ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವಕ್ಕೆ ಮುಖ್ಯಮಂತ್ರಿಗಳಿಂದ ಉತ್ತರ 112–124
– ಅಂಗೀಕರಿಸಲಾಯಿತು

3 ಚುನಾವಣಾ ಪ್ರಸ್ತಾವ
– ಅಂಗೀಕರಿಸಲಾಯಿತು

4 ಸಚಿವರ ಹೇಳಿಕೆ
ವಿದ್ಯುತ್ ಬಳಕೆ ಹೆಚ್ಚಿಸುವ ಬಗ್ಗೆ
– ಶ್ರೀ ಹೆಚ್ ಡಿ ರೇವಣ್ಣ
(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಸೋಮವಾರ, ದಿನಾಂಕ 28ನೇ ಜೂನ್ 2004

1) ನೂತನ ಸದಸ್ಯರಿಂದ ಪ್ರಮಾಣ ವಚನ 125–128
(12ನೇ ವಿಧಾನಸಭೆಗೆ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಶ್ರೀ ಐವಾನ್ ನಿಗ್ಲಿರವರಿಂದ)

2) ಸಭೆಯ ಮುಂದಿಡಲಾದ ಕಾಗದ ಪತ್ರಗಳು 128–131

3) ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಕುರಿತು
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಆ) ಚಿಕ್ಕಮಗಳೂರು ಹಾಗೂ ಇತರ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ನಕ್ಸಲೀಯರ ಚಟುವಟಿಕೆ ಬಗ್ಗೆ 131–134
– ಶ್ರೀ ಸಿ ಟಿ ರವಿ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಇ) ಉತ್ತರ ಕರ್ನಾಟಕದ ಭಾಗದಲ್ಲಿ ಹೃದ್ರೋಗ ಆಸ್ಪತ್ರೆ ಪ್ರಾರಂಭಿಸುವ ಬಗ್ಗೆ 134
– ಶ್ರೀ ಜಿ ವಿ ಶ್ರೀರಾಮರೆಡ್ಡಿ

ಈ) ಗುಲ್ಬರ್ಗಾ ಜಿಲ್ಲೆಯಲ್ಲಿ ಆನೆಕಾಲು ರೋಗ ದಾಖಲಾಗಿರುವ ಬಗ್ಗೆ 134–137
– ಶ್ರೀ ಎಂ ವೈ. ಪಾಟೀಲ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
– ಶ್ರೀ ಜಿ ವಿ ಶ್ರೀರಾಂರೆಡ್ಡಿ

ಉ) ಜುರಾಲದಲ್ಲಿ 5 ಹಳ್ಳಿಗಳು ಮುಳಗಡೆಯಾದ್ದರಿಂದ ಪುನರ್ವಸತಿ ಕಲ್ಪಿಸುವುದು 136–137
– ಶ್ರೀ ಎ ಪಾಪರೆಡ್ಡಿ
– ಶ್ರೀ ಎಂ ಪಿ ಪ್ರಕಾಶ್
– (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಊ) ಬೆಳೆ ವಿಮೆ ಹಣ ಪಾವತಿಯಾಗದೇ ಇರುವ ಬಗ್ಗೆ 137–140
– ಶ್ರೀ ಸಿ ಎಂ ಉದಾಸಿ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
ಋ) ಶ್ರೀ ವಾಟಾಳ್ ನಾಗರಾಜ್ ರವರು ಧರಣಿ ನಿಲ್ಲಿಸಲು ಮನವಿ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
ಎ) ಜಿಲ್ಲಾ ಪಂಚಾಯತಿಗಳಲ್ಲಿ ಕುಡಿಯುವ ನೀರಿನ ಕಾಮಗಾರಿಗಳು 140–141
ಸ್ಥಗಿತಗೊಂಡಿರುವ ಬಗ್ಗೆ
– ಶ್ರೀ ಹೆಚ್ ಕೆ ಕುಮಾರಸ್ವಾಮಿ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
ಏ) ಬಾಗಲಕೋಟೆಯ ಮುಳುಗಡೆಯಾದವರಿಗೆ ಪರಿಹಾರ ನೀಡುವ ಬಗ್ಗೆ 141–143
– ಶ್ರೀ ಚರಂತಿಮರ್ ವೀರಣ್ಣ ಚಂದ್ರಶೇಖರಯ್ಯ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
ಐ) ರಾಜಾಜಿನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪಶ್ಚಿಮ ಕಾರ್ಡ್ ರಸ್ತೆಯ 143–144
ಶಿವನಹಳ್ಳಿ ಸರ್ವೆ ನಂಬರ 5 ಹಾಗೂ 8 ರಲ್ಲಿರುವ ಅಂಗನವಾಡಿ ಕೇಂದ್ರವನ್ನು
ತೆರವು ಗೊಳಿಸಿರುವ ಬಗ್ಗೆ
– ಶ್ರೀ ಎನ್ ಎನ್ ನರೇಂದ್ರಬಾಬು
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
ಕ) ತುಮಕೂರು ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿ 144–145
– ಶ್ರೀ ಕೆ ಎನ್ ರಾಜಣ್ಣ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
ಖ) ಆಶ್ರಯ ಮನೆಗಳ ರಿಜಿಸ್ಟ್ರೇಷನ್ ಅವಧಿಯನ್ನು ವಿಸ್ತರಿಸುವ ಬಗ್ಗೆ 145–146
– ಶ್ರೀ ಕೆ ಜಯಪ್ರಕಾಶ್ ಹೆಗ್ಡೆ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
ಗ) ಮೈಸೂರಿನಲ್ಲಿ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ 146–147
ಎಂಬ ಸಂಸ್ಥೆ ಜಾಹೀರಾತು ನೀಡಿರುವ ಬಗ್ಗೆ
– ಶ್ರೀ ಕೆ ಜಯಪ್ರಕಾಶ್ ಹೆಗ್ಡೆ
– ಶ್ರೀ ಕೆ ಆರ್ ರಮೇಶ್ ಕುಮಾರ್

– ಶ್ರೀ ಡಿ ಮಂಜುನಾಥ್
– (ಉನ್ನತ ಶಿಕ್ಷಣ ಸಚಿವರು)
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಚ) ರೇಷ್ಮೆ ಧಾರಣೆ ಕುಸಿತದಿಂದ ಉಂಟಾಗಿರುವ ತೊಂದರೆ ಬಗ್ಗೆ. 147–148
– ಶ್ರೀ ಆರ್ ಧ್ರುವನಾರಾಯಣ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಛ) ಹಿರೇಕೆರೂರಿನಲ್ಲಿ ರೈತರಿಗೆ ಬರಬೇಕಾದ ಬೆಳೆ ವಿಮೆ ಹಾಗೂ ತುಂಗಭದ್ರ 148–149
ಮೇಲ್ದಂಡೆಗಾಗಿ ಭೂಮಿ ಸ್ವಾಧೀನಪಡಿಸಿಕೊಂಡ ಹಣವನ್ನು ಸಕ್ಕರೆ
ಕಾರ್ಖಾನೆ ಶೇರಿಗೆ ಮುರಿದುಕೊಳ್ಳುವುದನ್ನು ನಿಲ್ಲಿಸುವ ಬಗ್ಗೆ
– ಶ್ರೀ ಬಿ ಸಿ ಪಾಟೀಲ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಜ) ಹುಲಿಗುಡ್ಡದ ಯೋಜನೆಗೆ ಹಣ ಬಿಡುಗಡೆ ಮಾಡುವ ಬಗ್ಗೆ 149–151
– ಶ್ರೀ ಎಸ್ ಎಸ್ ಪಾಟೀಲ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಝ) ಪಡಿತರ ವ್ಯವಸ್ಥೆಯಲ್ಲಿ ನಗರ ಹಾಗೂ ಗ್ರಾಮಾಂತರ ಪ್ರದೇಶಕ್ಕೂ 151–152
ಇರತಕ್ಕ ತಾರತಮ್ಯವನ್ನು ಹೋಗಲಾಡಿಸುವ ಬಗ್ಗೆ.
– ಶ್ರೀ ಶಿವರಾಜ ಸಜ್ಜನ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಟ) ಬಿತ್ತನೆ ಬೀಜಗಳಿಗೆ ಸಬ್ಸಿಡಿ ನೀಡುವ ಬಗ್ಗೆ ಕುರಿತು 152–153
– ಶ್ರೀ ಹೆಚ್ ನಿಂಗಪ್ಪ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಠ) ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರದಲ್ಲಿ ಅಧಿಕೃತ ಮತದಾರರ 153–154
ಪಟ್ಟಿಯನ್ನು ವಿಕೃತಗೊಳಿಸಿರುವ ಬಗ್ಗೆ.
– ಶ್ರೀ ಕೆ ಆರ್ ರಮೇಶ್ ಕುಮಾರ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಡ) ಶಿರಹಟ್ಟಿ ತಾಲ್ಲೂಕಿನಲ್ಲಿ ವಿಪರೀತ ಮಳೆಯಿಂದ ರೈತರಿಗೆ ಆಗಿರುವ 154–156
ನಷ್ಟದ ಬಗ್ಗೆ.
– ಶ್ರೀ ಜಿ ಎಸ್ ಗಡ್ಡದೇವರಮಠ

– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರ ಸಚಿವರು)

ಥ) ಕಳ್ಳಂಬೆಳ್ಳ ವಿಧಾನಸಭಾ ಕ್ಷೇತ್ರದಲ್ಲಿ ಆಶ್ರಯ ಮತ್ತು ರಾಜೀವ್‌ಗಾಂಧಿ ಯೋಜನೆ ಮನೆಗಳ ಅವ್ಯವಹಾರ ಬಗ್ಗೆ 156–157
– ಶ್ರೀ ಕೆ.ಎಸ್ ಕಿರಣ್ ಕುಮಾರ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ತ) ಮಾಲೂರು ವಿಧಾನಸಭಾ ಕ್ಷೇತ್ರದ ತಾಲ್ಲೂಕು ಪಂಚಾಯತಿಯಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ 157–159
– ಶ್ರೀ ಎಸ್ ಎನ್ ಕೃಷ್ಣಯ್ಯ ಶೆಟ್ಟಿ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಧ) ಕಾಮು ಕ್ಷೇತ್ರದಲ್ಲಿ ಕೈಗಾರಿಕಾ ಅಭಿವೃದ್ಧಿ ಬೋರ್ಡ್‌ನವರು ಸರ್ಕಾರಿ ಜಾಗವನ್ನು ಅಳತೆ ಮಾಡುತ್ತಿರುವುದರ ಬಗ್ಗೆ 159–160
- ಶ್ರೀ ಲಾಲ್‌ಜಿ ಆರ್ ಮೆಂಡನ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ದ) ಬಾಗಲಕೋಟೆ ಜಿಲ್ಲೆಯಲ್ಲಿ ಸಬ್ಸಿಡಿ ಬೀಜಗಳ ಪೂರೈಕೆ 160
– ಶ್ರೀ ಮುರುಗೇಶ್ ಆರ್ ನಿರಾಣಿ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಧ) ಸೂಳೆಕೆರೆಯಲ್ಲಿರುವ ಹೂಳನ್ನು ತೆಗೆಯುವ ಬಗ್ಗೆ 160–163
– ಶ್ರೀ ಮಹಿಮಾ ಜೆ ಪಾಟೀಲ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ನ) ಕುದುರೆಮುಖ ವ್ಯಾಪ್ತಿಯ ರಾಷ್ಟ್ರೀಯ ಉದ್ಯಾನವನದ ಯೋಜನೆ 163–164
– ಶ್ರೀ ಎಂ ಪಿ ಕುಮಾರ್ ಸ್ವಾಮಿ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಪ) ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ ಕುಡಿಯುವ ನೀರಿಗಾಗಿ ಟ್ರಾನ್ಸ್‌ಫಾರ್ಮರ್ಸ್ ಒದಗಿಸುವ ಬಗ್ಗೆ 164–165
– ಶ್ರೀ ಜೆ ನರಸಿಂಹಸ್ವಾಮಿ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಛ) ಕಮಲಾಪುರ ಮೀಸಲು ಕ್ಷೇತ್ರದಲ್ಲಿ ಆಶ್ರಯ, ಹಾಗೂ ಅಂಬೇಡ್ಕರ್ ಮನೆಗಳ ಹಂಚಿಕೆ 166
– ಶ್ರೀ ರೇವುನಾಯಕ ಬೆಳಮಗಿ
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
ಜ) ಬನ್ನೂರು ಕ್ಷೇತ್ರದ ವ್ಯಾಪ್ತಿಯ ರಸ್ತೆಗಳ ದುರಸ್ತಿ 167–168
– ಶ್ರೀಮತಿ ಜೆ ಸುನೀತಾ ವೀರಪ್ಪಗೌಡ
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
ಝ) ಪಶ್ಚಿಮಘಟ್ಟದಲ್ಲಿ ಗಾಂಜಾವನ್ನು ಬೆಳೆಯುತ್ತಿರುವ ಬಗ್ಗೆ 168–169
– ಶ್ರೀಮತಿ ಶಕುಂತಲಾ ಟಿ. ಶೆಟ್ಟಿ
– ಶ್ರೀ ಎಂ.ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
3) ಸಕಲೇಶಪುರ ವಿಧಾನಸಭಾ ಕ್ಷೇತ್ರದಲ್ಲಿನ ಬಿಸ್ಲಿ ಮತ್ತು ಗುಂಡ್ಯ ಅರಣ್ಯದ ಸಿಬ್ಬಂದಿಗೆ ವಾಹನ ಇತ್ಯಾದಿ ಸೌಲಭ್ಯ ಒದಗಿಸುವುದು 169–170
– ಶ್ರೀ ಎಚ್ ಎಂ ವಿಶ್ವನಾಥ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
4) ನಿಯಮ 69ರ ಮೇರೆಗೆ 170–186
ಅ) ರಾಜ್ಯಾದ್ಯಂತ ಶಾಲಾ ಕಾಲೇಜುಗಳಿಗೆ ಪ್ರದೇಶ ಕೋರಿರುವ ವಿದ್ಯಾರ್ಥಿಗಳಿಗೆ ಶಿಕ್ಷಣ ಸಂಸ್ಥೆಗಳಿಂದ ಉಂಟಾಗುತ್ತಿರುವ ತೊಂದರೆ ಬಗ್ಗೆ 186–198
– ಶ್ರೀ ನೆ ಲ ನರೇಂದ್ರ ಬಾಬು
– ಶ್ರೀ ಅರಗ ಜ್ಞಾನೇಂದ್ರ
– ಶ್ರೀ ಎಸ್ ರಾಜೇಂದ್ರನ್
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಎನ್ ಟಿ ಸೋಮಶೇಖರ್
– ಶ್ರೀ ಹೆಚ್ ಡಿ ಬಸವರಾಜ್
– ಶ್ರೀ ಜಿ.ವಿ ಶ್ರೀರಾಮರೆಡ್ಡಿ
– ಶ್ರೀ ಕೆ ಆರ್ ರಮೇಶ್ ಕುಮಾರ್
– ಶ್ರೀ ಡಿ ಮಂಜುನಾಥ್(ಉನ್ನತ ಶಿಕ್ಷಣ ಸಚಿವರು)

ಆ) ಕೈಮಗ್ಗ ನೇಕಾರರು ಕೆಲಸವಿಲ್ಲದೆ ಸಂಕಷ್ಟಗೊಳಗಾಗಿದ್ದು ಅವರನ್ನು ವಿದ್ಯಾವಿಕಾಸ್ ಯೋಜನೆಯಲ್ಲಿ ಮುಂದುವರೆಸುವ ಬಗ್ಗೆ 198–229
– ಶ್ರೀ ಗೋವಿಂದ ಎಂ ಕಾರಜೋಳ
– ಶ್ರೀ ಡಿ ಆರ್ ಪಾಟೀಲ್
– ಶ್ರೀ ಸಿದ್ದು ಸಾವದಿ
– ಶ್ರೀ ಶಶಿಕಾಂತ್ ಅಕ್ಕಿಯಪ್ಪ ನಾಯಕ್
– ಶ್ರೀ ಜಿ.ಎಸ್ ಗಡ್ಡದೇವರ ಮರ್
– ಶ್ರೀ ಎಸ್ ಎಸ್ ಪಾಟೀಲ್
– ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್
– ಶ್ರೀ ಎಂ ಪಿ ಪ್ರಕಾಶ್
(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
– ಪಿ ಜಿ ಆರ್ ಸಿಂಧ್ಯಾ (ಕೈಗಾರಿಕಾ ಸಚಿವರು)

5) ಅಧ್ಯಕ್ಷರ ಅಪ್ಪಣೆ ಮೇರೆಗೆ 229–234
ವಿಷಯ ಗೋವಾದ ಕನ್ನಡ ನಿರಾಶ್ರಿತರ ಬಗ್ಗೆ
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಪಿ ಜಿ ಆರ್ ಸಿಂಧ್ಯಾ
– (ಕೈಗಾರಿಕಾ ಸಚಿವರು)

6) ಪ್ರಕಟಣೆ
ಹನ್ನೇರಡನೇ ವಿಧಾನಸಭೆಯಲ್ಲಿ ನಡೆದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ 234–235

*****

ಕರ್ನಾಟಕ ವಿಧಾನ ಸಭೆ

ಬುಧವಾರ 16 ನೇ ಜೂನ್ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-19 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ) ರವರು

ಪೀಠವನ್ನು ಅಲಂಕರಿಸಿದ್ದರು

1) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ)ವಿಷಯ ಗೋವಾದಲ್ಲಿ ಸಾವಿರಾರು ಜನ ಕನ್ನಡಿಗರನ್ನು ಹೊರಗೆ ಹಾಕಿದ್ದು ಅವರೆಲ್ಲಾ ಬೀದಿಪಾಲಾಗಿರುವ ಬಗ್ಗೆ

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) ಮಾನ್ಯ ಅಧ್ಯಕ್ಷರೆ, ಒಂದು ಬಹಳ ಪ್ರಾಮುಖ್ಯವಾದಂತಹ ವಿಷಯವನ್ನು ನಾನು ತಮಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಗೋವಾದಲ್ಲಿ ಸಾವಿರಾರು ಜನ ಕನ್ನಡಿಗರನ್ನೆಲ್ಲಾ ಹೊರಗೆ ಬಿಟ್ಟಿದ್ದಾರೆ ಸಾವಿರಾರು ಜನ ಬೀದಿ ಪಾಲಾಗಿದ್ದಾರೆ ಬಹುಶ ಅವರನ್ನು ಕೇಳುವವರು ಗತಿ ಇಲ್ಲ ಇದು ಅಲ್ಲಿ ಇರತಕ್ಕ ಪರಿಸ್ಥಿತಿ ಪ್ರಪ್ರಥಮವಾಗಿ ಕರ್ನಾಟಕ ಸರ್ಕಾರ ಅಲ್ಲಿನ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ವಿಷಯ ಏನು ಎಂದು ತಿಳಿದುಕೊಳ್ಳಬೇಕು ಇತಿಹಾಸದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಲಕ್ಷಾಂತರ ಜನ ಕನ್ನಡಿಗರು ಗೋವಾದಲ್ಲಿದ್ದಾರೆ ಕನ್ನಡಿಗರೆಲ್ಲಾ ಬೀದಿ ಪಾಲಾಗಿದ್ದಾರೆ ಇದರಿಂದ ನಿಜಕ್ಕೂ ನನಗೆ ಬಹಳ ನೋವಾಗಿದೆ ಸರ್ಕಾರ ಈ ಬಗ್ಗೆ ಕಳಕಳಿಯಾದ ಒಂದು ಉತ್ತರವನ್ನು ಕೊಡಬೇಕು ಅಲ್ಲಿನ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಬೇಕು ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಈ ಸದನದಲ್ಲಿ ಧರಣಿ ಮಾಡುತ್ತಿದ್ದೇನೆ. ದಯಮಾಡಿ ತಾವು ನಾನು ಧರಣಿ ಮಾಡುವುದಕ್ಕೆ ಅವಕಾಶ ಕೊಡಬೇಕು ತಮ್ಮ ಮುಂದೆ ವಿಚಾರವನ್ನು ತಿಳಿಸುತ್ತಿದ್ದೇನೆ ಇದು ಅತ್ಯಂತ ಅನ್ಯಾಯ ನಿಜಕ್ಕೂ ಇದು ಬಹಳ ನೋವಿನ ಪ್ರಸಂಗ ಇದು ಎಷ್ಟು ಆಗಿದೆ ಎಂದರೆ ಅಲ್ಲಿ ಯಾರೂ ಕೇಳುವವರು ಗತಿ ಇಲ್ಲ ಹೊರ ರಾಜ್ಯಗಲ್ಲಿರುವಂತಹ ಕನ್ನಡಿಗರನ್ನು ಕೇಳುವವರು ಇಲ್ಲ ಕರ್ನಾಟಕದಲ್ಲಿ ಎರಡು ಕೋಟಿ ಜನರು ಹೊರಗಡೆಯಿಂದ ಬಂದಿದ್ದಾರೆ ಅವರಿಗೆ ನಾವು ಸ್ವಾಗತ ಮಾಡುತ್ತೇವೆ ಆದರೆ ಹೊರಗಡೆ ನಮ್ಮ ಕನ್ನಡಿಗರಿಗೆ ರಕ್ಷಣೆ ಇಲ್ಲ ಗೋವಾ ಮತ್ತು ಬೇರೆ ರಾಜ್ಯಗಳಲ್ಲಿ ಕನ್ನಡಿಗರಿಗೆ ರಕ್ಷಣೆ ಇಲ್ಲ ಗೋವಾದಲ್ಲಿ ಕನ್ನಡಿಗರು ಬೀದಿಪಾಲಾಗಿದ್ದಾರೆ ಮನೆಯನ್ನು ಒಡೆದುಹಾಕಿದ್ದಾರೆ ಕೆಲಸದಿಂದ ಹೊರಕ್ಕೆ ಹಾಕಿದ್ದಾರೆ ಬಂಯೋತ್ಪಾದನೆ ನಿರ್ಮಾಣವಾಗಿಹೋಗಿದೆ ನಾನು ತಮ್ಮಲ್ಲಿ ಕಳಕಳಿಯಿಂದ ಕೈ ಮುಗಿದು ಮನವಿ ಮಾಡುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು ಇಲ್ಲದಿದ್ದರೆ ಏನಾಗುತ್ತದೆಂದರೆ ಇದೇ ರೀತಿ ಎಲ್ಲಾ ರಾಜ್ಯಗಳಲ್ಲೂ ಅತ್ಯಂತ ಅಪಾಯಕಾರಿಯಾದ ಬೆಳವಣಿಗೆಯಾಗುತ್ತದೆ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ತಾವು ದಯಮಾಡಿ ಈ ಪತ್ರಿಕೆಯನ್ನು ನೋಡಿ ಎಷ್ಟು ದೊಡ್ಡ ದುರಂತ ನಡೆದಿದೆ ಎಂಬುದನ್ನು ತಾವು ನೋಡಬೇಕು ಬಹಳ ಅತ್ಯಂತ ಅಪಾಯಕಾರಿಯಾಗಿದೆ ಯಾರೊ ಸೈರಿಸಲು ಸಾಧ್ಯವಿಲ್ಲ ಕನ್ನಡಿಗರಿಗೆ ರಕ್ಷಣೆ ಇಲ್ಲ

(ಮಾನ್ಯ ವಾಟಾಳ್‌ನಾಗರಾಜ್‌ರವರು ಸದನದ ಬಾವಿಯಲ್ಲಿ ಧರಣಿ ಮಾಡಲು ಮುಂದಾದರು)

ಅಧ್ಯಕ್ಷರು ಮಾನ್ಯ ವಾಟಾಳ್‌ನಾಗರಾಜ್‌ರವರು ಹಿರಿಯ ಸದಸ್ಯರು ದಯಮಾಡಿ ತಾವು ತಮ್ಮ ಆಸನದಲ್ಲಿ ಕುಳಿತುಕೊಳ್ಳಬೇಕು ಮಾನ್ಯ ಸಂಸದೀಯ ಸಚಿವರಿದ್ದಾರೆ ಉತ್ತರವನ್ನು ಕೊಡುತ್ತಾರೆ ತಾವು ದಯಮಾಡಿ ಸಹಕರಿಸಬೇಕು ತಾವು ಆಸನದಲ್ಲಿ ಆಸೀನರಾಗಬೇಕು ಅವರು ಸರ್ಕಾರದ ಪರವಾಗಿ ಉತ್ತರವನ್ನು ಹೇಳುತ್ತಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ವಾಟಾಳ್‌ನಾಗರಾಜ್‌ರವರಲ್ಲಿ ಒಂದು ಮನವಿ ತಾವು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ ಸರ್ಕಾರಕ್ಕೆ ಒಂದು ಅವಕಾಶವನ್ನು ಕೊಡಬೇಕು ಅವರು ಸಮರ್ಪಕವಾಗಿ ಉತ್ತರವನ್ನು ಕೊಡದಿದ್ದರೆ ತಾನೇ ಏನಾದರೂ ಕ್ರಮ ತೆಗೆದುಕೊಳ್ಳಬೇಕಾಗಿರುವುದು? ದಯಮಾಡಿ ತಾವು ತಮ್ಮ ಸ್ಥಾನಕ್ಕೆ ಬನ್ನಿ.

†ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರು, ಮಾನ್ಯ ವಾಟಾಳ್‌ನಾಗರಾಜ್‌ರವರು ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಭಾರತ ದೇಶದಲ್ಲಿ ಯಾವುದೇ ಒಂದು ರಾಜ್ಯದಲ್ಲಿ ಪ್ರತಿಯೊಬ್ಬ ಸದಸ್ಯನೂ ಪ್ರತಿಯೊಬ್ಬ ನಾಗರೀಕನೂ ಕೂಡ ತನ್ನ ನ್ಯಾಯಬದ್ಧವಾದ ಬದುಕನ್ನು ನೆರವೇರಿಸಿಕೊಂಡು ಹೋಗಲು ಕರ್ತವ್ಯವನ್ನು ನಿರ್ವಹಿಸಲು ಆತ ಜವಾಬ್ದಾರನಾಗಿದ್ದಾನೆ ಇದು ಸಂವಿಧಾನದತ್ತವಾಗಿರುವ ಒಂದು ಅಧಿಕಾರ ಯಾವುದೇ ರಾಜ್ಯ ಈ ರೀತಿ ನಿರ್ಣಯಗಳನ್ನು ಏಕಪಕ್ಷೀಯವಾಗಿ ಮಾಡತಕ್ಕದ್ದು, ಅದು ಫ್ಯಾಸಿಸ್ಟ್ ಸಂಪ್ರದಾಯವಾಗುತ್ತದೆಯೇ ವಿನಹ ಅದರಲ್ಲಿ ನಿಜವಾಗಿಯೂ ನಾಗರೀಕರಿಗೆ ರಕ್ಷಣೆ ಸಿಗುವುದಿಲ್ಲ ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅಶಾಂತಿ, ಅಸಮಾನತೆ, ಅಲ್ಲಿ ಪ್ರಾಯಶ ನಮಗೆ ಕೆಲಸ ದೊರಕದೆ ಇವರಿಂದ ತೊಂದರೆಯಾಗಿದೆ ಎಂಬ ಪ್ರವೃತ್ತಿಗಳು ಬೆಳೆಯುತ್ತಿದೆ, ಹೊರ ದೇಶದಲ್ಲಿಯೂ ಕೂಡ ಈ ರೀತಿ ಭಾರತೀಯ ಸಂಜಾತರು ಬಹಳ ಪ್ರಮುಖವಾದ ಹುದ್ದೆಗಳಲ್ಲಿ ಇರುವುದರಿಂದ ಮತ್ತು ಅಲ್ಲಿ ಉದ್ಯೋಗವನ್ನು ಮಾಡುತ್ತಿರುವುದರಿಂದ ಅವರನ್ನು ಕರಿಯರೆಂದು, ಕಪ್ಪು ಬಣ್ಣದವರು ಅಥವಾ ಕಂದು ಬಣ್ಣದವರೆಂದು ಯೋಚನೆ ಮಾಡಿಯೋ ಭೇದಭಾವವನ್ನು ಸೃಷ್ಟಿಮಾಡುವುದರ ಜೊತೆಗೆ ಅವರ ಮೇಲೂ ಹಲ್ಲೆ ದೌರ್ಜನ್ಯವಾಗುತ್ತಿರುವುದನ್ನು ನಾವು ಕಂಡಿದ್ದೇವೆ ಇಡೀ ಭಾರತೀಯ ಸಂಜಾತರಾಗಿ ಕೆಲಸ ಮಾಡತಕ್ಕಂಥ ಜನಗಳ ಬಗ್ಗೆ ಭಾರತ ದೇಶದ ಜನರು ಒಕ್ಕೊರಲಿನಿಂದ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ ಹಾಗೆಯೇ ಪ್ರತಿಯೊಂದು ರಾಜ್ಯದಲ್ಲೂ ಪ್ರತಿಯೊಬ್ಬ ನಾಗರೀಕರಿಗೂ ಅಧಿಕಾರ ಇರುವುದರಿಂದ ಆ ಸಂವಿಧಾನದತ್ತ ಅಧಿಕಾರವನ್ನು ಯಾರೂ ಕಿತ್ತೊಗೆಯುವುದಕ್ಕಾಗಲೀ ಅಥವಾ ಆತನಿಗೆ ರಕ್ಷಣೆ ಕೊಡಲಾರದೇ ಇರತಕ್ಕ ಸರ್ಕಾರದ ಅಕಸ್ಮಾತ್ ಕ್ರಮಗಳು ಇದ್ದರೆ ಎಂದು ತಾವು ಪತ್ರಿಕಾ ಪ್ರಕಟಣೆಯನ್ನು ತಾವು ಸಭೆಯ ಗಮನಕ್ಕೆ ತಂದಿದ್ದೀರಿ ದಯವಿಟ್ಟು ನಮ್ಮ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಗೋವಾದ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತಾರೆ ಅದರ ಜೊತೆಗೆ ಈ ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಹಿಡಿಯುವುದಕ್ಕೆ ನಮ್ಮವರಿಂದಲೂ ಒಂದು ತನಿಖೆಯನ್ನು ನಡೆಸಿ ವರದಿಯನ್ನು ತರಿಸಿಕೊಳ್ಳುತ್ತೇವೆ ಅಲ್ಲಿ ರಕ್ಷಣೆ ಆಗದೇ ಇರತಕ್ಕಂಥ ಸಂದರ್ಭ ವರದಿಯೇ ಸತ್ಯಾಂಶವಾಗಿದ್ದರೆ, ಸತ್ಯಾಂಶವಾಗಿಲ್ಲದಿರುವುದಕ್ಕೂ ಸಾಕು, ಆ ಕಾರಣಕ್ಕಾಗಿ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಇಂಥ ವಿಚಾರವನ್ನು ರಾಷ್ಟ್ರೀಯ ಭಾವೈಕ್ಯ ವೇದಿಕೆಯ ಮೇಲೆ ತರುವುದರ ಜೊತೆಗೂ ಕೂಡ ನಾವು ಒಂದು ಸುಮಧುರವಾದಂಥ ಸಂಬಂಧ ಗೋವಾದ ಜೊತೆಗೆ ಇಟ್ಟುಕೊಂಡಿದ್ದೇವೆ ಗೋವಾ ಸಂಪೂರ್ಣವಾಗಿ ತನ್ನ ದೈನಂದಿನ ಬದುಕಿನ ಮೇಲೆ ಕನ್ನಡ ನಾಡಿನ ಮೇಲೆ ಅವಲಂಬಿತವಾಗಿರತಕ್ಕದ್ದು. ಅದರ ದೈನಂದಿನ ತರಕಾರಿ ವಿಚಾರವಾಗಿರಬಹುದು, ಅಕ್ಕಿಯ ವಿಚಾರವಾಗಿರಬಹುದು, ಹಾಲಿನ ವಿಚಾರವಾಗಿರಬಹುದು, ವಿದ್ಯುತ್‌ನ ವಿಚಾರವಾಗಿರಬಹುದು, ಪ್ರತಿಯೊಂದು ವಿಚಾರದಲ್ಲೂ ಸಹ, ಗೋವಾದ ಜನಜೀವನದ ಮಟ್ಟ ನಮ್ಮ ಕನ್ನಡನಾಡಿನ ಜನರ ಕೂಲಿಕಾರರ ಮಟ್ಟಕ್ಕಿಂತ ಹೆಚ್ಚು ಇರುವುದರಿಂದ ನಮ್ಮ ಜನ ನಿರ್ವಹಿಸುವಂಥ ಕೆಲಸ, ಅದು ಕುಶಲ ಕೆಲಸವಾಗಿರಬಹುದು, ಅಥವಾ

ದೈಹಿಕ ಶ್ರಮದ ಕೆಲಸವಾಗಿರಬಹುದು ಅವುಗಳನ್ನು ಮಾಡತಕ್ಕ ರೀತಿಯಲ್ಲಿ ಗೋವಾದ ಜನರು ಬರುವುದಿಲ್ಲ ಅದಕ್ಕೆ ತನ್ನದೇ ಆದಂಥ ಐತಿಹಾಸಿಕ ಕಾರಣಗಳು ಇವೆ ಆ ಕಾರಣದಿಂದ ನಾವು ನಿಜವಾಗಿಯೂ ಗೋವಾ ರಾಜ್ಯದ ಅಥವಾ ಆ ಪ್ರಾಂತ್ಯದ ಉತ್ಪಾದನೆಗೆ, ಬೆಳವಣಿಗೆಗೆ, ಅಭಿವೃದ್ಧಿಗೆ ಸಂಪೂರ್ಣವಾದ ಕೊಡುಗೆಯನ್ನು ಕನ್ನಡ ನಾಡಿನ ಜನರು ಕೊಟ್ಟಿದ್ದಾರೆ ಮಾನ್ಯ ವಾಟಾಳ್‌ನಾಗರಾಜ್‌ರವರು ಎತ್ತಿರುವಂಥ ಪ್ರಶ್ನೆ ನಿಜವಾಗಿಯೂ ನಾವೆಲ್ಲರೂ ಗಂಭೀರವಾಗಿ ಪರಿಗಣಿಸಬೇಕಾಗಿರತಕ್ಕದ್ದು ಇದೆ ಅವರ ಜೊತೆ ಪತ್ರವ್ಯವಹಾರವನ್ನು ಮಾಡುತ್ತೇವೆ, ರಕ್ಷಣೆಯನ್ನು ಕೊಡುತ್ತೇವೆ ಅದರ ಜೊತೆಗೆ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಾ, ಪ್ರಧಾನ ಮಂತ್ರಿಗಳ ಗಮನಕ್ಕೂ ಈ ವಿಚಾರವನ್ನು ತಂದು, ತಕ್ಷಣವೇ, ಈ ನಿಮಿಷವೇ, ಈ ದಿವಸವೇ ಅದನ್ನು ಬರೆಯತಕ್ಕ ಕೆಲಸವನ್ನು ಮಾಡುತ್ತೇವೆ ತಾವು ಹಿರಿಯ ಸದ್ಯರಾಗಿರುವುದರಿಂದ ಮತ್ತೊಂದು ರಾಜ್ಯದಲ್ಲಾಗಿರತಕ್ಕಂಥ ಒಂದು ಘಟನೆಯ ಬಗ್ಗೆ ಈ ರಾಜ್ಯದ ಇತಿಮಿತಿಗಳು ಏನಿವೆ ಎಂಬುದು ತಮಗೆ ಗೊತ್ತಿದೆ ಇದನ್ನು ಅವರ ಮೂಲಕ ಜಾರಿಗೊಳಿಸುವ ಕೆಲಸವನ್ನು ನಾವು ಮಾಡುತ್ತೇವೆ ನಿಮ್ಮ ಕನ್ನಡದ ಪ್ರೇಮ, ಕನ್ನಡಿಗರ ಪ್ರೇಮಕ್ಕೆ ಯಾವ ರೀತಿಯಾಗಿಯೂ ಕಡಿಮೆಯಲ್ಲದಂಥ ರೀತಿಯಲ್ಲಿ ಸರ್ಕಾರದ ಈ ಭಾಗದಲ್ಲಿರುವ ನಾವು ಕೂಡ ಕ್ರಮವನ್ನು ತೆಗೆದುಕೊಳ್ಳುತ್ತೇವೆ ತಾವು ಧರಣಿಯನ್ನು ಮಾಡಬಾರದು ತಾವು ಧರಣಿ ಮಾಡುವಂಥದ್ದರ ಉದ್ದೇಶ ಈ ಗಹನವಾದಂಥ ವಿಚಾರ ಎಲ್ಲರಿಗೂ ಸಾರ್ವಜನಿಕರಿಗೂ, ಸರ್ಕಾರಕ್ಕೆ ಕೇಂದ್ರ ಸರ್ಕಾರಕ್ಕೆ ಮನವರಿಕೆಯಾಗಬೇಕು ಎನ್ನುವಂಥದ್ದು ಈಗ ಅದು ಮನವರಿಕೆಯಾಗಿರುವುದರಿಂದ ತಾವು ಈ ವಿಚಾರದ ಬಗ್ಗೆ ಸರ್ಕಾರ ಸಕಾರಾತ್ಮಕವಾಗಿ ಪ್ರತಿಕ್ರಿಯೆಯನ್ನು ವ್ಯಕ್ತಮಾಡಿರುವುದರಿಂದ ಹಿರಿಯ ಸದಸ್ಯರಾದ ತಾವು ನಿನ್ನೆ ಪ್ರಸ್ತಾಪ ಮಾಡಲ್ಪಟ್ಟಿರುವ 69ರ ವಿಧಿಯ ವಿಚಾರದಲ್ಲಿ ತಾವು ಕೆಲಸ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಅಧ್ಯಕ್ಷರು ಮಾನ್ಯ ಏ ಟಿ ರಾಮಸ್ವಾಮಿಯವರು

ಶ್ರೀ ವಾಟಾಳ್ ನಾಗರಾಜ್ ನನಗೆ ಬಹಳ ನೋವಾಗುತ್ತದೆ

ಅಧ್ಯಕ್ಷರು ಈಗ ಚರ್ಚೆಗೆ ಅವಕಾಶ ಇಲ್ಲ ತಾವು ಸರ್ಕಾರದ ಗಮನವನ್ನು ಸೆಳೆದಿದ್ದೀರಿ ಸರ್ಕಾರ ಉತ್ತರವನ್ನು ಕೊಟ್ಟಿದೆ ಮಾನ್ಯ ರಾಮಸ್ವಾಮಿಯವರು..

ಶ್ರೀ ವಾಟಾಳ್ ನಾಗರಾಜ್ ನಾನು ಚರ್ಚೆ ಮಾಡಲು ಹೋಗುವುದಿಲ್ಲ ಅಲ್ಲಿನ ಮುಖ್ಯಕಾರ್ಯದರ್ಶಿಯವರಿಗೆ ನೇರವಾಗಿ ಮಾತನಾಡಿ ಹೇಳಿ ತಮ್ಮ ಬಗ್ಗೆ ನನಗೆ ಗೌರವವಿದೆ ಅದರ ಬಗ್ಗೆ ಬೇರೆ ಮಾತಿಲ್ಲ ನನಗೆ ನೋವಾಗುತ್ತಿದೆ ನಾಲ್ಕು ದಶಕಗಳಿಂದ ಈ ನಾಡಿಗೆ ಹೋರಾಟ ಮಾಡಿರತಕ್ಕ ನನಗೆ ಇದರಿಂದ ನೋವಾಗುತ್ತಿದೆ ಅಲ್ಲಿ ಅವರನ್ನು ಬೀದಿಗೆ ಹಾಕಿದ್ದಾರೆ, ಒದ್ದಿದ್ದಾರೆ, ಹೊರಕ್ಕೆ ಹಾಕಿದ್ದಾರೆ, ಕನ್ನಡಿಗರನ್ನು ಕೇಳುವ ಪರಿಸ್ಥಿತಿಯಲ್ಲಿ ಇಲ್ಲ

ಅಧ್ಯಕ್ಷರು ಇದು ಶೂನ್ಯವೇಳೆ ಸರ್ಕಾರ ಅದಕ್ಕೆ ಉತ್ತರ ನೀಡಿದೆ

ಶ್ರೀ ವಾಟಾಳ್ ನಾಗರಾಜ್ ಸರ್ಕಾರ ನೇರವಾಗಿ ಉತ್ತರ ಕೊಡದೆ ಕಾನೂನು ಸುವ್ಯವಸ್ಥೆ, ದೇಶ, ಭಾರತ ದೇಶ ಇದನ್ನೆಲ್ಲಾ ಮಾತನಾಡಿಕೊಂಡು ಕುಳಿತರೆ ಆಗುವುದಿಲ್ಲ ಇವತ್ತು ಅಲ್ಲಿ ಕನ್ನಡಿಗರನ್ನು ಹೊರಕ್ಕೆ ಹಾಕಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ಮತ್ತೆ ಹೇಗೆ ಮಾತನಾಡಬೇಕೆಂದು ಹೇಳಿ? ಹೀಗೆ ಮಾತನಾಡಿದ ತಕ್ಷಣ ಸಮಸ್ಯೆ ಬಗೆಹರಿಯತ್ತದೆಯೇ? ಭಾರತ ದೇಶದಲ್ಲಿ ಅವರಿಗೆ ಅಧಿಕಾರ ಇದೆಯೆಂಬುದನ್ನು ನಾನು ಪ್ರಸ್ತಾಪ ಮಾಡಿದೆ

ಶ್ರೀ ವಾಟಾಳ್ ನಾಗರಾಜ್ ಕನ್ನಡಿಗರು ಅಲ್ಲಿ ಕೂಲಿಗಾರರು ಅವರು ರಾಜಕೀಯ ಮಾಡಲು ಹೋಗಿಲ್ಲ

ಶ್ರೀ ಎಂ ಪಿ ಪ್ರಕಾಶ್ ನಿಮ್ಮ ಉದ್ದೇಶ ಇವತ್ತು ತ್ಕ್ಷಣವೇ ನಮ್ಮ ಮುಖ್ಯಕಾರ್ಯದರ್ಶಿಯವರು ಆ ರಾಜ್ಯದ ಮುಖ್ಯಕಾರ್ಯದರ್ಶಿಯವರೊಂದಿಗೆ ಮಾತನಾಡುತ್ತಾರೆ ಈ ನಿಮಿಷದಲ್ಲಿ ಗಮನ ಸೆಳೆದಿದ್ದೀರಿ ಐದು ನಿಮಿಷದಲ್ಲಿ ಅವರ ಜೊತೆ ಮಾತನಾಡುತ್ತೇವೆ ಸಮಂಜಸವಾದ ಉತ್ತರವನ್ನು ಕೊಡುತ್ತೇವೆ ಇನ್ನೇನು ಆಗಬೇಕು ಹೇಳಿ? ನಾವು ಇನ್ನೇನು ಮಾಡಬೇಕು? ಭಾರತ ದೇಶ ಅದು, ಇದು ಮಾತನಾಡಬೇಡಿ ಎಂದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ ನೇರವಾಗಿ ಹೇಳದೆ ಸುತ್ತು ಬಳಸಿ ಹೇಳುತ್ತೀರಲ್ಲಾ?

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಹಿರಿಯ ಸದಸ್ಯರು, ದಯಮಾಡಿ ಸಹಕರಿಸಿ

ಶ್ರೀ ಎಂ ಪಿ ಪ್ರಕಾಶ್ ನಾನು ಸುತ್ತು ಬಳಸಿ ಮಾತನಾಡಿಲ್ಲ ನೇರವಾಗಿಯೇ ಹೇಳಿದ್ದೇನೆ ನಮ್ಮ ಅಂತರ್ಗತವಾದ ಹಕ್ಕಿನ ಬಗ್ಗೆ ಸ್ಪಷ್ಟಪಡಿಸಬೇಕು

ಶ್ರೀ ವಾಟಾಳ್ ನಾಗರಾಜ್ ಅಲ್ಲಿ ಕನ್ನಡಿಗರು ಬೀದಿಪಾಲಾಗಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ಹೌದು ಆಗಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ಗೋವಾದ ಕನ್ನಡಿಗರ ಕತೆ ಕಣ್ಣೀರಿನ ಕತೆಯಾಗಿದೆ ಅವರು ಬೀದಿಪಾಲಾಗಿದ್ದಾರೆ ಮಾನ್ಯ ಉಪಮುಖ್ಯಮಂತ್ರಿಗಳೇ, ತಮ್ಮ ಗಮನಕ್ಕೂ ತರುತ್ತಿದ್ದೇನೆ

(ಮಾನ್ಯ ವಾಟಾಳ್‌ನಾಗರಾಜ್‌ರವರು ಸದನದ ಬಾವಿಗೆ ಬಂದು ಮಾತನಾಡಿದರು)

ಶ್ರೀ ಎಂ ಪಿ ಪ್ರಕಾಶ್ ಸರ್ಕಾರದ ಗಮನಕ್ಕೆ ಅದು ಬಂದಿದೆ ಈ ರೀತಿ ಒಬ್ಬೊಬ್ಬ ವ್ಯಕ್ತಿಗೆ ಕೊಡತಕ್ಕದ್ದಲ್ಲ

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್‌ರವರೆ, ದಯಮಾಡಿ ತಮ್ಮ ಸ್ಥಾನವನ್ನು ಅಲಂಕರಿಸಬೇಕು ಸಂಸದೀಯ ಸಚಿವರು ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ

†**ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು ಉತ್ತರವನ್ನು ಕೊಟ್ಟಿದ್ದಾರೆ ಶ್ರೀ ವಾಟಾಳ್ ನಾಗರಾಜ್‌ರವರು ಸರ್ಕಾರದ ಗಮನ ಸೆಳೆದಿದ್ದಾರೆ ಅವರ ಕಳಕಳಿ ನಮಗೆ ಅರ್ಥವಾಗುತ್ತದೆ ಕನ್ನಡಿಗರಿಗೆ ಅಲ್ಲಿ ಏನೇನು ತೊಂದರೆಯಾಗಿದೆ, ಅವಮಾನವಾಗಿದೆ ಅದರ ಬಗ್ಗೆ ನಮ್ಮ ಮುಖ್ಯಕಾರ್ಯದರ್ಶಿಯವರಿಗೆ ಹೇಳಿ ಆ ರಾಜ್ಯದ ಮುಖ್ಯಕಾರ್ಯದರ್ಶಿಯವರಿಗೆ ಯಾವ ರೀತಿಯಾಗಿ ನಮ್ಮ ನಿಲುವನ್ನು ತಿಳಿಸಬೇಕು, ಕರ್ನಾಟಕದ ಬಗ್ಗೆ ತಾವೇನು ಕಳಕಳಿಯನ್ನು ವ್ಯಕ್ತಪಡಿಸಿದ್ದೀರಿ ಅದನ್ನೆಲ್ಲಾ ತಿಳಿಸಿ ಅವರ ಗಮನಸೆಳೆದು ಅವರಿಗೆ ರಕ್ಷಣೆಕೊಡತಕ್ಕ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತದೆ ಎಂಬ ಮಾತನ್ನು ಅವರು ಹೇಳಿದ್ದಾರೆ ಈ ಕೂಡಲೇ ಆ ಕೆಲಸವನ್ನು ಮಾಡಿಸುತ್ತೇವೆ ತಕ್ಷಣವೇ ಅಲ್ಲಿಂದ ವರದಿಯನ್ನು ತರಿಸುತ್ತೇವೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ತಕ್ಷಣವೇ ಆರ್ಮಿ ಪೋಲೀಸ್‌ನ್ನು ಕರ್ನಾಟಕದಿಂದ ಗೋವಾಕ್ಕೆ ಕಳುಹಿಸಲು ಆಗುವುದಿಲ್ಲ ಕೆಲವು ಸಮಸ್ಯೆ ಇದೆ ಅಲ್ಲಿನ ಪರಿಸ್ಥಿತಿ ಏನಿದೆ ಎಂಬ ಬಗ್ಗೆ ಸರ್ಕಾರ ತಿಳಿದುಕೊಂಡು ..

ಶ್ರೀ ವಾಟಾಳ್ ನಾಗರಾಜ್ ಈಗ ಎಷ್ಟೋ ಆಧುನಿಕವಾದಂಥ ಉಪಕರಣಗಳು ಇವೆ ತಕ್ಷಣವೇ ಎರಡು ನಿಮಿಷದಲ್ಲಿ ಫೋನ್ ಮಾಡಿ ವರದಿಯನ್ನು ತರಿಸಿಕೊಳ್ಳಬಹುದು

ಶ್ರೀ ಸಿದ್ದರಾಮಯ್ಯ ತರಿಸಿಕೊಳ್ಳುತ್ತೇನೆ

ಶ್ರೀ ಪಿ ಜಿ ಆರ್ ಸಿಂಧ್ಯಾ (ಕೈಗಾರಿಕಾ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರ ಗಮನಕ್ಕೆ ತರಬಯಸುವುದೇನೆಂದರೆ, ವಿಷಯದ ಗಂಭೀರತೆಯನ್ನು ಸರ್ಕಾರ ಅರಿತಿದೆ ನಾನು ಬೆಳಿಗ್ಗೆ ಪತ್ರಿಕೆಗಳನು ನೋಡಿದ ತಕ್ಷಣವೇ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ನಾವು ಮೂರೂ ಜನರು ಚರ್ಚೆ ಮಾಡಿದ್ದೇವೆ ಮುಖ್ಯಮಂತ್ರಿಗಳು ಈಗಾಗಲೇ ಗಮನಹರಿಸಿ ತಕ್ಷಣವೇ ಅಲ್ಲಿ ಏನಾಗುತ್ತಿದೆ ಎಂಬ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳಬೇಕು ಎಂಬುದಕ್ಕೆ ಒಪ್ಪಿಕೊಂಡಿದ್ದಾರೆ ಅವರು ಸಭೆಗೆ ಬಂದಮೇಲೆ ಅವರ ಕೈಯಲ್ಲೂ ಒಂದು ಹೇಳಿಕೆಯನ್ನು ಕೊಡಿಸೋಣ ಅದರ ಜೊತೆಗೆ ಅವರಿಗೆ ಸರ್ವರೀತಿಯಲ್ಲೂ ರಕ್ಷಣೆ ಕೊಡತಕ್ಕದ್ದು ನಮ್ಮ ಕರ್ತವ್ಯ ಮತ್ತು ಧರ್ಮ ಕನ್ನಡಿಗರು ವಿಶ್ವದ ಯಾವುದೇ ಭಾಗದಲ್ಲಿರಲಿ, ಅದರಲ್ಲೂ ಭಾರತದಲ್ಲಿರತಕ್ಕ ಸಂದರ್ಭದಲ್ಲಿ ನಮ್ಮ ಕರ್ತವ್ಯವಿದೆ, ಅವರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ ಆದ್ದರಿಂದ ತಾವು ದಯವಿಟ್ಟು ಸೀಟಿಗೆ ಬನ್ನಿ

ಆ) ವಿಷಯ ಶಾಲಾ ಪಠ್ಯಪುಸ್ತಕಗಳನ್ನು ಸಕಾಲದಲ್ಲಿ ಸರಬರಾಜು ಮಾಡದಿರುವುದು

ಶ್ರೀ ಎ ಟಿ ರಾಮಸ್ವಾಮಿ(ಅರಕಲಗೂಡು) ಸನ್ಮಾನ್ಯ ಅಧ್ಯಕ್ಷರೆ, ಇದೇ ಜೂನ್ ಒಂದನೇ ತಾರೀಖಿನಿಂದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಪ್ರಾರಂಭವಾಗಿವೆ ಬಹುತೇಕ ಪಠ್ಯಪುಸ್ತಕಗಳು ಶಿಕ್ಷಣ ಇಲಾಖೆಯಿಂದ ಇನ್ನೂ ಸರಬರಾಜು ಆಗಿಲ್ಲ ಇದರಿಂದಾಗಿ ಓದುವ ಮಕ್ಕಳಿಗೆ ಬಹಳ ತೊಂದರೆಯಾಗಿದೆ. ಜೂನ್ ಒಂದನೇ ತಾರೀಖಿನೊಳಗೆ ಇಲಾಖೆ ಏಕೆ ಪಠ್ಯಪುಸ್ತಕಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಿಲ್ಲ? ಇದರ ಬಗ್ಗೆ ಸರ್ಕಾರ ಗಮನಹರಿಸಿದೆಯೇ? ಸರ್ಕಾರದಿಂದ ನಾನು ಉತ್ತರ ಬಯಸುತ್ತೇನೆ

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೆ, ಪಠ್ಯಪುಸ್ತಕಗಳನ್ನು ಸಕಾಲದಲ್ಲಿ ಸರಬರಾಜು ಮಾಡುವುದರತ್ತ ಗಮನಹರಿಸಿದ್ದೇವೆ ಪಾಠ ಬೋಧನೆಯು ಜುಲೈ ತಿಂಗಳಿನಿಂದ ಪ್ರಾರಂಭವಾಗುವುದರಿಂದ ಈ ತಿಂಗಳ 25ನೇ ತಾರೀಖಿನೊಳಗೆ ಉಚಿತವಾಗಿ ನೀಡುವ ಪಠ್ಯಪುಸ್ತಕಗಳನ್ನು ಸಿದ್ದಪಡಿಸಿಟ್ಟುಕೊಂಡಿದ್ದೇವೆ ಬೇರೆ ಪಠ್ಯಪುಸ್ತಕಗಳು ಅಂಗಡಿಗಳಲ್ಲಿ ಸಿಗುವುದರಿಂದ ಅವರು ತೆಗೆದುಕೊಳ್ಳುತ್ತಾರೆ ಈ ಸಂಬಂಧ ಪ್ರಿಂಟಿಂಗ್ ಪ್ರೆಸ್ ಅವರನ್ನು ಕರೆಸಿ ತಿಳಿಸಿದ್ದು, ಸುಮಾರು 280 ಲಕ್ಷ ಮಕ್ಕಳಿಗೆ 550 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಟ್ಟು 10 ಲಕ್ಷ ಪುಸ್ತಕಗಳನ್ನು ಪ್ರಸಕ್ತ ತಿಂಗಳ 25ನೇ ತಾರೀಖಿನೊಳಗೆ ಮುದ್ರಿಸಿ ಸರಬರಾಜು ಮಾಡಬೇಕೆಂದು ತಿಳಿಸಿ, ಅಗತ್ಯವಿರುವ ಎಲ್ಲಾ ರೀತಿಯ ಕ್ರಮಗಳನ್ನು ಈಗಾಗಲೇ ಕೈಗೊಂಡಿದ್ದೇವೆ ಮುಂದಿನ ಜುಲೈ ತಿಂಗಳಿನಿಂದ ಪಾಠ ಬೋಧನೆ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಎಲ್ಲಾ ಪಠ್ಯಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ

ಇ) ವಿಷಯ ಬೆಳೆ ವಿಮೆ ಪರಿಹಾರ ಹಣವನ್ನು ಬಿಡುಗಡೆ ಮಾಡುವುದು

ಶ್ರೀ ಸಿ ಎಂ ಉದಾಸಿ (ಹಾನಗಲ್) ಮಾನ್ಯ ಅಧ್ಯಕ್ಷರೆ, 2002–03ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ರೈತರಿಗೆ ಬರಬೇಕಾದ ಬೆಳೆ ವಿಮೆ ಪರಿಹಾರ ಹಣವಾದ 268 ಕೋಟಿ ರೂಪಾಯಿಗಳನ್ನು ಇದುವರೆವಿಗೂ ವಿತರಣೆಯಾಗಿಲ್ಲ ಬೆಳೆ ವಿಮೆಗಾಗಿ ಹೋರಾಟ ಮಾಡಿ ಜೈಲಿಗೆ ಹೋದಂಥ ರೈತರು, ಅವರ ಪ್ರತಿನಿಧಿಗಳು ಇವ್ವೊತ್ತು ವಿಧಾನಸಭೆ ಸದಸ್ಯರಾಗಿ ಆರಿಸಿ ಬಂದಿರುವ ಈ ಸಂದರ್ಭದಲ್ಲೂ 2002–03ನೇ ಸಾಲಿಗೆ ಸಂಬಂಧಿಸಿದಂತೆ ಹಾವೇರಿ ಜಿಲ್ಲೆಯೊಂದರಲ್ಲೇ ಬೆಳೆ ವಿಮೆ ಪರಿಹಾರವಾಗಿ

ಐದು ಸಾವಿರಕ್ಕಿಂತಲೂ ಹೆಚ್ಚು ಜನರಿಗೆ ಐದು ಕೋಟಿ ರೂಪಾಯಿಗಳಷ್ಟು ಬೆಳೆ ವಿಮೆ ಪರಿಹಾರ ಬಿಡುಗಡೆಯಾಗಬೇಕಿದೆ ಇದರ ಜೊತೆಗೆ 2003–04ನೇ ಸಾಲಿನಲ್ಲಿ ಬೆಳೆ ಹಾನಿಯಾಗಿರುವ ಸಂದರ್ಭದಲ್ಲಿ ರಾಜ್ಯದ ಸುಮಾರು 7 ಲಕ್ಷ ರೈತರು 931 ಕೋಟಿ ರೂಪಾಯಿಗಳಿಗೆ ಮುಂಗಾರು ಬೆಳೆಗಾಗಿ ವಿಮೆ ಮಾಡಿಸಿದ್ದು, ಸುಮಾರು 30 ಕೋಟಿ ರೂಪಾಯಿಗಳಷ್ಟು ಪ್ರೀಮಿಯಂ ಹಣ ಪಾವತಿಸಿದ್ದಾರೆ ಅದೇ ರೀತಿ ಹಿಂಗಾರು ಬೆಳೆಗೆ 11 ಲಕ್ಷ ರೈತರು ಬೆಳೆ ವಿಮೆ ಮಾಡಿಸಿದ್ದಾರೆ ಈ ಎಲ್ಲಾ ರೈತರಿಗೂ ಸಹ ವಿಮೆ ಪರಿಹಾರದ ಹಣವನ್ನು ಮಾರ್ಚಿ ತಿಂಗಳ 31ನೇ ತಾರೀಖಿನೊಳಗೆ ಬಿಡುಗಡೆ ಮಾಡಬೇಕಾಗಿತ್ತು ಆದರೆ, ಇದುವರೆವಿಗೂ ಸದರಿ ಹಣ ಬಿಡುಗಡೆಯಾಗಿ ರೈತರಿಗೆ ದೊರೆಯದಿರುವುದರಿಂದ ಇವೊತ್ತು ಅವರು ಸಂಕಷ್ಟದಲ್ಲಿದ್ದಾರೆ, ಸಾಲ ಸಿಗದಿರುವ ಪರಿಸ್ಥಿತಿಯಲ್ಲಿದ್ದಾರೆ ಮತ್ತು ಮಳೆ ಬಂದಾಗಲೂ ಬಿತ್ತಿ ಬೆಳೆಯಲು ಹಣ ಸಿಗದೆ ಒದ್ದಾಡುತ್ತಿರುವ ಸಂದರ್ಭದಲ್ಲಿ ಸರ್ಕಾರ ಸಮಸ್ಯೆಯನ್ನು ತೀವ್ರವಾಗಿ ಪರಿಗಣಿಸುವ ಮೂಲಕ ಬೆಳೆ ವಿಮೆ ಪರಿಹಾರದ ಹಣವನ್ನು ಶೀಘ್ರಗತಿಯಲ್ಲಿ ಒದಗಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಬಯಸುತ್ತೇನೆ

ಶ್ರೀ ಪಿ ಜಿ ಆರ್ ಸಿಂಧ್ಯಾ (ಕೈಗಾರಿಕಾ ಸಚಿವರು) ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ ಮಾನ್ಯ ಸದಸ್ಯರಾದ ಉದಾಸಿಯವರು ಈ ವಿಚಾರದಲ್ಲಿ ಬಹಳ ದೊಡ್ಡ ಹೋರಾಟವನ್ನು ಮುಂಚಿನಿಂದಲೂ ಮಾಡಿಕೊಂಡು ಬಂದಿರುವುದರಿಂದ ಸ್ವಾಭಾವಿಕವಾಗಿ ಅವರ ಕ್ಷೇತ್ರ, ಅವರ ಜಿಲ್ಲೆಗೆ ಸಂಬಂಧಿಸಿದಂತೆ ಇಡೀ ರಾಜ್ಯಾದ್ಯಂತ ಈ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಈ ಕುರಿತು ಮಾನ್ಯ ಕೃಷಿ ಸಚಿವರಿಂದ ಒಂದು ದೀರ್ಘ ಹೇಳಿಕೆ ಕೊಡಿಸುತ್ತೇನೆ

ಈ) ವಿಷಯ ರಾಜ್ಯದಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ವೈಜ್ಞಾನಿಕವಾಗಿ ಜಾರಿಗೆ ತರುವುದು

ಶ್ರೀ ಕೆ ಎಸ್ ಈಶ್ವರಪ್ಪ (ಶಿವಮೊಗ್ಗ) ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದ ಎಲ್ಲಾ ನಗರಸಭೆ, ಪುರಸಭೆಗಳಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯಡಿ ತೆರಿಗೆಯನ್ನು ವೈಜ್ಞಾನಿಕವಾಗಿ ಸಂಗ್ರಹಿಸುವಂಥ ಪದ್ಧತಿಯನ್ನು ಇದುವರೆವಿಗೂ ಜಾರಿಗೆ ಹಿಂದಿನ ಸರ್ಕಾರ ಈ ಬಗ್ಗೆ ಒಂದು ಆಜ್ಞೆ, ಹೊರಡಿಸಿತು ಆಜ್ಞೆ ಹೊರಡಿಸಿದಂಥ ಮಾನ್ಯ ಮುಖ್ಯಮಂತ್ರಿಗಳು ಸ್ವತಃ ಅವರ ತಾಲ್ಲೂಕಿಗೇ ಈ ಸಂಬಂಧ ಸ್ವೇ ಕೊಟ್ಟರು ಅವರು ಮದ್ದೂರಿಗೆ ಹೋಗಿ 'ಇದನ್ನು ಜಾರಿಗೆ ತರಲು ಅವಕಾಶವಿಲ್ಲ, ಈ ಪದ್ಧತಿಯನ್ನು ನಾನು ಜಾರಿಗೆ ತರುವುದಿಲ್ಲ' ಎಂದು ಹೇಳುವ ಮೂಲಕ ಅಲ್ಲಿ ನಿಲ್ಲಿಸಿದರು! ಅದೇ ರೀತಿ ಚುನಾವಣಾ ಪೂರ್ವದಲ್ಲಿ ಕೆಪಿಸಿಸಿ ಅಧ್ಯಕ್ಷರು ಮಂಗಳೂರು ನಗರಸಭೆಗೂ ತೆರಳಿ 'ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿ ಅವೈಜ್ಞಾನಿಕವಾಗಿರುವುದರಿಂದ ಯಾವುದೇ ಕಾರಣಕ್ಕೂ ನಾನು ಜಾರಿಗೆ ಬರಲು ಬಿಡುವುದಿಲ್ಲ' ಎಂದು ಹೇಳಿ ಅಲ್ಲಿಯೂ ನಿಲ್ಲಿಸಿದರು ಇಡೀ ರಾಜ್ಯದಲ್ಲಿರುವ ಎಲ್ಲಾ ನಗರಸಭೆ, ಪುರಸಭೆಗಳಿಗೆ ಕೆಪಿಸಿಸಿ ಅಧ್ಯಕ್ಷರು ಬರಲು ಸಾಧ್ಯವಿಲ್ಲ ಅಥವಾ ಮುಖ್ಯಮಂತ್ರಿಗಳು ಎಲ್ಲಾ ಮುನಿಸಿಪಾಲಿಟಿ, ನಗರಸಭೆ ಮತ್ತು ಕಾರ್ಪೊರೇಷನ್‌ಗಳಿಗೂ ಬರಲು ಸಾಧ್ಯವಿಲ್ಲ ಸರ್ಕಾರವೇ ಇಡೀ ರಾಜ್ಯದ ಪರಿಸ್ಥಿತಿಯನ್ನು ಗಮನಿಸಿ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರುವ ದಿಕ್ಕಿನಲ್ಲಿ ವೈಜ್ಞಾನಿಕವಾಗಿ ಪ್ರಯತ್ನ ಮಾಡಬೇಕಾಗಿತ್ತು ಈಗ ಏನಾಗಿದೆಯೆಂದರೆ, ದಿನಾಂಕ 1 4 2002ರಿಂದ ಜಾರಿಗೆ ತಂದಿರುವ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯು ಅವೈಜ್ಞಾನಿಕವಾಗಿದೆ ಇದು ಇಡೀ ರಾಜ್ಯದ ಜನತೆ ಮೇಲೆ ಹೇರಿರುವ ಕ್ರೂರ ಮತ್ತು ಕರಾಳ ಕಾನೂನು ಆಗಿರುವುದರಿಂದ

ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ರಾಜ್ಯದ ಎಲ್ಲಾ ನಗರಸಭೆ, ಪುರಸಭೆ ಮತ್ತು ಮುನಿಸಿಪಾಲಿಟಿ ಕಾರ್ಪೊರೇಷನ್‌ಗಳು ಹಿಂದಿನ ಸರ್ಕಾರಕ್ಕೆ ಸಾಕಷ್ಟು ಒತ್ತಾಯ ಮಾಡುತ್ತಾ ಬಂದಿವೆ. ಸ್ವಯಂಘೋಷಿತ ಆಸ್ತಿ ತೆರಿಗೆಯನ್ನು ಸಬ್ ರಿಜಿಸ್ಟ್ರಾರ್ ವ್ಯಾಲ್ಯೂ ಮಾಡಬೇಕು! ಹೆಸರುಃ ಸ್ವಯಂಘೋಷಿತ ಆಸ್ತಿ ತೆರಿಗೆ, ತೀರ್ಮಾನ ಮಾಡುವುದು ಯಾರು? ಸಬ್ ರಿಜಿಸ್ಟ್ರಾರ್! ಹಾಗಾಗಿ, ಸ್ವಯಂಘೋಷಿತ ಆಸ್ತಿ ತೆರಿಗೆ ಎಲ್ಲವೂ ಸಬ್ ರಿಜಿಸ್ಟ್ರಾರ್ ಆಸ್ತಿ ತೆರಿಗೆ ವ್ಯವಸ್ಥೆಯೆಂದು ಇಡೀ ರಾಜ್ಯದಲ್ಲಿ ಜನರು ಟೀಕೆ ಮಾಡುತ್ತಿದ್ದಾರೆ ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳ ಗಮನಕ್ಕೆ ತರಲು ನಾನು ಇಷ್ಟಪಡುವುದೇನೆಂದರೆ, ಈಗಿನ ಸಬ್ ರಿಜಿಸ್ಟ್ರಾರ್ ದರವನ್ನೇ ಆಧಾರವಾಗಿಟ್ಟು ನಿರ್ಧರಿಸಿದರೆ ಐದು ವರ್ಷಗಳಿಗೆ ಶೇಕಡ 102ರಿಂದ 150ರ ತನಕ ಹೆಚ್ಚಾಗಲು ಅವಕಾಶವಿರುವ ಕುರಿತು ನನ್ನ ಬಳಿ ದಾಖಲೆ ಇದೆ ಅದನ್ನು ತಮಗೆ ಕಳುಹಿಸಿಕೊಡುತ್ತೇನೆ ಸಬ್ ರಿಜಿಸ್ಟ್ರಾರ್ ವ್ಯಾಲ್ಯೂಗೂ ಮತ್ತು ನಿರ್ಧರಿಸಿದಂಥ ಮಾರುಕಟ್ಟೆ ಮೌಲ್ಯಕ್ಕೂ ಸಂಬಂಧವಿಲ್ಲವೆಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ K S Mahadevappa & Others Vs Assistant Commissioner and Land Acquisition Officer ಕೇಸಿನಲ್ಲಿ ಸಬ್ ರಿಜಿಸ್ಟ್ರಾರ್ ವ್ಯಾಲ್ಯೂ ಮತ್ತು ಮಾರುಕಟ್ಟೆ ಮೌಲ್ಯಕ್ಕೂ ಹೊಂದುವುದಿಲ್ಲವೆಂದು ಸುಪ್ರೀಂಕೋರ್ಟ್ ತನ್ನ ತೀರ್ಪು ನೀಡಿದೆ ಇನ್ನೊಂದು ಕಡೆ ಕರ್ನಾಟಕ ಹೈಕೋರ್ಟ್ ಕೂಡ ಸಬ್ ರಿಜಿಸ್ಟ್ರಾರ್ ವ್ಯಾಲ್ಯೂಗೆ ಪರಿಹಾರ ಕೊಡುವ ಸಂದರ್ಭದಲ್ಲಿ ಸಬ್ ರಿಜಿಸ್ಟ್ರಾರ್‌ರವರು ಹತ್ತು ಲಕ್ಷ ರೂಪಾಯಿಗಳ ವ್ಯಾಲ್ಯೂ ಫಿಕ್ಸ್ ಮಾಡಿದರೆ ಅಷ್ಟು ಕೊಡಲು ಸಾಧ್ಯವಿಲ್ಲವೆಂದೂ ಬದಲಾಗಿ ಆರು ಲಕ್ಷಕ್ಕೆ ಹೈಕೋರ್ಟ್ ಫಿಕ್ಸ್ ಮಾಡಿದೆ ಇದರಲ್ಲಿ K Gopalagowda Vs Land Acquisition Oficer ಮತ್ತು ಕೆಐಎಡಿಬಿಗೆ ಸಂಬಂಧಿಸಿದಂತೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟಿನ ಎರಡೂ ತೀರ್ಪಿನ ಪ್ರತಿಗಳು ನನ್ನ ಬಳಿ ಇವೆ ಸಬ್ ರಿಜಿಸ್ಟ್ರಾರ್ ವ್ಯಾಲ್ಯೂ ಸಿಕ್ಕಾಪಟ್ಟೆ ಜಾಸ್ತಿಯಾದರೂ ಸಂಬಂಧಪಟ್ಟವರಿಗೆ ಆಸ್ತಿಯನ್ನು ಬಾಡಿಗೆಯಾಗಿ ಯಾರಿಗಾದರೂ ಕೊಟ್ಟರೆ ಬಾಡಿಗೆ ದರ ಜಾಸ್ತಿಯಾಗುವುದಿಲ್ಲ

ಅಧ್ಯಕ್ಷರು ತಾವು ಹಿರಿಯ ಸದಸ್ಯರಾಗಿದ್ದು ಇದು ಶೂನ್ಯ ವೇಳೆಯಾಗಿರುವುದರಿಂದ ವಿಷಯವನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸುವ ಮೂಲಕ ಸರ್ಕಾರದ ಗಮನ ಸೆಳೆಯಬೇಕು

ಶ್ರೀ ಕೆ ಎಸ್ ಈಶ್ವರಪ್ಪ ನಾನು ಹೇಳುವುದಿಷ್ಟೆ ಇಡೀ ರಾಜ್ಯಾದ್ಯಂತ ಈ ಸಮಸ್ಯೆ ಇರುವುದರಿಂದ ನಿಮ್ಮ ಗಮನಕ್ಕೆ ತರುತ್ತಿರುವುದೇನೆಂದರೆ, ಈ ಕುರಿತು ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ ಪ್ರಶ್ನೆ ಉದ್ಭವಿಸಿರುವುದೇನೆಂದರೆ, ಕಟ್ಟಡ ನಿರ್ಮಿಸಿದರೆ ಕಟ್ಟಡದ ಮೇಲೆ ವಿಧಿಸುವ ತೆರಿಗೆಯಲ್ಲದೆ ನಿವೇಶನಕ್ಕೂ ತೆರಿಗೆಯನ್ನು ವಿಧಿಸುತ್ತಾರೆ ಜೊತೆಗೆ ಈ ಕಾನೂನಿನ ಪ್ರಕಾರ ಮನೆ ಸುತ್ತಲೂ ಬಿಡಬೇಕೆಂದಿರುವ ಜಾಗಕ್ಕೂ ಕೂಡ ತೆರಿಗೆ ವಿಧಿಸುತ್ತಿದ್ದಾರೆ ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ ನಾನು ಬಂದು ತಾತ್ಕಾಲಿಕ ಪರಿಹಾರದ ಬಗ್ಗೆ ಹೇಳಬಯಸುವುದೇನೆಂದರೆ, ಬೆಂಗಳೂರು ಮಹಾನಗರ ಪಾಲಿಕೆ ರೂಪದಲ್ಲಿ ಬಾಡಿಗೆ ಆಧಾರದ ಮೇಲೆ ಹಿಂದೆ ತೀರ್ಮಾನ ಮಾಡಿದಂತೆ ಇಡೀ ರಾಜ್ಯಕ್ಕೆ ಒಂದು ಮಾದರಿ ರೂಪದಲ್ಲಿ ಯಾವ ಪದ್ಧತಿ ಜಾರಿಗೆ ತಂದಿದ್ದರು, ಅದೇ ಪದ್ಧತಿಯನ್ನು ತುರ್ತಾಗಿ ಮುಂಚಿತವಾಗಿ ಇಡೀ ರಾಜ್ಯಕ್ಕೆ ತರುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು ದಿನಾಂಕ 31.5 2000ರಿಂದ ಮಂಗಳೂರು ಕಾರ್ಪೊರೇಷನ್‌ನವರು ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರುವುದಿಲ್ಲವೆಂದು ಹೇಳಿದ್ದು, ಅದೇ ರೀತಿ ಶಿವಮೊಗ್ಗ ನಗರಸಭೆಯವರೂ ತೀರ್ಮಾನ ಕೈಗೊಳ್ಳುವ ಮೂಲಕ ಸದರಿ ಪದ್ಧತಿಗನ್ನ [illegible]

ನಾವುಗಳೆಲ್ಲರೂ ರಾಜೀನಾಮೆ ಕೊಡಬೇಕಾಗುತ್ತದೆಂದು ತಿಳಿಸಿದ್ದಾರೆ ಹೀಗಾಗಿ, ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿ ಮೂಲಕ ತುರ್ತಾಗಿ ತೆರಿಗೆ ಸಂಗ್ರಹಿಸುತ್ತಿಲ್ಲ ಹಿಂದಿನ ರೂಪದಲ್ಲೂ ತೆರಿಗೆ ಸಂಗ್ರಹಿಸುತ್ತಿಲ್ಲ, ಹೊಸ ಪದ್ಧತಿಯಲ್ಲೂ ತೆರಿಗೆ ಸಂಗ್ರಹಿಸುತ್ತಿಲ್ಲ ಎಲ್ಲಾ ನಗರಸಭೆಗಳಲ್ಲೂ ಹಣ ಇಲ್ಲದೆ ಅಭಿವೃದ್ಧಿ ಕೆಲಸ-ಕಾರ್ಯಗಳಾಗುತ್ತಿಲ್ಲ ಈ ದಿಸೆಯಲ್ಲಿ ನೀವು ಏನು ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆಂದರೆ, ಕಳೆದ ಮೂರು ವರ್ಷಗಳ ಅಂದರೆ, 2001-02, 2002-03 ಮತ್ತು 2003-04ರ ಬಾಬ್ತನ್ನು ಹಿಂದಿನ ಬಾಡಿಗೆ ಆಧಾರದ ಮೇಲೆ ಆರು ತಿಂಗಳೊಳಗೆ ಪಾವತಿಸಬೇಕೆಂದು ತಿಳಿಸಿದರೆ ಇಡೀ ರಾಜ್ಯದಲ್ಲಿರುವ ಒಂದೊಂದು ಪುರಸಭೆ, ನಗರಸಭೆ ಮತ್ತು ಕಾರ್ಪೊರೇಷನ್‌ನಿಂದ ಸುಮಾರು 10ರಿಂದ 20 ಕೋಟಿ ರೂಪಾಯಿಗಳ ತನಕ ತೆರಿಗೆ ಹಣ ಸಂಗ್ರಹವಾಗುತ್ತದೆಂದು ನಾನು ಸಲಹೆ ಕೊಡುತ್ತಿದ್ದೇನೆ ದಯವಿಟ್ಟು ಈ ರೀತಿಯಲ್ಲಾದರೂ ತುರ್ತಾಗಿ ಹಣ ಸಂಗ್ರಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ವೈಜ್ಞಾನಿಕವಾಗಿ ಜಾರಿಗೆ ತರಲು ಸದನ ಸಮಿತಿ ರಚಿಸುತ್ತೀರೋ, ಇಲ್ಲವೇ ಇನ್ನೇನಾದರೂ ಮಾಡಿ ಇಡೀ ರಾಜ್ಯಕ್ಕೆ ವೈಜ್ಞಾನಿಕ ರೀತಿಯಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರುವ ದಿಕ್ಕಿನಲ್ಲಿ ಸರ್ಕಾರ ತುರ್ತು ಗಮನಹರಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ ಇದರಿಂದಾಗಿ ಇಡೀ ರಾಜ್ಯದ ಎಲ್ಲಾ ನಗರಸಭೆ, ಪುರಸಭೆಗಳಿಗೂ ಹಣ ಸಂಗ್ರಹವಾಗಿ ಅಭಿವೃದ್ಧಿ ಕಾರ್ಯಗಳಾಗುತ್ತದೆ ಆದುದರಿಂದ, ಸರ್ಕಾರ ಆ ದಿಕ್ಕಿನಲ್ಲಿ ಗಮನಹರಿಸಬೇಕೆಂದು ಹೇಳುತ್ತಾ ಚುನಾವಣಾ ಪ್ರಣಾಳಿಕೆಯಲ್ಲೂ ಕೂಡ ತಾವು ಅದರ ಬಗ್ಗೆ ಘೋಷಿಸಿದ್ದೀರಿ ಪ್ರಣಾಳಿಕೆಯ 21ನೇ ಪುಟದಲ್ಲಿ ಇದರ ಬಗ್ಗೆ ಪ್ರಸ್ತಾಪಿಸಿದ್ದೀರಿ ಚುನಾವಣಾ ಪೂರ್ವದಲ್ಲಿ ಇಡೀ ರಾಜ್ಯಕ್ಕೆ ತಾವು ಪ್ರಣಾಳಿಕೆ ಕೊಟ್ಟಿದ್ದೀರಲ್ಲಾ ಅದನ್ನು ನಾನು ಇಟ್ಟುಕೊಂಡಿದ್ದೇನೆ, ಬೇಡವೆಂದರೆ ಬಿಸಾಕುತ್ತೇನೆ

ಶ್ರೀ ಸಿದ್ದರಾಮಯ್ಯ ನಮ್ಮ ಪ್ರಣಾಳಿಕೆಯನ್ನು ಇಟ್ಟುಕೊಂಡು ಅದರಂತೆ ಕೆಲಸ ಮಾಡಿ

ಶ್ರೀ ಕೆ ಎಸ್ ಈಶ್ವರಪ್ಪ ನಿಮ್ಮ ಚುನಾವಣಾಪೂರ್ವ ಪ್ರಣಾಳಿಕೆಯಲ್ಲಿ ಇಡೀ ರಾಜ್ಯಕ್ಕೆ ಆಶ್ವಾಸನೆ ಕೊಟ್ಟಿದ್ದೀರಿ ಅದಕ್ಕೋಸ್ಕರ, ಇದನ್ನು ತಕ್ಷಣ ಜಾರಿಗೆ ತರಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಪ್ರಸ್ತಾಪಿಸುವ ಸೂಚನಾ ಪತ್ರಕ್ಕೆ ನಾನೂ ಕೂಡ ಸಹಿ ಮಾಡಿಕೊಟ್ಟಿರುವುದರಿಂದ ನನಗೂ ಮಾತನಾಡಲು ಅವಕಾಶ ಕಲ್ಪಿಸಿಕೊಡಬೇಕು

ಅಧ್ಯಕ್ಷರು ವಿಶ್ವೇಶ್ವರ ಹೆಗಡೆಯವರೆ, ನಿಮ್ಮ ಪಕ್ಷದ ನಾಯಕರು ಈಗ ಮಾತನಾಡಿ ಸರ್ಕಾರದ ಗಮನ ಸೆಳೆದಿದ್ದಾರೆ ತಾವು ದಯಮಾಡಿ ಸಹಕರಿಸಬೇಕು ಶೂನ್ಯ ವೇಳೆಯಲ್ಲಿ ದೀರ್ಘವಾಗಿ ಚರ್ಚಿಸುವುದಕ್ಕೆ ಅವಕಾಶವಿಲ್ಲ ತಾವು ಹಿರಿಯ ಸದಸ್ಯರಾಗಿದ್ದು, ತಾವೇ ಹೀಗೆ ಮಾಡಿದರೆ ಹೇಗೆ? ನಿಯಮಾವಳಿ, ಸಂಪ್ರದಾಯಗಳನ್ನು ಬಿಟ್ಟು ಸದನದ ಕಲಾಪ ನಡೆಸುವುದಾದರೂ ಹೇಗೆ? ನೀವೇ ಹೇಳಬೇಕು

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ (ಅಂಕೋಲ) ಮಾನ್ಯ ಅಧ್ಯಕ್ಷರೆ, ಸ್ವಯಂಘೋಷಿತ ಆಸ್ತಿ ತೆರಿಗೆ ಕುರಿತಂತೆ ವಿಶೇಷ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾವು ಹಾಗೂ ಮಾನ್ಯ ಈಶ್ವರಪ್ಪನವರು ನಿಮ್ಮಲ್ಲಿಗೆ ಬಂದು ವಿನಂತಿಸಿಕೊಂಡಿದ್ದೆವು ಸದರಿ ವಿಷಯವನ್ನು ಇವೊತ್ತು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ತಾವು ಅವಕಾಶ ಮಾಡಿಕೊಟ್ಟಿದ್ದೀರಿ ಮಾನ್ಯ ಮಂತ್ರಿಗಳಾದ ಸಿಂಧ್ಯಾ ಮತ್ತು

ಸರ್ಕಾರದಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆಯಿಂದಾಗಿ ರಾಜ್ಯದಲ್ಲಿ ಏನೇನು ತೊಂದರೆಗಳಾಗುತ್ತಿದೆಯೆಂದು ಮಾನ್ಯ ಈಶ್ವರಪ್ಪನವರು ಈಗಾಗಲೇ ಮಾತನಾಡಿ ಉಲ್ಲೇಖಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಯವರಿಂದ ದಿನಾಂಕ 24 5 2003ರಂದು 380 2002ರ ಸಂಖ್ಯೆಯ ಒಂದು ಸರ್ಕಾರಿ ಆಜ್ಞೆಯಾಗಿದ್ದು, ರಾಜ್ಯದಲ್ಲಿರುವ ಸುಮಾರು 5000 ಚಿಲ್ಲರೆ ಗ್ರಾಮ ಪಂಚಾಯತಿಗಳಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರಬೇಕೆಂದು ಅಧಿಕಾರಿಗಳು ಆದೇಶ ಹೊರಡಿಸಿದ್ದಾರೆ

11 40 ಎ ಎಂ

ಇದು ಸರ್ಕಾರದ ಗಮನದಲ್ಲಿ ಇದೆಯೋ ಇಲ್ಲವೊ ನನಗೆ ಗೊತ್ತಿಲ್ಲ ಎಲ್ಲಾ Chief Executive Officers ಮತ್ತು Executive Officers ಪ್ರತಿಯೊಂದು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳ ಮೇಲೆ ಒತ್ತಡವನ್ನು ಹೇರಿ ಪಂಚಾಯಿತಿ ವ್ಯಾಪ್ತಿಯಲ್ಲಿರುವಂತಹ ಮನೆಗಳ ಮೇಲಿನ ಟ್ಯಾಕ್ಸ್ ಅನ್ನು ಹೆಚ್ಚು ಮಾಡುತ್ತಿದ್ದಾರೆ ನಗರ ಪ್ರದೇಶಗಳಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಿಂದ ತೊಂದರೆಯಾಗುತ್ತಿದೆ ಇದರಲ್ಲಿ ಸಾಕಷ್ಟು ನ್ಯೂನತೆಗಳಿವೆ ಗ್ರಾಮೀಣ ಪ್ರದೇಶಗಳಲ್ಲೂ ಸಹ ಈ ಪದ್ಧತಿಯಿಂದ ತೊಂದರೆಯಾಗುತ್ತಿದೆ

ಅಧ್ಯಕ್ಷರು ಬ್ರೀಫಾಗಿ ಹೇಳಿ

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ ಸರ್ಕಾರ ರಾಜ್ಯದಲ್ಲಿ ಬರಗಾಲ ಬಂದಿರುವಂತಹ ಸಮಯದಲ್ಲಿ ಈ ರೀತಿ ವಿಶೇಷವಾದಂತಹ ತೆರಿಗೆಯ ಹೊರೆಯನ್ನು ಜನರ ಮೇಲೆ ಹಾಕಬಾರದಲ್ಲವೇ? ಈ ಪದ್ಧತಿಯಿಂದಾಗಿ ಮನೆಗೆ 50 ರೂ ಗಳ ಟ್ಯಾಕ್ಸ್ ಅನ್ನು ಕೊಡುತ್ತಿದ್ದವರು ಈಗ 500–1000 ರೂ ಗಳ ಟ್ಯಾಕ್ಸ್ ಅನ್ನು ಕೊಡುವಂತಹ ಪರಿಸ್ಥಿತಿ ಅಲ್ಲಿ ಬರುತ್ತಿದೆ ಪಂಚಾಯಿತಿಗಳಿಂದ ಯಾವೊಂದು ವ್ಯವಸ್ಥೆ ಅಥವಾ ಸೌಲಭ್ಯಗಳು ನಮಗೆ ಸಿಗುತ್ತಿಲ್ಲ ಹೀಗಿರುವಾಗ ಇವತ್ತು ಸರ್ಕಾರ ಟ್ಯಾಕ್ಸ್ ಹೆಚ್ಚಳ ಮಾಡಿದರೆ ಅದನ್ನು ಜನ ಹೇಗೆ ಒಪ್ಪಲಿಕ್ಕೆ ಸಾಧ್ಯ? ಹಿಂದಿನ ಸರ್ಕಾರ ಮಾಡಿರುವ ಈ ಆದೇಶವನ್ನು ಸರ್ಕಾರ ಹಿಂತೆಗೆದುಕೊಳ್ಳಬೇಕು ದಿನಾಂಕ 24 5 2003ರಿಂದ ಇದು ಅನುಷ್ಠಾನಕ್ಕೆ ಬಂದಿದೆ ಈ ಆದೇಶ ವರ್ಷದ ಹಿಂದೆಯೇ ಬಂದಿದ್ದರೂ, ಈಗ ಅದನ್ನು ಜಾರಿಗೊಳಿಸಲು Executive Officers ಪಂಚಾಯಿತಿ ಸೆಕ್ರೆಟರಿಗಳ ಮೇಲೆ ಒತ್ತಡ ತರುತ್ತಿದ್ದಾರೆ ಪಂಚಾಯಿತಿಗಳನ್ನು ಸೂಪರ್ ಸೀಡ್ ಮಾಡಿಸುತ್ತೇವೆಂದು ಹೇಳುತ್ತಿದ್ದಾರೆ ಈ ರೀತಿಯಾಗಿ ಒತ್ತಡವನ್ನು ತಂದು ಅಲ್ಲಿ ತೆರಿಗೆಯನ್ನು ಹೆಚ್ಚು ಮಾಡಿಸುವಂತಹ ಏನೊಂದು ಪ್ರಯತ್ನ ಅಧಿಕಾರಿಗಳ ಮೂಲಕ ನಡೆದಿದೆಯೋ, ಅದನ್ನು ತಾವು ತಡೆಹಿಡಿಯಬೇಕು ತಾವು ಜನ ಪರವಾಗಿ ಆಡಳಿತವನ್ನು ಕೊಡುವುದಕ್ಕೆ ಬಯಸಿ ಅಧಿಕಾರಕ್ಕೆ ಬಂದಂತಹವರು ಹಾಗಾಗಿ ಜನ ಪರವಾದಂತಹ ನಿಜವಾದಂತಹ ಕಾಳಜಿ ನಿಮಗೆ ಇದ್ದರೆ, ತಕ್ಷಣವೇ ಈ ಆದೇಶವನ್ನು ಹಿಂತೆಗೆದುಕೊಳ್ಳಬೇಕು ನಗರ ಪ್ರದೇಶಕ್ಕೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಸರ್ಕಾರ ಬಯಸಿದೆ ಅದನ್ನು ಇನ್ನಷ್ಟು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ನಂತರವೇ ಜಾರಿಗೊಳಿಸುವಂತೆ ಮಾಡಬೇಕೆಂದು ನಾನು ಆಗ್ರಹಿಸುತ್ತಿದ್ದೇನೆ

ಶ್ರೀ ಪಿ ಜಿ ಆರ್ ಸಿಂದ್ಯಾ (ಕೈಗಾರಿಕಾ ಸಚಿವರು) ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಈಶ್ವರಪ್ಪನವರು ಹಾಗೂ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಪ್ರಸ್ತಾಪಿಸಿರತಕ್ಕ ವಿಚಾರ ಸರ್ಕಾರಕ್ಕೆ ಮನದಟ್ಟಾಗಿದೆ ಈ ಸ್ವಯಂ ಘೋಷಿತ ಆಸ್ತಿ ತೆರಿಗೆ ವಿಚಾರ ಏನಿದೆ, ಇದು ಒಂದೆರಡು ವರ್ಷಗಳಿಂದ ರಾಜ್ಯದಲ್ಲಿ

ಈಗಾಗಲೇ ಕೆಲವು ಕಡೆ ಕಾರ್ಯಗತ ಆಗಿದೆ ಕೆಲವು ಕಡೆ ಇದು ಕಾರ್ಯಗತವಾಗಿಲ್ಲ ಇದು ಕೆಲವು ಕಡೆ ಜನಗಳಿಗೆ ಹೊರೆಯಾಗಿದೆ ಅನ್ನತಕ್ಕಂಥ ವಿಚಾರ ಕೂಡ ಇರುವುದು ನಿಜ ಜಾತ್ಯತೀತ ಜನತಾ ದಳದ ಚುನಾವಣಾ ಪ್ರಣಾಳಿಕೆಯ ಬಗ್ಗೆ ಸಹಿತ ತಾವು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ ನಾವೆರಡೂ ಪಾರ್ಟಿಯವರು ಸೇರಿ ನಾವು ಇದರ ಬಗ್ಗೆ ಮುನರ್ ವಿಮರ್ಶೆ ಮಾಡುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಹೇಳಿರತಕ್ಕಂಥದ್ದು ನಿಜ ನಾವೆರಡೂ ಪಕ್ಷದವರು ಸೇರಿ Common Minimum Programme ಕನಿಷ್ಠ ಕಾರ್ಯಕ್ರಮ ಏನು ಮಾಡುತ್ತೇವೆ ಎನ್ನುವುದರ ಬಗ್ಗೆ ನಾವಿನ್ನೂ ಒಂದು ತೀರ್ಮಾನಕ್ಕೆ ಬರುವುದಕ್ಕಾಗಿಲ್ಲ ಅದರ ಬಗ್ಗೆ ತೀರ್ಮಾನಕ್ಕೆ ಬರುತ್ತೇವೆ ಆದರೆ ಈ ಮಧ್ಯೆದಲ್ಲಿ ಕೆಲವೊಂದು ವಿಚಾರಗಳು ತುರ್ತಾಗಿ ಆಗಬೇಕು ಎಂದು ತಾವು ಹೇಳಿದ್ದೀರಿ ಸರ್ಕಾರದ ಗಮನವನ್ನು ಆ ಕಡೆಗೆ ಸೆಳೆದಿದ್ದೀರಿ ಸರ್ಕಾರದ ಗಮನವನ್ನು ಆ ಕಡೆಗೆ ಸೆಳೆದಿದ್ದೀರಿ ಸಂಬಂಧಪಟ್ಟ ಸಚಿವರು, ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಕುಳಿತು .. ..

ಶ್ರೀ ಕೆ ಎಸ್ ಈಶ್ವರಪ್ಪ ಮಾನ್ಯ ಅಧ್ಯಕ್ಷರೇ, ನಾನು ಈ ವಿಚಾರ ಪ್ರಸ್ತಾಪ ಮಾಡಿದಾಗಲೇ ಸಂಬಂಧಪಟ್ಟ ಮಂತ್ರಿಗಳು ಇರಲಿಲ್ಲ ಇಂತಹ ಉತ್ತರವನ್ನು ಪಡೆಯಲು ನಾವೇಕೆ ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು?

ಅಧ್ಯಕ್ಷರು ಮಾನ್ಯ ಈಶ್ವರಪ್ಪನವರೇ, ದಯಮಾಡಿ ಕುಳಿತುಕೊಳ್ಳಿ ತಾವೇ ಈ ತರಹ ಮಾಡಿದರೆ ಹೇಗೆ? ಅವರು ಉತ್ತರ ಹೇಳಲಿ

ಶ್ರೀ ಪಿ ಜಿ ಆರ್ ಸಿಂಧ್ಯಾ ನಾನಿನ್ನೂ ನನ್ನ ಉತ್ತರವನ್ನು ಮುಗಿಸಲೇ ಇಲ್ಲ ನಾನು ಎಲ್ಲವನ್ನೂ ಹೇಳುತ್ತೇನೆ. ಸಂಬಂಧಪಟ್ಟ ಸಚಿವರೇ ಉತ್ತರ ಕೊಡುತ್ತಾರೆ ತಾವು ಒಂದು ನಿಮಿಷ ತಾಳ್ಮೆಯಿಂದ ಕುಳಿತುಕೊಳ್ಳಿ ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಯಾವುದೇ ಮಂತ್ರಿಗಳು ದೀರ್ಘವಾಗಿ ಉತ್ತರವನ್ನು ಕೊಡತಕ್ಕಂಥದ್ದು ಅಥವಾ ಸರ್ಕಾರದ ನಿರ್ಧಾರಗಳನ್ನು ಪ್ರಕಟ ಮಾಡುವಂತಾದ್ದು ಕಷ್ಟವಾಗುತ್ತದೆ ಮಾನ್ಯ ಈಶ್ವರಪ್ಪನವರು ಇದನ್ನು ಮನವರಿಕೆ ಮಾಡಿಕೊಂಡಿರತಕ್ಕವರೇ ಆಗಿದ್ದೀರಿ ತಾವು ನಿನ್ನೆ ಮಾನ್ಯ ಅಧ್ಯಕ್ಷರಿಗೆ ಸೂಚನೆ ಕೊಟ್ಟಿದ್ದೀರಿ ಈ ವಿಚಾರ ಈಗ ತಾನೇ ಸರ್ಕಾರಕ್ಕೆ ಗಮನಕ್ಕೆ ಬಂದಿದೆ ಇದರ ಬಗ್ಗೆ ನಾವೊಂದು ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳುತ್ತೇವೆ ತಾವು ಹೇಳಿರತಕ್ಕದ್ದು ನಿಜ ಎಂದೂ ಕೂಡ ಸರ್ಕಾರ ಹೇಳಿದೆ ಈ ಸರ್ಕಾರದಲ್ಲಿ ನಾನು ಹೇಳಿದರೂ ಒಂದೇ, ಮಾನ್ಯ ಮೋರೆಯವರು ಹೇಳಿದರೂ ಒಂದೇ ಅವರನ್ನೂ ಇದರಲ್ಲಿ ಸೇರಿಸಿಕೊಂಡು ತಮಗೆ ಒಂದು ಸಮಂಜಸವಾದಂತಹ ಉತ್ತರವನ್ನು ಕೊಡುತ್ತೇವೆ ಆದಷ್ಟೂ ತಮಗೆ ತೃಪ್ತಿ ಮಾಡಬೇಕು, ರಾಜ್ಯದ ಜನತೆಯ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವಂತಹ ಕಾಳಜಿ ಇರತಕ್ಕವರು ನಾವು. ಅದನ್ನು ಬಗೆಹರಿಸುತ್ತೇವೆ ಇದೆಲ್ಲವನ್ನೂ ಸಹ ನಾವು ಕುಳಿತುಕೊಂಡು ಚರ್ಚೆ ಮಾಡಬೇಕಾಗುತ್ತದೆ ನಿಮ್ಮನ್ನೂ ಕೂಡ ಕರೆಸುತ್ತೇವೆ, ನೀವು ಒಳ್ಳೆಯ ಅಭಿಪ್ರಾಯಗಳನ್ನು ಕೊಟ್ಟಿದ್ದೀರಿ.. ..

ಶ್ರೀ ಎಸ್ ಆರ್ ಮೋರೆ ಇವತ್ತು ಈ ವಿಷಯ ಸದನದಲ್ಲಿ ಪ್ರಸ್ತಾಪವಾಗಿದೆ ಈ ಬಗ್ಗೆ ನಾಳೆ 17ನೇ ತಾರೀಖು ಸದನದಲ್ಲಿ ಉತ್ತರ ಕೊಡುತ್ತೇವೆ

ಶ್ರೀ ಕೆ ಎಸ್ ಈಶ್ವರಪ್ಪ ಆಗಬಹುದು

ಉ) ವಿಷಯ ತೀರ್ಥಹಳ್ಳಿಯಲ್ಲಿ ನಡೆದ ದರೋಡೆ ಪ್ರಕರಣದ ಬಗ್ಗೆ ಪ್ರಸ್ತಾಪ ಮತ್ತು ಉತ್ತರ ಹಾಗೂ ಗೋವಾ ಕನ್ನಡಿಗರ ಸಮಸ್ಯೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ನಡೆದಂತಹ ಒಂದು ದರೋಡೆ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ನಾನು ನಿನ್ನೆ ಒಂದು ನೋಟೀಸ್ ಅನ್ನು ತಮಗೆ ಕಳುಹಿಸಿದ್ದೆ ಅದರ ಬಗ್ಗೆ ನನಗೆ ಪ್ರಸ್ತಾಪಿಸಲು ಇವತ್ತು ಅವಕಾಶ ಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ಧನ್ಯವಾದಗಳು ಆ ದರೋಡೆ ಪ್ರಕರಣ ಮೊನ್ನೆ ನಡೆದಿತ್ತು ನಿನ್ನೆ ಸಂಜೆಯೊಳಗಾಗಿ ಶಿವಮೊಗ್ಗ ಪೊಲೀಸರು ಆ ದರೋಡೆಕೋರರನ್ನು ಹಿಡಿದಿದ್ದಾರೆ ಈ ಸದನದ ಮೂಲಕ ಶಿವಮೊಗ್ಗ ಪೊಲೀಸರಿಗೆ ಅಭಿನಂದನೆ ಸಲ್ಲಿಸಿ ನಾನು ಕುಳಿತುಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಸರ್ಕಾರ ಎಷ್ಟು ಪ್ರಾಮಾಣಿಕವಾಗಿ ಕ್ಷಿಪ್ರ ಗತಿಯಲ್ಲಿ ಕೆಲಸ ಮಾಡುತ್ತದೆ ಎಂಬುದನ್ನು ತಾವು ಒಪ್ಪಿಕೊಂಡಿರುವುದಕ್ಕಾಗಿ ತಮಗೆ ಅಭಿನಂದನೆಗಳು

ಶ್ರೀ ಆರಗ ಜ್ಞಾನೇಂದ್ರ ನಿಮ್ಮ ಸರ್ಕಾರದಲ್ಲೂ ಒಳ್ಳೆಯ ಅಧಿಕಾರಿಗಳಿದ್ದಾರೆ ಎಂಬುದೇ ಸಂತೋಷದ ವಿಷಯವಾಗಿದೆ

ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರೇ, ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಈ ರಾಜ್ಯದ ಅನೇಕ ರೈತರ ಮೇಲೆ ..

ಅಧ್ಯಕ್ಷರು ದಯವಿಟ್ಟು ತಾವು ಕುಳಿತುಕೊಳ್ಳಬೇಕು

ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರೇ, ತಾವು ದಯವಿಟ್ಟು ಹೊಸ ಸದಸ್ಯರಿಗೆ ಅವಕಾಶವನ್ನು ಮಾಡಿ ಕೊಡಬೇಕು ..

ಅಧ್ಯಕ್ಷರು ತಾವು ದಯಮಾಡಿ ಕುಳಿತುಕೊಳ್ಳಬೇಕು ಮಾನ್ಯ ಆರಗ ಜ್ಞಾನೇಂದ್ರರವರು ಪ್ರಸ್ತಾಪ ಮಾಡಿದ್ದಕ್ಕೆ ಸರ್ಕಾರದ ಕಡೆಯಿಂದ ಯಾರು ಉತ್ತರ ಕೊಡುತ್ತೀರಿ?

ಶ್ರೀ ಆರಗ ಜ್ಞಾನೇಂದ್ರ ನಾನು ಪ್ರಸ್ತಾಪಿಸಿದ ಪ್ರಕರಣದ ಬಗ್ಗೆ ಮಾನ್ಯ ಗೃಹ ಸಚಿವರು ವಿವರವಾದ ಹೇಳಿಕೆ ಕೊಟ್ಟರೆ ಅನುಕೂಲವಾಗುತ್ತದೆ ನಮ್ಮ ಮಲೆನಾಡಿನಂತಹ ತಾಲ್ಲೂಕಿನಲ್ಲಿ ಒಂದೊಂದೇ ಮನೆಗಳು ಇರುತ್ತವೆ ದರೋಡೆ ಪ್ರಕರಣಗಳು ಜಾಸ್ತಿಯಾದರೆ ಕಷ್ಟವಾಗುತ್ತದೆ ಈ ಪ್ರಕರಣದಲ್ಲಿ ಅಪರಾಧಿಗಳನ್ನು ಪೊಲೀಸ್‌ನವರು ಹಿಡಿದಿದ್ದಾರೆ ಇನ್ನು ಮುಂದಾದರೂ ಇಂತಹ ಪ್ರಕರಣಗಳು ಜರುಗದಂತೆ ಸ್ವಲ್ಪ ಬಿಗಿ ಮಾಡುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕು ನನ್ನ ಕ್ಷೇತ್ರದಲ್ಲಿ ನಕ್ಸಲೈಟ್ ಹಾವಳಿ ಸಹ ಇದೆ ಅಲ್ಲಿಯ ಪೊಲೀಸರಿಗೆ ಇನ್ನಷ್ಟು ಹೆಚ್ಚು force ಕೊಡುವಂತಹ ಅಗತ್ಯ ಇದೆ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ಆ ಮನೆಯಲ್ಲಿ ವಿಧಾನ ಪರಿಷತ್ತಿಗೆ ಹೊಸದಾಗಿ ಚುನಾಯಿತರಾದಂತಹ ಸದಸ್ಯರ ಪ್ರಮಾಣ ವಚನ ಸ್ವೀಕಾರ ನಡೆಯುತ್ತಿದ್ದುದ್ದರಿಂದ ನಾನು ಅಲ್ಲಿದ್ದೆ ನಾನು ಅಲ್ಲಿಂದ ಈ ಮನೆಗೆ ಬರುವುದಕ್ಕೆ ಮುಂಚೆ ಮಾನ್ಯ ವಾಟಾಳ್ ನಾಗರಾಜ್‌ರವರು ಗೋವಾ ಕನ್ನಡಿಗರ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಕರ್ನಾಟಕದ ಜನರು ಗೋವಾದಲ್ಲಿದ್ದಾರೆ ಹಾಗೂ ಬಾಂಬೆನಲ್ಲಿಯೂ ಸಹ ಇದ್ದಾರೆ ಎಲ್ಲಾ ಪ್ರದೇಶಗಳಲ್ಲಿ ಇರತಕ್ಕಂಥ ಕನ್ನಡಿಗರ ಹಿತರಕ್ಷಣೆ ಮಾಡತಕ್ಕದ್ದು ನಮ್ಮ ಸರ್ಕಾರದ ಕರ್ತವ್ಯ ಆಗಿದೆ. ಹಾಗೆಯೇ ಅಲ್ಲಿಯ ಸರ್ಕಾರಗಳೂ

ಕೂಡ ಆ ಕರ್ತವ್ಯವನ್ನು ಮಾಡುತ್ತಲೇ ಬಂದಿವೆ ಈ ದಿನದ 'ಕನ್ನಡ ಪ್ರಭ' ದಿನಪತ್ರಿಕೆಯಲ್ಲಿ ಅದರ ಬಗ್ಗೆ ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದಾರೆ ಅಲ್ಲಿರುವ 813 ಕುಟುಂಬಗಳಲ್ಲಿ 650 ಕುಟುಂಬಗಳು ಕನ್ನಡಿಗರದು 'ಬಯನಾ' ಪ್ರದೇಶದಲ್ಲಿ 'ಕೆಂಪು ದೀಪ'ದ ಪ್ರದೇಶವಿದ್ದು ಅಲ್ಲಿ ಮನೆಗಳನ್ನು ನೆಲಸಮ ಮಾಡಿದ್ದಾರೆ ಇತ್ಯಾದಿ ವಿವರಗಳನ್ನು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ ಈಗಾಗಲೇ ನಾನು ಸರ್ಕಾರದ ಅಧಿಕಾರಿಗಳ ಜೊತೆಗೆ ಈ ಬಗ್ಗೆ ಮಾತನಾಡಿದ್ದೇನೆ ರಾಜ್ಯದ ಮುಖ್ಯ ಕಾರ್ಯದರ್ಶಿಯವರೂ ಕೂಡ ಅಲ್ಲಿನ ಮುಖ್ಯ ಕಾರ್ಯದರ್ಶಿಯವರನ್ನು ಸಂಪರ್ಕಿಸಿ, ಈ ರೀತಿಯ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕೆಂದು ಸೂಚಿಸಿದ್ದೇನೆ ಅಲ್ಲಿಗೆ ಕೆಲವು ಅಧಿಕಾರಿಗಳನ್ನೂ ಕೂಡ ಖುದ್ದಾಗಿ ಕಳುಹಿಸಿ, ಅದರ ವ್ಯವಸ್ಥೆಯನ್ನು ಮಾಡತಕ್ಕಂಥ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಮಾನ್ಯ ವಾಟಾಳ್ ನಾಗರಾಜ್‌ರವರು ಏನೂ ಭಯ ಪಡಬೇಕಾಗಿಲ್ಲ ಕನ್ನಡಿಗರ ಬಗ್ಗೆ ತಮ್ಮ ಏನೊಂದು ಭಾವನೆ ಇದೆಯೋ, ಅದರ ಬಗ್ಗೆ ನಮ್ಮದೂ ಕೂಡ ಅಷ್ಟೇ ಸಹಾನುಭೂತಿ ಇದೆ ಅದರ ಬಗ್ಗೆ ಎಲ್ಲಾ ತರಹದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಮಾನ್ಯ ಆರಗ ಜ್ಞಾನೇಂದ್ರರವರು ತಮ್ಮ ಮತ ಕ್ಷೇತ್ರದಲ್ಲಿ ದರೋಡೆಗಳಾಗುತ್ತಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ ನಾನು ಡಿ ಜಿ ಯವರಿಗೆ strict instruction ಕೊಟ್ಟು, ಎಲ್ಲಾ ಕಡೆಗೂ ದರೋಡೆ ಆಗುವುದನ್ನು ನಿಲ್ಲಿಸಬೇಕು ಮತ್ತು ಅದು ಆಗದಂತೆ ನೋಡಿಕೊಳ್ಳಬೇಕೆಂದು ಸೂಚಿಸುತ್ತೇನೆ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ Law and Order ಬಹಳ ಚೆನ್ನಾಗಿದೆ ಅನ್ನತಕ್ಕಂಥ ಅಭಿಪ್ರಾಯವನ್ನು ಮೂಡಿಸತಕ್ಕಂಥ ರೀತಿಯಲ್ಲಿ ಬಹಳ ಜಾಗ್ರತೆಯಿಂದ ಕ್ರಮ ತೆಗೆದುಕೊಳ್ಳಬೇಕೆಂದು ಸ್ಪಷ್ಟವಾದ ಆದೇಶ ಸರ್ಕಾರದ ಕಡೆಯಿಂದ ಸಂಬಂಧಪಟ್ಟವರಿಗೆ ಹೋಗುತ್ತದೆ

ಊ) ವಿಷಯ ವಿರಾಜಪೇಟೆ ತಾಲ್ಲೂಕಿನಿಂದ ಕೇರಳಕ್ಕೆ ಮರುಳು ಸಾಗಣೆಯಾಗುತ್ತಿರುವ ಬಗ್ಗೆ

ಶ್ರೀ ಹೆಚ್ ಡಿ ಬಸವರಾಜ್ (ವಿರಾಜಪೇಟೆ) ಮಾನ್ಯ ಅಧ್ಯಕ್ಷರೇ, ಕರ್ನಾಟಕ–ಕೇರಳ ಗಡಿ ಪ್ರದೇಶದಲ್ಲಿ ವಿರಾಜಪೇಟೆ ತಾಲ್ಲೂಕು ಇರುವುದು ತಮಗೂ ಕೂಡ ಗೊತ್ತಿದೆ. ಇತ್ತೀಚಿನ ದಿವಸಗಳಲ್ಲಿ ವಿರಾಜಪೇಟೆ ತಾಲ್ಲೂಕಿನಲ್ಲಿ ಇರತಕ್ಕಂಥ ತೋಡುಗಳು ಮತ್ತು ಕಾಲುವೆ, ಹೊಳೆ ಬದಿ, ಇವುಗಳಲ್ಲಿನ ಮರಳನ್ನು ತೆಗೆದು ಸಾಗಣೆ ಮಾಡತಕ್ಕಂಥ ಒಂದು ಪ್ರವೃತ್ತಿ ಜಾಸ್ತಿಯಾಗುತ್ತಿದೆ ಇದರಿಂದಾಗಿ ಅಲ್ಲಿನ ಸ್ಥಳೀಯರಿಗೆ ಮನೆ ಕಟ್ಟಲಿಕ್ಕೆ ಅಥವಾ ಮರಳನ್ನು ಇತರ ಯಾವ ಕೆಲಸಗಳಿಗೆ ಅವರು ಉಪಯೋಗಿಸಿಕೊಳ್ಳುತ್ತಿದ್ದರೋ ಅದಕ್ಕೆ ಮರಳಿನ ಕೊರತೆ ಉಂಟಾಗಿ ಅದನ್ನು ಬಳಸಿಕೊಳ್ಳುವ ಅವಕಾಶ ಸಿಕ್ಕಾಪಟ್ಟೆ ಕಡಿಮೆಯಾಗುತ್ತಿದೆ ಈ ರೀತಿ ತೆಗೆದ ಮರಳನ್ನು ಕೇರಳ ರಾಜ್ಯಕ್ಕೆ ರಾಜಾರೋಷವಾಗಿ ಸಾಗಣೆ ಮಾಡುತ್ತಿದ್ದಾರೆ, ದಿನನಿತ್ಯ ನೂರಾರು ಲಾರಿಗಳು ವಿರಾಜಪೇಟೆ ತಾಲ್ಲೂಕಿನಿಂದ ಕೇರಳ ರಾಜ್ಯಕ್ಕೆ ಹೋಗುತ್ತಿವೆ ಇದಕ್ಕೆ ತಡೆಯುವುದಕ್ಕೆ ಹೋದಂತಹ ಸಮಾಜದ ಕೆಲವು ಬಂಧುಗಳು ಅಹಿತಕರ ಘಟನೆಗೆ ಒಳಗಾಗಬೇಕಾದಂತಹ ಸಂದರ್ಭ ಬಂದಾಗ, ನಾನು ಶಾಂತಿಯುತವಾಗಿ ಈ ಬಗ್ಗೆ ಪ್ರತಿಭಟನೆ ಮಾಡಿದರೂ ಸಹ ಈ ಒಂದು ಸಾಗಾಣಿಕೆ ನಿಲ್ಲುತ್ತಿಲ್ಲ ಮಾನ್ಯ ಅಧ್ಯಕ್ಷರ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುವುದೇನೆಂದರೆ, ಈ ಒಂದು ದಂಧೆಯಿಂದಾಗಿ ಇತ್ತೀಚಿನ ದಿವಸಗಳಲ್ಲಿ ಪ್ರಾಮಾಣಿಕವಾಗಿರುವಂತಹ ಒಬ್ಬ ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಬಿ.ಜೆ.ಪಿ ಕಾರ್ಯಕರ್ತರಾಗಿದ್ದವರು ಗುಂಡೇಟಿಗೆ ಬಲಿಯಾದರು ಅದೂ ಕೂಡ ಗಂಭೀರವಾದಂತಹ ವಿಚಾರವಾಗಿದೆ

ಗ್ರಾಮ ಪಂಚಾಯಿತಿ ಅಧ್ಯಕ್ಷರು ಅವರ ಅವಧಿಯಲ್ಲಿ ಇದಕ್ಕೆ ನಿರ್ಬಂಧ ಹಾಕಬೇಕು ಹತೋಟಿಗೆ ತರಬೇಕು ಈ ರೀತಿ ಮರಳು ಸಾಗಾಣಿಕೆ ಆಗುವುದರಿಂದ ಅಂತರ್ಜಲ ಕುಸಿಯುತ್ತಿದೆ ಎಂದು ಹೇಳಿದ್ದರಿಂದ ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನೇ ಗುಂಡೇಟಿನಿಂದ ಹೊಡೆದು ಸಾಯಿಸಿದರು ಅವರ ಮಗ ಒಬ್ಬ ಹಾಕಿ ಪಟು ಅವರ ಕಾಲಿಗೆ ಗುಂಡೇಟು ಹೊಡೆದು ನಡೆದಾಡುವುದಕ್ಕೆ ಸಾಧ್ಯವಾಗುತ್ತಿಲ್ಲ ಇವತ್ತು ಆ ಕುಟುಂಬ ನಿರ್ಗತಿಕ ಕುಟುಂಬವಾಗಿದೆ ಆ ಕುಟುಂಬದವರು ಬೆಳಿಗ್ಗೆ ನನಗೆ ಫೋನ್ ಮಾಡಿ ಹೇಳುತ್ತಿದ್ದಾರೆ, ನನ್ನ ಮಗನಿಗೆ ವಿದ್ಯಾಭ್ಯಾಸಕ್ಕೆ ಐದು ಸಾವಿರ ರೂಪಾಯಿಯಾದರೂ ಕಳುಹಿಸಿಕೊಡಿ, ಅಂತಹ ಕೆಟ್ಟ ಪರಿಸ್ಥಿತಿಯಲ್ಲಿ ನಾನು ಇದ್ದೇನೆಂದು ಹೇಳುತ್ತಿದ್ದಾರೆ ಈ ಸಂದರ್ಭದಲ್ಲಿ ಸರ್ಕಾರದ ಗಮನ ಸೆಳೆಯುತ್ತಾ, ಯಾವುದೇ ಕಾರಣಕ್ಕೂ ನನ್ನ ತಾಲ್ಲೂಕಿನಲ್ಲಿ ಮರಳು ಸಾಕಾಣಿಕೆ ಏನು ನಡೆಯುತ್ತಿದೆ ಅದನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಒತ್ತಾಯ ಮಾಡುತ್ತೇನೆ ಎರಡನೆಯದಾಗಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಹತ್ಯೆ ಆಗಿರತಕ್ಕಂತಹ ಕುಟುಂಬಕ್ಕೆ ಐದು ಲಕ್ಷ ರೂಪಾಯಿ ಹಣ ಆದರೂ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಕೊಡಬೇಕು ಆ ವ್ಯಕ್ತಿಯ ಮಗ ಏನು ಹಾಕಿ ಪಟು ಆಗಿದ್ದವನು ಇದ್ದಾನೆ, ಇವತ್ತು ಅವನು ಓಡಾಡುವುದಕ್ಕೆ ಆಗುತ್ತಿಲ್ಲ ಆತನಿಗೆ ಕೂಡ ವಿದ್ಯಾಭ್ಯಾಸ ಮುಂದುವರೆಸಲಿಕ್ಕೆ ಅವಕಾಶ ಮಾಡಿಕೊಟ್ಟು ಯಾವುದಾದರೂ ಒಂದು ಉದ್ಯೋಗ ಕೊಡಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಮಾನ್ಯ ಅಧ್ಯಕ್ಷರೆ, ಇಲ್ಲಿ ವಿರಾಜಪೇಟೆ ತಾಲ್ಲೂಕಿನಲ್ಲಿ ಬಹಳಷ್ಟು ಜನರು ಇಂತಹ ಮರಳು ಸಾಗಾಣಿಕೆಯಲ್ಲಿ ನಿರತರಾಗಿದ್ದಾರೆ ಆದರಿಂದ ಸ್ಥಳೀಯರಿಗೆ ಮರಳು ಸಿಗುತ್ತಿಲ್ಲ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಸಮಸ್ಯೆ ಇದಕ್ಕಿಂತ ವ್ಯಾಪಕವಾಗಿದೆ ಮತ್ತು ಗಂಭೀರವಾಗಿದೆ ಮರಳು ಸಾಗಾಣಿಕೆಯಿಂದ ಸ್ಥಳೀಯರಿಗೆ ಮರಳು ಸಿಗುವುದಿಲ್ಲ ಎಂಬುದು ಒಂದು ಭಾಗವಾದರೆ, ಮರಳು ಸಾಗಾಣಿಕೆಯಿಂದ ಅಂತರ್ಜಲ ಕಡಿಮೆ ಆಗುವುದು ಎರಡನೆಯದು ನದಿಗಳ ಪಾತ್ರ ಏನಿದೆ ಅದರಿಂದ ಭೂಮಿ ಕುಸಿದು ಬೀಳುತ್ತಿರುತ್ತವೆ ಅವುಗಳಿಂದ ಸ್ಥಳೀಯರಿಗೆ ತೊಂದರೆಯಾಗುವುದು ಮತ್ತು ಅಂತರ್ಜಲಕ್ಕೆ ತೊಂದರೆಯಾಗುವುದು ಇರುವುದರಿಂದ ಮರಳು ತೆಗೆಯಬೇಕಾದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಪರವಾನಗಿ ತೆಗೆದುಕೊಳ್ಳಬೇಕಾಗುತ್ತದೆ ಆಯ್ಕೆ ಮಾಡಿರತಕ್ಕಂತಹ ವ್ಯಕ್ತಿಗಳು ಮಾತ್ರ ಪರವಾನಗಿ ಪಡೆದುಕೊಂಡು ಮರಳನ್ನು ತೆಗೆದುಕೊಂಡು ಹೋಗಬಹುದು ಎಂದು ಇದೆ ಅವ್ಯಹ್ವು ಹರಾಜಿನಲ್ಲಿ ತೆಗೆದುಕೊಳ್ಳಬೇಕಾದ ನಿಯಮ ಇದೆ ಈ ನಿಯಮಾವಳಿಗಳನ್ನು ಪಾಲಿಸಿದ್ದಾರೆಯೇ ಇಲ್ಲವೋ? ಅಕಸ್ಮಾತ್ ಮರುಳು ಸಾಗಾಣಿಕೆ ಮಾಡತಕ್ಕಂತಹವರು ತಾವು ಈಗಾಗಲೇ ಪ್ರಸ್ತಪ ಮಾಡಿದ ಹಾಗೆ ದೊಡ್ಡವರು ಅಧಿಕಾರದಲ್ಲಿರುವವರು ಮಾಡುವುದಾಗಿದ್ದರೆ ಅವರ ಮೇಲೆ ಮತ್ತು ಅಕ್ರಮಣ ಮಾಡಿ ಮರಳು ಸಾಗಾಣಿಕೆ ಮಾಡುವವರ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಬೇರೆ ಬೇರೆ ಇಲಾಖೆಗಳು ಇರುತ್ತವೆ ಈ ದಿವಸವೇ ಅವುಗಳಿಗೆ ಕಳುಹಿಸಿ ಖಂಡಿತವಾಗಿ ತಮಗೆ ಸೂಕ್ತವಾದ ಉತ್ತರವನ್ನು ತರಿಸಿಕೊಡುತ್ತೇವೆ

೫೫) ವಿಷಯ ಸಕಲೇಶಪುರ ತಾಲ್ಲೂಕಿನಲ್ಲಿ ಭಾರಿ ಮಳೆಯಿಂದಾಗಿ ಜನಜೀವನ ಹಾಗು ದೈನಂದಿನ ಬದುಕಿಗೆ ಅಡ್ಡಿ ಉಂಟಾಗಿರುವುದರ ಬಗ್ಗೆ

ಶ್ರೀ ಹೆಚ್ ಎಂ ವಿಶ್ವನಾಥ್ (ಸಕಲೇಶಪುರ) ಮಾನ್ಯ ಸಭಾಧ್ಯಕ್ಷರೆ, ನಮ್ಮ ಜಲಾಶಯಗಳಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ನೀರು ಬರುತ್ತಿದೆ ಆದರೆ ನಮ್ಮ ಭಾಗಕ್ಕೆ ಮಾತ್ರ ಅದು ದೊಡ್ಡ ಸಮಸ್ಯೆ ಆಗಿ ಈಗ ಕಳೆದ ಒಂದು ವಾರದಿಂದ ಸತತವಾಗಿ ಮಳೆ ಬೀಳುತ್ತಿದೆ ಒಂದೇ ವಾರದಲ್ಲಿ ಸುಮಾರು 30 ರಿಂದ 40 ಅಂಗುಲ ಮಳೆ ಬಂದಿದೆ ನೀರಿನ ಪ್ರಮಾಣದಿಂದ ಹಳ್ಳಗಳು ಮತ್ತು ಸಣ್ಣಪುಟ್ಟ ಕೆರೆಗಳು ತುಂಬಿಕೊಂಡು ಹೋಗಿವೆ ಜೊತೆಗೆ ರಸ್ತೆಗಳೂ ಕೂಡ ಹಾಳಾಗಿವೆ ಅದರ ಜೊತೆಗೆ ದೊಡ್ಡ ಪ್ರಮಾಣದ ಬಿರುಗಾಳಿ ಕೂಡ ಇದೆ ಈ ಬಿರುಗಾಳಿಯಿಂದ ನಮ್ಮ ಕಾಫಿ ತೋಟಗಳಲ್ಲಿ 10 ರಿಂದ 15 ಸಾವಿರ ಮರಗಳು ಈಗಾಗಲೇ ಬಿದ್ದು ಹೋಗಿವೆ ಅದರ ಜೊತೆಗೆ ಕರಿ ಮೆಣಸಿನ ಬಳ್ಳಿಗಳೂ ಕೂಡ ಇದ್ದುದರಿಂದ ಅಲ್ಲಿಯ ಕಾಫಿ ಬೆಳೆಗಾರರಿಗೆ ಬಹಳ ದೊಡ್ಡ ಪ್ರಮಾಣದ ನಷ್ಟವಾಗಿದೆ ಜೊತೆಗೆ ಸುಮಾರು ಒಂದುವರೆ ಸಾವಿರ ಎಕರೆಯ ಅಷ್ಟು ಜಾಗದಲ್ಲಿ ಶುಂರಿಯನ್ನು ಕೂಡ ನಮ್ಮ ಕ್ಷೇತ್ರದಲ್ಲಿ ಬೆಳೆದಿದ್ದಾರೆ ಅದರಲ್ಲಿ 150 ಎಕರೆಯಷ್ಟು ಜಾಗದಲ್ಲಿ ಶುಂರಿ ಹಾಳಾಗಿದೆ ಎಂದು ವರದಿ ಬಂದಿದೆ ಜೊತೆಗೆ 2000 ಎಕರೆ ಜಾಗದಲ್ಲಿ ಆಲೂಗಡ್ಡೆಯನ್ನು ನಮ್ಮ ಕ್ಷೇತ್ರದಲ್ಲಿ ಬೆಳೆದಿದ್ದಾರೆ ಮಳೆಗಾಲದ ಪ್ರಾರಂಭದಲ್ಲಿ ಬೀಜ ಹಾಕಿರುವುದರಿಂದ ಒಂದರಿಂದ ಒಂದೂವರೆ ಸಾವಿರ ಎಕರೆಯಷ್ಟು ಜಾಗದಲ್ಲಿ ಹಾಕಿದ ಬೀಜ ಕೊಳೆತು ಹೋಗಿದೆ ಒಂದು ವಾರದಿಂದ ವಿದ್ಯುಚ್ಛಕ್ತಿ ಸಂಪೂರ್ಣವಾಗಿ ನಿಂತು ಹೋಗಿದೆ ಸುಮಾರು 150ಕ್ಕೂ ಹೆಚ್ಚು ವಿದ್ಯುಚ್ಛಕ್ತಿ ಕಂಬಗಳು ಮುರಿದು ಹೋಗಿವೆ ಇದರಿಂದ ಎಂಟು ದಿವಸಗಳಿಂದ ಕುಡಿಯುವ ನೀರಿನ ಸಮಸ್ಯೆ ಮತ್ತು ಎಲ್ಲಾ ಊರುಗಳಲ್ಲಿ ಸಂಪರ್ಕಕ್ಕೆ ಸಮಸ್ಯೆ ಕೂಡ ಆಗಿದೆ ಅದಲ್ಲದೆ ನನ್ನ ಕ್ಷೇತ್ರದಲ್ಲಿ ಇತ್ತೀಚೆಗೆ 18 ರಿಂದ 20 ಆನೆಗಳು ಬಂದು ಈಗಾಗಲೇ ಸುಮಾರು ಮೂರು ಹೋಬಳಿಯ 40 ಗ್ರಾಮಗಳಲ್ಲಿ ಅವುಗಳು ಬಂದು ಬೀಡು ಬಿಟ್ಟಿವೆ ಅದರಿಂದ ಅಲ್ಲಿಯ ರೈತರಿಗೆ ಬಹಳ ದೊಡ್ಡ ಸಮಸ್ಯೆಯಾಗಿದೆ ಜೊತೆಗೆ ಇತ್ತೀಚೆಗೆ ಅರಣ್ಯ ಇಲಾಖೆಗೆ ಒಂದು ಸುತ್ತೋಲೆ ಸರ್ಕಾರದಿಂದ ಬಂದಿದೆ ಅದರ ಪ್ರಕಾರ ಅರಣ್ಯದ ಟಿಂಬರ್ ಮತ್ತು ಸೌದೆ ಮೇಲೆ ಸೆಸ್ ಅನ್ನು ಕ್ಯುಬಿಕ್ ಮೀಟರ್‌ಗೆ 25 ರೂಪಾಯಿ ಟಿಂಬರ್‌ಗೆ ಮತ್ತು ಸೌದೆಗೆ 20 ರೂಪಾಯಿ ಹಾಕಿರುವುದರಿಂದ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಇದನ್ನು ಕೊಡಬೇಕೆಂದು ಆದೇಶ ಬಂದಿದೆ ಈಗಾಗಲೇ ಇಷ್ಟು ದೊಡ್ಡ ಪ್ರಮಾಣದಲ್ಲಿ ಟಿಂಬರ್ ಬಿದ್ದಿರುವುದರಿಂದ ಇದನ್ನು ಸಾಗಾಣಿಕೆ ಮಾಡಬೇಕಾದರೆ ಈ ಪ್ರಮಾಣದ ಹಣ ತೆಗೆದುಕೊಂಡರೆ ನಮ್ಮ ಭಾಗದ ಕಾಫಿ ಬೆಳೆಗಾರರು ತುಂಬ ನಷ್ಟದಲ್ಲಿರುವುದರಿಂದ ಅವರಿಗೆ ಸಮಸ್ಯೆಯಾಗುತ್ತದೆ ಅದರ ಬಗ್ಗೆ ಕೂಡ ಸರ್ಕಾರ ಗಮನ ಹರಿಸಬೇಕು, ಈ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ತುರ್ತಾಗಿ ಹಣ ಮತ್ತು ಅಧಿಕಾರಿಗಳನ್ನು ಕಳುಹಿಸಿಕೊಡಬೇಕು ಕೂಡಲೇ ಕೆಇಬಿ ಇಲಾಖೆಗೆ ಒಂದೆರಡು ವ್ಯಾನ್ ಮತ್ತು ಬೀಪುಗಳನ್ನು ಅಲ್ಲಿ ಬಿದ್ದಿರುವ ವಿದ್ಯುತ್‌ಕಂಬಗಳ ರಿಪೇರಿಗಾಗಿ ಕಳುಹಿಸಿಕೊಡಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ

ಶ್ರೀ ಎಂ.ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಗಂಭೀರವಾದ ಮತ್ತು ಜನಜೀವನಕ್ಕೆ ಮತ್ತು ದೈನಂದಿನ ಬದುಕಿಗೆ ಅಡ್ಡಿ ಆಗುವ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಸತತವಾದ ಗಾಳಿ ಮಳೆಯಿಂದ ಮಲೆನಾಡಿನಲ್ಲಿ ಆಗುವ ಅನಾಹುತಕ್ಕೆ ಸಂಬಂಧಪಿಸಿದಂತೆ ಮತ್ತು ಆನೆಗಳು ಬಂದು ಮಾಡಿರುವಂತಹ

ಧ್ವಂಸದ ಕಾರ್ಯಗಳಿಗೆ ಸಂಬಂಧಪಟ್ಟಂತೆ, ಕುಡಿಯುವ ನೀರಿನ ವಿಚಾರಕ್ಕೆ ಸಂಬಂಧಪಟ್ಟಂತೆ ಅಲ್ಲಿ ವಿದ್ಯುಚ್ಛಕ್ತಿ ಇಲಾಖೆಯವರು ಮಾಡಲೇಬೇಕಾಗಿರುವ ಕರ್ತವ್ಯ ಮತ್ತು ಅದಕ್ಕೆ ಕೊಡಬೇಕಾದ ಪರಿಹಾರದ ಅಂದಾಜಿನ ಲೆಕ್ಕ ನಿಮ್ಮ ಸಮಸ್ಯೆಗಳ ಮಾಹಿತಿ ಮತ್ತು ಎಲ್ಲಾ ವಿಚಾರಗಳನ್ನು ನಾನು ಈ ದಿವಸವೇ ಜಿಲ್ಲಾಧಿಕಾರಿಗಳಿಗೆ ಫ್ಯಾಕ್ಸ್ ಮೂಲಕ ಕಳುಹಿಸಿ ತತಕ್ಷಣ ಮೂರು-ನಾಲ್ಕು ದಿವಸಗಳಲ್ಲಿ ಸಂಪೂರ್ಣವಾಗಿ ಆದ ಹಾನಿಯ ಲೆಕ್ಕಾಚಾರವನ್ನು ತಾವು ಕಳುಹಿಸಿಕೊಡುವುದು ಮಾಡಬೇಕು ಮತ್ತು ತತಕ್ಷಣದಲ್ಲಿ ಕ್ರಮ ತೆಗೆದುಕೊಂಡು ದೈನಂದಿನ ಜೀವನದ ಅಸ್ತವ್ಯಸ್ತತೆಯನ್ನು ಸರಿಪಡಿಸುವ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸುವುದರ ಜೊತೆಗೆ ಎಷ್ಟು ಪರಿಹಾರ ಕೊಡಬೇಕೆಂದು ಕೂಡ ನಿಮ್ಮ ಜೊತೆ ಚರ್ಚೆ ಮಾಡಿ ಆ ವರದಿಯ ಹಿನ್ನೆಲೆಯಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ

ಋ) ಚಿಕ್ಕಮಗಳೂರು ಕ್ಷೇತ್ರದಲ್ಲಿ ಅರಣ್ಯ ಒತ್ತುವರಿ ಭೂ ಹಿಡುವಳಿ ದಾರರನ್ನು ಮತ್ತು ಕಂದಾಯ ಭೂಮಿಯಲ್ಲಿ ಸಾಗುವಳಿ ಮಾಡತಕ್ಕಂಥ ರೈತರನ್ನು ಒಕ್ಕಲೆಬ್ಬಿಸುವ ಕೆಲಸವನ್ನು ಅರಣ್ಯ ಇಲಾಖೆ ಮಾಡುತ್ತಿರುವುದರ ಬಗ್ಗೆ

ಶ್ರೀ ಸಿ ಟಿ ರವಿ (ಚಿಕ್ಕಮಗಳೂರು) ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಅರಣ್ಯ ಒತ್ತುವರಿ ನೆಪದಲ್ಲಿ ಭೂ ಹಿಡುವಳಿದಾರರನ್ನು ಮತ್ತು ಕಂದಾಯ ಭೂಮಿಯಲ್ಲಿ ಸಾಗುವಳಿ ಮಾಡತಕ್ಕಂತಹ ರೈತರನ್ನು ಒಕ್ಕಲು ಎಬ್ಬಿಸತಕ್ಕಂತಹ ಕೆಲಸವನ್ನು ಅರಣ್ಯ ಇಲಾಖೆ ಮಾಡುತ್ತಿದೆ ಈಗಾಗಲೇ 1939ನೇ ಇಸವಿಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಈ ಹಿಂದಿನ ಸರ್ಕಾರಗಳು ಸಾಗುವಳಿ ಚೀಟಿ ಕೊಟ್ಟು ಅದೇ ಭೂಮಿಯನ್ನು ಸಾಗು ಮಾಡುತ್ತಿದ್ದು, ಅದರಲ್ಲಿ ಅರಣ್ಯ ಇಲಾಖೆ ಮರ ಕಡಿಯುವುದಕ್ಕೆ ಪರ್ಮಿಷನ್ ಕೊಟ್ಟು ಎರಡು-ಮೂರು ಬಾರಿ ಮರ ಕಡಿತ ಮಾಡಿರುವ ಪ್ರದೇಶಗಳನ್ನು ಈಗ ಅರಣ್ಯ ಇಲಾಖೆಯವರು ನಮಗೆ ಸೇರುತ್ತವೆ ಎಂದು ಅವರಿಗೆ ನೋಟಿಸ್ ಕೊಟ್ಟು ಕಿರುಕುಳ ಕೊಡುವುದರ ಜೊತೆಗೆ ಅವರ ಮೇಲೆ ಮೊಕದ್ದಮೆ ಹೂಡಿ ಮಾನಸಿಕ ಹಿಂಸೆ ಕೊಡುತ್ತಿದ್ದಾರೆ ಜೊತೆ ಜೊತೆಯಾಗಿ ಒಕ್ಕಲೆಬ್ಬಿಸಿ ನಾವು ಇಲ್ಲಿ ಬದುಕಲಿಕ್ಕೆ ಸಾಧ್ಯವಿಲ್ಲ ಎನ್ನುವ ಸ್ಥಿತಿಯನ್ನು ನಿರ್ಮಾಣ ಮಾಡಿದೆ ಹಾಗಾಗಿ ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುವುದು ಏನೆಂದರೆ, ಚಿಕ್ಕಮಗಳೂರು ತಾಲ್ಲೂಕಿನ ಸಾರಗೋಡು ಅರಣ್ಯ ವಲಯ ಮತ್ತು ಮಸ್ಕಲಿ ಅರಣ್ಯ ವಲಯದ ವ್ಯಾಪ್ತಿಯ ಜಂಟಿ ಸರ್ವೇ ಆಗಿದೆಯೇ, ಆಗಿದ್ದರೆ ಕಂದಾಯ ಭೂಮಿ ಎಷ್ಟು? ಎಷ್ಟು ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದೆ, ವರ್ಗಾವಣೆ ಮಾಡತಕ್ಕಂತಹ ಸಮಯದಲ್ಲಿ ಏನಾದರೂ ವಸ್ತು ಸ್ಥಿತಿಯ ಪರಿಶೀಲನೆಯನ್ನು ಸರ್ಕಾರ ಮಾಡಿದೆಯೇ ಎನ್ನತಕ್ಕಂತಹ ವಿವರಣೆಯನ್ನು ತಿಳಿಯಬಯಸುತ್ತೇನೆ ಮತ್ತು ಯಾವುದೇ ಕಾರಣಕ್ಕೆ ಕೂಡ ಅರಣ್ಯ ಒತ್ತುವರಿಯ ಹೆಸರಿನಲ್ಲಿ ಸಾಗುವಳಿದಾರರನ್ನು ಮತ್ತು ಕಂದಾಯ ಭೂಮಿಯಲ್ಲಿಯ ಭೂ ಹಿಡುವಳಿದಾರರನ್ನು ಖುಲ್ಲಾ ಮಾಡುವುದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಾ, ಈಗಾಗಲೇ ನೋಟಿಸ್ ಕೊಟ್ಟು 1939ನೇ ಇಸವಿಯಿಂದ ಸಾಗುವಳಿ ಮಾಡುತ್ತಿರತಕ್ಕಂತಹ ದಾಖಲೆಗಳು ಇದರಲ್ಲಿ ಇವೆ ಸಾರಗೋಡು ಅರಣ್ಯ ವಲಯ ಮತ್ತು ಮಸ್ಕಲಿ ಅರಣ್ಯ ವಲಯದ ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ಸೇರಿದ ಸಾಕಷ್ಟು ಜನರ ಕಂದಾಯ ಪಾವತಿ ಕೂಡ ಈಗಾಗಲೇ ಮಾಡಿಕೊಂಡಿದೆ ಅವರಿಗೆ ಅಲ್ಲಿ ವಾಸ ಮಾಡಲಿಕ್ಕೆ ಮೂಲ ಭೂತ ಸೌಕರ್ಯವನ್ನೂ ಕೂಡ ಕಲ್ಪಿಸಿಕೊಟ್ಟಿದೆ ಎಲ್ಲಾ ಪಹಣಿ ದಾಖಲೆಗಳಲ್ಲಿಯೂ ಕೂಡ ಅವರ ಹೆಸರು ನಮೂದಾಗಿದೆ ಇಷ್ಟೆಲ್ಲಾ

ಆಗಿದ್ದರೂ ಕೂಡ ಅವರಿಂದ ಅರಣ್ಯ ಒತ್ತುವರಿ ಮಾಡಿದ್ದೀರಿ ಎಂದು ಕೇಸ್ ಹಾಕತಕ್ಕಂಥದ್ದು ಯಾವ ನ್ಯಾಯ? ಈ ರೀತಿ ಅನ್ಯಾಯವನ್ನು ನ್ಯಾಯಾಲಯದ ತೀರ್ಪಿನ ನೆಪದಲ್ಲಿ ಅರಣ್ಯ ಇಲಾಖೆ ಮಾಡುತ್ತಿದೆ ತಮ್ಮಲ್ಲಿ ನನ್ನ ವಿನಂತಿ ಇಷ್ಟೆ ಆ ಭಾಗದ ಕಂದಾಯ ಇಲಾಖೆ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಬೇಕಾದರೆ ನಾಲ್ಕು ಗೋಡೆ ಒಳಗೆ ಟೇಬಲ್ ಮುಂದೆ ಕೂಳಿತ್ತುಕೊಂಡು ದಾಖಲೆಗಳನ್ನು ವರ್ಗಾವಣೆ ಮಾಡಿ ಕೈ ತೊಳೆದುಕೊಂಡು ಈ ಪರಿಸ್ಥಿತಿಗೆ ಜನರನ್ನು ತಂದು ಇಟ್ಟಿದ್ದಾರೆ ವಸ್ತುಸ್ಥಿತಿ ಏನು? ವರ್ಷಗಳಿಂದ ಅವರು ಅಲ್ಲಿದ್ದಾರೆ, ಅರಣ್ಯ ಭೂಮಿಯನ್ನು ಅವರು ಅಲ್ಲಿ ಅನುಭವಿಸಿಕೊಂಡು ಬರುತ್ತಿದ್ದಾರೆ, ಕಂದಾಯ ಭೂಮಿಯನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ

ಅಧ್ಯಕ್ಷರು ಬ್ರೀಫಾಗಿ ತಾವು ಗಮನ ಸೆಳೆಯಬೇಕು ಹೀಗೆ ಮಾಡಿದರೆ ಹೇಗೆ?

ಶ್ರೀ ಎಂ ಪಿ ಪ್ರಕಾಶ್ ಶೂನ್ಯ ವೇಳೆಯಲ್ಲಿ ತಮಗೆ ಅವಕಾಶ ಇರುವುದರಿಂದ ಸೀಮಿತವಾಗಿ ಪಸ್ತಾಪಿಸಿ ತಾವು ಬೇರೆ ನಿಯಮಾವಳಿ ಪ್ರಕಾರ ಸರ್ಕಾರಕ್ಕೆ ನೋಟಿಸ್ ಕೊಟ್ಟರೆ ಅದರ ಮೇಲೆ ಒಂದು ಚರ್ಚೆ ಆಗುವುದಕ್ಕೆ ಸಾಧ್ಯತೆ ಇದೆ ಈಗ ಇದಕ್ಕೆ ಎಷ್ಟು ಬೇಕು ಅಷ್ಟು ಉತ್ತರವನ್ನು ನಾವು ಕೊಡುತ್ತೇವೆ

ಶ್ರೀ ಸಿ ಟಿ ರವಿ ಈಗ ತುರ್ತಾಗಿ ಗಮನ ಸೆಳೆಯುವುದಕ್ಕೆ ಕಾರಣವೇನೆಂದರೆ ಚಿಕ್ಕಮಗಳೂರು ವಲಯದ ಅರಣ್ಯಾಧಿಕಾರಿಗಳು ಪತ್ರಿಕೆ ಮೂಲಕ ಹೇಳಿಕೆಯನ್ನು ಕೊಟ್ಟು ಈ ಕೂಡಲೇ ಸಾರಗೋಡು ಮತ್ತು ಮಸ್ಕುಲೆ ಅರಣ್ಯ ವಲಯದ ವ್ಯಾಪ್ತಿಯಲ್ಲಿ ಇರತಕ್ಕಂಥ ಜನರನ್ನು ಖಾಲ್ಲಾ ಮಾಡತಕ್ಕಂಥ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ ಹಾಗಾಗಿ ಮುಂದೆ ಈ ಬಗ್ಗೆ ಪೂರ್ತಿ ಚರ್ಚೆ ಆಗಿ ನಿರ್ಣಯ ತೆಗೆದುಕೊಳ್ಳುವರೆಗೂ ಕೂಡ ಖಾಲ್ಲಾ ಆದೇಶಕ್ಕೆ ತಡೆಯಾಜ್ಞೆ ನೀಡುವಂತೆ ಸರ್ಕಾರಕ್ಕೆ ತಾವು ಆದೇಶ ಮಾಡಬೇಕೆಂದು ನಾನು ವಿನಂತಿ ಮಾಡಿಕೊಂಡು ತಮ್ಮ ಗಮನವನ್ನು ಸೆಳೆಯುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತೆ ಸುಪ್ರೀಂ ಕೋರ್ಟ್‌ನವರು ಈ ವಿಚಾರದಲ್ಲಿ ಬಹಳ ದೀರ್ಘವಾಗಿರತಕ್ಕಂಥ ತೀರ್ಮಾನ ತೆಗೆದುಕೊಂಡು ತೀರ್ಪು ಕೊಟ್ಟಿರುವ ಹಿನ್ನೆಲೆಯಲ್ಲಿ ಅನೇಕ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡುತ್ತಿದ್ದಾರೆ ಇತ್ತೀಚಿನ ದಿನಮಾನಗಳಲ್ಲಿ ನಮ್ಮ ಬೇಡಿಕೆಗಳು ಮತ್ತು ಜನಸಂಖ್ಯೆ ಸ್ಫೋಟದ ಕಾರಣ ಅರಣ್ಯ ಒತ್ತುವರಿ ಎನ್ನುವಂತಾದ್ದು ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುವಂತಾ ದ್ದನ್ನು ನಾವು ಕಂಡಿದ್ದೇವೆ ಅದರಲ್ಲಿ ಚಿಕ್ಕ ಅಥವಾ ಸಣ್ಣ ರೈತರು ಎನ್ನುವುದಕ್ಕಿಂತ ಹೆಚ್ಚಾಗಿ ಎಲ್ಲರೂ ಕೂಡ ಅರಣ್ಯ ಒತ್ತುವರಿ ಮಾಡತಕ್ಕಂಥ ಕ್ರಮಗಳು ಇವೆ ಆದರೆ ಈ ಕ್ರಮ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಮಾನವೀಯ ವಾದಂತಹ ದೃಷ್ಟಿಕೋನವನ್ನು ಸಹ ಈ ಸರ್ಕಾರದವರು ಇಟ್ಟು ಕೊಂಡಿರುತ್ತಾರೆ ನೀವು ಹೇಳಿದಂತೆ ಕಂದಾಯ ಇಲಾಖೆಯಲ್ಲಿ ಪೋಡಿ ಬೇಟಿಯನ್ನು ಕೊಟ್ಟಂತಹ ಆರ್.ಓ.ಆರ್ ಆಗಿರತಕ್ಕಂಥ ಜನ ಯಾರಿದ್ದಾರೆ ಪಟ್ಟಾ ಕೊಟ್ಟಿರತಕ್ಕಂಥ ಪ್ರಕರಣಗಳಲ್ಲಿ ಅನ್ಯ ಕಾರಣಕ್ಕೆ ಅಧಿಕಾರಿಗಳು ಅವರಿಗೆ ತೊಂದರೆ ಕೊಡತಕ್ಕಂಥದ್ದು ಏನಾದರು ಇದ್ದರೆ, ಅಂತಹ ನಿರ್ದಿಷ್ಟ ಪ್ರಕರಣಗಳು ಏನಾದರು ಇದ್ದರೆ ನಂತರ ತಮಗೆ ನಾನು ಸಿಗುತ್ತೇನೆ, ತಾವು ಅದರ ವಿಚಾರಗಳನ್ನು ಹೇಳಿದರು ನಾನು ಕೂಡ ನಾನು ಜಿಲ್ಲಾಧಿಕಾರಿಗಳಿಗೆ ನೇರವಾಗಿ ತಿಳಿಸುತ್ತೇನೆ ಈಗ ತಾವೇನು ಸದನದ ಗಮನವನ್ನು ಸೆಳೆದಿದ್ದೀರಿ, ಜಿಲ್ಲಾಧಿಕಾರಿಗಳಿಗೆ ಇವತ್ತೇ ನಾನು ಇದನ್ನು ಫ್ಯಾಕ್ಸ್ ಮೂಲಕ ಕಳುಹಿಸಿಕೊಡುತ್ತೇನೆ. ಸಾಧ್ಯವಾದಷ್ಟು ಮಧ್ಯಾಹ್ನದ ಭೋಜನ ವಿರಾಮದ ವೇಳೆಯಲ್ಲಿ ಅವರ ಜೊತೆ ದೂರವಾಣಿ ಮೂಲಕ ವಸ್ತುಸ್ಥಿತಿ ಏನೆಂದು ಹೇಳಿ ಜನ ಸಾಮಾನ್ಯರಿಗೆ ತೊಂದರೆ

ಆಗದಂತೆ ನ್ಯಾಯಬದ್ಧವಾಗಿ, ಯಾರು ಸಾಗುವಳಿ ಮಾಡುತ್ತಿದ್ದಾರೆ, ಅವರಿಗೆ ತೊಂದರೆ ಆಗದಂತೆ ತಿಳಿಸುತ್ತೇನೆ ಆದರೆ ಅರಣ್ಯ ಭೂಮಿ ಒ: ತ್ತುವರಿ ಮಾಡಿರತಕ್ಕಂಥ ಜನರಿಗೆ ನ್ಯಾಯಬದ್ಧವಾದ ರೀತಿಯಲ್ಲಿ ರಕ್ಷಣೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದಿದ್ದರೆ ಕೈಗೊಳ್ಳಲೇ ಬೇಕಾಗುತ್ತದೆ ಅದು ನಮ್ಮ ನಿರ್ಣಯ ಅಲ್ಲ, ಅದು ಸುಪ್ರೀಂ ಕೋರ್ಟ್ ತೀರ್ಮಾನ ಮತ್ತು ಸಿ ಅಂಡ್ ಡಿ ಕ್ಲಾಸಿಫಿಕೇಷನ್ ಭೂಮಿಯನ್ನು ವರ್ಗಾವಣೆ ಮಾಡಿರುವುದೂ ಕೂಡ ಇರುವುದರಿಂದ ತಾವು ಏನು ತಿಳಿಸಿದ್ದೀರಿ, ನಾಲ್ಕು ಗೋಡೆಗಳ ನಡುವೆ ತಾವು ವರ್ಗಾವಣೆ ಮಾಡಿದ್ದೀರಿ ಎಂದು ಹೇಳಿದ್ದು, ಅದರ ಪೂರ್ವಾಪರ ವಿಚಾರ ನಗೆ ಗೊತ್ತಿಲ್ಲದೆ ಇರುವುದರಿಂದ ಈ ವಿಚಾರವನ್ನು ತಿಳಿದುಕೊಂಡು ಬಂದು ತಮಗೆ ತಿಳಿಸುತ್ತೇನೆ ಈ ಉತ್ತರದಿಂದ ತಮಗೆ ತೃಪ್ತಿ ಆಗದೇ ಹೋದರೆ ತಾವು ಬೇರೆ ನಿಯಮಾವಳಿ ಪ್ರಕಾರ ಚರ್ಚೆಗೆ ಅವಕಾಶ ಕಲ್ಪಿಸಿಕೊಂಡರೆ ನಾನು ವಿವರವಾಗಿ ಉತ್ತರ ಹೇಳುತ್ತೇನೆ

ಸಭಾಧ್ಯಕ್ಷರು ಈಗ ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ ಈಗ ಮಾನ್ಯ ವಾಟಾಳ್ ನಾಗರಾಜ್ ಅವರು ಮಾತನಾಡಿ

2) ನಿಯಮ 69ರ ಮೇರೆಗೆ

ವಿಷಯ ಬರಗಾಲ ಪೀಡಿತ ಪ್ರದೇಶಗಳಲ್ಲಿ "ಕೂಲಿಗಾಗಿ ಕಾಳು" ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಬಡ ಕೂಲಿ ಕಾರ್ಮಿಕರಿಗೆ ಕಂಚಲೆಂದು ಮೀಸಲಾದ ಅಕ್ಕಿಯು ಅವರಿಗೆ ತಲುಪದೆ, ದೊಡ್ಡ ಹಗರಣವಾಗಿರುವ ಬಗ್ಗೆ

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ನನ್ನ ಪಕ್ಕಕ್ಕೆ ಮಾಜಿ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ಬಂದಿದ್ದಾರೆ ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಶ್ರೀ ಯಡಿಯೂರಪ್ಪನವರು ಮತ್ತು ನಾವೆಲ್ಲಾ ಸೇರಿ ಸಹಿ ಹಾಕಿ ಹಗರಣದ ಬಗ್ಗೆ ಈ ಸದನದಲ್ಲಿ ಚರ್ಚೆಯನ್ನು ಮಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ ನಿಜಕ್ಕೂ ಇದು ಒಳ್ಳೆಯ ಸಂಪ್ರದಾಯ, ತಾವು ಮಾಡಿದ್ದು ಸಂತೋಷ. ಈ ವಿಚಾರ ಪ್ರಾಮುಖ್ಯವಾದಂತಾದ್ದು ಇದರ ಹಿಂದೆ ಬಹಳ ದೊಡ್ಡ ಜಾಲವೇ ಇದೆ ಈ ಬಗ್ಗೆ ಸರ್ಕಾರ ಸಿ ಓ ಡಿ ತನಿಖೆಯನ್ನು ಆರಂಭಿಸಿದ್ದಾರೆ ಕೆಲವು ಸಣ್ಣ ಚರ್ಚೆಯ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಟ್ಟಿದ್ದಾರೆ ಇದು ಮೂರು ವಿಧಾನ ಒಂದು ಬರಗಾಲದ ದವಡೆಯಿಂದ, ಬರಗಾಲದ ಬೇಗೆಯಿಂದ ನರಳತಕ್ಕಂಥ ಜನರಿಗೆ ಸಹಾಯವಾಗಲಿ ಎಂದು ಹೇಳಿ ಕೂಲಿಗಾಗಿ ಕಾಳು ಯೋಜನೆಯಲ್ಲಿ ಕೇಂದ್ರ ಸರ್ಕಾರ ಕಾಳನ್ನು ರವಾನೆ ಮಾಡಿದ್ದಾರೆ ಇದನ್ನು ಹಂಚಿಕೆ ಮಾಡತಕ್ಕಂಥ ವಿಧಾನ ಈ ಹಂಚಿಕೆ ಮಾಡತಕ್ಕಂಥ ವಿಧಾನದಲ್ಲಿ ತೋರಿಕೆಗೆ ಒಂದು ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಮತ್ತು ಅಧಿಕಾರಿಗಳ ಸಮೂಹ ತಾಲ್ಲೂಕಿನ ತಹಸೀಲ್ದಾರ್ ಅವರು, ಆಹಾರ ಇಲಾಖೆಯವರೂ ಸ್ವಲ್ಪ ಜಿಲ್ಲಾಪಂಚಾಯತ್, ಹೆಚ್ಚಿನ ಜವಾಬ್ದಾರಿ ಜಿಲ್ಲಾಧಿಕಾರಿ ಅವರಿಗೆ ಮತ್ತು ಇದೆಲ್ಲಾವನ್ನು ಇಡೀ ರಾಜ್ಯದ ಸಮಗ್ರ ವ್ಯವಸ್ಥೆಯನ್ನು ನೋಡಿಕೊಳ್ಳತಕ್ಕಂಥಾದ್ದು ಮುಖ್ಯ ಕಾರ್ಯದರ್ಶಿ ಮತ್ತು ಸರ್ಕಾರ ಹಾಗೂ ಅಭಿವೃದ್ಧಿ ಆಯುಕ್ತರು ಬಹಳ ಪ್ರಾಮುಖ್ಯವಾಗಿ ಇದ್ದಾರೆ ಸುಮಾರು 50 ಕೋಟಿರೂಗೂ ಮೇಲ್ಪಟ್ಟು ಕೂಲಿಗಾಗಿ ಕಾಳು ಯಾರಿಗಾಗಿ ತಲುಪಬೇಕಾಗಿತ್ತು ಆ ಜನರಿಗೆ ತಲುಪದೆ ಅದು ವಿದೇಶಕ್ಕೆ ಹೋಗಿದೆ ಖಾಸಗಿ ಉಗ್ರಾಣಗಳಿಗೆ ತಲುಪಿದೆ ಇಷ್ಟೆಲ್ಲಾ ತಲುಪಬೇಕಾದರೆ ಈ ವ್ಯವಸ್ಥೆ ಎಷ್ಟು ಹದಗೆಟ್ಟಿತ್ತು ತಹಸೀಲ್ದಾರ್ ಅವರ ಜವಾಬ್ದಾರಿ ಏನು? ಮತ್ತು ಶಾಸಕರ ಅಧ್ಯಕ್ಷತೆಯಲ್ಲಿ ತೋರಿಕೆಗೆ ಒಂದು ಸಮಿತಿ ಅಲ್ಲಿರತಕ್ಕಂಥವರು ಅಧಿಕಾರಿಗಳೇ ಮತ್ತು

ಜಿಲ್ಲಾಡಳಿತದಲ್ಲಿ ಐ ಎ ಎಸ್ ಅಧಿಕಾರಿಗಳು ಜಿಲ್ಲಾಧಿಕಾರಿಗಳು ಈ ಜಿಲ್ಲಾಧಿಕಾರಿಗಳು ಸ್ವರ್ಗದಿಂದ ಇಳಿದಿದ್ದಾರೆ ಈ ಜಿಲ್ಲಾಧಿಕಾರಿಗಳು ಅಂದರೆ, ಐ ಎ ಎಸ್, ಐ ಪಿ ಎಸ್ ಮಾಡಿಕೊಂಡು ಸ್ವರ್ಗದಿಂದ ಹಾಗೆ ಕೆಳಗಡೆ ಮೆಟ್ಟಲಿನಿಂದ ಇಳಿದು ಬಂದಿದ್ದಾರೆ ಇನ್ನು ಬೇರೆ ವ್ಯಾಖ್ಯಾನ ಅವರಿಗೆ ಇಲ್ಲ ಚುನಾಯಿತ ಪ್ರತಿನಿಧಿಗಳು ಎಂದರೆ ಅವರು ಎಲ್ಲೋ ನರಕದಲ್ಲಿ ಇದ್ದಾರೆ ಇವರು ಒಂದು ರೀತಿ ಹೀನಾಯವಾದಂತಹ ಜನರು ಈ ಚುನಾಯಿತ ಪ್ರತಿನಿಧಿಗಳು ಶಾಸಕರಿರಬಹುದು, ಲೋಕಸಭೆ ಸದಸ್ಯರಿರಬಹುದು ಅವರದೇ ಬೇರೆ ದರ್ಜೆಯ ಜನ ಎನ್ನುವ ರೀತಿಯಲ್ಲಿ ಇದ್ದಾರೆ ನಾನು ತಮಗೆ ಕೇಳುತ್ತಿದ್ದೇನೆ, ತಾಲ್ಲೂಕಿನ ತಹಸೀಲ್ದಾರ್ ಬಗ್ಗೆ, ಜಿಲ್ಲಾಧಿಕಾರಿಗಳ ಬಗ್ಗೆ ನೀವು ಎಷ್ಟು ಸಭೆಯನ್ನು ನಡೆಸಿದ್ದೀರಿ ಎಷ್ಟು ಕಾರ್ಯಕ್ರಮ ಕೈಗೊಂಡಿದ್ದೀರಿ? ಈ ಹಂಚಿಕೆ ಬಗ್ಗೆ ತಮಗೆ ಪ್ರತಿದಿನ, ಪ್ರತಿವಾರ ಮಾಹಿತಿ ಬೇಕಲ್ಲಾ ಈ ತಾಲ್ಲೂಕಿನಲ್ಲಿ ಈ ಕ್ಷೇತ್ರದಲ್ಲಿ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಎಷ್ಟು ಜನ ಕೂಲಿಗಾರರಿಗೆ ಕಾಳು ಹಂಚಿಕೆಯಾಗಿದೆ? ಈ ಹಂಚಿಕೆ ಸಮರ್ಪಕವಾಗಿದೆ, ಈ ಹಂಚಿಕೆಯನ್ನು ನಾವು ಒಪ್ಪಿದ್ದೇವೆ ಎನ್ನುವ ವಿಚಾರ ಒಂದು ಕಡೆ ಬೇಕಲ್ಲಾ ಇಷ್ಟೆಲ್ಲಾ ವ್ಯವಸ್ಥೆಗಳು ಇದ್ದರೂ ಈ ವ್ಯವಸ್ಥೆಗಳನ್ನೆಲ್ಲಾ ದಾಟಿ 50 ಕೋಟಿರೂಗೂ ಮೇಲ್ಪಟ್ಟು ಕೂಲಿಗಾಗಿ ಕಾಳು ಏನಿದೆ ಅದು ಬಡವರಿಗಾಗಿ, ಬೆವರು ಸುರಿಸತಕ್ಕಂಥ ನತದೃಷ್ಟರಿಗಾಗಿ, ಈ ನಾಡಿನ ಜನತೆಗಾಗಿ, ರೈತರ ಮಕ್ಕಳಿಗಾಗಿ ಹಂಚಿಕೆ ಮಾಡುವುದಕ್ಕೆ ತಂದಂತಹ ಕಾಳು ಉಗ್ರಾಣಗಳಲ್ಲಿ ತುಂಬಿ, ವಿದೇಶಕ್ಕೂ ರವಾನೆ ಆಗುತ್ತಿದ್ದು, ಇದು ತಹಸೀಲ್ದಾರ್‌ರವರಿಂದ ಹಿಡಿದು ಮುಖ್ಯಮಂತ್ರಿಯವರೆಗೂ ಇರುವಂತಹ ಸರ್ಕಾರವಿದು ತಹಸೀಲ್ದಾರ್ ಏನು ಮಾಡುತ್ತಿದ್ದರು? ಮತ್ತು ಅಲ್ಲಿರತಕ್ಕಂಥ ಜಿಲ್ಲಾಡಳಿತ ಹೊಂದಿದೆ ಜಿಲ್ಲಾಧಿಕಾರಿಗಳು ಏನು ಮಾಡುತ್ತಿದ್ದರು? ನೀವು ಇದುವರೆಗೂ ಒಬ್ಬ ಜಿಲ್ಲಾಧಿಕಾರಿಯನ್ನು ತನಿಖೆಗೆ ಒಳಪಡಿಸಿಲ್ಲ ತಾವು ಜಿಲ್ಲಾಧಿಕಾರಿಯನ್ನು ತನಿಖೆಗೆ ಒಳಪಡಿಸಿ ಈ ರೀತಿಯಾಗಿದೆ, ಯಾವರೀತಿ ನೀವು ತೆಗೆದುಕೊಂಡಿದ್ದೀರಿ, ಯಾವರೀತಿ ಸಭೆ ಮಾಡಿದ್ದೀರಿ, ಹಂಚಿಕೆ ಏನಾಯಿತು? ಕೂಲಿ ಎಷ್ಟಾಯಿತು? ಎಷ್ಟು ಕೆರೆಗಳ ಹೂಳು ತೆಗೆದರು? ಎಷ್ಟು ಮೋರಿಗಳ ಕಸ ತೆಗೆದರು? ಎಷ್ಟು ರಸ್ತೆಗಳನ್ನು ಅಗೆದರು? ಎಷ್ಟು ಮಣ್ಣು ಹಾಕಿದರು? ಎಲ್ಲಾದರೂ ಒಂದು ಕಡೆ ಬೇಕಲ್ಲ ಒಂದು ಲೆಕ್ಕ ಬೇಕಲ್ಲ, ಪುಸ್ತಕ ಬೇಕಲ್ಲ ಇದುವರೆಗೆ ಕೂಲಿಗಾಗಿ ಕಾಳು ಮೋಸದಿಂದ 50 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಹೊರಗಡೆ ಹೋಗಿದೆ ಆದರೆ ನೀವು ಬರೆದಿರುವುದು ಕಳ್ಳ ಲೆಕ್ಕ, ಸುಳ್ಳು ಲೆಕ್ಕ, ಮೋಸದ ಲೆಕ್ಕ ಅಲ್ಲಿ ಕೆಲಸವೇ ಆಗಿಲ್ಲ ಬರಗಾಲಕ್ಕೆ ತಂದಂತಹ ಕೂಲಿಗಾಗಿ ಕಾಳು ಇದನ್ನು ನೀವು ಹಂಚಿಕೆ ಮಾಡಿಲ್ಲವೆಂದರೆ ಖಂಡಿತವಾಗಿಯೂ ಅಲ್ಲಿ ಕೆಲಸವೇ ಆಗಿಲ್ಲ ಇದು ಸ್ಪಷ್ಟ. ಅಂದಮೇಲೆ ನೀವು ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು? ಜಿಲ್ಲಾಧಿಕಾರಿಗಳ ಮೇಲೆ ತೆಗೆದುಕೊಂಡಿದ್ದೀರಾ? ಇಲ್ಲ, ಕ್ರಮ ತೆಗೆದುಕೊಳ್ಳುವುದಕ್ಕೆ ಆಗಿಲ್ಲವಲ್ಲಾ ಅಂತಹ ಸಮರ್ಥವಾದಂತಹ ಸರ್ಕಾರ ನನ್ನ ಕಣ್ಣಿಗೆ ಕಾಣಲಿಲ್ಲ ಯಾರಾದರೂ ಒಬ್ಬರು ಜಿಲ್ಲಾಧಿಕಾರಿಯನ್ನು ಮನೆಗೆ ಕಳುಹಿಸಿರುವುದಾಗಲಿ, ಜಿಲ್ಲಾಧಿಕಾರಿಗಳ ಬಗ್ಗೆ ತೀವ್ರವಾದಂತಹ ಕ್ರಮ ತೆಗೆದುಕೊಂಡಿರುವುದಾಗಲಿ ಒಂದನ್ನೂ ನಾವು ಕಾಣಲಿಲ್ಲ ಜಿಲ್ಲಾಧಿಕಾರಿಗಳು ಇತ್ತೀಚಿನ ದಿನಗಳಲ್ಲಿ ಮಂತ್ರಿಗಳ ಜೊತೆ ಕುಳಿತುಕೊಂಡು ಸಿಗರೇಟು ಸೇದಿ ಹೊಗೆ ಬಿಡುತ್ತಾರೆ ಆ ಮಟ್ಟಕ್ಕೆ ಜಿಲ್ಲಾಧಿಕಾರಿಗಳು ಆಗಿದ್ದಾರ ಅದು ಪರಿಸ್ಥಿತಿ, ಅಧಿಕಾರಶಾಹಿ ಈ ರೀತಿ ಎಲ್ಲಿಯವರೆಗೆ ಬೆಳೆದಿದೆ ಎಂದರೆ, ಇದು ನಮ್ಮ ಅನುಭವ

12 10 ಪಿಎಂ

ಇದನ್ನು ನಾನು ಕಣ್ಣಾರೆ ನೋಡಿದ್ದೇನೆ, ಅವರು ಕುಳಿತುಕೊಳ್ಳುವಂತಹ ದಿವಾನಗಿರಿ, ಆ ವ್ಯವಸ್ಥೆ, ಇದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಳ್ಳೆಯದಲ್ಲ

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜರವರೇ, ನೀವು ಅಧಿಕಾರಿಗಳ ಬಗ್ಗೆ ಹೇಳಿದಿರಲ್ಲಾ, ಅವರು ಏತಕ್ಕೋಸ್ಕರ ಆ ರೀತಿಯಾಗಿದ್ದಾರೆಂಬುದನ್ನು ಹೇಳುತ್ತಿರಾ?

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ, ಅವರು ಏಕೆ ಹಾಗೆ ಆಗಿದ್ದಾರೆಂದರೆ, ಅವರ ಮೇಲೆ ಹಿಡಿತವಿಲ್ಲ, ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಇವತ್ತು ಪ್ರಜೆಗಳಿಂದ ಆಯ್ಕೆಯಾದಂತಹ ಪ್ರತಿನಿಧಿಗಳನ್ನು ಮೀರಿ, ಇವರು ಮೇಲೆ ಹೋಗುತ್ತಿದ್ದಾರೆ, ಇದರಿಂದ ದೇಶದ ವ್ಯವಸ್ಥೆಯಲ್ಲಿ ಬದಲಾವಣೆಯಾಗುತ್ತಿದೆ, ದೇಶದ ವ್ಯವಸ್ಥೆಯು ಅಪಾಯಕ್ಕೆ ಹೋಗುತ್ತಿದೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕಾರಿಗಳು ಮೇಲೆ ಹೋಗುತ್ತಿದ್ದಾರೆ, ಅದರಲ್ಲೂ ಇತ್ತೀಚಿನ ದಿನಗಳಲ್ಲಿ ನಿವೃತ್ತರಾದಂತಹ ಅಧಿಕಾರಿಗಳು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬರುತ್ತಿದ್ದಾರೆ, ಮಾನ್ಯ ಉಪ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರೇ, ತಾವು ಗಮನಿಸಬೇಕು, ತಾವು ಅಧಿಕಾರಿಗಳ ಬಗ್ಗೆ ಉಗ್ರವಾಗಿ ಮಾತನಾಡುತ್ತಾ ಇರುತ್ತೀರಿ, ತಾವು ಇದನ್ನು ಗಮನಿಸಬೇಕು

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಆಗಾಗ ಮಾತನಾಡುವಂತಹ ಸಂದರ್ಭದಲ್ಲಿ ಮಾನ್ಯ ಚನ್ನಬಸಪ್ಪನವರ ಹೆಸರು, ಮಾನ್ಯ ಸಿದ್ಧ ವೀರಪ್ಪನವರ ಹೆಸರು, ಹಾಗು ಇನ್ನೂ ಕೆಲವು ಮಹನೀಯರ ಹೆಸರುಗಳನ್ನು ಪ್ರಸ್ತಾಪ ಮಾಡುತ್ತಿರುತ್ತಾರೆ ಮಾನ್ಯ ಚನ್ನಬಸಪ್ಪನವರೋ, ಸಿದ್ಧವೀರಪ್ಪನವರೋ, ಒಂದು ವೇಳೆ ಮಂತ್ರಿಗಳಾಗಿದ್ದರೆ, ಅವರ ಎದುರಿಗೆ ಇಂತಹ ಕೆಲಸವನ್ನು ಮಾಡುವುದಕ್ಕೆ ಆಗುತ್ತಾ ಇತ್ತಾ? ಈಗ ನಮ್ಮಲ್ಲಿ ಅಂಧವರು ಇದ್ದಾರಾ?

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ, ಮಾನ್ಯ ರಮೇಶ್ ಕುಮಾರ್‌ರವರು, ಹೇಳುವಂಥಾದ್ದು ಸತ್ಯ, ಬೆಳಕನ್ನು ಚೆಲ್ಲಿದ್ದಾರೆ ನಾನು ಅವರ ಜೊತೆಯಲ್ಲಿ ಕೆಲಸ ಮಾಡಿದ್ದೇನೆ, ಈ ಸದನದಲ್ಲಿ ಮಾನ್ಯ ಹೆಚ್ ಎಂ ಚನ್ನಬಸಪ್ಪನವರು ಕಬ್ಬಿಣದ ಮನುಷ್ಯ, ಮಾನ್ಯ ಸಿದ್ಧವೀರಪ್ಪನವರು ಕಬ್ಬಿಣದ ಮನುಷ್ಯ, ರಾಗಿದ್ದಂಥವರು, ಅವರ ಕಾಲದಲ್ಲಿ ಒಬ್ಬ ಅಧಿಕಾರಿ ಮಂತ್ರಿಯನ್ನು ನೋಡಬೇಕೆಂದರೆ, ಮಂತ್ರಿಗಳು ಅವರಿಗೆ ಕಾಲವನ್ನು ನಿಗದಿ ಮಾಡದೇ, ಅವರು ಒಳಗಡೆ ಬರುವ ಹಾಗೆ ಇರಲಿಲ್ಲ ಆ ವಿಚಾರದಲ್ಲಿ ಸಿದ್ಧರಾಮಯ್ಯನವರಿಗೆ, ಶಹಭಾಸ್‌ಗಿರಿಯನ್ನು ಕೊಡಬಹುದು ಅವರ ಬಗ್ಗೆ ಹೇಳಬಹುದು, ಅವರದ್ದು ಒರಟುತನ, ಅಧಿಕಾರಿಗಳು ಮೇಲೆ ಬೀಳುತ್ತಾರೆ ಎಂದು ಅದನ್ನು ನಾನು ಒಪ್ಪುತ್ತೇನೆ ಇವತ್ತು ನಾನು ಏಕೆ ಈ ಮಾತನ್ನು ಹೇಳುತ್ತಿದ್ದೆನೆಂದರೆ, ಇಂದಿನ ವ್ಯವಸ್ಥೆ ಹಾಗಿದೆ ಮಾನ್ಯ ಅಧ್ಯಕ್ಷರೇ, ನಾವು ಚುನಾಯಿತ ಪ್ರತಿನಿಧಿಗಳಾಗಿ ಬಂದಿದ್ದೇವೆ, ನಾನು ಚಾಮರಾಜನಗರ ಕ್ಷೇತ್ರದ ಶಾಸಕನಾಗಿದ್ದೇನೆ, ನನ್ನ ಜಿಲ್ಲೆಯಲ್ಲಿ ನಾಲ್ಕೈದು ಜನ ಶಾಸಕರು ಗೆದ್ದಿದ್ದಾರೆ, ಒಬ್ಬ ಜಿಲ್ಲಾಧಿಕಾರಿಯಾಗಲಿ, ನೀವು ಗೆದ್ದಿದ್ದೀರಿ, ನಿಮ್ಮ ಮುಂದಿನ ಕಾರ್ಯಕ್ರಮಗಳು ಏನು ಎಂದು ಇವತ್ತಿನವರೆಗೆ ಯಾರಾದರೂ ಒಬ್ಬರು ಮಾತನಾಡಿದ್ದಾರಾ? ನಾನು ಏನೂ ಅದನ್ನು ನಿರೀಕ್ಷಣೆ ಮಾಡಿಲ್ಲ, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಯಾವ ಬಡವರಿಗೋಸ್ಕರ, ಕೂಲಿಗಾರರಿಗೆ ಆ ಕಾಳನ್ನು ತಂದು, ಅದು ವಿತರಣೆಯಾಗದೇ, ಇರುವಾಗ, ನಮ್ಮ ದೇಶದಲ್ಲಿ ಇವರಿಗೆ ಇದುವರೆಗೂ ಮಣೆಯನ್ನು ಹಾಕಿಕೊಂಡು ಕುಳಿತಿದ್ದೇವೆ ಅದೇ ಬೇರೆ ದೇಶಗಳಲ್ಲಿ ಆಗಿದ್ದರೆ, ಅವರನ್ನು ಬಹಿರಂಗವಾಗಿ

ವಿಚಾರಣೆಗೆ ಒಳಪಡಿಸಿ, ಅವರಿಗೆ ಶಿಕ್ಷೆ ವಿಧಿಸಿ, ಕೈಗೆ ಕೋಳ ತೊಡಿಸಿ, ಜೈಲಿಗೆ ಕಳುಹಿಸುತ್ತಿದ್ದರು ಆದರೆ ಇವತ್ತು ಆ ಪರಿಸ್ಥಿತಿ ಇಲ್ಲ, ಆ ವ್ಯವಸ್ಥೆ ಇಲ್ಲ ಇದೇ ಪರಿಸ್ಥಿತಿ ಮುಂದುವರೆದರೆ ಇದು ಅಪಾಯ ಬೆಳವಣಿಗೆಯಾಗುತ್ತದೆ ನಾನು ಹೇಳುವುದೇನೆಂದರೆ, ಇವತ್ತು ನಾನು ಪಕ್ಷ ಭೇದವನ್ನು ಮರೆಯಬೇಕು ಇವತ್ತು ಅಧಿಕಾರಶಾಹಿಗಳು ನಮ್ಮ ಮೇಲೆ ಏನು ಧಾಳ ಮಾಡುತ್ತಿದ್ದಾರೆ, ಈ ಧಾಳಿಯ ಬಗ್ಗೆ ಎಚ್ಚರವಿಲ್ಲವೆಂದರೆ, ಪ್ರಜಾತಂತ್ರ ವ್ಯವಸ್ಥೆ ಬುಡಮೇಲು ಆಗುತ್ತದೆ ಇದರಿಂದ ಅರಾಜಕತೆ ಶುರುವಾಗುತ್ತದೆ, ಅವರಿಗೆ ಏನು 37 ವರ್ಷಗಳು ಅರಾಮವಾಗಿ ಇರುತ್ತಾರೆ, ಲೀಲಾಜಾಲವಾಗಿ ಇರುತ್ತಾರೆ, ನಂತರ ನಿವೃತ್ತರಾಗುತ್ತಾರೆ, ಮತ್ತೆ ಚುನಾವಣೆಗೆ ಬರುತ್ತಾರೆ, ಮತ್ತೆ ಅವರು ಮಂತ್ರಿಗಳಾಗಿ ಈ ಸದನದಲ್ಲಿ ಕುಳಿತುಕೊಳ್ಳುತ್ತಾರೆ ಈ ವ್ಯವಸ್ಥೆ ಎಷ್ಟು ಹದಗೆಟ್ಟಿದೆ, ಕುಲಗೆಟ್ಟಿದೆ, ನಾನು ಇದರ ಬಗ್ಗೆ ಹೇಳುವುದೇನೆಂದರೆ, ಈ ಚುನಾವಣೆ ಕಾಯಿದೆಯನ್ನು ಸಮಗ್ರವಾಗಿ ತಿದ್ದುಪಡಿ ಮಾಡಬೇಕು ಇಲ್ಲಿ ಯಾರು 35 ವರ್ಷಗಳ ಕಾಲ ಎಲ್ಲಾ ಸವಲತ್ತುಗಳನ್ನು, ಅನುಕೂಲಗಳನ್ನು ಪಡೆದುಕೊಂಡು ಎಲ್ಲವನ್ನೂ ಮಾಡಿ, ಇಲ್ಲಿ ನಮ್ಮ ಎದುರಿಗೆ ಕೈ ಕಟ್ಟಿಕೊಂಡು ನಿಂತವರು, ನಂತರ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಗೆದ್ದು, ಇಲ್ಲಿ ಅವರು ಸಚಿವರಾಗಿ ಕುಳಿತುಕೊಳ್ಳುವಂತಹ ದುರಂತ, ಈ ವ್ಯವಸ್ಥೆ ಏನಿದೆ? ಇದು ಈ ಪ್ರಜಾತಂತ್ರ ವ್ಯವಸ್ಥೆಗೆ ಮಾರಕವಾಗುತ್ತದೆ ಇದು ಒಳ್ಳೆಯ ಸೂಚನೆಯಲ್ಲ ನನಗೆ ಈ ಪರಿಸ್ಥಿತಿ ಬಹಳ ನೋವಾಗುತ್ತದೆ, ನಾನು ಬಹಿರಂಗವಾಗಿ ಹೇಳಿದೆ, ಯಾರು ನಿವೃತ್ತ ಅಧಿಕಾರಿಗಳು ಚುನಾವಣೆಗೆ ನಿಂತಿದ್ದಾರೆ, ಅವರನ್ನು ಮತದಾರರು ನೇರವಾಗಿ ಸೋಲಿಸಬೇಕೆಂದು ಹೇಳಿದೆ ಅಪರಲ್ಲಿ ಕೆಲವರು ಸೋತಿದ್ದಾರೆ, ಕೆಲವರು ಗೆದ್ದಿದ್ದಾರೆ, ಇವರು ಅಧಿಕಾರದಲ್ಲಿದ್ದಾಗ ಚುನಾವಣೆಗೆ ನಿಲ್ಲುವುದಕ್ಕೆ ಆಗುವುದಿಲ್ಲ, ನಂತರ ಅವರು ನಿವೃತ್ತರಾದ ಮೇಲೆ ಈ ಚುನಾವಣೆಗಳಿಗೆ ನಿಲ್ಲುವಂಥಾದ್ದು ಏನಿದೆ ಅದನ್ನು ರದ್ದುಪಡಿಸಬೇಕು, ಮತ್ತೆ ಇದಕ್ಕೆ ಸಂಬಂಧಪಟ್ಟಂತಹ ಕಾಯಿದೆಯು ಬದಲಾವಣೆ ಆಗಬೇಕು, ತಿದ್ದುಪಡಿಯಾಗಬೇಕು, ಈ ಚುನಾವಣೆ ವ್ಯವಸ್ಥೆ ಬದಲಾವಣೆಯಾಗದಿದ್ದರೆ, ಮುಂದೆ ನಾವು ಯಾರೂ ಇಲ್ಲಿ ಬರುವುದಕ್ಕೆ ಆಗುವುದಿಲ್ಲ

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ವಿಷಯಾಂತರ ಮಾಡುತ್ತಿದ್ದೀರಲ್ಲಾ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ, ಇದು ವಿಷಯಾಂತರವಲ್ಲ, ಒಂದು ರಸ್ತೆಯಲ್ಲಿ ಹೋಗುವಾಗ ಸೇತುವೆ ಬರುತ್ತದೆ, ಕಲ್ಲು ಮುಳ್ಳು ಎಲ್ಲಾ ಬರುತ್ತವೆ, ಅದೆಲ್ಲವನ್ನೂ ಹೇಳಬೇಕಾಗುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೇ, ಇವತ್ತು ಅಧಿಕಾರದಲ್ಲಿ ಇರುವಾಗಲೇ ಚುನಾವಣೆಗೆ ನಿಲ್ಲಬೇಕೆನ್ನುವಂತಹ ಅಧಿಕಾರಿಗಳು ಇದ್ದಾರೆ ಅವರು ಆಫೀಸ್‌ನಲ್ಲಿ ಇದ್ದಾಗಲೇ, ಮುಂದಿನ ಚುನಾವಣೆಗೆ ಆಫೀಸ್‌ನಲ್ಲೇ ಪ್ಲಾನ್ ಮಾಡಿಕೊಂಡು ಕೆಲಸದಿಂದ ರಿಟೈರ್ ಆದತಕ್ಷ, ಬಂದು ಅರ್ಜಿಯನ್ನು ಹಾಕುವಂತಹ ಪರಿಸ್ಥಿರಿ ನಿರ್ಮಾಣವಾಗಿದೆ, ಇವರಲ್ಲಿ ಕನಿಷ್ಟ ಹತ್ತು ವರ್ಷ ಕಾಲ ಸರ್ಕಾರಿ ಕೆಲಸ ಮಾಡಿ, ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದು ನಿವೃತ್ತರಾದವರನ್ನು, ಚುನಾವಣೆಗೆ ನಿಲ್ಲದಂತೆ ಮಾಡದೇ ಹೋದರೆ ಮುಂದೆ ಆಡಳಿತವನ್ನು ಮಾಡುವುದಕ್ಕಾಗುವುದಿಲ್ಲ, ಎಕ್ಸಿಕ್ಯೂಟೀವ್ ಆಗಿ ಬರುತ್ತೇವೆಂದರೆ, ಅವರು ತಾಲ್ಲೂಕಿನಲ್ಲಿ ಚುನಾವಣೆಗೆ ನಿಲ್ಲುತ್ತೇನೆಂದು ಹೇಳುತ್ತಾರೆ, ಡಿ ಸಿ ಆಗಿರುವವರು ಚುನಾವಣೆಗೆ ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರೇ, ಅಧಿಕಾರಿಗಳ ವರ್ಗದಲ್ಲಿ ನ್ಯಾಯಾಧೀಶರುಗಳು ಬರುವಾಗ, ಅವರು ನಿವೃತ್ತರಾದ ಮೇಲೆ ಚುನಾವಣೆಗೆ ನಿಲ್ಲುತ್ತಾರೆ, ರಾಜ್ಯಸಭೆಗೂ ಬರುತ್ತಾರೆ, ಕೌನ್ಸಿಲ್‌ಗೂ

ಬರುತ್ತಾರೋ, ಏನೋ ಗೊತ್ತಿಲ್ಲ ಅದುದರಿಂದ ಈ ವ್ಯವಸ್ಥೆಯನ್ನು ಯಾವ ರೀತಿ ಮಾಡಬೇಕೆಂಬ ಬಗ್ಗೆ ಲೋಕಸಭೆಯಲ್ಲಿ ತೀರ್ಮಾನವಾಗಬೇಕಾಗುತ್ತದೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಪ್ರಕಾಶ್‌ರವರೇ, ಇವರಿಗೆ ನಿರ್ಬಂಧಗಳು ಇಲ್ಲ, ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾದವರು ಇದ್ದರಲ್ಲಾ, ಅವರು ರಾಷ್ಟ್ರಪತಿಯವರ ಎದುರಿನಲ್ಲಿ, ಗೌಪ್ಯತೆಯ ಪ್ರಮಾಣ ವಚನವನ್ನು ಸ್ವೀಕಾರ ಮಾಡಿ ಅಧಿಕಾರಿವನ್ನು ವಹಿಸಿಕೊಳ್ಳುತ್ತಾರೆ ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ನವರು, ಅವರ ಅಧಿಕಾರ ಅವಧಿ ಮುಗಿದ ಮೇಲೆ, ಯಾವ ಜವಾಬ್ದಾರಿಯನ್ನೂ ತೆಗೆದುಕೊಳ್ಳಬಾರದು, ನಮ್ಮಲ್ಲಿ they are all gettıng ınto polıtıcal partıes ಈ ದೇಶದ ಅನೇಕ ವಹಿವಾಟಿನ ಗುಟ್ಟುಗಳು, ದೇಶದ ಹಿತದೃಷ್ಟಿಯಿಂದ ಇರತಕ್ಕಂಧಾದ್ದು, ಅವರ ಗಮನಕ್ಕೆ ಬಂದಿರುತ್ತದೆ, ಅದುದರಿಂದಲೇ ಆ ನಿರ್ಬಂಧವಿರುವಂಧಾದ್ದು, ಆ ನಿರ್ಬಂಧವನ್ನು ಮುರಿದುಕೊಂಡು ಬಂದು, they are gettıng ınto polıtıcal partıes ಡಿಫ್‌ನ್ಸ್‌ನಲ್ಲಿ ಅತ್ಯುನ್ನತ ಸ್ಥಾನಕ್ಕೆ ಹೋಗಿ ನಿವೃತ್ತರಾದಂಧವರು, ಎರಡು ತಿಂಗಳು ಬಿಟ್ಟುಕೊಂಡು, 26 ಕಂಪನಿಗಳಿಗೆ ಹಾನರರಿ ಡೈರಕ್ಟರ್‌ಗಳಾಗುತ್ತಾರೆ, ಅವರ ಕೈ ಕೆಳಗೆ ಇದ್ದಂಧವರು, ಪರ್ಚೇಸ್ ಸೆಕ್ಷನ್‌ನಲ್ಲಿ, ಮುಖ್ಯವಾದಂತಹ ಸ್ಥಾನಗಳಲ್ಲಿ ಇರುತ್ತಾರೆ ಅವರ ಸುಪೀರಿಯರ್ ಆಫೀಸರ್‌ಗಳು ರಿಟೈರ್ ಕಂಪನಿಯ ಡೈರಕ್ಟರ್ ಆಗಿರುತ್ತಾರೆ ಇದು ಬರೀ ಚುನಾವಣೆ ಮಾತ್ರವಲ್ಲ ಇದರ ವರ್ತುಲ ಹೇಗಿದೆ ನೋಡಿ!

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದಂತಹ ವಿಷಯದಲ್ಲಿ ವಿವಿಧ ಮುಖಗಳು ಇವೆ, ಅದರ ಬಗ್ಗೆ ನಾನು ವಾಖ್ಯಾನ ಮಾಡುವುದಿಲ್ಲ, ಹಿಂದೆ ಅಧಿಕಾರಿಗಳು ಎಷ್ಟು ಪ್ರಾಮಾಣಿಕರು ಇದ್ದರೆಂಬುದಕ್ಕೆ ಮಾನ್ಯ ಬೀಚಿಯವರ ರಚನೆಯ "ತಿಮ್ಮನ ಉತ್ತರ" ಎಂದು ಇದೆ, ಅದರಲ್ಲಿ ತಿಮ್ಮ ಮುಖ್ಯಮಂತ್ರಿಯಾಗುತ್ತಾರೆ, ಆಗ ಪತ್ರಕರ್ತರು ಕೇಳುತ್ತಾರೆ, ತಾವು ಮುಖ್ಯಮಂತ್ರಿಗಳಾಗಿದ್ದೀರಿ ನಿಮ್ಮ ಮುಂದಿನ ಕೆಲಸ ಏನೆಂದು ಕೇಳುತ್ತಾರೆ, ಅದಕ್ಕೆ ತಿಮ್ಮ ನಾನು ಜಿಲ್ಲಾಧಿಕಾರಿಯಾಗಿ ನೇಮಕಾತಿ ಮಾಡಿಕೊಂಡು, ಮುಖ್ಯಮಂತ್ರಿಯ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆಂದು ಹೇಳುತ್ತಾರೆ ಆದರೆ ಆ ಕಾಲ ಹೋಯಿತು ಆದರೆ ಆ ಅಧಿಕಾರವನ್ನೂ ಅನುಭವಿಸುತ್ತಾರೆ, ನಂತರ ವಿಶ್ರಾಂತಿಯ ಬದುಕಿನಲ್ಲೂ ಅಧಿಕಾರಕ್ಕಾಗಿ ಹಾತೊರೆಯುತ್ತಾರೆ, ಇವು ಬಹಳ ಮುಖ್ಯವಾದಂತಹ ವಿಷಯಗಳು ಆಗಿವೆ, ಇದು ತಾಂತ್ರಿಕವಾಗಿ ಮತ್ತು ಕಾನೂನಿನ ಪರಿಮಿತಿ ಎನ್ನುವುದಕ್ಕಿಂತ, ಹೆಚ್ಚಾಗಿ ನೈತಿಕ ಮತ್ತು ಪ್ರೊಪ್ರೈಟಿ ಅಂಡ್ ಪ್ರೊಬಿಟಿ ಇದು ಬಹಳ ಮುಖ್ಯವಾಗಿರುವಂಧಾದ್ದು, ಇದನ್ನು ಅವರು ಯೋಚನೆ ಮಾಡಬೇಕು, ಮಾನ್ಯ ಜೆ ಸಿ ಮಾಧುಸ್ವಾಮಿಯವರು ಹೇಳಿದಹಾಗೆ, ಅನೇಕರು ಆ ಗುರಿಯನ್ನು ಇಟ್ಟುಕೊಂಡು, ಆಯಾ ಕ್ಷೇತ್ರಗಳಿಗೆ ಅನುಕೂಲವಾಗುವಂತೆ ಕೆಲಸವನ್ನು ಮಾಡಿ, ನಿವೃತ್ತರಾದ ತಕ್ಷಣ ಚುನಾವಣೆಗೆ ನಿಲ್ಲುವಂತಹ ಕಾರಣಗಳು ಇವೆ, ಇದು ನಮ್ಮ ವ್ಯಾಪ್ತಿಯನ್ನು ಮೀರಿರುವಂತಹ ವಿಷಯವಾಗಿದೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ, ಇದು ವ್ಯಾಪ್ತಿ ಮೀರಿರಲಿ ಆದರೂ ಇಲ್ಲಿ ನಮ್ಮದು ಒಂದು ಸಲಹೆ ಇದು ಉನ್ನತ ಮಟ್ಟದಲ್ಲಿ ಚರ್ಚೆಯಾಗಲಿ, ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗಲಿ, ಲೋಕಸಭೆಯಲ್ಲಿ ಚರ್ಚೆಯಾಗಲಿ, ಎಲ್ಲಕ್ಕಿಂತ ಮುಖ್ಯವಾಗಿ ರಾಜಕೀಯ ಪಕ್ಷದವರು ಯಾರಿದ್ದಾರೆ, ಅವರೇ ಇವರನ್ನು ಚುನಾವಣೆಗಳಿಗೆ ನಿಲ್ಲಿಸುವಂಧ ವ್ಯವಸ್ಥೆ ಮಾಡಿ ಕೊಟ್ಟಿದ್ದಾರಲ್ಲಾ ಅವರೇ

ನಿಲ್ಲಿಸುವಂಥದ್ದು ನಾವೇ ಅಧಿಕಾರಿಗಳನ್ನು ಕರೆಯುವುದು, ಮಣೆ ಹಾಕುವುದು, ಪೂಜೆ ಮಾಡುವುದು, ಅವರನ್ನು ಚುನಾವಣೆಗೆ ನಿಲ್ಲಿಸುವುದು ಅನೇಕ ಅಧಿಕಾರಿಗಳು ಈ ರಾಜ್ಯಕ್ಕೆ ಸೇವೆ ಮಾಡಿರುವಂಥವರು, ಚುನಾವಣೆಯಲ್ಲಿ ಸೋತರು, ನಿನ್ನೆ ಮೊನ್ನೆ ಬಂದಂಥವರು, ನಿವೃತ್ತರಾದಂತಹ ಅಧಿಕಾರಿಗಳು ಚುನಾವಣೆಗೆ ನಿಂತು ಸೋತರು, ಇವರು ಹತ್ತಾರು ವರ್ಷಗಳ ಕಾಲ ತ್ಯಾಗ ಮಾಡಿ ದುಡಿದಂಥವರು ಸೋತಿದ್ದಾರೆ, ನಾನು ಏಕೆ ಈ ಪ್ರಶ್ನೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆಂದರೆ, ಇವತ್ತು ಈ ವ್ಯವಸ್ಥೆಯಲ್ಲಿ, ಇದನ್ನೇ ಇಟ್ಟುಕೊಂಡು ನಾವು ಏನೂ ರಾಜಕಾರಣ ಮಾಡುತ್ತಿಲ್ಲ, ಈ ವ್ಯವಸ್ಥೆ ಹದಗೆಟ್ಟಿದೆ, ಈ ವ್ಯವಸ್ಥೆ ಸರಿಹೋಗಬೇಕು ಈ ವ್ಯವಸ್ಥೆ ಸರಿಯಿಲ್ಲವೆಂದರೆ, ನಾವು ಎಲ್ಲಿಗೆ ತಲುಪುತ್ತೇಯೋ ಗೊತ್ತಿಲ್ಲ ಅದುದರಿಂದ ಇಂತಹ ಪರಿಸ್ಥಿತಿಯಲ್ಲಿ "ಕೂಲಿಗಾಗಿ ಕಾಳು" ಯೋಜನೆ ಏನಿದೆ ಇದನ್ನು ಯಾರೇ ಆಗಲಿ ಅಘುವಾಗಿ ತೆಗೆದುಕೊಳ್ಳತಕ್ಕಂದ್ದದಲ್ಲ ಇದು ಸರಿಯಾದ ರೀತಿಯಲ್ಲಿ ಹಂಚಿಕೆ ಆಗಬೇಕು ಇದರ ಬಗ್ಗೆ ನಾನು ಹೇಳುವುದೇನೆಂದರೆ, ಅವತ್ತು ಯಾವ ಸರ್ಕಾರವಿತ್ತು ಆ ಸರ್ಕಾರದವರು ಕಣ್ಣುಮಚ್ಚಿಕೊಂಡು ಕುಳಿತರು, ಇದರ ಬಗ್ಗೆ ಅವರು ಚಕಾರವನ್ನು ಎತ್ತಲಿಲ್ಲ, ಇದರ ಬಗ್ಗೆ ಏನಾಗಿದೆಯೆಂಬುದನ್ನು ನೋಡಲಿಲ್ಲ, ಅವರು ಸುಮ್ಮನೆ ಐರಾವತದಲ್ಲಿ ಕುಳಿತರು, "ಕೂಲಿಗಾಗಿ ಕಾಳು" ಇದು ರೈತರಿಗೆ, ಈ ಜನರಿಗೆ ತಲುಪಿದೆಯೇ, ಇಲ್ಲವೇ ಕೇಳಿ ತಾಲ್ಲೂಕು ಪಂಚಾಯತ್‌ನಲ್ಲಿ ಸಭೆ ನಡೆದಿದೆಯೇ? ಜಿಲ್ಲಾ ಮಟ್ಟದಲ್ಲಿ ಸಭೆ ನಡೆದಿದೆಯೇ? ರಾಜ್ಯ ಮಟ್ಟದಲ್ಲಿ ಸಭೆ ನಡೆದಿದೆಯೆ? ಇಲ್ಲವೇ ಇಲ್ಲ ಜಿಲ್ಲಾಧಿಕಾರಿಗಳು ಸಭೆ ಕರೆದರು, ಅವರು ಹೇಳಿದರು, ಆಯಿತು!

ಆ ದೃಷ್ಟಿಯಿಂದ, ಹಿಂದೆ ಇದ್ದಂಥ ಸರ್ಕಾರದ ಬೇಜವಾಬ್ದಾರಿತನದಿಂದ ಇಷ್ಟೆಲ್ಲಾ ನಡೆದು ಹೋಗಿದೆ ಬಡವರಿಗೆ ಹಂಚಬೇಕಾದಂಥ 'ಕೂಲಿಗಾಗಿ ಕಾಳು' ಯೋಜನೆಯ ಆಹಾರಧಾನ್ಯದ ದುರುಪಯೋಗದ ಅನಾಹುತ ನಡೆದು ಹೋಗಿದೆ ಇದರ ಹೊಣೆಯನ್ನು ಹಿಂದೆ ಇದ್ದಂಥ ಸರ್ಕಾರ ಹೊರಬೇಕು ಇದರ ಬಗ್ಗೆ ಬಹಿರಂಗ ವಿಚಾರಣೆಯಾಗಬೇಕೆಂದು ನಾನು ಹೇಳುತ್ತೇನೆ ಮಾನ್ಯ ಯಡಿಯೂರಪ್ಪನವರು ಹೇಳಿದಂತೆ, ಈ ಬಗ್ಗೆ ಸದನ ಸಮಿತಿ ಒಂದು ಕಡೆ ರಚನೆಯಾಗಲಿ, ಇನ್ನೊಂದು ಕಡೆ ಬಹಿರಂಗ ವಿಚಾರಣೆ ನಡೆಯಬೇಕು ಹಿಂದೆ ಇದ್ದಂಥ ಸರ್ಕಾರದ ಮಂತ್ರಿಗಳು, ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲಾ ಮಂತ್ರಿಗಳೂ ಬಹಿರಂಗ ವಿಚಾರಣೆಗೆ ಬರಬೇಕು 'ಕೂಲಿಗಾಗಿ ಕಾಳು' ಏನಾಗಿದೆ ಎನ್ನುವುದರ ಬಗ್ಗೆ ಹಿಂದಿನ ಸರ್ಕಾರ ಹೊಣೆಯಾಗುತ್ತದೆ ನಾನು ನೇರವಾಗಿ ಈ ಸರ್ಕಾರಕ್ಕೆ ಹೇಳುತ್ತಿದ್ದೇನೆ, ಇದರ ಬಗ್ಗೆ ಒಂದು ತನಿಖಾ ಆಯೋಗ ರಚನೆಯಾಗಬೇಕು ಸರ್ವೋಚ್ಚ ನ್ಯಾಯಾಲಯದ ಒಬ್ಬರು ನ್ಯಾಯಾಧೀಶರನ್ನು ನೇಮಕ ಮಾಡಿ, ಗ್ರೋವರ್ ಕಮೀಷನ್ ತರಹ ಒಂದು ತನಿಖಾ ಆಯೋಗ ರಚನೆಯಾಗಬೇಕು ಏಕೆಂದರೆ, ಇದೇನು ಸಾಮಾನ್ಯವಾದುದಲ್ಲ ಇದರಲ್ಲಿ 50 ಕೋಟಿ ರೂ ಇರಬಹುದು ಆದರೆ ಇದರ ಹಿಂದೆ ಇದ್ದಂಥ ಉದ್ದೇಶ ಏನು? ಕೂಲಿಗಾಗಿ ಇದ್ದಂಥ ಕಾಳನ್ನು ತಿಂದರು ಎನ್ನುವುದು ಜನತೆಗೆ ಗೊತ್ತಾಗಬೇಕು ಬಿಹಾರದಲ್ಲಿ ನಡೆದಂಥ ಮೇವು ಹಗರಣ ಎಷ್ಟು ದೊಡ್ಡ ಹಗರಣವಾಯಿತು ಅದರಿಂದಾಗಿ, ಅಲ್ಲಿ ಮುಖ್ಯ ಮಂತ್ರಿಯಾಗಿದ್ದವರು ಅಧಿಕಾರ ಕಳೆದುಕೊಂಡರು, ಜೈಲಿಗೆ ಹೋದರು ಇದೆಲ್ಲವೂ ಬಿಹಾರದಲ್ಲಿ ನಡೆದಿದೆ ಕರ್ನಾಟಕದಲ್ಲಿ 'ಕೂಲಿಗಾಗಿ ಕಾಳು' ಯೋಚನೆಯ ದುರುಪಯೋಗ ನಡೆದಿದೆ ಹಿಂದಿನ ಸರ್ಕಾರದಲ್ಲಿ ಯಾರ್ಯಾರು ಆಡಳಿತ ನಡೆಸಿದ್ದರು, ಮುಖ್ಯಮಂತ್ರಿಗಳ್ಯಾರು, ಮಂತ್ರಿಗಳ್ಯಾರು, ಮುಖ್ಯ ಕಾರ್ಯದರ್ಶಿಗಳ್ಯಾರು ಇದ್ದರು, ಅವರೆಲ್ಲರನ್ನೂ ಬಹಿರಂಗ ವಿಚಾರಣೆಗೆ ಒಳಪಡಿಸಲೇ ಬೇಕು ಈ ರೀತಿ ಬಹಿರಂಗ ವಿಚಾರಣೆಗೆ

ಅವರನ್ನು ನಿಲ್ಲಿಸಿದಾಗ ಮಾತ್ರ ಈ ರಾಜ್ಯದಲ್ಲಿ ನ್ಯಾಯ ದೊರಕುತ್ತದೆ ಅದಕ್ಕಾಗಿ ನಾನು ಮಾನ್ಯ ಸಿದ್ಧರಾಮಯ್ಯನವರಿಗೆ ಹೇಳುತ್ತಿದ್ದೇನೆ, ಚುನಾವಣೆಯ ಸಮಯದಲ್ಲಿ ತಾವು ಹೇಳುತ್ತಿದ್ದೀರಿ, ಕಾಂಗ್ರೆಸ್ ಸರ್ಕಾರದವರು ಕೂಲಿಗಾಗಿ ಕಾಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ, ಮೋಸ ಮಾಡಿದ್ದಾರೆ, ಅನ್ಯಾಯ ಮಾಡಿದ್ದಾರೆ ನಮ್ಮ ಸರ್ಕಾರ ಬರಲಿ, ಈ ಬಗ್ಗೆ ನಾವು ಅವರ ಮೇಲೆ ತೀವ್ರವಾದಂಥ ಕ್ರಮವನ್ನು ಕೈಗೊಳ್ಳುತ್ತೇವೆ ಎಂದು ನೂರಾರು ಕಡೆ ಹೇಳಿದ್ದೀರಿ ಹೀಗೆ ಅನೇಕ ವಿಚಾರಗಳನ್ನು ಹೇಳಿದ್ದೀರಿ ಅದು ಪತ್ರಿಕೆಗಳಲ್ಲಿ ಬಂದಿದೆ. ಈಗ ತಾವು ಅದೇ ಸಿದ್ಧರಾಮಯ್ಯನವರು ತಾನೇ? ತಾವು ಅವರೇ ತಾನೇ? ತಾವು ಅವರೇ ಆಗಿದ್ದರೆ, ಹಿಂದೆ ನೀವು ಹೇಳಿದ ಮಾತಿಗೆ ನೀವು ಬದ್ಧರಾಗಿ ನಿಲ್ಲುತ್ತೀರಿ ತಾನೇ? ಇದನ್ನು ನೀವು ಮಾಡಿದಿರಿ ಎಂದು ನಾನು ಹೇಳಲು ಹೋಗುವುದಿಲ್ಲ ಹಿಂದಿನ ಸರ್ಕಾರದ ಬಹಿರಂಗ ವಿಚಾರಣೆ ದೊಡ್ಡದಾಗಿ ಸ್ಟೇಡಿಯಂನಲ್ಲಿ ನಡೆಯಬೇಕು ಆಗ ಇದ್ದಂಥ ಎಲ್ಲಾ ಮಂತ್ರಿಗಳನ್ನೂ, ಮುಖ್ಯಮಂತ್ರಿಗಳನ್ನೂ ಕಟಕಟೆಯಲ್ಲಿ ನಿಲ್ಲಿಸಬೇಕು, ಕೂಲಿಗಾಗಿ ಕಾಳು ಏನಾಯಿತು, ಅದನ್ನು ಎಲ್ಲಿಗೆ ತಂದಿರಿ ಎಂದು ಕೇಳಬೇಕು ಆ ತಾಕತ್ತು, ಧೈರ್ಯ ನಿಮಗಿದೆಯೇ? ಹಾಗೆ ಹೇಳತಕ್ಕಂಥ ಹೃದಯ ನಿಮಗಿದೆಯೇ? ಹಾಗೆ ಹೇಳತಕ್ಕಂಥ ಶಕ್ತಿ ನಿಮಗಿದೆಯೇ? ಇಲ್ಲ, ಅದೆಲ್ಲವೂ ಹೋಗಿದೆ, ನೀವು ಅದೆಲ್ಲವನ್ನೂ ಹೋಗಿದೆ, ನೀವು ಅದೆಲ್ಲವನ್ನೂ ಕಳೆದುಕೊಂಡಿದ್ದೀರಿ ಈಗ ನೀವು ಬೃಹನ್ನಳೆಯಾಗಿದ್ದೀರಿ ಬೃಹನ್ನಳೆಯ ವೇಷವನ್ನು ಹಾಕಿಕೊಂಡಿದ್ದೀರಿ ಮಹಾಭಾರತದಲ್ಲಿ ಅರ್ಜುನನಿಗೆ ಬಂದಿದ್ದಂಥ ಪರಿಸ್ಥಿತಿ ಈಗ ಇವರಿಗೆ ಬಂದಿದೆ ಬೃಹನ್ನಳೆ ಎಂದರೆ ಕಟ್ಟಿದ್ದೇನೂ ಅಲ್ಲ ಅರ್ಜುನ ಬೃಹನ್ನಳೆ ವೇಷ ಧರಿಸಿದ್ದು ಏಕೆ ಎನ್ನುವುದನ್ನು ನೀವು ಅರ್ಥಮಾಡಿಕೊಳ್ಳಿ

ಶ್ರೀ ಸಿದ್ಧರಾಮಯ್ಯ ಜನತಾದಳದವರು ಯಾವತ್ತೂ ಬೃಹನ್ನಳೆ ಯಾಗಲು ಸಾಧ್ಯವೇ ಇಲ್ಲ ನಾವು ಏನು ಹೊರಗಡೆ ಹೇಳಿದ್ದೇವೆ, ಅದೇ ಅಭಿಪ್ರಾಯವನ್ನು ಒಳಗೂ ಕೂಡ ಇಟ್ಟುಕೊಂಡಿರುತ್ತೇವೆ ಈ ಅಕ್ಕಿ ಹಗರಣದಲ್ಲಿ ಯಾರೇ ತಪ್ಪು ಮಾಡಿರಲಿ, ಅವರು ಎಷ್ಟೇ ದೊಡ್ಡವರಿರಲಿ, ಯಾವುದೇ ಅಧಿಕಾರದಲ್ಲಿರಲಿ ಅವರಿಗೆ ಕಾನೂನು ರೀತಿಯ ಶಿಕ್ಷೆ ಕೊಡತಕ್ಕಂಥಾದ್ದಕ್ಕೆ ಈ ಸರ್ಕಾರ ಬದ್ಧವಾಗಿದೆ ಇದರಲ್ಲಿ ಯಾವುದೇ ಅನುಮಾನ ಅಥವಾ ಸಂಶಯ ಇಟ್ಟುಕೊಳ್ಳಬೇಕಾದಂಥ ಅಗತ್ಯ ಇಲ್ಲ ಮಹಾಭಾರತದಲ್ಲಿ ಅರ್ಜುನ ತಲೆಮರೆಸಿ ಕೊಂಡಿರುವುದಕ್ಕಾಗಿ ಬೃಹನ್ನಳೆ ವೇಷ ಹಾಕಿಕೊಂಡಿರುತ್ತಾನೆ ನಾವು ಇಲ್ಲಿ ತಲೆ ಮರೆಸಿಕೊಂಡು ಇರಬೇಕಾದಂಥ ಅಗತ್ಯವಿಲ್ಲ ಅಂದಿನ ಸಿದ್ಧರಾಮಯ್ಯನೇ ಇವತ್ತಿನ ಸಿದ್ಧರಾಮಯ್ಯ. ಅದರಲ್ಲಿ ಯಾವುದೇ ವ್ಯತ್ಯಾಸವಿಲ್ಲ ಆದರೆ ನೀವು ಬೃಹನ್ನಳೆಯಾಗುವುದಕ್ಕೆ ಹೋಗಬೇಡಿ ಅಷ್ಟೇ

ಶ್ರೀ ವಾಟಾಳ್ ನಾಗರಾಜ್ ನಾನು ಎಂದೂ ಬೃಹನ್ನಳೆಯಾಗುವುದಿಲ್ಲ ನಾನು ಎಂದೆಂದೂ ಅರ್ಜುನನೇ ಆ ವಿಚಾರದಲ್ಲಿ ನೀವು ತಲೆಕೆಡಿಸಿಕೊಳ್ಳ ಬೇಕಗಿಲ್ಲ ಆದ್ದರಿಂದಲೇ, ನಾವು ಇಲ್ಲಿ ಕುಳಿತಿರುವುದು

ಶ್ರೀ ಸಿದ್ಧರಾಮಯ್ಯ ಅರ್ಜುನನೇ ಬೃಹನ್ನಳೆಯಾಗಿದ್ದುದ್ದು

ಶ್ರೀ ವಾಟಾಳ್ ನಾಗರಾಜ್ ಅವರು ಆಗಿದ್ದರು ಆದರೆ ನಾವಿನ್ನೂ ಆಗಿಲ್ಲ ನೋಡಿ, ನಿಮ್ಮ ಮಾತಿಗೆ ಹೊಸ ಕಾಂಗ್ರೇಸ್ಸಿನವರು ಮತ್ತು ಜನತಾದಳ

ಶ್ರೀ ಎಂ.ಪಿ ಪ್ರಕಾಶ್ ತಾವು ಅರ್ಜುನ ಆಗಿದ್ದರೆ ಯಾವುದಾದರೊಂದು ದಿನ ಬೃಹನ್ನಳೆಯಾಗಲೇಬೇಕು

ಶ್ರೀ ವಾಟಾಳ್ ನಾಗರಾಜ್ ಯಾವ ಸಂದರ್ಭ? ಅರ್ಜುನ ಬೃಹನ್ನಳೆ ಯಾದುದು ಯಾವ ಸಂದರ್ಭದಲ್ಲಿ?

ಶ್ರೀ ಸಿದ್ಧರಾಮಯ್ಯ ಸಂದರ್ಭ ಯಾವಯದಾದರೂ ಇರಲಿ ಅರ್ಜುನ ತಮ್ಮ ಜೀವನದಲ್ಲಿ ಬೃಹನ್ನಳೆಯಾಗಿದ್ದರು ನೀವು ಅರ್ಜುನ ಎಂದು ಹೇಳಿ ಕೊಂಡರೆ ಬೃಹನ್ನಳೆಯೂ ಆಗುತ್ತೀರಿ

ಶ್ರೀ ವಾಟಾಳ್ ನಾಗರಾಜ್ ನಾನು ಅರ್ಜುನ, ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ ಆದರೆ ನಾನು ಬೃಹನ್ನಳೆಯಾದದ್ದು ಯಾವಾಗ? ಏಕೆಂದರೆ ನಾನು ಆ ಕಡೆ ಹೋಗಿಲ್ಲ ಅರ್ಜುನನಾಗಿ ನಾನು ಆ ಕಡೆ ಕುಳಿತಿದ್ದರೆ ನಾನು ಬೃಹನ್ನಳೆಯೇ ಆ ರೀತಿಯಲ್ಲಿ ಅವರು ಮಹಾಭಾರತದಲ್ಲಿ ಅರ್ಜುನನಾಗಿ ಬೃಹನ್ನಳೆಯಾಗಿದ್ದಾರೆ ಅದರಲ್ಲಿ ಬೇರೆ ಪ್ರಶ್ನೆ ಇಲ್ಲವೇ ಇಲ್ಲ

ಅಧ್ಯಕ್ಷರು ವಾಟಾಳ್ ನಾಗರಾಜ್‌ರವರೇ, ದಯಮಾಡಿ ಬೇಗ ಮುಗಿಸಿ ನಿನ್ನೆ ಎರಡು ಗಂಟೆ ಚರ್ಚೆಯಾಯಿತು ಆಗಲೇ ಎರಡೂವರೆ ಗಂಟೆಯಾಯಿತು

ಶ್ರೀ ವಾಟಾಳ್ ನಾಗರಾಜ್ ಆಯಿತು, ನಾನು ಬೇಗ ಮುಗಿಸುತ್ತೇನೆ. ಯಡಿಯೂರಪ್ಪನವರೇ, ಆಗಲೇ ತಾವು ಇರಲಿಲ್ಲ ನಾನು ಎರಡು ವಿಚಾರಗಳನ್ನು ಹೇಳಿದ್ದೇನೆ ಒಂದು, ನೀವು ಹೇಳಿರುವಂತೆ ಸದನ ಸಮಿತಿ ರಚನೆಯಾಗಬೇಕು ಎರಡನೆಯದು, ಸ್ಟೇಡಿಯಂನಲ್ಲಿ ಬಹಿರಂಗ ವಿಚಾರಣೆ ನಡೆಯಬೇಕು ಹಿಂದೆ, ಅರಸುರವರ ಕಾಲದಲ್ಲಿ ಗ್ರೋವರ್ ಕಮೀಷನ್‌ನಂಥ ದೊಡ್ಡದೊಡ್ಡ ಆಯೋಗಗಳು ರಚನೆಯಾಗಿದ್ದವು ಈಗ ಈ ವಿಚಾರದಲ್ಲಿ, ಹಿಂದೆ ಇದ್ದಂಥ ಕೃಷ್ಣಾರವರ ಸರ್ಕಾರದ ಮೇಲೆ ಒಂದು ಬಹಿರಂಗ ನ್ಯಾಯಾಂಗ ವಿಚಾರಣೆ ಆಗಲೇಬೇಕು ಇದು ಕಡಿಮೆಯೇನಲ್ಲ ಈ ಬಹಿರಂಗ ವಿಚಾರಣೆ ನಡೆಸಲು ತಾವು ರೆಡಿ ಇರಬೇಕು ಎರಡನೆಯದು, ವಿಚಾರಣೆ ಆದನಂತರ ಜೈಲಿಗೆ ಕುಳುಹಿಸತಕ್ಕಂಥಾದ್ದು ಆಗಬೇಕು ಈಗ ಇರತಕ್ಕಂಥಾದ್ದು ಪರಪ್ಪನ ಅಗ್ರಹಾರದ ಒಂದೇ ಜೈಲು ಚುನಾವಣೆಯ ಸಮಯದಲ್ಲಿ ನೀವು ಹೊಸದಾಗಿ ಜೈಲನ್ನು ಕಟ್ಟುತ್ತಿದ್ದೇವೆ ಎಂದು ಹೇಳಿದ್ದಿರಿ ಅದಕ್ಕೆ ಜಿಲ್ಲಿ ತಂದಿದ್ದೇವೆ, ಮಣ್ಣು ತಂದಿದ್ದೇವೆ, ಇಟ್ಟಿಗೆ ತಂದಿದ್ದೇವೆ, ಸಿಮೆಂಟ್ ಹಾಕುತ್ತಿದ್ದೇವೆ ಎಂದು ನೀವೂ ದೇವೇಗೌಡರು ಭಾಷಣ ಮಾಡಿದುದೆಲ್ಲಾ ಇನ್ನೂ ನಮ್ಮ ಕಣ್ಣ ಮುಂದೆ ಕಟ್ಟಿದ ಹಾಗಿದೆ ಆ ಜೈಲು ಎಲ್ಲಿ ತಯಾರಾಗುತ್ತಿದೆ ಎಂದು ನಾನು ನೋಡಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ ನಮ್ಮ ಉಪಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರನ್ನು ನೀವು ಕನ್‌ಫ್ಯೂಸ್ ಮಾಡಲು ಹೊರಟಿದ್ದೀರಿ ನೀವು ಅವರಿಗೆ ಗೊಂದಲ ಮಾಡಲು ಹೊರಟಿದ್ದೀರಿ ಇಲ್ಲಿ ಬೇರೆಬೇರೆ ಎರಡು ವಿಷಯಗಳಿವೆ ಮೊದಲನೆಯದು, ಬಹಳ ಜವಾಬ್ದಾರಿಯಿಂದ ಅವರು ಈ ನಾಡಿನ ಐದೂವರೆ ಕೋಟಿ ಜನರಿಗೆ ಹೇಳಿರುವ ಮಾತೆಂದರೆ, ಭೂ ಹಗರಣದ ಬಗ್ಗೆ, ಅವರು ಯಾರೇ ಆಗಿರಲಿ, ಮಂತ್ರಿಗಳಿರಲಿ, ಅಧಿಕಾರಿಗಳಿರಲಿ, ರಾಜಕಾರಣಿಗಳಿರಲಿ ಅವರನ್ನು ಸ್ಪೆಷಲ್ ಕೋರ್ಟ್ ಮಾಡಿ ಜೈಲಿಗೆ ಹಾಕುತ್ತೇವೆ ಎಂದು ಹೇಳಿದ್ದಾರೆ ಇದು ಅವರ ಕಮಿಟ್‌ಮೆಂಟ್, ಇದನ್ನು ಅವರು ಮಾಡೇ ಮಾಡುತ್ತಾರೆ ಎರಡನೆಯದು, ಈ ಅಕ್ಕಿ ಹಗರಣಕ್ಕೆ ಸಂಬಂಧಪಟ್ಟಂತೆ ನೀವು ಹೇಳಿದ ಹಾಗೆ ಬಹಿರಂಗ ವಿಚಾರಣೆ ಮಾಡಲು ಅವರೇಕೆ ಹಿಂದು-ಮುಂದು ನೋಡುತ್ತಾರೆ? ಏಕೆಂದರೆ, ಅವರು ಅದಕ್ಕೆ ಪಾರ್ಟಿಯಲ್ಲ ಅವರ ಅಪೇಕ್ಷೆಯೂ ಸಹ ಈ ಹರಣದ ಬಯಲಾಗಬೇಕು ಎನ್ನುವುದಾಗಿದೆ ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾವು, ನೀವು ಸೇರಿ ಅವರಿಗೆ ಕೊಡೋಣ ಆದ್ದರಿಂದ ನೀವು ಹೇಳಿದ ರೀತಿಯಲ್ಲಿ ಈ ಬಗ್ಗೆ ನಿಶ್ಚಿತವಾಗಿ ಬಹಿರಂಗ ವಿಚಾರಣೆ ಮಾಡಿರುವುದಕ್ಕೆ ಮತ್ತು ತಪ್ಪು ಮಾಡಿದಂಥವರಿಗೆ ಜೈಲಿಗೆ ಕಳುಹಿಸಲು ಸಿದ್ಧರಾಮಯ್ಯನವರು ಬದ್ಧರಾಗಿದ್ದಾರೆ, ಅದರಲ್ಲಿ ಯಾವುದೇ

ಅನುಮಾನ ಬೇಡ ಅವರು ಅದನ್ನು ಮಾಡದಿದ್ದರೆ, ನಾಳೆಯ ದಿನ ಅವರು ರಾಜ್ಯದಲ್ಲಿ ಓಡಾಡಲು ಜನ ಬಿಡುವುದಿಲ್ಲ ಅದು ಅವರ ಕಮಿಟ್‌ಮೆಂಟ್ ಅವರು ಜನರಿಗೆ ಕೊಟ್ಟಿರುವ ಭರವಸೆಯದು ನೀವು ಅದನ್ನು ಮಾಡುತ್ತೀರಿ ಎನ್ನುವ ವಿಶ್ವಾಸವನ್ನಿಟ್ಟುಕೊಂಡಿದ್ದೇವೆ ಇಲ್ಲದಿದ್ದರೆ ಏನಾಗುತ್ತದೆ ಎಂದು ಮುಂದೆ ನೋಡೋಣ

ಶ್ರೀ ಸಿದ್ಧರಾಮಯ್ಯ ಮಾನ್ಯ ಅಧ್ಯಕ್ಷರೇ, ನಮಗೆ ವಿಚಾರಗಳಲ್ಲಿ ಯಾವುದೇ ಗೊಂದಲವಿರುವುದಿಲ್ಲ ಯಾವಾಗಲೂ ಸ್ಪಷ್ಟತೆ ಇರತಕ್ಕಂಥವರು ನಾವು ನಿಮಗೇ ಅಂಥ ಗೊಂದಲಗಳು ಯಾವಾಗಲೂ ಅವರಿಸಿಕೊಂಡು ಬಿಟ್ಟಿರುತ್ತವೆ ನಮಗೆ ವಿಚಾರದಲ್ಲಾಗಲೀ, ಸಿದ್ಧಾಂತದಲ್ಲಾಗಲೀ, ಜನರಿಗೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆಯಾಗಲೀ ಗೊಂದಲವಿರುವುದಿಲ್ಲ ನಾವು ಬಹಳ ಸ್ಪಷ್ಟವಾಗಿರತಕ್ಕಂಥವರು ಹಾಗಾಗಿ, ನಾವು ಜನರಿಗೆ ಏನು ಹೇಳಿದ್ದೇವೆ, ಜನರು ಏನು ಆದೇಶ ಕೊಟ್ಟಿದ್ದಾರೆ, ಅದರಂತೆ ನಾವು ನಡೆದುಕೊಳ್ಳತಕ್ಕಂಥಾದ್ದನ್ನು ಮಾಡುತ್ತೇವೆ ಅದರ ಬಗ್ಗೆ ಸಂಶಯ ಇಟ್ಟುಕೊಳ್ಳಬೇಕಾದಂಥ ಅಗತ್ಯವಿಲ್ಲ ಯಾರು ತಪ್ಪಿತಸ್ಥರಿದ್ದಾರೆ, ಅವರಿಗೆ ಕಾನೂನು ಚೌಕಟ್ಟಿನಲ್ಲಿ ಯಾವ ರೀತಿ ಶಿಕ್ಷೆ ಕೊಡಿಸಲು ಸಾಧ್ಯವಾಗುತ್ತದೆ, ಅದನ್ನು ಮಾಡುತ್ತೇವೆ ಯಾರು ಅಪರಾಧಿಗಳೆಂದು ತೀರ್ಮಾನವಾಗುತ್ತದೆ, ಅವರ ಬಗ್ಗೆ ಕಾನೂನು ಏನು ಹೇಳುತ್ತದೆ ಆ ರೀತಿ ನಡೆದುಕೊಳ್ಳಲು ನಾವು ಹಿಂದೆ ಸರಿಯುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ ಬಹಳ ಸಂತೋಷ ತಾವು ತೀರ್ಮಾನವನ್ನು ಯಾವಾಗ ಹೇಳುತ್ತೀರಿ ಎಂದು ನಾವು ನೋಡುತ್ತೇವೆ ನಾನು ಏನು ಹೇಳುತ್ತೇನೆಂದರೆ, ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಅಧಿಕಾರಿಗಳು ತಪ್ಪು ಮಾಡಿದ್ದರೆ, ಅವರಿಗೆ ಶಿಕ್ಷೆಯಾಗಬೇಕು ಯಾವ ಗಮನವೂ ಇಲ್ಲದೇ, ತಕ್ಷಣ ಜಿಲ್ಲಾಧಿಕಾರಿಗಳಿಗೆ ಶಿಕ್ಷೆಯಾಗಬೇಕು ರಾಜ್ಯ ಮಟ್ಟದ ಉನ್ನತ ಅಧಿಕಾರಿಗಳ್ಯಾರಿದ್ದಾರೆ, ಅವರ ಬಗ್ಗೆ ತನಿಖೆಯಾಗಬೇಕು ಅಂತಿಮವಾಗಿ ಆವತ್ತಿನ ಸರ್ಕಾರದ ಬಗ್ಗೆ ವಿಚಾರಣೆ ಆಗಬೇಕು ನಾನು ಅದನ್ನೇ ಮತ್ತೆಮತ್ತೆ ಒತ್ತಿಒತ್ತಿ ಹೇಳುತ್ತಿದ್ದೇನೆ ಮುಖ್ಯ ಮಂತ್ರಿಗಳೂ ಸೇರಿದಂತೆ 49 ಜನ ಮಂತ್ರಿಗಳಿದ್ದಂಥ ಆವತ್ತಿನ ಸರ್ಕಾರದಲ್ಲಿದ್ದಂಥ 31 ಜನ ಮಂತ್ರಿಗಳು ಸೋತರು ಎಂದರೆ ಆ ಸರ್ಕಾರ ಆಡಳಿತದಲ್ಲಿ ವಿಫಲವಾಯಿತು, ಆಡಳಿತದಲ್ಲಿ ಭ್ರಷ್ಟಾಚಾರ ನಡೆಯಿತು, ಆಡಳಿತ ಸಂಪೂರ್ಣವಾಗಿ ಬಿದ್ದುಹೋಯಿತು, ಅಲ್ಲಿ ಆಡಳಿತ ನಡೆದೇ ಇಲ್ಲ, ನಾಲ್ಕೂವರೆ ವರ್ಷಗಳ ಕಾಲ ಕೃಷ್ಣಾರವರ ಆಡಳಿತ ಸಂಪೂರ್ಣವಾಗಿ ಕೊಚ್ಚಿ ಹೋಯಿತು ಈ ರಾಜ್ಯದ ಜನತೆಗೆ ಆ ಆಡಳಿತದಿಂದ ಏನೂ ಪ್ರಯೋಜನವಾಗಲಿಲ್ಲ ಬಹಿರಂಗಗೊಂಡಿರುವುದು ಇದೊಂದೇ ಪ್ರಕರಣ ಇಂಥ ನೂರಾರು ಪ್ರಕರಣಗಳು ನಾಲ್ಕೂವರೆ ವರ್ಷಗಳ ಕಾಲ ನಡೆದವು ಆದ್ದರಿಂದ ನಾನು ತಮಗೆ ಹೇಳುವುದೇನೆಂದರೆ, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ ಬಹಿರಂಗ ವಿಚಾರಣೆಯನ್ನು ನಡೆಸಿ ಮಾಜಿ ಮುಖ್ಯಮಂತ್ರಿ ಎಸ್ ಎಂ ಕೃಷ್ಣರವರಿಂದ ಹಿಡಿದು ಅವರ ಎಲ್ಲಾ ಸಚಿವರನ್ನು ಕಟಕಟೆಯಲ್ಲಿ ನಿಲ್ಲಿಸಲೇಬೇಕು ಈ ವಿಚಾರದಲ್ಲಿ ಬಹಿರಂಗವಾಗಿ ವಿಚಾರಣೆ ನಡೆಯಲೇಬೇಕು, ಅದನ್ನು ಈ ರಾಜ್ಯದ ಜನತೆ ನೋಡಲೇಬೇಕು ಆ ರೀತಿ ಮಾಡದಿದ್ದರೆ ಸುಮ್ಮನೆ ನಾಟಕೀಯವಾಗಿ 4 ಜನ ಗಮಾಸ್ತರನ್ನು ಮನೆಗೆ ಕಳುಹಿಸುವುದರಿಂದ ಪ್ರಯೋಜನ ಆಗುವುದಿಲ್ಲ ಆ ಧೈರ್ಯ ಇದ್ದರ ಕೇಂದ್ರ ಸರ್ಕಾರಕ್ಕೆ ತಾವು ಬರೆದು ಒಬ್ಬ ನ್ಯಾಯಾಧೀಶರ ಆಯೋಗವನ್ನು ರಚನೆ ಮಾಡಿ ಮಂತ್ರಿಗಳನ್ನು ವಿಚಾರಣೆ ಮಾಡುವುದಕ್ಕೆ ನಾವು ತಯಾರಾಗಿದ್ದೇವೆಂದು ಈ ಸದನದಲ್ಲಿ ನಿರ್ಣಯವನ್ನು ಮಾಡಿ

ಆಯೋಗಕ್ಕೆ ಆಹ್ವಾನವನ್ನು ತಾವು ಮಾಡಬೇಕು ಹಾಗೆ ಮಾಡಿದಾಗ ರಾಜ್ಯದ ಜನತೆ ನಿಮ್ಮನ್ನು ಒಪ್ಪುತ್ತಾರೆ ನಿಮ್ಮ ಬಗ್ಗೆ ಶಹಭಾಸ್‌ಗಿರಿ ಕೊಡುತ್ತಾರೆ ಅದು ಇಲ್ಲವೆಂದಾದರೆ ನೀವು ಇಬ್ಬರೂ ಒಂದಾಗಿದ್ದೀರಿ ನೀವೂ ಕೂಡ ಭ್ರಷ್ಟಾಚಾರದಲ್ಲಿ ಪಾಲುದಾರರಾಗುತ್ತೀರಿ, ಚುನಾವಣೆಯಲ್ಲಿ ಜನತೆಗೆ ನೀವು ಮೋಸದ ಮಾತನ್ನು ಹೇಳಿದ್ದೀರಿ ಎನ್ನತಕ್ಕಂಥ ಹಣೆಪಟ್ಟಿಯನ್ನು ಇಟ್ಟುಕೊಳ್ಳುತ್ತೀರಿ ಎನ್ನತಕ್ಕಂಥ ಮಾತನ್ನು ತಮಗೆ ನೇರವಾಗಿ ಹೇಳಿ, ಬಹಿರಂಗ ವಿಚಾರಣೆಗೆ ಈ ಸರ್ಕಾರ ಒಪ್ಪಲೇಬೇಕು ಇದು ಒಂದು ನಡೆಯಲಿ ಹಿಂದಿನ ಇತಿಹಾಸದಲ್ಲಿ ಇಬ್ಬರು ಮುಖ್ಯ ಮಂತ್ರಿಗಳ ಮೇಲೆ ವಿಚಾರಣೆ ನಡೆದಿದೆ ಅದರಲ್ಲಿ ಒಬ್ಬರು ಶ್ರೀ ರಾಮಕೃಷ್ಣ ಹೆಗಡೆಯವರು ಮತ್ತೊಬ್ಬರು ಮಾನ್ಯ ದೇವರಾಜು ಅರಸು ಅವರು ಇಬರಿಬ್ಬರ ಮೇಲೆ ಬಹಿರಂಗ ವಿಚಾರಣೆ ನಡೆದಿದೆ ಹಾಗೆಯೇ ಈ ಅಕ್ಕಿ ಹಗರಣ ಸಾಮಾನ್ಯವಾದುದಲ್ಲ ಇದು ಬಹಳ ದೊಡ್ಡ ಹಗರಣ ಬಡವರ ಕಲ್ಯಾಣಕ್ಕೆ ಕೊಟ್ಟಿರುವಂಥದ್ದು ಬಡವರ ಹೊಟ್ಟಿಗೆ ಇವರು ಹೊಡೆದಿದ್ದಾರೆ ಪಾಪದ ಕೆಲಸವನ್ನು ಮಾಡಿದ್ದಾರೆ ಮೋಸವನ್ನು ಮಾಡಿದ್ದಾರೆ ಶ್ರೀ ಕೃಷ್ಣರವರ ಸರ್ಕಾರ ಬಹಿರಂಗ ವಿಚಾರಣೆಗೆ ತಯಾರಾಗಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ ಕುಡುವನಹಳ್ಳಿ (ಕೃಷಿ ಮತ್ತು ತೋಟಗಾರಿಕೆ ಸಚಿವರು) ಮಾನ್ಯ ಅಧ್ಯಕ್ಷರೆ, ಬಹಿರಂಗ ಶಿಕ್ಷೆ ಈಗಾಗಲೇ ಆಗಿದೆ ಆಂಧ್ರಪ್ರದೇಶಕ್ಕೆ ಕೇಂದ್ರದಿಂದ 44 ಲಕ್ಷ ಟನ್ ಅಕ್ಕಿಯನ್ನು ಏನು ಕೊಟ್ಟರು ಅಲ್ಲಿ ಜನತೆ 45ಜನ ಶಾಸಕರನ್ನು ಮಾತ್ರ ಎಲೆಕ್ಟ್ ಮಾಡಿದರು ನಮ್ಮ ರಾಜ್ಯಕ್ಕೆ 11 ಲಕ್ಷ ಟನ್ ಅಕ್ಕಿಯನ್ನು ಏನು ಕೊಟ್ಟಿದ್ದರು, ಇಲ್ಲಿ ಕೂಡ 65ಕ್ಕೆ ಇಳಿಸಿದ್ದಾರೆ ಶಿಕ್ಷೆ ಈಗಾಗಲೇ ಆಗಿಹೋಗಿದೆ ನೀವು ಹೇಳುವ ಬಹಿರಂಗ ಶಿಕ್ಷೆ ಈಗಾಗಲೇ ಆಗಿಹೋಗಿದೆ ಇನ್ನು ಕಾನೂನಿನಲ್ಲಿ ಏನು ಶಿಕ್ಷೆ ಇದೆ ಅದು ಆಗಬೇಕಾಗಿದೆ ಅಷ್ಟೆ.

ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸಚಿವರು ಮಾತನಾಡುತ್ತಾ ಬಹಿರಂಗ ಶಿಕ್ಷೆ ಆಗಿಹೋಗಿದೆ ಕಾನೂನಿನ ಶಿಕ್ಷೆ ಎಂದು ಹೇಳಿದ್ದಾರೆ ಸಿ ಒ ಡಿ ಅಧಿಕಾರಿಗಳು ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದರು ಆದರೆ ಅವರಿಗೆ ಸರ್ಕಾರದ ವತಿಯಿಂದ ಬಹಳ ಒತ್ತಡ ಬರುತ್ತಿದೆ ರೈಸ್ ಮಿಲ್ ಮಾಲೀಕರು, ಸರ್ಕಾರಿ ನೌಕರರ ಯಾರ ಹೆಸರನ್ನೂ ಸೇರಿಸಿದರೂ ಅವರ ಅಭ್ಯಂತರವಿಲ್ಲವಂತೆ, ಯಾರು ಆ ರೀತಿ ಹಗರಣದಲ್ಲಿ ಜಿಲ್ಲಾ ಮಾಜಿ ಉಸ್ತುವಾರಿ ಸಚಿವರಿಂದ ಹಿಡಿದು ಯಾರೇ ಇದ್ದರೂ ಅವರನ್ನು ಸಿ ಒ ಡಿ ಅಧಿಕಾರಿಗಳು ಈ ಪಟ್ಟಿಯಲ್ಲಿ ಸೇರಿಸಿಕೊಳ್ಳದಂತೆ ನೋಡಿಕೊಳ್ಳುವಂಥ ಪ್ರಯತ್ನ ನಡೆಸಿದ್ದಾರೆ ಅಂತಹ ಒತ್ತಡ ಬರುತ್ತಿದೆ. ಅದಕ್ಕಾಗಿಯೇ ಸಿ.ಒ ಡಿ ಅಧಿಕಾರಿಗಳು ಈಗಾಗಲೇ ಅವರ ವರದಿಯಲ್ಲಿ ಅವರ ಹೇಳಿಕೆಗಳಲ್ಲಿ ಉನ್ನತ ಅಧಿಕಾರಿಗಳು ಶಾಮೀಲು ಆಗಿದ್ದಾರೆ ರಾಜಕಾರಣಿಗಳು ಶಾಮೀಲು ಆಗಿದ್ದಾರೆಂದು ಹೇಳುತ್ತಾರೆಯೇ ಹೊರತು ಯಾರ ಹೆಸರನ್ನೂ ಬಹಿರಂಗ ಮಾಡುವಂಥ ಧೈರ್ಯ ಮಾಡಿಲ್ಲ ಅದಕ್ಕಾಗಿಯೇ ಸಿ ಒ ಡಿ ಅಧಿಕಾರಿಗಳಿಗೆ ಅಡ್ಡಿಯಾಗುತ್ತಿದೆ ಸಾರ್ವಜನಿಕವಾಗಿ ಜಂಟಿ ಸದನದ ಸಮಿತಿಯಾಗಿ ತನಿಖೆಯಾದರೆ ಈ ಎಲ್ಲಾ ಸತ್ಯ ಹೊರಬರುತ್ತದೆ ಮತ್ತು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಈಗಾಗಲೇ ಸಿ.ಒ ಡಿ ಅಧಿಕಾರಿಗಳಿಗೆ ಒತ್ತಡ ಮಾಡುತ್ತಿದ್ದಾರೆ

ಶ್ರೀ ಎ ಕೃಷ್ಣಪ್ಪ (ವರ್ತೂರು) ಶ್ರೀ ವಾಟಾಳ್‌ರವರೆ, ನೀವು ಸೋತಾಗಲೆಲ್ಲ ಹಗರಣಗಳು ಇದ್ದೇ ಸೋತರೇ ಹೇಗೆ?

ಶ್ರೀ ವಾಟಾಳ್ ನಾಗರಾಜ್ ನಾನು ಮುಖ್ಯಮಂತ್ರಿಯೂ ಆಗಿರಲಿಲ್ಲ ಸಚಿವನೂ ಆಗಿರಲಿಲ್ಲ

ಶ್ರೀ ಎ ಕೃಷ್ಣಪ್ಪ ಎಂ ಎಲ್ ಎ ಆಗಿದ್ದರಲ್ಲಾ ಎಂ ಎಲ್ ಎ ಲೆವೆಲ್‌ನಲ್ಲಿ ಏನಾದರೂ ಹಗರಣಗಳನ್ನು ಮಾಡಿ ಅದನ್ನು ಏನಾದರು ತಣ್ಣಗೆ ಮಾಡುವುದಕ್ಕ ಹೋಗಿದ್ರಾ ಎಂದು ಕೇಳುತ್ತಿದ್ದೇನೆ

ಶ್ರೀ ವಾಟಾಳ್ ನಾಗರಾಜ್ ಎಂ ಎಲ್ ಎ ಗೆ ಒಂದು ಕಸಪೊರಕೆಯೂ ಕೂಡ ಬರುವುದಿಲ್ಲ ತಾವು ಮಂತ್ರಿಯಾಗಿದ್ದವರು, ರಾಜ್ಯದ ಆಡಳಿತ ನಡೆಸಿದವರು, ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರ ನಿಮ್ಮ ಕೈಯಲ್ಲಿ ಇದ್ದದ್ದು ಈ ರಾಜ್ಯ ನಿಮ್ಮ ಕೈಯಲ್ಲಿ ಇದ್ದದರಿಂದ ಹಗರಣಗಳೆಲ್ಲಾ ನಿಮ್ಮ ಸುತ್ತ ಇದ್ದವು. ಅದರಲ್ಲಿ ಬದಲಾವಣೆ ಏನೂ ಇಲ್ಲ

†**ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ)** ಮಾನ್ಯ ಅಧ್ಯಕ್ಷರೆ, ಈ ವಿಚಾರದ ಬಗ್ಗೆ ಸಾಕಷ್ಟು ವಿಷಯಗಳನ್ನು ಈಗಾಗಲೇ ಮಾತನಾಡಿರತಕ್ಕಂಥ ಮುಖಂಡರುಗಳೆಲ್ಲಾ ಮಾತನಾಡಿದ್ದಾರೆ ಈ ಕೂಲಿಗಾಗಿ ಕಾಳು ಯೋಜನೆ ಮೂಲತ ಕೇಂದ್ರ ಸರ್ಕಾರ ರೂಪಿಸಿದಂಥ ಯೋಜನೆಯಾಗಿದೆ ಆ ಕೇಂದ್ರ ಸರ್ಕಾರ ಈ ಯೋಜನೆಯನ್ನು ರೂಪಿಸಿವಾಗ ಅದರ ಹಿಂದೆ ಇದ್ದಂಥ ಉದ್ದೇಶ ಏನು ಎನ್ನತಕ್ಕಂಥದ್ದನ್ನು ನಾವು ಬಹಳ ಮುಖ್ಯವಾಗಿ ತಿಳಿಯಬೇಕು ಅಂದಿನ ಮಾನ್ಯ ಪ್ರಧಾನ ಮಂತ್ರಿಗಳು Food Corporation of Indiaದ godownಗಳಲ್ಲಿ ಸಾಕಷ್ಟು ಆಹಾರಧಾನಗಳ ದಾಸ್ತಾನು ಇದೆ, ಅದನ್ನು ಈಗ ಹಂಚಿಕೆ ಮಾಡತಕ್ಕಂಥ ಕೆಲಸ ಆಗಬೇಕು, ಬರಗಾಲ ಇರತಕ್ಕಂಥ ಪ್ರದೇಶದಲ್ಲಿ ಬಡವರಿಗೆ ಆ ಕಾಳುಗಳನ್ನು ಕೊಟ್ಟು ಕೆಲಸಗಳನ್ನು ಮಾಡಿಸಿ ಎಂಬ ಉದ್ದೇಶದಿಂದ ಈ ಯೋಜನೆಯನ್ನು ರೂಪಿಸಿದ್ದು ಎಂದು ಹೇಳಿದರು ಈ ಯೋಜನೆಯನ್ನು ರಾಜ್ಯ ಸರ್ಕಾರ ರೂಪಿಸಿದಂಥದ್ದು ಅಲ್ಲ ಮೂಲತ ಕೇಂದ್ರ ಸರ್ಕಾರ ರೂಪಿಸಿದಂಥ ಯೋಜನೆ ಈ ಯೋಜನೆಯನ್ನು ರೂಪಿಸಿದಂಥ ಅಧಿಕಾರಿಗಳು ಏನಿದ್ದಾರೆ, ಅವರಿಗೆ ಈ ದೇಶದ ವಾಸ್ತವತೆ ಗೊತ್ತಿಲ್ಲ ಈ ದೇಶದ ಆರ್ಥಿಕ, ಸಾಮಾಜಿಕ ಪರಿಸ್ಥಿತಿ ಗೊತ್ತಿಲ್ಲದೇ ಇರತಕ್ಕಂಥ, ಹವಾ ನಿಯಂತ್ರಣದ ಕೊರಡಿಯಲ್ಲಿರತಕ್ಕಂಥ ಅಧಿಕಾರಿಗಳು ರೂಪಿಸಿರತಕ್ಕಂಥ ಯೋಜನೆ ಇದಾಗಿದೆ ಇದನ್ನು ಏಕೆ ಹೇಳುತ್ತಿದ್ದೇನೆಂದರೆ, "ಕೂಲಿಗಾಗಿ ಕಾಳು" ಎಂಬ ಯೋಜನೆಯನ್ನು ರೂಪಿಸಿದಂಥ ಅಧಿಕಾರಿಗಳು ಆ ಕಾಳನ್ನು ಕೂಲಿ ಮಾಡುವವರಿಗೆ ಯಾವಾಗ ಕೊಡಬೇಕು ಎನ್ನುವಂಥದ್ದನ್ನು ಮಾತ್ರ ಅವರು ನಿಗದಿ ಮಾಡಲಿಲ್ಲ ಕೂಲಿಗೆ ಬರತಕ್ಕಂಥ ಜನ ಯಾರು? ಹೊಟ್ಟೆಗೆ ಒಂದು ಹೊತ್ತಿನ ಊಟಕ್ಕೆ ಗತಿ ಇಲ್ಲದಂಥವರು, ಗಂಜಿ ಮಾಡುವುದಕ್ಕೆ ಇಲ್ಲದಂಥವರು ಪ್ರತೀ ದಿವಸ ಕೂಲಿ ಮಾಡಿ ಆವತ್ತು ಬಂದದ್ದನ್ನು ತೆಗೆದುಕೊಂಡು ಹೋಗಿ ಜೀವನ ಮಾಡತಕ್ಕಂಥ ಜನ ಕೃಷಿ ಕಾರ್ಮಿಕರು ಯಾರಿದ್ದಾರೆ ಅವರು ಆ ಕೆಲಸಕ್ಕೆ ಬರತಕ್ಕಂಥವರು ಅವರು ಕೆಲಸ ಮಾಡಿ ಸಂಜೆ ಹೋಗಿ ಅವರಿಗೆ ತಿನ್ನಲಿಕ್ಕೆ ಬೇಕು ಮನೆಗೆ ಹೋಗಬೇಕಾದರೆ ಅವರು ಬೇಬಿನಲ್ಲಿ ಹಣ ಆದರೂ ಇಟ್ಟುಕೊಂಡು ಹೋಗಬೇಕು ಅಥವಾ ಕಾಳನ್ನಾದರೂ ಚೀಲದಲ್ಲಿ ಇಟ್ಟುಕೊಂಡು ಹೋಗಬೇಕು ಇಲ್ಲದಿದ್ದರೆ ಅವರಿಗೆ ಊಟ ತಿನ್ನಲಿಕ್ಕೆ ಆಗುವುದಿಲ್ಲ ಅಂಥ ಜನ ಕೂಲಿಗೆ ಬರುವಂಥ ಸಂದರ್ಭದಲ್ಲಿ ಅವರಿಂದ ಬೆಳಗಿನಿಂದ ಸಾಯಂಕಾಲದವರೆಗೆ ಕೆಲಸ ಮಾಡಿಸಿಕೊಂಡು ಸಾಯಂಕಾಲ ಬರೀ ಕೈಲಿ ಕಳುಹಿಸಿದರೆ ನೀವು ಮಾಡಿದಂಥ ಯೋಜನೆಯಲ್ಲಿ ಯಾವುದೇ ರೀತಿಯಾದಂಥ ಅರ್ಥವೂ ಇಲ್ಲ ಮತ್ತು ಅದು ಅರ್ಥಹೀನವಾದ ಯೋಜನೆ ಆಗಿಬಿಡುತ್ತದೆ ಆದರೆ ಇಲ್ಲಿ ಆಗಿದ್ದು ಏನೆಂದರೆ, ಇದು ಕೂಲಿಗಾಗಿ ಕಾಳು ಯೋಜನೆ ಅಲ್ಲ ಚುನಾವಣೆ ಹತ್ತಿರ ಬರುತ್ತಾ ಇತ್ತು ಕಂಟ್ರಾಕ್ಟರುಗಳಿಗಾಗಿ ಇವರು 'ಕಾಳು

ಯೋಜನೆ ಮಾಡಿದರು ಇದು ಬಡವರಿಗಲ್ಲ ಏಕೆಂದರೆ, ಕೂಲಿ ಮಾಡುವವನಿಗೆ, ಅವನಿಗೆ ಸಂಜೆ ಊಟ ಮಾಡಲಿಕ್ಕೆ ಹಣ ಬೇಕು ಆದರೆ ನೀವು ಅಕ್ಕಿಯನ್ನು ಸರಬರಾಜು ಮಾಡಲಿಲ್ಲ ಇದು ಹಲವಾರು ಜನರಿಗೆ ಗೊತ್ತಿಲ್ಲ ಇವತ್ತಿಗೂ ಕೂಡ ಕೆಲವು ತಾಲ್ಲೂಕುಗಳಲ್ಲಿ ಕೆಲಸ ಮುಗಿದು 6 ತಿಂಗಳು ಆದರೂ ಅವರಲ್ಲಿ ಅರ್ಧ ಭಾಗ ಜನರಿಗೆ ಅಕ್ಕಿಯನ್ನು ಸರಬರಾಜು ಮಾಡಲಿಕ್ಕೆ ನಿಮ್ಮ ಕೈಯಿಂದ ಆಗಲಿಲ್ಲ ಅಂಧವರು ಪ್ರತಿ ದಿವಸ ಕಾಳನ್ನು ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಯಾವ ಆಧಾರದ ಮೇಲೆ ಈ ಯೋಜನೆಯನ್ನು ರೂಪಿಸಿದರು? ಇದನ್ನು ಯಾರು ರೂಪಿಸಿದರು? ಈ ಅವೈಜ್ಞಾನಿಕವಾದಂಧ ಯೋಜನೆಯನ್ನು ತಂದು ಕಂಟ್ರಾಕ್ಟರುಗಳಿಗೆ ಲೂಟಿ ಹೊಡೆಯಲಿಕ್ಕೆ ಹಾಕಿದರಫ? ಆ ಕಂಟ್ರಾಕ್ಟರುಗಳು ಅಧಿಕಾರಿಗಳು ಪಾಲು ಹಂಚಿಕೊಂಡರೋ? 'ಕೋಟಿ ಬೆಲ್ಲ ತಿಂದುಬಿಟ್ಟು ಮೇಕೆಯ ಮುಖಕ್ಕೆ ಹಾಕಿದ ಹಾಗೆ' ಎಂದು ನಮ್ಮಲ್ಲಿ ಒಂದು ಗಾದೆ ಹೇಳುತ್ತಾರೆ

ಶ್ರೀ ಕೆ ಆರ್ ರಮೇಶ್‌ಕುಮಾರ್ (ಶ್ರೀನಿವಾಸಪುರ) ಕಂಟ್ರಾಕ್ಟರ್ ಎಂದರೆ ಅವನಿಗೆ ರಿಜಿಸ್ಟ್ರೇಷನ್ ಇರುತ್ತದೆ, ಅವನಿಗೆ ವಿಳಾಸ ಇರುತ್ತದೆ, ಅವನೇನಾದರೂ ತಪ್ಪು ಮಾಡಿದರೆ ಅವನಿಗೆ ನೀವು punish ಮಾಡಬಹುದು ಆದರೆ ಈ ಹಗರಣದಲ್ಲಿರುವವರು ಕಂಟ್ರಾಕ್ಟರ್ಸೇ ಅಲ್ಲ They are brokers ನಿಮ್ಮ mediocres ಎಂದು ಕರೆಯಬಹುದು ದಳ್ಳಾಳಿಗಳು ಎಂದು ಕರೆಯಬಹುದು ಇವರಿಗೆ ಅಡ್ರೆಸ್ ಕೂಡ ಇಲ್ಲ You cannot initiate action also against them

ಶ್ರೀ ಜಿ ವಿ ಶ್ರೀರಾರೆಡ್ಡಿ ಮಾನ್ಯ ಅಧ್ಯಕ್ಷರೇ, ಶ್ರೀ ರಮೇಶ್ ಕುಮಾರ್‌ರವರು ಹೇಲಿದ್ದು ಸತ್ಯ ಇದೆ ಅವರು licensed ಕಂಟ್ರಾಕ್ಟರುಗಳು ಅಲ್ಲ ಯಾವುದೇ ರೀತಿಯಲ್ಲಿ ಸರ್ಕಾರಕ್ಕೆ ಟ್ಯಾಕ್ಸ್‌ನ್ನು ಕಟ್ಟತಕ್ಕಂಧ ಕಂಟ್ರಾಕ್ಟರುಗಳು ಅವರಲ್ಲ ಈ ಕಂಟ್ರಾಕ್ಟರುಗಳು ಯಾರೆಂದರೆ, ರಾಜಕೀಯ ಪಕ್ಷಗಳ ಕಾರ್ಯಕರ್ತರಿಗೆ ಆ ಕೆಲಸವನ್ನು ಕೊಟ್ಟು ಅವರು ಕೂಲಿಯವರು ಹತ್ತಿರ ಮಾಡಿಸಿ ಅವರಿಗೆ ವಾರಕ್ಕೆ ಒಂದು ದಿವಸ ಕೂಡ ಹಣವನ್ನು ಕೊಡದೆ, ಇವರು ಕಾಳನ್ನು ಸಪ್ಯೆ ಮಾಡದೆ ಇದ್ದರೆ ಆವಾಗ ಏನಾಗುತ್ತದೆ ಎನ್ನತಕ್ಕಂಧದ್ದನ್ನು minimum common sense ಇರತಕ್ಕಂಧ ಯಾರಾದರೂ ಆಲೋಚನೆ ಮಾಡದೆರೆ ಗೊತ್ತಾಗುತ್ತದೆ ಅವನು ಹಗಲೆಲ್ಲಾ ಕೆಲಸ ಮಾಡಿರುತ್ತಾನೆ, ನೀವು ಕಾಳು ಸಪ್ಯೆ ಮಾಡಲಿಲ್ಲ, ಅಂದರೆ ಕೂಲಿ ಮಾಡಿದವರು ಏನಾಗಬೇಕು? ನನಗೆ ಊಟ ಮಾಡಲಿಕ್ಕೆ ದುಡ್ಡು ಇಲ್ಲ, ನಾನು ಕೂಲಿ ಮಾಡಿದ್ದೇನೆ, ನನಗೆ ಹಣ ಕೊಡು ಎಂದು ಈ ಬ್ರೋಕರನ್ನು ಹಿಡಿದುಕೊಳ್ಳುತ್ತಾನೆ ಬೇರೆ ದಾರಿ ಇಲ್ಲ ಅವನು ಹಣ ಕೊಡಲೇಬೇಕು ಇವರು ಅಕ್ಕಿ ಕೊಡುತ್ತೇವೆ ಅಕ್ಕಿ ಕೊಡುತ್ತೇವೆಂದು ಮತಿನಲ್ಲಿ ಏನೇ ಹೇಳಬಹುದು, ಅದು ಸಾಧ್ಯವಿಲ್ಲ ಅಕ್ಕಿಯನ್ನು ತಂದು ಕೆಲಸವನ್ನು ಮಾಡತಕ್ಕಂಧ ಸ್ಪಾಟ್‌ನಲ್ಲಿ ವಿತರಣೆ ಮಾಡತಕ್ಕಂಧ ಯೋಜನೆಯನ್ನು ರೂಪಿಸಿದ್ದೀರಾ? ಸ್ಪಾಟ್‌ನಲ್ಲಿ ಅಕ್ಕಿಯನ್ನು ವಿತರಣೆ ಮಾಡತಕ್ಕಂಧ ವ್ಯವಸ್ಥೆಯನ್ನು ನೀವು ಮಾಡಲಿಲ್ಲ

ಮಾನ್ಯ ಸದಸ್ಯರು ಶ್ರೀ ರೆಡ್ಡಿಯವರೆ, ಕಾರ್ಯಕರ್ತರು brokers ಅಲ್ಲ ಅಲ್ಲಿ ನಮಗೆ ಗೆಲ್ಲಿಸಿರತಕ್ಕಂಧ ಕಾರ್ಯಕರ್ತರು brokers ಅಲ್ಲ ದಯವಿಟ್ಟು ಈ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು

ಶ್ರೀ ಜಿ.ವಿ ಶ್ರೀರಾಮರೆಡ್ಡಿ ಇವರಿಗೆ ಆ ಸಮಸ್ಯೆ ಏಕೆ ಆಯಿತೆಂದು ನನಗೆ ಅರ್ಥವಾಗುತ್ತಿಲ್ಲ ರಾಜಕೀಯ ಪಕ್ಷದ ಕಾರ್ಯಕರ್ತರು ಎಂದು ಹೇಳಿದ್ದೇನೆಯೇ ಹೊರತು ಅವರನ್ನು ನಾನು brokers ಎಂದು ಹೇಳಲಿಲ್ಲ ನೀವು ಏಕೆ ಅದನ್ನು ಮೈಮೇಲೆ ಹಾಕಿಕೊಳ್ಳುತ್ತೀರಾ? ಆ ಸ್ಥಳದಲ್ಲಿ ಕಾಳುಗಳನ್ನು ವಿತರಣೆ ಮಾಡತಕ್ಕಂಧ ಯೋಜನೆಯನ್ನು ರೂಪಿಸಿಲಿಲ್ಲವೆಂದರೆ ಆಗ ಏನಾಗುತ್ತದೆ ಎನ್ನುವುದನ್ನು

ನೀವು ಆಲೋಚನೆ ಮಾಡಿ ಕೂಲಿ ಮಾಡಿದವನು ಹೊಟ್ಟೆ ಹಸಿದುಕೊಂಡು ಇರುವುದಕ್ಕೆ ಆಗುವುದಿಲ್ಲ ಈ ಕೆಲಸ ಮಡಿಸಿದವನು ಸಾಲಸೋಲ ಮಾಡಿ ಅವನಿಗೆ ಹಣ ಕೊಟ್ಟಿರುತ್ತಾನೆ ಇವರು ಅಕ್ಕಿ ಕೊಡಲಿಲ್ಲ ಒಂದು ತಿಂಗಳಿಗೆ ಅಕ್ಕಿಯನ್ನು ಕೊಡುತ್ತಾರೆ, 15 ದಿವಸಕ್ಕೆ ಒಂದು ಸಲ ಅಕ್ಕಿಯನ್ನು ಕೊಡುತ್ತಾರೆ, 2 ತಿಂಗಳಿಗೊಮ್ಮೆ ಕೊಡುತ್ತಾರೆ, ಆವಾಗ ಆ ಕಂಟ್ರಾಕ್ಟರು ಏನು ಮಾಡಬೇಕು? ಆವಾಗ ಅಕ್ಕಿ ತೆಗೆದುಕೊಂಡು ಹೋದರೆ ಕೂಲಿ ಮಾಡಿರತಕ್ಕಂಧವನು ತೆಗೆದುಕೊಳ್ಳುವುದಿಲ್ಲ ಅವನಿಗೆ ಅಕ್ಕಿ ಬೇಕಾಗಿಲ್ಲ ಇದು ಮೂಲತಃ ಇರತಕ್ಕಂಧ ಮೊದಲನೇ ಪ್ರಶ್ನೆ. ಎರಡನೆಯ ಪ್ರಶ್ನೆ ಏನೆಂದರೆ, ಅಕ್ಕಿಯನ್ನು ಇಷ್ಟು ಪರ್ಸೆಂಟ್ ಎಂದು ನಿಗದಿ ಮಾಡಿದ್ದೀರಿ 60 ಪರ್ಸೆಂಟ್ ಅಕ್ಕಿ ಕೊಡಬೇಕು ಉಳಿದದ್ದು ಹಣ ಕೊಡಬೇಕೆಂದು ಹೇಳಿದ್ದೀರಿ 60 ಪರ್ಸೆಂಟ್ ಅಕ್ಕಿಯನ್ನು ಕೂಲಿ ಕಾರ್ಮಿಕರಿಗೆ ಕೊಡಬೇಕೆಂದು ಹೇಳಿದಂಧವರು ಅಕ್ಕಿಯನ್ನು ಸಪ್ಲೈ ಮಡಲಿಲ್ಲ, 40 ಪರ್ಸೆಂಟ್ ಹಣ ಕೊಡಬೇಕೆಂದು ಹೇಳಿದವರು ಹಣವನ್ನೂ ರಿಲೀಸ್ ಮಾಡಲಿಲ್ಲ

12 40 ಪಿಎಂ

ಆವಾಗ ಏನು ಆಗುತ್ತದೆ? ಯಾರೇ ಕೆಲಸ ಮಾಡಿದರೂ ಕುಡ ಅವನು ಸಾಲಗೀಲ ಮಾಡಿ ಅವನಿಗೆ ಹಣ ಕೊಟ್ಟಿರುತ್ತಾನೆ ಅಕ್ಕಿ ಬಂದಾಗ ಅದನ್ನು ತೆಗೆದುಕೊಂಡು ಹೋಗಿ ಮಾರಲೇಬೇಕು ಇದು ಅನಿವಾರ್ಯ ಪರಿಸ್ಥಿತಿ ಈ ಅನಿವಾರ್ಯ ಪರಿಸ್ಥಿತಿಯನ್ನು ಸೃಷ್ಟಿ ಮಡಿದಂಧವರು ಯಾರು? ಯಾರು ಈ ಯೋಜನೆ ರೂಪಿಸಿದ್ದಾರೋ ಅವರೇ ಮಾಡಿರತಕ್ಕಂಧದ್ದು ಇದರ ಹಿಂದೆ ಇರತಕ್ಕಂಧ ಕುತಂತ್ರ ಬಯಲಾಗಬೇಕು ಇದು ಇದರಲ್ಲಿರುವ ದೋಷ, ಈ ದೋಷವನ್ನು ಹುಡುಕದೆ ನಾವು ಏನು ಮಾತನಾಡಿದರೂ ಪ್ರಯೋಜನವಿಲ್ಲ ಯಾಜನೆ ರೂಪಿಸಿರುವುದರಲ್ಲಿಯೇ ದೋಷ ಇರುವ ಸಂದರ್ಭದಲ್ಲಿ ನಾವು ಬೇರೆ ಬೇರೆ ರೀತಿಯಲ್ಲಿ ಸರಿಪಡಿಸುವುದಕ್ಕೆ ಆಗುವುದಿಲ್ಲ ನಾವು ಏನಾದರೂ ಖಾಯಿಲೆ ಬಂದಿದೆ ಎಂದು ಡಾಕ್ಟರ್ ಹತ್ತಿರ ಹೋದರೆ, A real Doctor first has to diagnose the disease otherwise, he cannot treat the disease Even if he treats the disease that cannot be cured, without diagnosing the disease ಆ ರೀತಿಯಾಗಿ ಯೋಜನೆಯಲ್ಲಿ ದೋಷ ಅಡಗಿರುವುದನ್ನು ನಾವಿಂದು ಹುಡುಕಬೇಕಾಗಿದೆ ಆ ಯೋಜನೆ ರೂಪಿಸಿದವರನ್ನು ನಾವಿಂದು ಕಟಕಟೆಯಲ್ಲಿ ನಿಲ್ಲಿಸಬೇಕಾಗಿದೆ ಅದರ ಜೊತೆಯಲ್ಲಿ ಹೋಗಲಿ ಇಷ್ಟೆಲ್ಲಾ ಆದರೂ ಏನಾದರು ಕೆಲಸವಾಗಿದೆಯೇ? ಇಷ್ಟಲ್ಲಾ ದುರುಪಯೋಗ ಆಗಿ ಏನಾದರೂ ಕೆಲಸ ಆಗಿದ್ದರೆ ಅದಕ್ಕಾದರು ನಾವು ಸಂತೋಷಪಡಬಹುದಾಗಿತ್ತು ಎಷ್ಟು ದುರಂತಗಳು ನಡೆದಿವೆ ಎಂದು ಹೇಳಿದರೆ, ಲಕ್ಷಾಂತರ ರೂಪಾಯಿ ಹಣವನ್ನು ಈವನ್ ಮಿಷನ್‌ಗಳಲ್ಲಿ ಕೂಡ ಮಾಡಿಸದೇ ಬಿಲ್‌ಗಳನ್ನು ಡ್ರಾ ಮಾಡಿರತಕ್ಕಂಧ ಉದಾಹರಣೆಗಳು ರಾಜ್ಯದಲ್ಲಿ ಹೇರಳವಾಗಿವೆ. ಲಕ್ಷಾಂತರ ರೂಪಾಯಿಗಳು ಕೆಲಸವನ್ನೂ ಮಾಡದೇ, ಮಿಷನ್‌ಗಳಲ್ಲಿ ಮಾಡಿಸಿದ್ದರೆ ಏನೋ ಒಂದು ಕೆಲಸ ಆಗಿದೆ ಕೆರೆಯಲ್ಲಿ ಹೂಳು ತೆಗಿದಿದ್ದಾರೆ, ಬಹು ಆಕಿದ್ದಾರೆ, ಏರಿಯಾ ಹಾಕಿದ್ದಾರೆಂದಾದರೂ ಸಂತೋಷ ಪಡವಹುದು, ಜನರಿಗೆ ಕೆಲಸ ಕೊಡದಿದ್ದರೂ ಹಾಳಾಗಿ ಹೋಗಲಿ ಕೆಲಸ ಆಗಿದೆ ಎಂದು ಸಂತೋಷ ಪಡವಹುದಾಗಿತ್ತು ಆದಾದರೂ ಕೆಲಸ ನಡೆದಿದೆಯೇ ಎಂದರೆ ಆ ಕೆಲಸವನ್ನೂ ಕೂಡ ನಡೆಯಲಿಕ್ಕೆ ಬಿಡಲಿಲ್ಲ ಬರೀ ಕೆಲಸ ಇಲ್ಲದೆ ಸುಮಾರು ಕಡೆ ಬಿಲ್‌ಗಳನ್ನು ಡ್ರಾ ಮಾಡಿಕೊಂಡಿರುವಂಧ ಪ್ರಕರಣಗಳು ನಮ್ಮ ರಾಜ್ಯದಲ್ಲಿ ನಡೆದಿರುವುದು ನಮ್ಮ ಕಣ್ಣು ಮುಂದೆ ಇದೆ ಆದ್ದರಿಂದ, ಈ ಯೋಜನೆಯಲ್ಲಿರುವ ಯಾವುದಾದರೂ, ಮತ್ತು ಅದರ ಜೊತೆಯಲ್ಲಿ ಮತ್ತೊಂದು ಮುಖ್ಯವಾದ ಅಂಶ ಏನೆಂದರೆ

ಯಾವ ಕೇಮದ್ರ ಸರ್ಕಾರ ಇವರಿಗೆ ಅಕ್ಕಿಯನ್ನು ಸರಬರಾಜು ಮಾಡಿದ್ದರೋ ಅವರಿಗೆ ಇವರು ಲೆಕ್ಕ ಕೊಡಬೇಕು ಅಂದರೆ ಈ ರಾಜ್ಯ ಸರ್ಕಾರಗಳು ಈ ರಾಜ್ಯ ಸರ್ಕಾರಗಳು ಲೆಕ್ಕ ಕೊಡುವ ಸಂದರ್ಭದಲ್ಲಿ, ಇವರು ಉದಾಹರಣೆಗೆ ಕರ್ನಾಟಕ ರಾಜ್ಯದವರು 11 ಲಕ್ಷ ಮೆಟ್ರಿಕ್ ಟನ್‌ಗೆ ನಾವು ಲೆಕ್ಕ ಕೊಟ್ಟಿದ್ದೇವೆಂದು ಹೇಳತಕ್ಕಂಥ ರಿಜಿಸ್ಟ್ರನ್ನು ಸಬ್‌ಮಿಟ್ ಮಡಿದ್ದಾರೆ, ಕೇಂದ್ರ ಸರ್ಕಾರಕ್ಕೆ ಲೆಕ್ಕವನ್ನು ಕೊಟ್ಟಿದ್ದಾರೆ ಯುಟಿಲಿಟಿ ಸರ್ಟಿಫಿಕೇಟ್‌ನ್ನು ಕೊಟ್ಟಿದ್ದಾರೆ ಆ ಯುಟಿಲಿಟಿ ಸರ್ಟಿಫಿಕೇಟ್‌ನ್ನು ಕೇಂದ್ರ ಸರ್ಕಾರ ಕಣ್ಣು ಮುಚ್ಚಿಕೊಂಡು ಅದನ್ನು ಹೇಗೆ ಒಪ್ಪಿತು? ಕೇಂದ್ರ ಸರ್ಕಾರ ಯಾವುದಾದರೊಂದು ಮಾರ್ಗವನ್ನು ಅಥವಾ ಮೆಕಾನಿಸಂ Did the central Government find out any mechanism, whether this utilisation certificate is genuine or not ಅನ್ನುವುದಕ್ಕೆ ಕೇಂದ್ರ ಸರ್ಕಾರ ಏನಾದರೂ ಮೆಕಾನಿಸಂನ್ನು ಫೈಂಡ್‌ಔಟ್ ಮಾಡುತ್ತದೆಯೆ? ಅದೂ ಇಲ್ಲ, ಹಾಗಾದರೆ ಇದರ ಅರ್ಥವೇನು? ಇದು ಜನರನ್ನು ಹಿಪ್ನಾಟೈಸ್ ಮಾಡಲಿಕ್ಕೆ ಅಥವಾ ಛೀಫ್ ಪಾಪ್ಯೂಲ್ಯಾರಿಟಿಗೋಸ್ಕರ ಸ್ಲೋಗನ್ ಅನ್ನು ಕೊಟ್ಟು ಅಕ್ಕಿಯನ್ನು ಗೋಡಾನ್‌ನಲ್ಲಿಟ್ಟು ಅದು ಹಾಳಾಯಿತು, ಕೆಲಸವೂ ಅಗಲಿಲ್ಲ, ಅದು ಯಾವುದೇ ರೀತಿಯ ಉಪಯೋವಾಗದೆ ಸಾವಿರಾರು ಕೋಟಿ ರೂಪಾಯಿಗಳು ಇಡೀ ದೇಶದಲ್ಲಿ ದುರುಪಯೋಗವಾಗಿವೆ ರಾಜ್ಯದಲ್ಲಿ ಮಾತ್ರವಲ್ಲ ನಮ್ಮ ಸ್ನೇಹಿತರು ಆಂಧ್ರದ ಬಗ್ಗ ಪ್ರಸ್ತಾಪಿಸಿದರು ಆಂಧ್ರದಲ್ಲಿ ಕೆಲವು ಕೆಲಸಗಳು ಆಗಿರುವುದು ಬಿಟ್ಟರೆ ಅಲ್ಲೂ ಕೂಡ ಎಲ್ಲಿಯೂ ನೂರಕ್ಕೆ ನೂರು ಸಂಪೂರ್ಣವಾಗಿ ಉಪಯೋಗವಾಗಿಲ್ಲ ಎಲ್ಲಾ ರಾಜ್ಯಗಳಲ್ಲಿಯೂ ಯಾವ್ಯಾವ ರಾಜ್ಯಗಳಲ್ಲಿ ಕೂಲಿಗಾಗಿ ಕಾಳು ಯೋಚನೆ ಮಾಡಿದ್ದಾರೆ ಆ ಎಲ್ಲಾ ರಾಜ್ಯಗಳಲ್ಲಿಯೂ ದುರುಪಯೋಗವಾಗಿದೆ, ಇದನ್ನು ಮಾನಿಟರ್ ಮಾಡಲಿಕ್ಕೆ ಅಂದಿನ ಕೇಂದ್ರ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವುದನ್ನು ನಾವು ಒಪ್ಪಬೇಕು ಹೀಗಾಗಿ, ಇಂಥ ಸಂದರ್ಭದಲ್ಲಿ ಸದನದ ಎಲ್ಲಾ ಸದಸ್ಯರು ಬೇರೆ ಬೇರೆ ಸಲಹೆಗಳನ್ನು ಕೊಟ್ಟಿದ್ದಾರೆ ಆದರೆ ಇದಕ್ಕೆ ಪರಿಹಾರ ಏನು? ಮೂಲತ ಯೋಜನೆ ರೂಪಿಸಿರುವುದರಲ್ಲಿ ದೋಷ ಇರತಕ್ಕಂಥ ಸಂದರ್ಭದಲ್ಲಿ ಆ ಯೋಜನೆ ರೂಪಿಸಿದವರಿಗೆ ಏನಾದರೂ ಪನಿಷ್‌ಮೆಂಟ್ ಬೇಡವೆ? ಏಕೆಂದರೆ, ಸಾವಿರಾರು ಕೋಟಿ ರೂಪಾಯಿ ಈ ದೇಶದ ಸಾಮಾನ್ಯ ಮನುಷ್ಯನ ಟ್ಯಾಕ್ಸ್‌ಪೇಯರ್ಸ್‌ನ ಹಣ ಇವತ್ತು ಹಾಳಾಗಿ ಹೋಗಿ ದುರುಪಯೋಗವಾಗಿದೆ ಆ ಯೋಜನೆಯಲ್ಲಿರುವಂಥ ದೋಷದಿಂದಾಗಿ ಈ ರೀತಿ ಆಗಿದೆ ಅದಕ್ಕೇನು ಮಾರ್ಗ? ಅದಕ್ಕೇನು ಪರಿಹಾರ? ಅದರ ಜೊತೆಗೆ ರಾಜ್ಯಗಳಲ್ಲಿ ಆಗಿರುವ ಅವ್ಯವಹಾರ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ಕೊಡಲಿಲ್ಲ, ಮುತಾಯಿ ಧೋರಣೆ ಮಾಡಿದರು ಇದು ಎಲ್ಲಾ ನಿಜವೇ? ಆದರೆ ಇನ್ನೊಂದು ಕಡೆ ರಾಜ್ಯಪಾಲರ ಭಾಷಣದಲ್ಲಿ "ಬರಗಾಲವನ್ನು ನಿರ್ಮೂಲನೆ ಮಾಡಲಿಕ್ಕೆ ಕೇಂದ್ರ ಸರ್ಕಾರದಿಂದ ಸಹಾಯ ಸಂಪೂರ್ಣವಾಗಿ ಸಿಗಲಿಲ್ಲವಾದ್ದರಿಂದ ರಾಜ್ಯ ಸಂಪನ್ಮೂಲಗಳನ್ನು ಕೂಡ ಅದಕ್ಕೆ ಉಪಯೋಗಿಸಬೇಕಾಯಿತು" ಎಂದು ಒಂದು ಕಡೆ ಹೇಳಿದ್ದಾರೆ ಅದನ್ನು ನಾನು ಮತ್ತೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಹೇಳುತ್ತೇನೆ ಅಂದರೆ ಕರ್ನಾಟಕ ರಾಜ್ಯದ ಜನರ ಹಣವನ್ನು ಕೂಡ ಅದಕ್ಕೆ ಬಳಸಿ ಇಡೀ ಹಣವನ್ನು ಇವತ್ತು ದುರುಪಯೋಗ ಮಾಡಿದ್ದಾರೆ ಇಡೀ ಯೋಜನೆಯೇ ದುರುಪಯೋಗ ವಾದಂತಾಗಿದೆ ಬರೀ ಕೂಲಿಗಾಗಿ ಕಾಳು ದುರುಪಯೋಗ ಆಗಿರುವಂಥದ್ದು ಅಲ್ಲ, ಇಡೀ ಯೋಜನೆ ಮಿಸ್‌ಯೂಸ್ ಆಗಿದೆ ಅದಕ್ಕೆ ತನಿಖೆಯಾಗಬೇಕು ಎನ್ನುವುದಾದರೆ ಸಿಬಿಐ ನಿಂದ ತನಿಖೆಯಾಗಬೇಕು ಏಕೆಂದರೆ,

ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡರ ಪಾಲೂ ಇರುವುದರಿಂದ, ಎರಡನ್ನೂ ಬಹಿರಂಗವಾಗಿ ಆಚೆಗೆ ತೆಗೆಯಬೇಕು ಎಂದರೆ, ಇದಕ್ಕೆ ಇರುವುದು ಒಂದೇ ಮಾರ್ಗ, ಅಂದಾಗ ಇದನ್ನು ಕೊಡಲೇಬೇಕು ಅದು ಬಿಟ್ಟು ಬೇರೆ ಯಾವುದೇ ತನಿಖೆಯಿಂದ ಇದು ಸಾಧ್ಯವಾಗುವುದಿಲ್ಲ ಆದುದರಿಂದ ಈ ಯೋಜನೆ ದುರುಪಯೋಗದ ಬಗ್ಗೆ ಸಿಬಿಐ, ತನಿಖೆಗೆ ಒತ್ತಾಯಿಸುತ್ತೇನೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಕ್ಕೆ ಈ ವಿಚಾರವಾಗಿ ಸಿಬಿಐ ತನಿಖೆಗೆ ಬರಯಬೇಕು ಎಂದು ಒತ್ತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ

3 ಮುಖ್ಯ ಮಂತ್ರಿಗಳ ಹೇಳಿಕೆ

ತಾತ್ಕಾಲಿಕ ಗುರುತಿನ ಪಡಿತರ ಚೀಟಿದಾರರಿಗೆ ಪಡಿತರ ಪದಾರ್ಥಗಳನ್ನು ಸರಬರಾಜು ಮಾದುವ ಬಗ್ಗೆ

ಅಧ್ಯಕ್ಷರು ಈಗ ಮಾನ್ಯ ಮುಖ್ಯಮಂತ್ರಿಗಳು ಪಡಿತರ ಚೀಟಿ ವ್ಯವಸ್ಥೆ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತಾರೆ

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಕೂಡ ಅವಕಾಶ ಕೇಳಿದೆ, ಆದರೂ ಕೊಡಲಿಲ್ಲ, ನನಗೂ ಅವಕಾಶ ಕೊಡಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಈ ಅಕ್ಕಿ ಹಗರಣದ ಬಗ್ಗೆ ಮುಂದುವರಿಸುತ್ತೀರಾ ಹೇಗೆ? ..

ಅಧ್ಯಕ್ಷರು ಅವರು ಈಗ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ನಿಲುವಳಿ ಸೂಚನೆಗೆ ನಾವು ಕೂಡ ಸಹಿ ಮಾಡಿದ್ದೇವೆ

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಬೇಕು, ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ನೀವು ಎಲ್ಲರೂ ಮಾತನಾಡಲಿಕ್ಕೆ ಇಷ್ಟಪಡುತ್ತೀರಿ ಎಂದರೆ ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಹೇಗೆ ಸಾಧ್ಯ? ಈಗಾಗಲೇ ರೂಲ್ 69ರ ಮೇಲೆಯೇ ಸುಮಾರು ಎರಡು ಮುಕ್ಕಾಲು ಗಂಟೆ ಇದರ ಬಗ್ಗೆ ಚರ್ಚೆಯಾಗಿದೆ ನಾರ್ಮಲ್ ಆಗಿ ಒಂದು ಗಂಟೆ ಕೊಡಬೇಕು, ಇದನ್ನು ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಹಾಗಾದರೆ ನಾವು ಮಾತನಾಡಬಾರದೇ?

ಅಧ್ಯಕ್ಷರು ಮಾತನಾಡಬಾರದು ಎಂದು ಹೇಳುತ್ತಿಲ್ಲ, ಏಕೆಂದರೆ, ಒಂದು ಪಕ್ಷದಲ್ಲಿ ಎಷ್ಟು ಜನ ಮಾತನಾಡಬೇಕು ಎಂದು ತಾವು ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ ಇಷ್ಟ ಬಂದ ರೀತಿಯಲ್ಲಿ ಮಾತನಾಡುವುದಕ್ಕೆ ನಾವು ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಹಾಗಾದರೆ ನನಗೆ ಅವಕಾಶ ಇಲ್ಲವೆ?

ಅಧ್ಯಕ್ಷರು ನೀವು ಹೇಳಬೇಕಾಗಿರುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ.

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಸಚಿವರು) ಮಾನ್ಯ ಅಧ್ಯಕ್ಷರೆ, ಈಗ ರೂಲ್ 69ರ ಕೆಳಗಡೆ ಮಾತನಾಡತಕ್ಕಂಥದ್ದು ಇದೆ, ಅದನ್ನು ಬದಲಾವಣೆ ಮಾಡುವುದಕ್ಕೆ ತಮಗೆ ಅವಕಾಶವಿದೆ ಮಧ್ಯದಲ್ಲಿ ಪಡಿತರ ಚೀಟಿಯ ವಿಚಾರಗಳ ಬಗ್ಗೆ , ಮಾನ್ಯ ಮುಖ್ಯಮಂತ್ರಿಗಳಿಗೆ ಅನ್ಯ ಕಾರಣಗಳು ಇರುವುದರಿಂದ ಅವರು ಈಗ ಒಂದು ಸ್ಟೇಟ್‌ಮೆಂಟ್ ಮಾಡಿದ ಮೇಲೆ ಮಾನ್ಯ ಅಧ್ಯಕ್ಷರು ತಮ್ಮನ್ನು ಕರೆಯುತ್ತಾರೆ, ಅವರು ತಮ್ಮ ಅವಕಾಶವನ್ನು ನಿರಾಕರಿಸುವುದಿಲ್ಲ ಅನ್ಯ ಕಾರಣಗಳಿಂದಾಗಿ ಅವರು ಬಏಕೆ ಕಡೆಗೆ ಕೆಲಸ ಇರುವುದರಿಂದ ಅವರು ಈಗ ಸ್ಟೇಟ್‌ಮೆಂಟ್ ಮಾಡಿ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ನಿನ್ನೆ ಮಾನ್ಯ ಯಡಿಯೂರಪ್ಪ ನವರು ಬಹಳ ಮಹತ್ವವಾದ ವಿಷಯವನ್ನು ಈ ಒಂದು ಸದನದಲ್ಲಿ ಪ್ರಸ್ತಾಪಿಸಿದ್ದಾರೆ ನಾನು ಸರ್ಕಾರದ ಪರವಾಗಿ 24 ಗಂಟೆಯೊಳಗಾಗಿ ತಮಗೆ ಉತ್ತರ ಕೊಡುತ್ತೇನೆಂದು ಹೇಳಿದ್ದೆ ಈಗ ಬಡವರು ಬಗ್ಗೆ ಹಳ್ಳಿ ಪ್ರದೇಶದಲ್ಲಿರತಕ್ಕಂಥವರಿಗೆ ಏನು ಇವತ್ತು ತೊಂದರೆಯಾಗುತ್ತಿದೆ 14 ಲಕ್ಷ ಪಡಿತರರಿಗೆ ಗ್ರೀನ್ ಕಾರ್ಡ್ ಕ್ಯಾನ್ಸಲ್ ಮಾಡಿ ಏನು ರಸೀಟ್ಸ್ ಕೊಟ್ಟಿದ್ದೇವೆ, ಅದರ ಬಗ್ಗೆ ಇವತ್ತು ಧಾನ್ಯ ಬಿಡುಗಡೆಯಾಗಿಲ್ಲ, ಬಡವರಿಗೆ ತೊಂದರೆಯಾಗುತ್ತದೆ ಎನ್ನುವ ಮಾತನ್ನು ಹೇಳಿದರು ನಾನು ಅವರಿಗೆ ತಮ್ಮ ಮುಖಾಂತರ ಆಶ್ವಾಸನೆ ಕೊಟ್ಟಿದ್ದೆ, 24 ಗಂಟೆ ಒಳಗಾಗಿ ಸರ್ಕಾರದಿಂದ ಉತ್ತರ ಬರುತ್ತದೆ ಎನ್ನುವ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ ನಿನ್ನೆ ನಾನು ಮತ್ತು ಉಪ ಮುಖ್ಯಮಂತ್ರಿಗಳು, ಯಾರು ಹಣಕಾಸಿನ ಸಚಿವರು ಇದ್ದಾರೆ, ಖಾತೆ ಅವರ ಹತ್ತಿರ ಇದೆ, ನಾವು ಅಧಿಕಾರಿಗಳ ಜೊತೆಯಲ್ಲಿ ಸಮಗ್ರವಾಗಿ ಚರ್ಚೆ ಮಾಡಿದ್ದೇವೆ ಯಾಕೆ ಈ ತೊಂದರೆಯಾಯಿತು ಎಂದು ನಾಣು ಅದರ ಬಗ್ಗೆ ಪರಿಶೀಲನೆ ಮಾಡುದೆ, ಇವತ್ತು ನಾವು ಒಟ್ಟಾರೆ 78 ಸಾವಿರ, 97 ಸಾವಿರ ಕಾಡುಗಳಿಗೆ ಧಾನ್ಯವನ್ನು ವಿತರಣೆ ಮಾಡುತ್ತಿದ್ದೇವೆ ಅದರಲ್ಲಿ ಗ್ರೀನ್‌ಕಾರ್ಡ್ ಕ್ಯಾನ್ಸಲೇಷನ್ ಆಗಬೇಕು, ಎನ್ನತಕ್ಕಂಥ ರೀತಿಯಲ್ಲಿ ಮತ್ತೊಂದು 16 ಲಕ್ಷ ಜನರಿಗೆ ಒಂದು ರಸೀದಿ ಕೂಡ ಕೊಟ್ಟಿದ್ದೇವೆ ಅದರಲ್ಲಿ ಏನಾಗಿದೆ ಅಂದರೆ, ವಿತರಣೆ ಕೆಲಸ ನಡೆಯುತ್ತಿದೆ ಚುನಾವಣೆ ಬಂದಾಗ ಸ್ವಲ್ಪ ನಿಂತು ಹೋಯಿತು ಸರ್ಕಾರ ವಿತರಣೆ ನಿಲ್ಲಿಸಬಾರದೆಂದು, ಎಲೆಕ್ಷನ್ ಕಮಿಷನ್‌ಗೆ ನಾವು ಇದರ ಬಗ್ಗೆ ಪರವಾನಿಗೆ ತೆಗೆದುಕೊಂಡೆವು, ಅವರು ಮೇ ಒಳಗೆ ಅದರ ಪರವಾನಿಗೆ ಕೊಟ್ಟಿದ್ದರು

ಅವರಿಗೆ ಏನು ವ್ಯವಸ್ಥೆ ಮಾಡಬೇಕಾಗಿತ್ತೋ ಆ ವ್ಯವಸ್ಥೆಯನ್ನೂ ಕೂಡ ನಾವು ಮಾಡಿದ್ದೇವೆ ನಿನ್ನೆ ನಾನು ಮತ್ತು ಉಪ ಮುಖ್ಯಮಂತ್ರಿಗಳು ಮಾತನಾಡಿದಾಗ ಇವತ್ತು ಕೊಡಲೇಬೇಕೆಂದು ತೀರ್ಮಾನಿಸಿದೆವು ನಿನ್ನೆ ನೀವು ಪ್ರಸ್ತಾಪ ಮಾಡಿದಮೇಲೆ, ಅದು ನಮಗೆ ಸಹಾಯವಾಗಿದೆ ನಾವು 16 ಲಕ್ಷ ಜನರಿಗೆ ತ್ವರಿತವಾಗಿ ಇವತ್ತೇ ಕೊಡಬೇಕೆಂಬ ರೀತಿಯಲ್ಲಿ ಇದಕ್ಕೆ ತಗಲತಕ್ಕ ವೆಚ್ಚ 10 ಕೋಟಿ ರೂಪಾಯಿಯನ್ನು ಅವರು ಭರಿಸತಕ್ಕ ಆಶ್ವಾಸನೆ ಕೊಟ್ಟಮೇಲೆ, ನಿನ್ನೆ ನಾವು ಆದೇಶವನ್ನು ಕೂಡ ಕಳುಹಿಸಿಕೊಟ್ಟಿದ್ದೇವೆ ಒಟ್ಟಾರೆ, 16 ಲಕ್ಷ ಜನರಿಗೆ ಏನು ತೊಂದರೆಯಾಗಿದೆ ಎಂಬುದನ್ನು ಈ ಸಮ್ಮಿಶ್ರ ಸರ್ಕಾರ ಬಂದಮೇಲೆ, ನಮ್ಮ ಗಮನಕ್ಕೂ ತಂದಿದ್ದೀರಿ ಶೂನ್ಯವೇಳೆಯಲ್ಲಿ ಅತ್ಯುತ್ತಮ ಮತ್ತು ಜರೂರಾದ ವಿಚಾರಗಳು ಪ್ರಸ್ತಾಪವಾಗುತ್ತವೆ, ಅದಕ್ಕಾಗಿ ಸರ್ಕಾರ ತ್ವರಿತವಾಗಿ ಇದರ ಬಗ್ಗೆ ಗಮನ ಕೊಟ್ಟಿದೆ ಇದರ ವಿಷಯವಾಗಿ ಆದೇಶ ಕೊಟ್ಟಿದ್ದೇವೆ ಏನು ಸಮಸ್ಯೆ ಉದ್ಭವವಾಗಿತ್ತು, ಅದು ಪರಿಹಾರವಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ

ದಿನಾಂಕ 15 6 2004 ರಂದು ವಿಧಾನ ಸಭೆಯಲ್ಲಿ, ಶೂನ್ಯ ವೇಳೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಬಡತನ ರೇಖೆಗಿಂತ ಕೆಳಗಿರತಕ್ಕಂತಹ ಫಲಾನುಭವಿಗಳಿಗೆ ನೀಡಿದಂತಹ ತಾತ್ಕಾಲಿಕ ಗುರುತಿನ ಚೀಟಿಯ ಪಡಿತರದಾರರಿಗೆ ಒಂಸ್ ಮಾಹೆಯಿಂದ ಪಡಿತರ ಪದಾರ್ಥಗಳನ್ನು ನಿಲ್ಲಿಸಿರುವ ವಿಷಯವನ್ನು ಪ್ರಸ್ತಾಪಿಸಿದ್ದು, ಇವರಿಗೆ ಕೂಡಲೇ ಪಡಿತರ ಪದಾರ್ಥಗಳನ್ನು ವಿತರಣೆ ಮಾಡಲು ಅಗತ್ಯ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕೆಂದು ಆಗ್ರಹಪಡಿಸಿದರು

ಬಡತನ ರೇಖೆಗಿಂತ ಕೆಳಗಿರುವಂತಹ ಎಲ್ಲಾ ಅರ್ಹ ಕುಟುಂಬಗಳಿಗೆ ಸಹಾಯಧನಯುಕ್ತವಾದ ಆಹಾರ ಪದಾರ್ಥಗಳನ್ನು ಒದಗಿಸಲು ನಮ್ಮ ಸರ್ಕಾರವು ಕಟಿಬದ್ಧವಾಗಿರುತ್ತದೆ

ಸದರಿ ವಿಷಯದ ಗಂಭೀರತೆ ಹಾಗೂ ಸೂಕ್ಷತೆಯನ್ನು ಅರಿತು ಇಂತಹ ಕಡು ಬಡವರ ಬಗ್ಗೆ ಕಾಳಜಿಯನ್ನು ಹೊಂದಿರುವ ನಮ್ಮ ಸರ್ಕಾರವು ಈ 16 ಲಕ್ಷ ತಾತ್ಕಾಲಿಕ ಗುರುತಿನ ಪಡಿತರ ಚೀಟಿದಾರರುಗಳಿಗೆ ತಕ್ಷಣದಿಂದ ಪಡಿತರ ಪದಾರ್ಥಗಳನ್ನು ಸರಬರಾಜು ಮಾಡಲು ತೀರ್ಮಾನಿಸಿರುತ್ತದೆ

ಮತ್ತು ಈಗಾಗಲೇ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ, ನಿನ್ನೆ ಕೂಡ ನಾವು ಆದೇಶವನ್ನು ಕಳುಹಿಸಿಕೊಟ್ಟಿದ್ದೇವೆ ಫುಡ್‌ಗ್ರೈನ್ಸ್ ಕೂಡ ಕೊಟ್ಟಿದ್ದೇವೆ ಈ ಮಾತನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ

ಶ್ರೀ ಬಿ.ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ರಾಜ್ಯದ 16 ಲಕ್ಷ ಕಡುಬಡವರ ಪರವಾಗಿ ತಾವು ಈ ನಿರ್ಧಾರವನ್ನು ತೆಗೆದುಕೊಂಡಿದ್ದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ ಆದರೆ, ತಾವು ಬಹಳ ಮುಖ್ಯವಾಗಿ ಮಾಡಬೇಕಾಗಿರುವಂಥಾದ್ದು ಇವತ್ತೇನು ಟೆಂಪರರಿ ಕಾರ್ಡ್ ಎಂದು ಒಂದು ಸ್ಲಿಪ್ ಕೊಟ್ಟಿದ್ದಾರೆ, ಆ ಸಮಯದಲ್ಲಿ ಅಧಿಕಾರಿಗಳು ಹೇಳಿದ್ದು ನಮ್ಮ ಹತ್ತಿರ ಹಳದಿ ಕಾರ್ಡ್ ಸ್ಟಾಕ್ ಇರಲಿಲ್ಲವೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಸರ್ಕಾರದವರು ಹೇಗೋ ಒಂದು ಪಾಲಿಸಿ ಡಿಸಿಷನ್ ತೆಗೆದುಕೂಂಡಿದ್ದೀರಿ 16 ಲಕ್ಷ ಕುಟುಂಬಗಳನ್ನು ಬಡವರು ಎಂದು ಗುರುತು ಮಾಡಿದ್ದೀರಿ ಇವರಿಗೆ ಖಾಯಂ ಆಗಿ ಹಳದಿ ಕಾರ್ಡನ್ನೇ ವಿತರಣೆ ಮಾಡಿದರೆ, ಅವರ ಮನಸ್ಸಿನಲ್ಲಿ ಇಕ್ಕ ಮಾನಸಿಕ ತುಮುಲ ಇದೆಯಲ್ಲ ಅದು ನಿವಾರಣೆಯಾಗುತ್ತದೆ ಈ ಚೀಟಿ ಯಾವತ್ತೋ ರದ್ದಾಗುತ್ತದೆ, ಮತ್ತೊಂದಾಗುತ್ತದೆ ಎಂದು ಏನಿದೆ ಇದು ಹೊರಟು ಹೋಗುತ್ತದೆ ನೀವು ನ್ಯಾಯವಾಗಿ ಕೊಡಬೇಕಾದುದನ್ನು ಕೊಡಬೇಕಾಗುತ್ತದೆ ನೀವು ಹಳದಿ ಕಾರ್ಡ್ ಕೊಟ್ಟಿರುವವರಿಗೂ ಮತ್ತು ಈ ಗುರುತಿನ ಚೀಟಿ ಕೊಟ್ಟಿರುವವರಿಗೂ ಏನೂ ವ್ಯತ್ಯಾಸ ಇಲ್ಲ ಕಾರ್ಡ್ ಇರಲಿಲ್ಲ, ಅದಕ್ಕೋಸ್ಕರ ಈ ಸ್ಲಿಪ್ಸ್ ಕೊಟ್ಟಿದ್ದೀರಿ ಆದ್ದರಿಂದ, ಅವರೆಲ್ಲರಿಗೂ ಹಳದಿ ಕಾರ್ಡ್ ಕೊಡುವಂಥ ವ್ಯವಸ್ಥೆ ಮಾಡಿ ಎರಡನೆಯದು, ಈ ಪಡಿತರ ಅಂಗಡಿಗಳಲ್ಲಿ ಏನಾಗಿದೆ ಎಂಬುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಅಧ್ಯಕ್ಷರ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಬಹಳ ಕಡೆ, ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಅಧಿಕಾರಿಗಳ ಜೊತೆ ಸೇರಿಕೊಂಡು 50–100 ಕಾರ್ಡ್‌ಗಳನ್ನು ಅವರೇ ರಾಮಣ್ಣ, ತಿಮ್ಮಣ ಎಂದು ವರೆದುಕೊಮಡು ಅವರ ಹತ್ತಿರ ಸ್ಟಾಕ್ ಇಟ್ಟುಕೊಂಡಿದ್ದಾರೆ ಅದೇ ಈಗ ಎಲ್ಲಾ ಕಡೆ ಮಾರ್ಕೆಟ್‌ನಲ್ಲಿ ಬಹಿರಂಗವಾಗಿ ಮಾರಾಟವಾಗುತ್ತಿರತಕ್ಕಂಥಾದ್‌ದು ಅಲ್ಲಿ ಫಲಾನುಭವಿಗಳು ಇಲ್ಲವೇ ಇಲ್ಲ ಎಲ್ಲಾ ಡೂಪ್ಲಿಕೇಟ್ ನೇಮ್ಸ್ ಉದಾಹರಣೆಗೆ ಯಾವುದೋ ಒಂದು ನ್ಯಾಯಾಬೆಲೆ ಅಂಗಡಿಯಲ್ಲಿ ಐದುನೂರು ಕಾರ್ಡ್‌ಗಳು ಇವೆ ಇವುಗಳು ಹೌದೋ ಅಲ್ಲವೋ ಎಂಬುದನ್ನು ನೀವು ನೋಡುವುದಕ್ಕೆ ಪ್ರಯತ್ನ ಮಾಡಿದರೆ 60–70 ಕಾರ್ಡ್‌ಗಳು ಡೂಪ್ಲಿಕೇಟ್ ಸಿಗುತ್ತವೆ ಇವುಗಳನ್ನು ನೀವು ರದ್ದು ಮಾಡಬಹುದು ಈ ಭಾರ ತಪ್ಪುತ್ತದೆ ಮೂರನೆಯದು, ಇದೆಲ್ಲಾ ಹಗರಣಗಳು ಬಯಲಾದ ಮೇಲೆ, ಇತ್ತೀಚೆಗೆ ಕಂಡಿರುವಂಥಾದ್ದು, ಆ ನ್ಯಾಯಬೆಲೆ ಅಂಗಡಿಗಳಿಗೆ ಯಾವುದೋ ಕಾರಣಕ್ಕೆ ಸ್ವಲ್ಪ ಹಣಕಾಸಿನ ತೊಂದರೆ ಇರುತ್ತದೆ ಇವತ್ತು ಇನ್ನೂರು ಚೀಲ ಬಿಡಿಸಿಕೊಂಡು ಬರುತ್ತಾನೆ, ಇನ್ನೊಂದೆಂಟು ದಿನ ಬಿಟ್ಟು ಇನ್ನೊಂದು ನೂರು ಚೀಲ ಬಿಡಿಸಿಕೊಂಡು ಬರುತ್ತಾನೆ ಆತ ತಡವಾಗಿ ಹೋದಾಗ, ಅಕ್ಕಿಯನ್ನು ಕೊಡುವುದಕ್ಕೆ ರೆಫ್ಯೂಸ್ ಮಾಡುತ್ತಾರೆ ಆ ನ್ಯಾಯಬೆಲೆ ಅಮಗಡಿಯವನು ಒಂದೇ ಕಂತಿನಲ್ಲಿ ತರುವುದಕ್ಕೆ ಅವನಿಗೆ ಶಕ್ತಿ ಇದ್ದರೆ ತರಲಿ ತರದೇ ಹೋದರೆ ಬೇರೆಯವನಿಗೆ ಕೊಡಿ, ನಮ್ಮದೇನೂ ಅಭ್ಯಂತರ ಇಲ್ಲ ಆದರೆ, ಯಾರು ಫಲಾನುಭವಿಗಳು ಇರುತ್ತಾರೆ, ಅಂಗಡಿಯವನ್ನು ಅಕ್ಕಿ ತರಿಸದೇ ಇರುವ ಕಾರಣಕ್ಕೆ ಈತ

ಸಫರ್ ಆಗಬಾರದಲ್ಲ ನೂರಾರು ಉದಾಹರಣೆಗಳನ್ನು ನಾನು ಮೆನ್‌ಷನ್ ಮಾಡಿದ್ದೇನೆ ನಾಲ್ಕನೆಯದು, ಕೊಳ್ಳುವುದಕ್ಕೆ ಹೋಗುವವರು ಸಾಮಾನ್ಯ ಜನ ಅವರು 28 ಕೆ ಜಿ ಅಕ್ಕಿಯನ್ನು ಒಂದೇ ಸಾರಿ ತೆಗೆದುಕೊಳ್ಳಲು ಶಕ್ತಿ ಇರುವುದಿಲ್ಲ ಅವನು ಮೊದಲನೇ ವಾರದಲ್ಲಿ ಅವನಿಗೆ ಕೂಲಿ ಬಂದತಕ್ಷಣ 14 ಕೆ ಜಿ ತೆಗೆದುಕೊಳ್ಳುತ್ತಾನೆ ಆಮೇಲೆ ಉಳಿದ 14 ಕೆ ಜಿ ತೆಗೆದುಕೊಳ್ಳುವುದಕ್ಕೆ ಹೋಗುತ್ತಾನೆ ಇದರಿಂದ, ಅವನ ಗಂಟೇನು ಹೋಗುತ್ತದೆ? ಅದು ಅವನ ಕಾರ್ಡ್, ಎರಡೂ ಬಾರಿ ತೆಗೆದುಕೊಳ್ಳುವುದಕ್ಕೆ ಅವನು ಅಡ್ಡಿ ಮಾಡುವುದಕ್ಕೆ ಬರುವುದಿಲ್ಲ ಇದರ ಬಗ್ಗೆಯೂ ತಾವು ಗಮನ ಕೊಡಬೇಕು ಇನ್ನೂ ಕೆಲವರು, ನಿಜವಾದಂಥ ಕಡುಬಡವರು ಪಟ್ಟಿಯಲ್ಲಿ ಬಿಟ್ಟುಹೋಗಿರುತ್ತಾರೆ ನಾವು ಹೇಗೋ 224 ಜನ ಶಾಸಕರು ಆಯ್ಕೆಯಾಗಿ ಬಂದಿದ್ದೇವೆ ಅವರು, ಯಾರೂ ಅವರ ಬಂಧುಬಳಗದವರಿಗೆ ಕೊಡುಸು ವುದಕ್ಕೆ ಹೋಗುವುದಿಲ್ಲ ಕಡುಬಡವರು ಯಾರಿದ್ದಾರೆಂದು ನಿಮಗೆ ಅನಿಸುತ್ತದೆಯೋ, ಆ ಶಾಸಕರು ಕೊಡುವಂಥ ವರದಿ ಆಧಾರದ ಮೇಲೆ ತಹಶೀಲ್ದಾರರಿಗೆ ನಿರ್ದೇಶನ ಕೊಟ್ಟು, ಆ ಕೈಬಿಟ್ಟು ಹೋಗಿರುವವರಿಗೂ ಕೊಡುವಂಥ ಒಂದು ಆದೇಶವನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ

ಶ್ರೀ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೇ, ಒಟ್ಟಾರೆ ಹೇಳಿದ ಹಾಗೆ, 78 ಲಕ್ಷದ 97 ಸಾವಿರ ಕಾರ್ಡುಗಳು ಇವೆ ಇವುಗಳಿಗೆ ಕೇಂದ್ರ ಸರ್ಕಾರದಿಂದ ಬುರುವುದು ಕೇವಲ 31 ಲಕ್ಷ ಕೆ ಜಿ ಅಕ್ಕಿ ಉಳಿದ ಎಲ್ಲವನ್ನೂ ಕೂಡ ಅಂದರೆ ಸಬ್ಸಿಡಿ ಇತ್ಯಾದಿಗಳನ್ನು ರಾಜ್ಯಸರ್ಕಾರವೇ ಭರಿಸಬೇಕಾಗುತ್ತದೆ ಈ 16 ಲಕ್ಷ ಜನರಿಗೆ ಕಾರ್ಡ್ ಕೊಡಬೇಕೆಂದು ನಿನ್ನೆ ನಾನು ಮತ್ತು ಉಪ ಮುಖ್ಯಮಂತ್ರಿಗಳು ಕೂಡಿ, ಇದಕ್ಕಾಗಿ 10 ಕೋಟಿ ರೂಪಾಯಿಗಳ ವೆಚ್ಚ ಏನು ತಗಲುತ್ತಾ ಇದೆ, ಇದನ್ನು ಭರಿಸುವುದಕ್ಕೂ ತೀರ್ಮಾನ ತೆಗೆದುಕೊಂಡಿದ್ದೇವೆ ಒಟ್ಟಾರೆ, 78 ಲಕ್ಷ 97 ಸಾವಿರ ಕಾರ್ಡುಗಳೇನಿವೆ, ಈ ಕಾರ್ಡುಗಳಿಗೆ ಸರ್ಕಾರಕ್ಕೆ ತಗಲತಕ್ಕ ವೆಚ್ಚ ಐದು ನೂರು ಕೋಟಿ ರೂಪಾಯಿಗಳು ಇದು ಸರ್ಕಾರದ ಕಾರ್ಯಕ್ರಮ, ಬಡವರ ಕಾರ್ಯಕ್ರಮ ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಇದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟಿದ್ದೇವೆ ಸಂಪುಟದಲ್ಲಿ ವಿಚಾರ ಮಾಡಿ, ಇದರ ಬಗ್ಗೆ ಮಾಡಲೇಬೇಕೆಂದು ಉಪ ಮುಖ್ಯಮಂತ್ರಿಗಳೂ ನಾವೂ ಕೂಡ ತೀರ್ಮಾನ ತೆಗೆದು ಕೊಂಡಿದ್ದೇವೆ ಇವತ್ತು ತಾವೇನು ಹೇಳುತ್ತಾ ಇದ್ದೀರಿ ಎಲ್ಲಿ ಗ್ರೀನ್ ಕಾರ್ಡ್ ತೆಗೆದು ಸ್ಲಿಪ್ಸ್ ಕೊಟ್ಟಿರುವುದು ಏನಿದೆ, ಅದಕ್ಕೂ ಕೂಡ ಹಳದಿ ಕಾರ್ಡ್ ಕೊಡುವುದನ್ನು ಮಾಡುತ್ತಾ ಇದ್ದೇವೆ ಇದರ ಬಗ್ಗೆ ಬೇರೆ ಬೇರೆ ರಿವ್ಯೂ ಮಾಡುತ್ತಾ ಇದ್ದೇವೆ ಒಟ್ಟಾರೆ, ಈಗಾಗಲೇ ಸರ್ಕಾರದವರು ತೀರ್ಮಾನ ಮಾಡಿದ್ದೇವೆ ಇದರ ಬಗ್ಗೆ ವಿಶೇಷವಾದ ರೀತಿಯಲ್ಲಿ ಪರಿಶೀಲನೆಯಾಗಿ, ಸರ್ಕಾರಕ್ಕೆ ವರದಿ ಬರತಕ್ಕಂಥ ರೀತಿಯಲ್ಲಿ ನಾವು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ

ಶ್ರೀ ಅರಗ ಜ್ಞಾನೇಂದ್ರ 16 ಲಕ್ಷ ಜನರಿಗೆ ಹಳದಿ ಕಾರ್ಡ್ ಕೊಡುವುದಕ್ಕೆ ಆದೇಶ ಕೊಟ್ಟುಬಿಡಿ

ಶ್ರೀ ಧರ್ಮಸಿಂಗ್ ಅದು ಮಾಡುತ್ತೇವೆ

ಶ್ರೀ ಜಿ ಎ ಶ್ರೀರಾಮರೆಡ್ಡಿ ತಾತ್ಕಾಲಿಕವಾದಂಥ ಚೀಟಿ ಏನು ಕೊಟ್ಟಿದ್ದಾರೆ, ಕಾರ್ಡ್ ವಾಪಸ್ ಕೊಟ್ಟಿರತಕ್ಕ ಎಲ್ಲರಿಗೂ ಈ ಚೀಟಿ ಕೊಟ್ಟಿಲ್ಲ ಅರ್ಧ ಜನರಿಗೆ ಕೊಟ್ಟಿದ್ದಾರೆ, ಅರ್ಧ ಜನರಿಗೆ ಕೊಟ್ಟಿಲ್ಲ ಆದಕ್ಕೂ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಯಾರು ಯಾರಿಂದ ಕಾರ್ಡ್‌ಗಳನ್ನು ವಾಪಸ್ ಪಡೆದಿದ್ದಾರೋ ಹೊಸಕಾರ್ಡ್‌ಗಳನ್ನು ಕೊಡುತ್ತೇವೆಂದು, ಅವರೆಲ್ಲರಿಗೂ ಅಕ್ಕಿ ಇತ್ಯಾದಿ

ಪದಾರ್ಥಗಳನ್ನು ಸರಬರಾಜು ಮಾಡಬೇಕು ಮತ್ತು ಅವರಿಗೆ ತಕ್ಷಣ ಕಾರ್ಡನ್ನೂ ಕೊಡತಕ್ಕಂಥ ವ್ಯವಸ್ಥೆಯಾಗಬೇಕು ಡಿಪೋದಲ್ಲಿ ಇಲ್ಲದೇ ಹೋದರೆ ಕೊಡುವುದಿಲ್ಲವೆಂದು ಅವರು ಹೇಳುತ್ತಾರೆ ನಮಗೆ ಎಷ್ಟು ಕಾರ್ಡುಗಳಿವೆಯೋ ಅಷ್ಟಕ್ಕೆ ಮಾತ್ರವೇ ಸರ್ಕಾರದವರು ಆಹಾರ ಧಾನ್ಯಗಳನ್ನು ಸರಬರಾಜು ಮಾಡತಕ್ಕಂಥಾದ್ದು, ಇಲ್ಲದೇ ಇರತಕ್ಕ ಕಾರ್ಡ್‌ಗಳಿಗೆ ಸರಬರಾಜು ಮಾಡುವುದಿಲ್ಲವೆಂಬ ಕಾರಣದಿಂದ, ಡಿಪೋದವರು ಕೊಡುವುದಿಲ್ಲ ಹಾಗಾಗಿ, ತಾತ್ಕಾಲಿಕವಾದಂಥ ಗುರುತಿನ ಚೀಟಿ ಏನು ಕೊಟ್ಟಿದ್ದಾರೆ, ಇವುಗಳನ್ನು ಪೂರ್ತಿಯಾಗಿ ಎಲ್ಲರಿಗೂ ಕೊಟ್ಟಿಲ್ಲ ಮೊದಲಿನ ಕಾರ್ಡ್ ವಾಪಸ್ ಪಡೆದಂಥ ಎಲ್ಲರಿಗೂ ಆ ಚೀಟಿ ಕೊಡಬೇಕು ಡಿಪೋದವರಿಗೆ ಸೂಚನೆ ಕೊಟ್ಟು, ಎಲ್ಲರಿಗೂ ಆ ಪದಾರ್ಥಗಳನ್ನು ವಿತರಣೆ ಮಾಡಬೇಕು ಇಲದೇ ಹೋದರೆ, ಅದರಿಂದೇನೂ ಪ್ರಯೋಜನವಾಗುವುದಿಲ್ಲ

ಶ್ರೀ ಅರಗ ಜ್ಞಾನೇಂದ್ರ ಇದು ಹಿಂದಿನ ಸರ್ಕಾರದಲ್ಲೂ ಕೂಡ ಅನೇಕ ಸಲ ಚರ್ಚೆಯಾಗಿದೆ

ಶ್ರೀ ಧರ್ಮಸಿಂಗ್ ಮಾನ್ಯ ವಿರೋಧ ಪಕ್ಷದ ನಾಯಕರು ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಇದು ಬಹಳ ಸೂಕ್ಷ್ಮವಾದ ವಿಚಾರವಾದ್ದರಿಂದ, ಸರ್ಕಾರದ ವತಿಯಿಂದ ನಾವು ಮತ್ತು ಉಪ ಮುಖ್ಯ ಮಂತ್ರಿಗಳು ಅಧಿಕಾರಿಗಳ ಜೊತೆಯಲ್ಲಿ ಕೂಡಿ ವಿಚಾರ ಮಾಡಿ ಉತ್ತರ ಕೊಟ್ಟಿದ್ದೇವೆ ನೀವು ಬೇಕಾದರೆ ಮಾನ್ಯ ರಾಜ್ಯಪಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ವಿವರವಾಗಿ ಹೇಳಿ ಈಗ ಶೂನ್ಯ ವೇಳೆಯಲ್ಲಿ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ, ಅದಕ್ಕೆ ನಾವು ಉತ್ತರ ಕೊಟ್ಟಿದ್ದೇವೆ, ಇಲ್ಲಿಗೆ ಸಾಕು ಮಾನ್ಯ ಶ್ರೀರಾಮರೆಡ್ಡಿಯವರು ಕೆಲವು ವಿಚಾರಗಳನ್ನು ಹೇಳಿದ್ದಾರೆ ಈಗ ಎಲ್ಲಾ ಕಡೆಗೆ ನಾವು ಕಾರ್ಡ್ ಕೊಟ್ಟಿದ್ದೇವೆ ಎಲ್ಲೆಲ್ಲಿ ಕೊಟ್ಟಿಲ್ಲ, ಅದು ಸರ್ಕಾರದ ಗಮನಕ್ಕೆ ಬಂದರೆ, ಅದರ ಬಗ್ಗೆ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಅರಗ ಜ್ಞಾನೇಂದ್ರ ಹಿಂದಿನ ಸರ್ಕಾರದಲ್ಲೂ ಕೂಡ ಎಲ್ಲಾ ಬಡವರನ್ನು ಸರಿಯಾಗಿ ಗುರುತಿಸುವಂಥ ಕೆಲಸ ಆಗಲಿಲ್ಲ ಅವರಿಗೆ ಆಶ್ರಯ ಮನೆ ಸಿಗುವುದಿಲ್ಲ

ಶ್ರೀ ಧರ್ಮಸಿಂಗ್ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ತಾವು ಏನೇನು ಪ್ರಸ್ತಾಪ ಮಾಡುತ್ತೀರಿ, ಅದರ ಬಗ್ಗೆ ಸಮಗ್ರವಾದ ಉತ್ತರವನ್ನು ಕೊಡುತ್ತೇವೆ ವಿರೋಧ ಪಕ್ಷದ ನಾಯಕರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಕ್ಕೆ ಉತ್ತರ ಕೊಟ್ಟಿದ್ದೇವೆ

4 ನಿಯಮ 69ರ ಮೇರೆಗೆ ಮುಂದುವರೆದ ಮತ್ತು ಸರ್ಕಾರದಿಂದ ಉತ್ತರ ಬರಗಾಲ ಪೀಡಿತ ಪ್ರದೇಶಗಳಲ್ಲಿ "ಕೂಲಿಗಾಗಿ ಕಾಳು" ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಬಡ ಕೂಲಿ ಕಾರ್ಮಿಕರಿಗೆ ಹಂಚಲೆಂದು ಮೀಸಲಾದ ಅಕ್ಕಿಯು ಅವರಿಗೆ ತಲುಪದೆ, ದೊಡ್ಡ ಹಗರಣವಾಗಿರುವ ಬಗ್ಗೆ

ಅಧ್ಯಕ್ಷರು ನಿಯಮ 69ರ ಮೇಲೆ ಏನು ಚರ್ಚೆಯಾಗುತ್ತಾ ಇದೆ, ಇದು ಎರಡೂಮುಕ್ಕಾಲು ಗಂಟೆ ಚರ್ಚೆಯಾಗಿದೆ ಇನ್ನೂ ಬಹಳಷ್ಟು ಜನ ಸದಸ್ಯರು ಮಾತನಾಡುವುದಕ್ಕೆ ಅವರ ಅಭಿಲಾಷೆಯನ್ನು ವ್ಯಕ್ತಮಾಡಿದ್ದಾರೆ ಈಗ ಗಂಟೆಗಟ್ಟಲೆ ಚರ್ಚೆ ಮಾಡಿಕೊಂಡು ಹೋಗುವುದಕ್ಕೆ ನಿಯಮದ ಪ್ರಕಾರ ಅವಕಾಶ ಇಲ್ಲ ಆದ್ದರಿಂದ ಒಂದು ನಿಗದಿತ ಅವಧಿಯಲ್ಲಿ ನಾನು ಈ ಚರ್ಚೆಯನ್ನು ಮುಗಿಸಬೇಕಾಗುತ್ತದ

ಶ್ರೀ ಬಿ ಎಸ್ ಯಡಿಯೂರಪ್ಪ ಕಳೆದ 3–4 ದಿವಸಗಳ ಇಡೀ ರಾಜ್ಯದ ಕಡುಬಡವರು, ಇಂತಹ ಒಳ್ಳೆಯವರು ಅಧ್ಯಕ್ಷ ಪೀಠದಲ್ಲಿ ಕುಳಿತಿದ್ದಾರೆಂದು ನಿಮ್ಮನ್ನು ಶ್ಲಾಘನೆ ಮಡುತ್ತಿದ್ದಾರೆ ಇಂತಹ ಕಡುಬಡವರ ಬಗ್ಗೆ 4–5 ಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅ- ಕಾಶ ಕೊಟ್ಟಿರುವುದು ಇತಿಹಾಸವಿದೆ ಅದು ಅಗತ್ಯವಿತ್ತು ನೀವು ಕೂಲಿಗಾಗಿ ಬಗ್ಗೆಯೇ ಈ ಸದನದಲ್ಲಿ ಚರ್ಚೆ ಮಾಡಬೇಕಾಗಿರುವುದು ಬಾಯಿಯಿಲ್ಲದವರ ಬಗ್ಗೆ ಮಾತನಾಡುವ ಸಲುವಾಗಿ ನಮಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ ಉದಾಹರಣೆಗೆ ಹೇಳುವುದಾದರೆ, ತಾವು ದೊಡ್ಡ ಮನಸ್ಸು ಮಾಡಿ ನಿನ್ನೆಯ ದಿವಸ 16 ಲಕ್ಷ ಬಡವರ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿರುವುದರಿಂದ ಅವರಿಗೆ ತಿಂಗಳಲ್ಲಿ ತಪ್ಪಿರುವಂತಹ ಅಕ್ಕಿ ಸಿಕ್ಕಿತು, ಅವರಿಗೆ ನ್ಯಾಯ ಸಿಕ್ಕಿತು ನಾವು ಸಮಯಕ್ಕೆ ಸರಿಯಾಗಿ ಮಾತನಾಡಿ ಮುಗಿಸೋಣ ನಿಮ್ಮ ಸಲಹೆಯೂ ಸರಿಯಿದೆ ಅದಷ್ಟು ಬೇಗ ಮುಗಿಸಿಕೊಡುತ್ತೇವೆ, ನಿಮಗೆ ನಾವು ಸಹಕಾರವನ್ನು ಕೊಡುತ್ತೇವೆ

ಅಧ್ಯಕ್ಷರು ಈ ಚರ್ಚೆಯನ್ನು 2 ಗಂಟೆಗೆ ಮುಗಿಸಿ, ಈ ಬಗ್ಗೆ ಸರ್ಕಾರ 3 ಗಂಟೆಗೆ ಉತ್ತರವನ್ನು ಕೊಡಬೇಕು

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ನಿನ್ನೆ ಸದನವನ್ನು ಮುಂದುವರಿಸುತ್ತೇವೆಂದು ಹೇಳುವಾಗ ಮಾನ್ಯ ವಿರೋಧ ಪಕ್ಷದ ನಾಯಕ್ರು ಇರಲಿಲ್ಲ, ಆದರೆ ಎಲ್ಲಾ ಜವಾಬ್ದಾರಿ ಶಾಸಕರುಗಳು ಇದ್ದರು ಇಲ್ಲಾ ನಾವೆಲ್ಲರೂ ಒಂದು ಗಂಟೆಯೊಳಗಾಗಿ ಭಾಷಣವನ್ನು ಮುಗಿಸುತ್ತೇವೆ ಆದಾದನಂತರ ಸರ್ಕಾರ ಉತ್ತರವನ್ನು ಕೊಡಲಿ ಎಂದು ಹೇಳಿದರು ಆದರೆ ಮಾನ್ಯ ಸದಸ್ಯರಾದ ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು, ಮಾನ್ಯ ಜಯಪ್ರಕಾಶ್ ಹೆಗ್ಡೆ ಯವರು ಮಾತನಾಡಲಿ, ತಾವು ಯಾರ್ಯಾರು ಮಾನ್ಯ ಸದಸ್ಯರುಗಳಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬಹುದು ಅವರಿಗೆ ಕೊಡಿ ಅದು ತಮ್ಮ ವಿವೇಚನೆಗೆ ಬಿಟ್ಟಿರುವಂತಹ ವಿಷಯವಾಗಿದೆ ಆದರೆ ಇದನ್ನು ದೀರ್ಘವಾಗಿ ಎಳೆಯಬೇಕಾಗಿರುವಂತಹ ಪ್ರಮೇಯವೇನು ಇಲ್ಲ ನಿನ್ನೆಯ ದಿವವಸ ಮಾತನಾಡಿದಂತಹ ಹಿನ್ನೆಲೆಯಲ್ಲಿ ತಾವು ಎಲ್ಲರೂ ಬದ್ಧರಾಗಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ

ಅಧ್ಯಕ್ಷರು ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ತಾವು ಬೇಗನೆ ತಮ್ಮ ಭಾಷಣವನ್ನು ಮುಗಿಸಬೇಕು ತಾವುಗಳೆಲ್ಲರೂ 5–5 ನಿಮಿಷಗಳಲ್ಲಿ ಮುಗಿಸಿಕೊಟ್ಟರೆ ಅನೇಕ ಜನ ಹೊಸ ಸದಸ್ಯರುಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ ಇಲ್ಲದೆ ಹೋದರೆ ಹೊಸ ಸದಸ್ಯರುಗಳ ಹಕ್ಕನ್ನು ನೀವೇ ಕಿತ್ತುಕೊಂಡಂತಾಗುತ್ತದೆ ಇಷ್ಟನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ತಾವು ಚರ್ಚೆಯನ್ನು ಪ್ರಾರಂಭಿಸಬಹುದು

†ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ಯಾರು ಹಿರಿಯ ಸದಸ್ಯರೆಲ್ಲರೂ ಮಾತನಾಡಿದ್ದಾರೆ, ನಾನು ಆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ನಾನು ಆ ವಿಷಯವನ್ನು ಬಿಟ್ಟು ಬೇರೆ ವಿಷಯದ ಬಗ್ಗೆ ಟಚ್ ಮಾಡುತ್ತೇನೆ ಏಕೆಂದರ Repetition is not good ಈಗ ಕೂಲಿಗಾಗಿ ಕಾಳು ಯೋಜನೆಯಲ್ಲಿ ಒಟ್ಟು ಎಷ್ಟು ಉದ್ಯೋಗ ಸೃಷ್ಟಿಯಗಿದೆ ಎನ್ನುವುದರ ಬಗ್ಗೆ ಪ್ರಥಮವಾಗಿ ಲೆಕ್ಕವನ್ನು ತೆಗೆದು ಕೊಳ್ಳಬೇಕಾಗುತ್ತದೆ ಈಗ ಏನು 46 25 ಪೈಸೆ ಕೂಲಿ ಇದೆ ಅದರಲ್ಲಿ 31 25 ಪೈಸೆಯ ಕಾಳು, ಮತ್ತು ಉಳಿದ 15 ರೂಪಾಯಿಗಳ ಕ್ಯಾಷ್ ಕಾಂಪೊಸೆಂಟ್ ಇರುವಂಥದ್ದು ಅದು ಯಾವ ರೀತಿಯಲ್ಲಿ ಆಗಿದೆ, ಅದರ ಬಗ್ಗೆ

ತನಿಖೆಯಾಗಬೇಕಾಗುತ್ತದೆ ಕಳೆದ ಸದನದಲ್ಲಿ ಹಿರಿಯ ಸದಸ್ಯರುಗಳು ಇಲ್ಲಿ ಇರಲಿಲ್ಲ ಇಡೀ ಸದನದ ಒಂದು ಬೇಡಿಕೆಯನ್ನು ಇಟ್ಟಿದ್ದೇನೆಂದರೆ, ಜೆ ಸಿ ಬಿ ಯಲ್ಲಿ ಕೆಲಸ ಮಾಡುವುದಕ್ಕೆ ಪರ್ಮಿಶನ್ ಕೊಡಿ ಜೆಸಿಬಿ ಯಂತ್ರದಲ್ಲಿ ಕೆಲಸ ಮಾಡದೆ ತ್ವರಿತಗತಿಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ ಹಾಗಾದರೆ ಉದ್ಯೋಗವೇ ಸೃಷ್ಟಿಯಾಗಲಿಲ್ಲವೆಂತಲ್ಲ ಇಡೀ ಸಿಸ್ಟಮ್ ಫೆಲ್ಯೂರ್ ಆಯಿತು ಅದರ ಪರಪಸ್ ಏನಿತ್ತು? ಈ ಒಂದು ಕೂಲಿಗಾಗಿ ಕಾಳು ಯೋಜನೆಯಲ್ಲಿ ಬರ ಕಾಮಗಾರಿಯನ್ನು ಮಾಡಬೇಕೆಂದು ಹೇಳುವಂತಹದ್ದು ಅದು ನಡೆಯಲಿಲ್ಲವೆಂದು ನಾವೇ ಒಪ್ಪಿಕೊಂಡಂತೆ ಆಯಿತು ಅದರ ಬಗ್ಗೆ ತೀರ್ಮಾನ ತೆಗೆದುಕೊಂಡಿರುವುದು ಇದೇ ಸದನದಲ್ಲಿ ಹಾಗಾದರೆ ನೀವು ಯಾರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಈಗ ಕಂಟ್ರಾಕ್ಟ್‌ದಾರರು ಜೆಸಿಬಿ ಯಮತ್ರದಲ್ಲಿ ಕೆಲಸ ಮಾಡಿರುವುದು, ಕೂಲಿಕಾರರಿಗೆ ಹಣ ಸಿಗಲಿಲ್ಲ, ಅದನ್ನು ಮಾಡಿಸಿದವರು ಅಧಿಕಾರಿಗಳು ಮಾಡಿದವರು ಕಾರ್ಯಕರ್ತರು ಎಂದು ಮಾನ್ಯ ಸದಸ್ಯರಾದ ಶ್ರೀ ಜಿ ವಿ ಶ್ರೀರಾಮರೆಡ್ಡಿಯವರು ಹೇಳಿದರು ಯಾವ ಪಕ್ಷದ ಕಾರ್ಯಕರ್ತರು ಎಂಬುದು ಬೇಡ ರಾಜಕೀಯ ಪಕ್ಷದ ಕಾರ್ಯಕರ್ತರು ಮಾಡಿದರು ಎಂಬುದಕ್ಕೆ ಸಾಧಾರಣವಾಗಿ ಹೆಚ್ಚು ಕಡಿಮೆ ಎಲ್ಲರೂ ಒಪ್ಪಿಕೊಳ್ಳುತ್ತಾರೆ ಅದರ ಬಗ್ಗೆ ನಮಗೆ ನಾವು ದ್ರೋಹ ಬಗೆದುಕೊಳ್ಳುವುದು ಬೇಡ ಈ ಪರಿಸ್ಥಿತಿಯಲ್ಲಿ ನಾವು ಇನ್ನೊಂದು ಕಡೆಯಲ್ಲಿ ಯಾರು ಮಾಡಿದ್ದು? ಯಾರ ಮೇಲೆ ಕ್ರಮ ತೆಗೆದುಕೊಳ್ಳುವುದು ಎಲ್ಲದರ ಬಗ್ಗೆ ಚರ್ಚೆಯನ್ನು ಮಾಡುತ್ತೇವೆ ಇದರ ಬಗ್ಗೆ ತಹಶೀಲ್ದಾರವರಿಂದ ಹಿಡಿದು ಅಲ್ಲಿ ಇಂಜಿನಿಯರುಗಳು ಇದ್ದಾರೆ, ತಾಲ್ಲೂಕು ಪಂಚಾಯಿತಿಯವರು ಇದ್ದಾರೆ ಇವರುಗಳೆಲ್ಲರೂ ಭಾಗಿಯಾಗಿದ್ದಾರೆ ಆದರೆ ನಮ್ಮ ಭಾಗಕ್ಕಂತು ಬರುವುದಿಲ್ಲವೆಂದು ಹೇಳಿ, ಅಲ್ಲಿ ಬರ ಕಾಮಗಾರಿಗೆ ಬೇಕಾದಂತಹ ಹಣ ಬರಲಿಲ್ಲ, ಕೂಲಿಗಾಗಿ ಕಾಳು ಯೋಜನೆಯಲ್ಲಿ ಕಾಳೂ ಸಹ ಬರಲಿಲ್ಲ ನಮಗೆ ಕೊಡಬೇಕಾಗಿರುವಂತಹ ಶಾಸಕರ ನಿಧಿಯನ್ನೂ ಸಹ ಬರ ಕಾಮಗಾರಿಗೆ ಎಂದು ಬೇರೆ ಜಿಲ್ಲೆಗಳಿಗೆ ಕೊಟ್ಟರು ಕುಡಿಯುವ ನೀರಿನ ಯೋಜನೆಗಾದರೂ ಕೊಡಿ ಎಂದು ನಾನು ಈ ಸದನದಲ್ಲಿ ಹೇಳಿದೆ ನಮಗೆ ಬಹಳ ಮಳೆ ಬರುತ್ತದೆ, ಆದರೆ ನೀರು ಪೂರ್ತಿ ಸಮುದ್ರಕ್ಕೆ ಹೋಗುತ್ತದೆ ಹಣವನ್ನು ನಮಗೆ ಕೊಡಿ, ಶಾಸಕರ ನಿಧಿ ಹಾಗೂ ಕಾಳನ್ನು ಕೊಡಿ ನಾವು ಆ ಕೆಲಸವನ್ನು ಮಾಡಿಸುತ್ತೇವೆಂದು ಹೇಳಿದೆವು ಹಾಗೆ ಮಾಡಿದರೂ ಸಹ ಉದ್ಯೋಗ ಸೃಷ್ಟಿಯಂತೂ ಖಂಡಿತವಾಗಿಯೂ ಆಗುತ್ತಿರಲಿಲ್ಲ ಆದರೆ ಬೇರೆ ರೀತಿಯಲ್ಲಿ ಕೆಲಸಗಳಾಗುತ್ತಿತ್ತು, ಅಕ್ಕಿಯನ್ನು ಮಾಡಿ ಹಣವನ್ನು ಗುತ್ತಿಗೆದಾರರಿಗೆ ಕೊಟ್ಟಂತಹದ್ದು ಮತ್ತು ಈ ಅಕ್ಕಿಯನ್ನು ಮಾರಿದ್ದು ಯಾರು? ಹೊರದೇಶಕ್ಕೆ ಹೋಗುವಂತಹ ವ್ಯವಸ್ಥೆಯಲ್ಲಿ ಯಾರ್ಯಾರು ಭಾಗಿದಾರರಾಗಿದ್ದಾರೆ? ಇದರ ಬಗ್ಗೆ ಚರ್ಚೆಯನ್ನು ಮಾಡುವಾಗ ಅನೇಕ ಸಂಶಯಗಳಿಗೆ ಇದು ಈಡು ಮಾಡುತ್ತದೆ ಅದಕ್ಕೋಸ್ಕರವಾಗಿ ತನಿಖೆಯನ್ನು ಮಾಡಬೇಕಾಗುತ್ತದೆ ಆ ರೀತಿಯಾಗಿ ತನಿಖೆಯನ್ನು ಮಾಡುವಾಗ ಈ ಸದನದಲ್ಲಿ ತೀರ್ಮಾನವಾಗಿರುವುದರಿಂದ ಹಿಡಿದು ಅಲ್ಲಿ ಯಾರು ಈ ರೀತಿಯಾಗಿ ಕೆಲಸವನ್ನು ಮಾಡಿದ್ದಾರೆ ಇವೆಲ್ಲವೂ ಸಹ ಬರಬೇಕಾಗುತ್ತದೆ ಒಂದು ವೇಳೆ ನಾವೇ ತೀರ್ಮಾನವನ್ನು ಮಾಡಿ ಅಕ್ಕಿಯನ್ನು ಮಾರಿದ್ದರೆ ಇದರ ಬಗ್ಗೆ ಜವಾಬ್ದಾರಿಯನ್ನು ಯಾರಿಗೆ ಮಾಡಬೇಕಾಗುತ್ತದೆ ಎನ್ನುವಂತಹ ವಿಷಯ ಬಹಳ ಪ್ರಮುಖವಾದಂತಹದ್ದು ಈ ಯೋಜನೆಯೇ ತಪ್ಪು ಎಂಬ ಬಗ್ಗೆ ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಹೇಳಿರುವುದನ್ನು ನಾನು ಒಪ್ಪುತ್ತೇನೆ ಯಾವ ಉದ್ದೇಶದಿಂದ ಕೇಂದ್ರ ಸರ್ಕಾರದವರು ಈ ಯೋಜನೆಯನ್ನು ಜಾರಿಗೆ ತಂದರು, ಆ ಯೋಜನೆಯೇ ತಪ್ಪು ಎಂದು ನಾನು ಕೂಡ ಹೇಳುವಂತಹದ್ದು ಏಕೆಂದರೆ 46 25 ಪೈಸೆಗೆ ಯಾರೂ

ಕೂಲಿಗೆ ಬರುವುದಿಲ್ಲ, ಇವತ್ತಿನದಿವಸ ಅಪ್ಪರ್‌ಕೃಷ್ಣದಲ್ಲಿ ಆಗುತ್ತಿರುವುದು ಇದೇ? ಜೆಸಿಬಿಯಲ್ಲಿ ಕೆಲಸ ಮಾಡಿಸಿ ಮ್ಯಾನ್ಯೂಯಲ್ ಲೇಬರ್ ಲೆಕ್ಕಹಾಕಿ ಟೆಂಡರನ್ನು ಕರೆಯುವುದಾಗಿದೆ ಎಲ್ಲಾ ಕಡೆಗಳಲ್ಲೂ ಇದೇ ರೀತಿಯ ವ್ಯವಸ್ಥೆಯಾಗಿದೆ ಅದಕ್ಕೋಸ್ಕರ ಬ್ಯೂರೋಕ್ರೆಸಿಯ ಬಗಗೆ ನಾವು ಚರ್ಚೆಯನ್ನು ಮಾಡಿದ್ದೀವೆ, ಅದರಲ್ಲಿ ಬೇರೆ ಬೇರೆ ವಿಷಯಗಳ ಬಗ್ಗೆ ಮಾಡಿದ್ದೇವೆ ಬ್ಯೂರೋಕ್ರೆಸಿ ಇಲ್ಲಿ ಅಲ್ಲ, ನಾನು ದಿವಸ ಅಮೇರಿಕಾದಲ್ಲಿ ಒಂದು ಮ್ಯಾಗಜೈನ್‌ನ್ನು ಓದುತ್ತಿದ್ದೆ, ಅಲ್ಲಿ ಒಂದು ಗೈಡ್‌ಲೈನ್ಸ್ ಫಾರ್ ಬ್ಯೂರೊಕ್ರಾಟ್ಸ್ ಎಂದು ಬರೆದಿತ್ತು when incharge ponder, when in trouble delegate,ಪವರ್ ಡೆಲಿಗೇಟ್ ಮಾಡಿಬಿಡುವುದು when in doubt mumble ಎಂದು ಉತ್ತರವನ್ನೇ ಕೊಡುವುದಿಲ್ಲ ಈ ಪರಿಸ್ಥಿತಿ ಇರುವಾಗ ಅದಕ್ಕೇ ನಿಕೋಲಸ್ ಪಾಸ್ಟ್ ಹೇಳಿರುವುದು I am not ruling Russia, ten thousand clerks are ruling Russia ಎಂದು ಅದಕ್ಕಾಗಿ ಸರ್ಕಾರಕ್ಕಂತೂ ಏನೂ ಗೊತ್ತಾಗುವುದಿಲ್ಲ ಈಗ ಮಂತ್ರಿಗಳ ಬಗ್ಗೆ ಮಾತನಾಡಿದರು ಯಾವ ಮಂತ್ರಿ, ಎಲ್ಲಾ ಮಂತ್ರಿಗಳು ಒಂದೇ ತರಹ ಇರುತ್ತಾರೆಂದು ನಾನು ಹೇಳುವುದಿಲ್ಲ ಯಾವ ಮಂತ್ರಿಗಳಿಗೆ ಹಿಡಿತ ಇರುತ್ತದೆ, ಅವರು ಅಧಿಕಾರಿಗಳ ಹತ್ತಿರ ಕೆಲಸವನ್ನು ಮಾಡಿಸುತ್ತಾರೆ ಈಗ ಏನಾಗಿದೆ ಎಂದರೆ ರೀಜನ್‌ವೈಸ್ ರೆಪ್ರಸೆಂಟೇಷನ್ ಕೊಡಬೇಕು, ಜಾತಿವಾರು ರೆಪ್ರಸೆಂಟೇಷನ್ ಕೊಡಬೇಕಾಗಿದೆ, ಆ ಹಾಗಾಗಿ ಕೆಲವರು ಬಂದಿರುತ್ತಾರೆ, ಅವರಿಗಂತೂ ಖಂಡಿತವಾಗಿ ಕೆಲವರಿಗೆ ಕಂಟ್ರೋಲ್ ಇರುವುದೇ ಇಲ್ಲ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿರುವುದನ್ನು ನಾನು ಒಪ್ಪುತ್ತೇನೆ ಆದರೆ ಈ ವ್ಯವಸ್ಥೆಯಲ್ಲಿ ಇದನ್ನೆಲ್ಲಾ ಚರ್ಚೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಮಂತ್ರಿಗಳಿಗೆ ಹಿಡಿತ ಇರುವುದನ್ನು ಅವರೇ ಬಿಟ್ಟುಕೊಡುವುದು ಬಹಳ ಸೂಕ್ತವೆಂದು ನಾನು ಅಂದುಕೊಂಡಿದ್ದೇನೆ ಅವರಿಗೆ ಇದನ್ನು ನೋಡಲಿಕ್ಕೆ ಯಾವಾಗ ಆಗುವುದಿಲ್ಲ, ಇವತ್ತು ನಮ್ಮ ಜಿಲ್ಲೆಯಲ್ಲಿ ಏನು ಕೆಲಸವಾಗಿದೆ, ಇವೆಲ್ಲವೂ ಬರದೆ ಹೋದರೂ ಸಹ ಕೂಲಿಗಾಗಿ ಕಾಳು ಯೋಜನೆಯಲ್ಲಿ ಕೆಲವು ಕಾಮಗಾರಿಗಳು ಆಗಿದೆ ಇವತ್ತಿನ ದಿವಸ ಜೆಸಿಬಿಯಲ್ಲಿ ಕೆರೆಯ ಹೂಳನ್ನು ಎತ್ತುತ್ತಾರೆ, ಆ ಯಂತ್ರದ ಸಹಾಯದಿಂದ 4 ಕೆರೆಯ ಹೂಳನ್ನು ಒಂದೇ ದಿವಸದಲ್ಲಿ ಎತ್ತಬಹುದು ಈ ಪ್ರಕಾರ ಕೆಲಸ ಮಾಡುವುದಕ್ಕೆ ಆಗುತ್ತದೆಯೇ ಎಂದರೆ ಮಾಡಿದ್ದಾರೆ, ಒಂದೇ ದಿವಸದಲ್ಲಿ 4 ಕೆರೆಯ ಹೂಳನ್ನು ಜೆಸಿಬಿ ಯಂತ್ರದಿಂದ ಎತ್ತಿರುವುದನ್ನು ಅಲ್ಲಿ ಇರುವ ಪಕ್ಕದ ದಂಡೆಗೆ ಹಾಕುತ್ತಾರೆ, ಆದರೆ ಇದನ್ನು ಮಳೆ ಬರುವುದಕ್ಕೆ ಮುಂಚೆ ಮಾಡಿರುವುದು ಮಳೆ ಬಂದ ತಕ್ಷಣ ಅದು ಪುನಃ ಅದೇ ಕೆರೆಗೆ ಹೊಗುತ್ತದೆ ಪುನಃ ಅದೇ ಕಾಮಗಾರಿಯನ್ನು ಕೈಗೊಳ್ಳುವುದಕ್ಕೆ ಈ ಕೆಲಸಗಳನ್ನು ಮಾಡುವುದು ಆಗುತ್ತದೆ ಈ ವ್ಯವಸ್ಥೆಯ ಬಗ್ಗೆ ಚರ್ಚೆಯನ್ನು ಮಾಡಬೇಕಾದರೆ ಕೇವಲ ಅಧಿಕಾರಿಗಳು, ಜಿಲ್ಲಾಧಿಕಾರಿಗಳು, ಅಡಿಷನಲ್ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ತನಿಖೆಯಾಗಬೇಕಾಗುತ್ತದೆ ಹಿಂದೆ ಲೋಕಾಯುಕ್ತದವರು ಈ ಬರ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ ಆದರೆ ನಾವು ಇದರ ಬಗ್ಗೆ ಚರ್ಚೆ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಆಗ ಶ್ರೀಮಾನ್ ಚಂದ್ರೇಗೌಡರು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದರು ಆದರೆ ಸರ್ಕಾರದವರು ಲೋಕಾಯುಕ್ತದವರು ನಮಗೆ ಪತ್ರವನ್ನೇ ಬರೆದಿಲ್ಲ, ನಮಗೆ ವರದಿಯನ್ನೇ ಕಳುಹಿಸಿಲ್ಲವೆಂದು ಹೇಳಿದರು ಈಗ ಬಗ್ಗೆ ಮಾನ್ಯ ಅರಗ ಜ್ಞಾನೇಂದ್ರರವರೇ ತಮಗೆ ಗೊತ್ತಿರಬಹುದು ಆದರೆ ಇದು ಇವತ್ತು ಬೆಳಕಿಗೆ ಬರಬೇಕಾದರೆ ಅವತ್ತು ನಡೆದಿರುವುದು ನಿಜ, ಲೋಕಾಯುಕ್ತದವರು ತನಿಖೆಯನ್ನು

ಮಾಡಿರುವುದು ನಿಜ, ವರದಿಯನ್ನು ಕೊಟ್ಟಿರುವುದು ನಿಜ ಆದರೆ ಲೋಕಾಯುಕ್ತದವರು ಕೊಟ್ಟ ವರದಿಗೆ ಯಾವುದೇ ರೀತಿಯ ಬೆಲೆಯನ್ನು ಸರ್ಕಾರದವರು ಕೊಡಲಿಲ್ಲವೆನ್ನುವುದು ನಮ್ಮ ಗಮನಕ್ಕೆ ಬರುತ್ತದೆ ಕಳೆದ ಅಧಿವೇಶನದಲ್ಲಿ ಚರ್ಚೆಯಾದುದರ ಬಗ್ಗೆಯೂ ಸಹ ನಾವು ಸ್ವಲ್ಪ ಗಮನದಲ್ಲಿಟ್ಟುಕೊಂಡು ನೋಡಬೇಕಾಗುತ್ತದೆ ಎಷ್ಟು ಅಕ್ಕಿ ಬಂದಿದೆ, ಎಷ್ಟು ಉದ್ಯೋಗ ಸೃಷ್ಟಿಯಾಗಿದೆ? ಉದ್ಯೋಗ ಸೃಷ್ಟಿಯಾಗದೆ ಇದ್ದರೆ ಯಾವ ರೀತಿಯಲ್ಲಿ ಕೆಲಸ ಮಾಡಿದೆ, ಜೆಸಿಬಿಯಿಂದ ಕೆಲಸವನ್ನು ಮಾಡಿಸಿದ್ದರೆ ಆ ಕೆಲಸವನ್ನು ಯಾರು ಮಡಿದ್ದಾರೆ? ಅವರಿಗೆ ಕಾಳನ್ನು ಕೊಟ್ಟಿದ್ದಾರಾ? ಅಕ್ಕಿಯನ್ನು ಕೊಟ್ಟಿದ್ದಾರಾ ಅಥವಾ ಕಾಳನ್ನು ಮಾರಿ ಅವರಿಗೆ ಹಣವನ್ನು ಕೊಟ್ಟಿದ್ದರೆ ಅಧಿಕಾರಿ ಮಾಡಿರುವುದು ತಪ್ಪು ಅವರಿಗೆ ಕಾಳನ್ನು ಕೊಡಬೇಕಾಗಿತ್ತು ನಿನ್ನೆಯ ದಿವಸ ಇವೆಲ್ಲದರ ಬಗ್ಗೆ ಚರ್ಚೆ ನಡೆಯುವಾಗ ನಾನು ಒಬ್ಬ ಅಧಿಕಾರಿಗೆ ದೂರವಾಣಿ ಮಾಡಿ ಕೇಳಿದೆ, ಒಂದು ಕೆಜಿ ಅಕ್ಕಿಗೆ 6 25 ಪೈಸೆ ಎಂದು ಹೇಳಿದರು ಅದನ್ನು ಸರ್ಕಾರದವರು ಕೊಡುವಂತಹದ್ದು, ಅದನ್ನು ಮಾರುಕಟ್ಟೆಯಲ್ಲಿ 11 ರೂಪಾಯಿಗೆ ಮಾರುತ್ತಾರೆ ಈ ವ್ಯತ್ಯಾಸದಿಂದ ಅವರಿಗೆ ಲಾಭ ಜಾಸ್ತಿಯಗಿದೆ ನಾವು ಇಲ್ಲಿ 46 25 ಪೈಸೆ ಒಬ್ಬನಿಗೆ ಸಿಗಬೇಕೆಂದು ಈ ಯೋಜನೆಯಲ್ಲಿದ್ದರೆ ನಿಜವಾಗಿ ಅವರಿಗೆ ಸಿಗುವುದು 11 25 ಪೈಸೆಯಲ್ಲಿ 6 25 ಪೈಸೆ ಮಿಕ್ಕಿದ್ದೆಲ್ಲಾ ಮಾರಾಟ ಮಾಡಿದವರಿಗೆ ಸಿಗುತ್ತದೆ ಅದು ಜಾಸ್ತಿಯಾಗಿದೆ ಆ ಒಂದು ಷಡ್ಯಂತರದಲ್ಲಿ ಅಕ್ಕಿಯನ್ನು ಕಳುಹಿಸುವ ಬಗ್ಗೆ ಏನು ವ್ಯವಸ್ಥೆಯಾಗಿದೆ, ರಾಜ್ಯದ ಮೇಲೆ ಅಧಿಕಾರವನ್ನು ಯಾರು ಮಾಡುತ್ತಾರೆ, ನನಗೆ ನಿನ್ನೆಯ ದಿವಸ ಮಾನ್ಯ ಯಡಿಯೂರಪ್ಪನವರು ಒಂದು ಮಾತನ್ನು ಹೇಳಿದರು ಪ್ರಬಲವಾದ ಮಂತ್ರಿಗಳು ಇದರಲ್ಲಿ ಭಾಗಿಯಾಗಿದ್ದಾರೆ ಎಂದು ಪ್ರಸ್ತಾವ ಮಾಡಿದರು ದಯವಿಟ್ಟು ತಾವು ಅವರ ಹೆಸರುಗಳನ್ನು ಹೇಳಿದರೆ ಒಳ್ಳೆಯದು ಏಕೆಂದರೆ ಎಲ್ಲರ ಮೇಲೂ ಅಪಾದನೆ ಬರುವುದು ಬೇಡ ಯಾವ ಮಂತ್ರಿಗಳು ಇದರಲ್ಲಿ ಭಾಗಿಯಾಗಿದ್ದಾರೆ ದಯವಿಟ್ಟು ಅವರ ಹೆಸರು ಹೇಳಿ ಮಾತನಾಡುವುದನ್ನು ತಾವು ಮಾಡಬೇಕಾಗುತ್ತದೆ ಇಲ್ಲದೆ ಹೋದರೆ ಸುಮ್ಮನೆ ಯಾರು ಭಾಗಿದಾರರಾಗಿಲ್ಲ ಅವರನ್ನು ಅನುಮಾನ ಮಾಡುವಂತಹ ಪರಿಸ್ಥಿತಿ ನಿರ್ಮಾಣ ಮಾಡಬಾರದು ಎಂದು ಹೇಳುತ್ತೇನೆ ಈ ಸಿಸ್ಟಮ್ ಏನಾಗಿದೆ, this itself is a fraud ಎಂದು ನಾನು ಹೇಳುತ್ತೇನೆ

1 10 ಪಿ ಎಂ

ಅದನ್ನು ಯಾವರೀತಿ ತನಿಖೆ ಮಾಡಬೇಕು ಎಂಬುದರ ಬಗ್ಗೆ ಸರ್ಕಾರದವರು ತೀರ್ಮಾನವನ್ನು ತೆಗೆದುಕೊಳ್ಳಬೇಕು ಇದಕ್ಕೆಲ್ಲಾ ಅವಕಾಶವನ್ನು ಮಾಡಿಕೊಟ್ಟವರು ಯಾರು ಎನ್ನುವಂಥಾದ್ದು ಬಹಳ ಮುಖ್ಯವಾದುದು ಇದಕ್ಕೆ ಅವಕಾಶವನ್ನು ಮಾಡಿಕೊಟ್ಟದ್ದು ಯಾರು ಮತ್ತು ಯಾರು ಈ ಕಾರ್ಯಕ್ರಮವನ್ನು ಹಾಕಿದರು? ಯಾರು ಇದಕ್ಕೆ ಒಪ್ಪಿಗೆಯನ್ನು ಕೊಟ್ಟವರು? ಇದು ಏಫಾಗಿದೆಯೆಂದರೆ ಇಲ್ಲಿ ನಾವು ಹೊಸ ಗುತ್ತಿಗೆದಾರರನ್ನು ತಯಾರು ಮಾಡಿದ್ದೇವೆ ಇವರು ಹಳಬರಲ್ಲ, ರಿಜಿಸ್ಟರ್ಡ್ ಕಂಟ್ರಾಕ್ಟರ್ಸ್ ಅಲ್ಲ ಎಂದು ರಮೇಶ್‌ಕುಮಾರ್ ಮತ್ತು ಶ್ರೀರಾಮರೆಡ್ಡಿಯವರು ಹೇಳಿದರು ಇವರು ರಿಜಿಸ್ಟರ್ಡ್ ಅಲ್ಲ ಈ ಕೆಲವು ಜನಪ್ರತಿನಿಧಿಗಳು, ಯಾರು ಎಂದು ಹೇಳುವುದಕ್ಕೆ ನಾನು ಇಚ್ಛೆಪಡುವುದಿಲ್ಲ ಜನಪ್ರತಿನಿಧಿಗಳಾಗಿ ಅವರೇ ಸ್ವತಃ ಗುತ್ತಿಗೆಯನ್ನು ಮಾಡಿರುವಂಥಾದ್ದು ಇದು ಏಕೆ ಬರೇ ಕಾರ್ಮಿಕರ ಮೇಲೆ ಹೇಳುವಂಥಾದ್ದು ನಾವು? ಮಹಿಳೆಯರು ಇಲ್ಲಿ ಇದ್ದಾರೆ ಮಹಿಳಾ ಪ್ರತಿನಿಧಿಗಳು ಎಂದರೆ ಅವರ ಮೇಲೆ ನಾನು ಆಪಾದನೆ ಮಾಡುತ್ತಿಲ್ಲ ಆಗಿರುವಂಥಾದ್ದನ್ನು ಇಲ್ಲಿ ನಾನು ಹೇಳುತ್ತಿದ್ದೇನೆ ಅವರ ಮನೆಯವರು ಕೆಲವರು ಕೆಲಸ ಮಾಡಿದ್ದಂಥಾದ್ದು ಇದೆ ಅದನ್ನು ನಾನು ಆಪಾದನೆ

ಮಾಡಿ ತನಿಖೆ ಮಾಡಿ ಎಂದು ಹೇಳಿದಾಗ ನಮ್ಮ ಮೇಲೆ ಪತ್ರಿಕಾ ಹೇಳಿಕೆಗಳನ್ನು ಕೊಟ್ಟಿದ್ದನ್ನು ಹಿಂದಿನ ಸರ್ಕಾರ ಇದ್ದಾಗ ಮಂತ್ರಿಗಳಿಗೆ ನನ್ನ ಆಪಾದನೆಯನ್ನು ಕೊಟ್ಟಿದ್ದೆ ತನಿಖೆ ಮಾಡಲಿಕ್ಕೆ ತಾಲ್ಲೂಕು ಪಂಚಾಯತಿಗೆ ಕಳಿಸಿದರೆ ಅಲ್ಲಿ ತಾಲ್ಲೂಕು ಪಂಚಾಯತ್ ಎಕ್ಸಿಕ್ಯೂಟಿವ್ ಆಫೀಸರ್ ತನಿಖೆಯನ್ನು ಮಾಡಿ ವರದಿಯನ್ನು ಕೊಟ್ಟಿದ್ದಾರೆ ಆದರೆ ಅದು ಬೆಂಗಳೂರಿನವರೆಗೆ ಬರುವುದಿಲ್ಲ ಅದು ಅಲ್ಲಿಗೇ ನಿಂತುಹೋಗುತ್ತದೆ ಈ ವ್ಯವಸ್ಥೆ ಯಾವರೀತಿ ಇದೆಯೆಂದು ನಾನು ಹೇಳುತ್ತಿದ್ದೇನೆ ಯಾರು ಪ್ರಬಲರು ಇದ್ದಾರೆ, ಅವರ ಮೇಲೆ ಏನು ಕಂಪ್ಲೇಂಟ್ ಕೊಟ್ಟರೂ ಅದು ಬೆಂಗಳೂರಿಗೆ ಬರುವುದಿಲ್ಲ ಮತ್ತು ಅವರ ಮೇಲೆ ಯಾವ ಕ್ರಮವನ್ನೂ ಕೂಡ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಅದಕ್ಕೋಸ್ಕರ, ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚಿಗೆ ಮಾತನಾಡಲಿಕ್ಕೆ ಹೋಗುವುದಿಲ್ಲ ತನಿಖೆ ಮಾತ್ರ ಆಗಲೇಬೇಕಾಗುತ್ತದೆ ಸಿ ಬಿ ಐ ತನಿಖೆಯಲ್ಲಿ ನನಗೂ ನಂಬಿಕೆ ಇಲ್ಲ ಏಕೆಂದರೆ ನಾವು ನೋಡುತ್ತಿದ್ದೇವೆ, ಡಾ ಚಿತ್ತರಂಜನ್ ಹತ್ಯೆ ಬಗ್ಗೆ ತನಿಖಾ ವರದಿ ಇನ್ನೂ ಕೂಡ ಬಂದಿಲ್ಲ ಆದ್ದರಿಂದ ಅತಿಶೀಘ್ರಗತಿಯಲ್ಲಿ ಆಗುವಂತಹ ತನಿಖೆ ಆಗಬೇಕು ಇದರ ಬಗ್ಗೆ ಜಂಟಿ ಸದನ ಸಮಿತಿಯನ್ನು ಮಾಡಿ ಅದಕ್ಕೆ ಒಂದು ತಿಂಗಳು ಅವಕಾಶವನ್ನು ಕೊಟ್ಟರೆ ಇದನ್ನೆಲ್ಲಾ ಹುಡುಕುವುದೇ ಸಾಧ್ಯವೇ ಆಗುವುದಿಲ್ಲ ಇದನ್ನು ಸಂಪೂರ್ಣವಾಗಿ ಹುಡುಕಬೇಕಾದರೆ ಸದಸ್ಯರುಗಳು ಒಂದು ವರ್ಷಕಾಲ ಕೆಲಸವನ್ನು ಮಾಡಬೇಕಾಗುತ್ತದೆ ಆದರೆ ಎಲ್ಲವನ್ನೂ ಹುಡುಕಿ ಅಪರಾಧಿಗಳು ಸಿಕ್ಕಿದಾಗ ಮತ್ತು ಇಡೀ ರಾಜ್ಯದಲ್ಲಿ ಇದು ಆದಾಗ, ಎಲ್ಲಾ ಅಧಿಕಾರಿಗಳ ಮೇಲೂ ಆಪಾದನೆ ಬಂದಾಗ ನೀವು ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆ ಎನ್ನತಕ್ಕದ್ದು ಬೇಕಾಗುತ್ತದೆ ಜಿಲ್ಲಾಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಾವು ಹೇಳಿದ್ದೀರಿ ಅವರ ಕೆಳಗಿನವರು ಮಾಡಿದ ತಪ್ಪಿಗೆ ಒಬ್ಬ ಜಿಲ್ಲಾಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಾದರೆ ನಾನು ಒಪ್ಪುತ್ತೇನೆ ಆದರೆ ಎಲ್ಲರೂ ಕೂಡ ಇದರಲ್ಲಿ ಭಾಗಿದಾರರು ಆಗಿದ್ದರೆ, ಜಿಲ್ಲಾಧಿಕಾರಿಗಳ ಅಲಕ್ಷ್ಯದಿಂದ ಇದಾಗಿದ್ದರೆ ಅದು ಒಂದು ಅಂಶ ಆದರೆ ಹಾಗೆ ಆಗದೆ ಕೆಲವು ಅಧಿಕಾರಿಗಳ ನಿರ್ಲಕ್ಷ್ಯದಿಂದ ಆಗಿದ್ದರೆ ಎಷ್ಟು ಜನ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದೆ ಎನ್ನುವುದು ಇದರಲ್ಲಿ ಬರುತ್ತದೆ ಇದು ಬಹಳ ಮುಖ್ಯವಾದ ಅಂಶ ಏಕೆಂದರೆ ಇದು ಇಡೀ ರಾಜ್ಯದಲ್ಲಿ ಆದಂಧಾದ್ದು ಇದು ಎಲ್ಲಾ ಅಧಿಕಾರಿಗಳ ಮೇಲೆ ಆಪಾದನೆ ಬರುವಂಧಾದ್ದು ಇದರ ಬಗ್ಗೆ ತನಿಖೆಯಾಗಬೇಕಾಗುತ್ತದೆ ಮತ್ತು ಆಪರಾಧಿಗಳು ಯಾರು ಎಂಬುದು ಗೊತ್ತಾಗಬೇಕಾಗುತ್ತದೆ ಕೊನೆ ಪಕ್ಷ ಕ್ರಮ ತೆಗೆದುಕೊಳ್ಳುವುದಕ್ಕೆ ಆಗದೇ ಇದ್ದರೂ ಇಂತಹ ಅಧಿಕಾರಿಗಳು they were negligent' ಅಂತ ಹೇಳುವಂಧಾದ್ದು ಮುಂದೆ ಅವರ ಸರ್ವೀಸ್‌ನಲ್ಲಿ ಪ್ರಮೋಶನ್ಸ್ ಏನು ಬರುತ್ತದೆ, ಅದರಲ್ಲಿಯಾದರೂ ಅದನ್ನು ಗುರುತು ಮಾಡಿಕೊಂಡು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ನಾನು ಸರ್ಕಾರಕ್ಕೆ ಹೇಳುತ್ತೇನೆ ಜಂಟಿ ಸದನ ಸಮಿತಿ ಮಾಡುವುದಾದರೆ ಅದರ ಮುಖಾಂತರ ತನಿಖೆ ಮಾಡಿ ಆದರೆ ತನಿಖೆ ಅಂತೂ ಆಗಲೇಬೇಕಾಗುತ್ತದೆ ಈ ಎಲ್ಲಾ ವಿಷಯಗಳೂ ಹೊರಬರಬೇಕೆಂದು ಹೇಳುತ್ತಾ ಮಾನ್ಯ ಅಧ್ಯಕ್ಷರಿಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

†ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಸನ್ಮಾನ್ಯ ಅಧ್ಯಕ್ಷರೇ, ನಾನು ಮತ್ತು ನಮ್ಮ ಪಕ್ಷದ ನಾಯಕರು ಮತ್ತು ಪ್ರತಿಪಕ್ಷದ ನಾಯಕರಾದ ಸನ್ಮಾನ್ಯ ಯಡಿಯೂರಪ್ಪನವರು ಮತ್ತು ಸನ್ಮಾನ್ಯ ರಾಮಚಂದ್ರಗೌಡ ಅವರು ಹಿಂದಿನ ಭಾನುವಾರ ಹೊಸೂರು ರಸ್ತೆಯಲ್ಲಿರುವ ಚಾಮುಂಡಿ ಫ್ಲೋರ್ ಮಿಲ್ಸ್‌ಗೆ ಹೋಗಿದ್ದೆವು ಅಲ್ಲಿ ಹೋಗಿದ್ದಾಗ ಆಶ್ಚರ್ಯವಾಗುವ ರೀತಿಯಲ್ಲಿ ಏಳು ಲಾರಿಗಳಲ್ಲಿ

ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಸೀಲ್ ಇರುವಂತಹ ಚೀಲಗಳಲ್ಲಿ ಗೋಧಿ ಇರುವುದನ್ನು ನಾವು ನೋಡಿದ್ದೇವೆ ಅದೊಂದೇ ಅಲ್ಲ, ಸುಮಾರು ಆರು ಸಾವಿರ ಚೀಲಗಳು ಆ ಗೋಡೌನ್‌ನಲ್ಲಿ ಇದ್ದವು ಪಡಿತರ ಚೀಟಿ ವ್ಯವಸ್ಥೆಯಲ್ಲಿ 65 ಸಾವಿರ ಹಳದಿ ಕಾರ್ಡುಗಳು ಬೆಂಗಳೂರು ದಕ್ಷಿಣಕ್ಕೂ, 60 ಸಾವಿರ ಕಾರ್ಡುಗಳನ್ನು ಬೆಂಗಳೂರು ಉತ್ತರ ಭಾಗದಲ್ಲಿ ಏನು ಬಡವರಿಗೆ ಕೊಡಬೇಕಾಗಿತ್ತೊ ಅದು ವಿತರಣೆ ಆಗದೇನೆ ಗೋಡೌನ್‌ಗಳಲ್ಲಿ ಸೇರಿವೆ ಅದೊಂದೇ ಅಲ್ಲ, ಇವತ್ತು ಬೇರೆಬೇರೆಯವರ ಮಾಹಿತಿಗಳ ಪ್ರಕಾರ ಇವತ್ತು ಹೊಸಕೋಟೆ ಗೋಡೌನ್‌ನಲ್ಲಿ ಸುಮಾರು 20 ಸಾವಿರ ಚೀಲಗಳು ಇವೆಯೆಂದು ಆರೋಪ ಇದೆ ಮಾತ್ರವಲ್ಲ ಬೆಂಗಳೂರು ಸುತ್ತಮುತ್ತ ಮೈಸೂರು ರಸ್ತೆಯಲ್ಲಿ ಇರುವಂತಹ ರೈಸ್ ಮಿಲ್‌ಗಳಲ್ಲಿ ಸುಮಾರು 10ಸಾವಿರ ಮೂಟೆಗಳು ಇವೆಯೆಂದು ಹೇಳಿ ಇವತ್ತು ಆರೋಪ ಮಾಡುತ್ತಿದ್ದಾರೆ ಇದು ಯಾವ ರೀತಿ ಸಾಧ್ಯವಾಯಿತು? ಸರ್ಕಾರ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೇ ಇದ್ದ ಕಾರಣ ಇದು ಆಗಲಿಕ್ಕೆ ಸಾಧ್ಯವಾಯಿತು ಸ್ವಾಮಿ, ಇದು ಇವತ್ತೇ ಆಗಿರುವಂಥಾದ್ದಲ್ಲ 1995–96, 96–97 ಮತ್ತು 97–98ರಿಂದ ಆವತ್ತಿನಿಂದ ಆಗಿದ್ದಂದಂಥ ಹಗರಣಗಳು ಇವು ಇವತ್ತು ಹೊಸದಾಗಿ ಆಗಿದ್ದಲ್ಲ ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನಲ್ಲಿ ಆಗಿರುವಂಥ ಹಗರಣದ ಪತ್ರಿಕೆಗಳಲ್ಲಿ ಕೂಡ ಬಂದಿದೆ ಹಿಂದೆ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಇದರ ಬಗ್ಗೆ ಬರೆದಿದ್ದಾರೆ ಆವತ್ತು ಫೈಲ್ ಆಗಿದ್ದಂಥ ಕೇಸು ಇಲ್ಲಿಯತನಕ ಇತ್ಯರ್ಥವಾಗಿಲ್ಲ

ಸನ್ಮಾನ್ಯ ಅಧ್ಯಕ್ಷರೇ, ಒಂದು ಪಡಿತರ ಕಾರ್ಡಿಗೆ 28 ಕೆ.ಜಿ ಅಕ್ಕಿ ಮತ್ತು 7 ಕೆ ಜಿ ಗೋಧಿ ಕೊಡಬೇಕೆಂದು ಇದೆ ಇದನ್ನು ಯಾವ ರೀತಿಯಲ್ಲಿ ಕೊಡುತ್ತಾರೆ? ಅಕ್ಕಿ ಕೆ ಜಿ ಗೆ ಆರು ರೂಪಾಯಿ ಹದಿನೈದು ಪೈಸೆ ಮತ್ತು ಗೋಧಿಗೆ ನಾಲ್ಕು ರೂಪಾಯಿ ಎಪ್ಪತ್ತು ಪೈಸೆ ದರದಲ್ಲಿ ಕೊಡುತ್ತಾರೆ ಇದನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿದರೆ ಎಷ್ಟು ಸಿಗುತ್ತದೆ? ಅಕ್ಕಿಗೆ ಹತ್ತು ರೂಪಾಯಿ ಮತ್ತು ಗೋಧಿಗೆ ಹತ್ತು ರೂಪಾಯಿ ಅಂದರೆ 28 ಕೆ ಜಿ ಅಕ್ಕಿಮೇಲೆ ಸುಮಾರು 107 ರೂಪಾಯಿ ಸಿಗುತ್ತದೆ 7 ಕೆ ಜಿ ಗೋಧಿಮೇಲೆ 35 ರೂಪಾಯಿ ಸಿಗುತ್ತದೆ ಹಾಗೆಂದಮೇಲೆ 142 ರೂಪಾಯಿಗಳಷ್ಟು ಒಂದು ಕಾರ್ಡ್‌ಮೇಲೆ ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರಾಟ ಮಾಡಿದರೆ ಅವರಿಗೆ ಸಿಗುತ್ತದ ಇವತ್ತು ಅನೇಕ ತಾಲ್ಲೂಕುಗಳಲ್ಲಿ ತಾವು ನೋಡುತ್ತಿದ್ದೀರಿ ಎಲ್ಲೂ ವಿತರಣೆ ಸರಿಯಾಗಿ ಆಗುವುದಿಲ್ಲ ಒಬ್ಬ ಕಾರ್ಡುದಾರನಿಗೆ 28 ಕೆ ಜಿ ಕೊಡುವಂಥ ಜಾಗದಲ್ಲಿ ಕೇವಲ 12 ರಿಂದ 15 ಕೆ ಜಿ ಯಷ್ಟು ಮಾತ್ರ ಕೊಡುತ್ತಿದ್ದಾರೆ ಮಿಕ್ಕ ಅಕ್ಕಿ ಮತ್ತು ಗೋದಿ ಎಲ್ಲಿ ಹೋಯಿತು? ಪಡಿತರ ವ್ಯವಸ್ಥೆಯಲ್ಲಿರುವುದನ್ನೇ ಸರಿಯಾಗಿ ವಿತರಣೆ ಮಾಡುವುದಕ್ಕೆ ಸಾಧ್ಯವಾಗದಿದ್ದಾಗ ಇದರಲ್ಲಿ ಯಾರು ಶಾಮೀಲಾಗಿದ್ದಾರೆ? ಒಟ್ಟು ಕೋಟಿಯಾಗುತ್ತದೆ? ಸುಮರು ಸಾವಿರ ಕೋಟಿ ರೂಪಾಯಿಗಳು ಆದರೆ ಅರ್ಧದಲ್ಲೂ ಅರ್ಧಕೊಡಲಿಲ್ಲ ಅದರ ಅರ್ಧ ಏನು? 500 ಕೋಟಿ ರೂಪಾಯಿಗಳಷ್ಟು ಒಂದು ವರ್ಷದಲ್ಲಿ ಈ ಪಡಿತರ ವ್ಯವಸ್ಥೆಯಲ್ಲಿ ಅನ್ಯಾಯ ಮಾಡಿ, ಬಡವರಿಗೆ ಅನ್ಯಾಯ ಮಾಡಿ ಅಧಿಕಾರಿಗಳು ಮತ್ತು ರಾಜಕಾರಣಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎಂದು ಪತ್ರಿಕೆಯಲ್ಲಿ ಬರದಿದ್ದಾರೆ ಇದನ್ನು ನಾನು ಹೇಳುತ್ತಿರುವುದಿಲ್ಲ ಇದೆಲ್ಲಾ 2002ನೇ ಇಸವಿಯಲ್ಲಿ ಪತ್ರಿಕೆಯಲ್ಲಿ ಬಂದಿದೆ ಅಂದರೆ ಒಂದೇ ವರ್ಷದಲ್ಲಿ 500 ಕೋಟಿ ರೂಪಾಯಿಗಳು ಬಡವರಿಗೆ ಮೋಸ ಮಾಡುವಂಥ, ವಂಚನೆ ಮಾಡುವಂಥ ಕೆಲಸ ನಡೆದಿದೆ ಹಾಗಾದರೆ ಐದು ವರ್ಷಗಳಲ್ಲಿ ಎಷ್ಟಾಯಿತು ಎಂದು ತಾವೇ ಲೆಕ್ಕ ಹಾಕಿ ಸ್ವಾಮಿ ಎರಡೂವರೆ ಸಾವಿರ ಕೋಟಿ ರೂಪಾಯಿಗಳನ್ನು ರಾಜಕಾರಣಿಗಳು ಮತ್ತು ಅಧಿಕಾರಿಗಳು ಶಾಮೀಲಾಗಿ ಹೊಡೆದಿದ್ದಾರೆ ಎಂದು ಪತ್ರಿಕೆಯವರು ಹೇಳಿದ್ದಾರೆ ಇದು ಇರುವಂತಹ ವ್ಯವಸ್ಥೆ ನಮ್ಮನ್ನು ಜನತೆ

ಆಯ್ಕೆ ಮಾಡಿ ಅಧಿಕಾರಕ್ಕೆ ಕಳುಹಿಸಿದ್ದು ಏತಕ್ಕೆ? ನಿನ್ನೆ ಹಿರಿಯ ಸದಸ್ಯರಾದ ಸನ್ಮಾನ್ಯ ರಮೇಶ್‌ಕುಮಾರ್ ಅವರು ಹೇಳಿದರು 102 ಜನ ಹೊಸದಾಗಿ ಬಂದಿದ್ದಾರೆ, ಬಿ ಜೆ ಪಿ ಯವರು ನೂತನ ಶಾಸಕರಿಗೆ ಏನು ಟ್ರೈನಿಂಗ್ ಕೊಟ್ಟು ಕರೆದುಕೊಂಡು ಬಂದಿದ್ದಾರೆ ಎಂದು ಅವರು ಕೇಳಿದರು ಸ್ವಾಮಿ, ನಮ್ಮವರಿಗೆ ಒಳ್ಳೆಯ ಟ್ರೈನಿಂಗ್‌ನ್ನೇ ಕೊಟ್ಟಿದ್ದಾರೆ ಇಲ್ಲೆಲ್ಲಾ ಯುವ ಶಾಸಕರು ಇದ್ದಾರೆ, ಅವರಿಗೆ ಒಳ್ಳೆಯ ಟ್ರೈನಿಂಗ್‌ನ್ನು ನಮ್ಮ ಅಧ್ಯಕ್ಷರು ಮತ್ತು ನಮ್ಮ ಪಕ್ಷದ ನಮ್ಮ ಪಕ್ಷದ ನಾಯಕರು ಕೊಟ್ಟಿದ್ದಾರೆ ಬಡವರ ಅಕ್ಕಿಯನ್ನು ಮೋಸ ಮಾಡಬೇಡಿ, ಬಡವರ ಅಕ್ಕಿಯನ್ನು ತಿನ್ನಬೇಡಿ ಎಂದು ಹೇಳಿದ್ದಾರೆ ಕೊಳೆತುಹೋಗಿರುವಂಥ ಗೋಧಿಯನ್ನು ಹಿಡಿದುಕೊಂಡು ಬನ್ನಿ ಎಂದು ನಮ್ಮವರಿಗೆ ಹೇಳಿದ್ದಾರೆ ನೀವು ಈ ಪಕ್ಷದಲ್ಲೇ ಇರಿ, ಇನ್ನೊಂದು ಪಕ್ಷಕ್ಕೆ ಹೊಗಿ ನಾಮಿನೇಶನ್ ಹಾಕಬೇಡಿ ಎಂದು ನಮ್ಮವರು ಹೇಳಿದ್ದಾರೆ ಯಾರು ನಮಗೆ ಮಾರ್ಗದರ್ಶನ ಮಾಡುತ್ತಾರೋ, ನೀತಿಸಂಹಿತೆಯನ್ನು ಹೇಳುತ್ತಾರೋ, ಕೌಲ್ ಅಂಡ್ ಶಕ್ಧರ್ ಪುಸ್ತಕವನ್ನು ತೆಗೆದುಕೊಂಡು ಇವತ್ತು ನಮಗೆ ನೀತಿ ಹೇಳುತ್ತಾರೋ, ಅವರು ಕ್ರಿಯಾಲೋಪವನ್ನು ಎತ್ತಿ ಹಿಡಿಯುತ್ತಾರೆ ಎಲ್ಲವೂ ಕಾನೂನುಬದ್ಧವಾಗಿಯೇ ನಡೆಯಬೇಕು ತಾವು ಗಟ್ಟಿ ಅಧ್ಯಕ್ಷರು ಬಂದಿದ್ದೀರಿ ಶ್ರೀಮಾನ್ ಯಡಿಯೂರಪ್ಪನವರೂ ಕೂಡ ತಮ್ಮ ತಾಲ್ಲೂಕಿನವರು ತಾವೂ ಕೂಡ ಅದೇ ತಾಲ್ಲೂಕಿನವರು ಇಬ್ಬರೂ ಗಟ್ಟಿಯಾಗಿ ಕೆಲಸ ಮಾಡುವಂಥವರೇ ಬಂದಿದ್ದೀರಿ ಆದರೆ ಸನ್ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ಈ ರೀತಿ ಯಾರು ಹೊಸದಾಗಿ ಶಾಸಕರು ಆಯ್ಕೆಯಾಗಿ ಬಂದಿದ್ದಾರೆ ಅವರನ್ನು ಚುಚ್ಚಿ ಚುಚ್ಚಿ ಮಾತನಾಡುವುದು ಸರಿಯಲ್ಲ ಯಾವುದಕ್ಕೋಸ್ಕರ ಅವರನ್ನು ಚುನಾವಣೆಯಲ್ಲಿ ಜನರು ಆರಿಸಿದ್ದಾರೆ ಮತ್ತು ನಾವು ವಿಧಾನಸಭೆಗೆ ಬಂದಿದ್ದೇವೆ ಏಕೆ ಅವರು ಮಾತನಾಡಬಾರದೇನು? ಮಾತನಾಡಿದಾಗ ಆ ಶಾಸಕರನ್ನು ಚುಚ್ಚಿ ಏಕೆ ಮಾತನಾಡಬೇಕು? ಹಿರಿಯರು ಮಾತನಾಡಿದರೆ ತಪ್ಪಿಲ್ಲ ಯುವಕರು ಎದ್ದುನಿಂತು ಮಾತನಾಡಿದರೆ ಅವರ ಬಗ್ಗೆ ಕಾಮೆಂಟ್ ಮಾಡುತ್ತಾರೆ ಯಾವ ಕ್ರಿಯಾಲೋಪ ಇದಕ್ಕೆ? ಇದಕ್ಕೆ ತಾವು ಏನನ್ನುತ್ತೀರಿ?

ನಮ್ಮ ಶಾಸಕರು ಹೇಳುತ್ತಾರಲ್ಲಾ, ಹೌದಪ್ಪ ಸರಿಯಲ್ಲ ನಮ್ಮ ಶಾಸಕರು ಎಷ್ಟು ಪಕ್ಷಗಳನ್ನು ಬದಲಾಯಿಸಿದರು? ಟ್ರೈನಿಂಗ್ ನಾವು ಆ ತರಹ ಏನೂ ಕೊಡಲಿಲ್ಲ ಇವತ್ತು ಯಾರ್ಯಾರು ಯಾವ ಯಾವ ಪಕ್ಷದ ಶಾಸಕರು ಮಾತನಾಡಿದರು ಎಂಬುದನ್ನು ತಾವು ಹೇಳಿ ಸ್ವಾಮಿ ನಾವು ಹೇಳುವುದಿಲ್ಲ ನಮ್ಮ ಪಕ್ಷದವರು ಆ ರೀತಿ ಏನೂ ಮಾಡಲಿಲ್ಲ, ಇವತ್ತು ಹೊಸದಾಗಿ ಬರುವವರಿಗೆ ಟ್ರೈನಿಂಗ್ ಕೊಟ್ಟು ಕರೆದುಕೊಂಡು ಬನ್ನಿ ಅಂದರು, ಏನು ಕೂಗುವುದಕ್ಕೆ ಟ್ರೈನಿಂಗ್ ಕೊಟ್ಟಿದ್ದೀರಾ? ಯಾವ ಟ್ರೈನಿಂಗ್ ಸ್ವಾಮಿ, ಯಾವಾಗ ಆ ರೀತಿ ಟ್ರೈನಿಂಗ್‌ನ್ನು ಕೊಡುತ್ತಾರೆ?

Sri K R Ramesh Kumar I am here in my seat ಮಾನ್ಯ ಸದಸ್ಯರು ಯಾವ ವಿಷಯದ ಮೇಲೆ ಯಾವ ಎಕ್ಸ್‌ಪ್ಲೆನೇಸನ್ ಮೇಟಜ, ಯಾವ ಯಾವ ಕಾಂಟೆಸ್ಟ್ ಮೇಲೆ ನಾನು ಮಾತನಾಡಿದ ದಾಖಲೆಯನ್ನು ಇಟ್ಟುಕೊಂಡು ಮಾಡನಾಡುತ್ತಿದ್ದಾರೆ?, does the House except a reply from me? Should I again reply to that? All that he has said after making a reference to my name has gone into the records He does not know as to how I have conducted sitting in that chair towards the new members

ತಮ್ಮನ್ನು ಅಭಿನಂದಿಸುವಾಗ ನಾನು ಏನು ಮಾತನಾಡಿದೆ ಎನ್ನುವ ಮಾತುಗಳನ್ನೂ ಕೂಡ ಬಹುಶ ಅವರು ಗಮನಿಸಿರುವುದಿಲ್ಲ, ಮೊನ್ನೆ ಕೂಡ ನಾನು ಮಾತನಾಡಿದೆ ಎನ್ನುವುದನ್ನು ಅವರು ಗಮನಿಸಿರುವುದಿಲ್ಲ, ನಾನು ಅಧ್ಯಕ್ಷನಾಗಿದ್ದಾಗ ನಡೆದುಕೊಂಡ ವಿಧಾನ ನಾನು ತಮ್ಮನ್ನು ಅಭಿನಂದಿಸುವಾಗ ಹೇಳಿರತಕ್ಕ ಮಾತುಗಳು, ನಾನು ಮೊನ್ನೆ ದಿವಸ ಹೇಳಿರತಕ್ಕಂಥ ಮಾತುಗಳು

ಅದರ ಬಗ್ಗೆ ಸ್ವಲ್ಪ ಅವರು ಪ್ರಯತ್ನಪಟ್ಟು ಅರ್ಥ ಮಾಡಿಕೊಂಡರೆ ಅಷ್ಟು ದೂರ ಲಂಬಿಸಿ ವ್ಯಾಖ್ಯಾನ ಮಾಡಬೇಕಾದ ಅಗತ್ಯವಿರುವುದಿಲ್ಲ ನಾನು ಅವರ ಮೇಲೆ ಅಟ್ಯಾಕ್ ಮಾಡುತ್ತಿಲ್ಲ ನನಗೆ ಹೊಸದಾಗಿ ಬಂದಿರತಕ್ಕಂಥ ಶಾಸಕರ ಬಗ್ಗೆ ಯಾವ ಅಗೌರವ ಇಲ್ಲ, ಯಾರು ಚುಚ್ಚಿ ಮಾತನಾಡುತ್ತಾರೆ, ಅವರಿಗೆ ಹೆಚ್ಚು ಅವಕಾಶ ಸಿಗಬೇಕೆಂದು ಇಲ್ಲಿ ಕುಳಿತು ಹೇಳಿರುತ್ತೇನೆ, ಯಾರ್ಯಾರಲ್ಲಿ ಯಾವ್ಯಾವ ಪ್ರತಿಭೆ ಅಡಗಿರುತ್ತದೆ ಎಂಬುದು ಗೊತ್ತಿಲ್ಲ ಅದಕ್ಕಾಗಿ ಎಲ್ಲರಿಗೂ ಅವಕಾಶ ಕೊಡಬೇಕು ಎನ್ನುವ ಮಾತನ್ನು ನಾನು ಹೇಳಿರುತ್ತೇನೆ, ಅದು ಅವರಿಗೆ ಅರ್ಥವಾಯಿತೋ ಇಲ್ಲವೋ? ಅವರು ಹೌಸ್‌ನಲ್ಲಿ ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ what is he trying to make out? what is the occasion? what is the subject on which he is debating? If this is the line on which the whole thing should go? Sir, I am prepared I am not willing to carry a blemish over my head and walk out this evening This should not be allowed It is my humble submission to the Chair

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು ಮಾನ್ಯ ಅಧ್ಯಕ್ಷರೆ, ನಾವು ಏನು ಅವರ ನಡವಳಿಕೆಯ ಬಗ್ಗೆ ಅವರು ಸಭೆ ನಡೆಸಿದ ವಿಧಾನದ ಬಗ್ಗೆ, ಸಭೆಯಲ್ಲಿ ಇಲ್ಲದೆ, ಯಾವುದನ್ನೂ ಕೇಳದೆ ಮಾತನಾಡುತ್ತಿಲ್ಲ ನಮಗೂ ಕೂಡ ಅರ್ಥಮಾಡಿಕೊಳ್ಳುವಂಥ ಶಕ್ತಿಯಿದೆ, ನಾವು ಕೂಡ ಎಲ್ಲವನ್ನೂ ಅರಿತುಕೊಂಡು ಬಂದಿದ್ದೇವೆ ಅವರು ಹೇಳಿರುವ ಬಗ್ಗೆ ನಾನು ಉತ್ತರವನ್ನು ಕೊಡಬೇಕಾಗುತ್ತದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೆ, ಉತ್ತರ ಕೊಡುವುದು ಬೇರೆ, ಪಕ್ಷವನ್ನು ಬದಲಾಯಿಸುವುದು ಬೇರೆ ನಾನು ಇವರ ಪಕ್ಷದ ಬಗ್ಗೆ, ಇವರ ಪಕ್ಷ ಟ್ರೈನಿಂಗ್ ಬಗ್ಗೆ, ಪಕ್ಷವನ್ನು ಬದಲಾಯಿಸುವ ವಿಚಾರವಾಗಿ ಮಾತನಾಡಬೇಕೆಂದರೆ, ದಯಮಾಡಿ ಒಂದು ದಿವಸ ಸಬ್ಜೆಕ್ಟ್‌ನ್ನು ಇಟ್ಟುಕೊಳ್ಳಿ ಇಡೀ ದಿವಸ ಬೆಳಿಗ್ಗೆಯಿಂದ ರಾತ್ರಿಯವರೆಗೆ ಈ ರಾಜ್ಯದಲ್ಲಿ ಪಕ್ಷಗಳು ಹೇಗಿವೆ, ಪಕ್ಷಗಳ ಸಿದ್ಧಾಂತಗಳು ಹೇಗಿವೆ, ಈ ದೇಶದಲ್ಲಿ ವಾತಾವರಣ ಹೇಗಿದೆ ಯಾರು ಏಕೆ ಪಕ್ಷವನ್ನು ಬದಲಾಯಿಸಬೇಕಾಗುತ್ತದೆ, ಯಾರ್ಯಾರು ಎಷ್ಟೆಷ್ಟು ಸಲ ಪಕ್ಷವನ್ನು ಬದಲಾಯಿಸಿದ್ದಾರೆ, ಸಿದ್ಧಾಂತದಲ್ಲಿ ನಂಬಿಕೆ ಇದ್ದವರಿಗೆ ಪಕ್ಷದಲ್ಲಿ ನಂಬಿಕೆ ಇರುತ್ತದೆಯೇ, ಪಕ್ಷದಲ್ಲಿದ್ದರೆ ಸಿದ್ಧಾಂತದಲ್ಲಿ ನಂಬಿಕೆ ಇರಬೇಕೆಂದು ಇದೆಯೋ, ಇಲ್ಲವೇ, ಯಾರ್ಯಾರ ಹಿನ್ನಲೆ ಏನು ಎಲ್ಲವನ್ನೂ ಚರ್ಚೆ ಮಾಡೋಣ ನಾನು ತಯಾರಾಗಿದ್ದೇವೆ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು ಓ ಎಸ್, ಚರ್ಚೆ ಮಾಡೋಣ, ನಾವು ತಯಾರಾಗಿದ್ದೇವೆ ಚರ್ಚೆ ಮಾಡುವುದನ್ನು ಬಿಟ್ಟು ಇಲ್ಲಿ ಯಾರೂ ಓಡಿ ಹೋಗುವವರು ಇಲ್ಲ ಚರ್ಚೆ ಮಾಡುವುದಕ್ಕೆ ಎಲ್ಲರೂ ತಯಾರಾಗಿದ್ದಾರೆ

ಅಧ್ಯಕ್ಷರು ಈಗ ವಿಷಯದ ಬಗ್ಗೆ ಮಾತ್ರ ಮಾತನಾಡಿ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು ಮಾನ್ಯ ಅಧ್ಯಕ್ಷರೆ, ಇವತ್ತು ಈ ಪಡಿತರ ವ್ಯವಸ್ಥೆಯಲ್ಲಿ ಸುಮಾರು ಕಳೆದ 5 ವರ್ಷಗಳಲ್ಲಿ ಎರಡೂವರೆ ಸಾವಿರ ಕೋಟಿ ರೂ ಗಳನ್ನು ಲೂಟಿ ಮಾಡಿದ್ದಾರೆ, ಅಷ್ಟು ಹಣ ಲೂಟಿಯಾದಾಗ ನಮ್ಮ ಸರ್ಕಾರ ಏನು ಮಾಡುತ್ತಿತ್ತು ನಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು? ಇದಕ್ಕೆ ತಾವು ಸನ್ಮಾನ್ಯ ಮಂತ್ರಿಗಳಿಂದ ಉತ್ತರವನ್ನು ಕೊಡಿಸಬೇಕು ತಾವು ಏನಾದರೂ ಇದರ ಬಗ್ಗೆ ಬೇರೆ ವಿಧಾನವನ್ನು ಕೂಪನ್ಸ್ ಕೊಡುವುದರ ಮುಖಾಂತರವೋ ಅಥವಾ ಲಾರಿಗಳು ಎಲ್ಲಿಂದ ಹೋಗುತ್ತವೆ, touch and go ಎಂದು ಹೇಳುತ್ತೇವೆ touch and go-ಪ್ರಕಾರ ಆ ಲಾರಿಗಳು ಹೊಸ ತಂತ್ರಜ್ಞಾನದಲ್ಲಿ ಎಲ್ಲಿ ಹೋಗುತ್ತವೆ, ಎಂದು ಕಂಡುಹಿಡಿಯುವುದಕ್ಕೆ

ಸಾಧ್ಯವಾಗುವುದಿಲ್ಲವೆ? ಇದು ಖಂಡಿತ ಸಾಧ್ಯವಿದೆ ಇವತ್ತು ಖಾಸಗಿ ಕಂಪನಿಯವರು ಎಲ್ಲವನ್ನೂ ಕೂಡ ಮಾಡಿದ್ದಾರೆ, ಸರ್ಕಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆ? ಇವತ್ತು ಎಷ್ಟು ಅಧಿಕಾರಿಗಳ ಮೇಲೆ ಇವತ್ತು ದೂರುಗಳು ಬಂದಿವೆ, ಅವರ ಮೇಲೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿರುವುದಿಲ್ಲ ಅದಕ್ಕೋಸ್ಕರ ನಾವು ಇವತ್ತು ಈ ಪಡಿತರ ಚೀಟಿ ವ್ಯವಸ್ಥೆಯಲ್ಲಿ ಅವ್ಯವಸ್ಥೆಯಾಗಿದೆ, ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಲುಟಿಯನ್ನು ಮಾಡಿದ್ದಾರೆನ್ನುವ ಮಾತನ್ನು ಹೇಳುತ್ತೇನೆ ಕೂಲಿಗಾಗಿ ಕಾಳು ಯೋಜನೆಯ ಬಗ್ಗೆ ನಮ್ಮ ಎಲ್ಲಾ ಸದಸ್ಯರುಗಳೂ ಕೂಡ ಇವತ್ತು ಬೇಲಕನ್ನು ಬೆಲ್ಲಿದ್ದಾರೆ ಈ ಕೂಲಿಗಾಗಿ ಕಾಳು ಯೋಜನೆಯ ಬಗ್ಗೆ ನಾವು ಅಕ್ಕಿ ಕೊಡಲಿಲ್ಲವೆಂದು ಧರಣಿ ಕುಳಿತಿದ್ದರು ಎಂದು ಹೇಳಿದರು, ಯಾವುದಕ್ಕೋಸ್ಕರ ಸ್ವಾಮಿ ನಮ್ಮ ಧರಣಿ, ಈ ಅಕ್ಕಿಯನ್ನು ಲೂಟಿ ಮಾಡಿ ಬೇಳೆ ಕಡೆ ಮಾರಾಟ ಮಾಡಿಕೊಂಡು ಹಣ ದೋಚುವುದಕ್ಕೆ ತಾವು ಧರಣಿ ಮಾಡಿದಿರಾ ಅಥವಾ ಇಲ್ಲಿ ಬೇಕಾಗಿರುವಂಥ ವ್ಯವಸ್ಥೆಯನ್ನು ತಾವು ಸರಿಪಡಿಸಿ, ಬಡವರಿಗೆ ಅಕ್ಕಿಕಾಳು ಸಿಗಬೇಕು, ಗೋಧಿ ಸಿಗುವುದಕ್ಕೋಸ್ಕರ ಇವತ್ತು ಇಲ್ಲಿ ಈ ವ್ಯವಸ್ಥೆಗೋಸ್ಕರವಾಗಿ ಧರಣಿ ಮಾಡಿದ್ದಾರೆಯೇ? ಇದಕ್ಕೆಲ್ಲ ಉತ್ತರವನ್ನು ಕೊಡಬೇಕಾಗುತ್ತದೆ ನಮಗೆ ತಾರತಮ್ಯವನ್ನು ಮಾಡಿದ್ದಾರೆ ಎಂದು ಹೇಳಿದಿರಿ ಕೊಟ್ಟಿರುವ ಅಕ್ಕಿಯನ್ನು ತಾವು ಏನು ಮಾಡಿದಿರಿ? ಕರೆಕ್ಟಾಗಿ ಹಂಚಿದಿರಾ? ಕರೆಕ್ಟಾಗಿ ಹಂಚಲಿಲ್ಲ ಇದರಲ್ಲಿ ಎಲ್ಲರೂ ಕೂಡ ಶಾಮೀಲಾಗಿರುವುದರಿಂದ ನಾನು ಇದರ ಬಗ್ಗೆ ಹೆಚ್ಚಿಗೆ ಮಾತನಾಡುವುದಿಲ್ಲ, ತಾವು ಸಮಯವನ್ನು ಕಡಿಮೆ ಕೊಟ್ಟಿರುವುದರಿಂದ, ಇವತ್ತಿನ ಪಡಿತರ ವ್ಯವಸ್ಥೆಯಲ್ಲಿ ಆಗಿರುವಂಥ ಈ ಒಂದು ಹಗರಣ ಮತ್ತು ಕೂಲಿಗಾಗಿ ಕಾಳು ಯೋಜನೆಯಲ್ಲಿ ಆಗಿರುವಂಥ ಹಗರಣವನ್ನು ಬಯಲಿಗೆಳೆಯಬೇಕಾಗಿದೆ ಈ ಗೋಧಿ ಇವತ್ತು ಗೋಡೌನ್‌ಗಳಲ್ಲಿ ಕೊಳೆಯುತ್ತಿದೆ, ನಾವು ಹೋಗಿರುವ ಕಡೆ ಕೆಲವು ಚೀಲದಲ್ಲಿರುವ ಅಕ್ಕಿಯನ್ನು ತೆಗೆದು ನೋಡಿದೆವು ಅಲ್ಲಿರುವ ಅಕ್ಕಿ ಎಲ್ಲಾ ಕೊಳೆತು ವಾಸನೆ ಬರುತ್ತಿದೆ ತಾವು ಇದನ್ನು ಹೇಗೆ ವಿತರಣೆ ಮಾಡುತ್ತೀರಿ ಆ ಕೊಳೆತು ಹೋಗಿರುವ ಅಕ್ಕಿಯನ್ನು ಆ ಬಡ ಮಕ್ಕಳಿಗೆ ಆ ಹರಿಜನ-ಗಿರಿಜನರಿಗೆ, ಕೊಳಗೇರಿವಾಸಿಗಳಿಗೆ ತಾವು ಹೋಗಿ ಕೊಡುವವರು ಇದ್ದೀರಾ? ಹೀಗಿರುವುದರಿಂದ ಇವತ್ತು ಎಲ್ಲೆಲ್ಲಿ ಗೊಡೌನ್‌ಗಳಲ್ಲಿ ಲಕ್ಷಗಟ್ಟಲೆ ಚೀಲಗಳ ಗೋಧಿ ಮತ್ತು ಅಕ್ಕಿ ಇದೆ ಹಾಗೂ ಯಾವ ಕಾಳಸಂತೆಯಲ್ಲಿಟ್ಟಿದ್ದಾರೋ ಅದನ್ನೇಲ್ಲಾ ತುರ್ತಾಗಿ ಪೂರ್ತಿಯಾಗಿ ಸೀಜ್ ಮಾಡಿಸಬೇಕು, ಅದು ಒಂದೇ ಅಲ್ಲ, ಅದನ್ನು ತೆಗೆದು ತುರ್ತಾಗಿ ಎಲ್ಲರಿಗೂ ಕೂಡ ವಿತರಣೆಯಾಗುವಂತೆ ನೋಡಿ ಕೊಳ್ಳಬೇಕು ಈ ಹಗರಣದ ಎಲ್ಲಾ ಬಯಲಿಗೆ ಬರಬಾಕಾದರೆ ಇವತ್ತು ಖಂಡಿತವಾಗಿಯು ಸದನದ ಸಮಿತಿಯನ್ನು ರಚಿಸಿದರೆ ಮಾತ್ರ ಸತ್ಯಾಸತ್ಯತೆಗಳು ಹೊರಗೆ ಬರುವುದಕ್ಕೆ ಸಾಧ್ಯವಾಗುತ್ತದೆ ಈ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಕೊಳ ಗೇರಿಗಳು ಸುಮಾರು 30 ಪರ್ಸೆಂಟ್ ಇವೆ ಅವರ ಬಗ್ಗೆ ತಾವೂ ಕೂಡ ಯೋಜನೆಯನ್ನು ಮಾಡಿ ಸದನದ ಸಮಿತಿ ರಚನೆಯಾದರೆ ಆ ಬಡವರಿಗೆ, ಆ ಹಿಂದುಳಿದ ವರ್ಗದವರಿಗೆ ಅವರೆಲ್ಲರಿಗೂ ಕೂಡ ಒಂದು ನ್ಯಾಯ ಸಿಗುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾ, ನನಗೆ ಇವತ್ತು ತಾವು ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು ಯಾರಾದರು ಮಹಿಳಾ ಸದಸ್ಯರು ಮಾತನಾಡುತ್ತೀರಾ? ಮಹಿಳೆಯರಿಗೆ ಅವಕಾಶ ಕೊಡಬೇಕೆಂದು ಹೇಳುತ್ತಾರೆ, ಮಾತನಾಡಿ

ಶ್ರೀಮತಿ ಜೆ ಸುನಿತಾ ವೀರಪ್ಪಗೌಡ (ಬನ್ನೂರ) ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಕೂಡ ಕೂಲಿಗಾಗಿ ಕಾಳು ಯೋಜನೆಯಲ್ಲಿ ಅನ್ಯಾಯ ನಡೆದಿರುವುದು ಸತ್ಯವಾಗಿದೆ, ಏಕೆಂದರೆ ಬಡವರಿಗೆ ಕೊಟ್ಟಂತ ಕೂಗಾಗಿ ಕಾಳು ಯೋಜನೆಯಲ್ಲಿ ಕೂಲಿಯನ್ನು ಕೊಡದೆ ಬರೀ ಮೆಷಿನ್‌ದಿಂದ ಕೆಲಸ ಮಾಡಿಸಿದ್ದು ಒಂದು ಪದ್ಧತಿ ಜಿಲ್ಲೆಯಲ್ಲಿ ಕೂಡ ಆಗಿದೆ ಕೋಟ್ಯಾಂತರ ರೂಪಾಯಿ ಮೌಲ್ಯದ ಕಾಳು, ಕೂಲಿಗಾಗಿ ಕಾಳು ಯೋಜನೆಯಲ್ಲಿ ಮಾನ್ಯ ಶಾಸಕರ ಕ್ಷೇತ್ರಕ್ಕೆ ಬಂದಿರುವುದು ಸತ್ಯವಾಗಿದೆ, ಈ ಯೋಜನೆಯಲ್ಲಿ ಮಾಡಿರುವ ಎಲ್ಲಾ ಕಾಮಗಾರಿಗಳು ಕಳಪೆ ಕಾಮಗಾರಿಗಳಾಗಿವೆ ಇವತ್ತು ಹೋಗಿ ನೋಡಿದರೆ ನಿಜವಾಗಿಯೂ ಆ ಕೆಲಸಗಳು ಸಿಗುವುದಿಲ್ಲ, ಕೋಟ್ಯಾಂತರ ರೂಪಾಯಿಗಳ ಕೆಲಸದಲ್ಲಿ ಅಲ್ಲಿ ಕೇವಲ 50 ಭಾಗ ಮಾತ್ರ ಕೆಲಸವನ್ನು ಮಾಡಿದ್ದಾರೆ, ಆ 50 ಭಾಗದಲ್ಲಿ ಕೂಡ ಕಳಪೆ ಕಾಮಗಾರಿಯನ್ನು ಮಾಡಿದ್ದಾರೆ ಇವತ್ತು ನಾವು ಒಂದು ಸದನದ ಸಮಿತಿಯನ್ನು ಮಾಡಿಕೊಂಡು ಹೋಗಿ ಆ ಕೆಲಸಗಳ ಒಂದು ಲಿಸ್ಟ್‌ನ್ನು ತೆಗೆದುಕೊಂಡು ಹೋದರೆ ಆ ಕೆಲಸಗಳು ಇವತ್ತು ಕಾಣೆಯಾಗಿವೆ ವಾಟರ್ ಸಪ್ಲೈ ಕೊಟ್ಟಿರುವ ಕೆಲಸ ಮಾತ್ರ ಸಿಗಬಹುದೇ ಹೊರತು ಬೇರೆ ಕೊಟ್ಟಿರುವ ಮಣ್ಣಿನ ಕೆಲಸಗಳು ಆ ಕೆಲಸಗಳು ನಮಗೆ ಎಲ್ಲೂ ಸಿಗುವುದಿಲ್ಲ ಆದ್ದರಿಂದ ದಯಮಾಡಿ ಸದನದ ಸಮಿತಿಯನ್ನು ಮಾಡಬೇಕೆಂದು ನಮ್ಮದು ಕೂಡ ಒತ್ತಾಯವಿದೆ

ಅಧ್ಯಕ್ಷರೆ ನೂತನ ಸದಸ್ಯರು ಮಾತನಾಡಿ, ಮಾನ್ಯ ಆಂಜನೇಯವರು ಮಾತನಾಡುತ್ತಿರಾ, ಮಾತನಾಡಿ

†ಶ್ರೀ ಹೆಚ್ ಆಂಜನೇಯ (ಭರಮಸಾಗರ) ಮಾನ್ಯ ಅಧ್ಯಕ್ಷರೆ, ಈ ಕೂಲಿಗಾಗಿ ಕಾಳು ಯೋಜನೆ ಇರತಕ್ಕಂಥದ್ದು, ಕಳೆದ 3–4 ವರ್ಷಗಳಿಂದ ಈ ರಆಜ್ಯದಲ್ಲಿ ತೀವ್ರತರವಾದ ಒಂದು ಬರಗಾಲ ಇತ್ತು ಆ ಬರಗಾಲ ಪ್ರದೇಶದಲ್ಲಿ ವಾಸುಮಾಡತಕ್ಕಂಥ ಬಡ ಕೃಷಿ ಕಾರ್ಮಿಕರಿಗೆ ಉದ್ಯೋಗ ಕೊಡಬೇಕು, ದುಡಿಯುವ ಕೈಗಳಿಗೆ ಕೆಲಸವನ್ನು ಕೊಡಬೇಕು ಎನ್ನತಕ್ಕಂಥ ಒಂದು ಸದುದ್ದೇಶವನ್ನು ಇಟ್ಟುಕೊಂಡು ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಿಕ್ಕೆ ಸರ್ಕಾರ ಮುಂದಾಯಿತು ಈ ಕೂಲಿಗಾಗಿ ಕಾಳು ಯೋಜನೆ ಅಡಿಯಲ್ಲಿ ಆಗಿರತಕ್ಕಂಥ ಈ ಕಾಮಗಾರಿಗಳ ಬಗ್ಗೆ ನಮ್ಮ ಹಿರಿಯ ಸದಸ್ಯರೆಲ್ಲರೂ ಕೂಡ ಮಾತನಾಡುತ್ತಾ ಹೇಳಿದರು, ಅವರು ಮಾತನಾಡಿದಂಥ ಒಂದು ಶೈಲಿಯನ್ನು ನಾನು ಗಮನಿಸಿದಾಗ ಕೆಲವರು ಹೇಳಿದರು, ಕೆಲವು ಪಕ್ಷದ ಕಾರ್ಯಕರ್ತರಿಗೆ ಇದನ್ನು ಗುತ್ತಿಗೆಯನ್ನು ಕೊಟ್ಟುಬಿಟ್ಟಿದ್ದಾರೆ, ಅವರು ಕಳಪೆ ಕಾಮಗಾರಿಯನ್ನು ಮಾಡಿ ಹಣವನ್ನು ಲೂಟಿ ಮಾಡಿದ್ದಾರೆ, ಅಕ್ಕಿಯನ್ನು ವಿತರಣೆ ಮಾಡಿಲ್ಲ ಎಂದು ಹೇಳುತ್ತಿದ್ದಾರೆ ಆದರೆ ಇಲ್ಲಿ ಆಗಿರತಕ್ಕಂಥ ವಾಸ್ತವಾಂಶ ಇಷ್ಟೇ ಈ ಯೋಜನೆಯನ್ನು ಅನುಷ್ಠಾನಕ್ಕೆ ತರತಕ್ಕಂಥವರು ಯಾರು ಎಂದು ಹೇಳಿದರೆ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್‌ನಲ್ಲಿರತಕ್ಕಂಥ ಇಂಜಿನಿಯರಿಂಗ್ ವಿಭಾಗ. ಅಸಿಸ್ಟೆಂಟ್ ಇಂಜಿನಿಯರ್ ಇರಬಹುದು, ಜೂನಿಯರ್ ಇಂಜಿನಿಯರ್ ಇರಬಹುದು, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಇರಬಹುದು, ಎಗ್ಜಿಕ್ಯೂಟೀವ್ ಇಂಜಿನಿಯರ್ ಇರಬಹುದು ಅದೇ ರೀತಿಯಲ್ಲಿ ಸಣ್ಣ ನೀರಾವರಿ ಇಲಾಖೆಯಲ್ಲಿ ಇರಬಹುದು, ಕೆರೆಗಳ ಹೂಳು ಎತ್ತತಕ್ಕಂಥ ಕೆಲಸಕಾರ್ಯಗಳನ್ನು ಕೈಗೊಳ್ಳತಕ್ಕಂಥಾದ್ದು ಆ ಇಲಾಖೆಯ ಅಧಿಕಾರಿಗಳು ಇವರೇ ಈ ಕೆಲಸಗಳನ್ನು, ಕಾಮಗಾರಿಗಳನ್ನು ನೋಡಿಕೊಳ್ಳತಕ್ಕಂಥಾ ಹೊಣೆ ಇರತಕ್ಕಂಥಾದ್ದು ಅಧಿಕಾರಿಗಳದ್ದೇ ಗುತ್ತಿಗೆಯನ್ನು ಕೊಡಬೇಕು ಎನ್ನತಕ್ಕಂಥಾದ್ದು ಎಲ್ಲೂ ಕೂಡ ನಿಯಮಗಳಲ್ಲಿ ಇಲ್ಲ ನಾನು ಒಂದು ಸಲ ಉತ್ತರ ಕರ್ನಾಟಕ ಕಡೆ ಪ್ರವಾಸ ಹೋಗಿದ್ದಾಗ ಮಾನ್ಯ ಡಿ ಆರ್ ಪಾಟೀಲ್‌ರವರ ಕ್ಷೇತ್ರಕ್ಕೆ

ಹೋಗಿದ್ದೆ ಅಲ್ಲಿ ಒಂದು ಕಾಮಗಾರಿ ನಡೆಯುತ್ತಿತ್ತು ನೂರಾರು ಜನ ರಸ್ತೆ ನಿರ್ಮಾಣ ಮಾಡುತ್ತಿದ್ದರು ಅಮೇಲೆ ಒಂದು ಕಾಲುವೆಯನ್ನು ನಿರ್ಮಾಣ ಮಾಡುತ್ತಿದ್ದರು ಅಲ್ಲಿ ಅಕ್ಕಿ ಇತ್ತು ಅಲ್ಲಿ ಒಂದು ರಿಜಿಸ್ಟರ್ ಕೂಡ ಇಟ್ಟಿದ್ದರು ಅಲ್ಲಿ ಯಾರ್ಯಾರು ಕೆಲಸ ಮಾಡುತ್ತಿದ್ದಾರೆ ಎನ್ನತಕ್ಕಂಥಾದ್ದನ್ನು, ಆ ಒಂದು ಯೋಜನೆಯನ್ನು ಅನುಷ್ಠಾನಕ್ಕೆ ತರತಕ್ಕಂಥ ಅಧಿಕಾರಿಗಳು ಅವರ ಹೆಸರುಗಳನ್ನು ಬರೆದುಕೊಂಡು ಸಂಜೆ ವೇಳೆಯಲ್ಲಿ ಒಂದು ದಿನಕ್ಕೆ ಒಬ್ಬ ಹೆಂಗಸು ಮತ್ತು ಗಂಡಸಿಗೆ 15 ರೂಪಾಯಿ ಕೂಲಿ ಮತ್ತು 10 ಕೆಜಿ ಅಕ್ಕಿ ಕೊಡತಕ್ಕಂಥ ಒಂದು ವ್ಯವಸ್ಥೆ ಇದೆ ಈ ರೀತಿಯಾಗಿ ಅಲ್ಲಿ ಕೆಲಸ ಮಾಡುತ್ತಿದ್ದರು ನಾನು ಚಿತ್ರದುರ್ಗ ಮತ್ತು ದಾವಣಗೆರೆ ಎರಡು ಜಿಲ್ಲೆಗಳನ್ನು ಪ್ರತಿನಿಧಿಸತಕ್ಕವನು ಈ ಎರಡು ಜಿಲ್ಲೆಗಳಲ್ಲಿ ನೇರವಾಗಿ ಈ ಒಂದು ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಆಗಿರುವಂತಹ ಕಾಮಗಾರಿಗಳನ್ನು ನಾನು ನೋಡಿದ್ದೇವೆ ಈ ಒಂದು ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಎಲ್ಲಿ ಬರಗಾಲ ಇದೆ ಅಲ್ಲಿ ಆ ಬಡಜನರಿಗೆ ದುಡಿಯಲಿಕ್ಕೆ ಎಲ್ಲೂ ಕೂಡ ಕೆಲಸ ಇಲ್ಲ ಆ ಜನರು ಗುಳೆ ಹೋಗಬಾರದು, ಅವರು ಅಲ್ಲೇ ಇದ್ದು, ಅವರ ಒಂದು ಗ್ರಾಮದಲ್ಲಿ ಅಗತ್ಯವಾಗಿರತಕ್ಕಂಥ ಕೆರೆ ಹೂಳು ಎತ್ತುವ ಕಾಮಗಾರಿ ಇರಬಹುದು, ಆ ಊರಿಗೆ ಹೊಸದಾಗಿ ರಸ್ತೆಯನ್ನು ನಿರ್ಮಾಣ ಮಾಡತಕ್ಕಂಥ ಕಾಮಗಾರಿ ಕೆಲಸ ಇರಬಹುದು ಇಂತಹ ಕೆಲಸಕಾರ್ಯಗಳನ್ನು ಅವರಿಗೆ ಕೊಟ್ಟು ಅವರ ಒಂದು ದಿನನಿತ್ಯದ ಬದುಕಿಗೆ ಅವರ ಜೀವನಕ್ಕೆ ಅನುಕೂಲವಾಗಲಿ ಎನ್ನುವ ಒಂದು ದೃಷ್ಟಿಯನ್ನು ಇಟ್ಟುಕೊಂಡು ಈ ಒಂದು ಕೂಲಿಗಾಗಿ ಕಾಳು ಯೋಜನೆಯನ್ನು ಅನುಷ್ಠಾನಕ್ಕ ನಮ್ಮ ಜಿಲ್ಲೆಯಲ್ಲಿ ಎಲ್ಲೂ ಕೂಡ ತಂದಿಲ್ಲ ಇದರಲ್ಲಿ ಯಾರು ಜಾಸ್ತಿ ಲೂಟಿ ಮಾಡಿದ್ದಾರೆಂದು ಹೇಳಿದರೆ ಅಲ್ಲಿರತಕ್ಕಂಥ ಅಸಿಸ್ಟೆಂಟ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಮತ್ತು ಅಧಿಕಾರಿಶಾಹಿಗಳೇ ಇದರಲ್ಲಿ ಹೆಚ್ಚು ಶಾಮೀಲಾಗಿ ಹಣವನ್ನು ಲೂಟಿ ಮಾಡಿದ್ದಾರೆ ಅಕ್ಕಿಯನ್ನು ಲೂಟಿ ಮಾಡಿದ್ದಾರೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಅದರ ಜೊತೆಯಲ್ಲಿ ನಮ್ಮಂತಹ ಜನಪ್ರತಿನಿಧಿಗಳೂ ಕೂಡ ಶಾಮೀಲಾಗಿದ್ದಾರೆ ಏಕೆಂದರೆ ಆ ಜಿಲ್ಲೆಯ ಉಸ್ತುವಾರಿ ಸಚಿವರುಗಳು ಮತ್ತು ಶಾಸಕರುಗಳು ಅಧಿಕಾರಿಗಳಿಗೆ ಹೇಳಿ ಕೇವಲ ಹೂಳು ಎತ್ತುವಂತಹ ಕೆಲಸ ಮಾಡಿಲ್ಲ, ಜನರಿಗೆ ಕೆಲಸ ಕೊಡತಕ್ಕಂಥ ಕೆಲಸ ಮಾಡಿಲ್ಲ, ಕೆಲಸವರು ಕಾಂಕ್ರೀಟ್ ರಸ್ತೆಯನ್ನೂ ಸಹ ಮಾಡಿಸಿದ್ದಾರೆ ಕೂಲಿಗಾಗಿ ಕಾಳು ಯೋಜನೆಯ ಹಣವನ್ನು ತೆಗೆದುಕೊಂಡು ಹೋಗಿ ನಗರ ಪಟ್ಟಣ ಪ್ರದೇಶಗಳಲ್ಲಿ ಕಾಂಕ್ರೀಟ್ ರಸ್ತೆಯನ್ನು ಮಾಡಿಸಿದ್ದಾರೆ ಸ್ವಿಮ್ಮಿಂಗ್‌ಪೂಲ್ ಮಾಡಿಸಿದ್ದಾರೆ ಡಾಂಬರ್ ರಸ್ತೆಯನ್ನು ಮಾಡಿಸಿದ್ದಾರೆ ಕೆಲವರು ಅಧಿಕಾರಿಗಳಿಗೆ ಹೇಳಿ ಯಂತ್ರಗಳ ಮೂಲಕ ಹೂಳು ಎತ್ತುವಂತಹ ಕೆಲಸ ಮತ್ತು ಚರಂಡಿಗಳನ್ನು ನಿರ್ಮಾಣ ಮಾಡತಕ್ಕಂಥ ಕೆಲಸವನ್ನು ಯಂತ್ರದ ಮೂಲಕ ಮಾಡಿಸಿದ್ದಾರೆ ಇದೆಲ್ಲದಕ್ಕೂ ಕೂಡ ನೇರವಾಗಿ ಅಲ್ಲಿರತಕ್ಕಂಥ ಕಾರ್ಯನಿರ್ವಾಹಕ ನೇರವಾಗಿ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಶಾಮೀಲಾಗಿರುವುದರಿಂದ ಇದು ಏನಾದರೂ ತನಿಖೆಯಾಯಿತು ಅಂದರೆ ಸುಮಾರು ಎಲ್ಲಾ ಜಿಲ್ಲೆಗಳಲ್ಲಿ ಈಗ ಏನು ಕೆಲಸ ನಿರ್ವಹಣೆ ಮಾಡುತ್ತಿದ್ದಾರೆ ಅಲ್ಲಿ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಇರುವುದಿಲ್ಲ ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವನ ಸೇವೆಯಲ್ಲಿ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ ಒಬ್ಬ ಕಾರ್ಯನಿರ್ವಹಣ ಅಧಿಕಾರಿ ಕೂಡ ಸೇವೆಯಲ್ಲಿ ಇರುವುದಕ್ಕೆ ಸಾಧ್ಯವಿಲ್ಲ ಈ ರೀತಿಯಾದ ಒಂದು ದೊಡ್ಡ ಹಗರಣ ಈ ರಾಜ್ಯದಲ್ಲಿ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಆಗಿರತಕ್ಕಂಥ ಹಗರಣವನ್ನು ಸಮಗ್ರವಾಗಿ ಒಂದು ತನಿಖೆಯಾಗಬೇಕು ಎಂದು ಹೇಳಿ ಅಲ್ಲಿರತಕ್ಕಂಥವರು ಕೂಡ ಅಗ್ರಹ ಮಾಡುತ್ತಿದ್ದಾರೆ ಶ್ರೀ

ರಮೇಶ್‌ಕುಮಾರ್‌ರವರ ಭಾವನೆಯನ್ನು ನಾನು ಅರ್ಥ್ ಮಾಡಿಕೊಂಡೆ ಅವರು ಮಾತನಾಡುತ್ತಾ ಹೇಳಿದರು, ಹೌದು ಇದೊಂದು ದೊಡ್ಡ ಹಗರಣವಾಗಿದೆ ನೀವು ಯಾವ ಜನರನ್ನು ಸಹ ಕರೆದು, ರಿಜಿಸ್ಟರ್ ಇಟ್ಟು ಹೆಬ್ಬೆಟ್ಟು ಹಾಕಿಸಿ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಕೆಲಸ ಮಾಡಿಸಿಕೊಂಡು ಹಣ ಪೇಮೆಂಟ್ ಮಾಡಿಲ್ಲ, ಸರಿಯಾಗಿ ಅಕ್ಕಿ ಸಹ ವಿತರಣೆಯಾಗಿಲ್ಲ ಎನ್ನುವಂತಹ ಒಂದು ಪ್ರಾಮಾಣಕವಾದ ಮಾತನ್ನು ಅವರೂ ಕೂಡ ಇಲ್ಲಿ ವ್ಯಕ್ತಪಡಿಸಿದ್ದಾರೆ ಅವರೀಗ ಆಡಳಿತ ಪಕ್ಷದಲ್ಲಿದ್ದಾರೆ ಅಂತಹವರೂ ಕೂಡ ಇಲ್ಲಿ ಅವ್ಯವಹಾರ ಆಗಿದೆ ಎಂದು ಹೇಳುವಾಗ ಈ ಒಂದು ಹಗರಣದ ಬಗ್ಗೆ ಸಮಗ್ರವಾದ ಒಂದು ತನಿಖೆಯಾಗಬೇಕು ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಯಡಿಯೂರಪ್ಪನವರು, ನಮ್ಮ ನಾಯಕರಾದ ಶ್ರೀಮಾನ್ ಮಾಧುಸ್ವಾಮಿಯವರು ಹೇಳಿದಂತೆ ಈ ಸದನದ ಜಂಟಿ ಸಮಿತಿಯಿಂದ ಒಂದು ಸಮಗ್ರವಾದಂತಹ ತನಿಖೆಯಾಗಬೇಕು ಶ್ರೀಮಾನ್ ವಾಟಾಳ್ ನಾಗರಾಜ್‌ರವರು, ಅವರು ಅವರದ್ದೇ ಅದಂತಹ ಒಂದು ಶೈಲಿಯಲ್ಲಿ ಹೇಳಿದ್ದಾರೆ ದೊಡ್ಡ ಒಂದು ಕ್ರೀಡಾಂಗಣದಲ್ಲಿ ತನಿಖೆಯಾಗಬೇಕು, ಇವರೆಲ್ಲರನ್ನೂ ಕೂಡ ಅಲ್ಲಿಗೆ ಕರೆಸಬೇಕು ಎಂದು ಹೇಳಿದ್ದಾರೆ ಇದರಲ್ಲಿ ಬಹಳಷ್ಟು ಜನ ರಾಜಕಾರಣಿಗಳು, ಜನಪ್ರತಿನಿಧಿಗಳು ಹಿಂದೆ ಇದ್ದಮತಹ ಸದಸ್ಯರುಗಳು ಆಸೆಯಿಂದ ಮಾಡಿಸಿದ್ದಾರೆ ಏನೋ ಬೇಗ ಹೆಸರು ತೆಗೆದು ಕೊಳ್ಳಬೇಕು, ಚುನಾವಣೆಗಳು ಬರುತ್ತಿವೆ, ಮತದಾರರ ಗಮನ ಸೆಳೆಯಬೇಕು ಮತದಾರರನ್ನು ಓಲ್ಯಸಬೇಕು ಎನ್ನತಕ್ಕಂಥ ದೃಷ್ಟಿಯಿಂದ ಕೆಲವರು ಈ ಯೋಜನೆಯನ್ನು ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಇವರೂ ಕೂಡ ಮಾರ್ಗದರ್ಶಕರಾಗಿದ್ದಾರೆ ಜನಪ್ರತಿನಿಧಿಗಳು ಕೂಡ ಇದರಲ್ಲಿ ಭಾಗಿಗಳಾಗಿದ್ದಾರೆ ಆದರೆ ಜಿಲ್ಲಾ ಉಸ್ತುವಾರಿ ಸಚಿವರುಗಳು ಇರಬಹುದು, ಶಾಸಕರುಗಳು ಇರಬಹುದು ಅವರ್ಯಾರು ಕೂಡ ಸಿಕ್ಕಿಹಾಕಿಕೊಳ್ಳುವುದಿಲ್ಲ ಅವರು ಬಾಯಿ ಮಾತಿನಲ್ಲಿ ಹೇಳಿದ್ದಾರೆ ಯಾರೂ ಕೂಡ ಲಿಖಿತವಾಗಿ ಕೊಟ್ಟಿರುವುದಿಲ್ಲ ಆ ಅಧಿಕಾರಿ ಅತನ ಮುಲಾಜಿನಲ್ಲಿರುತ್ತಾರೆ ನೋಡ್ರಿ ನಾನು ಹೇಳುತ್ತಿದ್ದೇನೆ ನೀವು ಈ ಕೆಲಸ ಮಾಡ್ರಿ ಎಂದು ಹೇಳುತ್ತಾರೆ ಒಬ್ಬ ಬಡಪಾಯಿ ಅಧಿಕಾರಿಗಳಿಂದ ಮಾಡಿಸಿರತಕ್ಕ ಒಂದು ಕೃತ್ಯವನ್ನು ಎಸೆಗಲಿಕ್ಕೆ ನಮ್ಮಂತಹ ಜನಪ್ರತಿನಿಧಿಗಳೂ ಕೂಡ ಕಾರಣರಾಗಿದ್ದೇವೆ ಇದು ಬಹಳ ಸೂಕ್ಷ್ಮವಾಗಿರತಕ್ಕಂಥ ವಿಚಾರ ಆದರೂ ಕೂಡ ಏನೇ ಆದರೂ ಕೆಲಸ ಆಗಿರಬೇಕು ಕೆಲಸವೇ ಆಗದೇ ಒಂದೇ ಒಂದು ದಿನ ನಾನು ನೋಡಿದೆ ಒಂದು ಕೆರೆಗೆ ಜೆಸಿಬಿ ಬಂತು ಅದು ಹೀಗೆ ಕೆದುಕಿತು ಅಷ್ಟೇ ಮಾರನೇ ದಿನ ಆ ಜೆ ಸಿ ಬಿ ಆ ಕೆರೆಯಲ್ಲಿ ಇರುವುದಿಲ್ಲ ಮಳೆ ಬಂತು ಬಿಲ್ ಎಲ್ಲಾ ತೆಗೆದುಕೊಂಡಿದ್ದಾರೆ ನಾವು ಹೋಗಿ ಕೇಳಿದರೆ ಇಲ್ಲಾ ಸಾರ್ ಎಲ್ಲಾ ಮಾಡಿಸಿದ್ದೇವೆ ಮಳೆ ಬಂತು ಮತ್ತೆ ಎಲ್ಲಾ ಹೂಳು ಬಂದಿದೆ ಎಂದು ಹೇಳುತ್ತಾರೆ ಬಿಲ್ ಎಲ್ಲಾ ತೆಗೆದುಕ್ಕೊಂಡು ತಿಂದು ಹಾಕಿದ್ದಾರೆ ಅಂತಹ ಹಗರಣಗಳು ಯಾವುವು ಇವೆ ಎನ್ನುವುದನ್ನು ಆ ಕ್ಷೇತ್ರದಲ್ಲಿ ಹೋಗಿ ನೋಡಿದರೆ ಗೊತ್ತಾಗತ್ತದೆ ಆ ಗ್ರಾಮದಲ್ಲಿ ಎಷ್ಟು ದಿನ ಯಂತ್ರವನ್ನು ಇಟ್ಟುಕೊಂಡು ಆ ಕೆರೆಯಲ್ಲಿ ಹೂಳು ಎತ್ತಿದ ಎಷ್ಟು ಜನರನ್ನು ಕರೆದುಕೊಂಡು ಬಂದು ಕೆಲಸ ಮಾಡಿಸಿದ ಎನ್ನುವ ಬಗ್ಗೆ ಆ ಊರಿನಲ್ಲಿ ಇರುವ ಜನರೇ ಸಾಕ್ಷಿ ಹೇಳುವುದಕ್ಕೆ ತಯಾರಾಗಿದ್ದಾರೆ ಅಂತಹ ಒಂದು ಪ್ರಕರಣಗಳು ಎಲ್ಲೆಲ್ಲಿ ನಡೆದಿವೆ ಎನ್ನುವುದನ್ನು ವಿಚಾರಣೆ ಮಾಡಲಿಕ್ಕೆ ತಾವು ಜಂಟಿ ಸದನದ ಸಮಿತಿಯನ್ನು ರಚನೆ ಮಾಡಿ ಅದರಲ್ಲಿ ಕೆಲಸವೆನ್ನೇ ಮಾಡದೇ ಹಣ ಲೂಟಿ ಮಾಡಿರತಕ್ಕಂಥ ಅಧಿಕಾರಿಗಳಿಗೆ ಉಗ್ರವಾದ ಶಿಕ್ಷೆಯನ್ನು ವಿಧಿಸಲೇಬೇಕು ಇಲ್ಲದೇ ಹೋದರೆ ಇಂತಹ ಹಗರಣಗಳು ದಿನನಿತ್ಯ ನಿರಂತರವಾಗಿ ನಡೆಯುತ್ತಲೇ ಇರುತ್ತವೆ ಭ್ರಷ್ಟಾಚಾರ ಎನ್ನುವುದು ನಿರಂತರ ಒಂದು ಪ್ರಕ್ರಿಯೆಯಾಗುತ್ತದೆ ವರ್ಗಾವಣೆ

ವಿಚಾರ ಇದೆಯಲ್ಲಾ ಅಗಿಂದಾಗ್ಗೆ ವರ್ಗಾವಣೆ ಎನ್ನತಕ್ಕಂಥಾದ್ದು ಹೇಗೆ ನಿರಂತರ ಪ್ರಕ್ರಿಯೆಯಾಗಿತ್ತು ಹಾಗೆ ಈ ಭ್ರಷ್ಟಾಚಾರ ಕೂಡ ನಿರಂತರವಾದ ಒಂದು ಪ್ರಕ್ರಿಯೆಯಾಗಬಹುದು ಅದಕ್ಕಾಗಿ ತಾವು ಉಗ್ರವಾದಂತಹ ಒಂದು ಶಿಕ್ಷೆಯನ್ನು ಕೊಡತಕ್ಕಂಥ ಒಂದು ಶಾಸನವನ್ನೇ ತೆಗೆದುಕೊಂಡು ಬಂದು ಅವರಿಗೆ ಉಗ್ರವಾದ ಶಿಕ್ಷೆಯನ್ನು ಕೊಟ್ಟಾಗ ಮಾತ್ರ ಮುಂದಿನ ದಿನಗಳಲ್ಲಿ ಇಂತಹ ಭ್ರಷ್ಟಾಚಾರ ನಡೆಯುವುದಕ್ಕೆ ಕಡಿವಾಣ ಹಾಕುವುದಕ್ಕೆ ಸಾಧ್ಯ ಎನ್ನತಕ್ಕಂಥ ಮಾತನ್ನು ಹೇಳುತ್ತಾ, ನಾವು 103 ಜನ ಹೊಸದಾಗಿ ಆಯ್ಕೆಯಾಗಿ ಬಂದಿರತಕ್ಕಂಥ ಸದಸ್ಯರಿದ್ದೇವೆ ಇಲ್ಲಿ ಮುಂದಿನ ಸಾಲಿನಲ್ಲಿ ಕುಳಿತಿರತಕ್ಕಂಥ ಮಾನ್ಯ ಸದಸ್ಯರುಗಳು ಬಹಳ ಸಮಯ ಮಾತನಾಡುತ್ತಾರೆ ಅವರು ಗಂಟೆಗಟ್ಟಲೆ ಮಾತನಾಡುವಂತಹ ಶಕ್ತಿ ಇದೆ ನಾವು ಅಷ್ಟೆಲ್ಲಾ ಮಾತನಾಡುವುದಕ್ಕೆ ಆಗುವುದಿಲ್ಲ 5–10 ನಿಮಿಷ ನಾವು ಮಾತನಾಡಬಹುದು ಅಂತಹ ಒಂದು ಸಂದರ್ಭ ಬಂದಾಗ ತಾವು ದಯಮಾಡಿ ನಮ್ಮಂತಹ ಹೊಸ ಸದಸ್ಯರಿಗೆ ಕೂಡ ಅವಕಾಶ ಕಲ್ಪಿಸಿ ಕೊಡಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

1 40 ಪಿಎಂ

†ಶ್ರೀ ನೆಲ ನರೇಂದ್ರಬಾಬು (ರಾಜಾಜಿನಗರ) ಮಾನ್ಯ ಅಧ್ಯಕ್ಷರೇ, ಕೂಲಿಗಾಗಿ ಕಾಳು ಈ ಒಂದು ಹಗರಣವನ್ನು ಪತ್ರಿಕೆಗಳಲ್ಲಿ ಓದಿದ ನಂತರ ಒಂದು ರೀತಿಯಾಗಿ ನೂತನವಾಗಿ ಆಯ್ಕೆಯಾದ ನಮಗೆ ಸಾರ್ವಜನಿಕವಾಗಿ ಚರ್ಚೆಗೆ ಪಾರ್ಕ್‌ಗೆ ಹೋದರೂ ಎಲ್ಲಿ ಹೋದರೂ ಅಲ್ಲಿ ಜನರು ಕೇಳತಕ್ಕ, ಒಂದು ತಲೆ ತಗ್ಗಿಸತಕ್ಕ ವಾತಾವರಣ ಸೃಷ್ಟಿಯಾಯಿತು ಆದರೆ ಒಂದು ಸಂತೋಷ ಎಂದು ಹೇಳಿದರೆ ಈಗಾಗಲೇ ಸರ್ಕಾರ ಸಿಓಡಿ ಮುಖೇನ ಈ ಹಗರಣವನ್ನು ತನಿಖೆ ಮಾಡಲಿಕ್ಕೆ ನೇಮಿಸಿರುವುದು ನಿಜವಾಗಲೂ ಒಂದು ಶ್ಲಾಘನೀಯ ಜೊತೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಹೇಳಿದ ಹಾಗೆ ಯಾರನ್ನೇ ಈ ಹಗರಣದಲ್ಲಿ ರಕ್ಷಣೆ ಮಾಡುವುದಿಲ್ಲ ಎನ್ನತಕ್ಕಂಥದ್ದನ್ನು ಹೇಳಿದ್ದಾರೆ, ನಿಜವಾಗಲೂ ಸರ್ಕಾರ ಇದನ್ನು ಮಾಡುತ್ತದೆ ಎನ್ನುವ ಅಪಾರವಾದ ನಂಬಿಕೆ ನನಗಂತೂ ಇದೆ ಜೊತೆಗೆ ಏನು ಸದನದ ಜಂಟಿ ಸಮಿತಿ ಆಗಬೇಕೆಂದು ಹೇಳುತ್ತಿದ್ದಾರೆ, ಪತ್ರಿಯೊಂದು ಜಿಲ್ಲೆಯಲ್ಲೂ ಸಹಾ ಜಿಲ್ಲಾ ಮತ್ತು ಪ್ರತಿಯೊಂದು ವಿಧಾನಸಭಾ ಕ್ಷೇತ್ರಗಳಲ್ಲಿ ಅಧಿಕಾರಿ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು, ಮತ್ತು ವಿಧಾನಸಭಾ ಮಟ್ಟದಲ್ಲಿ ವಿಧಾನಸಭಾ ಸದಸ್ಯರುಗಳು, ಬಹುಶಃ transition period ಏನು ಇದೆ ಚುನಾವಣೆಯ ಘೋಷಣೆಯಾದ ನಂತರ, ಈಗ ಎಷ್ಟಾಗಿದೆ, ಅದಕ್ಕಿಂತ ಮುಂಚೆ ಏನಾಗಿದೆ ಎನ್ನತಕ್ಕಂಥದ್ದು ಸ್ಪಷ್ಟವಾಗಿ ಸತ್ಯಾಸುಸತ್ಯ ಗೊತ್ತಾಗಬೇಕು ಈ ಒಂದು ನಿಟ್ಟಿನಲ್ಲಿ ಉದಾಹರಣೆಗೆ ಮೊನ್ನೆ ನಮ್ಮ ಹಿರಿಯ ಸದಸ್ಯರೊಬ್ಬರು ಮಾತನಾಡುತ್ತಾ ಹೇಳುತ್ತಿದ್ದರು, ಯಾವುದೇ ಒಂದು ಕಾಮಗಾರಿಯನ್ನು ಕೈಗೆತ್ತಿಕೊಂಡಾಗ pre measurement ಮಾಡಬೇಕು, ಕೆರೆಯ ಹೂಳು ಎಷ್ಟು ಹೋಯಿತು ಎಂದು ಹೇಗೆ ಗೊತ್ತಾಗುತ್ತದೆ? ನಮ್ಮ ಬೆಂಗಳೂರು ಮಹಾನಗರ ಪಾಲಿಕೆಯಲ್ಲೂ ಹಲವಾರು ಸಂದರ್ಭದಲ್ಲಿ ಡೀಸಿಲ್ಟಿಂಗ್ ಪ್ರೋಗ್ರಾಮ್‌ಗಳಲ್ಲಿ ಇಷ್ಟು ಸಿಲ್ಟ್‌ನ್ನು ಕ್ಲಿಯರ್ ಮಾಡಿದೆವು ಎಂದು ಹೇಳುತ್ತಾರೆ ಆದರೆ ಎಷ್ಟು ಸಿಲ್ಟಾ ಇತ್ತು ಎನ್ನುವುದನ್ನು ಮೊದಲು ಎಸ್ಟಿಮೇಟ್‌ನಲ್ಲೂ ಹೇಳಿರುವುದಿಲ್ಲ ಬಹುಶಃ ಇಂಥ ಹಲವಾರು ವಿಷಯಗಳಲ್ಲಿ ಎಷ್ಟೋ ಪೋಲಾಗತಕ್ಕಂಥದ್ದು, ನಕಲಿ ಬಿಲ್‌ಗಳನ್ನು ಮಾಡತಕ್ಕಂಥದ್ದು ಇರುತ್ತದೆ ಇದರ ಬಗ್ಗೆ ಅಧಿಕಾರಿಗಳು ಮುತುವರ್ಜಿ ವಹಿಸಬೇಕಾಗಿರತಕ್ಕಂಥದ್ದು, ಮತ್ತು ಹಲವಾರು ಅಧಿಕಾರಿಗಳ ಹತ್ತಿರ ನಾನು ಈ ಹಗರಣದ ಹೇಗೆ ಆಗಿರಬಹುದು ಎಂದು ಚರ್ಚೆ ಮಾಡುತ್ತಿರುವಾಗ ನನಗೆ ಬಂದ ಅಂಶದ ಪ್ರಕಾರವಾಗಿ ಇವತ್ತು ಗಂಡ–ಹೆಂಡತಿ ಇಬ್ಬರೂ ಕೆಲಸ ಮಾಡಿದಾಗ ಸುಮಾರು ನಲವತ್ತು ರೂಪಾಯಿ

ಎಂದುಯ ಕೂಲಿಯನ್ನು ನಿಗದಿಪಡಿಸಿದರೂ ಸಹಾ ಎಂಭತ್ತು ರೂಪಾಯಿ ಕೂಲಿಯನ್ನು ಅವರಿಗೆ ಪ್ರತಿ ದಿವಸ ಕೊಟ್ಟರೆ ಬಹುಶಃ ಕುಟುಂಬಕ್ಕೆ ಕೊಡತಕ್ಕ ಅಕ್ಕಿಯಲ್ಲಿ ಅವರು ಎಷ್ಟೋ ಜನರು ಅಕ್ಕಿಯನ್ನು ತೆಗೆದುಕೊಳ್ಳದೆ ಹಣ ತೆಗೆದುಕೊಂಡು ಹೋಗಿರತಕ್ಕದ್ದಾಗಿದೆ ಅವರು ಆ ದವಸ ಧಾನ್ಯಗಳನ್ನು ಕೊಡದೆ ಬಹುಶಃ ಅದು ನೇರವಾಗಿ ಮಾರಾಟವಾಗಿರಬಹುದು ಎನ್ನುವುದು ಒಂದು ವಿಷಯವನ್ನು ಕೇಳಲ್ಪಟ್ಟೆ ಆಶ್ಚರ್ಯವೇನೆಂದರೆ ಇದಕ್ಕೆ ಅನುಮತಿ ಉಂಟೆ? ಈ ರೀತಿ ಮಾಡಲಿಕ್ಕೆ ಅವಕಾಶ ಇದೆಯೇ? ಮತ್ತು ಎರಡನೆಯದಾಗಿ ಸಾವಿರಾರು ಕೋಟಿ ಟನ್‌ಗಳಷ್ಟು ದವಸಧಾನ್ಯ ಅಕ್ಕಿ ವಿಶೇಷವಾಗಿ ಗೋಧಿ ನೇರವಾಗಿ ಒಂದು ಫ್ಲೋರ್‌ಮಿಲ್‌ಗೆ ಹೋಗುತ್ತದೆಂದರೆ ಈ ಮಧ್ಯೆ ಟೋಲ್ ಗೇಟ್‌ಗಳಲ್ಲಿ ಟ್ರಾನ್ಸ್‌ಪೋರ್ಟ್ ಮಾಡುವಾಗ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಇದು ಬರಲ್ಲವೇ? ಮತ್ತು ಇಷ್ಟು ಸಾವಿರಾರು ಕೋಟಿ ಟನ್‌ಗಳನ್ನು ರಫ್ತು ಮಾಡಬೇಕಾದರೆ ಕೇಂದ್ರ ಸರ್ಕಾರದಿಂದ ಲೈಸೆನ್ಸ್‌ನ್ನು ಪಡೆದಿರತಕ್ಕಂಧವರಿಗೆ ಎಲ್ಲಿಂದ ಪರ್ಚೇಸ್ ಮಾಡಿದರು? ಯಾವ ಗೋಡೌನ್‌ನಿಂದ ಪರ್ಚೇಸ್ ಮಾಡಿದರು ಎನ್ನತಕ್ಕಂಧದ್ದು ಅರಿವಿಗೆ ಬರುವುದಿಲ್ಲವೇ? ಇದು ನಿಜವಾಗಲೂ ಒಂದು ರೀತಿ ಕುತೂಹಲಕಾರಿ ಯಾದಸಂಗತಿ ಸನ್ಮಾನ್ಯ ಮುಖ್ಯಮಂತ್ರಿಗಳು ಕೀಳಿದ ಹಾಗೆ ಯಾವುದೇ ರೀತಿಯ ದಾಕ್ಷಿಣ್ಯ ಇಲ್ಲದೆ ನಿರ್ದಾಕ್ಷಿಣ್ಯವಾಗಿ ಸಂಬಂಧಪಟ್ಟ ಅಧಿಕಾರಿಗಳಾಗಲೀ, ಸಂಬಂಧಪಟ್ಟ ಮೇಲಾಧಿಕಾರಿಗಳಾಗಲಿ, ಅವರ ಮೇಲೆ ಕ್ರಮವನ್ನು ಜರುಗಿಸಬೇಕು ಆ ರೀತಿ ಅವರು ಕ್ರಮ ಜರುಗಿಸುತ್ತಾರೆ ಎನ್ನುವ ಆತ್ಮವಿಶ್ವಾಸದಿಂದ ಈ ಕೂಲಿಗಾಗಿ ಕಾಳು ಅನ್ನತಕ್ಕಂಧದ್ದನ್ನು ಏನಿದೆ ಇದರ ಬಗ್ಗೆ ಯಾರೇ ಆಗಿದ್ದರೂ ಅವರಿಗೆ ರಕ್ಷಣೆಯನ್ನು ಕೊಡಬಾರದು ಎಂದು ಆಗ್ರಹಿಸಿ ತಮಗೆ ವಂದಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ

†ಶ್ರೀ ಚಿಕ್ಕನಗೌಡ್ರ ಸಿದ್ಧನಗೌಡ ಈಶ್ವರಗೌಡ (ಕುಲಹಳ್ಳಿ) ಮಾನ್ಯ ಸಭಾಧ್ಯಕ್ಷರೇ, ಈ ಕೂಲಿಗಾಗಿ ಕಾಳು ಯೋಜನೆಯ ಕೆಲಸವನ್ನು ನಾವು ಇಡೀ ಕರ್ನಾಟಕದಲ್ಲಿ ನೋಡುತ್ತಿದ್ದೇವೆ ಧಾರವಾಡ ಜಿಲ್ಲೆಯಲ್ಲಿ ಅನೇಕ ರೀತಿಯ ಅವ್ಯವಹಾರವಾಗಿರುವ ವರದಿಯನ್ನು ಸರ್ಕಾರ ನೋಡಿದೆ ನಿರಂತರವಾಗಿ ಟ್ರಕ್‌ಗಳಲ್ಲಿ ಕಾಳುಕಡ್ಡಿಗಳನ್ನು ಹೇರಿಕೊಂಡು ಹೋಗುವಾಗ ಧಾರವಾಡ ಜಿಲ್ಲೆಯಲ್ಲಿ ಅನೇಕ ಅಧಿಕಾರಿಗಳು ಸಿಕ್ಕಿಹಾಕಿಕೊಂಡಿದ್ದಾರೆ ಆ ರೀತಿ ಸಿಕ್ಕಿಹಾಕಿಕೊಂಡಂಧ ಅಧಿಕಾರಿಗಳನ್ನು ಚುನಾಯಿತ ಪ್ರತಿನಿಧಿಗಳೇ ಅವರಿಗೆ ಸಹಾಯ ಮತ್ತು ಸಹಕಾರವನ್ನು ಕೊಟ್ಟು ತಮ್ಮದೇ ಮನೆಗಳಲ್ಲಿ ಅವರನ್ನು ಇಟ್ಟುಕೊಂಡು ಅವರಿಗೆ ರಕ್ಷಣೆಯನ್ನು ಕೊಟ್ಟಿದ್ದನ್ನು ಇವತ್ತು ಧಾರವಾಡ ಜಿಲ್ಲೆಯಲ್ಲಿ ನಾನು ನೋಡಿದ್ದೇನೆ ನಾನು ಹೇಳುವುದಿಷ್ಟೆ, ಅನುಬಂಧ 1,2,3 ಈ ಪ್ರಕಾರವಾಗಿ ಅನುದಾನವನ್ನು ಕೊಟ್ಟರು ಆ ರೀತಿ ಕೊಟ್ಟ ಅನುದಾನದ ಪ್ರಕಾರ 8ನೇ ಅನುಬಂಧ, 9ನೇ ಅನುಬಂಧ, 10ನೇ ಅನುಬಂಧ, ಈ ಅನುಬಂಧದಲ್ಲಿ ಇದ್ದಂಧ ಯವುದೇ ಕಾಮಗಾರಿಗಳು ಆಗಲಿಲ್ಲ ಅದೇ ಪ್ರಕಾರ ಸಣ್ಣ ನೀರಾವರಿ ಇಲಾಖೆ ಮುಖಾಂತರ ಕೊಟ್ಟ ಯೋಜನೆಗಳು ಜಿಲ್ಲಾ ಪಂಚಾಯಿತಿಯವರು, ತಾಲ್ಲೂಕು ಪಂಚಾಯಿತಿಯವರು, ಕೆಲವು ಕಾಮಗಾರಿಗಳನ್ನು, ರಸ್ತೆಗಳನ್ನು ಮಾಡಿದ್ದಾರೆ ಸಣ್ಣ ನೀರಾವರಿ ಇಲಾಖೆಯವರು ಮಾಡಿದಂಧ ಕಾಮಗಾರಿಗಳು, ಇವತ್ತೇನು ಏನೊಂದು ಕೆರೆಗಳ ಕಾಲುವೆಗಳ ಕಾರ್ಯಕ್ರಮಗಳನ್ನು ಅವರು ಮಾಡಿದ್ದಾರೆ, ಯಾವುದೇ ಒಂದು ಕಾಮಗಾರಿಯಲ್ಲೂ ಸರಿಯಾದ ಕೆಲಸಗಳಾಗುತ್ತಿಲ್ಲ ಅನೇಕ ಹಿರಿಯ ಶಾಸಕರು ಅದರ ಬಗ್ಗೆ ತಮ್ಮ ಗಮನವನ್ನು ಸೆಳೆದಿದ್ದಾರೆ, ಇವತ್ತು ರೈತ ಕಾಯಕ ಕೆರೆಗಳ ಮುಖಾಂತರ ಆ ಬರಗಾಲದ ಯೋಜನೆಯನ್ನು ಮಾಡಿದ್ದಾರೆ ಅದರಲ್ಲಿಯೂ ಸಾಕಷ್ಟು ಅವ್ಯವಹಾರಗಳನ್ನು ಇವತ್ತು ನೋಡುತ್ತಿದ್ದೇವೆ ಆ ಪ್ರಕಾರವಾಗಿ ತಮ್ಮ ಮುಖಾಂತರ ನಾನು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ,

ಏಕೆಂದರೆ ಧಾರವಾಡ ಜಿಲ್ಲೆಯಲ್ಲಿ ಒಂಭತ್ತು ಟ್ರಕ್‌ಗಳನ್ನು ನಾವು ಹಿಡಿದಿದ್ದೇವೆ ಯಾವುದೇ ಅಧಿಕಾರಿಗಳು ತಲ್ಲೂಕು ಮಟ್ಟಕ್ಕೆ ಆಹಾರ ಧಾನ್ಯಗಳನ್ನು ತರಲಿಲ್ಲ ನೇರವಾಗಿ ಜಿಲ್ಲಾಡಳಿತದ ಮುಖಾಂತರ ಹೊರಗಿನಿಂದ ಹೊರಗೆ ಸಾಗಾಣಿಕೆ ಮಾಡತಕ್ಕ ಒಂದು ಅವ್ಯವಹಾರವನ್ನು ಧಾರವಾಡ ಜಿಲ್ಲೆಯಲ್ಲಿ ಮಾಡಿದ್ದಾರೆ ಆ ಪ್ರಕಾರ ತಾವು ತಕ್ಷಣ ಇವತ್ತು ಆ ಬರಗಾಲ ಕಾಮಗಾರಿಯನ್ನು ನಿಲ್ಲಿಸುವಂಥ ಯೋಚನೆಯನ್ನು ಜಿಲ್ಲಾಧಿಕಾರಿಗಳು ಮಾಡಿದ್ದಾರೆ ಮೊನ್ನೆ ಅನುಬಂಧ 11 ಎಂದು ಕೊಟ್ಟರು, ಆ 11ನೇ ಅನುಬಂಧಕ್ಕೆ ಶಾಸಕರ ಮುಖಾಂತರ ಯೋಜನೆಗಳನ್ನು ತೆಗೆದುಕೊಳ್ಳಿ ಎಂದು ನಾವು ಅವರಿಗೆ ವಿನಂತಿಯನ್ನು ಮಾಡಿಕೊಂಡಾಗ ಶಾಸಕರಿಗೂ ಇದಕ್ಕೂ ಸಂಬಂಧವಿಲ್ಲವೆನ್ನುವ ಮಾತನ್ನು ಹೇಳಿದರು, ಎಂಟು ದಿವಸವಾಗಿಲ್ಲ ಹೋದ ಸೋಮವಾರ ಕೊಟ್ಟಂಥ ಹತ್ತು ಲಕ್ಷ ರೂಪಾಯಿಗಳಲ್ಲಿ ನಾವು ಹೇಳಿದ ಏನು ಕೆಲಸವನ್ನು ಮಾಡಿಲ್ಲವೆಂದು ಹೇಳಿದಾಗ ಶಾಸಕರಿಗೂ ಇದಕ್ಕೂ ಸಂಬಂಧವಿಲ್ಲ, ನಾವು ಮಾಡುವುದಿಲ್ಲವೆನ್ನುವ ಒಂದು ಮಾತನ್ನು ಜಿಲ್ಲಾಧಿಕಾರಿಗಳು ಇವತ್ತು ಹೇಳುತ್ತಿದ್ದಾರೆ ಹತ್ತನೇ ಅನುಬಂಧದ ಯೋಜನೆಯಲ್ಲಿ ಇವತ್ತು ಯಾವುದೇ ಕೆಲಸವಾಗಿಲ್ಲ 8ನೇ ಅನುಬಂಧದಿಂದ 9,10,11 ಯಾವುದೇ ಒಂದು ಯೋಜನೆಯಲ್ಲೂ ಇವತ್ತು ಕೆಲಸಕಾರ್ಯಗಳಾಗುತ್ತಿಲ್ಲ ಆ ಕಾರಣದಿಂದ ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ಸಣ್ಣ ನೀರಾವರಿ ಮುಖಾಂತರ ಏನು ಕೆಲಸಗಳಾಗಿವೆ, ಅದು ಯಾವುದೇ ಒಂದು ತಾಲ್ಲೂಕಿನಲ್ಲಿರಲಿ, ಸಣ್ಣ ನೀರಾವರಿ ಇಲಾಖೆಯ ಮುಖಾಂತರ ಆದಂಥ ಕಾಮಗಾರಿಗಳು ಬಹಳ ಕಳಪೆಮಟ್ಟದ್ದಾಗಿದೆ ಅದನ್ನು ತಾವು ತಕ್ಷಣ ನೀವು ಕರ್ನಾಟಕದಲ್ಲಾದರೂ ಮಾಡಿ ಅಥವಾ ಯಾವುದೇ ಒಂದು ಜಿಲ್ಲೆಯಲ್ಲಾದರೂ ಮಾಡಿ ಆದರೆ ನನ್ನ ಕಲಘಟಗಿ ಮತಕ್ಷೇತ್ರ ಮಲೆನಾಡು ಅಭಿವೃದ್ಧಿ ಕ್ಷೇತ್ರದಲ್ಲಿ ಬರುವ ನನ್ನ ಕ್ಷೇತ್ರದಲ್ಲಿ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೆರೆಗಳು ಇರುವ ಕಾರಣ, ಅಲ್ಲಿಯಾದರೂ ತಾವು ತಕ್ಷಣ ಜಿಲ್ಲಾಧಿಕಾರಿಗಳ ಮುಖಾಂತರವಾಗಲಿ, ಅಥವಾ ಯಾವುದೇ ಒಂದು ಇಲಾಖೆಯ ಮುಖಾಂತರವಾಗಲಿ, ಅಲ್ಲಿ ನಡೆದಿರುವ ಒಂದು ಅವ್ಯವಹಾರವನ್ನು ತಾವು ಬಯಲಿಗೆ ತನ್ನಿ ಎಂದು ವಿನಂತಿ ಮಾಡಿಕೊಂಡು ನನಗೂ ಮಾತನಾಡಲಿಕ್ಕೆ ಅವಕಾಶ ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

†ಶ್ರೀ ಎಂ ಪಿ ರೇಣುಕಾಚಾರ್ಯ (ಹೊನ್ನಾಳಿ) ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಮಳೆ ಇಲ್ಲದೆ, ಬೆಳೆ ಇಲ್ಲದೆ ಬರಗಾಲ ಬಂದಂಥ ಸಂದರ್ಭದಲ್ಲಿ ರಾಜ್ಯದ ಜನತೆ ಕಂಗಾಲಾಗಿರತಕ್ಕ ಸಂದರ್ಭದಲ್ಲಿ ಅಂದಿನ ನಮ್ಮ ನೆಚ್ಚಿನ ಪ್ರಧಾನಮಂತ್ರಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಶ್ರೀಸಾಮಾನ್ಯನ ಕೈಗಳಿಗೆ ಕೆಲಸವನ್ನು ಕೊಡಲು ಕೂಲಿಗಾಗಿ ಕಾಳು ಯೋಜನೆ ಅಡಿಯಲ್ಲಿ ಉದಾರವಾಗಿ ರಾಜ್ಯಕ್ಕೆ ಅಕ್ಕಿಯನ್ನು ಕೊಟ್ಟರು ಅದರಲ್ಲಿ ಹೊನ್ನಾಳಿ ತಾಲ್ಲೂಕಿಗೆ ಬಂದಂಥ ಅಕ್ಕಿಯನ್ನು ಅಂದಿನ ಆಡಳಿತ ಪಕ್ಷದಲ್ಲಿದ್ದಂಥ ಶಾಸಕರು, ತಾಲ್ಲೂಕಿನಲ್ಲಿರತಕ್ಕ ಬಡಜನರನ್ನು, ದೀನದಲಿತರನ್ನು ಉಪಯೋಗಿಸಿಕೊಳ್ಳದೆ ಯಂತ್ರೋಪಕರಣಗಳಿಂದ ಕೆಲಸವನ್ನು ಮಾಡಿಸಿ ಸ್ವತಃ ಅವರ ಶಂಕರ್ ರೈಸ್ ಮಿಲ್ ನಲ್ಲಿ ರೀಪಾಲಿಷ್ ಮಾಡಿ, ಚೀಲವನ್ನು ಬದಲಾವಣೆ ಮಾಡಿ ಮಾರಾಟ ಮಾಡುತ್ತಿದ್ದರು ಆ ಸಂದರ್ಭದಲ್ಲಿ ಭಾರತೀಯ ಜನತಾ ಪಾರ್ಟಿಯವರಾದ ನಾವು ಕಾರ್ಯಕರ್ತರುಗಳು ಹೊನ್ನಾಳಿ ತಾಲ್ಲೂಕಿನಲ್ಲಿ ಹೇರಳವಾಗಿ ಅಕ್ಕಿ ಲೂಟಿಯಾಗುತ್ತದೆ, ಜನರ ಕೈಗೆ ಕೆಲಸ ಇಲ್ಲ, ಜನರು ಒದ್ದಾಡುತ್ತಿದ್ದಾರೆ, ಕೈಗಳಿಗೆ ಕೆಲಸ ಕೊಡಬೇಕೆಂದು ಕಾರ್ಯಕರ್ತರು ನಾವು ಮೇ 19, 2003ರಂದು ತಹಶೀಲ್ದಾರ್‌ರವರಿಗೆ ಮನವಿಯನ್ನು ಕೊಟ್ಟು ತನಿಖೆಯಾಗಬೇಕೆಂದು ಹೇಳಿ ಒತ್ತಡವನ್ನು ತಂದೆವು ಅಧಿಕಾರಿಗಳು ಅದಕ್ಕೆ ಸ್ಪಂದಿಸದಿದ್ದಾಗ

(B) 025240

ತಾಲ್ಲೂಕು ಕಛೇರಿಯನ್ನು ಸಹಾ ನಾವು ಮತ್ತಿಗೆ ಹಾಕಿದೆವು ನಂತರ ಜಿಲ್ಲಾಧಿಕಾರಿಗಳಲ್ಲೂ ಸಹಾ ನಾವು ಮನವಿಯನ್ನು ಮಾಡಿಕೊಂಡೆವು, ಆ ಮನವಿಗೆ ಅಧಿಕಾರಿಗಳು ಸ್ಪಂದಿಸದಿದ್ದಾಗ ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರಾದ ನಾವು 28–06–2003ರಂದು ಬೆಳಿಗ್ಗೆ 9 ಗಂಟೆಗೆ ಗೋಡೌನ್‌ನಿಂದ ಐದು ಲಾರಿ ಅಕ್ಕಿ ಮಾರಾಟಕ್ಕೆ ಹೋಗುತ್ತಿತ್ತು ಆ ಸಂದರ್ಭದಲ್ಲಿ ನಾವುಗಳು ಸ್ಥಳಕ್ಕೆ ಹೋಗುವಷ್ಟರಲ್ಲಿ ಮೂರು ಲಾರಿಗಳು ಹೊರಟುಹೋಗಿದ್ದವು ಆ ಸಂದರ್ಭದಲ್ಲಿ ಎರಡು ಲಾರಿಗಳು ಸಿಕ್ಕಿದವು ಹೊನ್ನಾಳಿಯಿಂದ ಐದು ಕಿಲೋಮೀಟರ್ ದೂರದಲ್ಲಿ ಮಾಸಿಡಿ ಗ್ರಾಮದ ಹತ್ತಿರ ಆ ಎರಡು ಲಾರಿಗಳನ್ನು ಹಿಡಿದವು ಆ ಲಾರಿ ನಂಬರ್ ಕೆಎ–17–5500, ಮತ್ತೊಂದು ಕೆಎ–17–5800 ಈ ಎರಡು ಲಾರಿಗಳನ್ನು ಹಿಡಿದು ಪೋಲೀಸ್‌ನವರಿಗೆ ನಾವು ದೂರನ್ನು ಕೊಟ್ಟು ಪೊಲೀಸ್ ಠಾಣೆಯಲ್ಲಿ ಆ ಲಾರಿಗಳ ಬಗ್ಗೆ ಕೇಸ್‌ಗಳನ್ನು ದಾಖಲು ಮಾಡಿಸಿದೆವು ಆ ಸಂದರ್ಭದಲ್ಲಿ ಕೇಂದ್ರ ರೇಷ್ಮೆ ಮಂಡಳಿಯ ಅಧ್ಯಕ್ಷರಾಗಿದ್ದ ಮತ್ತು ಈಗ ನಮ್ಮ ಶಿವಮೊಗ್ಗದ ಮಾನ್ಯ ಸದಸ್ಯರಾದ ಶ್ರೀ ಕೆ ಎಸ್ ಈಶ್ವರಪ್ಪನವರೂ ಸಹಾ ಭೇಟಿ ಕೊಟ್ಟಿದ್ದರು ನಾವು ಕೊಟ್ಟಂತಹ ದೂರನ್ನು ಪರಿಗಣಿಸದೆ ಏನು ಅಂದಿನ ಜಿಲ್ಲೆಯ ಪ್ರಭಾವಿ ಉಸ್ತುವಾರಿ ಸಚಿವರು ಇದ್ದರು ಅವರು ಯಾವುದೇ ಕಾರಣಕ್ಕು ಈ ಕೇಸು ಹಾಕುವುದು ಬೇಡ, ಮುಚ್ಚಿ ಹಾಕಬೇಕು ಇದರಿಂದ ತೊಂದರೆ ಆಗುತ್ತದೆ ಎಂದು ಹೇಳಿ, ಆ ಸಂದರ್ಭದಲ್ಲಿ ಪೊಲೀಸ್ ಠಾಣೆಯಲ್ಲಿ ನಮ್ಮಗಳ ಮತ್ತು ನಮ್ಮ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಶಾಂತವೀರಪ್ಪ ಗೌಡರ ಮೇಲೆ ಅಲ್ಲಿನ ಕಾಂಗ್ರೆಸ್ ಕರ್ಯಕರ್ತರಿಂದ ದಬ್ಬಾಳಿಕೆ ಆಯಿತು ಅಷೆಲ್ಲಾ ದಬ್ಬಾಳಿಕೆ ಆದರು ಸಹಿತ ಪೋಲೀಸ್ ಅಧಿಕಾರಿಗಳು ನಮಗೆ ರಕ್ಷಣೆ ಕೊಡಲಿಲ್ಲ ಯಾರು ನಮಗೆ ರಕ್ಷಣೆ ಕೊಡಬೇಕಾಗಿತ್ತು ಅಂತಹವರೇ ನಮಗೆ ರಕ್ಷಣೆಯನ್ನು ಕೊಡದೆ, ನಮ್ಮನ್ನು ಬಲಿಪಶು ಮಾಡತಕ್ಕ ಪ್ರಸಂಗ ನಡೆದಿದೆ ಆ ಸಂದರ್ಭದಲ್ಲಿ ನಮ್ಮ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ಅವರಿಗೆ, ಸನ್ಮಾನ್ಯ ಯಡಿಯೂರಪ್ಪನವರಿಗೆ, ಮಾನ್ಯ ಡಿ ಎಚ್ ಶಂಕರ್ ಮೂರ್ತಿಯವರಿಗೆ, ಹೊನ್ನಾಳಿ ತಾಲ್ಲೂಕಿನಲ್ಲಿ ಅಕ್ಕಿ ಲಾಡಿ ಹಿಡಿದು, ದಾಖಲೆ ಸಹಿತ ನಾವು ಕೊಟ್ಟಿದ್ದೆವು ಇಷ್ಟೆಲ್ಲಾ ಕೊಟ್ಟರೂ ಸಹ ಆ ಸಂದರ್ಭದಲ್ಲಿ ಏನು ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು , ಅದು ಈ ಎಲ್ಲಾ ಪ್ರಕರಣಗಳನ್ನೂ ಮುಚ್ಚಿ ಹಾಕುವುದಕ್ಕೆ ಪ್ರಯತ್ನ ಮಾಡಿತು ಇವತ್ತು ಯಾರು ಜನರನ್ನು ರಕ್ಷಿಸಬೇಕಾಗಿತ್ತೋ ಅವರೇ ರಕ್ಷಿಸಲಿಲ್ಲ ನಮ್ಮ ಹಳ್ಳಿಯ ಭಾಷೆಯಲ್ಲಿ ಒಂದು ಗಾದೆ ಹೇಳುತ್ತಾರೆ ಅದೇನೆಂದರೆ, 'ಬೇಲಿಯೇ ಎದ್ದು ಹೊಲ ಮೇಯಿತು' ಎಂದು, ಯಾರು ಜನರ ಕೈಗಳಿಗೆ ಕೆಲಸ ಕೊಡಬೇಕಗಿತ್ತೋ ಅವರೇ ಕೆಲಸ ಕೊಡದೆ ಇವತ್ತು ಜನತೆಗೆ ದ್ರೋಹ ಬಗೆಯುತ್ತಾರೆ ಇಂತಹ ಒಂದು ಪ್ರಕರಣವನ್ನು ನಮ್ಮ ನಾಯಕರಾದ ಶ್ರೀ ಬಿ ಎಸ್ ಯಡಿಯೂರಪ್ಪನವರು ನದನ ಸಮಿತಿಯನ್ನು ರಚನೆ ಮಾಡಬೇಕೆಂದು ಹೇಳಿದ್ದಾರೆ ಈ ವಿಚಾರದ ಬಗ್ಗೆ ಸದನದ ಸಮಿತಿ ರಚನೆ ಆಗಬೇಕು ಯಾರ್ಯಾರು ಈ ಹಗರಣದಲ್ಲಿ ಭಾಗಿ ಆಗಿದ್ದಾರೆ ಅಂತಹವರಿಗೆ ಕೂಡಲೇ ಆಗಬೇಕು ಎಫ್‌ಸಿಐ ಉಗ್ರಾಣದಿಂದ ಕರ್ನಾಟಕ ಫುಡ್ ಕಾರ್ಪೊರೇಷನ್ ಗೋಡೌನಿಗೆ, ಮತ್ತು ಕಾಮಗಾರಿ ನಡೆಯತಕ್ಕ ಸ್ಥಳಕ್ಕೆ ಅಕ್ಕಿ ಸಾಗಾಣಿಕೆ ಆಗಿ ಹಣವನ್ನು ಖರ್ಚು ಹಾಕಲಾಗಿದೆ ಈಗ ಓಡಿ ಅಧಿಕಾರಿಗಳ ಹೇಳಿಕೆಯಂತೆ, ನೇರವಾಗಿ ಎಫ್‌ಸಿಐ ಗೋಡೌನ್‌ನಿಂದ ಮಿಲ್ಲುಗಳಿಗೆ, ಮಂಗಳೂರಿಗೆ ಅಕ್ಕಿ ಹೋಗಿದೆ ಎಂದು ಹೇಳಿದ್ದಾರೆ ಕೋಟ್ಯಾಂತರ ರೂಪಾಯಿಗಳ ಖರ್ಚನ್ನು ಹಾಕಲಾಗಿದೆ ಇದನ್ನು ತಾವುಗಳು ಮಾನ್ಯ ಅಧ್ಯಕ್ಷರು ಮಾನ್ಯತೆ ಮಾಡಬೇಕು ಮಾನ್ಯತೆ ಮಾಡಿ ಇಂತಹ ದೊಡ್ಡ ಹಗರಣವನ್ನು ಯಾವುದೇ ಕಾರಣಕ್ಕೂ ಮುಚ್ಚಿ ಹಾಕದ ಹಾಗೆ ಕೂಡಲೇ ತನಿಖೆ ನಡೆಸಬೇಕು ಈ ಹಿಂದೆ ಸಹ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇತ್ತು ಇವತ್ತು

ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದೆ ಈ ರಾಜ್ಯದ ಜನತೆ ಹಗರಣ ಮಾಡಿದ್ದಕ್ಕೆ ಸ್ಪಷ್ಟವಾಗಿ ಈ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವನ್ನು ತಿರಸ್ಕಾರ ಮಾಡಿದೆ ಇಷ್ಟೆಲ್ಲಾ ಆದರೂ ಸಹ ಇದು ಅಪವಿತ್ರ ಮೈತ್ರಿಕೂಟ ಈ ಒಂದು ಮೈತ್ರಿಕೂಟದಲ್ಲಿ ಎರಡು ಸರ್ಕಾರಗಳು ಇವೆ ಉದಾಹರಣೆಗೆ ಈಗಿನ ಸರ್ಕಾರದ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಹೊನ್ನಾಳಿ ತಾಲ್ಲೂಕಿಗೆ ಚುನಾವಣಾ ಪ್ರಚಾರಕ್ಕೆ ಬಂದಂತಹ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ ಈ ಒಂದು ರಾಜ್ಯದಲ್ಲಿ ಅಕ್ಕಿ ಹಗರಣ, ಭೂ ಹಗರಣ ಮುಂತಾಗಿ ಸಾಕಷ್ಟು ಹಗರಣಗಳು ನಡೆದಿವೆ ಇಂತಹ ಹಗರಣವನ್ನು ನಾವು ಅಧಿಕಾರಕ್ಕೆ ಬಂದ ಕೆಲವೇ ದಿವಸಗಳಲ್ಲಿ ಯಾವುದೇ ಪ್ರಭಾವಿ ವ್ಯಕ್ತಿ ಆಗಿದ್ದರೂ ಅಂತಹವರ ಮೇಲೆ ಮೊಕದ್ದಮೆಗಳನ್ನು ಹಾಕುತ್ತೇವೆ ಜೈಲಿಗೆ ಕಳಿಸುತ್ತೇವೆ ಎಂದು ಹೇಳಿದರು ಹೀಗೆ ಹೇಳಿದಂತಹ ಮಾನ್ಯ ಉಪ ಮುಖ್ಯಮಂತ್ರಿಗಳು ಇವತ್ತು ಸರ್ಕಾರದ ಜೊತೆ ಅವರೂ ಸಹ ಭಾಗಿಯಾಗಿದ್ದಾರೆಂದು ನಮಗೆ ಅನುಮಾನ ಆಗುತ್ತಿದೆ ಅಂದು ವಿರೋಧ ಪಕ್ಷದಲ್ಲಿದ್ದಾಗ ಹೇಳಿದ್ದರು, ಇಂದು ಆಡಳಿತ ಪಕ್ಷದಲ್ಲಿ ಕುಳಿತುಕೊಂಡಿದ್ದಾರೆ ಇದರಿಂದ ಯಾವುದೇ ಕಾರಣಕ್ಕೂ ಹಗರಣವನ್ನು ಮುಚ್ಚಿ ಹಾಕದೇ ಕೂಡಲೇ ತನಿಖೆ ಆಗಬೇಕೆಂದು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಾದ ಬಿ ಎಸ್ ಯಡಿಯೂರಪ್ಪನವರು ಹೇಳಿದ ಹಾಗೆ, ಜಂಟಿ ಸದನ ಸಮಿತಿ ಆಗಲೇಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯವನ್ನು ತಂದು ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು ಈಗ ಏನು ನಿಯಮ 69ರ ಮೇರೆಗೆ ಚರ್ಚೆ ಆಗುತ್ತಿತ್ತು, ಆ ಚರ್ಚೆಯನ್ನು ಮುಕ್ತಾಯ ಮಾಡಲಾಗಿದೆ ಮಧ್ಯಾಹ್ನ ಸರ್ಕಾರದಿಂದ ಉತ್ತರ ಈಗ ಸದನವನ್ನು ಮಧ್ಯಾಹ್ನ 3 00 ಗಂಟೆಯವರೆಗೆ ಮುಂದೂಡಲಾಗಿದೆ

(ಸದನವು ಮಧ್ಯಾಹ್ನ 1 55ಕ್ಕೆ ಮುಂದೂಡಲ್ಪಟ್ಟು ಮತ್ತೆ 3 00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 20 ಗಂಟೆಗೆ ಸಮಾವೇಶಗೊಂಡಿತು)

[ಅಧ್ಯಕ್ಷರು (ಶ್ರೀಕೃಷ್ಣ) ಅಧ್ಯಕ್ಷ ಪೀಠವನ್ನಲಂಕರಿಸಿದ್ದರೂ]

ಅಧ್ಯಕ್ಷರು ಈಗ ನಿಯಮ 69ರ ಮೇರೆಗಿನ ಚರ್ಚೆಗೆ ಸರ್ಕಾರದಿಂದ ಉತ್ತರ ಮಾನ್ಯ ಎಂ ಪಿ ಪ್ರಕಾಶ್ ಅವರು

†ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಮಾನ್ಯ ಅಧ್ಯಕ್ಷರೆ, ಅತ್ಯಂತ ಪ್ರಮುಖವಾದ ವಿಷಯವನ್ನು ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಎತ್ತಿದ್ದಾರೆ ತಾವೂ ಕೂಡ ಈ ಸಂದರ್ಭದಲ್ಲಿ ಇದರ ಮಹತ್ವವನ್ನು ಅರಿತು ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ವಿಷಯವನ್ನು 69ರ ನಿಯಾಮಾವಳಿಗಳ ಪ್ರಕಾರ ಕೈಗೆತ್ತಿಕೊಂಡು ಜನತೆಗೆ ಈ ಸರ್ಕಾರ ನೀತಿ, ನಿರ್ಧಾರಗಳು ಮತ್ತು ಕಾರ್ಯ ವೈಖರಿಗಳನ್ನು ಅದರ ದೌರ್ಬಲ್ಯಗಳನ್ನು ಮತ್ತು ತಪ್ಪುಗಳನ್ನು ಸರಿಪಡಿಸುವ ವಿಚಾರಗಳ ಕುರಿತಾಗಿ ಮಾಡಿದಂತಹ ನಮ್ಮ ಎಲ್ಲಾ ಸದಸ್ಯರ ಈ ಮಾತುಗಳನ್ನು ನಾವೆಲ್ಲಾ ಕೇಳಿದ್ದೇವೆ ಸರ್ಕಾರದ ಗುರುತರವಾದ ಜವಾಬ್ದಾರಿ, ಅದು ಯೋಜನೆಗಳನ್ನು ರೂಪಿಸುವುದು ಒಂದೇ ಅಲ್ಲ, ಯೋಜನೆಗಳ ಅನುಷ್ಠಾನದಲ್ಲಿ ತರಲೇಬೇಕಾದ ದಕ್ಷತೆ ಕ್ಷಿಪ್ರಗತಿಯಲ್ಲಿ ಆಗಬೇಕಾದ ಪರಿಹಾರ ಮತ್ತು ಅದಕ್ಕೆ ಬೇಕಾಗಿರುವಂತಹ ಪ್ರಾಮಾಣಿಕತೆ ಮತ್ತು ಪಾರದರ್ಶಕತೆ, ಇವು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅತ್ಯಂತ ಮುಖ್ಯವಾಗಿರತಕ್ಕಂತಹ ಗುಣಾತ್ಮಕವಾದ

ವಿಷಯಗಳು ಪಾರದರ್ಶಕತೆ ತರಲೇಬೇಕಾಗಿದೆ ಎನ್ನುವಂತಹ ಕಾರಣಕ್ಕಾಗಿ ನಮ್ಮ ಎಲ್ಲಾ ಶಾಸಕರಿಗೆ ಬರ ಪರಿಹಾರಕ್ಕೆ ಸಂಬಂಧಿಸಿದಂತೆ ಇರುವ ತಾಲ್ಲೂಕು ಮಟ್ಟದ ಸಮಿತಿಗಳಿಗೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ ಅವರು ಜನಪ್ರತಿನಿಧಿಗಳಾಗಿ ತೆಗೆದು ಕೊಳ್ಳುವ ಕಾರ್ಯಕ್ರಮಗಳು ಏನಿವೆ ಅವುಗಳನ್ನು ಶಿಫಾರಸ್ಸು ಮಾಡಿದ ನಂತರ ಜಿಲ್ಲಾಧಿಕಾರಿಗಳು ಅವುಗಳನ್ನು ಪರಿಶೀಲಿಸಿ ಎಲ್ಲಿ ಇದರ ಅಗತ್ಯತೆ ಇದೆ, ಬರಗಾಲದ ತೀವ್ರತೆ ಇದೆ ಅಲ್ಲಿ ಉದ್ಯೋಗವನ್ನು ಒದಗಿಸಲೇಬೇಕಾದುದು ಆದ್ಯ ಕರ್ತವ್ಯವಾಗಿದೆ ಅದನ್ನು ಮಾಡುವಾಗ, ಅಂತಹ ಕಾರ್ಯಕ್ರಮಗಳನ್ನು ರೂಪಿಸುವಾಗ ಅದು ಉತ್ಪಾದಿಸುವಂತಹ ಅಸದಟ್ಸ್ ಕ್ರಿಯೇಷನ್ಸ್ ಎಂದು ನಾವು ಏನು ಕರೆಯತ್ತೇವೆ, ಆ ಒಂದು ಕಾರ್ಯಕ್ರಮವನ್ನು ಮಾಡಿ ಹಣ ಖರ್ಚು ಮಾಡಿ ಉದ್ಯೋಗ ಮಾಡುತ್ತೇವೆಂದು ಹೇಳಿ, ಬರೀ ಬೆಟ್ಟಕ್ಕೆ ಕಲ್ಲೂ ತೆಗೆದು ಕೊಂಡು ಹೋಗುವುದು ಅಲ್ಲ ಮಾಡುವ ಕಾಮಗಾರಿಯಿಂದ ಸಾಮಾಜಿಕವಾದ ಆಸ್ತಿಯ ನಿರ್ಮಾಣ ಮಾಡಬೇಕಾಗಿರುವುದು ಅತ್ಯಂತ ಪ್ರಮುಖವಾದುದು 'ಸರ್ಕಲ್ ಆಫ್ ಸೈರಸ್ ಎಂಬ ನಿರದ್ ಚೌಧರಿಯವರು ಬರೆದಿರುವ ಪುಸ್ತಕ ತಮಗೆ ಗೊತ್ತಿದೆ ಸೈರಸ್ ಬಹಳ ತಪ್ಪು ಮಾಡಿದ್ದರಿಂದ ಮತ್ತು ಆತನ ಮನೆತನದವರು ಆತನ ಶವ ಸಂಸ್ಕಾರ ಮಾಡದೇ ಹೋದ ಸಂದರ್ಭದಲ್ಲಿ ಯಮಧರ್ಮರಾಯ ಕೊಟ್ಟ ಶಿಕ್ಷೆ ಏನೆಂದರೆ ಶವ ಸಂಸ್ಕಾರ ಆಗದೆ ಇರುವುದರಿಂದ ಸ್ವರ್ಗ ಅಥವಾ ನರಕಕ್ಕೆ ಭಾನನನಾಗುವುದಿಲ್ಲ ಆದ್ದರಿಂದ ನೀನು ಬೆಟ್ಟದ ಮೇಲೆ ಒಂದು ಕಲ್ಲನ್ನು ಎತ್ತಿಕೊಂಡು ಹೋಗು ಮತ್ತೆ ಆ ಕಲ್ಲನ್ನು ತೆಗೆದುಕೊಂಡು ಕೆಳಗಡೆ ಬಾ ಎಂದು ಹೇಳಿ ಗ್ರೀಕ್‌ನಲ್ಲಿರತಕ್ಕಂತಹ ಸೈರಸ್‌ನ ಒಂದು ದೊಡ್ಡ ಪುರಾಣದ ಕಥೆ ನಾವೆಲ್ಲಾ ಅನೇಕ ಸಮದರ್ಭದಲ್ಲಿ ಸರ್ಕಾರದ ಹಣವನ್ನು ಒಂದು ಉದ್ಯೋಗ ಸೃಷ್ಟಿ ಮಾಡಬೇಕೆನ್ನುವ ಒಂದೇ ಕಾರಣಕ್ಕಾಗಿ, ಮುಲಭೂತವಾಗಿ ಸಾಮಾಜಿಕ ಆಸ್ತಿ ನಿರ್ಮಾಣ ಮಾಡುವುದನ್ನು ಕಡೆಗಣಿಸಿ ಅದನ್ನು ನಾವು ಬೇರೆ ಕಾರಣಗಳಿಗಾಗಿ ಉಪಂಯೋಗಿಸುವಂಧದ್ದು ಏನಿದೆ, ನಿಜವಾಗಿಯೂ ಕೂಡ ಅದು ಪ್ರಗತಿಗೆ ಅನುಗುಣವಾಗಿರತಕ್ಕಂಧದ್ದು ಅಲ್ಲ, ಆ ಪರಿಕಲ್ಪನೆಯನ್ನು ಯಾವುದೇ ನಾಗರೀಕ ಸರ್ಕಾರ, ಅದರಲ್ಲಿ ಕೂಡ ಅಭಿವೃದ್ಧಿಶೀಲ ಸರ್ಕಾರಗಳು ಮತ್ತು ದೇಶಗಳು, ರಾಜ್ಯಗಳು ಇಟ್ಟುಕೊಳ್ಳಬಾರದು ಎನ್ನುವ ಕಾರಣಕ್ಕಾಗಿ ಮಾಡಿದ್ದೇವೆ ಬರಗಾಲ ಒಂದು ಸವಾಲು, ಬರಗಾಲ ಒಂದು ಅವಕಾಶ, ಬರಗಾಲದ ಬಗ್ಗೆ ಶ್ರೀ ವಾಟಾಳ್ ನಾಗರಾಜ್‌ರವರು ತಮಾಷೆ ಮಾಡಬಹುದು, ಬರಗಾಲ ತಿನ್ನುವವರಿಗೆ ಒಂದು ಅವಕಾಶ ಎಂದು ತಮಾಷೆ ಮಾಡಬಹುದು ಇಲ್ಲವೆಂದು ಹೇಳುವುದಿಲ್ಲ ತಿನ್ನುವ ಜನ ಎಲ್ಲಾ ಕಾಲದಲ್ಲಿಯೂ ಇರುತ್ತಾರೆ ಎಲ್ಲಾ ಕಾಲದಲ್ಲಿ ಇರುತ್ತಾರೆ ಎನ್ನುವ ಕಾರಣಕ್ಕಾಗಿ ಅದು ನಡೆಯಬೇಕು ಎನ್ನುವುದು ಕೂಡ ಬಹಳ ದೊಡ್ಡ ತಪ್ಪಾಗುತ್ತದೆ ಆದರೆ ಅದು ಅವಕಾಶ, ಏಕೆಂದರೆ, ಜನಗಳಿಗೆ ಉದ್ಯೋಗ ಕೊಡುವುದರ ಮೂಲಕ ಸಾಮಾಜಿಕ ಆಸ್ತಿಯ ನಿರ್ಮಾಣಗಳನ್ನು ಮಾಡಬೇಕಾಗುತ್ತದೆ, ಹಿಂದೆ ರಾಜಮಹಾರಾಜರುಗಳ ಕಾಲದಲ್ಲಿ ಆಗುತ್ತಿದ್ದುದ್ದು ನೋಡಿದರೆ, ಆಗ ಕೇವಲ ಸೀಮಿತವಾದ ಉದ್ದೇಶಗಳಿದ್ದವು ಕೆರೆಗಳನ್ನು ಕಟ್ಟುವುದು, ಛತ್ರಗಳನ್ನು ನಿರ್ಮಾಣ ಮಾಡುವುದು, ಇಲ್ಲದೆ ಹೋದರೆ ಅವರ ಪ್ರೇಯಸಿಯರ ಅಥವಾ ಪ್ರಿಯತಮನ ಗೋರಿಗಳನ್ನು , ಸಮಾಧಿಗಳನ್ನು ವೈಭವೀಕರಿಸುವಂಧದ್ದು ಬಿಟ್ಟರೆ ಪ್ರಾಯಶಃ ಸಾಮಾಜಿಕ ಜವಾಬ್ದಾರಿಗಳನ್ನು ನೀಗಿಸುವಂತಹ ಜವಾಬ್ದಾರಿ ಆ ಸರ್ಕಾರಗಳಿಗೆ ಇರಲಿಲ್ಲ ಆ ಸಂದರ್ಭದಲ್ಲಿಯೂ ಕೂಡ ಅವರು ಹೆಚ್ಚಿನ ಹಣಕಾಸು ಖರ್ಚು ಮಾಡುತ್ತಿದ್ದರು ಅದೇ ರೀತಿಯಾಗಿ ನಮ್ಮಲ್ಲಿ ಗೊತ್ತಿರುವಂತಹ ರೀತಿಯಲ್ಲಿ 1509ರಲ್ಲಿ ಶ್ರೀ ಕೃಷ್ಣದೇವರಾಯ ತಾನು ಸಿಂಹಾಸನ ಏರಿದ ಸಂದರ್ಭದಲ್ಲಿ ವಿಜಯನಗರದ ಕಾಲದ ರಾಯರ

ಕೆರೆ ಎನ್ನತಕ್ಕಂತಹ ಕೆರೆಗಳನ್ನು ಆಗ ಅವರು ಕಟ್ಟಿಸುತ್ತಾರೆ ಆತ ಸಿಂಹಾಸನ ಏರಿದ ಎನ್ನುವುದಕ್ಕಿಂತ ಹೆಚ್ಚಿಗೆ ದಾಖಲಿಸಲ್ಪಟ್ಟ ದೊಡ್ಡ ಬರಗಾಲ ಆ ಕಾಲದಲ್ಲಿ ಇದ್ದುದ್ದರಿಂದ ಕೆರೆ ಕಟ್ಟೆಗಳನ್ನು ಕಟ್ಟಿಸುವಂಥ ಒಂದು ಬೃಹತ್ ಕಾರ್ಯಕ್ರಮವನ್ನು ರೂಪಣಿ ಮಾಡಿದರು ಅದು ಇಡೀ ರಾಯಲುಸೀಮೆ ಪ್ರದೇಶಗಳಲ್ಲಿ ಕೆರೆಗಳ ನಿರ್ಮಾಣದ ವೈಜ್ಞಾನಿಕತೆಯನ್ನು ಅದು ತೋರಿಸಿಕೊಟ್ಟಿದೆ ಹಾಗೆಯೇ ಇವತ್ತು ನಮ್ಮ ಬರಗಾಲದ ಕಾಮಗಾರಿಗಳಲ್ಲಿ ಈ ಕೆಲಸ ಮಾಡುವ ಸಂದರ್ಭಗಳಲ್ಲಿ ಆಗಿರುವಂತಹ ದೊಡ್ಡ ಲೋಪದೋಷಗಳು, ಈ ಸಂದರ್ಭದಲ್ಲಿ ನಾನು ಅಭಿನಂದಿಸಲೇಬೇಕಾಗಿರುವ ಮಾತು ಹಿಂದೆ ನಾವೆಲ್ಲಾ 1983ರಲ್ಲಿ ಸರ್ಕಾರದಲ್ಲಿ ಇದ್ದಾಗ ನಂತರ 1985 ರಲ್ಲಿ ಹಾಗೂ 1994ರಲ್ಲಿ ಅಧಿಕಾರದಲ್ಲಿದ್ದಾಗ ಕೇಂದ್ರ ಸರ್ಕಾರದಿಂದ ದೊಡ್ಡ ರೂಪದಲ್ಲಿ ನಮಗೆ ಆಹಾರಧಾನ್ಯಗಳು ಸರಬರಾಜು ಆಗುತ್ತಿರಲಿಲ್ಲ ನಾವು ಆಹಾರ ಧಾನ್ಯಗಳ ವಿಚಾರದಲ್ಲಿ ಸಂಪೂರ್ಣವಾಗಿ ಅವಲಂಬಿತರಾಗದೆ ಇರುವ ರೀತಿಯಲ್ಲಿ ಹೆಚ್ಚುವರಿಯಾದ ಆಹಾರಧಾನ್ಯಗಳನ್ನು ಪರದೇಶಗಳಿಗೆ ಕೊಟ್ಟ ಉದಾಹರಣೆಗಳಿವೆ ಅದಕ್ಕಾಗಿ ನಮ್ಮ ಕೃಷಿಕರನ್ನು ಮತ್ತು ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳನ್ನು ನಾವು ಅಭಿನಂದಿಸಲೇ ಬೇಕಾಗಿದೆ ಸ್ವಾಭಿಮಾನವನ್ನು ನಮಗೆ ತಂದುಕೊಟ್ಟಿರುವ ಒಂದು ವರ್ಗ ಎಂದರೆ ಅದು ರೈತರು ಮತ್ತು ಆ ಮೂಲಕ ಹೊಸ ಸಂಕಲನ ತಳಿಗಳನ್ನು ಸೃಷ್ಟಿ ಮಾಡಿದ ನಮ್ಮ ಕೃಷಿ ವಿಜ್ಞಾನಿಗಳು ಈ ದೃಷ್ಟಿಯಿಂದ ಅವರು ನಮ್ಮನ್ನು ಸ್ವಯಂ ಅಭಿಮಾನದಿಂಧ ಬದುಕುವಂತಹ ಒಂದು ಕೆಲಸ ಕಾರ್ಯಗಳನ್ನು ತಂದುಕೊಟ್ಟಿದ್ದಾರೆ ಈ ಸಂದರ್ಭದಲ್ಲಿ ನಮಗೆ ಆಹಾರ ಧಾನ್ಯಗಳನ್ನು ಕೊಡತಕ್ಕಂತಹ ಪ್ರಯತ್ನ ಇರಲಿಲ್ಲ ಆದರೆ ಈ ಸಲ ಕೇಂದ್ರ ಸರ್ಕಾರದವರು ಆಹಾರ ಧಾನ್ಯಗಳನ್ನು ಕೂಡ ಪ್ರಮಾಣದಲ್ಲಿ ಕೊಟ್ಟರು ಆ ದೃಷ್ಟಿಯಿಂದ ಮಾನ್ಯ ಯಡಿಯೂರಪ್ಪನವರಿಗೆ ಮತ್ತು ಅಂದಿನ ಸರ್ಕಾರದ ಮಾನ್ಯ ವಾಜಪೇಯವರಿಗೆ ಕೂಡ ನಾನು ಅಭಿನಂದಿಸಲೇಬೇಕಾಗಿದೆ ಆ ದೃಷ್ಟಿಯಿಂದ ದೊಡ್ಡ ಪ್ರಮಾಣದಲ್ಲಿ ಅವರು ನಮಗೆ ಸಹಾಯಕ್ಕೆ ಬಂದಿದ್ದಾರೆ ನಾವು ಹೇಳಿದ ಪ್ರಮಾಣದಲ್ಲಿ, ಕೇಳಿದ ಪ್ರಮಾಣದಲ್ಲಿ ಅದು ಬಂದಿದೆ ಎಂದು ಅಲ್ಲ, ಆದರೆ 2002–03, ಹಾಗೂ 2003–04ರ ನಡುವೆ 14,04,1937 ಲಕ್ಷ ಮೆಟ್ರಿಕ್ ಟನ್‌ನಷ್ಟು ಆಹಾರಧಾನ್ಯ ಹಂತಹಂತವಾಗಿ ಬಿಡುಗಡೆಯಾಗಿದೆ ಇದು ಒಂದು ದೊಡ್ಡ ಉಪಕಾರವಾಗಿದೆ ಆದರೆ ಅದು ನಾವು ಬಯಸಿದಷ್ಟು ಪ್ರಮಾಣದಲ್ಲಿ ಆಗದೆ ಇರಬಹುದು, ರಾಜಕೀಯ ಒತ್ತಡಗಳ ಕಾರಣದಿಂದ, ಚತುರತೆಯ ಕಾರಣಕ್ಕಾಗಿ, ಆಂಧ್ರಪ್ರದೇಶಕ್ಕೆ ಹೆಚ್ಚು ಪ್ರಮಾಣದ ಅಕ್ಕಿ ಅಥವಾ ದವಸ ಧಾನ್ಯಗಳು ಹೋಗಿರಬಹುದು ಆದರೆ ನಮಗೆ ಕೂಡ ಬಂದಿರತಕ್ಕಂತಹ ಇದರಲ್ಲಿ 2,42,028 ಜನರಿಗೆ ಉದ್ಯೋಗ ಸೃಷ್ಟಿ ಮಾಡುವ ಯೋಜನೆಯನ್ನು ಆ ಸಂದರ್ಭದಲ್ಲಿ ರೂಪಿಸಿತ್ತು ಅದಕ್ಕಾಗಿ 2,34,079 ಕಾಮಗಾರಿಗಳನ್ನು ಮಂಜೂರಾತಿ ಮಾಡಿ 28,200 ಕಾಮಗಾರಿಗಳು ಬೇರೆ ಬೇರೆ ಹಂತದ ಪ್ರಗತಿಯಲ್ಲಿ ಇರುವುದು ಈಗಾಗಲೇ ಪ್ರಾಥಮಿಕ ವರದಿಯಿಂದ ತಮಗೆ ಗೊತ್ತಿದೆ ಪ್ರಕೃತಿ ವಿಕೋಪದಿಂದಾಗಿ ಈ ಕಾರ್ಯಕ್ರಮದಡಿಯಲ್ಲಿ 68,977 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಯಿತು ಇತರ ಬೇರೆ ಬೇರೆ ಇಲಾಖೆಗಳ ಮೂಲಕ 1,73,151 ಕಾಮಗಾರಿಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ ಇದು ವ್ಯಾಪಕವಾಗಿ ಇರತಕ್ಕಂತಹ ಕಾರ್ಯಕ್ರಮ ಸುಮಾರು ಮೂರು ವರ್ಷಗಳ ಕಾಲ ಸತತವಾಗಿ ಬಂದ ಬರಗಾಲದ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ, ಉದ್ಯೋಗದ ಸಮಸ್ಯೆ, ಉದ್ಯೋಗ ಸಮಸ್ಯೆ, ವಲಸೆ ಹೋಗುವ ಸಮಸ್ಯೆ ವಲಸೆ ಹೋಗುವುದರೆ ಕಾರಣದಿಂದ ಸ್ಥಳಾಂತರಿಸಲ್ಪಟ್ಟಿರುವ ವ್ಯಕ್ತಿಗಳ ಮೂಲಕವಾಗಿ ಆಗಲೇಬೇಕಾಗಿರುವ ಸಾಮಾಜಿಕ, ಆರ್ಥಿಕ, ಅದರ ಜೊತೆಗೆ ಆರೋಗ್ಯ ಮತ್ತು ಅಕ್ಷರ ಇವುಗಳಿಗೆ ಸಂಬಂಧಿಸಿದ ವಿಚಾರಗಳ ಸಂಕೀರ್ಣ

ಸ್ಥಿತಿಯನ್ನು ಸಮಾಜ ಮತ್ತು ಸರ್ಕಾರ ಎದುರಿಸುವಂತಹ ಒಂದು ಸಂಹಿತೆ ಕಳೆದ ಮೂರು ವರ್ಷಗಳಿಲ್ಲ ಆಯಿತು ಆ ಸಂದರ್ಭದಲ್ಲಿ ನಾನು ಇಷ್ಟನ್ನು ಮಾತ್ರ ಅರಿಕೆ ಮಾಡಿಕೊಳ್ಳುತ್ತೇನೆ ಇಷ್ಟು ಬೃಹತ್ ಪ್ರಮಾಣದ ಕಾರ್ಯಕ್ರಮಗಳು ಪ್ರಾರಂಭವಾದಾಗ ಯಾವುದೇ ಲೋಪದೋಷಗಳು ಆಗಿಲ್ಲ ಎನ್ನುವ ಮಾತನ್ನು ನಾನು ಹೇಳಲಾರೆ ಲೋಪದೋಷಗಳು ಖಂಡಿತವಾಗಿ ಆಗಿದೆ ನಾವು ವಿರೋಧ ಪಕ್ಷದಲ್ಲಿ ಇದ್ದಾಗ ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ, ಅದರ ಬಗ್ಗೆ ಟೀಕೆಗಳನ್ನು ಮಾಡಿದ್ದೇವೆ ಇವತ್ತು ನಮ್ಮ ಗೆಳೆಯರು ಆಚೆ ಬದಿ ಕುಳಿತಿರತಕ್ಕಂತಹವರು ಮಾತನಾಡಿದ ಮಾತುಗಳಲ್ಲಿ ಅನೇಕ ಸತ್ಯಾಂಶಗಳು ಇವೆ ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ ಇದನ್ನು ಮುಚ್ಚಿಡುವುದರ ಮೂಲಕ ನಾವು ಏನನ್ನೋ ಸಾಧಿಸುತ್ತೇವೆ ಎನ್ನುವಂಧಾದ್ದಾಗಲಿ, ಅಧವಾ ನಮ್ಮನ್ನು ಅಧಿಕಾರಕ್ಕೆ ತಂದು ಕೂರಿಸಿರತಕ್ಕಂತಹ ಜನತೆಗೆ ಸುಳ್ಳು ಮಾತನ್ನು ಹೇಳುವುದರ ಮೂಲಕವಾಗಿ ಅಧಿಕಾರದಲ್ಲಿ ಉಳಿಯುತ್ತೇವೆ ಎನ್ನುವಂತಹ ಭ್ರಮೆ ನಮಗೆ ಇಲ್ಲ ಸತ್ಯವನ್ನು ಯಾವಾಗಲೂ ಕೂಡ ಜನ ಮೆಚ್ಚುತ್ತಾರೆ ಅದು ಅಪ್ರಿಯವಾದ ಸತ್ಯವಾದರೂ ಕೂಡ ಸತ್ಯವನ್ನು ಮೆಚ್ಚುತ್ತಾರೆಯೆ ವಿನಃ ಪ್ರಿಯಾವಾದ ಸುಳ್ಳನ್ನು ಸಮಾಜ ಒಪ್ಪುವುದಿಲ್ಲ ಆ ಕಾರಣಕ್ಕಾಗಿ ಇಲ್ಲಿ ಯಾವುದನ್ನೂ ಮುಚ್ಚಿಡಬೇಕಾದ ಅಗತ್ಯವಿಲ್ಲ ಆದರೆ ವಾಸ್ತವ ಸಂಗತಿಗಳ ಹಿನ್ನೆಲೆಯಲ್ಲಿ ನಾವು ಇಂತಹ ಒಂದು ಬೃಹತ್ ಪ್ರಮಾಣದ ಕಾಮಗಾರಿಗಳನ್ನು ಮೂರು ವರ್ಷಗಳ ಕಾಲ ಕೈಗೊಂಡಿರತಕ್ಕಂತಹ ಸಂದರ್ಭದಲ್ಲಿ ಈ ತರಹದ ಭ್ರಷ್ಟಾಚಾರದ ವ್ಯವಸ್ಥೆ ಮತ್ತು ಲೋಪದೋಷಗಳು ಇದ್ದೇ ಇರುತ್ತವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು, ಮಾನ್ಯ ನಾಗರಾಜ್‌ರವರು, ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಇದರಲ್ಲಿ ಮುಖ್ಯವಾಗಿ ಇರತಕ್ಕಂಧದ್ದು, ಶ್ರೀ ವಾಟಾಳ್ ನಾಗರಾಜ್‌ರವರು ಇದನ್ನು ಬಹಿರಂಗ ವಿಚಾರಣೆ ಮಾಡಿ ತಪ್ಪಿತಸ್ಥರ ಮೇಲೆ ನೀವು ಕೇಸ್ ಹಾಕುವ ಕೆಲಸ ಮಾಡಬೇಕೆಂದು ಹೇಳಿದ್ದಾರೆ ಒಂದು ದೃಷ್ಟಿಯಿಂದ ತಾತ್ವಿಕವಾದ ಮತ್ತು ಪಾರದರ್ಶಕವಾದ ದೃಷ್ಟಿಯಿಂದ ಇದು ಸಮಂಜಸವಾದ ವಿಚಾರವೇ, ಆದರೆ ಈ ಘಟ್ಟದಲ್ಲಿ ಮತ್ತು ತಾಂತ್ರಿಕವಾಗಿ ನೋಡುವುದಾದರೆ ಬಹಿರಂಗ ವಿಚಾರಣೆಯ ಸಮಸ್ಯೆಯನ್ನು ಇಲ್ಲಿ ಎತ್ತಿಲ್ಲ ಅವರು ಸಹಿ ಮಾಡಿ ಕಳುಹಿಸಿಕೊಟ್ಟಿರುವ ಕ್ರಿಯಾಲೋಪ ನಿಲುವಳಿ ಸೂಚನೆಗೆ ಸಂಬಂಧಿಸಿದಂತೆ ಇರತಕ್ಕಂಧದ್ದು, ಜಂಟಿ ಸದನದ ಸಮಿತಿಯನ್ನು ನೇಮಕಾರಿ ಮಾಡಬೇಕೆಂದು ಇದೆಯೇ ವಿನಃ ಬಹಿರಂಗ ವಿಚಾರಣೆ ಆಗಬೇಕು ಬೇಡ ಎನ್ನುವುದು ಪ್ರೊಸೀಜರಲ್ ಪಾಯಿಂಟ್ ಮೊದಲು ಪ್ರಾಧಮಿಕವಾಗಿ ಇದರಲ್ಲಿ ಸಂಪೂರ್ಣವಾದ ತನಿಖೆ ನಡೆಯಬೇಕು ಸಂಪೂರ್ಣವಾದ ತನಿಖೆ ನಡೆದ ನಂತರ ಯಾರು ತಪ್ಪಿತಸ್ಥರು ಎನ್ನುವಂಧದ್ದು ಗುರುತಿಸಿದ ನಂತರ ಅವರ ಮೇಲೆ ಪ್ರಧಮ ವರದಿ ಕೊಟ್ಟು ಅವರ ಮೂಲಕ ಬೇಕಾಗಿರುವ ಛಾರ್ಜ್ ಶೀಟ್‌ನ್ನು ಸಂಬಂಧಿಸಿದ ನ್ಯಾಯಾಲಯಗಳಲ್ಲಿ ಹಾಕಿದ ನಂತರ ಆ ನ್ಯಾಯಾಧೀಶರು ಇದರ ಬಗ್ಗೆ ನಿರ್ಧಾರ ಮಾಡಬೇಕಾಗುತ್ತದೆ ಅದಕ್ಕೆ ಇರುವಂತಹ ಸಿಆರ್‌ಪಿಸಿ ಕೂಡ ನಮಗೆ ಮಾರ್ಗದರ್ಶಕವಾಗುತ್ತದೆ ನೀವು ಹೇಳುವಂತಹ ಮಾತು ಏನಿದೆ, ಗೋವರ್ ಕಮಿಷನ್‌ಗೆ ಸಂಬಂಧಪಟ್ಟಂತೆ ಶ್ರೀಮಾನ್ ದೇವರಾಜ್ ಅರಸು ಅವರನ್ನು ಬಹಿರಂಗ ವಿಚಾರಣೆ ಮಾಡಿದರು ಬಹಿರಂಗ ವಿಚಾರಣೆ ಅಲ್ಲ ಅದು, ಆದರೆ ಒಂದೇ ಒಂದು ಸಲ ಬಹಿರಂಗ ವಿಚಾರಣೆ ಮಾಡಿದ್ದು ನಮಗೆ ಗೊತ್ತಿದ್ದಂತೆ ನೆಹರೂರವರ ಕಾಲದಲ್ಲಿ ಶ್ರೀ ಟಿ ಟಿ ಕೃಷ್ಣಮಾಚಾರ್‌ರವರ ಮೇಲೆ ಬಂದಂತಹ ದೊಡ್ಡ ಆಪಾದನೆ ಮೇಲೆ ಮುಂಧ್ರಾ ಕಮಿಷನ್ ಎಂದು ಮಾಡಿದಾಗ ಶ್ರೀ ನ

ಭಾಗ್ಲಾರವರು ಮುಂಬೈನ ಮುಖ್ಯ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದರು ಅವರು ಆಗ ತಾಡ್ ಸ್ಪೀಕರ್‌ಗಳನ್ನು ಹಾಕಿ, ಧ್ವನಿವರ್ಧಕಗಳನ್ನು ಹಾಕಿ ಅದರ ಮೂಲಕ ವಿಚಾರಣೆ ನಡೆಸಿರತಕ್ಕಂತಹ ಸಂಭವ ಇದೆ ಇಲ್ಲಿ ಬಹಿರಂಗ ವಿಚಾರಣೆ ಎನ್ನತಕ್ಕಂಧದ್ದು ಇನ್ ಕ್ಯಾಮರಾ ಸೆಷನ್ ಅಂಡ್ ಔಟ್ ಸೈಡ್ ಗೃಹ ಕೃತ್ಯಕ್ಕೆ ಸಂಬಂಧಪಟ್ಟಿರತಕ್ಕಂಧದ್ದು, ಅಥವಾ ಅತ್ಯಾಚಾರಕ್ಕೆ ಒಳಗಾಗಿ ಮಾನಕ್ಕೆ ಅಂಜುವಂತಹ ಹೆಣ್ಣು ಮಕ್ಕಳು ಸಾಕ್ಷಿ ಕೊಡುವಂತಹ ಫಿರ್ಯಾದಿ ಕೊಟ್ಟಂತಹ ಸಂದರ್ಭಗಳು, ಅಥವಾ ಗಂಡ ಹೆಂಡಿರ ಜಗಳಕ್ಕೆ ಸಂಬಂಧಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ನಮ್ಮ ಇತ್ತೀಚಿನ ದಿನಮಾನಗಳಲ್ಲಿ ಎಲ್ಲವೂ ಕೂಡ ಇನ್ ಕ್ಯಾಮರಾ ಕೋರ್ಟ್ ನಡೆಸಿರುವ ಉದಾಹರಣೆಗಳು ಇವೆಯೇ ವಿನಃ ಬಹಿರಂಗ ವಿಚಾರಣೆ ಎಂದರೆ ಎಲ್ಲರಿಗೂ ಕೂಡ ಮುಕ್ತ ಅವಕಾಶ ಆ ನ್ಯಾಯಾಲಯದಲ್ಲಿ ಎಷ್ಟು ಸ್ಥಳಾವಕಾಶ ಇದೆ ಅಷ್ಟು ಸ್ಥಳಾವಕಾಶದಲ್ಲಿ ಯಾರಾದರೂ ಬರಬಹುದು ಅದೇ ಬಹಿರಂಗವಾಗಿರತಕ್ಕಂಧದ್ದು ಇಲ್ಲಿಯೂ ಕೂಡ ನಮ್ಮ ಸದನದಲ್ಲಿ ಯಾರಿಗೂ ಬಿಡುವುದಿಲ್ಲ ಎಂದರೆ, ನಮ್ಮ ಗ್ಯಾಲರಿಯಲ್ಲಿ ಇರುವ ಜನ ಯಾರಿದ್ದಾರೆ ಅವರೆಲ್ಲಗೂ ಕೂಡ ವಿಚಾರದಲ್ಲಿ ಸಮಾಜಕ್ಕೆ ಮತ್ತು ಜನಗಳಿಗೆ ನಮ್ಮ ನಡವಳಿಕೆಗಳ ಬಗ್ಗೆ, ನಿರ್ಧಾರಗಳ ಬಗ್ಗೆ ನಮ್ಮ ಗೊತ್ತುವಳಿಗಳ ಬಗ್ಗೆ ಅವರು ಅವರಿಗೆ ಮಾಹಿತಿ ಒದಗಿಸುವ ಕೆಲಸವನ್ನು ಮಾಡುತ್ತಾರೆ ಆ ದೃಷ್ಟಿಯಿಂದ ಬಹಿರಂಗ ವಿಚಾರಣೆ ಮಾಡಬೇಕೆಂದು ಹೇಳುವುದು ಏನಿದೆ ಅದು ತತ್ಕಣ ಆಗುವಂಧದ್ದು ಅಲ್ಲ ಈಗ ಅದಕ್ಕೆ ಬೇಕಾಗಿರತಕ್ಕಂಧ ಕ್ರಮಗಳನ್ನು ಕೈಗೊಂಡು ಚಾರ್ಜ್ ಶೀಟ್ ಹಾಕಿದಮೇಲೆ ಅಲ್ಲಿ ಸಂಬಂಧಿಸಿದಂತಹ ಜ್ಯೂರಿಡಿಕ್ಷನಲ್ ಮ್ಯಾಜಿಸ್ಟೇಟ್ ಎಂದು ಏನು ಕರೆಯುತ್ತಾರೆ, ಆ ವ್ಯಾಪ್ತಿಗೆ ಸಂಬಂಧಪಟ್ಟಿರತಕ್ಕಂಧ ಒಬ್ಬ ನ್ಯಾಯಾಧೀಶ ತೆಗೆದುಕೊಳ್ಳಬೇಕಾಗಿರುವ ವಿಚಾರ ಆ ಸಂದರ್ಭದಲ್ಲಿ ಮಾಡಬೇಕಾಗಿರತಕ್ಕಂಧಾದ್ದು. ಇದರಲ್ಲಿ ನಿಮಗೆ ಗೊತ್ತಿದ್ದ ಹಾಗೆ ನಾನು ಎರಡು ಉದಾಹರಣೆಯ ಮಾತುಗಳನ್ನು ಹೇಳಿದರೆ ಯಾರೂ ಕೂಡ ತಪ್ಪಾಗಿ ಭಾವಿಸಿಕೊಂಡು ಈ ಭ್ರಷ್ಟಾಚಾರವನ್ನು ನಾನು ಸಮರ್ಧಿಸಿಕೊಳ್ಳುತ್ತೇನೆ ಅಥವಾ ಅದಕ್ಕಾಗಿ ಒಂದು ಸಣ್ಣ ಉಪಾಯದ ರಂಧ್ರವನ್ನು ತೋಡುತ್ತಿದ್ದೇನೆ ಎನ್ನುವಂತಹ ಮಾತನ್ನು ಹೇಳಬಾರದು ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಎಷ್ಟು ವ್ಯಾಪಕವಾಗಿ ಭ್ರಷ್ಟಾಚಾರ ಇರುತ್ತದೆ ಎಂದರೆ ಎರಡು ಸಾವಿರ ವರ್ಷಗಳ ಹಿಂದೆ ಜೇಸಸ್ ಏಸುಕ್ರಿಸ್ತನಿಗೆ 13 ಜನ ಶಿಷ್ಯರಿದ್ದರು ಆ 13 ಜನ ಶಿಷ್ಯರಲ್ಲಿ sermon on the mountain ಆಗುವಾಗ ಆತನನ್ನು ಯಹೂದಿಗಳು ಹಿಡಿಯಬೇಕು ಎಂದು ಬಂದಾಗ ಒಂದು ಬೋಲ್ಸ್‌ವಿನ್ ಉದ್ಯಾನವನದಲ್ಲಿ ಯೇಸುಕ್ರಿಸ್ತ ಯಾರು ಎಂದು ಹೇಳಿ ತೋರಿಸುವಂತಹ ಕೆಲಸಕ್ಕೆ ಒಬ್ಬ ಇನ್‌ಫಾರ್ಮರ್ ಬೇಕಾಗಿತ್ತು ಆಗ ಅಲ್ಲಿ ಯಹೂದಿಯ ಹೇಡನ್ ರಾಜ 30 ಬಂಗಾರದ ನಾಣ್ಯಗಳನ್ನು ಒಬ್ಬ ಜೂಡೋಗೆ ಕೊಡುತ್ತಾನೆ ಆ ಜುಡೋ 30 ನಾಣ್ಯಗಳನ್ನು ತೆಗೆದು ಕೊಂಡು ಬಂದು ಈತನೇ ಯೇಸುಕ್ರಿಸ್ತ ಎಂದು ಹೇಳಿ ಆತನ ಕೈಗೆ ಮುತ್ತು ಕೊಡುವುದರ ಮೂಲಕ ಸೈನಿಕರಿಗೆ ಆವನ ಇರುವಿಕೆಯನ್ನು ಸಾಬೀತುಪಡಿಸುತ್ತಾನೆ ಈಗ ಇದನ್ನು ಏಕೆ ಹೇಳುತ್ತೇನೆ ಎಂದರೆ ಎರಡು ಸಾವಿರ ವರ್ಷಗಳ ಹಿಂದೆ ಯೇಸುಕ್ರಿಸ್ತನಿಗೆ, ಆತನು ದೈವದ್ರೋಹ,ಗುರುದ್ರೋಹ ಮಾಡುವುದಕ್ಕೆ ಹಣ ತೆಗೆದುಕೊಂಡಿರತಕ್ಕಂಧ ಪ್ರವೃತ್ತಿ ಎಲ್ಲಾ ಕಾಲದಲ್ಲಿ ಇದೆ ಎಂದು ತಕ್ಷಣವೇ ಇಲ್ಲಿ ಇರಬೇಕು ಎಂದು ನಾನು ಹೇಳುವುದಿಲ್ಲ ವಾರ್ನ್ ಹೇಸ್ಟಿಂಗ್ಸ್ ಬಗ್ಗೆ ನಂದಕುಮಾರ್ ಅಂತಹವರು ಕೊಟ್ಟಿರತಕ್ಕಂಧ ಒಂದು ದೊಡ್ಡ ಬ್ರಷ್ಟಾಚಾರದ ವರದಿಯ ಮೇಲೆ ಪ್ರಿವ್ವಿ ಕಾನ್ಸಿಲ್‌ನಲ್ಲಿ ಎಡ್ಮಂಡ್ ಬರ್ಕ್ ಅವರು ಹೌಸ್ ಆಫ್ ಕಾಮನ್ಸ್‌ನಲ್ಲಿ ಮಾತನಾಡಿರುವುದನ್ನು ಆ ಭಾಷಣವನ್ನು ಓದಿದರೆ, ಬ್ರಷ್ಟಾಚಾರದ ವಿವಿಧ ಆಯಾಮಗಳು ಏನಿವೆ, ಆ ಎಲ್ಲಾ ಆಯಾಮಗಳ ಪೂರ್ಣ

ಪರಿಚಯವಾಗುತ್ತದೆ ನೇರವಾಗಿ ನಾವು ಇಲ್ಲಿ ಭ್ರಷ್ಟಾಚಾರ ಆಗಿದೆ ಎಂದರೆ ಇದು ಇಷ್ಟಕ್ಕೇ ಸೀಮಿತವಾಗಿರತಕ್ಕಂಥಾದ್ದಲ್ಲ ತಾವು ಎತ್ತಿರತಕ್ಕಂಥ ಸಂಗತಿಗಳೇನಿವೆ ಇದರಲ್ಲಿ ಬಹಳ ಮುಖ್ಯವಾದ ಅಂಶಗಳನ್ನು ತಾವು ಎತ್ತಿದ್ದೀರಿ ನಮ್ಮ ಆಹಾರಧಾನ್ಯವನ್ನು ತೆಗೆದುಕೊಂಡು ಹೋಗಿ ಕಳ್ಳಸಾಗಾಣಿಕೆ ಮಾಡಿ ಆಫ್ರಿಕಾ ಮೊದಲಾದ ದೇಶಗಳಿಗೆ ಕಳುಹಿಸಿಕೊಡತಕ್ಕಂಥಾದ್ದು, ಅದು ಭೌತಿಕವಾದಂತಹ ಭಾಗವಾಗಿದ್ದರೆ, ಇದರಲ್ಲಿ ಬೇರೆ ನೈತಿಕವಾಗಿ ಇರುವಂತಹ ಭಾಗ ಮತ್ತು ಅಭಿವೃದ್ಧಿ ಶೀಲವಾಗಿರತಕ್ಕಂಥ ರಾಷ್ಟ್ರ ಬಳಸಬೇಕಾಗಿರತಕ್ಕಂಥ ಈ ಹಣಕಾಸಿನ ಸ್ಥಿತಿಯಲ್ಲಿ ವಾಸ್ತವ ಸಂಗತಿಗಳಿಗೂ ನಾವು ಹಕಿಕೊಂಡಿರತಕ್ಕಂಥ ಯೋಜನೆಗಳಿಗೂ ನಾವು ಕೊಡ ಮಾಡುವಂಥ ಪ್ರತಿರೂಪದ ಕೂಲಿಗೂ ಆ ನಿರ್ಧಾರವನ್ನು ಮಾಡುವಾಗ ಆಗಿರುವಂತಹ ಅವೈಜ್ಞಾನಿಕತೆ ಕೂಡ ಬಹಳ ಮುಖ್ಯವಾಗಿರುತ್ತದೆ ಮಾನ್ಯ ಶ್ರೀರಾಮರೆಡ್ಡಿಯವರು ಪ್ರಸ್ತಾಪ ಮಾಡಿದಂತೆ ಈ ಯೋಜನೆ ಅವೈಜ್ಞಾನಿಕ ಎನ್ನುವ ಮಾತನ್ನು ವಿಸ್ತರಿಸಿ ಹೇಳಬೇಕಾದರೆ ನಾವು ಒಂದೊಂದು ಪ್ರದೇಶಕ್ಕೆ ಅದರದೇ ಆದ ವೈಶಿಷ್ಟತೆ ಇರುತ್ತದೆ ಕೊಡಗು, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಚಿಕ್ಕಮಗಳೂರು, ಅಥವಾ ಹಾಸನದ ಕೆಲವು ಭಾಗಗಳಲ್ಲಿ ನಾವು 46 ರೂಪಾಯಿ 25 ಪೈಸೆಗೆ ಒಬ್ಬ ಕೂಲಿಕಾರ ಬರಲಿ ಎಂದರೆ ಯಾವ ಕೂಲಿಕಾರ ಕೂಡ ಬರುವುದಕ್ಕೆ ಸಾಧ್ಯವಿಲ್ಲ ಆಗ ನಮ್ಮ ಮುಂದೆ ಎರಡು ಆಯ್ಕೆಗಳು ಇರುತ್ತವೆ ಒಂದು ಆಯ್ಕೆ 46 ರೂಪಾಯಿಗಳಿಗೆ ಯಾರೂ ಕೂಲಿಕಾರರು ಬರುವುದಿಲ್ಲ ಎನ್ನುವ ಕಾರಣವನ್ನು ಇಟ್ಟುಕೊಂಡು ನಾವು ಈ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಸಾಧ್ಯ ಆಗುವುದಿಲ್ಲ, ಆದುದರಿಂದ ಈ ಯೋಜನೆಯನ್ನು ಕೈಬಿಡಿ ಎಂದು ಹೇಳುವುದು ಒಂದು ಮಾರ್ಗ, ಇಲ್ಲದೆ ಇದ್ದರೆ ಬಂದಿರುವಂತಹ ಹಣವನ್ನು ಉಪಯೋಗಿಸಿಕೊಳ್ಳಲೇಬೇಕಾಗುತ್ತದೆ ಮೂಲಕವಾಗಿ ಕರ್ನಾಟಕ ನಾಡಿನ ಅಭಿವೃದ್ಧಿ ಆಗಬೇಕಾದಂತಹ ಜರೂರತ್ತು ಕೂಡ ಇರುವುದರಿಂದ ಅದರಲ್ಲಿ ನಿಯಮಬಾಹಿರ ಎನ್ನುವುದಕ್ಕಿಂತ ಹೆಚ್ಚಾಗಿ ಇರ್ರೆಗ್ಯುಲಾರಿಟಿ ಎನ್ನುವ ಶಬ್ದವನ್ನು ತಾವು ಬಳಸಬಹುದು, ಜನ ಪ್ರತಿನಿಧಿಗಳು ಇದಕ್ಕೆ ಒಪ್ಪಿಕೊಂಡು ಮಾಡಿರತಕ್ಕಂಥಾದ್ದು ಈ ಎನ್‌ಎಂಆರ್ ಬರೆಯುವಂತಹ ರೀತಿಯಲ್ಲಿ ನೀವು ಹೆಚ್ಚಿನ ಕೆಲಸವನ್ನು ಮಾಡಿ, ಮಾಡುವುದರ ಜೊತೆಗೆ 46 ರೂಪಾಯಿಗಳಿಗೆ ಕೂಲಿಕಾರರು ಬರದೇ ಇದ್ದರೆ, ಇದು ವಾಸ್ತವವಾದಂತಹ ಸಂಗತಿ ಈ ಮಾತನ್ನು ನಾನು ಹೇಳಿದ್ದೇನೆ ಎಂದತಕ್ಷಣ ನಿಯಮಾವಳಿಗಳನ್ನು ಮೀರಿ ಸರ್ಕಾರವನ್ನು ನಡೆಸುವುದಾಗಿದ್ದಾರೆ ಎಷ್ಟರಮಟ್ಟಿಗೆ ಸಕ್ರಮ ಎನ್ನುವಂತಹ ಪ್ರಶ್ನೆ ಉದ್ಭವವಾಗುತ್ತದೆ ಇದು ನೈತಿಕವಾದಂತಹ ಪ್ರಶ್ನೆ, ಆದರೆ ನೈತಿಕವಾದಂತಹ ಪ್ರಶ್ನೆ ನಮ್ಮ ಮುಂದೆ ಇರತಕ್ಕದ್ದು ಅಭಿವೃದ್ಧಿಶೀಲ ರಾಷ್ಟ್ರ ಅದರ ಉಪಯೋಗ ಮಾಡಿಕೊಳ್ಳಬೇಕೇ ಅಥವಾ ನೈತಿಕ ವಾಗಿರತಕ್ಕಂಥ ಈ ವಾಸ್ತವ ಸಂಗತಿಗಳಿಗೆ ಕಣ್ಣು ಮುಚ್ಚಿಕೊಂಡು ಬಂದಿರುವಂತಹ ಆ ಸಾಮಾಗ್ರಿಗಳನ್ನು ನಿರಾಕರಿಸಬೇಕೇ, ಈ ವಿಚಾರದಲ್ಲಿ ನನಗೆ ಈ ಸದನವೇ ಅತ್ಯಂತ ಪವಿತ್ರವಾದುದು ಈ ಸದನದಲ್ಲಿ ಅನೇಕ ಬಾರಿ ಈ ವಿಚಾರದಲ್ಲಿ ಚರ್ಚೆಯಾದಂತಹ ಸಂದರ್ಭದಲ್ಲಿ ಕೂಡ ಇದು ಏನೋ ಹೊಸದಾಗಿ ಆಗಿದೆ ಎನ್ನುವುದಕ್ಕಿಂತ ಹೆಚ್ಚಾಗಿ ನಾನು ಮಾನ್ಯ ಜಗದೀಶ್ ಶೆಟ್ಟರ್ ಅವರನ್ನು ಅಭಿನಂದಿಸುತ್ತೇನೆ ಅವರು ಈ ವಿಷಯದಲ್ಲಿ ಜೆಸಿಬಿಯನ್ನು ಉಪಯೋಗ ಮಾಡಬೇಕೆನ್ನುವ ಮಾತನ್ನು ಹೇಳಿಲ್ಲ ಆದರೆ ಜಂಟಿ ಸದನದ ಸಮಿತಿಯಾಗಬೇಕು ಎನ್ನುವ ವಿಚಾರದಲ್ಲಿ ಚರ್ಚೆಯಾಗಿದೆ ಅದರ ಇಡೀ ವಿವರಗಳನ್ನು ಅಂದರೆ ಅಲ್ಲಿ ಏನೇನಾಯಿತು ಏನೇನು ಮಾತಾಯಿತು ಎನ್ನುವುದನ್ನು ಹೇಳಬೇಕಾದಂತಹ ಪ್ರಮೇಯ ಇಲ್ಲ ಆದರೆ ಆ ಸಂದರ್ಭದಲ್ಲಿ ಎಲ್ಲರೂ ಕೂಡ ಇಂತಹ ಮಾತನ್ನು ಹೇಳಿದ್ದಾರೆ "ಇಲ್ಲ ನಮಗೆ ಕೆಲಸ ಕಾರ್ಯಗಳು ಬೇಗ ಆಗಬೇಕಾಗಿದೆ ನಾವು ಬಳಸಿಕೊಂಡಿರುವುದರ

ಬಗ್ಗೆ ಬಳಕೆ ಪತ್ರವನ್ನು ದೃಢೀಕರಣ ಪತ್ರವನ್ನು (ಯುಟಿಲೈಸೇಷನ್ ಸರ್ಟಿಫಿಕೇಟ್) ನಾವು ಬೇಗನೆ ಕಳುಹಿಸಿಕೊಟ್ಟರೆ ಹೆಚ್ಚಿನ ಕಂತು ಹಣ ಬಿಡುಗಡೆ ಆಗತಕ್ಕಂಥಾದ್ದು ಇದೆ" ಆ ಕಾರಣಕ್ಕಾಗಿ ನೀವು ಮಾಡಬೇಕೆಂದು ಹೇಳಿ ಚರ್ಚೆಯಲ್ಲಿ ಭಾಗಬಹಿಸಿರತಕ್ಕಂಥ ಅನೇಕ ಮಾನ್ಯ ಸದಸ್ಯರು ಕೂಡ ಈ ವಿಚಾರದಲ್ಲಿ ಪ್ರಸ್ತಾಪವನ್ನು ಮಾಡಿದ್ದಾರೆ ಮತ್ತು ಎಷ್ಟರಮಟ್ಟಿಗೆ ಜೆಸಿಬಿ ಯನ್ನು ಬಳಸಿಕೊಳುವಂತಹ ಅಗತ್ಯ ಇದೆ ಎಂದು ಹೇಳಿ ಇಲ್ಲಿ ಶಾಸಕರೆಲ್ಲರೂ ಪ್ರಶ್ನೆಯನ್ನು ಮಾಡಿದ್ದಾರೆ ಮತ್ತು ಹೇಳಿದ್ದಾರೆ ಹಾಗೂ ಯಾವ್ಯಾವ ಸಂದರ್ಭದಲ್ಲಿ ಜೆಸಿಬಿಯನ್ನು ಉಪಯೋಗಿಸಿ ಕೊಳ್ಳಬೇಕು ಎನ್ನುವ ವಿಚಾರದಲ್ಲಿ ಕೂಡ ಮಾನ್ಯ ಶಾಸಕರು ಸಲಹೆ ಕೊಟ್ಟಿರತಕ್ಕಂಥಾದ್ದು ಇದೆ ಎಂದರೆ ಗಟ್ಟಿಯಾಗಿರತಕ್ಕಂಥ ಪ್ರದೇಶ ಇದ್ದಾಗ, ಕೂಲಿಕಾರರು ಬಾರದೆ ಇದ್ದಂತಹ ಪ್ರದೇಶ ಇದ್ದಾಗ ಕೂಲಿಕಾರರಿಂದ ನಿರ್ವಹಣೆ ಮಾಡುವುದಕ್ಕೆ ಸಾಧ್ಯವಿಲ್ಲದಂತಹ ಯೋಜನೆಯನ್ನು ಅಸೆಟ್ಸ್ ಕ್ರಿಯೇಷನ್ ಕಾರಣಕ್ಕಾಗಿ ತೆಗೆದುಕೊಂಡಂತಹ ಸಂದರ್ಭ ಇದ್ದಾಗ ನಾವು ಜೆಸಿಬಿಯನ್ನು ಉಪೋಗಿಸಬೇಕು ಎಂದು ಆಗಿದೆ ಆ ಕಾರಣಕ್ಕೆ ಅವತ್ತಿನ ಸರ್ಕಾರ ಎಲ್ಲಾ ಕ್ಷೇತ್ರದಲ್ಲಿ ಇರತಕ್ಕಂಥ ಶಾಸಕರ ಅಧ್ಯಕ್ಷತೆಯಲ್ಲಿ ಬರ ನಿರ್ವಹಣೆ ಕಾರ್ಯದ ಅಧ್ಯಕ್ಷತೆಯನ್ನು ಅವರಿಗೆ ಕೊಟ್ಟು ಯಾವ್ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು ಎನ್ನುವುದನ್ನು ಅವರ ಶಿಫಾರಸ್ಸಿನ ಮೇಲೆ ತೆಗೆದುಕೊಳ್ಳಬೇಕು ಅದಾದನಂತರ ಅದರ ಉಸ್ತುವಾರಿಯನ್ನು ಕೂಡ ಅವರು ನೋಡಿಕೊಳ್ಳಬೇಕು ಎನ್ನುವುದಿದೆ ಇವತ್ತು ನಿಮಗೆ ಗೊತ್ತಿದ್ದ ಹಾಗೆ 101 ಜನ ಹೊಸ ಸದಸ್ಯರು ಬಂದಿದ್ದಾರೆ ಅವರು ಈ ಜವಾಬ್ದಾರಿಯನ್ನು ಹೊತ್ತಂಥವರೇನಲ್ಲ ಉಳಿದಂತಹ 121 ಮಂದಿ ಯಾರ್ಯಾರು ಸದಸ್ಯರಿದ್ದಾರೆ ಅವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಈ ಬರ ಕಾಮಗಾರಿಗಳ ನಿರ್ವಹಣೆ ಸಂದರ್ಭದಲ್ಲಿ ಆ ಜವಾಬ್ದಾರಿಯನ್ನು ಹೊತ್ತುಕೊಂಡು ಕೆಲಸವನ್ನು ನಿರ್ವಹಿಸಿದ್ದಾರೆ ಅವರು ಕೆಲಸವನ್ನು ನಿರ್ವಹಿಸಿದ್ದಾರೆ ಎಂದರೆ ಕಾನೂನು ಬದ್ಧವಾಗಿ ಇಲ್ಲದೆ ಇದ್ದರೂ ಕೂಡ ನೈತಿಕವಾಗಿ ಅದನ್ನು ಅವರು ನೋಡಿದ್ದಾರೆ ಆ ಸಂದರ್ಭದಲ್ಲಿ ಅವರು ಎಕ್ಸಿಕ್ಯೂಟೀವ್ ಏನಲ್ಲ ಕಾರ್ಯಾಂಗ ಅವರಿಗೆ ಸಂಬಂಧಪಡತಕ್ಕಂಥಾದ್ದು ಅಲ್ಲ ಅದುದರಿಂದ ಅವರು ಹೇಳಿದ್ದಾರೆ ನೋಡಿದ್ದಾರೆ ಎನ್ನುವ ಒಂದೇ ಕಾರಣಕ್ಕೆ ಅವರು ಜವಾಬ್ದಾರರು ಎಂದು ತಾತ್ವಿಕವಾಗಿ ನಾನು ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ ಆದರೆ ಮುಖ್ಯವಾಗಿ ಇರಬೇಕಾಗಿರುವುದು ಕಾರ್ಯಾಂಗದಲ್ಲಿ ಇರಬೇಕಾದ ನಾವುಗಳು ಎಂದರೆ ಸರ್ಕಾರದಲ್ಲಿ ಇರತಕ್ಕಂಥವರು, ಶಾಸಕರು ಮಾಡಿರತಕ್ಕಂಥ ಶಿಫಾರಸ್ಸು, ಅವರು ಮಾತನಾಡಿರುವ, ಮಾತುಗಳು ಹಾಗೂ ಅವರ ಸಲಹೆಗಳು ಹಿನ್ನೆಲೆಯಲ್ಲಿ ನಾವು ಕೆಲಸವನ್ನು ನಿರ್ವಹಿಸಲೇಬೇಕಾಗುತ್ತದೆ ಈ ಕೆಲಸ ನಿರ್ವಹಿಸುವುದರಲ್ಲಿ ಈ ಸರ್ಕಾರ ಯಾವರೀತಿಯಾಗಿ ಕೆಲಸ ಮಾಡಿದೆ ಎಂದು ಸರ್ಕಾರದಿಂದ ಜನಸಾಮನ್ಯರು ಬಯಸುವುದು ಏನು? ಇವತ್ತಿನ ದಿವಸ ಜನಪ್ರತಿನಿಧಿಗಳು ಏನಿದ್ದಾರೆ, ಅವರು ಭ್ರಷ್ಟಾಚಾರ ಆಗದಹಾಗೆ ಇದನ್ನು ನೋಡಿಕೊಳ್ಳಬೇಕಾದಂತಹ ಗುರುತರವಾದ ಜವಾಬ್ದಾರಿ ಇದೆ. ಎರಡನೆಯದಾಗಿ ಇಂತಹ ಪ್ರಕರಣಗಳು ಬೆಳಕಿಗೆ ಬಂದಾಗ ಅದು ಯಾವರೀತಿ ತತ್‌ಕ್ಷಣದಲ್ಲಿ ಪ್ರತಿಕ್ರಿಯಿಸಿದೆ ಮತ್ತು ಅದರ ಮೂಲಕ ಎಂತಹ ರೀತಿಯ ವಿಚಾರಣೆಯನ್ನು ಏರ್ಪಾಡು ಮಾಡಿದೆ? ಅದರಲ್ಲಿ ದುರುದ್ದೇಶ ಇದೆಯೆ ಅಥವಾ ಅನ್ಯ ಕಾರಣಗಳಿಂದ ಯಾರನ್ನು ಸಂರಕ್ಷಿಸಬೇಕೆನ್ನುವ ಮಾತು ಇದೆಯೋ ಅಥವಾ ಅನ್ಯ ಕಾರಣಗಳಿಂದ ಯಾರನ್ನು ಸಂರಕ್ಷಿಸಬೇಕೆನ್ನುವ ಮಾತು ಇದೆಯೋ ಅಥವಾ ಇದರಲ್ಲಿ ಬೇರೆ ಯಾರಾದರೂ ಕೂಡ ಹಿರಿಯರು ಆಗಿರತಕ್ಕಂಥವರು ಅಧಿಕಾರದಲ್ಲಿ ಇರತಕ್ಕಂಥವರು ಶಾಮೀಲಾಗಿದ್ದಾರೆಯೇ? ಈ ಎಲ್ಲಾ ಮೂರ್ನಾಲ್ಕು ಪ್ರಶ್ನೆಗಳಿಗೆ ಉತ್ತರವನ್ನು ನೀವು ನಮ್ಮಿಂದ ಕಂಡುಕೊಳ್ಳತಕ್ಕಂಥಾದ್ದು ಮತ್ತು ನಮಗೆ ನಾವೇ

ಹಾಕಿಕೊಳ್ಳಬೇಕಾದಂತಹ ಪ್ರಶ್ನೆ ಆಗಿರುವುದರಿಂದ ಇಲ್ಲಿ ತಾವು ಯಾಚನೆಯನ್ನು ಮಾಡಬೇಕಾಗಿರತಕ್ಕಂಥದ್ದು, ದಿ 21 5 2004 ರಂದು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಈ ಭ್ರಷ್ಟಾಚಾರದ ಜಾಲದ ವ್ಯಾಪಕತೆ ಬಗ್ಗೆ ಸರ್ಕಾರಕ್ಕೆ ಪತ್ರವನ್ನು ಬರೆಯುತ್ತಾರೆ ಅವರಿಗೆ ದಿ 21 5 2004 ರಂದು ಗೊತ್ತಾಗುತ್ತದೆ ಇದು ಯಾರೊ ಒಬ್ಬ ಜನ ಪ್ರತಿನಿಧಿಗಳು ಕೊಟ್ಟಿರತಕ್ಕಂಥಾದ್ದು ಅಲ್ಲ ಈ ಸರ್ಕಾರದಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆನ್ನುವುದಕ್ಕೆ ಅಲ್ಲಿ ಇದ್ದಂತಹ ಜಿಲ್ಲಾಧಿಕಾರಿ ಮತ್ತು ಅಲ್ಲಿರತಕ್ಕಂಥ ಅಧಿಕಾರಿಗಳು ಉದಾಹರಣೆ ಅದು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಅಧಿಕಾರಿಗಳಿರಬಹುದು ಅಥವಾ ಬೇರೆ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಇರುವಂತಹ ಅಧಿಕಾರಿ ಇರಬಹುದು, ಅವರು ಎಲ್ಲರೂ ಕೂಡಿ ಇದರ ವರದಿಯನ್ನು ಕೊಟ್ಟ ತಕ್ಷಣವೇ, ಇದರ ವ್ಯಾಪಕತೆ ಬಹಳ ಇದೆ, ಇದರ ಮೂಲವನ್ನು ಹುಡುಕಬೇಕಾಗಿದೆ, ಇದು ಕೇವಲ ಮಂಗಳೂರು ಬಂದರಿನಲ್ಲಿ ನಾಲ್ಕಾರು ಗೋದಾಮಿನಲ್ಲಿ ಸಿಕ್ಕಿರತಕ್ಕಂಥ ಮಾತಿಗೆ ಸೀಮಿತವಾಗಿರತಕ್ಕಂಥ ವಿಷಯವಲ್ಲ ಇದು ಬೇರೆ ಬೇರೆ ಜಿಲ್ಲೆಗಳಲ್ಲಿ ಆಗಿರತಕ್ಕಂಥ ಭ್ರಷ್ಟಾಚಾರದ ಮೂಲಕ, ಅದು ನಮ್ಮ ನ್ಯಾಯಬೆಲೆ ಅಂಗಡಿ ಮೂಲಕ ವಿತರಿಸುವಂತಹ ಆಹಾರಧಾನ್ಯವಾಗಿರಬಹುದು ಕೂಲಿಗಾಗಿ ಕಾಳು ಕೊಟ್ಟಿರತಕ್ಕಂಥ ಬರ ನಿರ್ವಹಣೆ ಕಾರ್ಯಕ್ರಮಗಳಾಗಿರಬಹುದು ಲೋಕಸಭಾ ಸದಸ್ಯರು ತಮ್ಮ ಅನುದಾನದಲ್ಲಿ ಕೈಗೊಂಡಿರತಕ್ಕಂಥ ಕಾಮಗಾರಿಗಳಾಗಿರಬಹುದು ಅಥವಾ ಬೇರೆ ಬೇರೆ ರೀತಿಯಲ್ಲಿ ತೆಗೆದುಕೊಂಡಿರತಕ್ಕಂಥ ಕಾಮಗಾರಿಗಳ ವಿಚಾರವನ್ನು ತೆಗೆದುಕೊಳ್ಳಬೇಕಾದ ಆ ಒಂದು ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಅದಕ್ಕೆ ಒಬ್ಬ ಪೊಲೀಸ್ ಅಧಿಕಾರಿಯನ್ನು ನೇಮಿಸಿದರೆ ಅದನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿ ಈ ಸರ್ಕಾರ ದಿ 25 5 2004 ರಂದು ಇಡೀ ಜವಾಬ್ದಾರಿಯನ್ನು ಇದರ ವಿಚಾರಣೆ ಮಾಡತಕ್ಕಂಥ, ತೀರ್ಮಾನ ಮಾಡತಕ್ಕಂಥ, ಸಂಬಂಧಪಟ್ಟವರನ್ನು ದಸ್ತಗಿರಿ ಮಾಡವಂತಾದ್ದರ ಬಗ್ಗೆ ಸಿಓಡಿಗೆ ಅಧಿಕಾರವನ್ನು ಹಸ್ತಾಂತರ ಮಾಡಿರುವುದನ್ನು ಕಂಡಾಗ ನೀವು ಕನಿಷ್ಟ ಒಂದು ಒಳ್ಳೆಯ ಮಾತನ್ನಾದರೂ ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರಿಗೆ ಕೊಡುತ್ತೀರಿ ಎಂದು ನಂಬಿದ್ದೆ, ಆದರೆ ಏಕೋ ಇದರಲ್ಲಿ ಕೂಡ ಜಿಪುಣತೆಯನ್ನು ತಾವು ತೋರಿಸಿದ್ದೀರಿ

(ಮಾನ್ಯ ಅರಗ ಜ್ಞಾನೇಂದ್ರ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

Atleast you should have given him a ham handed compliment

ಏಕೆಂದರೆ ಹೊಸದಾಗಿ ಸರ್ಕಾರ ಜವಾಬ್ದಾರಿಗಳನ್ನು ತೆಗೆದುಕೊಂಡಾಗ, ಸಮಿಶ್ರ ಸರ್ಕಾರದ ಕಷ್ಟಗಳು ಎಷ್ಟು ಇವೆಯೆಂಬುದು ಗೊತ್ತಿರುವಾಗ, ಇದರ ನಡುವೆಯೂ 25ನೇ ತಾರೀಖಿನಂದು, ಇಡೀ ವ್ಯವಹಾರದ ಮೂಲ ಬೇರನ್ನೇ ಕಿತ್ತೊಗೆಯ ಬೇಕೆನ್ನುವುದಕ್ಕಿಂತಲೂ, ಹೆಚ್ಚಾಗಿ ಅದನ್ನು ತಿಳಿದಿಕೊಳ್ಳಬೇಕು, ನಾವು ಅದನ್ನು ಸಿ ಓ ಡಿಯವರಿಗೆ ವಹಿಸಿಕೊಡ್ಡಿರುವುದನ್ನು ನೋಡಿದ್ದೀರಿ ಈ ಪ್ರಕರಣದಲ್ಲಿ ಕೆ ಬಿ ಎಸ್ ಕಾಮತ್ ಅಂಡ್ ಸನ್ಸ್, ಶಕ್ತಿನಗರ, ಸೋಮಿಯಾಜಿ ಬಿಲ್ಡಿಂಗ್, ಬೈಕಂಪಾಡಿ, ಎಂ ಎಸ್ ಡಿ ಗೋಡೌನ್, ಪೆಣಂಬೂರು, ಬೀಚ್ ರೂಟ್, ಇವರೆಲ್ಲರ ಗೋಡೌನ್‌ನಲ್ಲಿ ಸಿಕ್ಕಿರುವಂತಹ, ದಾಸ್ತಾನಿನ ವಿವರಗಳು ಇದೆ ಅದು ತಮಗೆಲ್ಲರಿಗೂ ಗೊತ್ತಿರುವಂತಹ ಅಂಕಿಸಂಖ್ಯೆಗಳು, ಅದನ್ನು ನಾನು ಮತ್ತೆ ಪುನರು ಉಚ್ಚಾರಣೆ ಮಾಡುವಂತಹ ಅಗತ್ಯವೂ ಇಲ್ಲ ಇದಾದನಂತರ ಸಿ ಓ ಡಿಗೆ ಕೊಟ್ಟಿರುವಂಥಾದ್ದರ ಮೇಲೆ, ಶಿವಮೊಗ್ಗ, ಚನ್ನಪಟ್ಟಣ, ಮಾಗಡಿ, ಅನೇಕಲ್ಲು, ತುಮಕೂರು, ಮಂಡ್ಯ, ಬಂಗಾರಪೇಟೆ, ಸೈದಾಪುರ್, ರಾಣೆಬೆನ್ನೂರು ಮುಂತಾದ

ಸ್ಥಳಗಳಿಗೆ, ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಆಕ್ರಮ ಅಕ್ಕಿ ದಾಸ್ತಾನು ಮಾಡಿರತಕ್ಕಂಥ ಮತ್ತೆ ಈ ಅವ್ಯವಹಾರಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಅವರು ತತ್‌ಕ್ಷಣದಲ್ಲಿ ಪ ್ತಪಡಿಸಿಕೊಂಡಿದ್ದಾರೆ, ಇದರ ವ್ಯಾಪ್ತಿ ಪ್ರಾಯಶಃ ಕರೀಂ ಲಾಲ್‌ನ ಛಾಪ ಕಾಗದದಷ್ಟೇ, ಭಾರತದ ಉದ್ದಗಲಕ್ಕೂ ಹರಡದೇ ಹೋದರೂ, ಕರ್ನಾಟಕ ಬೇರೆ ಬೇರೆ ಜಿಲ್ಲೆಗಳಲ್ಲೂ ಈ ಭ್ರಷ್ಟಚಾರ ಆಗಿರಬಹುದು, ಇವುಗಳನ್ನು ನಾವು ಸಂಭವನೀಯ ಘಟನೆಗಳೆಂದು ಭಾವಿಸದೇ ಇದ್ದರೂ ಕೂಡ, ಇದು ಆಗಿರುವಂತಹ ಸಾಧ್ಯತೆಗಳು ಇವೆ, ಆದರೆ ಇಲ್ಲಿ ಸಿಓಡಿ ತನಿಖೆಯಿಂದ ಹೊರಗೆ ಬಂದಿರುವಂಥಾದ್ದು, 17,000 ಮೆಟ್ರಿಕ್ ಟನ್‌ನಷ್ಟು ಅಕ್ಕಿಯನ್ನು ರಫ್ತು ಮಾಡುವುದಕ್ಕೆ ತಯಾರು ಮಾಡಿರವಂಥಾದ್ದು, ಏನಿದೆ, ಅದನ್ನು ತತ್ ತಕ್ಷಣದಲ್ಲಿ ಶಾರ್ಪ್ ಮೆಂಥಾಲನ್ ಎಂಬ ಸಂಸ್ಥೆ, ಅದು ದೆಹಲಿಗೆ ಸಂಬಂಧಪಟ್ಟಂತೆ ಇರುವ ಸಂಸ್ಥೆಯೆಗಿದ್ದು, ಆ ಸಂಸ್ಥೆ ಈ ರೀತಿಯಲ್ಲಿ ಅಕ್ಕಿಯನ್ನು ಸಂಗ್ರಹ ಮಾಡಿ, ಅವರ ಬೇರೆ ಬೇರೆ ಏಜೆಂಟರ ಮೂಲಕ ಸಂಗ್ರಹ ಮಾಡಿ, ಅದನ್ನು ಆಫ್ರಿಕಾ ಹಾಗೂ ಇನ್ನಿತರ ದೇಶಗಳಿಗೆ ಕಳುಹಿಸಿಕೊಡುವಂತಹ ವ್ಯವಸ್ಥೆಯಾಗಿದೆ ಇದರಲ್ಲಿ ಕೂಡ ಹೇಗೆ ಅನ್ಯಾಯವಾಗುತ್ತದೆಂದರೆ globalisation ಅನ್ನುವಂತಹ ಮಾತನ್ನು, ನಾನು ವ್ಯಂಗ್ಯ ರೂಪದಲ್ಲಿ ಮತ್ತೊಂದು ರೂಪದಲ್ಲಿ ಹೇಳುತ್ತಿಲ್ಲ, ಈ ಜಾಗತೀಕರಣದ ನೆಪ ಹೇಗೆ ಇರುತ್ತದೆಂದರೆ ಒಂದು ಕಡೆಗೆ ಬಡವರಿಗಾಗಿ ವಿತರಿಸಲೇಬೇಕಾದಂತಹ ಅಕ್ಕಿ, ಮತ್ತೆ ಬರಗಾಲದ ಕಾಮಗಾರಿಗಳಿಗಾಗಿ ಕೊಟ್ಟಿರುವಂತಹ ಅಕ್ಕಿ, ಇಲ್ಲಿ ಬಡವರಿಗೆ ತಲುಪದೇ ಇರುವಂತಹ ಅಕ್ಕಿ ಒಂದು ಕಡೆಯಾದರೆ, ಮತ್ತೊಂದು ಕಡೆಗೆ ಈ ಅಕ್ಕಿಯನ್ನು ಯೂರೋಪ್ ಮೊದಲಾದ ದೇಶಗಳಿಗೆ, ಭಾರತೀಯ ಸಂಜಾತರು ಇರುವಂತಹ ಪ್ರದೇಶಗಳು ಅಂದರೆ ಅದು ಮಧ್ಯ ಪ್ರಾಚ್ಯವಾಗಿರಬಹುದು, ಈಶಾನ್ಯ ರಾಜ್ಯಗಳಾಗಿರಬಹುದು, ಮಾಡಿಷಸ್ ಮೊದಲಾದ ದ್ವೀಪಗಳು, ಭಾರತೀಯ ಸಂಜಾತರು ವ್ಯಾಪಕವಾಗಿರುವಂತಹ ಪ್ರದೇಶಗಳಲ್ಲಿ ಭಾರತೀಯವರು ಅಕ್ಕಿಯನ್ನು ಬಳಸುತ್ತಾರೆ, ಅಲ್ಲಿಗೆ ಅದನ್ನು ಕಳುಹಿಸುವುದಿಲ್ಲ ಇದನ್ನು ದಕ್ಷಿಣ ಆಫ್ರಿಕಾದಲ್ಲಿ ಬರಗಾಲ ಪೀಡಿತವಾಗಿರುವಂತಹ, ಮತ್ತು ನಮಗಿಂತಲೂ ಕಡುಬಡವರು, ಮತ್ತು ಹಸಿವಿನಿಂದ ನರಳುತ್ತಿರುವಂತಹ, ಆ ದೇಶಗಳಿಗೆ ಇದನ್ನು ಕಳುಹಿಸುವಂತಹ ವ್ಯವಸ್ಥೆ ಒಂದು ಕಡೆಯಾಗಿದೆ, ಅಲ್ಲಿಯ ಬಡವನ ಶೋಷಣೆ, ಬಡತನದ ರಾಷ್ಟದ ಶೋಷಣೆ, ಇಲ್ಲಿ ನಮ್ಮ ಬಡವರ ಶೋಷಣೆ, ಮತ್ತೆ ಅದರಿಂದಾಗುವ ದುಷ್ಪರಿಣಾಮ, ಇವೆಲ್ಲವನ್ನೂ ನೋಡಿದರೆ, ಈಗಾಗಲೇ ದಕ್ಷಿಣ ಆಫ್ರಿಕಾಕ್ಕೆ, ಈಗಾಗಲೇ 16 ಕೋಟಿ ರೂಪಾಯಿಗಳ ಅಕ್ಕಿಯ ದಾಸ್ತಾನನ್ನು ಒಂದು ಹಡಗು ತೆಗೆದುಕೊಂಡು ಹೋಗಿದೆ ಎನ್ನುವ ವಿಚಾರವಾಗಿ ನಮ್ಮ ಸಿಓಡಿ ಯವರು ಕೆಲಸವನ್ನು ಮಾಡುತ್ತಿದ್ದಾರೆ, ಈಗ ಎರಡನೆಯದಾಗಿ ಸಿಗುವಂಥಾದ್ದನ್ನು ಕಳುಹಿಸುವುದು ನಿಲ್ಲಿಸಿದ್ದಾರೆ, ಈಗಾಗಲೇ ವಶಪಡಿಸಿಕೊಂಡಿರುವಂತಹ 17,000 ಮೆಟ್ರಿಕ್ ಟನ್ ಅಕ್ಕಿಯ ಬೆಲೆ, 13 ಕೋಟಿ ರೂಪಾಯಿಗಳಷ್ಟಾಗಿದೆ ನಾನಾ ಭಾಗಗಳಲ್ಲಿ 39 ಅಕ್ಕಿ ದಾಸ್ತಾನು ಮಳಿಗೆಗಳ ಮೇಲೆ, ಮತ್ತೆ ನಾಲ್ಕು ಗೋಡೌನ್‌ಗಳ ಮೇಲೆ, ಈಗಾಗಲೇ ಸಿಓಡಿಯವರು ದಾಳಿಯನ್ನು ಮಾಡಿ, ತಪ್ಪಿತಸ್ಥರು ಯಾರೆಂದು ಗುರುತಿಸಿ, ಅವರನ್ನು ದಸ್ತಗಿರಿ ಮಾಡಿ, ನ್ಯಾಯಾಲಯದ ವಶಕ್ಕೆ ಒಪ್ಪಿಸಿದ ನಂತರ, ಅವರಲ್ಲಿ ಅನೇಕರು ಜ್ಯೂಡಿಶಿಯಲ್ ಕಸ್ಟಡಿಯಲ್ಲಿದ್ದಾರೆ, ಕೆಲವರು ಇದರಲ್ಲಿ ನಿರೀಕ್ಷಣಾ ಜಾಮೀನನ್ನು ತೆಗೆದುಕೊಂಡು ಹೊರಗೆ ಬರಬೇಕೆಂಬ ಪ್ರಯತ್ನವನ್ನು ಮಾಡುತ್ತಿರುವವರು ಇದ್ದಾರೆ ಇಲ್ಲಿ ನಾನು ಈ ಸಂದರ್ಭದಲ್ಲಿ ಯಾವುದನ್ನೂ ಮುಚ್ಚಿಡುವಂತಹ ಪ್ರಮೇಯವೂ ಇಲ್ಲ, ಇದಕ್ಕೆ ಸಂಬಂಧಪಟ್ಟಂತೆ ದಿ 13 6 2004 ರಂದು ಅ ಹಗರಣಕ್ಕೆ ಸಂಬಂಧಪಟ್ಟಂತೆ ಕೆಎಸ್‌ಎಫ್‌ಸಿಸಿಯ ಅಧಿಕಾರಿಗಳು ಯಾರ್ಯಾರಿದ್ದಾರೆ ಅದು ಶ್ರೀ

ರಾಮೇಗೌಡ ಬಿನ್ ಜವರೇಗೌಡ, ಕೆ ಆರ್ ಪ್ರಕಾಶ್ ಬಿನ್ ರಾಮೇಗೌಡ, ಶ್ರೀ ಕೆ ಎಸ್ ಜಗದೀಶ್ ಬಿನ್ ಹೆಚ್ ಶಿವಪ್ಪ, ಹೀಗೆ ಅನೇಕರು ಹಾಸನದವರು ಇದ್ದಾರೆ ಸಕಲೇಶಪುರದವರು ಇದ್ದಾರೆ, ನಮ್ಮ ಹೊಸದುರ್ಗದವರು ಇದ್ದಾರೆ ಈ ರೀತಿಯಾಗಿ 9 ಜನರು ಅನೇಕ ಕಡೆಯಲ್ಲಿರುವವರು, ತನಿಖೆಯ ಸಂದರ್ಭದಲ್ಲಿ, ದಾಖಾಲೆಗಳ ಆಧಾರದ ಮೇಲೆ ಇವರೆಲ್ಲರೂ ತಪ್ಪಿತಸ್ಥರು ಎನ್ನುವಂತಹದ್ದು, ಮಾಹಿತಿಗಳ ಆಧಾರದ ಮೇಲೆ ಸಿ ಓ ಡಿ ಪೊಲೀಸ್ ಅಧಿಕಾರಿಗಳು, ಇದರ ಮೇಲೆ ಕ್ರಮವನ್ನು ಕೈಗೊಂಡು ಅವರನ್ನು ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ, ಈ ಒಂದು ಸಂದರ್ಭದಲ್ಲಿ ಈಗಾಗಲೇ, ವಿವಿಧ ಹಂತಗಳಲ್ಲಿ ತನಿಖೆ ನಡೆದಿದೆ ಒಂದು ಸಂತೋಷದ ಸಂಗತಿಯೆಂದರೆ, ಇವತ್ತು ಈ ವಿಚಾರವನ್ನು ಪ್ರಸ್ತಾಪ ಮಾಡಿದಂತಹ ನಮ್ಮ ಎಲ್ಲಾ ಹಿರಿಯ ಮಾನ್ಯ ಸದಸ್ಯರುಗಳು, ನಮ್ಮ ಸಿ ಓ ಡಿಯವರು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆನ್ನುವಂತಹ ಮಾತನ್ನು ಹೇಳಲಿಲ್ಲ ಅದರ ಬದಲು ಅವರು ಉತ್ತಮವಾದಂತಹ ಅಧಿಕಾರಿಗಳು, ಎನ್ನುವ ಮಾತನ್ನು ಹೇಳಿದ್ದಾರೆ ಎಲ್ಲಾ ಕಡೆಗಳಲ್ಲೂ ದಕ್ಷರು, ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ, ಸಾಧಾರಣವಾಗಿ ನೂರಕ್ಕೆ ತೊಂಭತ್ತರಷ್ಟು ಅಧಿಕಾರಿಗಳು ಕಾನೂನಿಗೆ ಅನುಗುಣವಾಗಿ, ಪಾಪಬೀರುಗಳಾಗಿ ಸಮಾಜ ಏನು ಅಂದೀತು ಎಂಬ ಕಾರಣಕ್ಕಾಗಿ ಇರುತ್ತದೆ ಇನ್ನು ಶೇಕಡಾ ಹತ್ತೆರಷ್ಟು ಮಂದಿ ಅದರಲ್ಲಿ ನಮ್ಮ ರಾಜಕಾರಣಿಗಳು ಆಗಿರಬಹುದು, ಅಥವಾ ವಿವಿಧ ವೃತ್ತಿಗಳಲ್ಲಿ ನಿರತರಾಗಿರುವವರು ಆಗಿರಬಹುದು, ಅವವರು ಲಜ್ಜೆಗೇಡಿಗಳಾಗಿರುತ್ತಾರೆ, ಅವರ ಉದ್ದೇಶವೇ ಬೇರೆ ಇರುತ್ತದೆ, ಅವರು ಯಾವುದಕ್ಕೂ ಕೂಡ ಯೋಚನೆ ಮಾಡದೇ ವ್ಯವಹಾರಗಳ ಭಾಗಿಯಾಗುವಂಥಾದ್ದನ್ನು ನಾವು ಕಾಣುತ್ತೇವೆ, ಇಲ್ಲಿ ಕೂಡ ಅನೇಕ ಅಧಿಕಾರಿಗಳನ್ನು ದಾರಿ ತಪ್ಪಿಸುವಂಥಾದ್ದು ನಮ್ಮ ವ್ಯವಸ್ಥೆ, ಈ ವ್ಯವಸ್ಥೆಯ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದರು, ಈ ವ್ಯವಸ್ಥೆಯ ಬಗ್ಗೆ ನಾನು ಸೂಕ್ಷ್ಮವಾಗಿ ಪ್ರಸ್ತಾಪಮಾಡಿದೆ, ಅವತ್ತು ಈ ಸದನದಲ್ಲಿ ಈ ವಿಚಾರದಲ್ಲಿ ಅನುಕೂಲಕರವಾದಂತಹ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕಿಂತಲೂ ಹೆಚ್ಚಾಗಿ ಹಿಂದೆ ಇದ್ದಂತಹ ಸದಸ್ಯರುಗಳು, ಇವತ್ತಿನ ಸದಸ್ಯರುಗಳು, ನಮ್ಮ ಮುಂದೆ ಇರುವಂತಹ ಆಯ್ಕೆಯನ್ನು ನಾವು ಯೋಚನೆ ಮಾಡಲೇ ಬೇಕಾಗುತ್ತದೆ, ಈ ಕಾರಣಕ್ಕಾಗಿ ನಾವು ಎಲ್ಲಾ ವಿವರಗಳನ್ನು ಈ ಸಂದರ್ಭದಲ್ಲಿ ಕೊಟ್ಟಿದ್ದೇವೆ, ತನಿಖೆಯ ವಿಚಾರದಲ್ಲಿ ಯಾರನ್ನೂ ರಕ್ಷಿಸುವ ಪ್ರಯತ್ನ ಇಲ್ಲಿ ಆಗಿಲ್ಲ ತನಿಖೆ ವಿಚಾರದಲ್ಲಿ ನಮ್ಮ ಅಧಿಕಾರಿಗಳು, ಅದರಲ್ಲೂ ನಮ್ಮ ಪೊಲೀಸ್ ಅಧಿಕಾರಿಗಳು, ಅದಕ್ಷತೆಯನ್ನು ತೋರಿಸಿಲ್ಲ ಅಥವಾ ದುರುದ್ದೇಶವನ್ನು ಇಟ್ಟು ಕೊಂಡಿಲ್ಲ, ಸರಿಯಾದಂತಹ ಮಾರ್ಗದಲ್ಲಿ ಈ ತನಿಖೆ ಹೋಗುತ್ತಿರುವಂತಹ ಸಂದರ್ಭದಲ್ಲಿ, ತಾವು ಕೇಳಿರುವಂಥಾದ್ದು ಜಂಟಿ ಸದನದ ಸಮಿತಿಯನ್ನು ಏರ್ಪಾಡು ಮಾಡಿ ಎಂದು, ಅದರ ಮೂಲಕವಾಗಿ ಅನೇಕ ವಿಚಾರಗಳು ಬೆಳಕಿಗೆ ಬರಬಹುದೆಂಬ ಮಾತನ್ನು ಪ್ರಸ್ತಾಪ ಮಾಡಿದ್ದೀರಿ, ಇಲ್ಲಿ ತನಿಖೆ ಮಾಡಬೇಕೆಂದು ಜಂಟಿ ಸದನದ ಸಮಿತಿಯನ್ನು ಕೇಳಿರುವಂಥಾದ್ದರ ಬಗ್ಗೆ, ಯಾವುದೇ ರೀತಿಯಲ್ಲಿ ಸರ್ಕಾರಕ್ಕೆ ಮುಮುಗರವೆನ್ನುವಂಥ ಮಾತಿಲ್ಲ ಇದರ ಜೊತೆಗೆ ಚಾಮುಂಡಿ ಫ್ಲೋರ್ ಮಿಲ್ಸ್ ವಿಚಾರವಾಗಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ ಎಸ್ ಯಡಿಯೂರಪ್ಪನವರು, ಮಾನ್ಯ ಸದಸ್ಯರಾದ ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಹಾಗೂ ಮೇಲ್ಮನೆಯ ಸದಸ್ಯರಾದಂತಹ ಶ್ರೀ ರಾಮಚಂದ್ರಗೌಡರು ಹೋಗಿರುವಂತಹ ಛಾಯಚಿತ್ರಗಳನ್ನು ದಿನಪತ್ರಿಕೆಗಳಲ್ಲಿ ಮುಖಪುಟಗಳಲ್ಲಿ ಬಂದಿರುವಂಥಾದ್ದನ್ನು ನಾವೆಲ್ಲರೂ ನೋಡಿದ್ದೇವೆ ಅವರು ಆಸಕ್ತಿಯನ್ನು ತೆಗೆದುಕೊಂಡು ಸ್ಥಳಕ್ಕೆ ಹೋಗಿರುವಂಥಾದ್ದನ್ನು ನಾವು

ನೋಡಿದ್ದೇವೆ ಆದರೆ ಅವರು ಅಲ್ಲಿಗೆ ಹೋಗುವುದಕ್ಕಿಂತ ಪೂರ್ವದಲ್ಲೇ ಇಂತಹ ವಿಚಾರವಾಗಿದೆ, ಎಂಬುದು ನಮ್ಮ ಗಮನಕ್ಕೆ ಬಂದತಕ್ಷಣ ನಮ್ಮ ಸರ್ಕಾರವೂ ಕಾರ್ಯೋನ್ಮುಖವಾಗಿದೆ ಅವುಗಳನ್ನು ಈಗಾಗಲೇ ವಶಕ್ಕೆ ತೆಗೆದುಕೊಂಡು ಆಗಿದೆ, ಅದಕ್ಕೆ ಬೇಕಾಗಿರುವಂತಹ ಪ್ರತ್ಯೇಕವಾದಂತಹ ತನಿಖೆಯೂ ನಡೆದಿದೆ ಅವರ ಬಗ್ಗೆಯು? ಒಳ್ಳೆಯ ಮಾತುಗಳನ್ನು ಅವರು ಹೇಳಿದ್ದಾರೆ, ಮತ್ತೆ ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡು ರವರು ಒಂದು ಒಳ್ಳೆಯ ಮಾತನ್ನು ಏನು ಹೇಳಿದ್ದಾರೆಂದರೆ ಈಗ ಮಳೆ ಬರುತ್ತಿದ್ದು, ಹವಾಗುಣವೂ ಸರಿಯಾಗಿಲ್ಲದ ಕಾರಣ ಅಕ್ಕಿ ದಾಸ್ತಾನನ್ನು ಏನು ವಶಪಡಿಸಿಕೊಳ್ಳಲಾಗಿದೆ, ಆ ಅಕ್ಕಿಯೆಲ್ಲಾ ಕಳಪೆಯಾಗಿ, ಮುಗ್ಗು ಆಗಿ, ವಾಸನೆಯಾಗುವಂತಹ ಸಂದರ್ಭವಿರುವುದರಿಂದ, ಮಾನವರು ಬಳಸಲು ಆಯೋಗ್ಯವಾಗುಯಗುವಂತೆದ್ದು ಆಗುತ್ತದೆ, ಅದರಿಂದಲೂ ನಷ್ಟವನ್ನು ಅನುಭವಿಸಬೇಕಾಗುತ್ತದೆನ್ನುವ ಮಾತನ್ನು ಹೇಳಿದ್ದಾರೆ ಇಲ್ಲಿ ಹಸಿದ ಒಡಲುಗಳು, ಬೇಕಾದಷ್ಟು ಇವೆ, ಈ ಹಸಿವಿಗೆ ಉತ್ತರವನ್ನು ಕೊಡುವಂಥಾದ್ದು ಬಹಳ ಕಷ್ಟ ಬಸವಣ್ಣನವರ ಪೂರ್ವದಲ್ಲಿ ಇದ್ದಂತಹ ಶಿವಶರಣರಾದ ಜೇಡರ ದಾಸಿಮಯ್ಯನವರು ಈ ವಿಚಾರವಾಗಿ ಮಾತನಾಡುವಂತಹ ಸಂದರ್ಭದಲ್ಲಿ "ಹಸಿದವ ಹುಸಿವ" ಒಡಲುಗೊಂಡವ ಹಸಿವ, ಒಡಲು ಗೊಂಡವ ಹುಸಿವ ಏನ್ನುವಂತಹ ಮಾತನ್ನು ಹೇಳುತ್ತಾರೆ ಅಂದರೆ ಇಲ್ಲಿ ಹಸಿದಂತಹ ಮನುಷ್ಯ ಸಹಜವಾಗಿ ಸುಳ್ಳನ್ನು ಹೇಳುತ್ತಾನೆನ್ನುವ ಮಾತನ್ನು ಹೇಳಿದ್ದಾರೆ ಅದು ಮುಂದೆ ವಚನದಲ್ಲಿ ಬರುತ್ತದೆ, "ನನ್ನಂತೆ, ನೀನು ಒಡಲು, ಧರಿಸಿಕೊಂಡು ಈ ಭೂಮಿಗೆ ಬಂದರೆ, ಈ ಕಷ್ಟ, ಈ ಜಗತ್ತು, ಈ ಸಂಸಾರವನ್ನು ನಡೆಸುವುದು ಎಷ್ಟು ಕಷ್ಟ ದೇವರೆ! ರಾಮನಾಥಾ, ನೀನು ಯೋಚನೆ ಮಾಡು, ನೀನು ಅಲ್ಲಿ ಕುಳಿತುಕೊಂಡು, ಈ ವಿಚಾರವಾಗಿ ನೀತಿಗಳನ್ನು ಹೇಳಬೇಡವೆನ್ನುವ ಮಾತನ್ನು ಹೇಳಿದ್ದಾರೆ ಆ ನೀತಿಯನ್ನು ಹೇಳಬೇಡವೆನ್ನುವ ಮಾತನ್ನು, ಜೇಡರದಾಸಿಮಯ್ಯನವರು ಹೇಳಿದರೆಂದರೆ, ನೀನು ಹಸಿದವನು, ಸುಳ್ಳು ಹೇಳಿಕೊಂಡೇ ಇರು, ಎಂದು ಅಲ್ಲ, ಹಸಿವಿನಿಂದ ಮುಕ್ತರಾಗುವ ಜನ ವರ್ಗವನ್ನು ಸೃಷ್ಟಿ ಮಡುವಂತಹದ್ದು ಒಂದು ನಾಗರೀಕ ಸಮಾಜದ ಮತ್ತು ಸರ್ಕಾರದ ಕರ್ತವ್ಯವಾಗುತ್ತದೆ ಅದುದರಿಂದ ಇಲ್ಲಿ ಬೇರೆ ತರಹದ ಆಸೆಯಿಂದ, ದುರಾಸೆಯೆಂದ , ಮಾಡುವಂತಹ ಕೆಲವು ಮೋಸ, ವಂಚನೆ, ಕಳವು, ಈ ಪ್ರಕರಣಗಳು ಏನಿವೆ ಇವುಗಳು ಅಕ್ಷಮ್ಯ ಅಪರಾಧಗಳಾಗುತ್ತವೆ, ಆದರೆ ಒಬ್ಬ ಗೌರವಾನ್ವಿತ ಬದಕನ್ನು ಬದುಕುವುದಕ್ಕೆ, ಸಮಾಜ ವ್ಯವಸ್ಥೆ ಮಾಡಿಕೊಡದೆ ಇದ್ದಂಥ ಸಂದರ್ಭದಲ್ಲಿ ಆಗುವಂತಹ ಶೋಷಣೆಯನ್ನು ತಪ್ಪಿಸುವಂಥಾದ್ದು ನಾಗರೀಕ ಸರ್ಕಾರದ ಕರ್ತವ್ಯವೂ ಆಗುತ್ತದೆ, ಮತ್ತು ಜನಪ್ರತಿನಿಧಿಗಳ ಕರ್ತವ್ಯವಾಗಿರುತ್ತದೆ ಆದ್ದರಿಂದ ಇಲ್ಲಿ ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಎತ್ತಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಈ ಮುಗ್ಗಲು ಅಕ್ಕಿಯನ್ನು ಯಾವ ರೀತಿಯಾಗಿ ಬಿಡುಗಡೆ ಮಾಡಬೇಕೆಂಬುದರ ಬಗ್ಗೆ ಪರಿಶೀಲಸಿ ಕ್ರಮಕ್ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸಾಧ್ಯತೆ ಇದೆ Essential commodities Act ಅದು ಬಗ್ಗೆಯಾದರೂ ಯೋಚನೆ ಮಾಡಬಹುದು, ಅಥವಾ ನಮಗೆ ಸಂಬಂಧಿಸಿದಂತಹ ನ್ಯಾಯಾಲಯದಿಂದ, ಆ ಲಾರಿಗಳನ್ನು ಬಿಡುಗಡೆ ಮಾಡುವುದಕ್ಕೆ ಅರ್ಜಿಯನ್ನು ಹಾಕಿಕೊಳ್ಳ ಬಹುದು, ಆದರೆ ಆ ಲಾರಿಗಳು ಯಾರ ಮಾಲಿಕತ್ವದಲ್ಲಿ ಇವೆ, ಅವರು ತಲೆ ತಪ್ಪಿಸಿಕೊಂಡಿದ್ದಾರೆ, ಅವರು ಅರ್ಜಿ ಹಾಕದೇ ಇರುವಂಥಾದ್ದಕ್ಕೆ ನಮ್ಮದ್ದು ಏನೂ ಅಕ್ಷೇಪಣೆ ಇಲ್ಲ, ಆ ಲಾರಿಗಳು ಅಲ್ಲೇ ಇರಲಿ, ಆದರೆ ಆ ಅಕ್ಕಿಯನ್ನು ವಿತರಣೆ ಮಾಡುವ ಬಗ್ಗೆ ಮಾತ್ರ ಇಲ್ಲಿಯವರೆಗೂ ನಮ್ಮ ನ್ಯಾಯಾಲಯಗಳು ಒಂದು ಸತ್‌ಸಂಪ್ರದಾಯವನ್ನು ಪಾಲಿಸಿಕೊಂಡು ಬರುತ್ತಿವೆ,

350 ಪಿಎಂ

ಆ ಸತ್ಸಂಪ್ರದಾಯವೆಂದರೆ, ಆ ಮೌಲ್ಯಕ್ಕೆ ಅನುಗುಣವಾಗಿರತಕ್ಕಂಥ ಬ್ಯಾಂಕ್ ಗ್ಯಾರಂಟಿಯನ್ನು ಪಡೆದುಕೊಂಡು, ಮಾಲನ್ನು ಕೇಳಿರತಕ್ಕಂಥಾವರಿಗೆ ವಾಪಸ್ಸು ಕೊಡತಕ್ಕಂಥಾದ್ದಾಗಿದೆ ಇಲ್ಲದಿದ್ದರೆ, ಇನ್‌ಡೆಮ್ನಿಟಿ ಬಾಂಡನ್ನು ಬರೆಸಿಕೊಂಡು ಬಿಡುಗಡೆ ಮಾಡಿರುವಂಥ ಉದಾಹರಣೆಗಳೂ ಇವೆ ಆದ್ದರಿಂದ, ತಕ್ಷಣದಲ್ಲಿ ನ್ಯಾಯಾಲಯ ಈ ರೀತಿಯೇ ವರ್ತಿಸಬೇಕು ಎಂದು ಹೇಳುವ ಬದಲು ಈ ಸದನ ಅವರಿಗೆ ಒಂದು ಸಲಹೆಯನ್ನು ಕೊಡುತ್ತದೆ ಏನೆಂದರೆ, ಅದನ್ನು ವಿಲೇವಾರಿ ಮಾಡಿ ನ್ಯಾಯಬೆಲೆ ಅಂಗಡಿಗಳ ಮೂಲಕ, ಆ ಅಕ್ಕಿಯ ದಾಸ್ತಾನು ಯಾರಿಗೆ ಸಲ್ಲಬೇಕಾಗಿತ್ತು, ಯಾವ ಹಸಿರು ಕಾರ್ಡುದಾರರಿಗೆ ಅದು ಸಲ್ಲಬೇಕಾಗಿತ್ತೋ, ಅವರಿಗೆ ವಿತರಣೆ ಮಾಡತಕ್ಕಂಥಾದ್ದು ಬಹಳ ಮುಖ್ಯವಾದ ಕೆಲಸ ಈ ಬಗ್ಗೆ ನಮ್ಮ ಅಧಿಕಾರಿಗಳೂ ಕೂಡ ಮಾತನಾಡುತ್ತಾರೆ ನಿಮ್ಮ ಸಲಹೆಯನ್ನು ನಾವು ಸಂಪೂರ್ಣವಾಗಿ ಒಪ್ಪಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ ಈಗ ನಾವು ಮಾಡಬೇಕಾಗಿರತಕ್ಕಂಥ ಕೆಲಸ ಏನು ಉಳಿದಿದೆ? ನಿಮಗೆ ನಮ್ಮ ಪ್ರಾಮಾಣಿಕತೆ ಬಗ್ಗೆ ಸಂಶಯವೇನಾದರೂ ಇದ್ದರೆ ಹೇಳಬಹುದಾಗಿತ್ತು, ಅಥವಾ ನೀವು ಅಧಕ್ಷರಾಗಿದ್ದೀರಿ, ಅದಕ್ಕಾಗಿಯೇ ಕ್ರಮ ಕೈಗೊಂಡಿಲ್ಲ ಎನ್ನುವುದಾಗಿದ್ದರೆ ಅದನ್ನೂ ಹೇಳಬಹುದಾಗಿತ್ತು 21ನೇ ತಾರೀಖು ಪತ್ರ ಬರುತ್ತದೆ, ಒಂದು ಅನಾಮಧೇಯವಾಗಿರತಕ್ಕಂಥ ಕರೆ ಜಿಲ್ಲಾಧಿಕಾರಿಗಳಿಗೆ ಬರುತ್ತದೆ, ಅಧಿಕಾರಿಗಳಿಗೂ ಬರುತ್ತದೆ ಆ ಅನಾಮಧೇಯ ಕರೆ, ಒಂದು ಹುಸಿಯಾದಂಥ ಕರೆ ಎಂದು ಅದನ್ನು ನಿರ್ಲಕ್ಷಿಸದೇ, ಆ ಕರೆಯ ಆಧಾರದ ಮೇಲೆ ಅಧಿಕಾರಿಗಳು ಅಲ್ಲಿಗೆ ಹೋಗಿ ಕ್ರಮ ಕೈಗೊಳ್ಳುತ್ತಾರೆ, ಅವರು ಆಕ್ರಮ ದಾಸ್ತಾನಿದ್ದಂಥ ಮಾಲನ್ನು ವಶಪಡಿಸಿಕೊಳ್ಳುತ್ತಾರೆ, ಸಂಬಂಧಿಸಿದ ಜನರನ್ನು ದಸ್ತಗಿರಿ ಮಾಡುತ್ತಾರೆ., ಅದಕ್ಕೆ ಪೂರ್ವಾನುಮತಿಗಳು ಮತ್ತು ನಿರ್ದೇಶನಗಳು ಬೇಕು ಎನ್ನುವ ವರದಿಯನ್ನು 21ನೇ ತಾರೀಖು ಕಳುಹಿಸಿ ಕೊಡುತ್ತಾರೆ ಇದರ ವ್ಯಾಪಕತೆ ಬಹಳ ಇರುವುದರಿಂದ ಇದನ್ನು ತನಿಖೆ ಮಾಡಲು ತೊಂದರೆಯಾಗಬಹುದು ಎನ್ನುವ ಕಾರಣಕ್ಕಾಗಿ 25ನೇ ತಾರೀಖಿನ ದಿವಸ ನಮ್ಮ ಸರ್ಕಾರ ಇದನ್ನು ಸಿ ಓ ಡಿ ಗೆ ಕೊಡುವ ನಿರ್ಧಾರವನ್ನು ಮಾಡುತ್ತದೆ ನಾನು ಈಗಾಗಲೇ ಹೇಳಿದಂತೆ, ನಮ್ಮ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಕುಳಿತು ಇದರ ಬಗ್ಗೆ ನಿರ್ಧಾರವನ್ನು ಮಾಡಿ ಈಗಾಗಲೇ ಸಿ ಓ ಡಿಗೆ ಕೊಟ್ಟಿದ್ದಾರೆ ಸಿ ಓ ಡಿ ಯವರು ಯಾವ ರೀತಿ ಹಂತಹಂತವಾಗಿ ಕ್ರಮ ಕೈಗೊಂಡಿದ್ದಾರೆ ಎನ್ನುವ ಸಂಪೂರ್ಣ ವರದಿಯನ್ನು ತಮ್ಮ ಮುಂದೆ ಕೊಟ್ಟಿದ್ದೇವೆ, ಅದು ತಮ್ಮೆಲ್ಲರ ಹತ್ತಿರ ಇದೆ ಹೀಗಾಗಿ, ಸರ್ಕಾರ ಇದರಲ್ಲಿ ಅದಕ್ಷತೆ ತೋರಿಸಿದೆ ಎನ್ನುವ ಆಪಾದನೆಗಳು ಇಲ್ಲದೇ ಇದ್ದಾಗ, ನಮ್ಮ ಸಿ.ಓ.ಡಿ ಅಧಿಕಾರಿಗಳೂ ಕೂಡ ಬಹಳ ದಕ್ಷತೆಯಿಂದ ಕಾರ್ಯಕ್ಷಮತೆಯನ್ನು ಮಾಡಿರುವ ಹಿನ್ನೆಲೆಯಲ್ಲಿ, ಯಾವುದೇ ಆಪಾದನೆ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ತಾವು ಇದನ್ನು ಜಂಟಿ ಸದನ ಸಮಿತಿಗೆ ಒಪ್ಪಿಸಬೇಕೆಂದು ಕೇಳಿರುವುದು ಈ ಘಟ್ಟದಲ್ಲಿ ಸಾಧುವಾಗುದಲ್ಲ ಅನೇಕ ಸಂದರ್ಭದಲ್ಲಿ, ಜಂಟಿ ಸದನ ಸಮಿತಿ ಆಗಿರುವಂಥಾದ್ದು ಇದೆ ಬೋಫೋರ್ಸ್ ಹಗರಣ ಬಂದಾಗ ಲೋಕಸಭೆಯಲ್ಲಿ ಕೂಡ ಜಂಟಿ ಸದನ ಸಮಿತಿಯನ್ನು ಮಾಡಿರತಕ್ಕಂಥಾದ್ದನ್ನು ಕಂಡಿದ್ದೇವೆ ಇಂಥ ಬೇರೆಬೇರೆ ಪ್ರಕರಣಗಳು ಬಂದಾಗ ಜಂಟಿ ಸದನ ಮಾಡಿರತಕ್ಕಂಥಾದ್ದನ್ನೂ ಕಂಡಿದ್ದೇವೆ ನಮ್ಮ ಸದನದಲ್ಲಿಯೂ ಮಾಡಿದ ತಕ್ಕಂಥಾದ್ದು ಇದೆ ಆದರೆ ಇಲ್ಲಿ ಒಂದು ವಿಷಯವನ್ನು ಹೇಳಲಿಚ್ಛಿಸುತ್ತೇನೆ ಜಂಟಿ ಸದನ ಸಮಿತಿಗಳು ವರದಿಯನ್ನು ಕೊಡಬಹುದು ವರದಿಯನ್ನು ಕೊಟ್ಟ ನಂತರ ಆ ವರದಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಅಂತರ್ಗತವಾಗಿ ಸರ್ಕಾರಕ್ಕೆ ಇರುತ್ತದೆ ಆದರೆ

ಅವು ಜಂಟಿ ಸದನ ಸಮಿತಿ ಎನ್ನುವ ಕಾರಣಕ್ಕಾಗಿ ಅದಕ್ಕೆ ಒಂದು ಪವಿತ್ರತೆ ಮತ್ತು ಘನತೆ ಇದೆ ಅದರಲ್ಲಿ ಕೆಲವೇ ಶಾಸಕರು ಸದಸ್ಯರಾಗಿದ್ದರೂ ಕೂಡ ಅದು ಒಂದು ಸದನವೇ ಇದ್ದಂತೆ ಆ ಸದನ ಮಾಡುವಂಥ ಎಲ್ಲಾ ಶಿಫಾರಸ್ಸುಗಳು ಅತ್ಯಂತ ಗೌರವಾನ್ವಿತವಾಗಿರತಕ್ಕಂಥವು ಅದಕ್ಕೆ ಕೊಡಬೇಕಾಗಿರತಕ್ಕಂಥ ಮಾನ್ಯತೆಯನ್ನು, ಕಾರ್ಯ ಸಾಧುವಾದಂಥ ರೀತಿಯಲ್ಲಿ ಅದನ್ನು ಅರ್ಥೈಸಿಕೊಂಡು ಯಾವ ರೀತಿಯಲ್ಲಿ ಅದನ್ನು ಅನುಷ್ಠಾನಕ್ಕೆ ತರಬೇಕು ಎನ್ನುವುದು ಸರ್ಕಾರಕ್ಕೆ ಬಿಟ್ಟಿರುವಂಥ ಅಂತರ್ಗತವಾದಂಥ ಹಕ್ಕು ಆ ಕಾರಣಕ್ಕಾಗಿಯೇ ನಾನು ಇದನ್ನು ಕೇವಲ ತರ್ಕಕ್ಕಾಗಿ ಅಥವಾ ತಮಗೆ ಗೊತ್ತಿಲ್ಲದ ವಿಚಾರ ಎಂದು ಹೇಳುವುದಿಲ್ಲ ಒಂದು ವೇಳೆ ಆ ಸದನ ಸಮಿತಿ ಶಿಫಾರಸ್ಸನ್ನು ಮಾಡಿದರೆ, ಆ ಶಿಫಾರಸ್ಸಿನ ಪರವಾಗಿಯಾಗಲೀ ಅಥವಾ ಅದನ್ನು ತಿರಸ್ಕರಿಸುವುದಾಗಲೀ ಅಥವಾ ಅದನ್ನು ಆಂಶಿಕವಾಗಿ ಒಪ್ಪುವುದಾಗಲೀ ಸರ್ಕಾರಕ್ಕೆ ಬಿಟ್ಟಿರತಕ್ಕಂಥ ವಿಷಯ ಎರಡನೆಯದಾಗಿ, ಜಂಟಿ ಸದನ ಸಮಿತಿಯು ಯಾರ ಮೇಲೂ ಕೂಡ ತಾನೇ ಸ್ವತಃ ಕ್ರಮವನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ ಅವರು ಫಿರ್ಯಾದಿಯನ್ನೂ ಕೊಡಲು ಆಗುವುದಿಲ್ಲ, ಯಾರನ್ನಾದರೂ ಪ್ರಾಸಿಕ್ಯೂಟ್ ಮಾಡಿ ಎಂದೂ ಹೇಳಲು ಆಗುವುದಿಲ್ಲ ಅದಕ್ಕೆ ಅವರು ಮತ್ತೆ ಸರ್ಕಾರಕ್ಕೆ ಬರಬೇಕಾದಂಥಾದ್ದು ಇದೆ ಇದರ ಜೊತೆಗೆ, ಒಂದು ಪ್ರಕರಣದ ಕುರಿತಾಗಿ ಎರಡೂ ಕಡೆಗಳಲ್ಲಿ ಸಮಾನಾಂತರ ರೇಖೆಯಲ್ಲಿ ಪ್ಯಾರಲೆಲ್ ಎಂದು ಏನು ಹೇಳುತ್ತೇವೆ ವಿಚಾರಣೆ ಪ್ರಾರಂಭವಾದರೆ ವಾಸ್ತವ ಸಂಗತಿಗಳಲ್ಲಿ ಗೊಂದಲಗಳು ಹೇಗೆ ಸೃಷ್ಟಿಯಾಗುತ್ತವೆ ಎನ್ನುವುದನ್ನು ನೋಡಬೇಕು ಅದಕ್ಕೆ ಸಂಬಂಧಪಟ್ಟ ಅನೇಕ ದಾಖಲೆಗಳನ್ನು ಸಿ ಓ ಡಿ ಯವರು ಈಗಾಗಲೇ ವಶಪಡಿಸಿಕೊಂಡಿದ್ದಾರೆ ಅನೇಕ ದಾಖಲೆಗಳನ್ನು ಈಗಾಗಲೇ ನ್ಯಾಯಾಲಯಗಳಿಗೆ ಸಲ್ಲಿಸಿರತಕ್ಕಂಥಾದ್ದೂ ಕೂಡ ಇದೆ ಜಂಟಿ ಸದನ ಸಮಿತಿಯ ಸದಸ್ಯರು ಆ ದಾಖಲೆಗಳನ್ನು ಪರಿಶೀಲಿಸಬೇಕೆಂದು ಬಯಸಿದರೆ, ಅದಕ್ಕೆ ಮತ್ತೆ ನ್ಯಾಯಾಲಯದ ಮೊರೆ ಹೋಗುಬೇಕಾಗುತ್ತದೆ ಅವುಗಳನ್ನು ನೋಡಲು ಪ್ರತ್ಯೇಕವಾದಂಥ ಪೊಲೀಸ್ ರಾಣೆಗಳಿಗೆ ಹೋಗಬೇಕಾಗುತ್ತದೆ ಆ ಸಂದರ್ಭದಲ್ಲಿ ಖಂಡಿತವಾಗಿ ವಿಳಂಬ ಆಗೇ ಆಗುತ್ತದೆ ಇದರ ಜೊತೆಗೆ, ಇದು ವ್ಯಾಪಕವಾದಂಥ ಜಾಲವಾಗಿರುವುದರಿಂದ, ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಇಂಥ ಪ್ರಕರಣಗಳು ಆಗಿರಬಹುದು ಎನ್ನುವ ಸಂಭವನೀಯವಾದ ವಿಚಾರವನ್ನು ತಾವೆಲ್ಲಾ ಪ್ರಸ್ತಾವ ಮಾಡಿದ್ದೀರಿ ಜಂಟಿ ಸದನ ಸಮಿತಿಯ 27 ಜಿಲ್ಲೆಗಳಲ್ಲಿಯೂ ಇಂಥ ಸಂಭವನೀಯ ಪ್ರಕರಣಗಳನ್ನು ನೋಡುವುದಾದರೆ ಅದಕ್ಕೆ ಎಷ್ಟು ದಿವಸಗಳ ಕಾಲಾವಕಾಶ ಬೇಕಾಗುತ್ತದೆ ಇಷ್ಟೇಅಲ್ಲ, ಜುಲೈನಲ್ಲಿ ಬಜೆಟ್ ಅಧಿವೇಶನ ಪ್ರಾರಂಭವಾಗುತ್ತದೆ ಅದಾದನಂತರ ತಾವು ಕ್ಷೇತ್ರಾವಾರು ಆಗಿರತಕ್ಕಂಥ ಕಾರ್ಯಕ್ರಮಗಳನ್ನು ನೋಡಲೇಬೇಕಾಗುತ್ತದೆ ಮಾನ್ಯ ಶಾಸಕರಾದಂಥವರು ಎಲ್ಲರೂ ಕೂಡ ಅನೇಕ ಸಮಿತಿಗಳಿಗೆ ಸದಸ್ಯರಾಗಿರುತ್ತಾರೆ ಇಲ್ಲವೇ ಅಧ್ಯಕ್ಷರಾಗಿರುತ್ತಾರೆ ಅದರಲ್ಲೂ ಮುಖ್ಯವಾಗಿ 'ಆಶ್ರಯ, ಆರಾಧನ' ಮುಂತಾದ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿಸಿಕೊಡಬೇಕಾದುದು ಬಹಳ ಮುಖ್ಯವಾದುದಾಗಿದೆ ಅದೆಲ್ಲಕ್ಕಿಂತಲೂ ಹೆಚ್ಚಾಗಿ, ಕಳೆದ ಚುನಾವಣೆಯಲ್ಲಿ ಗೆದ್ದು ಬಂದಿರುವಂಥ ಎಲ್ಲಾ ಸದಸ್ಯರಿಗೆ ನಮ್ಮ ಅಭಿಮಾನಿಗಳಾಂಥವರು ಸನ್ಮಾನ, ಮೆರವಣಿಗೆ ಇತ್ಯಾದಿ ಏರ್ಪಡಿಸಿರುತ್ತಾರೆ ಇದಕ್ಕೆ ನಾವುಗಳು ಎಷ್ಟೇ ನಿರಾಕರಿಸಿದರೂ ಕೂಡ, ಇನ್ನೊಂದು ತಿಂಗಳು ನಾವ್ಯಾರೂ ಕ್ಷೇತ್ರಗಳಲ್ಲಿ ಕೆಲಸ ಮಾಡಲಾರದಂತೆ, ನಮ್ಮ ಅಭಿಮಾನಿಗಳ ಸತ್ಕಾರ ಕೂಟಗಳಿಗೆ ಹೋಗುವುದರಲ್ಲಿ ನಮ್ಮ ಅನೇಕ ಕಾಲ ವ್ಯಯವಾಗುತ್ತದೆ ಇದು ವಾಸ್ತವವಾಗಿರತಕ್ಕಂಥ ಸಂಗತಿ ನಾನು ಮೇಲೆ ಹೇಳಿದ ಎಲ್ಲಾ

ಸಂಗತಿಗಳ ಹಿನ್ನಲೆಯಲ್ಲಿ, ಜಂಟಿ ಸದನ ಸಮಿತಿಯು ತಾವು ಬಯಸಿದಂಥ, ನಿರೀಕ್ಷಿಸಿದಂಥ ಮಟ್ಟದಲ್ಲಿ ಈ ವಿಚಾರಣೆಯನ್ನು ಮಾಡಲು ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ ಇದು ನಮ್ಮ ಸಂಪೂರ್ಣವಾಗಿರತಕ್ಕಂಥ ನಂಬಿಕೆಯಾಗಿರುವುದರಿಂದ, ಜಂಟಿ ಸದನ ಸಮಿತಿಯ ವಿಚಾರವನ್ನು ನಾವು ಒಪ್ಪದೇ ಹೋಗುತ್ತೇವೆಯೇ ವಿನಃ, ಸರ್ಕಾರ ಇದನ್ನು ಒಂದು ಪ್ರತಿಷ್ಠತೆ ಪ್ರಶ್ನೆಯನ್ನಾಗಿ ಮಾಡಿಕೊಂಡಿಲ್ಲ ಇದು ಪ್ರತಿಷ್ಠೆ ಆಗಬೇಕಾದಂಥ ಸಂದರ್ಭವೂ ಇಲ್ಲಿ ಇಲ್ಲ ಆದ್ದರಿಂದ, ಇದು ಪ್ರತಿಷ್ಠೆ ಎಂದಾಗಲೀ ಅಥವಾ ನೀವು ಕೇಳಿದ್ದೀರಿ ಎನ್ನುವ ಕಾರಣಕ್ಕಾಗಿ ನಾವು ಸಂದರ್ಭದಲ್ಲಿ ಬಹಳ ದಕ್ಷತೆಯಿಂದ ಹಾಗೂ ತ್ವರಿತಗತಿಯಿಂದ ಈ ವಿಚಾರಣೆ ಮುಕ್ತಾಯಗೊಳ್ಳಬೇಕಾಗಿದೆ ತಪ್ಪಿತಸ್ಥರು ಯಾರೇ ಇರಲಿ, ಅವರು ಎಷ್ಟೇ ದೊಡ್ಡವರಾಗಿರಲಿ, ಅವರಿಗೆ ಯಾವುದೇ ರಾಜಕಾರಣದ ಸಂಬಂಧವಿರಲಿ ಅಥವ ಬೇರೆಬೇರೆ ಮೂಲಗಳಿಂದ ಸಂಬಂಧ ಇರತಕ್ಕಂಥಾದ್ದು ಇದ್ದರೂ, ಇವರೆಲ್ಲರ ಮೇಲೆ ಕ್ರಮ ಕೈಗೊಳ್ಳಲು ಈ ಸರ್ಕಾರ ಹಿಂದುಮುಂದು ನೋಡುವುದಿಲ್ಲ ನೀವು ಮಾಡಿರುವ ಆಪಾದನೆಗಳನ್ನೇ ನಾವೂ ಸಹ ಈ ಸಮ್ಮಿಶ್ರ ಸರ್ಕಾರದ ಪಾಲುದಾರರಾಗಿಯೂ ಮಾಡಿರುವುದರಿಂದ, ಇದರ ಬಗ್ಗೆ ನಿಮ್ಮಷ್ಟೇ ಕಳಕಳಿ ನಮಗೂ ಇದೆ ಅಲ್ಲದೇ, ನಾವೂ ಕೂಡ ಮುಕ್ತರಾಗಿ ಇದರಿಂದ ಹೊರಬರಬೇಕು ಎನ್ನುವಂಥ ಕಾರಣವೂ ಇದೆ ಈ ಕಾರಣಕ್ಕಾಗಿ ಮತ್ತು ನಮ್ಮ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ತೆಗೆದುಕೊಂಡ ನಿರ್ಣಯ ಮತ್ತು ತ್ವರಿತಗತಿಯ ಕ್ರಮಗಳ ಹಿನ್ನಲೆಯಲ್ಲಿ ಈ ವಿಚಾರದ ಮೇಲೆ ನಿಯಮ 69ರಡಿಯಲ್ಲಿ ಭಾಗವಹಿಸಿ ಚರ್ಚೆ ಮಾಡಿದಂಥ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಕೇಳಿಕೊಳ್ಳುತ್ತಿದ್ದೇನೆ, ದಯಮಾಡಿ ಈ ವಿಚಾರದ ಬಗ್ಗೆ ತಾವು ಒತ್ತಾಯವನ್ನು ಮಾಡಬೇಡಿ ನಿಮ್ಮ ನಿರೀಕ್ಷೆಗನುಗುಣವಾಗಿ ತಪ್ಪಿತಸ್ಥರ ಮೇಲೆ ಸೂಕ್ತವಾದ ಕ್ರಮವನ್ನು ನಾವು ಕೈಗೊಳ್ಳುತ್ತೇವೆ ಈಗ ನಡೆಸಿರುವಂಥ ಕಾರ್ಯಕ್ರಮಗಳು ಬಹಳ ಮುಖ್ಯ ಅಲ್ಲದೇ, ಇದನ್ನು ಯಾವ ರೀತಿಯಾಗಿ ಸುಧಾರಣೆ ಮಾಡಬೇಕು ಎನ್ನುವ ಪ್ರಶ್ನೆಯೂ ಇದರಲ್ಲಿ ಇದೆ ಮಾನ್ಯ ಶ್ರೀರಾಮರೆಡ್ಡಿಯವರು, ಇದರ ಬಗ್ಗೆ ಸಿ ಬಿ ಐ ಎನ್‌ಕ್ವೈರಿ ಆಗಬೇಕು ಎನ್ನುವ ವಿಚಾರವನ್ನು ಹೇಳಿದ್ದಾರೆ ಇಲ್ಲಿ ಒಂದು ಪ್ರಶ್ನೆ. ಆ ಭಾಗದಲ್ಲಿ ಕುಳಿತಂಥ ಸಂದರ್ಭದಲ್ಲಿ ಮತ್ತು ಇಲ್ಲಿ ಕಾಂಗ್ರೆಸ್ಸಿನ ಸರ್ಕಾರವೇ ಇದ್ದಂಥ ಸಂದರ್ಭದಲ್ಲಿ ಒಂದು ಮೇಲ್ನೋಟದ ತರ್ಕ, ಮೇಲ್ನೋಟದ ಗ್ರಹಿಕೆ ಹೇಗಿತ್ತು ಎಂದರೆ, ಕೇಂದ್ರದಲ್ಲಿ ಎನ್ ಡಿ ಎ ಸರ್ಕಾರವಿದೆ, ರಾಜ್ಯದಲ್ಲಿ ಕಾಂಗ್ರೆಸ್ಸಿನ ಸರ್ಕಾರವಿದೆ, ನೀವು ನಿಮ್ಮ ಪೊಲೀಸ್ ಅಧಿಕಾರಿಗಳ ಮೂಲಕ ವಿಚಾರಣೆಯನ್ನು ಮಾಡಿದರೆ ಅವರು ನಿಮ್ಮ ಪ್ರಭಾವ ವಲಯದಲ್ಲಿ ಬರುತ್ತಾರೆ ನಿಷ್ಪಕ್ಷಪಾತವಾದಂಥ ವಿಚಾರಣೆಯಾಗುವುದಿಲ್ಲ ಎನ್ನುವ ಕಾರಣಕ್ಕಾಗಿ ಇಂಥವುಗಳನ್ನು ಸಿ ಬಿ ಐ ಗೆ ಕೂಡಿ ಎನ್ನುವ ವಾದ ಕೂಡ ಇದೆ ಅಂತರ್ಗತವಾಗೆ ಇದೇ ನಿಜವಾದಂಥ ಕಾರಣ ಆದರೆ ಅದನ್ನು ಬೇರೆ ರೀತಿಯಲ್ಲಿ ಹೇಳಿ, ಆ ಕಾರಣಕ್ಕಾಗಿ ಅಲ್ಲ, ಸಿ ಬಿ ಐ ಹೆಚ್ಚು ದಕ್ಷವಾಗಿ ಇರುತ್ತದೆ ಎನ್ನುವಂಥ ಮಾತುಗಳನ್ನು ಹೇಳಿರಬಹುದು ನಾವು ಅದಕ್ಷವಾದಂಥ ಸಿ ಬಿ ಯ ಯನ್ನೂ ನೋಡಿದ್ದೇವೆ ಇಲ್ಲಿರುವಂಥ ಅಧಿಕಾರಿಗಳೇ ಅಲ್ಲಿಗೆ ವರ್ಗಾವಣೆಯಾಗುತ್ತಾರೆ, ಅಲ್ಲಿರುವಂಥ ಅಧಿಕಾರಿಗಳು ತಮ್ಮ ಅವಧಿಯನ್ನು ಮುಗಿಸಿಕೊಂಡು ಮತ್ತೆ ಇಲ್ಲಿಗೆ ಬಂದಿರತಕ್ಕಂಥಾದ್ದೂ ಕೂಡ ಇದೆ ಸಿ ಬಿ ಐ ನಲ್ಲಿ ಪ್ರತ್ಯೇಕವಾಗಿ ದೇವಾಂಶಸಂಭೂತರಾದ ಅಧಿಕಾರಿಗಳಿರುತ್ತಾರೆ ಎಂದೇನೂ ಅಲ್ಲ ಇಲ್ಲಿಯ ಅಧಿಕಾರಿಗಳೇ ಅಲ್ಲಿ, ಅಲ್ಲಿಯ ಅಧಿಕಾರಿಗಳೇ ಇಲ್ಲಿ ಇರುತ್ತಾರೆ ವಿವಿಧ ಇಲಾಖೆಗಳಲ್ಲಿ ಇರತಕ್ಕಂಥ ಕಾರ್ಯಕ್ರಮಗಳ ಆಧಾರದ ಮೇಲೆ ಅದು ನಿರ್ಧಾರವಾಗುತ್ತದೆ ಮತ್ತು ಆ ವ್ಯಕ್ತಿಯ ಮೂಲಭೂತವಾದಂಥ ಇಂಟಿಗ್ರಿಟಿ ಅಂದರೆ ಆತನ ಪ್ರಾಮಾಣಿಕತೆಯ ಮೇಲೆ ಅವಲಂಬಿತವಾಗಿರುತ್ತದೆ ಪ್ರಾಮಾಣಿಕರಾದಂಥ

ಅಧಿಕಾರಿಗಳು ಬಹಳ ಭೋಳೇ ಸ್ವಭಾವದವರೂ ಆಗಿರುತ್ತಾರೆ ಆದ್ದರಿಂದ, ಅವರು ದಕ್ಷರೂ ಆಗಿರಬೇಕಾಗುತ್ತದೆ ದಕ್ಷರು, ಪ್ರಾಮಾಣಿಕರು ಆಗುವುದರ ಜೊತೆಗೆ ಕಾನೂನಿನ ಪರಿಮಿತಿಯಲ್ಲಿ ನ್ಯಾಯಾಲಯದಲ್ಲಿ ಚಾರ್ಜ್‌ಷೀಟ್ ಹಾಕುವಂಥಾದ್ದರಲ್ಲಿ ನಮ್ಮ ಹೆಡ್–ಕಾನ್ಸ್‌ಟೇಬಲ್‌ಗಳು ಕೊಡುವಂಥ ಸಲಹೆಗಳನ್ನು ಐ ಪಿಎಸ್ ಆಫೀಸರ್‌ಗಳು ಮಾಡುವುದಿಲ್ಲ ಟೆಪ್ಪಣಿಗಳನ್ನು ಬರೆಯಲು ಅವರಿಗೆ ಒಳ್ಳೆಯ ಇಂಗ್ಲೀಷ್ ಜ್ಞಾನ ಇರುವುದರಿಂದ ಒಳ್ಳೆಯ ಟಿಪ್ಪಣಿಗಳನ್ನು ವರದಿಗಳನ್ನು ಬರೆದು ಕಳುಹಿಸುತ್ತಾರೆ ಆದರೆ ಫೀಲ್ಡ್‌ಗೆ ಅವರು ಹೋಗುವುದಿಲ್ಲ ಹಾಗಾಗಿ ಯಾವಾಗಲೂ ಹೆಡ್–ಕಾನ್ಸ್‌ಟೇಬಲ್‌ಗಳು ಅಥವಾ ಬಡ್ತಿಯನ್ನು ಪಡೆದಿರುವಂಥ ಸಬ್–ಇನ್ಸ್‌ಪೆಕ್ಟರ್‌ಗಳು ಬಹಳ ಚೆನ್ನಾಗಿ ಕರ್ತವ್ಯವನ್ನು ನಿರ್ವಹಿಸುತ್ತಾರೆ ಹದಗೆಟ್ಟಿರುವ ವ್ಯವಸ್ಥೆಯಲ್ಲಿ ಸಿ ಬಿ ಐ ಆಗಿರಲಿ, ಸಿ ಓ ಡಿ ಆಗಿರಲಿ, ಇನ್ಯಾವುದೇ ಅಧಿಕಾರಿಗಳಾಗಿರಲಿ ಅಥವಾ ಮಂತ್ರಿಗಳಾಗಿರಲಿ ಅವರೂ ಕೂಡ ಆ ಪ್ರಮಾಣದಲ್ಲಿಲ್ಲದಿದ್ದರೂ ಸ್ವಲ್ಪಮಟ್ಟಿಗಾದರೂ ಹದಗೆಟ್ಟಿರುತ್ತಾರೆ ಏಕೆಂದರೆ, ಆ ವ್ಯವಸ್ಥೆಯ ಅಂಗ ಅವರಾಗಿರುತ್ತಾರೆ ಆಕಾರಣಕ್ಕಾಗಿ ಇದನ್ನು ಸಿ ಬಿ ಐ ಗೆ ಒಪ್ಪಿಸಬೇಕು ಎಂದು ಹೇಳಿ, ನೀವು ನೇರವಾಗಿ ಹೇಳದಿದ್ದರೂ ಕೂಡ ಒಂದು ಮಾತನ್ನು ಏನು ಹೇಳಬಹುದೆಂದರೆ, ಕೇಂದ್ರದಲ್ಲಿ ಇರುವಂಥ ಸರ್ಕಾರವೂ ಕೂಡ ಕಾಂಗ್ರೆಸ್ ಸರ್ಕಾರವಾಗಿದೆ, ಇಲ್ಲಿ ಸಮ್ಮಿಶ್ರ ಸರ್ಕಾರವಿದೆ ಆದರೂ ನೀವು ಏಕೆ ಸಿ ಬಿ ಐ ಗೆ ಒತ್ತಾಯ ಮಾಡುತ್ತೀರಿ? ಸಿ ಬಿ ಐ ಎನ್‌ಕ್ವಯರಿ ಮಾಡಬೇಕೆಂದು ಏಕೆ ಬಯಸುತ್ತೀರಿ ಎಂದರೆ ಬೇರೆ ರಾಜ್ಯಗಳಿಗೆ ವಿಸ್ತರಿಸ್ಪಟ್ಟಿರತಕ್ಕಂಥ ಈ ಒಂದು ವ್ಯವಹಾರದ ಇದ್ದಾಗ ಆ ರಾಜ್ಯಗಳಿಗೆ ಹೋಗಿ ತನಿಖೆ ಮಾಡತಕ್ಕಂಥ ಕಾನೂನುಬದ್ಧವಾದ ಅಧಿಕಾರ ಇಲ್ಲಿಯ ಪೊಲೀಸರಿಗೆ ಇರುವುದಿಲ್ಲ ಎನ್ನುವ ಕಾರಣಕ್ಕಾಗಿಯೇ ಸಿ.ಬಿ ಐ.ಗೆ ಕೊಡುವುದರ ಮೂಲಕವಾಗಿ ಅವರಿಗೆ ಒಂದು ಅಧಿಕಾರ ಪ್ರಾಪ್ತವಾಗುತ್ತದೆ, ಅದರ ಮೂಲಕ ಅವರು ಎನ್‌ಕ್ವಯರಿ ಮಾಡಬಹುದು ಎನ್ನತಕ್ಕಂಥದ್ದರಿಂದ ಸಿ.ಬಿ ಐ ಎನ್‌ಕ್ವಯರಿ ಕೇಳುತ್ತೀರಿ

ಶ್ರೀ ಜೆ ಏ ಶ್ರೀರಾಮರೆಡ್ಡಿ ಮಾನ್ಯ ಛೇರ್ಮನ್‌ರವರೆ, ಸಿ.ಬಿ ಐ ಎನ್‌ಕ್ವಯರಿ ಮಾಡಬೇಕೆಂದು ಒತ್ತಾಯ ಮಾಡಿದ್ದು ಏಕೆಂದರೆ ಮೂಲತಃ ಈ ಯೋಜನೆಯನ್ನು ಕೇಂದ್ರ ಸರ್ಕಾರ ರೂಪಿಸಿದ್ದು ಕೇಂದ್ರ ಸರ್ಕಾರ ರೂಪಿಸಿದಂಥ ಯೋಜನೆಯಲ್ಲಿಯೇ ಮೂಲಭೂತವಾದ ದೋಷ ಇದೆ, ಅವೈಜ್ಞಾನಿಕವಾಗಿ ಇದೆ, ಅದಕ್ಕೋಸ್ಕರ ಈ ಅವ್ಯವಹಾರಗಳು ನಡೆಯಲಿಕ್ಕೆ ಕಾರಣ ಆಗಿರತಕ್ಕಂಥದ್ದು ಒಂದು ಅಂಶವಾಗಿದೆ ಎರಡನೆಯದಾಗಿ ಅದನ್ನು ಸಿ.ಬಿ ಐ ಗೆ ಒಪ್ಪಿಸಬೇಕೆಂದು ಏಕೆ ಹೇಳಿದೆನೆಂದರೆ, ರಾಜ್ಯ ಸರ್ಕಾರ utilization certificate ಕೊಟ್ಟಿದ್ದಾರೆ ಆ utilization certificate ಅನ್ನು ಕೇಂದ್ರಸರ್ಕಾರದವರು ಕಣ್ಣುಮುಚ್ಚಿಕೊಂಡು ಒಪ್ಪಿಕೊಂಡಿದ್ದಾರೆ ಹಾಗಾಗಿ ಕೇಂದ್ರದವರು ಪುನಃ ಪುನಃ ಅಕ್ಕಿಯನ್ನು release ಮಾಡಿದ್ದಾರೆ ಈ ಎರಡೂ ಕಾರಣಗಳಿಂದ ತನಿಖೆ ಆಗಬೇಕೆಂದಾದರೆ ಕೇಂದ್ರ ಸರ್ಕಾರಕ್ಕೆ ಹೋಗಿ ಸಿ ಓ ಡಿ ಅಧಿಕಾರಿಗಳು ತನಿಖೆ ಮಾಡುವುದಕ್ಕೆ ಆಗುವುದಿಲ್ಲ ಈ ಯೋಜನೆಯನ್ನು ರೂಪಿಸಿದಂಥ ಸಂದರ್ಭದಲ್ಲಿ ಆಗಲಿ ಅಥವಾ utilization certificate ಬಗ್ಗೆ Verification ಮಾಡಿ ಅದರ ಸತ್ಯಾಂಶಗಳನ್ನು ಪರಿಗಣಿಸತಕ್ಕಂಥ ಸಂದರ್ಭದಲ್ಲಾಗಲಿ ಸಿ ಓ ಡಿಯವರು ಹೋಗಿ ಕೇಂದ್ರ ಸರ್ಕಾರದಲ್ಲಿ ತನಿಖೆ ಮಾಡುವುದಕ್ಕೆ ಆಗುವುದಿಲ್ಲ ಈ ಎರಡು ಕಾರಣಗಳಿಂದ ಸಿ ಬಿ.ಐ ತನಿಖೆ ಆಗಬೇಕೆಂದು ನಾನು ಒತ್ತಾಯ ಮಾಡಿರತಕ್ಕಂಥದ್ದು

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಒಪ್ಪುತ್ತೇನೆ. ಯೋಜನೆಗಳನ್ನು ರೂಪಿಸಿರುವುದರಲ್ಲಿ ಅವೈಜ್ಞಾನಿಕವಾಗಿದೆಯೆಂದರೆ ಅದನ್ನು ಸಿ ಬಿ.ಐ

ಎನ್‌ಕ್ವಯರಿ ಮಡುವುದಕ್ಕೆ ಬರುವುದಿಲ್ಲ It is a policy matter It is the Government which has to take a policy decision and whether that policy is right or wrong, it is not for bureaucrats to tell ಆದ್ದರಿಂದ ಪೊಲೀಸ್‌ನವರು, ಸಿ ಬಿ ಐ ನವರು ಹೋಗಿ ನೀವು ಅವೈಜ್ಞಾನಿಕವಾಗಿ ಯೋಜನೆಗಳನ್ನು ಮಾಡಿದ್ದೀರಿ ಎಂದು ಅವರಿಗೆ ಹೇಳುವುದಕ್ಕಾಗುವುದಿಲ್ಲ ಅದನ್ನು ಏನು ಹೇಳಿದರೂ ಕೂಡ, ನಮ್ಮ ಅನುಭವಗಳ ಹಿನ್ನೆಲೆಯಲ್ಲಿ ಜನಪ್ರತಿನಿಧಿಗಳಾದಂಥವರು ನಾವು ಹೇಳಬೇಕಾಗುತ್ತದೆ ಇದರಲ್ಲಿ ಒಂದು ಪರ್ಯಾಯವಾಗಿರತಕ್ಕಂಥ ಕಾರ್ಯಕ್ರಮವನ್ನು ಹೇಗೆ ರೂಪಿಸಿಬಹುದಾಗಿತ್ತು ಎನ್ನುವುದನ್ನು ತಾವು ತಮ್ಮ ಅನುಭವ ಹಿನ್ನೆಲೆಯಲ್ಲಿ ಹೇಳಬಹುದು ಈಗ ಒಂದು ಪರ್ಯಾಯವಾದಂಥ ಸೂತ್ರವನ್ನು ಸರ್ಕಾರದಲ್ಲಿ ನಾವು ಯೋಚನೆ ಮಾಡುತ್ತಿದ್ದೇವೆ ನನಗೆ ಕೇವಲ ಎರಡು ದಿವಸಗಳ ಹಿಂದೆ ಒಂದು ಕಡತ ಬಂದಿತ್ತು ನಮ್ಮ ಗ್ರಾಮಪಂಚಾಯತಿಗಳು ಅವೂ ಕೂಡ ಭ್ರಷ್ಟಾಚಾರದ ಕೇಂದ್ರಗಳು ಆಗಿವೆ, ಅಧಿಕಾರದ ವಿಕೇಂದ್ರಿಕರಣ ಎಂದರೆ ಭ್ರಷ್ಟಾಚಾರದ ವಿಕೇಂದ್ರಿಕರಣ ಎನ್ನುವ ವ್ಯಂಗ್ಯದ ಮತು ಇಲ್ಲಿ ಬಂದಿದೆ ಆದರೂ ಕೂಡ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ತಳಸ್ಪರ್ಶಿಯಾಗಿರತಕ್ಕಂಥ ಆ ಪ್ರದೇಶಗಳು ಏನಿವೆ, ಅವು ಹೆಚ್ಚು ಜನತೆಗೆ ಜವಾಬ್ದಾರರಾಗಿರುತ್ತಾರೆ ಅಲ್ಲಿ ಭ್ರಷ್ಟಾಚಾರ ಆಗಿದ್ದರೂ ಕೂಡ ಅದು ಸಂಕೋಚದ, ಲಜ್ಜೆಗೆ ಒಳಗಾಗುವ ನಾಲ್ಕು ಮಂದಿಗೆ ಕಾಣದೇ ಇರುವಂಥ ಭ್ರಷ್ಟಾಚಾರ ಅಲ್ಲಿ ನಡೆಯುತ್ತಿದೆಯೇ ವಿನಃ ಇಷ್ಟು ಢಾಳಾಡಂಗೂರವಾಗಿ ನಡೆಯುವಂಥ ಭ್ರಷ್ಟಾಚಾರ ಆಗುವುದಿಲ್ಲ ನಾವು ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಇಟ್ಟುಕೊಳ್ಳಲೇಬೇಕಾಗುತ್ತದೆ ನಾವು ಅಧಿಕಾರ ವಿಕೇಂದ್ರಿಕರಣ ಮಾಡಲೇಬೇಕಾಗುತ್ತದೆ ಈಗ ಬೇರೆ ಬೇರೆ ಗೋಡೌನ್‌ಗಳಿಗೆ ಕಳುಹಿಸುವುದರ ಬದಲು ಅವುಗಳನ್ನು ಗ್ರಾಮಪಂಚಾಯಿತಿಗಳಿಗೆ ಕಳುಹಿಸಿ ಆ ಯೋಜನೆಯನ್ನು ಪ್ರಕಟಗೊಳಿಸಿ ಎಷ್ಟು ಅಕ್ಕಿ ಅಲ್ಲಿಗೆ ಬಂದಿದೆ ಎನ್ನುವಂಥದ್ದನ್ನು ಅಥವಾ ದವಸಧಾನ್ಯ ಬಂದಿದೆ ಎನ್ನುವಂಥದ್ದನ್ನು ತೋರಿಸಿ ಅದರ ಮೂಲಕ ನಮ್ಮ ಜಿಲ್ಲಾ ಪಂಚಾಯತಿಗಳಿಂದ ಬರುವಂಥ ವಾರ್ತಾಪತ್ರಿಕೆಗಳಲ್ಲಿ ಕೂಡ ಪ್ರಕಟಗೊಳಿಸತಕ್ಕಂಥದ್ದು ಒಂದು ಮಾರ್ಗ ಈ ನಿರ್ಣಯಕ್ಕೆ ಇನ್ನೂ ನಾವು ಯಾರೂ ಬಂದಿಲ್ಲ ತಮ್ಮದು ಅಂಥ ರಚನಾತ್ಮಕವಾದ ಸಲಹೆಗಳೇನಾದರೂ ಇದ್ದರೆ ಅದನ್ನು ದಯವಿಟ್ಟು ನನಗೆ ಕಳುಹಿಸಿಕೊಡಿ ಅದರ ಜೊತೆಗೆ ಜಲಾನಯನ ಅಭಿವೃದ್ಧಿಗೆ ಸಂಬಂಧಿಸಿದ ವಿಚಾರ ಇದರ ಇಡೀ ಕಾಮಗಾರಿಯ ಮೂಲ ಉದ್ದೇಶ ಆಗಿರತಕ್ಕಂಥದ್ದು, ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುವಂಥ ಅರೆ–ಮರಳುಗಾಡಿಗೆ ಒಳಗಾಗಿರತಕ್ಕಂಥ ಕರ್ನಾಟಕ ರಾಜ್ಯದಲ್ಲಿ ಅಂತರ್‌ಜಲ ಕಡಿಮೆ ಆಗುತ್ತಿರುವುದರಿಂದ ಅಂತರ್‌ಜಲ ಸಂರಕ್ಷಣೆ ಮತ್ತು ಮಳೆನೀರು ಸಂಗ್ರಹಣೆ ಇದಕ್ಕೆ ಹೆಚ್ಚು ಒತ್ತನ್ನು ಕೊಡಬೇಕೆನ್ನುವುದು ಏನಿದೆ ಇದು ಈ ಕಾರ್ಯಕ್ರಮದ ಮೂಲ ಉದ್ದೇಶವೂ ಕೂಡ ಆಗಿರುವುದರಿಂದ ನಮ್ಮ ಜಲಾನಯನ ಅಭಿವೃದ್ಧಿಯಲ್ಲಿ ಖಾಸಗಿಯವರಿಗೆ ಕೂಡ ಇದನ್ನು ಕೊಡಬೇಕೆನ್ನುವಂಥದ್ದು ಇದೆ ಅದಕ್ಕೆ ತಾವೆಲ್ಲಾ ಒದ್ಧರಾಗಿದ್ದೀರಿ ಜಲ ಸಂರಕ್ಷಣ ಸಮಿತಿಗಳನ್ನು ಮಾಡಿರುತ್ತೀರಿ ಅಲ್ಲಿ ಖಾಸಗಿಯವರಿಗೂ ಕೂಡ ನೀವು ಅಲ್ಲಿಯ ಕೃಷಿ ಹೊಂಡಗಳನ್ನು ಮಾಡಿಕೊಳ್ಳಲಿಕ್ಕೆ ಚೆಕ್ ಡ್ಯಾಂಗಳನ್ನು ಮಾಡಿಕೊಳ್ಳಲಿಕ್ಕೆ ನಿಮ್ಮ ಜಮೀನುಗಳಿಗೆ ನೀವೇ ಖರ್ಚು ಮಾಡಿ ನೀವೇ ಅದರ ಸಂರಕ್ಷಣೆಯನ್ನು ಮಾಡಿಕೊಳ್ಳಲಿ ಎನ್ನುವಂಥ ಕಾರ್ಯಕ್ರಮ ಇದೆ ಅದಕ್ಕಾದರೂ ಕೂಡ ಇದನ್ನು ಕಳುಹಿಸಿಕೊಡಬೇಕು ಎನ್ನುವಂಥದ್ದರ ಯೋಚನೆಯನ್ನು ನಾವು ಮಾಡುತ್ತಿದ್ದೇವೆ ಮಾನ್ಯ ಶ್ರೀರಾಮರೆಡ್ಡಿಯವರು ಮರೆತರು ಎಂದು ತೋರುತ್ತದೆ ನಾನು ಪ್ರಾರಂಭದಲ್ಲಿಯೇ ನನ್ನ ಭಾಷಣವನ್ನು ಪ್ರಾರಂಭ ಮಾಡಿದಾಗ ನಮ್ಮ ಮುಂದಿರುವ ಎರಡು

ಆಯ್ಕೆಗಳನ್ನು ನಾವು ಪ್ರಸ್ತಾಪ ಮಾಡಿದ್ದೇವೆ ಅವೈಜ್ಞಾನಿಕ ಎಂದು ನೀವು ಏಕೆ ಹೇಳುತ್ತಿದ್ದೀರಿ ಎಂದರೆ ಇದು 46 ರೂಪಾಯಿಗೆ ಮಾರತಕ್ಕಂಥದ್ದು ಅಲ್ಲ ಅಥವಾ utilization certificate ಅನ್ನು ನೀವು ಏನು ಬಳಕೆ ಮಾಡಿದಂಥ ದೃಢೀಕರಣ ಪತ್ರವನ್ನು ನೀವು ಸುಳ್ಳಾಗಿ ಕೊಟ್ಟಿದ್ದೀರಿ ಎಂದು, ನ್ಯಾಯವಾಗಿ ಹೇಳಿ, ಅಲ್ಲಿ ಕಾರ್ಯಕ್ರಮ ಆಗಲೇಬೇಕಾದಂಥ ಸಂದರ್ಭದಲ್ಲಿ ಗುಡಿಬಂಡೆ, ಬಾಗೇಪಲ್ಲಿ, ಕೋಲಾರ, ಬಳ್ಳಾರಿ ಇಂಥ ಕಡೆ 25 ರೂಪಾಯಿಗೆ ಕೂಡ ನಮ್ಮಲ್ಲಿ ಆಳುಗಳು ಕೆಲಸಕ್ಕೆ ಬರುತ್ತಾರೆ ಆದರೆ ಈ ಜಿಲ್ಲೆಗಳು ಏನಿವೆ ಆ ಜಿಲ್ಲೆಗಳಲ್ಲಿ ಏನು ಮಾಡಬೇಕು? ಮಲೆನಾಡಿನ ಜಿಲ್ಲೆಗಳು, ಹೆಚ್ಚು ಶ್ರೀಮಂತವಾಗಿರುವ ಜಿಲ್ಲೆಗಳು, ಈಗ ನಮ್ಮಲ್ಲಿಯೇ ಅಸಮಾನತೆ ಇರತಕ್ಕಂಥ ತಾರತಮ್ಯದಲ್ಲಿ ಕೊಡಗು ಜಿಲ್ಲೆಯ ವಾರ್ಷಿಕ ತಲಾ ಆದಾಯ ರೂಪಾಯಿ 26 ಸಾವಿರ ಇದ್ದಿಲ್ಲರೆ ಇದೆ ಈ ದೊಡ್ಡ ತಾರತಮ್ಯವನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೊಡಗು ಜಿಲ್ಲೆಯಲ್ಲಿ, ಬೆಳಗಾಂ ಜಿಲ್ಲೆಯಲ್ಲಿ ಅದನ್ನು ಮಾನವ ಸಂಪನ್ಮೂಲಗಳ ಇಂಡೆಕ್ಸ್ ಮಾಡಿದಂಥ ಸಂದರ್ಭದಲ್ಲಿ ಮತ್ತು ಡಾ ನಂಜುಂಡಪ್ಪನವರು ಕೊಟ್ಟಂಥ ವರದಿಯಲ್ಲಿ ಈ ರೀತಿಯ ವೈಪರೀತ್ಯತೆಯನ್ನು ಒಂದೇ ನಾಡಿನಲ್ಲಿ ಆಗಿರತಕ್ಕಂಥದ್ದನ್ನು ನಾವು ಕಂಡಿದ್ದೇವೆ ಈ ದೃಷ್ಟಿಯಿಂದ ನಮಗೆ ಯಾವುದು ಅನ್ವಯವಾಗುತ್ತದೆ ಅದು ಬೇರೆ ಶ್ರೀಮಂತ ಜಿಲ್ಲೆಗಳಿಗೆ ಅನ್ವಯವಾಗುವುದಿಲ್ಲ ಅನ್ವಯ ಆಗುವುದಿಲ್ಲ ಎಂದ ತಕ್ಷಣವೇ ನಾವು ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕು? ಬಳಕೆಯ ದೃಢೀಕರಣ ಪತ್ರವನ್ನು ಕೊಡದಿದ್ದರೆ ಎರಡನೇ ಕಂತು ಬರುವುದಿಲ್ಲ ಮೆದಲು ಕೊಟ್ಟಂಥದ್ದನ್ನು ಉಪಯೋಗಿಸಿಕೊಳ್ಳಬೇಕಾದರೆ ಅಲ್ಲಿ ಕೂಲಿಕಾರರು ಬರುವುದಿಲ್ಲ ನಮ್ಮ ದುರ್ದೈವ ಹೇಗಿದೆ ಎಂದರೆ ಇವತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪಿಸಿದಂಥ ಪ್ರಶ್ನೆ ಏನಿದೆ ಅದು ಬಹಳ ಪ್ರಮುಖವಾದಂಥ ಪ್ರಶ್ನೆ. ನಮ್ಮ ಬಿಜಾಪುರ ಜಿಲ್ಲೆ ಮೊದಲಾದಂಥವರು ಗೋವಾದ ಕಡೆಗೆ ವಲಸೆ ಹೋಗುತ್ತಾರೆ ಏತಕ್ಕಾಗಿ? ಏಕೆಂದರೆ, ನಮ್ಮಲ್ಲಿ ಉದ್ಯೋಗ ಇಲ್ಲ ಮತ್ತು ಆ ಶ್ರಮಕ್ಕೆ ಸರಿಯಾದಂಥ ಪ್ರತಿಫಲ ಇಲ್ಲ ಮತ್ತು ಇವತ್ತಿನ ದುಬಾರಿಯಾದಂಥ ಜನಜೀವನದಲ್ಲಿ ಆ ಮನುಷ್ಯ ಬದುಕಬೇಕಾದಂಥದ್ದು ಇದೆ ಕೂಲಿಕಾರರಲ್ಲಿ, ರೈತರಲ್ಲಿ, ಹಳ್ಳಿಗಳಲ್ಲಿ ಈ ಅಕ್ಷರಜ್ಞಾನ ಅಕ್ಷರ ಸಂಸ್ಕೃತಿಯ ಕಾರಣಕ್ಕಾಗಿ ಅವರಲ್ಲಿ ಹೊಸ ಆಸೆಗಳು, ಹೊಸ ಕನಸುಗಳು ಚಿಗುರಿವೆ ಅವರು ಉತ್ತಮರಾಗಿ ಬದುಕಬೇಕೆನ್ನುವಂಥ ಬಯಕೆ ಇದೆ ಆ ಬಯಕೆಗೆ ಅನುಗುಣವಾದಂಥ ರೀತಿಯ ಸಂಪನ್ಮೂಲಗಳನ್ನು ಕಾರ್ಯಕ್ರಮಗಳನ್ನು ನಾವು ರೂಪಿಸಲಿಕ್ಕೆ ಸಾಧ್ಯವಾಗುತ್ತಿಲ್ಲ ಈ ಸಂದರ್ಭದಲ್ಲಿಯೂ ಕೂಡ ಅವರು ವಲಸೆ ಹೋಗವಂಥದ್ದು ಇದೆ ಮಂಗಳೂರಿನಲ್ಲಿ ನೀವು ನೋಡಬಹುದು, ಅಲ್ಲಿ ಚಪಾತಿ ನಗರ ಎಂದು ಕರೆಯುತ್ತಾರೆ ನಮ್ಮ ರೊಟ್ಟಿಯ ವಿಚಾರವೇ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ನಮ್ಮ ಗೆಳೆಯರಿಗೆ ಗೊತ್ತಿಲ್ಲ ಆದ್ದರಿಂದ ಅವರು ಏನು ಹೇಳುತ್ತಾರೆಂದರೆ, ರೊಟ್ಟಿ ಎನ್ನುವುದರ ಬದಲು ಅದು ಚಪಾತಿ ಅವರಿಗೆ ಗೊತ್ತಿರುವುದರಿಂದ ರೊಟ್ಟಿ–ಚಪಾತಿ ಒಂದೇ ಎಂದು ಭಾವಿಸಿಕೊಂಡರು ಬೇಕಾದರೆ ಶ್ರೀ ಜಯಪ್ರಕಾಶ್ ಹೆಗ್ಡೆಯವರನ್ನು ಕೇಳಿ, ಮಂಗಳುರಿನಲ್ಲಿ ಚಪಾತಿ ನಗರವೆಂದೇ ಇದೆ ನಮ್ಮ ಬಯಲು ಸೀಮೆಯಿಂದ ವಲಸೆ ಹೋಗಿರತಕ್ಕಂಥವರೆಲ್ಲಾ ಅಲ್ಲಿ ವಾಸವಾಗಿದ್ದಾರೆ ಕನಿಷ್ಟ 100 ರೂಪಾಯಿಯನ್ನು ಬಂದರಿನಲ್ಲಿ ಕೂಲಿಕಾರರಾಗಿ ಅವರು ದುಡಿಯುತ್ತಿದ್ದಾರೆ ಈ ದೃಷ್ಟಿಯಿಂದ ನಮ್ಮ ಮುಂದಿರುವ ಆಯ್ಕೆ ನೀವು ತೀರಾ ನೈತಿಕವಾಗಿ ಹೋದರೆ, ನಮ್ಮಲ್ಲಿ ಒಂದು ಗಾದೆ ಮಾತು ಇದೆಯಲ್ಲಾ, ಈ ಸದನ ತಪ್ಪಾಗಿ ಭಾವಿಸುವುದಿಲ್ಲ ಎಂದಾದರೆ ಹೇಳುತ್ತೇನೆ, "ಗರತಿ ಗರತಿ ಎಂದರೆ ಗಂಡನಿಗೆ ಮಾಡಿದಳು" ಎನ್ನುವ

ಒಂದು ಮಾತು ಇದೆ ತೀರಾ ನೈತಿಕತೆ ನೈತಿಕತೆ ಎನ್ನುವಂಥ ಬೋಳೆತನಕ್ಕೆ ಹೋದರೆ ಅಭಿವೃದ್ಧಿಯನ್ನು ಕೈಬಿಡಬೇಕಾಗುತ್ತದೆ ಈ ಯೋಜನೆಗಳನ್ನು ನೀವು ಹೇಳಿದಂತೆ ತಾವು ಮಾಡಲೇಬೇಕಾಗಿರತಕ್ಕಂಥ ಮುಖ್ಯವಾದ ಸಲಹೆ – ಆಯಾ ರಾಜ್ಯ ಸರ್ಕಾರಗಳಿಗೆ ಆ ವಿವೇಚನೆಯನ್ನು ಬಿಟ್ಟುಕೊಡಬೇಕು ಅಲ್ಲಿರುವಂಥ ಜಿಲ್ಲೆಗಳಲ್ಲಿ ಅದರ ವಾಸ್ತವ ಸಂಗತಿಗಳ ಅರಿವಿನ ಮೂಲಕವಾಗಿ ಕೂಲಿಯ ನಿರ್ಧಾರ ಮಾಡತಕ್ಕಂಥದ್ದು ಏನಿದೆ ಆ ಯೋಜನೆಗಳ ವಿವರಗಳನ್ನು ನಿರ್ಧಾರ ಮಾಡತಕ್ಕಂಥದ್ದು ನಮ್ಮ ರಾಜ್ಯಗಳ ವಿವೇಚನೆಗೆ ಬಿಡತಕ್ಕಂಥ ಕೆಲಸ ಆದರೆ ಆ ಕೆಲಸ ನಾವು ಸುಲಭವಾಗಿ ಮಾಡುವುದಕ್ಕೆ ಸಾಧ್ಯತೆ ಆಗುತ್ತದೆ ಇಲ್ಲದೇ ಹೋದರೆ ಎಲ್ಲದಕ್ಕೂ ಒಂದೇ ಮಂತ್ರವಾಗುತ್ತದೆ ಆ ಮಂತ್ರದಿಂದ ಯಾವ ಮಾವಿನ ಕಾಯಿ ಕೂಡ ಉದುರಲಿಕ್ಕೆ ಸಾಧ್ಯವಾಗುವುದಿಲ್ಲ ಇದು ನಮ್ಮ ಮುಂದಿರುವಂಥ ವಾಸ್ತವವಾಗಿರತಕ್ಕಂಥ ಸಂಗತಿ ಈ ಸಂಗತಿಯನ್ನು ಒಪ್ಪುತ್ತೀರಿ ಎಂದಲ್ಲ, ಕನಿಷ್ಟಪಕ್ಷ ಆಂತರಿಕವಾದರೂ ನೀವು ಒಪ್ಪಿಕೊಳ್ಳುತ್ತೀರಿ ಎಂದು ಹೇಳುತ್ತೇನೆ ಏಕೆಂದರೆ ನಿಮ್ಮ ಕ್ಷೇತ್ರವಾದರೂ ಅಭಿವೃದ್ಧಿಯಾಗಬೇಕಲ್ಲಾ ಆ ದೃಷ್ಟಿಯಿಂದ ಹೇಳಿದೆ ಈ ಸಂದರ್ಭದಲ್ಲಿ ಇಷ್ಟನ್ನೇ ನಾನು ತಮ್ಮಲ್ಲಿ ಮನವರಿಕೆ ಮಾಡಿಕೊಳ್ಳಲಿಕ್ಕೆ ನಾನು ಹೇಳುತ್ತಿದ್ದೇನೆ ನಂತರ ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಮಾತನಾಡುತ್ತಾ 2500 ಕೋಟಿ ರೂಪಾಯಿ ಹಣ ಲೂಟಿ ಆಗಿದೆಯೆಂದು ಹೇಳಿದರು ಅದಕ್ಕೇ ಅವರ ಹತ್ತಿರ ಯಾವ ಮಾಹಿತಿ ಇದೆಯೋ ನನಗೆ ಗೊತ್ತಿಲ್ಲ ಯಾವ ಆಧಾರ ಇದೆಯೋ ಗೊತ್ತಿಲ್ಲ ಲೂಟಿ ಆಗಿರುವ ಬಗ್ಗೆ ಆಧಾರ ಇದ್ದರೆ ದಯವಿಟ್ಟು ನಮಗೆ ತಂದು ಕೊಡಿ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು 28 ಕೆ ಜಿ ಅಕ್ಕಿ ಕೊಡುವ ಜಾಗದಲ್ಲಿ ತಾವು 16 ಕೆ ಜಿ 15 ಕೆ ಜಿ 10 ಕೆ ಜಿ ಕೊಡುತ್ತಿದ್ದೀರಿ 10 ಕೆ ಜಿ ಗೋಧಿಯನ್ನು ಏನು ಕೊಡಬೇಕಾಗಿತ್ತೋ ಅದನ್ನು ಕೆಲವು ಭಾಗದಲ್ಲಿ ಕೂಡಲೇ ಇಲ್ಲ ಅವೆಲ್ಲವನ್ನೂ ಕೂಡ ಬ್ಲಾಕ್ ಮಾರುಕಟ್ಟೆಯಲ್ಲಿ ಮಾರಿದ್ದಾರೆ ಅಲ್ಲಿ ಎಷ್ಟು ಅಕ್ಕಿಯನ್ನು ಮಾರಿದ್ದಾರೆ, ಎಷ್ಟು ಗೋಧಿಯನ್ನು ಮಾರಿದ್ದಾರೆ, ಎಷ್ಟು ಪಡಿತರ ಚೀಟಿಗೆ ಕೊಡಲಿಲ್ಲವೆಂದು ತಾವೇ ಲೆಕ್ಕ ಹಾಕಿದರೆ ತಮಗೇ ಲೆಕ್ಕ ಸಿಗುತ್ತದೆ ಹಾಗಾದರೆ 2500 ಕೋಟಿ ರೂ ಆಗಲಿಲ್ಲ ಅಂದರೆ ಎಷ್ಟು ಆಗಿದೆ ಎಂದು ತಾವೇ ಹೇಳಿ ಇಲ್ಲಿಗೆ ಬಂದಿರುವಂಥ ಸದಸ್ಯರುಗಳನ್ನು ತಾವೇ ಕೇಳಿ ಹಳ್ಳಿಗಾಡಿನ ಜನರಿಗೆ 28 ಕೆ ಜಿ ಅಕ್ಕಿಯನ್ನು ಹಳದಿ ಕಾರ್ಡಿನವರಿಗೆ ಕೊಡಬೇಕಾಗಿತ್ತು, ಅದನ್ನು ತಾವು ಕೊಟ್ಟಿದ್ದೀರಾ? ಕಳೆದ ಮೂರು ನಾಲ್ಕು ತಿಂಗಳಿಂದ ಗೋಧಿಯನ್ನು ಪಡಿತರ ಚೀಟಿದಾರರಿಗೆ ಕರೆಕ್ಟಾಗಿ ಕೊಟ್ಟಿದ್ದೀರಾ? ಆ ಅಕ್ಕಿ ಎಲ್ಲಾ ಎಲ್ಲಿ ಹೋಯಿತು? ಆ ಗೋಧಿ ಎಲ್ಲಾ ಎಲ್ಲಿ ಹೋಯಿತು? ಆ ದುಡ್ಡು ಎಲ್ಲಾ ಎಲ್ಲಿಗೆ ಹೋಯಿತು? ತಾವೇ ಹೇಳಿ

ಶ್ರೀ ಎಂ ಪಿ ಪ್ರಕಾಶ ಮಾನ್ಯ ಶಾಸಕರು ನಗರ ಪ್ರದೇಶವನ್ನು ಪ್ರತಿನಿಧಿಸತಕ್ಕಂಥವರು ನಗರ ಪ್ರದೇಶದ ನ್ಯಾಯಬೆಲೆ ಅಂಗಡಿಗಳಿಗೆ ವಿತರಣೆಯಾಗಿರುವಂಥ ವಿಚಾರದ ಬಗ್ಗೆ ಅವರಿಗೆ ಒಂದು ಮಾಹಿತಿ ಇದೆ ಆದರೆ ಹಳ್ಳಿಗಾಡಿನ ಜನಪ್ರತಿನಿಧಿಗಳಿಗೆ ಅಲ್ಲಿಯದೇ ಆದಂಥ ಸಮಸ್ಯೆ ತಮಗೆ ಗೊತ್ತಿಲ್ಲ ನಮ್ಮ ಭಾಗದಲ್ಲಿ ಗೋಧಿಯನ್ನು ನಾವು ವ್ಯಾಪಕವಾಗಿ ಬಳಕೆ ಮಾಡುವುದಿಲ್ಲ ಗೋಧಿಯನ್ನು ಬಳಕೆ ಮಾಡಿದರೆ ಅವರ ಊಟದ ಖರ್ಚು ಹೆಚ್ಚಾಗುತ್ತದೆ ಗೋಧಿಯನ್ನು ರೊಟ್ಟಿಯಂತೆ ಊಟ ಮಾಡುವುದಕ್ಕಾಗುವುದಿಲ್ಲ ಅದರ ಜೊತೆಗೆ ಒಂದೆರಡು ಪಲ್ಯೆವನ್ನಾದರೂ ಇಟ್ಟುಕೊಳ್ಳಬೇಕಾಗುತ್ತದೆ ಗೋಧಿ ಉಷ್ಣಕಾರಕ ಎಂದು ನಮ್ಮ ಭಾಗದಲ್ಲಿ ಒಂದು ನಂಬಿಕೆ ಇದೆ ಆದ್ದರಿಂದ ಈಗಾಗಲೇ 42–43 ಡಿಗ್ರಿ ಸೆಲ್ಸಿಯಸ್ ಅಷ್ಟು ಉಷ್ಣಾಂಶ ಇರತಕ್ಕಂಥ ನಮ್ಮ ಪ್ರದೇಶದಲ್ಲಿ ಗೋಧಿಯನ್ನು ಹೆಚ್ಚಾಗಿ ಬಳಸುವುದಿಲ್ಲ ಆಹಾರದ ರೀತಿ ನೀತಿ ಕ್ರಮಗಳು ಕೂಡ ಆಯಾಯ ಪ್ರದೇಶಕ್ಕೆ ಅನುಗುಣವಾಗಿ

ನಮ್ಮ ಶತಶತಮಾನಗಳ ವಿವೇಕ ಮತ್ತು ವಿವೇಚನೆಗಳ ಮೂಲಕವಾಗಿ ತಯಾರಾಗಿರತಕ್ಕಂಥದ್ದು ಇರುತ್ತದೆ ಆದ್ದರಿಂದ ಉತ್ತರ ಭಾರತದಲ್ಲಿ ಗೋಧಿ ಇದೆ ಎನ್ನುವಂಥದ್ದು ಚಳಿಗಾಲಕ್ಕೆ ಸಂಬಂಧಿಸಿರತಕ್ಕಂಥದ್ದು ಅಲ್ಲಿಯ ಆಹಾರದ ಬಳಸುವಿಕೆಯ ರೀತಿ ಮತ್ತು ಅಲ್ಲಿಯ ಜನಜೀವನದ ಪದ್ಧತಿ ಆದರೆ ಇಲ್ಲಿ ಅದನ್ನು ಕಡಿಮೆಯಾಗಿ ಬಳಸುತ್ತೇವೆ, ಕಡಿಮೆ ಬಳಸುತ್ತೇವೆಂದಾಕ್ಷಣಕ್ಕೆ ಗೋಧಿ ಬರಬಾರದು ಎಂದು ಹೇಳುವುದಕ್ಕೆ ಆಗುವುದಿಲ್ಲ 2500 ಕೋಟಿ ರೂಪಾಯಿಗಳೆಂದು ತಾವೇನು ನಿಖರವಾಗಿ ಹೇಳಿದಿರಿ, ಯಾವ ಲೆಕ್ಕಚಾರದ ಮೇಲೆ ಹೇಳಿದಿರಿ, ಎನ್ನುವುದು ನಮಗೆ ಬೇಕು ಇಲ್ಲಿ 10 ಕೆಜಿ ಕಡಿಮೆ ಕೊಟ್ಟರು, 20 ಕೆಜಿ ಕಡಿಮೆ ಕೊಟ್ಟರು ಇಲ್ಲಿ ಎರಡು ಕೆಜಿ ಕಡಿಮೆ ಕೊಟ್ಟರು ಅಂದರೆ ನಿಮ್ಮ ಇಡೀ ಬೆಂಗಳೂರು ನಗರಕ್ಕೆ ಕೊಟ್ಟಿರುವ ಪಡಿತರ ಪದಾರ್ಥಗಳು ಎಷ್ಟು? ಆ ನ್ಯಾಯಬೆಲೆ ಅಂಗಡಿಗಳಿಗೆ ಬಂದಿರತಕ್ಕಂಥದ್ದು ಎಷ್ಟು? ಹಸಿರು ಕಾರ್ಡುಗಳನ್ನು ಇಟ್ಟುಕೊಂಡಿರುವುದು ಎಷ್ಟು? ಆ ಹಸಿರು ಕಾರ್ಡುಗಳಿಗೆ ವಿತರಣೆ ಮಾಡಿರುವುದರಲ್ಲಿ ಇಂಥ ಲೋಪದೋಷವಾದರೂ ಕೂಡ ಅದರ ಹಣಕಾಸು ಎಷ್ಟರಮಟ್ಟಿಗೆ ಆಗುತ್ತದೆ? ಈ ಎಲ್ಲಾ ಅಂಶಗಳನ್ನು ನೋಡಬೇಕಾಗುತ್ತದೆ ನಾವು ಎಲ್ಲಾ ಉತ್ತರ ಕೊಡುವುದಕ್ಕೆ ರೆಡಿ ಇದ್ದೇವೆ, ಯಾವುದನ್ನೂ ಮುಚ್ಚಿಕೊಳ್ಳುವುದಕ್ಕೆ ತಯಾರಿಲ್ಲದಿರುವುದರಿಂದ, ಈ ಸಂದರ್ಭಗಳಲ್ಲಿ ಅವರು ಹೇಳಿದ ಮಾತಿಗೆ ನಾನು ಹೇಳಿದೆ ಸುಮ್ಮನೆ 2500 ಕೋಟಿ, ರೂ 3500 ಕೋಟಿ ರೂ ಎಂದು ಕೋಟಿಯ ಲೆಕ್ಕಗಳನ್ನು ಅಂಕಿಸಂಖ್ಯೆಗಳನ್ನು.. ಕೊಟ್ಟರೆ ಹೇಗೆ? ನಾನು ಹೇಳುತ್ತೇನೆ I have not yıeld ನಿಮ್ಮವರೇ ಹೇಳಿದರು, ಅನಂತರವೇ ಸ್ಪಷ್ಟೀಕರಣ ಕೇಳಿರಿ ಎನ್ನುವಂಥ ಮಾತು ಹೇಳಿರುವುದರಿಂದ I am not going to yıeld for your sake

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಒಂದು ಗಂಟೆಗಳ ಕಾಲ ಉತ್ತರವನ್ನು ನಿರ್ಗಳವಾಗಿ ಉಪನ್ಯಾಸದ ರೀತಿಯಲ್ಲಿ ಕೊಟ್ಟಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ಉಪನ್ಯಾಸ ಮಾಡುವುದಕ್ಕೇ ನಾವು ಇಲ್ಲಿ ಇರುವುದು

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಹಾವು ಸಾಯಲಿಲ್ಲ, ಕೋಲು ಮುರಿಯಲಿಲ್ಲ ಅಂದ ಹಾಗೆ ಆಗಿದೆ ಈ ಉತ್ತರ, ಇಲ್ಲಿ ಇಷ್ಟು ದೊಡ್ಡ ಹಗರಣವಾಗಿದೆ, ಅದಕ್ಕೆ ಸ್ಪಷ್ಟವಾಗಿ ಸದನದ ಸಮಿತಿ ಮಾಡುವ ವಿಚಾರದಲ್ಲಿ ಹೇಳಲಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ ಬಹಳ ಒಳ್ಳೊಳ್ಳೆಯ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ

ಛೇರ್ಮನ್ ಮೊದಲು ಮಂತ್ರಿಗಳು ಉತ್ತರ ಮುಗಿಸಿಬಿಡಲಿ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಏನಾದರೊಂದು ಆಗಬೇಕು ಹಾವಾದರೂ ಸಾಯಲಿ, ಕೋಲು ಆದರೂ ಮುರಿಯಲಿ, ಸದನದ ಸಮಿತಿ ಮಾಡುತ್ತೀರೋ ಇಲ್ಲವೋ? ಇದೊಂದು ದೊಡ್ಡ ಭ್ರಷ್ಟಚಾರ ನಡೆದಿದೆ,..

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಕಾಗೇರಿಯವರೆ, ಈ ಸದನದಲ್ಲಿ ಕಳೆದಬಾರಿ ತಾವು ಭಾಗವಹಿಸಿದ್ದಿರಿ, ಆ ಸಂದರ್ಭದಲ್ಲಿ ಶ್ರೀಮಾನ್ ಜಗದೀಶ್ ಶೆಟ್ಟರ್‌ವರು ಬರಗಾಲದ ವಿಚಾರದಲ್ಲಿ ಮಾಡಿರತಕ್ಕಂಥ ವಾದದಲ್ಲಿ, ತಾವೂ ಕೂಡ ಆದರಲ್ಲಿ ಭಾಗವಹಿಸಿದ್ದಿರಿ, ಅದೆಲ್ಲ ಇದರಲ್ಲಿ ಇದೆ ಅಲ್ಲಿ ಇಡೀ ಸದನವೂ ಕೂಡ ಈ ಮಿಷನ್‌ಗಳನ್ನು ಉಪಯೋಗಿಸಬಹುದು ಎಂದು ಮಾತನಾಡಿದ್ದರ ಬಗ್ಗೆ ತಾವು ಕಂಡಿದ್ದೀರಿ ಅದೇನೇ ಇರಲಿ, ನಾನು ಈಗ ಉಪದೇಶ ಮಾಡಲಿಕ್ಕೆ ಬಹಳ ಅರ್ಹನೆಂದು ತಿಳಿದುಕೊಂಡಿಲ್ಲ, ಮತ್ತು ನೀವು ಶ್ರವಕರು ಎಂದು ನಾನು ಅಂದುಕೊಂಡಿಲ್ಲ ನೀವೂ ಕೂಡ

ಸಂಜೆಯ ಹೊತ್ತಿನಲ್ಲಿ ಶ್ರವಣವನ್ನು ಕೇಳಲಿಕ್ಕೆ ಬರತಕ್ಕಂಥ ಪ್ರದೇಶದಿಂದ ಬಂದವರು, ನೀವು ಹವ್ಯಕರಾಗಿರುವುದರಿಂದ ನಮಗೆ ಉಪದೇಶ ಮಾಡುವಂಥ ಒಂದು ದೊಡ್ಡ ಜನಾಂಗದಿಂದ ಬಂದಂಥವರು ಆದುದರಿಂದ, ನಾನು ಅಂಥ ಉಪದೇಶವನ್ನು ಹೇಳುವಂಥ ಅರ್ಹತೆಯನ್ನು ಪಡೆದಿಲ್ಲ ಅದುದರಿಂದ,..

ಶ್ರೀ ವಿಶ್ವೇಶ್ವರ ಹಗಡೆ ಕಾಗೇರಿ ಅದರ ಬಗ್ಗೆ ಯಾರು ಯಾರಿಗೆ ಏನೇನು ಮಾಡಿದ್ದಾರೆ ಎನ್ನುವುದರ ಬಗ್ಗೆ ಒಂದು ಉಪನ್ಯಾಸ ಏರ್ಪಡಿಸೋಣ

ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಅವರಿಗೆ ಆ ರೀತಿ ಹೇಳಿದರೆ ನಮ್ಮ ಗತಿ ಏನು?

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಖರ್ಗೆಯವರು ಎಲ್ಲಿಗೆ ಹೋಗಿದ್ದಾರೆಂದು ನನಗೆ ಸ್ವಲ್ಪ ಅನುಮಾನ ಬಂತು ಇದೊಂದು ದೊಡ್ಡ ಸಮಸ್ಯೆಯಾಗಿತ್ತು, ಸಧ್ಯ ಸದನಕ್ಕೆ ನೀವು ಮುಖ ತೋರಿಸಿದಿರಿ, ನೀವು ಎಲ್ಲಿ ಇದ್ದೀರಿ ಎನ್ನುವುದೇ ನಮಗೆ ಅದೇ ಒಂದು ಸಮಸ್ಯೆಯಾಗಿ ಕುಳಿತಿತ್ತು

ಶ್ರೀ ಎಂ ಪಿ ಪ್ರಕಾಶ್ ಈಗ ಅವರು ಮೇಲ್ಮನೆಯ ಸಭಾನಾಯಕರು ಅದುದರಿಂದ ಅದು ನಿಮಗೆ ಬರುವುದಿಲ್ಲ ಅವರು ನಿಮ್ಮ ಗೆಳೆಯರು ?

ಶ್ರೀ ವಾಟಾಳ್ ನಾಗರಾಜ್ ನಮ್ಮಲ್ಲಿಯೇ ಚೆನ್ನಾಗಿತ್ತು ಅವರನ್ನು ಏಕೆ ನೀವು ಮೇಲ್ಮನೆಗೆ ಕಳುಹಿಸಿದಿರಿ?

ಶ್ರೀ ಎಂ ಪಿ ಪ್ರಕಾಶ್ ಆಯಿತು , ಇನ್ನು ಕೇವಲ ನಿಮಿಷದಲ್ಲಿ ನಾನು ಮುಗಿಸುತ್ತೇನೆ

ಶ್ರೀ ಸಿ ಎಸ್ ಈಶ್ವರಗೌಡ ನಮ್ಮ ಧಾರವಾಡ ಜಿಲ್ಲೆಯಲ್ಲಿ ಧಾರವಾಡ ಜಿಲ್ಲಾಧಿಕಾರಿಗಳ

ಶ್ರೀ ಎಂ ಪಿ ಪ್ರಕಾಶ್ ಆಯಿತು ಒಂದು ನಿಮಿಷದಲ್ಲಿ ನಾನು ಮುಗಿಸಿಬಿಡುತ್ತೇನೆ ಖಂಡಿತವಾಗಿಯೂ ಜಂಟಿ ಸದನ ಸಮಿತಿಯ ಮೂಲಕ

ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ನೀವು ಉತ್ತರ ಕೊಡಿ, ನಾನು ಅಮೇಲೆ ಮಾತನಾಡತ್ತೇನೆ, ನಮ್ಮ ಹೊನ್ನಾಳಿ ಶಾಸಕರು ಅಲ್ಲಿ ನಿಂತುಕೊಂಡರು, ನಾವು ಮಾತನಾಡಿ ಹೊರಗಡೆ ಹೋಗುತ್ತಿದ್ದ ಹಾಗೆಯೇ ಕದ್ದು ಲಾರಿ ಸಾಗಿಸುತ್ತಿದ್ದುದ್ದನ್ನು ಈಗ ಸೀಜ್ ಮಾಡಿಸಿದ್ದೇವೆ ಎಂದು ಹೇಳಿದರು ಅಂದರೆ, ಇದು ನಿರಂತರವಾಗಿ ನಡೆಯುತ್ತಿದೆ, ಸಿಒಡಿ ಯವರಿಗೆ ನೀವು ಯಾವುದು ಕೊಟ್ಟಿದ್ದೀರಿ, ಅವರಿಗೆ ಯವುದೋ ಮೇಲ್ನೋಟಕ್ಕೆ ಕಾಣುತ್ತದೆ, ಅದರ ಬಗ್ಗೆ ತನಿಖೆ ಮಾಡಿ ಒಂದು ವರದಿಯನ್ನು ಕೊಟ್ಟರು ನಾನು ಇಲ್ಲವೆಂದು ಹೇಳುವುದಿಲ್ಲ ವ್ಯಾಪಾಕವಾಗಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದರೆ ಒಂದು ರೀತಿ ಜಂಟಿ ಸದನ ಸಮಿತಿ ಎಂದರೆ, ನೀವು ಎನ್‌ಕ್ವಯರಿಗೆ ಹೋದಾಗ ಅದು ರೀತಿ ಜನತಾ ನ್ಯಾಯಾಲಯವಾಗಿ ಪರಿವರ್ತನೆ ಯಾಗುತ್ತದೆ ಜನ ನಿರ್ಭೀತಿಯಿಂದ ಬಂದು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ ಮುಚ್ಚುಮರೆಯಿಲ್ಲದೆ ಧೈರ್ಯವಾಗಿ ಹೇಳುತ್ತಾರೆ, ನೀವೇ ಹೇಳಿದಂತೆ, ಯಾರೋ ಒಬ್ಬ ಅನಾಮಧೇಯ ಹೇಳಿದಂಥ ಆಧಾರದ ಮೇಲೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಮಂಗಳೂರಿನಲ್ಲಿ ಸಿಕ್ಕಿದೆ ಇನ್ನೊಬ್ಬ ಟೆಲಿಫೋನು ಮಾಡಿ ಮಧುಸೂಧನ್‌ಗೆ ಹೇಳಿದ್ದಕ್ಕೆ ಅದರ ಆಧಾರದ ಮೇಲೆ ಸುಮಾರು 5–6 ಗೋಡೌನ್ ಸೀಜ್ ಆಗಿದೆ ಅಂದರೆ ನಾವೇ ಹೋದರೆ ನ್ಯಾಂಪಲ್‌ಗೆಂದು ಒಂದು ಜಿಲ್ಲೆಯಲ್ಲಿ ನಾಲ್ಕಾರು ಕಡೆಗಳಲ್ಲಿ ನಮ್ಮ ಕಿವಿಗೆ ಬಿದ್ದಕಡೆ ಹೋದರೆ ಈ ರೀತಿಯ ಅನೇಕ ಹಗರಣಗಳು ಇನ್ನು ಯಾರ್ಯಾರು ಇದ್ದಾರೆನ್ನುವುದು ಬಹಿರಂಗವಾಗುತ್ತದೆ ಜಂಟಿ ಸದನ ಸಮಿತಿಯ ಇತಿಮಿತಿಗಳು ನಮಗೆ ಗೊತ್ತಿವೆ ಆದರೆ ನೀವು ಎಷ್ಟು ಪ್ರಭಾವಿತರಾಗಿ ವಿಧಾನ ಪರಿಷತ್ ಸದಸ್ಯರಾಗಿ

ಜಂಟಿ ಸದನ ಸಮಿತಿಯಿಂದ ಯಾವ ರೀತಿ ಅನುಕೂಲವಾಗುತ್ತದೆಂದು ನೀವು ಮಾಡಿರತಕ್ಕಂಥ ಭಾಷಣವೂ ನನ್ನ ಹತ್ತಿರ ಇದೆ ಅಥವಾ ಇಲ್ಲಿ ವಿರೋಧ ಪಕ್ಷದಲ್ಲಿ ಇದ್ದಾಗ ಮಾತನಾಡಿರುವುದು ಇದೆ ನಮಗೇನು ತೊಂದರೆ ಎಂದರೆ, ಸಾಕಷ್ಟು ಎಲ್ಲವನ್ನೂ ಬಿಳಿಯದನ್ನು ಕಪ್ಪು ಕಪ್ಪನ್ನು ಬಿಳಿ ಮಾಡುವಂಥ ಒಂದು ರೀತಿಯಲ್ಲಿ ಮಾತನಾಡುವಂಥ ಶಕ್ತಿಯಿರುವಂಥ ನೀವು, ಅಲ್ಲಿ ಕುಳಿತಿರುವುದರಿಂದ ನಮಗೆ ಸ್ವಲ್ಪ ಮುಜುಗರವಾಗಿದೆ ಅದಕ್ಕೆ ಅವರು ಹೇಳಿದ್ದು, ಉಪನ್ಯಾಸ ಎಂದರೆ, ಈ ಭಾಗದ ಸದಸ್ಯರಿಗೆ ಮಾಡಿದಿರೋ ಅಥವಾ ಆಡಳಿತ ಪಕ್ಷದ ಮಂತ್ರಿಗಳಾಗಿ ಭಾಷಣ ಮಾಡುತ್ತಿದ್ದೀರೋ ಇದಕ್ಕೆ ಪರಿಹಾರ ಏನು? ಸಿಓಡಿಯವರು ಯಾವತ್ತು ತನಿಖೆ ಪ್ರಾರಂಭ ಮಾಡಿದಿರೋ ಅವತ್ತಿನಿಂದ ಇವತ್ತಿನವರೆಗೂ ಹೇಳಿದ್ದೀರಿ, ಆದರೆ ಹಿಂದಿನದು ಏನು? ನಿಮ್ಮ ಅಧಿಕಾರಿಯನ್ನು ನೇಮಿಸಿದ್ದೀರಿ, ಅವರೇನು ವರದಿ ಕೊಟ್ಟಿದ್ದಾರೆ? ಇದು ಯಾವುದೂ ಪ್ರಸ್ತಾಪವಾಗಿಲ್ಲ ಚೆಕ್ ಪೋಸ್ಟ್‌ಗಳೇನು ಕೆಲಸ ಮಾಡುತ್ತಿವೆ? ನ್ಯಾಯ ಬೆಲೆ ಅಂಗಡಿಗಳಲ್ಲಿ ಡೂಪ್ಲಿಕೇಟ್ ಕಾಡು ಇಟ್ಟುಕೊಂಡು ವೋಸ ಹೇಗೆ ನಡೆಯುತ್ತದೆ? ನಿಮ್ಮ ಭಾಗದಲ್ಲಿ ಏನೂ ಗೋಧಿ ಉಪಯೋಗಿಸುವುದಿಲ್ಲ ಅಲ್ಲಿ ಗೋಧಿ ಅಲಾಟ್ ಆಗಿದಿಯೋ ಇಲ್ಲವೋ? ಗೋಧಿ ಅಲಾಟ್ ಆಗಿದ್ದರೆ ಅಲ್ಲಿ ಉಪಯೋಗಿಸಿಲ್ಲ ಎಂದರೆ ಆ ಗೋಧಿ ಎಲ್ಲಿ ಹೋಯಿತು? ಹೀಗೆ ಅನೇಕ ಪ್ರಶ್ನೆಗಳನ್ನು ಹಿಡಿದು ಇದರ ಪದ್ಧತಿಯನ್ನು ಸರಿಮಾಡಿ ಮುಂದೆ ಇದು ಆಗದೇ ಇರುವಂತೆ ನೋಡಿಕೊಳ್ಳಬಹುದೇನೋ ಎನ್ನುವ ಕಳಕಳಿ ನಮ್ಮದು ತಾವು ಉತ್ತರ ಕೊಡಿ, ಅಮೇಲೆ ಕೇಳುತ್ತೇನೆ

ಶ್ರೀ ಸಿ ಎಸ್ ಈಶ್ವರಗೌಡ ನಿನ್ನೆ ಧಾರವಾಡದ ಜಿಲ್ಲಾಧಿಕಾರಿಗಳು 186 ಕ್ವಿಂಟಾಲ್ ಅಕ್ಕಿಯನ್ನು ಹಿಡಿದಿದ್ದಾರೆ ಇವತ್ತು ಇಲ್ಲಿ ಕರ್ನಾಟಕದ ಎಲ್ಲಾ ಭಾಗಗಳದ್ದು ಚರ್ಚೆ ನಡೆಯುತ್ತಿದೆ, ಮಿಕ್ಕ ಜಿಲ್ಲಾಧಿಕಾರಿಗಳಿಂದ ರಿಪೋರ್ಟ್ ತರಿಸಿಕೊಳ್ಳಿ

ಶ್ರೀ ಎಂ ಪಿ ರೇಣುಕಾಚಾರ್ಯ (ಹೊನ್ನಾಳಿ) ಮಾನ್ಯ ಅಧ್ಯಕ್ಷರೆ, ರೂಲ್ 69ರ ಪ್ರಕಾರ ಬೆಳಿಗ್ಗೆಯಿಂದ ಚರ್ಚೆ ನಡೆದಿದೆ, ವಿಧಾನ ಸಭೆಯಲ್ಲಿ ಯಾವ ರೀತಿ ಆಗಿದೆ ಎಂದರೆ, ರಾತ್ರಿಯೆಲ್ಲಾ ರಾಮಯಾಣ ಕೇಳಿ ಬೆಳಿಗ್ಗೆ ರಾಮ, ಸೀತೆಗೆ ಏನು ಆಗಬೇಕು ಎಂದು ಕೇಳಿದ ರೀತಿ ಆಗಿದೆ ಇಲ್ಲಿ ಚರ್ಚೆ ಮಾಡುತ್ತೇವೆ, ಹೊನ್ನಾಳ್ಳಿಯಲ್ಲಿ ಎರಡು ಲೋಡ್ ಅಕ್ಕಿ ಸಿಕ್ಕಿದೆ ನಮ್ಮ ಕಾರ್ಯಕರ್ತರು, ಕಾಂಗ್ರೆಸ್‌ನ ಜಿಲ್ಲಾ ಪಂಚಾಯತ್ ಸದಸ್ಯರು ಅವರ ಮನೆಯಲ್ಲಿ ಸ್ವತಃ ಗೋಡೌನ್‌ನಲ್ಲಿ ಇದ್ದ ಅಕ್ಕಿ ಲಾರಿಯಲ್ಲಿ ಟ್ರಾನ್ಸ್‌ಪೋರ್ಟ್ ಮಾಡುವಾಗ ಹಿಡಿಯುತ್ತಾರೆ, ಲಾರಿ ಸಂಖ್ಯೆನೂ ಕೂಡ ಇದೆ ಎಂ ಹೆಚ್ 09 ಎಲ್ 5045 ಇನ್ನೊಂದು ಲಾರಿನೂ ಬರುತ್ತಿದೆ, ಈ ರೀತಿ ಆಗುತ್ತಿದ್ದರೆ, ಈ ರಾಜ್ಯದಲ್ಲಿ ಶ್ರೀ ಸಮಾನ್ಯರನ್ನು, ಬಡಜನರನ್ನು ಯಾರು ರಕ್ಷಣೆ ಮಾಡುತ್ತಾರೆ?

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಸಚಿವರು) ಮಾನ್ಯ ಸದಸ್ಯರು ಹೇಳಿರುವಂತೆ ಅವರ ಜಿಲ್ಲಾಧಿಕಾರಿಯವರ ಜೊತೆಗೆ ನಾನು ಮಾತನಾಡಿದ್ದೇನೆ, ಆ ಲಾರಿಯ ಸಂಖ್ಯೆಯನ್ನು ನಾನು ಬರೆಸಿಕೊಳ್ಳಲಿಲ್ಲ, ಆದರೆ ಹೊನ್ನಾಳ್ಳಿಯಲ್ಲಿ ಆದಂಥ ಪ್ರಕರಣಕ್ಕೆ ನೀವು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ ಮಾನ್ಯ ಸದಸ್ಯರು ಅದರ ಮಾಹಿತಿಯನ್ನು ಕೊಟ್ಟರೆ ಕೂಡಲೇ ಕ್ರಮವನ್ನು ಕೈಗೊಳ್ಳುತ್ತೇನೆ ಈಗ ನಾನು ಕೊನೆಯ ಹಂತಕ್ಕೆ ಬಂದಿದ್ದೇನೆ,

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ತಾವು ಸ್ವಲ್ಪ ತೆಗೆದುಕೊಳ್ಳಿ ಈಗ ಜಂಟಿ ಸದನದ ಸಮಿತಿ ರಚನೆ ಮಾಡುವುದರಲ್ಲಿ ಪ್ರತಿಷ್ಟೆ ಇಲ್ಲ ಎನ್ನುವ ಮಾತು ಹೇಳಿದಿರಿ ಜಂಟಿ ಸದನ ಸಮಿತಿ ರಚನೆ ಮಾಡುವುದರಿಂದ ಯಾರಿಗೈ ಬಾಧಕವಾಗುವುದಿಲ್ಲ ಎನ್ನುವ ನಂಬಿಕೆ ನಿಮ್ಮ

ಮನಸ್ಸಿನಲ್ಲಿದೆ, ಯಾರು ಇದಕ್ಕೆ ಮೂಲಭೂತವಾಗಿ ಜಂಟಿ ಸಲಹಾ ಸಮಿತಿ ಬಂದಾಗ ನಾವು ಯವ್ಯಾವ ಸ್ಥಳಕ್ಕೆ ಹೋಗ ಬೇಕೆಂದು ಅದಕ್ಕೊಂದು ನೀವು ಕಾಳ ಮಿತಿ ಹಾಕಿ ತಿಂಗಳಾನುಗಟ್ಟಲೆ, ವರ್ಷಾನುಗಟ್ಟಲೆ ಆಗುವುದು ಬೇಡ, ಇಷ್ಟು ದಿವಸದೊಳಗೆ ಒಂದು ವರದಿಯನ್ನು ಕೊಡಬೇಕು, ವರದಿಯನ್ನು ಕೊಡಬೇಕಾದರೆ ಏನೇನು ಅಂಶಗಳು ಅದರಲ್ಲಿ ಇರಬೇಕು ಅದನ್ನು ತಾವು ಯೋಚಿಸಿ ಈ ರಾಜ್ಯದ ಜನ ನೋಡುತ್ತಿದ್ದಾರೆ, ಇವತ್ತು ಶಾಸನ ಸಭೆಯಲ್ಲಿ ಈ ದೊಡ್ಡ ಹಗರಣದ ಬಗ್ಗೆ ಸಮಗ್ರವಾಗಿ ಚರ್ಚೆಯಾಗಿದೆ, ಇದರಲ್ಲಿ ಅನೇಕ ಜನ ಪಾಲುದಾರರು ಆಗಿದ್ದಾರೆ, ಅದುದರಿಂದ ಸದನದಲ್ಲಿ ಇಷ್ಟೆಲ್ಲಾ ನಡೆದಾಗ, ಸಿಓಡಿ ತನಿಖೆಯನ್ನು ಮೊದಲೇ ಪ್ರಾರಂಭ ಮಾಡಿದ್ದೀರಿ, ಅದರ ಬಗ್ಗೆ ತಕರಾರು ಇಲ್ಲ, ನಾವು ಸಿಓಡಿ ಅಧಿಕಾರಿಗಳನ್ನಾಗಲಿ, ಇನ್ನೊಬ್ಬರನ್ನಾಗಲಿ ಟೀಕೆ ಮಾಡಲೇ ಇಲ್ಲ ಜಂಟಿ ಸಲಹಾ ಸಮಿತಿ ಮಾಡುವುದರಿಂದ, ವಿರೋಧ ಪಕ್ಷಗಳು ಮತ್ತು ಅನೇಕರು ಇಲ್ಲಿ ಚರ್ಚೆ ಮಾಡಿ ವಿಚಾರವನ್ನು ತಂದಾಗ ಸಾರ್ವಜನಿಕರಿಗೆ ಒಂದು ದೊಡ್ಡ ನಂದೇಶ ಹೋಗುತ್ತದೆ ಹೌದಪ್ಪ, ಇಲ್ಲಿ ಏನೋ ನಡೆದಿರುವುದಕ್ಕೆ ಜಂಟಿ ಸದನ ಸಮಿತಿ ರಚನೆಯಾಗಿದೆ ಅಂದುಕೊಳ್ಳುತ್ತಾರೆ ಈ ರೀತಿ ಅನೇಕ ವಿಚಾರಗಳಲ್ಲಿ ಅನೇಕ ಸಂದರ್ಭಗಳಲ್ಲಿ ಸಮಿತಿ ರಚನೆಯಾಗುತ್ತದೆ ಹೀಗೆ ಅನೇಕ ಸಂದರ್ಭಗಳಲ್ಲಿ ಸಮಿತಿ ರಚನೆಯಾಗುವುದರಿಂದ, ನಾಣು ಮಾನ್ಯ ಮುಖ್ಯಮಂತ್ರಿಗಳಲ್ಲಿ ಹಾಗೂ ತಮ್ಮಗಳಲ್ಲಿ ಮನವಿ ಮಾಡುವುದೇನೆಂದರೆ, ಇದನ್ನು ಪ್ರತಿಷ್ಟೆ ಪ್ರಶ್ನೆ ಮಾಡಿ ಕೊಂಡು ನೀವು ಇಲ್ಲ ಎನ್ನುವುದು, ನಾವು ಪುನಃ ಅಲ್ಲಿಗೆ ಬರುವುದು, ನಾವು ಕುಳಿತುಕೊಳ್ಳುವುದು ಧರಣಿ ಮಾಡುವುದು, ಇದು ಎಲ್ಲಾ ಆದಮೇಲೆ ಕೊನೆ ಅಧ್ಯಕ್ಷರ ಕೊರಡಿಗೆ ಕರೆಯುವುದು ಅಂತಿಮವಾಗಿ ಒಪ್ಪಿಕೊಳ್ಳುವುದು ಇವೆಲ್ಲವೂ ಬೇಡ ಈ ರಗಳೆ ರಂಪ ಬೇಡ, ನೇರವಾಗಿ ಜಂಟಿ ಸಲಹಾ ಸಮಿತಿಗೆ ತಾವು ಹೋಗಿ ಅದರಿಂದ ಏನೂ ಸಾಧಕ ಬಾಧಕಗಳೇನೂ ಆಗುವುದಿಲ್ಲ, ಅನುಕೂಲಗಳು ಆಗುತ್ತವೆ, ಅದರಿಂದ ತಮಗೂ ಗೌರವ ಬರುತ್ತದೆ, ಮತ್ತು ತಾವೇನು ಎರಡು ಪಕ್ಷದವರು ಸೇರಿ ಸರ್ಕಾರ ರಚನೆ ಮಾಡಿದಿರಿ, ಹೌದಪ್ಪ ಈ ವಿಚಾರಲ್ಲಿ ಬಹಳ ಪ್ರಮಾಣಿಕವಾಗಿ ನಡೆದುಕೊಂಡಿದ್ದಾರೆ, ಎನ್ನುವ ಹೆಗ್ಗಳಿಕೆಗೆ ತಾವು ಗುರಿಯಾಗುತ್ತೀರಿ, ಅದುದರಿಂದ ತಾವು ಮೊದಲು ಜಂಟಿ ಸಲಹಾ ಸಮಿತಿ ಮಾಡಿ ಬಹಿರಂಗ ವಿಚಾರಣೆ ಅಮೇಲೆ ನಡೆಸುತ್ತೇವೆಂದು ಹೇಳಿದಿರಿ, ಸಲಹಾ ಸಮಿತಿಯ ಯಾವುದೋ ಒಂದು ವರದಿ ಬಂದ ಮೇಲೆ ಬಹಿರಂಗ ವಿಚಾರಣೆ, ತಾವು ಅದನ್ನು ಎಲ್ಲಿ ನಡೆಸಬೇಕು ಎಂಬುದನ್ನು ನಂತರ ತೀರ್ಮಾನಿಸಿ ತಮಗೆ ಗೊತ್ತಿರಬೇಕು ಇಂದಿರಾಗಾಂಧಿಯವರ ಮೇಲೆ ವಿಚಾರಣೆ ನಡೆದಾಗ, ಆ ವಿಚಾರಣೆ ಟೌನ್ ಹಾಲ್‌ನಲ್ಲಿ ನಡೆಯಿತು, ಪುರಸಭೆಯಲ್ಲಿ ನಡೆಯಿತು, ಅಲ್ಲಿ ಸಾವಿರಾರು ಜನರು ಸೇರಿದರು, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಇದು ಎಲ್ಲಿ ನಡೆಯಬೇಕೋ ನಡೆಯಲಿ, ನ್ಯಾಯಾಲಯದಲ್ಲಿ ನಡೆದರೂ ಅದು ಬಹಿರಂಗವೇ, ಏನು ಸ್ವಲ್ಪ ವಿಶಾಲವಾಗಿ ಸಾವಿರಾರು ಜನರು ಸೇರಲಿ ರನ್ನುವ ಉದ್ದೇಶದಿಂದ ಬಹಿರಂಗ ವಿಚಾರಣೆ ಎಂದು ಹೇಳಿದರೆ ಅದಕ್ಕೊಂದು ಅರ್ಥ ಬರುತ್ತದೆ ಎಂದು ಹೇಳಿದ್ದಾವು ತಾವು ನೆಡೆಸುವುದು ಬಿಡುವುದು ಅಮೇಲೆ ನೋಡಿಕೊಳ್ಳೋಣ ಜಂಟಿ ಸಲಹಾ ಸಮಿತಿ ಬಗ್ಗೆ ತಾವು ತೀರ್ಮಾನಕ್ಕೆ ಬನ್ನಿ, ಬರುವುದು ಒಳ್ಳೆಯದು, ಎಲ್ಲಾ ದೃಷ್ಟಿಯಿಂದ ಇದಕ್ಕೆ ಶಕ್ತಿ ಬರುತ್ತದೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ

4 20 ಪಿಎಂ

ಶ್ರೀ ಗೋವಿಂದ ಎಂ ಕಾರಜೋಳ (ಮುಧೋಳ) ಮಾನ್ಯ ಛೇರ್ಮನ್‌ರ, ಮಾನ್ಯ ಸದಸ್ಯರಾದ ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು 2500 ಕೋಟಿ ರೂ ಗಳ ಒಂದು ಹಗರಣದ

ಈ ಪ್ರಕರಣದಲ್ಲಿ ಅಡಗಿದೆ ಎಂದು ಹೇಳಿದ್ದಾರೆ ಅದಕ್ಕಾಗಿ ತಮ್ಮಲ್ಲಿ ಅಂಕಿಅಂಶ ಇದ್ದರೆ ಲೆಕ್ಕವನ್ನು ಕೊಡಿ, ತಮಗೆ ಆಧಾರವನ್ನು ನಾನು ಹೇಳುತ್ತೇನೆ, ಪ್ರತಿ ತಿಂಗಳು ಪ್ರತಿಯೊಂದು ಕಾರ್ಡಿಗೆ 26 ಕೆಜಿ ಅಕ್ಕಿಯನ್ನು ಕೊಡುವುದು ರೂಢಿಯಲ್ಲಿದೆ 78 ಲಕ್ಷ ಜನ ಪಡಿತರ ಚೀಟಿದಾರರು ಈ ರಾಜ್ಯದಲ್ಲಿದ್ದಾರೆ 26 ಕೆಜಿ ಅಕ್ಕಿಯನ್ನು ಯಾವ ರೇಷನ್ ಅಂಗಡಿಯವರೂ ಕೊಡುವುದಿಲ್ಲ, ಅವರು ಪ್ರತಿಯೊಂದು ಕಾರ್ಡಿಗೆ 15 ಅಥವಾ 16 ಕೆಜಿ ಯನ್ನು ಕೊಡುತ್ತಾರೆ ಅಂದಮೇಲೆ ಪ್ರತಿ ತಿಂಗಳು ಸುಮಾರು 8ಕೋಟಿ 80 ಲಕ್ಷ ಕೆಜಿ ಅಕ್ಕಿಯನ್ನು ಅವರು ಉಳಿತಾಯ ಮಾಡಿದಂತಾಗುತ್ತದೆ ಒಂದು ಕೆಜಿ ಅಕ್ಕಿಗೆ 6–00 ರೂ ಗಳಂತೆ ಹಿಡಿದರೂ ಕೂಡ ಒಂದು ತಿಂಗಳಿಗೆ ಅವರು 48 ಕೋಟಿ ರೂ ಗಳನ್ನು ಕದ್ದಂತಾಯಿತು 12X48 ಅಂದರೆ ಸುಮಾರು ಪ್ರತಿ ವರ್ಷ 576 ಕೋಟಿ ರೂ ಗಳಷ್ಟು ಆಗುತ್ತದೆ ಸುಂಆರು ನಾಲ್ಕೂವರೆ ವರ್ಷಗಳ ಕಾಲ ಈ ರಾಜ್ಯದಲ್ಲಿ ಕಾಂಗ್ರೆಸ್‌ನವರು ಸರ್ಕಾರವನ್ನು ನಡೆಸಿರುತ್ತಾರೆ 576 ಕೋಟಿ ರೂ ಗಳಂತೆ ನಾವು ನಾಲ್ಕೂವರೆ ವರ್ಷಕ್ಕೆ ಲೆಕ್ಕವನ್ನು ಹಾಕಿದರೆ ಸುಮಾರು 2880 ಕೋಟಿ ರೂ ಗಳಷ್ಟು ಈ ರಾಜ್ಯದಲ್ಲಿ ಲೂಟಿಯಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ

ಶ್ರೀ ಎ ಕೃಷ್ಣಪ್ಪ (ವರ್ತೂರು) ಮಾನ್ಯ ಛೇರ್ಮನ್‌ರೆ, ನಾಲ್ಕೂವರೆ ವರ್ಷ ಯಾರು ರೇಷನ್ ಡಿಪೋದಲ್ಲಿ ಅಕ್ಕಿಯನ್ನು ದವಸಧಾನ್ಯವನ್ನು ಡ್ರಾ ಮಾಡಲಿಲ್ಲವೇ? ಹೇಳುವುದಕ್ಕು ಒಂದು ಮಿತಿಯನ್ನು ಇಟ್ಟುಕೊಳ್ಳಿ, ಒಂದು ಕಂಟ್ರೋಲ್‌ನ್ನು ಇಟ್ಟುಕೊಂಡು ಹೇಳಿ ಸ್ವಾಮಿ, ಯಾರಾದರೂ ಜಗತ್ತಿನಲ್ಲಿ ನಂಬುವಂತಹ ಸ್ಟೇಟ್‌ಮೆಮಟನ್ನು ಮಾಡಿ

ಶ್ರೀ ಗೋವಿಂದ ಎಂ ಕಾರಜೋಳ ಮಾನ್ಯ ಕೃಷ್ಣಪ್ಪನವರೆ, ನಾನು ಅಕ್ಕಿಯನ್ನು ಕೊಟ್ಟೆ ಇಲ್ಲವೆಂದು ಹೇಳಲಿಲ್ಲ, 26 ಕೆಜಿ ಅಕ್ಕಿಯ ಬದಲಾಗಿ 15 ರಿಂದ 16 ಕೆಜಿ ಅಕ್ಕಿಯನ್ನು ಕೊಟ್ಟಿದ್ದೀರಿ, ಪ್ರತಿ ಕಾರ್ಡಿನಿಂದ 10 ಕೇಜಿ ಅಕ್ಕಿಯನ್ನು ಕೊಟ್ಟಿಲ್ಲವೆಂದು ಹೇಳಿದ್ದೇನೆ ನಾಲ್ಕೂವರೆ ವರ್ಷದಲ್ಲಿ 2880 ಕೋಟಿ ರೂ ಗಳಷ್ಟು ಅಕ್ಕಿಯನ್ನು ಲೂಟಿ ಮಾಡಿದ್ದು ಸತ್ಯವಿದೆ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು (ವಿರಾಜಪೇಟೆ) ಮಾನ್ಯ ಛೇರ್ಮನ್‌ರೆ, ನಿಖರವಾದ ಒಂದು ಅಂಕಿ ಅಂಶವನ್ನು ನಾನು ಈ ಸದನಕ್ಕೆ ಕೊಡುತ್ತೇನೆ ನನ್ನ ತಾಲ್ಲೂಕಿನಲ್ಲಿ ಆಗಿರುವುದು ಅದು ಯಾವಾಗ ಅಂದರೆ ಏಪ್ರಿಲ್–ಮೇ, ಈ ಎರಡು ತಿಂಗಳಲ್ಲಿಯೇ ನನ್ನ ತಾಲ್ಲುಕಿನಲ್ಲಿ ಎತ್ತುವಳಿಯಾಗದಿರುವಂಥ ಅಂಕಿ ಅಂಶವನ್ನು ಈ ಸದನಕ್ಕೆ ನಾನು ಕೊಡುತ್ತೇನೆ ಇದನ್ನು ನೀವೇ ಲೆಕ್ಕಚಾರವನ್ನು ಹಾಕಿಕೊಳ್ಳಿ, ಏಪ್ರಿಲ್ ತಿಂಗಳಲ್ಲಿ ನಮ್ಮ ವಿರಾಜಪೇಟೆ ತಾಲ್ಲೂಕಿನಲ್ಲಿ 1485 ಕ್ವಿಂಟಲ್ ಅಕ್ಕಿ ಎತ್ತುವಳಿಯಾಗಿಲ್ಲ, ಅದೇ ರೀತಿ ಗೋಧಿ 725 ಕ್ವಿಂಟಲ್ ಎತ್ತುವಳಿಯಾಗಿಲ್ಲ, ಮತ್ತೆ ಮೇ ತಿಂಗಳಿಗೆ ಬರುತ್ತೇನೆ, 2755 ಕ್ವಿಂಟಲ್ ಅಕ್ಕಿ ಎತ್ತುವಳಿಯಗಿಲ್ಲ, 715 ಕ್ವಿಂಟಲ್ ಗೋಧಿ ಎತ್ತುವಳಿಯಾಗಿಲ್ಲ, ಎರಡು ತಿಂಗಳದ್ದು ಮಾತ್ರ ನಾನು ಕೊಡುತ್ತೇನೆ, ಏಕೆಂದರೆ ಹಿಂದಿನ ವಿಧಾನಸಭೆಯಲ್ಲಿ ನಾನು ಈ ಸದನದ ಸದಸ್ಯನಾಗಿ ಇರಲಿಲ್ಲ, ಎರಡು ತಿಂಗಳ ಅಂಕಿ ಅಂಶಗಳನ್ನು ನಾನು ನಿಮ್ಮ ಗಮನಕ್ಕೆ ಕೊಡುತ್ತಿದ್ದೇನೆಂದರೆ, ಎರಡು ತಿಂಗಳಲ್ಲಿ ನನ್ನ ತಾಲ್ಲೂಕಿನಲ್ಲಿ ಈ ರೀತಿಯಾಗಿದೆ ಎಂದರೆ ಇನ್ನು ಉಳಿದ ತಾಲ್ಲೂಕುಗಳಲ್ಲಿ ಏನಾಗಿದೆ?

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಛೇರ್ಮನ್‌ರೆ, ಈ ಪ್ರಶ್ನೆ ಬಂದಿರತಕ್ಕಂಥದ್ದು ಬಹಳ ಅವೈಜ್ಞಾನಿಕವಾಗಿ, ಇದರ ಬಗ್ಗೆ ಚರ್ಚೆಯನ್ನು

ಮಾಡಿದ್ದೀರಿ ನಮ್ಮಲ್ಲಿ ಇರತಕ್ಕಂಥ ಎಷ್ಟು ಬೇಡಿಕೆ ಇದೆ, ಅದರಲ್ಲಿ 50 ಭಾಗ ಮಾತ್ರ ಅಲಾಟ್‌ಮೆಂಟ್ ಕೊಡುತ್ತೇವೆ, ಈ ಅಂಕಿ ಅಂಶಗಳು ಸ್ಟಾಟಿಸ್ಟಿಕಲ್ ಲೈಯ್ಸ್, ಇವು ಬಹಳ ಸುಲಭ, of all lies, which is more powerful? ಅಂದರೆ, statistal lies which is more powerful ಆದ್ದರಿಂದ ಈ ಅಂಕಿ ಅಂಶಗಳಿಂದ ದಾರಿಯನ್ನು ತಪ್ಪಿಸಲಿಕ್ಕೆ ನಮಗೆ ಬಹಳ ಉಪಕಾರಿಯಾಗುತ್ತವೆ ಅದು ನಿಮಗೆ ಎಂದು ಅಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಮಾನ್ಯ ಛೇರ್‌ಮನ್‌ರೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ತಾವು ಒಂದು ನೋಟ್ ಮಾಡಿ ಕೊಂಡು ಸ್ವಲ್ಪ ಯೋಚನೆಯನ್ನು ಮಾಡಿಅವರು ಒಬ್ಬ ಶಾಸಕರಾಗಿ, ಎರಡು ತಿಂಗಳಲ್ಲಿ ಎಷ್ಟು ಎತ್ತುವಳಿಯಗಬೇಕು, ಎಷ್ಟು ಆಗಿಲ್ಲ ಎನ್ನುವುದರ ಬಗ್ಗೆ ಹೇಳಿದರು ನಾನು ನಿಮಗೆ ಹೇಳುತ್ತೇನೆ, ಬಹಳ ಕಡೆ ಶ್ರೀಮಂತ ವರ್ಗದವರು ಕಾರ್ಡ್‌ನ್ನು ತೆಗೆದುಕೊಂಡಿದ್ದಾರೆ ಅವರು ಯಾರು ಅಕ್ಕಿ, ಗೋಧಿಯನ್ನು ತೆಗೆದುಕೊಳ್ಳುತ್ತಿಲ್ಲ ಬಹಳ ಸುಲಭವಾಗಿ ಮಾರ್ಕೆಟ್‌ನಲ್ಲಿ ಸಿಗುತ್ತವೆ, ಯವುದು ಸಿಗುತ್ತಿದೆ ಈ ರೀತಿ ಕಾಳಸಂತೆಯಲ್ಲಿ ಮಾರಾಟ ಮಾಡಿದ್ದು ಇವತ್ತು ರೈತನಿಗೂ ಒಳ್ಳೆಯ ರೇಟ್ ಸಿಗುತ್ತಿಲ್ಲ ಸಂತೆಯ ಕಲ್ಪನೆ ನಿಮಗೆ ಗೊತ್ತಿದೆ, ಪ್ರತಿ ವಾರಕ್ಕೊಮ್ಮೆ ಅಲ್ಲಿ ಯಾರೂ ಅಕ್ಕಿ, ಗೋಧಿಯನ್ನು ಕೊಂಡು ಕೊಳ್ಳುವುದಕ್ಕೆ ಹೋಗುವುದನ್ನೇ ಬಿಟ್ಟುಬಿಟ್ಟಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಪಕ್ಷದ ನಾಯಕರು ನಮ್ಮಂತೆ ಅವರೂ ಕೂಡ ಹಳ್ಳಿಯಿಂದ ಬಂದವರು ನೀವು ಆಗಿರುವುದರಿಂದ ಸಮಸ್ಯೆಯ ಒಂದು ಮುಖವನ್ನು ಮಾತ್ರ ತಾವು ಪರಿಶೀಲಸಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೀರಿ ವಿತರಣೆಗೆ ಕೊಡಬೇಕಾಗಿರತಕ್ಕಂಥ ನಮ್ಮ ಒಟ್ಟು ಅಲಾಟ್‌ಮೆಂಟ್ ಏನಿದೆ, ಅದರಲ್ಲಿ ಶೇಕಡಾ 50 ಭಾಗವನ್ನು ಮಾತ್ರ ನಾವು ವಿತರಣೆಯನ್ನು ಮಾಡುತ್ತೇವೆ ಮಾನ್ಯ ಬಸವಣ್ಣಿಪ್ಪನವರು ವಿರೋಧ ಪಕ್ಷದಲ್ಲಿ ಕುಳಿತಿದ್ದಾರೆ, ಅವರು ಆಹಾರ ಸರಬರಾಜು ಮಂತ್ರಿಗಳಾಗಿದ್ದರು ಅವರ ಅನುಭವವನ್ನು ತಾವು ದಯವಿಟ್ಟು ಕೇಳಿ 50 ಪರ್ಸೆಂಟ್‌ನ್ನು ಕೊಡುತ್ತೇವೆ, ಅಲ್ಲಿ ಹೆಚ್ಚಿನ ಬೇಡಿಕೆ ಇದ್ದಾಗ, 28 ಕೆಜಿಯ ಗರಿಷ್ಟ ಮಿತಿಗೆ ನಾವು ಅದನ್ನು ಕೊಡುತ್ತೇವೆ ಅಲ್ಲಿ ಹಸಿರು ಕಾರ್ಡಿದೆ ಎಂದಾಕ್ಷಣ ನಾವು ಎಲ್ಲವನ್ನೂ ಕೊಡುವುದಿಲ್ಲ ಆ 28 ಕೆಜಿ ಅಕ್ಕಿಯ ಗರಿಷ್ಠ ಮಿತಿಗೆ ಬೇಡಿಕೆಗೆ ಅನುಗುಣವಾಗಿ ಇಲ್ಲಿ ಬಿಡುಗಡೆ ಯಗುತ್ತದೆ ತಮಗೆ ಗೊತ್ತಿರುವಂತೆ, ಹಸಿರು ಕಾರ್ಡು ಇರುವಂಥವರು ಪ್ರಾಜ್ಞರಾದವರು ಇತ್ತೀಚಿನ ದಿನಮಾನಗಳಲ್ಲಿ ಹಸಿರು ಕಾರ್ಡ್ ಇರತಕ್ಕಂಥವರು 28 ಕೆಜಿಯೋ ಅಥವಾ 15 ಕೆಜಿಯೋ ಅಕ್ಕಿಯನ್ನು ತೆಗೆದು ಕೊಳ್ಳುವಾಗ ಅರ್ಧ ಕೆಜಿ ಕೂಡ ಕಡಿಮೆ ಇದ್ದರು ಅವರು ಬಿಡುವುದಿಲ್ಲ ಅವರು ಜಗಳವನ್ನು ಮಾಡಿ ತೆಗೆದುಕೊಂಡು ಹೋಗುತ್ತಾರೆ ಅದನ್ನು ತೆಗೆದುಕೊಂಡು ಹೋಗಿ ಕಿರಾಣಿ ಅಂಗಡಿಯಲ್ಲಿ ಅವರೇ ಮಾರಾಟ ಮಾಡಿರುವಂಥದ್ದು ತಮಗೆ ಗೊತ್ತಿದೆ ಆದ್ದರಿಂದ ಪ್ರಶ್ನೆಯ ಒಂದು ಮುಖವನ್ನು ತಾವು ನೋಡಿದಾಗ ಬಹಳ ಅವಲಕ್ಷಣವಾಗಿ ಕಾಣುತ್ತದೆ ಆದರೆ ಮತ್ತೊಂದು ಮುಖವನ್ನು ನೋಡಿದಾಗ ವಸ್ತು ಸಂಗತಿ ನಮಗೆ ಒಪ್ಪಿಗೆ ಇಲ್ಲದಿದ್ದರೂ ಕೂಡ ನೀವು ಹೇಳಿದ ಲೆಕ್ಕಾಚಾರದ ಪ್ರಕಾರ ಇಷ್ಟು ಕೆಜಿ ಬಂದಿತ್ತು, ಇಷ್ಟು ಅಕ್ಕಿಯ ಮೇಲೆ ಅದರ ದರ ಇಷ್ಟು ಎಂದು ಲೆಕ್ಕಾಚಾರ ಹಾಕಿದರೆ 2500 ಕೋಟಿ ರೂ ಗಳು ಆಗುತ್ತದೆ ಅಂದರೆ, ಅಕ್ಕಿಯನ್ನು ಯಾರಿಗೂ ವಿತರಣೆ ಮಾಡದೆ ಇದ್ದರೆ ಅಷ್ಟಾಗುತ್ತದೆ ಮಾನ್ಯ ಸುಬ್ರಮಣ್ಯ ನಾಯ್ಡುರವರು 5 ವರ್ಷಗಳ ಕಾಲ ಶಾಸಕರಾಗಿದ್ದರು ಅವರು ಎರಡನೆಯ ಬಾರಿಗೆ ಶಾಸಕರಾಗಿ ಬಂದಿದ್ದಾರೆ,ಅ ವರು ಮೊದಲೂ ಕೂಡ ಶಾಸಕರಾಗಿ

ಇದ್ದವರು ತಮ್ಮ ಬಗ್ಗೆ ನಾನು ಪ್ರಶ್ನೆ ಮಾಡುತ್ತಿದ್ದೇನೆಂದು ಅಲ್ಲ, ಇದರ ಬಗ್ಗೆ ನಾನು ತಾರ್ಕಿಕವಾಗಿ ಹೇಳುತ್ತಿದ್ದೇನೆ ಅದನ್ನು ತಾವು ಏಕೆ ಗಮನಕ್ಕೆ ತರುವುದಕ್ಕಾಗಲಿಲ್ಲ? ತಮ್ಮಲ್ಲಿರತಕ್ಕಂಥ ವಿಚಾರದಲ್ಲಿ ಅದನ್ನು ಪ್ರತಿಭಟನೆ ಮಾಡುವಂಥ ಅವಕಾಶಗಳು ಇದ್ದವು ಸದನದಲ್ಲಿ ಈ ಬಗ್ಗೆ ಚರ್ಚೆಯಾಗಬಹುದಾಗಿತ್ತು, ಭ್ರಷ್ಟ ಅಧಿಕಾರಿಗಳ ಮೇಲೆ ಫಿರ್ಯಾದಿಯನ್ನು ಕೊಡಬಹುದಾಗಿತ್ತು, ನ್ಯಾಯಾಬೆಲೆಯ ಅಂಗಡಿಗಳನ್ನು ತಾವು ರದ್ದುಮಾಸಬಹುದಾಗಿತ್ತು ೯ ವೆಲ್ಲವನ್ನೂ ಸುಮ್ಮನೆ ಇಟ್ಟುಕೊಂಡು ಯಾವುದೋ ಒಂದು ಲೆಕ್ಕಾಚಾರ ವನ್ನು ಇಟ್ಟುಕೊಂಡು ದೊಡ್ಡ ಪ್ರಮಾಣದಲ್ಲಿ ಅವ್ಯವಹಾರವಾಗಿದೆ ಎಂದರೆ ನಾವು ಒಪ್ಪಿಕೊಳ್ಳುತ್ತೇವೆ ನಿಖರವಾಗಿ 2500 ಕೋಟಿ ರೂ ಗಳು ಇವರ ಮುಂದೆ ಎಲ್ಲಾ ಲೆಕ್ಕಾಚಾರ ಇದೆ ಎನ್ನುವುದರ ಬಗ್ಗೆ ಹೇಳುತ್ತಿದ್ದಾರಲ್ಲಾ ಅದು ಒಪ್ಪಿಗೆಗೆ ಅರ್ಹವಾದ ವಿಚಾರವಲ್ಲ ಅದು ಏನೇ ಇರಲಿ, ಆ ಕಾರಣಕ್ಕಾಗಿ ತಾವು ವಿಷಯವನ್ನು ಎತ್ತಿದ್ದೀರಿ, ಸದನದ ಸಮಿತಿಯಿಂದ ನಾವು ನೀರಿಕ್ಷಿಸಿದಷ್ಟು ಪ್ರತಿಫಲ ಆಗಬೇಕು ಈಗಾಗಲೇ ನಾನು ಅವರಿಗೆ ಹೇಳಿದಂತೆ ಪ್ರಾಸಿಕ್ಯೂಟಿಂಗ್ ಅಧಿಕಾರವಿಲ್ಲ ಯಾವ ಮೇಲೂ ಫಿರ್ಯಾದಿ ಕೊಡುವುದಕ್ಕಾಗುವುದಿಲ್ಲ ಅದಕ್ಕೆ ಕಾಲಾವಧಿ ಬದಕು ಎನ್ನುವ ಮಾತನ್ನು ಹೇಳಿದಾಗ ಮಾನ್ಯ ಯಡಿಯೂರಪ್ಪನವರ ಮಾತು ಕೂಡ ಹುಸಿಯಾಗುತ್ತದೆ ಈಗ ಅವರು ಹೇಳಿದರು, ವಿಧಾನಸೌಧದ ಮುಂದೆ ಹೋಗುವ ಲಾರಿಯನ್ನು ಹಿಡಿದಿದ್ದೇವೆ ಎಂದು, ಈ ಅವ್ಯವಹಾರ ನಿರಂತರವಾಗಿ ನಡೆಯುತ್ತದೆ ಎಂದಾಗ ಸದನ ಸಮಿತಿ ನಿರಂತರವಾಗಿ ಇರುವುದಕ್ಕಾಗುತ್ತದೆಯೇ? ನಮಗೆ ವಿಚಕ್ಷಣಾಲಯಗಳು ಇರುವುದಿಲ್ಲವೆ? ಅದಕ್ಕಾಗಿ ವಿಜಿಲೆನ್ಸ್ ಸ್ಕ್ವಾಡ್‌ಗಳು ಎಂದು ನಾವು ಏಕೆ ತಯಾರು ಮಾಡಿದ್ದೇವೆ

ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಮಾನ್ಯ ಛೇರ್ಮನ್‌ರೆ, ಸರಿಯಾದ ರೀತಿಯಲ್ಲಿ ಚೆಕ್‌ಪೋಸ್ಟಿನಲ್ಲಿ ಕೆಲಸವನ್ನು ಮಾಡಿದ್ದರೆ ಇವತ್ತು ಈ ಪರಿಸ್ಥಿತಿ ಬರುತ್ತಾ ಇತ್ತು ಏನು? ನಾವು ಸದನ ಸಮಿತಿಯಲ್ಲಿ ಕೆಲವೊಂದು ಸ್ಯಾಂಪಲ್ ಆಗಿ ತನಿಖೆ ಮಾಡಿ ವರದಿಯನ್ನು ನಿಮಗೆ ಕೊಟ್ಟರೆ ಮತ್ತೆ ಅದನ್ನು ನೀವು ಆಗದಂತೆ ನೋಡಿ ಕೊಳ್ಳಬೇಕು ಇಲ್ಲಿ ವ್ಯವಸ್ಥೆಯೇ ಇಲ್ಲ, ಇಲ್ಲಿ ಯಾರೂ ಹೇಳುವವರು ಕೇಳುವವರು ಇಲ್ಲ, ಅದನ್ನು ಕಂಟ್ರೋಲ್ ಮಾಡಬೇಕಾದದ್ದು ನಿಮ್ಮ ಸರ್ಕಾರ, ನಿಮ್ಮಿಂದ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಛೇರ್ಮನ್‌ರೆ, ನಾವು ಜವಾಬ್ದಾರಿಯಿಂದ ನುಣುಚಿ ಕೊಳ್ಳತಕ್ಕಂಥವರು ಅಲ್ಲ

ಶ್ರೀ ವಾಟಾಳ್ ನಾಗರಾಜ್ ತಕ್ಷಣ ಸದನಸಮಿತಿಗೆ ತಾವು ಒಪ್ಪಿಕೊಂಡರೆ, ನಿಮ್ಮ ಬಗ್ಗೆ ಎಲ್ಲೂ ಒಂದು ಕಡೆ, ಈ ಸರ್ಕಾರ ಬಹಳ ಮುಕ್ತವಾಗಿದೆ ಎನ್ನುವ ಒಂದು ನಂಬಿಕೆ ಬರುತ್ತದೆ

ಶ್ರೀ ಎಂ ಪಿ ಪ್ರಕಾಶ್ ನೀವು ಬಹಳ ಚತುರರು ಇರುವುದರಿಂದ, ನೀವು ಹಳೆಯ ಕಾಲದಲ್ಲಿರುವಂಥ ಅಸ್ಥಾನಿಕರಿದ್ದಂತೆ, ರಾಜನನ್ನು ಹೊಗಳುವುದರ ಮೂಲಕವಾಗಿ ಅವರ ಕಾಂತಾಸಮಿತಿಯನ್ನು ಮಾಡಿಸಿಕೊಂಡಂತೆ ಈಗ ನೀವು ಅದೇ ರೀತಿ ನಮ್ಮನ್ನು ಒಪ್ಪಿಸುವಂಥ ಪ್ರಯತ್ನವನ್ನು ಮಾಡುತ್ತಿದ್ದೀರಿ, ಆದರೆ ನಾವು ೀ ಪ್ಪುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ ನೀವು ಒಪ್ಪದಿದ್ದರೆ ನಾವು ಬಿಡುವುದೇ ಇಲ್ಲ ಅದು ಶತಸಿದ್ಧ ನೀವು ಒಪ್ಪಿಕೊಳ್ಳುವವರೆಗೆ ನಾವು ಬಿಡುವುದಿ ್ಲ

ಶ್ರೀ ಎಂ ಪಿ ಪ್ರಕಾಶ್ ದಯ ಮಾಡಿ ಧರಣಿ–ಗಿರಣಿ ಮಾಡಬೇಡಿ

ಶ್ರೀ ವಾಟಾಳ್ ನಾಗರಾಜ್ ಅದಕ್ಕಾಗಿಯೇ ನಾನು ನಿಮಗೆ ಹೇಳಿದೆ, ಆ ಪರಿಸ್ಥಿತಿ ನಿರ್ಮಾಣವಾಗಬಾರದು, ಅದಕ್ಕಾಗಿ ಮೊದಲೇ ನಾನು ನಿಮಗೆ ಮನವಿಯನ್ನು ಮಾಡಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಛೇರ್ಮನ್‌ರೆ, ಈ ಸದನದಲ್ಲಿರ ತಕ್ಕಂಧ ಮಾನ್ಯ ಸದಸ್ಯರು ಮಾಡಿರುವ ಎಲ್ಲಾ ಅಭಿಪ್ರಾಯಗಳಿಗೆ ನಾನು ಅತ್ಯಂತ ಗೌರವವನ್ನು ಕೊಡುತ್ತೇವೆ, ಅವರ ರೀತಿಯಲ್ಲಿ ಸದನ ಸಮಿತಿಯಿಂದ ಯಾವುದೇ ರೀತಿಯ ಪರಿಣಾಮಕಾರಿಯಾದಂಧ ಕ್ರಮವನ್ನು ಕೈಗೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಕಾರಣಕ್ಕಾಗಿ ಈ ಸರ್ಕಾರ ತಾವೇ ಒಪ್ಪಿರತಕ್ಕಂಧ ನಮ್ಮ ಸಿಓಡಿ ಗಳ ಮೂಲಕ ತನಿಖೆಯನ್ನು ಮಾಡಿಸುತ್ತೇವೆ ತಪ್ಪಿತಸ್ಥರ ಮೇಲೆ ಕ್ರಮವನ್ನು ಕೈಗೊಳ್ಳುತ್ತೇವೆ ಈ ರೀತಿಯಾದ ಭ್ರಷ್ಟಾಚಾರಕ್ಕೆ ಅವಕಾಶವಾಗಲಾರದಂತೆ ನಾವು ಮುಂದಿನ ಕ್ರಮವನ್ನು ಕೈಗೊಳ್ಳುವುದರ ಜೊತೆಗೆ ಯಾವ ರೀತಿಯಾಗಿ ಈ ಆಹಾರಧಾನ್ಯಗಳು ವಿತರಣೆಯಾಗಬೇಕು ಮತ್ತು ಕೆಲಸವಾಗಬೇಕು ಎನ್ನುವುದರ ಬಗ್ಗೆ ಕೂಡ ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಸಂದರ್ಭದಲ್ಲಿ ತಮ್ಮ ಅನುಭವಗಳ ಹಿನ್ನಲೆಯಲ್ಲಿ ತಮ್ಮ ಸಲಹೆ ಸಹಕಾರಗಳನ್ನು ಕೊಡಬೇಕೆಂದು ಹೇಳಿ ತಮಗೆ ಉತ್ತರವನ್ನು ಕೊಡಲಿಕ್ಕೆ ತಾವು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಮಾನ್ಯ ಛೇರ್ಮನ್‌ರ್, ಈ ಮೊಂಡುತನವನ್ನು ಬಿಟ್ಟು, ಇವತ್ತು ಏನು ಜನ ಮ್ಯಾಂಡೇಟ್ ಕೊಟ್ಟಿದ್ದಾರೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ಪ್ರತಿಪಕ್ಷ ಕುಳಿತಿದೆ, ನಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಜಂಟಿ ಸದನ ಸಮಿತಿಯ ಮಹತ್ವವೇ ಇಲ್ಲ, ಇದು ಅಗತ್ಯವೇ ಇಲ್ಲ ಎಂದು ಅರ್ಗ್ಯು ಮಾಡುವ ಮಟ್ಟಕ್ಕೆ ಮಾನ್ಯ ಸಂಸದೀಯ ಸಚಿವರು ಹೇಳುತ್ತಿದ್ದಾರೆ ನಾನು ತಮಗೆ ಕೇಳುತ್ತೇನೆ, ಮಾನ್ಯ ಹಿಂದಿನ ಗೃಹ ಸಚಿವರು ಇಲ್ಲಿಯೇ ಇದ್ದಾರೆ, ಅವರೇ ಇದರ ಉಸ್ತುವಾರಿಯನ್ನು ನೋಡಿಕೊಳ್ಳುವುದರ ಜೊತೆಗೆ ಅವರೇ ಅಧ್ಯಕ್ಷರಾಗಿದ್ದರು ಅವರು ಅವರ ಮಾತಿನಲ್ಲಿ ಏನು ಹೇಳಿದ್ದಾರೆ, ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ಮೇಲೆ ದೊಡ್ಡ ಪ್ರಮಾಣದಲ್ಲಿ ಈ ಹಗರಣಗಳು ನಡೆದಿವೆ ಚುನಾವಣೆಗೆ ಮುನ್ನ ನಡೆದಂಧ ಹಗರಣಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ದಾಖಲೆಯೊಂದಿಗೆ ಪತ್ರ ಬರೆದಂಧ ದಾಖಲೆಗಳು ಇವೆ ನೀವೇ ಆ ಸಂದರ್ಭದಲ್ಲಿ ಡಿವಿಜಿನಲ್ ಕಮಿಷನರ್ ನೇಮಕ ಮಾಡಿದಿರಿ, ತಾವು ಹಾಗೂ ನಾನು ಆ ಮನೆಯಲ್ಲಿ ಇದ್ದೆವು. ಜಂಟಿ ಸದನ ಸಮಿತಿ ಆಗಬೇಕೆಂದು ಧರಣಿ ಕುಳಿತುಕೊಂಡಿದ್ದೆವು ಎರಡೂ ಮನೆಯಲ್ಲಿ ನಾವು ವೆಲ್‌ನಲ್ಲಿ ಇದ್ದಾಗಲೇ ಕಾರ್ಯಕಲಾಪ ಮುಂದಕ್ಕೆ ಹೋಯಿತು

ಶ್ರೀ ಎಂ ಪಿ ಪ್ರಕಾಶ್ ಆ ವಿಚಾರಕ್ಕೆ ಅಲ್ಲ, ಛಾಪಾ ಕಾಗದದ ವಿಚಾರವಾಗಿ ಸದನ ಸಮಿತಿ ಆಗಬೇಕೆಂದು ತಾವು ಕೇಳಿದಾಗ ಅದಕ್ಕೆ ನಾವು ಸಹಮತವನ್ನು ನೀಡಿದೆವು

ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಆಗ ತಾವು ವಾಕ್‌ಔಟ್ ಮಾಡಿದಿರಿ ನಿಮಗೆ ನಾನು ಆ ಬಗ್ಗೆ ದಾಖಲೆಗಳನ್ನು ಕೊಡುತ್ತೇನೆ ನೀವು ಧರಣಿ ಕುಳಿತಿರಲಿಲ್ಲ ಆದರೆ ನಾವೇ ಧರಣಿ ಕುಳಿತಿದ್ದೆವು ಇಲ್ಲಿ ಪ್ರಶ್ನೆ ಏನು? ಇವತ್ತಿನ ದಿವಸ ಸಿಓಡಿಯವರು ತನಿಖೆ ಮಾಡುತ್ತಿರುವುದರಿಂದ, ಅವರಿಗೆ ಸ್ವಷ್ಟ ಬಿತ್ತೇ? ಯಾರೋ ಒಬ್ಬ ಜವಾಬ್ದಾರಿಯತವಾದ ನಾಗರೀಕ ಈ ದೂರನ್ನು ಕೊಟ್ಟು ಆಧಾರದ ಮೇಲೆ ಇವೆಲ್ಲವೂ ನಡೆಯಿತು ಒಂದು ಸಾಮಾನ್ಯ ದೂರಿನಿಂದ ಇಷ್ಟೆಲ್ಲಾ ಬೆಳಕಿಗೆ ಬರುತ್ತಿರುವಂತಹ ಇಂತಹ ಸಂದರ್ಭದಲ್ಲಿ ಈ ವ್ಯವಸ್ಥೆಯಲ್ಲಿ ಎಲ್ಲೋ ಒಂದು

ಕಡೆ ಲೋಪದೋಷಗಳು ಇವೆ, ಕೊಟ್ಟಂತಹ ಅಕ್ಕಿ ಮತ್ತು ಗೋಧಿ ಸದುಪಯೋಗವಾಗುತ್ತಿಲ್ಲ, ಕೇಂದ್ರ ಸರ್ಕಾರವರು ಬಡವರಿಗೆ ಪುಕ್ಕಟೆಯಾಗಿ ಕೊಟ್ಟಿರುವುದು ದುರಪಯೋಗವಾಗುತ್ತಿದೆ, ಇವೆಲ್ಲವನ್ನೂ ಕೊನೆ ಮಾಡೋಣವೆಂದು ಕಳೆದ ಎರಡು ವರ್ಷಗಳಿಂದ ನಾವು ಕೆಲಸವನ್ನು ಮಾಡುತ್ತಿದ್ದೇವೆ ವಿರೋಧ ಪಕ್ಷದಲ್ಲಿ ಮತ್ತು ಆಡಳಿತ ಪಕ್ಷದಲ್ಲಿ ಕುಳಿತಿರುವಂತಹ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ, ಜನತಾ ಅದಾಲತ್ ಸಂದರ್ಭದಲ್ಲಿ 5 ಲಕ್ಷ ರೂಪಾಯಿಗಳು ಒಂದು ಕಾಮಗಾರಿಗೆ ಮಂಜೂರಾದರೆ ಅದರಲ್ಲಿ 1 ಲಕ್ಷ ರೂಪಾಯಿಗಳನ್ನು ಖರ್ಚು ಮಾಡದೆಯೇ ಅವ್ಯವಹಾರ ನಡೆಯಿತು ಎನ್ನುವುದು ನಿತ್ಯ ಧಾರಾವಾಹಿ ತರಹ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ ಕಳೆದ 20 ದಿವಸಗಳಿಂದ ಪತ್ತಿಕೆಗಳಲ್ಲಿ ಬರುತ್ತಿರುವ ಸುದ್ದಿಯನ್ನು ನೋಡಿದರೆ ಗಾಬರಿಯಾಗುತ್ತದೆ ಪ್ರತಿ ಜಿಲ್ಲೆಯಲ್ಲಿ ನಿಮ್ಮ ಸೆಕ್ರೆಟರಿ ಮಟ್ಟದ ಒಬ್ಬ ಅಧಿಕಾರಿ ಇನ್‌ಚಾರ್ಜ್ ಇದ್ದಾರೆ ಅವರು ಏನು ಮಾಡುತ್ತಿದ್ದಾರೆ? ಅಲ್ಲಿ ಶಾಸಕ ಅಲ್ಲ, ಡೆಪ್ಯುಟಿ ಕಮೀಷನರ್ ಇನ್‌ಚಾರ್ಜ್ ಇದ್ದಾರೆ ಅಲ್ಲಿ ಶಾಸಕರ ಕೆಲಸವೇನೆಂದರೆ ಕಾಮಗಾರಿಯ ಬಗ್ಗೆ ಒಂದು ಪಟ್ಟಿಯನ್ನು ಕೊಟ್ಟು ಅಧಿಕಾರಿಗಳು ಇಂತಹದ್ದು ಎಂದು ಮಂಜೂರು ಮಾಡಿದ ಮೇಲೆ, ಅದು ಸರಿಯಾದ ರೀತಿಯಲ್ಲಿ ಆಗುವುದರ ಬಗ್ಗೆ ಅಧಿಕಾರಿಗಳು ನೋಡಿಕೊಳ್ಳಬೇಕು ಇದು ಕೂಲಿಗಾಗಿ ಕಾಲು ಯೋಜನೆ, ಇನ್ನು ಎರಡನೆಯದಾಗಿ ಸನ್ಮಾನ್ಯ ಸಂಸದೀಯ ಸಚಿವರೇ ತಾವು ಅರ್ಥಮಾಡಿಕೊಳ್ಳಬೇಕು, ನೀವು ಹಳ್ಳಿಯಿಂದ ಬಂದಂತಹವರಾಗಿದ್ದೀರಿ ಈ ಪಡಿತರ ವ್ಯವಸ್ಥೆಯಲ್ಲಿ ಇಷ್ಟು ಕಷ್ಟಪಟ್ಟು ಸರ್ಕಾರ ಇಷ್ಟೊಂದು ಹಣಕಾಸಿನ ಪರಿಸ್ಥಿತಿಯು ಹದಗೆಟ್ಟು ಮೇಲೂ ಸಹ ಅಕ್ಕಿ ಗೋಧಿ, ಸಕ್ಕರೆ ಮತ್ತು ಸೀಮೆಎಣ್ಣೆ ಆ ಬಡವರಿಗೆ ತಲುಪುತ್ತಿಲ್ಲ ನೀವು ಹೇಳಿದಹಾಗೆ ಮಾನ್ಯ ಬಸವಣ್ಣನವರು ಆಹಾರ ಸಚಿವರಾಗಿದ್ದರು ಅವರನ್ನು ಕೇಳಿ ಅಂದಮೇಲೆ ನಾನು ಅವರ ಕಿವಿಯಲ್ಲಿ ಈ ಬಗ್ಗೆ ಕೇಳಿದೆ, ಅಲಾಟ್‌ಮೆಂಟ್ ಬರುವುದು ಹೆಚ್ಚು ಕಡಿಮೆಯಾಗುತ್ತದೆ, ಆ ರೀತಿಯಾಗಿ ನಿರಂತರವಾಗಿ ನಾವು ಕೊಡದೇ ಇರುವುದರಿಂದ ನ್ಯಾಯಬೆಲೆ ಅಂಗಡಿಯವನು ಹೇಳುತ್ತಾನೆ ನೋಡಿ, ಹೋದ ಸಾರಿ 250 ಕ್ವಿಂಟಾಲ್ ಬಂದಿತ್ತು, ಈ ಸಲ 150 ಕ್ವಿಂಟಾಲ್ ಬಂದಿದೆ ಎಂದು ಅವರು ಯಾರು ನ್ಯಾಯ ಬೆಲೆ ಅಂಗಡಿಗೆ ಹೋಗುವವರು? ಅಲ್ಲಿ ಸ್ಟಾಕ್ ಎಷ್ಟು ಬಂತು ಎಂದು ಗೊತ್ತಾಗುವುದೇ ಇಲ್ಲ ಅವನದೇ ಪೆನ್ನು, ಕಾಗದ, ಅವನು ಕೊಟ್ಟಿದ್ದೇ ದಾಖಲೆಯಾಗುತ್ತದೆ ಈ ಎಲ್ಲಾ ಘಟನೆಗಳ ಹಿನ್ನೆಲೆಯಿಂದ ನಾನು ತಮಗೆ ಹೇಳುತ್ತಿರುವುದು ಈ ಜಂಟಿ ಸದನ ಸಮಿತಿಯಿಂದ ಏನಾಗಬಹುದು? ಅದರ ಬಗ್ಗೆ ನಾನು ತಮಗೆ ಹೇಳುತ್ತಿರುವುದು ಒಬ್ಬ ಎಲ್ಲೋ ಒರಿದು ಕಡೆ ದೂರವಾಣಿಯಿಂದ ಸುದ್ದಿ ಮುಟ್ಟಿಸಿ ಇಷ್ಟೆಲ್ಲಾ ನಡೆಯುತ್ತಿದೆ ನಾವು ನಿಜವಾಗಿಯೂ ನೀವು ಹೇಳಿದ ಹಾಗೆ 28 ಜಿಲ್ಲೆಗಳಿಗೆ ಹೋಗುವುದಕ್ಕಾಗುವುದಿಲ್ಲ ಸ್ಯಾಂಪಲ್‌ಗೆ ಎಲ್ಲಿ ಹಗರಣಗಳು ಜಾಸ್ತಿಯಾಗಿದೆ ಎಂದು ಸಿಓಡಿ ಅಧಿಕಾರಿಗಳು ಹೇಳುತ್ತಾರೋ ಅಲ್ಲಿ ಹೋಗಿ ಒಂದೊಂದು ದಿವಸ ಇದ್ದು ಒಂದೊಂದು ತಿಂಗಳಲ್ಲಿ ಅಥವಾ ಒಂದೂವರೆ ತಿಂಗಳಲ್ಲಿ ನಾವು ಹತ್ತಾರು ಕಡೆ ಹೋಗಿ ಮಾಹಿತಿಗಳನ್ನು ಸಂಗ್ರಹ ಮಾಡಿದರೆ ಅದರ ಆಧಾರದ ಮೇಲೆ ಬಿಗಿ ಮಾಡಿ ಮುಂದಿನ ದಿನದಿಂದ ಈ ರೀತಿಯ ಅವ್ಯವಹಾರಗಳು ಆಗದೆ ಇರುವ ರೀತಿಯಲ್ಲಿ ತಡೆಮಾಡಬಹುದೇ? ಇದು ನಮ್ಮ ಸದುದ್ದೇಶವಾಗಿದೆ ಸಫೋಸ್ ಇದು ನಮ್ಮ ಕೈಯಲ್ಲಿ ಆಗುವುದೇ ಇಲ್ಲ ನೀವು ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುವುದಕ್ಕೆ ಬರುವುದೇ ಇಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಬರುವುದಿ್ಲ್ಲ ಯಡಿಯೂರಪ್ಪನವರೇ ಎಂದು ಹೇಳುತ್ತೀರಿ, ಅದು ನಮಗೂ ಗೊತ್ತಿದೆ ನಿಮಗೂ ಸಹ ಗೊ್ತಿದೆ ಹಾಗಾದರೆ ನಾವು ತನಿಖೆ ಮಾಡಿ ಬಂದಂತಹ ಆಧಾರದ

ಮೇಲೆ ಎರಡು ಮನೆಯಲ್ಲಿ ನಿಮ್ಮವರೇ ಅಧ್ಯಕ್ಷರಾಗಿರುತ್ತಾರೆ ಈ ಬಗ್ಗೆ ಸರ್ವಾನುಮತದಿಂದ ತಮಗೆ ಒಪ್ಪಿಗೆಯಾಗರೆ ಇದ್ದರೆ ಅಲ್ಲಿ ಬಹಳ ಇದೆ, ಇದಕ್ಕೇನಾದರೂ ತುದಿ ಮುಟ್ಟಿಸಬೇಕು, ನಂತರ ಸಿಬಿಐಗೆ ವಹಿಸಬೇಕೆಂದು ಅನಿಸಿದರೆ ನಿಬಿಐಗೆ ರೆಕಮಂಡ್ ಮಾಡಿ ಎಂದು ನಾವೇ ಸದನ ಸಮಿತಿಯಲ್ಲಿ ರೆಕ್‌ಮೆಂಡ್ ಮಾಡುತ್ತೇವೆ ಅದನ್ನು ಬೇಕಾದರೆ ಮಾಡೋಣ ಸಿಓಡಿಯವರ ಇತಿಮಿತಿ ಏನು? ಅಲ್ಲಿ ನಿಮ್ಮವರೇ ಅಧಿಕಾರಿಗಳು ಇರುತ್ತಾರೆ ದೇವರ ದಯೆಯಿಂದ ಇವೆಲ್ಲಾ ಏತಕ್ಕೆ ಬೆಳಕಿಗೆ ಬಂದಿತು ಚುನಾವಣಾ ಪ್ರಕ್ರಿಯೆಯಲ್ಲಿ ನಾವಿದ್ದೆವು, ಚುನಾವಣಾ ಆಯೋಗ ನೀವು ಯಾರೋ ಇದರಲ್ಲಿ ಇಂಟರ್‌ಫಿಯರ್ ಆಗಬಾರದು ಹೇಳದ್ದರಿಂದ ಅಧಿಕಾರಿಗಳು ನಿರ್ಭೀತಿಯಿಂದ ಕೆಲಸವನ್ನು ಮಾಡಿದರು ನಾಳೆಯಿಂದ ಅವರುಗಳು ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ನಮಗೆ ಗೊತ್ತಿದೆ ಇಲ್ಲಿ ಎಲ್ಲಿಯೂ ಸಹ ರಾಜಕಾರಣಿಗಳು ಹಾಗೂ ಪ್ರಮುಖರ ಹೆಸರುಗಳು ಒಂದೇ ಇಲ್ಲ ಯಾವನು ಮಿಲ್‌ನವನು ಸ್ಟಾಕ್ ಇಟ್ಟಿದ ಅವನ ಹೆಸರು ಬಂದಿದೆ ಯಾವನು ಅಧಿಕಾರಿ ಸಿಕ್ಕಿಬಿದ್ದಿದ್ದಾನೆ ಆತನ ಹೆಸರು ಬಂದಿದೆ, ಅದರಲ್ಲಿ ಕೆಲವರು ಹೆಸರುಗಳು ಬಂದಿವೆ, ಅವನು ಏಕೆ ಹೀಗಾಯಿತು ಎಂದು ಕೇಳುತ್ತಾನೆ, ಎಂದು ಅದನ್ನು ಮುಚ್ಚಿ ಹಾಕುತ್ತಾರೆ ಇದು ಯಾವುದೂ ಕೂಡ ಬಹಿರಂಗವಾಗುವುದಿಲ್ಲ ಯಾರೂ ಕೂಡ ಜೈಲಿಗೆ ಹೋಗುವುದಿಲ್ಲ ಇದರಲ್ಲಿ ಯಾರಿಗೂ ಕೂಡ ಶಿಕ್ಷೆಯಾಗುವುದಿಲ್ಲ ಈ ವ್ಯವಸ್ಥೆಯು ಬದಲಾಗುವುದೂ ಇಲ್ಲ ಅದಾಗಬೇಕಾದರೆ ಇಲ್ಲಿರುವ 224 ಜನ ಶಾಸಕರುಗಳು ದೊಡ್ಡ ಮನಸ್ಸು ಮಾಡಿ ಅ ಪಕ್ಷವನ್ನು ದೂರಬೇಕೆಂದು ಬೆಟ್ಟು ಮಾಡಿ ತೋರಿಸದೆ ಪ್ರಾಮಾಣಿಕವಾಗಿ ಈ ವ್ಯವಸ್ಥೆಯಲ್ಲಿ ಏನಾದರೂ ಅಮೂಲಾಗ್ರವಾದ ಬದಲಾವಣೆಯನ್ನು ತರುವುದಕ್ಕೆ ಸಾಧ್ಯವ ಎಂಬುದನ್ನು ನೋಡಬೇಕಾಗಿದೆ, ಈ ಜಂಟಿ ಸದನದ ಸಮಿತಿ ಮೂಲಕ ಇದನ್ನೂ ಸಾಧಿಸುವುದು ನಮ್ಮ ಉದ್ದೇಶವಾಗಿದೆ ಆದ್ದರಿಂದ ಯಾವುದೇ ಮೊಂಡುತನಕ್ಕೆ ನಾವು ನಿಲ್ಲದೆ, ವಿರೋಧಪಕ್ಷದವರು ನಾವು ಏನು ಕೇಳಿದರೂ ಸಹ ನಾವು ವಿರೋಧವನ್ನು ಮಾಡುವವರೇ ಆಗಿದ್ದೇವೆ ಅದನ್ನು ನಾವು ಒಪ್ಪುವುದಿಲ್ಲ ಇಲ್ಲಿರುವಂತಹ 101 ಜನ ಶಾಸಕರುಗಳಿಗೆ ಜವಾಬ್ದಾರಿಯಿಲ್ಲವೇನು? ಆದ್ದರಿಂದ ದಯಮಾಡಿ ಸಂಸದೀಯ ಸಚಿವರೇ ನಾನು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿ ಮಾಡುತ್ತೇನೆ ಈ ಸದನದ ಕಾರ್ಯಕಲಾಪಗಳು ಶಾಂತ ರೀತಿಯಲ್ಲಿ ನಡೆಯಬೇಕು, ಫೆಬ್ರವರಿ 22ರಿಂದ ಅಂದರೆ ಚುನಾವಣಾ ಪ್ರಕ್ರಿಯೆಯ ಮಾತನ್ನು ಹಿಂದಿನ ಮುಖ್ಯಮಂತ್ರಿಗಳು ಹೇಳಿದಾಗಿನಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಿಂತಿವೆ ಎಲ್ಲಾ ಗೊಂದಲವು ಸಹ ಶುರುವಾಗಿದೆ, ಈ ರೀತಿಯಾಗಿ ಅವ್ಯವಹಾರಗಳಿಗೆ ಅವಕಾಶವಾಗಿದೆ, ಅವೆಲ್ಲದರ ಬಗ್ಗೆ ಸರಿಯಾದ ರೀತಿಯಲ್ಲಿ ಒಂದು ವರದಿಯನ್ನು ತರಿಸಿಕೊಂಡು ಇದಕ್ಕೆ ಮಂಗಳವನ್ನು ಹಾಡೋಣ, ಸಾಧ್ಯವಾದಷ್ಟು ಈ ಅವ್ಯವಹಾರಕ್ಕೆ ತಡೆಯೊಡೋಣ, ಎಂದು ಸದುದ್ದೇಶದಿಂದ ಇಷ್ಟೊಂದು ಕಷ್ಟಪಟ್ಟು ಹೇಳುತ್ತಿದ್ದೇವೆ ಮಾನ್ಯ ಯಡಿಯೂರಪ್ಪನವರು ಹೋದರು ಸುಬ್ರಮಣ್ಯನಾಯ್ಡು ಅವರು ಹೋದರು ಎಂದು ಹೇಳಿದರು ನಾನು ಹೋದ ಮೇಲೆ ಅವರಿಗೆ ಹೇಳಿದೆ ಸುಬ್ರ ಮಣ್ಯನಾಯ್ಡುರವರೇ ಈಗಾಗಲೇ ನಕಲಿ ಛಾಪಾ ಕಾಗದದ ಮೇಲೆ ಅನೇಕ ಬಯದ ವಾತಾವರಣಗಳು ಇವೆ ಅದರ ಮಧ್ಯೆ ನಾವು ಬದುಕಿದ್ದೇವಪ್ಪಾ, ನೀವು ಕರೆದುಕೊಂಡು ನಾನು ಹೊರಟುಹೋದೆ ನಮ್ಮ ಪೊಲೀಸ್ ಅಧಿಕಾರಿಗಳು ಅಲ್ಲಿಗೆ ಬರುವುದಕ್ಕೆ ಹಿಂದೆ ಮುಂದೆ ನೋಡಿ ತಡಮಾಡಿದರು ಅಲಕ್ಷಿ ಅಗಲೇ ಮಾಲೀಕ ಭಯಭಿತನಾಗಿದ್ದ, ಅಲ್ಲಿ ಹೇಳುವವರು ಕೇಳುವವರು ಯರು ಇರಲಿಲ್ಲ ಅಲ್ಲಿ ಧೈರ್ಯವಾಗಿ ಒಳಗೆ ಹೋದೆವು ಅಲ್ಲಿ ಬರೀ 7 ಲಾರಿ ಲೋಡ್ ಅಲ್ಲ, ಬೇಕಾದರೆ ನಿಮ್ಮ ಅಧಿಕಾರಿಗಳನ್ನು ಕರೆಸಿ ನೀವೇ ಕೇಳಿ ಅವರು [illegible]

7 ಲಾರಿಗಳನ್ನು ಬೆನ್ನು ಹತ್ತಿಕೊಂಡು, ಸಿಕ್ಕಿರುವುದು 9500 ಕ್ವಿಂಟಾಲ್ ಅಕ್ಕಿ ಅದ್ದರಿಂದ ಮಾನ್ಯ ಸಂಸದೀಯ ವ್ಯವಹಾರಗಲ ಸಚಿವರೇ, ಇಲ್ಲಿದ್ದು ತಾವು ಅನುಭವಸ್ಥರಾಗಿದ್ದವರು ಅಲ್ಲಿ ಏನೋ ಮಾಡಬೇಕೆಂಬ ಸದುದ್ದೇಶದಿಂದ ಹೋಗಿದ್ದೀರಿ , ಜನ ನಿಮ್ಮನ್ನು ನಂಬಬೇಕೆಂದರೆ, ಕಳೆದ 5–6 ದಿವಸಗಳಿಂದ ಬಂದಿರುವಂತಹ ಪತ್ರಿಕೆಗಳ ವರದಿಯನ್ನು ನೋಡಿ ಅಘಾತಕ್ಕೆ ಒಳಗಾಗಿದ್ದಾರೆ, ಈ ವ್ಯವಸ್ಥೆಯ ಬಗ್ಗೆ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಈಗಲಾದರೂ ದಯಮಾಡಿ ಈ ಸದನದ ಸದಸ್ಯರ ಮೇಲೆ ನಿಮಗೆ ವಿಶ್ವಾಸವಿಲ್ಲವೇ? ನಮ್ಮನ್ನು ನಬೀವು ಇಷ್ಟೊಂದು ಹಗುರವಾಗಿ ತೆಗೆದುಕೊಳ್ಳುವ ಯೋಚನೆ ಮಾಡುವುದಕ್ಕೆ ಸಾಧ್ಯವೆ? ನೀವು ಒಂದು ಸಾರಿ ಸದನ ಸಮಿತಿಯನ್ನು ಮಾಡಿ ಸಮಿತಿಯಲ್ಲಿ ಸರಿಯಾದಂತಹ ವ್ಯಕ್ತಿಗಳನ್ನು ಹಾಕಿ ಸಮಯವನ್ನು ಕೊಟ್ಟು ಆ ಕಮಿಟಿಗೆ ಅವರು ಒರದೇ ಹೋದರೂ ಪರವಾಗಿಲ್ಲ ಅವರಲ್ಲಿ ನಾವು ಏನಂತಿಯನ್ನು ಮಾಡುತ್ತೇವೆ, ನಿಮ್ಮ ಪ್ರೈಯಾರಿಟಿ ಈ ಸದನ ಸಮಿತಿಗೆ ಇರಲಿ, ಒಂದು ಕೆಲಸ ಮಾಡಿ ವರದಿಯನ್ನು ಕೊಡಿ, ಉಳಿದಂತಹದನ್ನು ನಾವು ಎಲ್ಲಾ ಸದಸ್ಯರುಗಳು ನೋಡಿಕೊಳ್ಳುತ್ತೇವೆ, ಈ ರೀತಿಯಾಗಿ ಕೆಲಸ ಮಡುವಂತಹ ಕಳಕಳಿ ಇರುವಂತಹವರಿಗೆ ಜವಾಬ್ದಾರಿಯನ್ನು ಕೊಟ್ಟು ಏನಾದರೊಂದು ಪರಿಣಾಮಕಾರಿಯಾದ ರೀತಿಯಲ್ಲಿ ಫಲಿತಾಂಶ ಬರುವ ರೀತಿಯಲ್ಲಿ ಜನಕ್ಕೂ ಹೌದು ಎನಿಸುವಂತಹ ರೀತಿಯಲ್ಲಿ ಆಗಬೇಕು ದಯಮಾಡಿ ಎರಡು ಮನೆಯ ಜಂಟಿ ಸದನ ಸಮಿತಿಯನ್ನು ರಚನೆ ಮಾಡಬೇಕು, ಇಲ್ಲಾ ಯಡಿಯೂರಪ್ಪ ನವರೇ ಆಗುವುದೇ ಇಲ್ಲಾ ಎನ್ನುತ್ತೇವೆ, ನೀವು ವಾಕ್‌ಔಟ್ ಮಾಡುತ್ತೀರಾ? ವೆಲ್‌ನಲ್ಲಿ ಬಂದು ಕುಳಿತುಕೊಳ್ಳುತ್ತೀರಾ? ಇದಲ್ಲ ನಮ್ಮ ಉದ್ದೇಶ, ಅದನ್ನೇ ಮಾಡಬೇಕೆಂದರೆ ನಮ್ಮದೇನೂ ಅಭ್ಯಂತರವಿಲ್ಲ ಈ ಡೆಮಾಕ್ರೆಸಿಯಲ್ಲಿ ಹೊರಗಡೆ ಇರುವಂತಹ ನಮ್ಮ ಮಾಲೀಕರಿಗೆ ಪ್ರತಿಪಕ್ಷದವರು ತಮ್ಮ ಕರ್ತವ್ಯವನ್ನು ಮಾಡಿದರು, ಈ ಹಗರಣದಿಂದ ಎಲ್ಲೆಲ್ಲಿ ದೊಡ್ಡದೊಡ್ಡ ತಿಮಿಂಗಿಲಗಳು ಸಿಗುತ್ತವೋ, ಹಿಂದೆ ಇದ್ದ ಮಾಜಿ ಮಂತ್ರಿಗಳು ಸಿಕ್ಕಿಬೀಳುತ್ತಾರೋ ಆಡಳಿತ ಪಕ್ಷದ ರಾಜಕಾರಣಿಗಳು ಸಿಕ್ಕಿ ಬೀಳುತ್ತಾರೋ, ಅದನ್ನು ಮುಚ್ಚಿಹಾಕುವುದಕ್ಕೆ ಪ್ರಯತ್ನ ಮಾಡುತ್ತೀರೋ ಎಂಬ ಸಂದೇಶ ಹೋಗಬೇಕೆನ್ನುವಂತಹ ನಿಮ್ಮ ಅಪೇಕ್ಷೆ ಇದ್ದರೆ, ನಾವು ಇಲ್ಲಿ ಏನು ಮಾಡಬೇಕೋ, ಹೊರಗೆ ಹೋಗಿ ಇನ್ನು ಏನು ಬೇಕೋ ಅದನ್ನು ಮಾಡುತ್ತೇವೆ ಇದು ಪ್ರಜಾಪ್ರಭುತ್ವವಾಗಿರುವುದರಿಂದ ಅದನ್ನು ಹೇಳುವಂತಹ ಅಗತ್ಯವೇನು ಇಲ್ಲ ಆದರೆ ನಾನು ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ, ದಯಮಾಡಿ ಯಾವುದೇ ಪ್ರತಿಷ್ಠೆಗೆ ಒಳಗಾಗದೆ ಜಂಟಿ ಸದನ ಸಮಿತಿಯನ್ನು ಮಾಡಿ, ಟರ್ಮ್ಸ್ ಆಫ್ ರೆಫರೆನ್ಸ್ ಬಹಳ ಮುಖ್ಯವಾದುದು, ಜಂಟಿ ಸದನ ಸಮಿತಿಯಾದ ಮೇಲೆ ಈ ಅಧಿಕಾರಿಗಳು ಇದರಲ್ಲಿ ಬರುತ್ತಾರೆ ಬೇರ ಬೇರೆ ಅನೇಕ ಪ್ರಮುಖವಾದಂತಹ ಅಂಶಗಳು ಬರುತ್ತವೆ ಕಾಮಗಾರಿಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ, ಪಡಿತರ ವ್ಯವಸ್ಥೆಯಲ್ಲಿ ಆಗಿರುವಂತಹ ಲೋಪದೋಷಗಳನ್ನು ನೋಡಬೇಕಾಗುತ್ತದೆ ಟರ್ಮ್ಸ್ ಆಫ್ ರೆಫರೆನ್ಸ್ ಏನಿರಬೇಕೆಂಬುದರ ಬಗ್ಗೆ ಚಿಂತನೆ ಮಾಡಿ ಈ ಒಂದು ವ್ಯವಸ್ಥೆ ಅವಕಾಶ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಅಕ್ಕಿ ಕಾಳ ಸಂತೆಯಲ್ಲಿ ಹೋಗಿದೆ ಎಂದು ಮಾತನಾಡುವುದರ ಜೊತೆಗೆ ಕಾಮಗಾರಿಗಳು ಸರಿಯಾಗಿ ನಡೆದಿದೆಯಾ? ನಿರೀಕ್ಷೆ ಮಾಡಿ ನೀವು ಏನು ಯುಟಿಲೈಜೇಷನ್ ಸರ್ಟಿಫಿಕೇಟ್ ಕೊಟ್ಟಿದ್ದೀರಾ ಅದು ಎಷ್ಟು ಆಗಿದೆಯಾ? ಇದನ್ನೆಲ್ಲ ಯಾರಾದರೂ ಹೋಗಿ ನೋಡಿಕೊಂಡು ಬಂದು ಹೇಳಬೇಕಾಗುತ್ತದೆ

ಸರ್ಕಾರಕ್ಕೆ ನಿಜವಾಗಿಯೂ ಅನ್ಯಾಯವಾಗಿದ್ದರೆ, ನಾವು ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಮನಸ್ಸು ಇದ್ದರೆ ಎಲ್ಲಿಂದಲಾದರೂ ಒಂದು ವರದಿ ಬರಬೇಕಾಗುತ್ತದೆ ಈ ಮನೆಯ ಸದಸ್ಯರನ್ನೇ ನಂಬದಂತಹ ಸ್ಥಿತಿ ಸರ್ಕಾರಕ್ಕೆ ಬರುವಂತಹದ್ದು ಒಳ್ಳೆಯದಲ್ಲ ಹೋಗುತ್ತೇವೆ, ಅಲ್ಲಿ ನೋಡಿಕೊಂಡು ಬಂದು ಒಂದು ವರದಿಯನ್ನು ಕೊಡುತ್ತೇವೆ, ಅದರ ಆಧಾರದ ಮೇಲೆ ನೀವು ಕ್ರಮ ಜರುಗಿಸುವುದಕ್ಕೆ ಅನುಕೂಲವಾಗುತ್ತದೆ ಎಂದಾಗ, ಏನೋ ಒಂದು ದೊಡ್ಡ ಅಘಾತ ಇದನ್ನು ಒಪ್ಪಿಕೊಂಡರೆ ಪ್ರತಿಷ್ಠೆಗೆ ಕುಂದು ಬರುತ್ತದೆ ಎಂದು ಭಾವಿಸುವುದರ ಬದಲು ಇದಕ್ಕೆ ಒಂದು ಕಾಲಮಿತಿಯನ್ನು ನಿಗದಿಮಾಡಿ ಜಂಟಿ ಸಮಿತಿಯನು ಮಾಡುವುದು ಒಳ್ಳೆಯದು, ಅದನ್ನು ಮಾಡಬೇಕಾದರೆ ಒಂದು ಕಡೆ ದವಸಧಾನ್ಯಗಳು ಕಾಳಸಂತೆಯಲ್ಲಿ ಹೋಗಿರುವುದು, ಇನ್ನೊಂದು ಕಡೆಯಲ್ಲಿ ಕೆಲಸ ಆಗಿದೆಯೋ ಅಥವಾ ಇಲ್ಲವೋ ಎಂಬುದನ್ನು ನೋಡುವುದು,, ಮತ್ತು ಬೇರೆ ಕಡೆ ಯಾವ ಯಾವ ಇಲಾಖೆಗಳು ನಮಗೆ ಕೋ–ಆರ್ಡಿನೇಟ್ ಮಾಡಬೇಕಾಗಿತ್ತು, ಅವು ಮಾಡದೆ ಬೇರೆ ಕಡೆಗೆ ವರ್ಗಾವಣೆಗಳನ್ನು ಮಾಡಿರುವುದು ಮತ್ತು ನಾಲ್ಕನೆಯದು ಎಷ್ಟೇ ಒಳ್ಳೆಯ ಅಧಿಕಾರಿಗಳು ಇರಲಿ, ಆ ಹಂತದಲ್ಲಿ ಏನಾದರು ದೋಷವಾಗಿದೆಯಾ ಎಂದು ಹೇಳಿ ಸಭೆಗೆ ಒಂದು ವರದಿಯನ್ನು ಕೊಡಬೇಕಾಗಿರುವುದು ನ್ಯಾಯ ಅನ್ನಿಸುಸತ್ತದೆ ನಾನು ನಮ್ಮ ಹತ್ತಿರ ಇರುವಂತಹ ಎಲ್ಲಾ ಅಧಿಕಾರಿಗಳು ಕೆಟ್ಟವರು ಎನ್ನುವುದಿಲ್ಲವೋ, ಇರುವಂತಹ ಎಲ್ಲಾ ಅಧಿಕಾರಿಗಳು ಭಾರಿ ಸಮರ್ಥರು ಯೋಗ್ಯರೆಂದು ಹೇಳುವುದಕ್ಕಾಗುವುದಿಲ್ಲ ಕೆಲವು ಸಲ ಅವರು ಆಜಾಗರೂಕತೆಯಿಂದ ಬೇಜವಾಬ್ದಾರಿಯಿಂದ, ಅವರುಗಳು ಉದ್ದೇಶಪೂರ್ವಕವಾಗಿ ಕೆಲಸವನ್ನು ಮಾಡಿದ್ದರೆ ಅವರು ಸಭೆಗೆ ಬರಲಿ, ಇಲ್ಲೊಂದು ವಿಧಾನಸಭೆ ಇದೆ, ಇಲ್ಲೊಂದು ಶಾಸಕಾಂಗ ಇದೆ, ನಾವು ಇವರ ಹತೋಟಿಯಲ್ಲಿರಬೇಕಾಗುತ್ತದೆ, ಅವರಿಗೆ ನಾವು ಹೆದರಿಕೊಂಡು ನಾಳೆ ಆಡಳಿತ ಮಾಡಬೇಕಾಗುತ್ತದೆ ಎಂಬ ಒಂದು ಭಾವನೆಯಾದರೂ ರಾಜ್ಯದಲ್ಲಿ ಸೃಷ್ಟಿಯಾಗಬೇಕಾಗುತ್ತದೆ ದಯಮಾಡಿ ಜಂಟಿ ಸದನ ಸಮಿತಿ ಮಾಡುವ ಬಗ್ಗೆ ಸನ್ಮಾನ್ಯ ಸಚಿವರು ಒಪ್ಪಿಕೊಳ್ಳಬೇಕೆಂದು ನಾನು ಕೂಡ ಒತ್ತಾಯವನ್ನು ಮಾಡುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಭಾಗೇಪಲ್ಲಿ) ಸನ್ಮಾನ್ಯ ಅಧ್ಯಕ್ಷರೆ, ಈಗ ಸರ್ಕಾರದವರ ಅಭಿಪ್ರಾಯವೇನಿದೆ, ಈಗ ಅಲ್‌ರೆಡಿ ಪ್ರಾರಂಭವಾಗಿರುವುದರಿಂದ ಬೇರೆ ಯಾವುದೇ ರೀತಿಯ ತನಿಖೆಯ ಅವಶ್ಯಕತೆ ಇಲ್ಲ ಎಂದು ಹೇಳತಕ್ಕಂತಹ ರೀತಿಯಲ್ಲಿ ಸರ್ಕಾರ ಅಭಿಪ್ರಾಯಕ್ಕೆ ಬಂದ ಹಾಗೆ ಇದೆ ಹಾಗಾದರೆ 5–6 ದಿವಸಗಳಿಂದ ಈ ಸದನ ಇಷ್ಟೆಲ್ಲಾ ಚರ್ಚೆ ಮಾಡತಕ್ಕಂತಹ ಅಗತ್ಯ ಏನಿತ್ತು ಇಷ್ಟು ಪ್ರಾಮುಖ್ಯವಾದಂತಹ ವಿಚಾರದ ಬಗ್ಗೆ ಇಡೀ ರಾಜ್ಯದ ಜನತೆಯು ಪ್ರತಿನಿಧಿಗಳಾಗಿರತಕ್ಕಂತಹವರು ಚರ್ಚೆ ಮಾಡಿದ್ದಾರೆ ಆ ಕಡೆಯವರೂ ಕೂಡ ಚರ್ಚೆ ಮಾಡಿದ್ದಾರೆ, ಇದರ ಬಗ್ಗೆ ನಾವು ಕೂಡ ಚರ್ಚೆ ಮಾಡಿದ್ದೇವೆ, ಎಲ್ಲರೂ ಕೂಡ ಒಟ್ಟಿಗೆ ಚರ್ಚೆ ಮಾಡಿದ್ದೇವೆ, ಹಾಗಾದರೆ ಚರ್ಚೆ ಮಾಡುವಂತಹ ಅವಶ್ಯಕತೆಯೇ ಇರಲಿಲ್ಲ ಯಾವ ತನಿಖೆಯೂ ಕೂಡ ಅವಶ್ಯಕತೆ ಇಲ್ಲ, ಈಗ ಅಲ್‌ರೆಡಿ ಸಿಓಡಿ ತನಿಖೆ ಇದೆ ಎಂದು ಹೇಳತಕ್ಕಂತಹ ಅಭಿಪ್ರಾಯ ಸರ್ಕಾರಕ್ಕೆ ಬಂದಿದ್ದರೆ ಇಷ್ಟು ದಿವಸಗಳ ಕಾಲ ಚರ್ಚೆಯ ಅವಶ್ಯಕತೆ ಏನಿತ್ತು? ಚರ್ಚೆಯನ್ನು ಮಾಡಿದ ಮೇಲೆ ಜನತೆಯು ಇದನ್ನು ನಿರೀಕ್ಷೆ ಮಾಡುತ್ತಿದ್ದಾರೆ, ಸದನದಲ್ಲಿ ಇಂತಹ ಒಂದು ಗಂಭೀರವಾದಂತಹ ವಿಚಾರ ಚರ್ಚೆಯಾಗುತ್ತಿದೆ, ಏನೋ ಒಂದು ಫಲಿತಾಂಶವನ್ನು ನಿರೀಕ್ಷೆ ಮಾಡುತ್ತಿದ್ದಾರೆ ಈಗ ಸಿಬಿಐ

ಎನ್‌ಕ್ವಯರಿನೂ ಕೂಡ ಬೇಡ ಎಂದು ಹೇಳುತ್ತೀರಿ, ಜಂಟಿ ಸದನ ಸಮಿತಿಯು ಕೂಡ ಬೇಡ ಎಂದು ಹೇಳುತ್ತೀರಿ, ಏನೂ ಬೇಡವೆಂದು ಹೇಳುವುದಾದರೆ ಸರ್ಕಾರ ಈ 5–6 ದಿವಸಗಳಿಂದ ಇಷ್ಟೆಲ್ಲಾ ಸಮಯ ಸದನ ನಡೆಯಬೇಕಾದರೆ ಒಂದು ದಿವಸಕ್ಕೆ ಎಷ್ಟು ಖರ್ಚು ಆಗುತ್ತದೆ? ಏನೇನಾಗುತ್ತದೆ ಇವೆಲ್ಲವನ್ನೂ ಕೂಡ ನಾವು ಚರ್ಚೆ ಮಾಡಿ ಇಷ್ಟು ಅಮೂಲ್ಯವಾದಂತಹ ಸಮಯವನ್ನು ವ್ಯಯ ಮಾಡಿ ನಾವು ಚರ್ಚೆ ಮಾಡತಕ್ಕಂತಹ ಅವಶ್ಯಕತೆ ಇತ್ತಾ? ಇಷ್ಟೆಲ್ಲಾ ಚರ್ಚೆ ಮಾಡಿದ ಮೇಲೆ ಏನೂ ಪ್ರಯೋಜನವಾಗಲಿಲ್ಲವೆಂದರೆ ನಾವು ಚರ್ಚೆ ಮಾಡತಕ್ಕಂತಹ ಅವಶ್ಯಕತೆ ಇಲ್ಲ ಇಷ್ಟೆಲ್ಲ ಚರ್ಚೆ ಮಾಡಿದಮೇಲೆ ಏನೂ ಪ್ರಯೋಜನ ಆಗುವುದಿಲ್ಲ ಎಂದರೆ ಇಡೀ ನಮ್ಮ ಸದನದ ಬಗ್ಗೆ ನಮ್ಮ ಸದಸ್ಯರ ಬಗ್ಗೆ ನಾಳೆ ದಿವಸ ಜನ ಗುಮಾನಿಪಡುತ್ತಾರೆ ಆದ್ದರಿಂದ ಸರ್ಕಾರದವರು ಇದನ್ನು ಗಮನಿಸಬೇಕು ಅವರು ಕೊಟ್ಟಿಂಧ ಕಾರಣ ಏನು? ಸದನದ ಸದಸ್ಯರುಗಳು ಅಭಿಮಾನಗಳ ಸನ್ಮಾನಕ್ಕೆ ಹೋಗಬೇಕಾಗುತ್ತದೆ ಆದ್ದರಿಂದ ಅವರು ಆ ಸಮಯವನ್ನು ಇದಕ್ಕೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಇದು ಸರಿಯಾದ, ಸಮಂಜಸವಾದ ಕಾರಣ ಅಲ್ಲ ಜವಾಬ್ದಾರಿಯುತ ಸ್ಥಾನದಲ್ಲಿರುವಂಧ ಸದಸ್ಯರು ಆ ಜಂಟಿ ಸದನ ಸಮಿತಿಗೆ ಹೋದಾಗ ಅಧವಾ ಇನ್ನಾವುದೇ ತನಿಖೆಗೆ ಹೋಗಬೇಕಾದಾಗ ಅವರು ಹೋಗಬೇಕಾಗುತ್ತದೆ ಇಲ್ಲದಿದ್ದರೆ ಇಷ್ಟು ದಿವಸ ಚರ್ಚೆ ಮಾಡಿ ಸದನದಲ್ಲಿ ಏನೂ ಫಲಿತಾಂಶ ದೊರೆಯಲಿಲ್ಲವೆಂದರೆ ಜನ ನಮ್ಮ ಬಗ್ಗೆ ಏನು ಅಭಿಪ್ರಾಯ ಪಡುತ್ತಾರೆ? ಬರೇ ಇವರು ಚರ್ಚೆಮಾಡುತ್ತಾರೆ, ಇದರಿಂದ ಏನೂ ಪ್ರಯೋಜನ ಆಗುವುದಿಲ್ಲ ಎಂದು ಅವರು ಭಾವಿಸುತ್ತಾರೆ ಇದು ನಮ್ಮ ಮೇಲೆ ಇರತಕ್ಕಂಧ ವಿಶ್ವಾಸಾರ್ಹತೆಯ ಪ್ರಶ್ನೆ. ಇದು ಈ ಸದನದ ವಿಶ್ವಾಸಾರ್ಹತೆಯ ಪ್ರಶ್ನೆ. ಮತ್ತು ಇದು ಈ ಸದನದ ಶಕ್ತಿಯ ಪ್ರಶ್ನೆ. ಹಾಗಾದರೆ ಈ ಸದನಕ್ಕೆ ಏನೂ ಶಕ್ತಿ ಇಲ್ಲವೇನು? ಈ ಎಲ್ಲಾ ಪ್ರಶ್ನೆಗಳೂ ಬರುತ್ತವೆ ಹಾಗಾಗಿ ಯಾವುದಾದರೂ ತನಿಖೆಗೆ ಅವರು ಒಪ್ಪಲೇಬೇಕು, ಬರೇ ಸಿ.ಓ.ಡಿ ತನಿಖೆಯನ್ನು ನಡೆಸುತ್ತಿದ್ದೇವೆ, ಇನ್ನೇನೂ ಅವಶ್ಯಕತೆ ಇಲ್ಲವೆಂದು ಹೇಳುವುದಾದರೆ ನಾವು ಇಷ್ಟೆಲ್ಲಾ ಚರ್ಚೆ ಮಾಡುವ ಅವಶ್ಯಕತೆ ಇರಲಿಲ್ಲ ನಾವು ಇಷ್ಟೆಲ್ಲ ಜನ ಸದಸ್ಯರು ಮಾಡಿದಂಧ ಚರ್ಚೆ ವ್ಯರ್ಥವೇನು? ಇದನ್ನೆಲ್ಲಾ ನಾವು ಏಕೆ ಮಾಡಬೇಕಾಗಿತ್ತು? ಆದ್ದರಿಂದ ಯಾವುದಾದರೂ ಒಂದು ತನಿಖೆಗೆ ಸರ್ಕಾರ ಒಪ್ಪಲೇಬೇಕು ಸಿ ಬಿ ಐ ಗಾದರೂ ಒಪ್ಪಿಸಲಿ ಅಧವಾ ಜಂಟಿ ಸಮಿತಿಗಾದರೂ ಒಪ್ಪಿಸಲಿ ಒಟ್ಟಿನಲ್ಲಿ ಯಾವುದಾದರೂಒಂದು ತನಿಖೆ ಆಗಬೇಕು ಇಲ್ಲದಿದ್ದರೆ ನಾವೆಲ್ಲರೂ ನಿಷ್ಪ್ರಯೋಜಕರು ಎನ್ನತಕ್ಕಂಧ ಒಂದು ಸಂದೇಶವನ್ನು ಜನತೆಗೆ ಕೊಟ್ಟಹಾಗೆ ಆಗುತ್ತದೆ ನಾವೆಲ್ಲರೂ ಅಪ್ರಯೋಜಕರು, ಈ ಸದನದಲ್ಲಿ ಚರ್ಚೆ ಮಾಡುವುದರಿಂದ ಏನೂ ಪ್ರಯೋಜನ ಇಲ್ಲ, ಇವರು ಸಮಯವನ್ನು ಸುಮ್ಮನೆ ಹಾಳು ಸಮಾಡುತ್ತಿದ್ದಾರೆ ಇದರಿಂದ ಏನಾಯಿತು? ಇಷ್ಟೆಲ್ಲಾ ಚರ್ಚೆ ನಡೆದರೂ ಕೂಡ ಸದನದಲ್ಲಿ ಏನೂ ಆಗಲಿಲ್ಲ ಎನ್ನತಕ್ಕಂಧ ಒಂದು ತಪ್ಪು ಸಂದೇಶ ಜನತೆಗೆ ಇದರಿಂದ ಹೋಗುತ್ತದೆ ಆದ್ದರಿಂದ ದಯವಿಟ್ಟು ಸರ್ಕಾರದವರು ಇದನ್ನು ಅರ್ಥಮಾಡಿಕೊಳ್ಳಬೇಕು ಇದರಲ್ಲಿ ಯಾವುದೇ ಪ್ರತಿಷ್ಠೆಯ ಪ್ರಶ್ನೆ ಇಲ್ಲವೆಂದು ಹೇಳುವುದಾದರೆ ನೀವು ಯಾವುದಾದರೂ ತನಿಖೆಗೆ ಒಪ್ಪಿಕೊಳ್ಳಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೇ, ಈಗ ಜಂಟಿ ಸದನ ಸಮಿತಿ ಮಾಡಬೇಕೇ ಬೇಡವೇ ಎಂದು ಚರ್ಚೆ ನಡೆಯುತ್ತಿದೆ ಈ ಪ್ರೋಗ್ರಾಮ್ ಬಗ್ಗೆ ನಾವು ಚರ್ಚೆ ಮಾಡಿದೆವು. ಮಾನ್ಯ ಪ್ರಕಾಶ್ ಅವರು ಒಂದು ಮಾತನ್ನು ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ ನಾನು ಕೇಂದ್ರ ಸರ್ಕಾರಕ್ಕೆ ನಮಗೆ ಕಾಳನ್ನು ಕೊಡಿ, ಕೆಲಸ ಯಾವರೀತಿ ಮಾಡಿಸಬೇಕು ಎಂದು ನಾವು ತೀರ್ಮಾನ

ಮಾಡುವುದಕ್ಕೆ ಅಧಿಕಾರವನ್ನು ನಮಗೆ ಕೊಡಬೇಕು ಎನ್ನುವಂಧಾದ್ದು ಪ್ರಾಯಶಃ ಸದನದ ಸದಸ್ಯರು ಒಂದು ಸಮಿತಿಯನ್ನು ಮಾಡಿ ಅದರ ಬಗ್ಗೆಯೂ ಚರ್ಚೆ ಮಾಡಿದಾಗ ಈ ಸದನದಿಂದ ಅದನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಕ್ಕೆ ಸಾಧ್ಯವಾಗುತ್ತದೆ ಆದ್ದರಿಂದ ಅವರು ಹೇಳಿದಂಧ ಮಾತನ್ನು ನಾನು ಒಪ್ಪುತ್ತೇನ ಅದಕ್ಕೋಸ್ಕರ ಅದರ ಬಗ್ಗೆ ಕೂಲಂಕುಷವಾಗಿ ಚರ್ಚೆಯನ್ನು ಮಾಡಲಿಕ್ಕೆ ಕಮಿಟಿಯನ್ನು ಮಾಡಿದರೆ ತಪ್ಪಾಗಲಿಕ್ಕಿಲ್ಲ ಹಿಂದಿನ ಸದನದಲ್ಲಿ ಚರ್ಚೆಯಾಗಿದ್ದುದರಿಂದ ಹಿಡಿದು ಈ ವ್ಯವಸ್ಥೆ ಬಗ್ಗೆ ವಿವರವಾಗಿ ಚರ್ಚೆ ಮಾಡಿ ಈ ಸದನದಲ್ಲಿ ಪುನಃ ಅದನ್ನು ಮಂಡಿಸಿದಾಗ ನಾವು ಎಲ್ಲರೂ ಕುಳಿತು ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ನನ್ನ ಅಭಿಪ್ರಾಯವನ್ನು ನಾನು ವ್ಯಕ್ತಪಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ)

ಮಾನ್ಯ ಎಲ್ಲಾ ಸದಸ್ಯರುಗಳ ಕಳಕಳಿಯನ್ನು ನಾವು ಅರ್ಥಮಾಡಿಕೊಂಡಿದ್ದೇವೆ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದಂತೆ ಚರ್ಚೆ ಮಾಡಿದಂಧ ಎಲ್ಲಾ ವಿಷಯ ಕೂಡ ನಿರುಪಯುಕ್ತ ಎಂದು ನಾನು ಭಾವಿಸಿಕೊಂಡಿಲ್ಲ ಚರ್ಚೆ ಮಾಡಿ ಯಾವುದೇ ನಿರ್ಧಾರ ಬಂದಿರಬಹುದು ಅದು ನಿಮಗೆ ಒಪ್ಪಿತವಾಗಿರಲೇಬೇಕು, ಹಾಗಾದರೆ ಚರ್ಚೆ ಫಲಪ್ರದ ಆಯಿತು ಎಂದು ಭಾವಿಸಬೇಕಾದದ್ದು ಇಲ್ಲ ಚರ್ಚೆಯ ಮೂಲಕವಾಗಿ ಬೆಳಕು ಚೆಲ್ಲಲ್ಪಡುತ್ತದೆ ಅದಕ್ಕೆ ಅನುಗುಣವಾದಂಧ ರೀತಿಯಲ್ಲಿ ಆಗ ಸರ್ಕಾರ ತನ್ನ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ ನಾವು ಸಿ ಓ ಡಿ ತನಿಖೆಯನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ ಅದು ದಕ್ಷವಾಗಿ, ಪ್ರಮಾಣಿಕವಾಗಿ, ತ್ವರಿತ ಗತಿಯಲ್ಲಿ ಮಾಡುತ್ತಿದೆ ಎನ್ನುವುದರ ಬಗ್ಗ ತಮ್ಮದೂ ಕೂಡ ಸಹಮತ ಇರುವುದರಿಂದ ಚರ್ಚೆ ಅದರಿಂದ ಸಂಪೂರ್ಣವಾಗಿ ವಿಫಲವಾಯಿತು, ತೌಡು ಕುಟ್ಟುವ ಕೆಲಸವಾಯಿತು ಎಂದು ನಾವು ಭಾವಿಸಿಲ್ಲ ಆದ್ದರಿಂದ ಇಲ್ಲಿ ಮುಖ್ಯವಾಗಿ ಇರತಕ್ಕಂಧಾದ್ದು, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದಂತೆ ಮುಂದೆ ನಡೆಯತಕ್ಕಂಧ ದಿನಮಾನಗಳಲ್ಲಿಯೂ ಕೂಡ ನಮ್ಮ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದಲ್ಲಿ ಇದಕ್ಕೆ ಬೇಕಾಗಿರತಕ್ಕಂಧ ವ್ಯವಸ್ಥೆ ಬಗ್ಗೆ, ಇಡೀ ವ್ಯವಸ್ಥೆಯೇ ಭ್ರಷ್ಟಾಚಾರಕ್ಕೆ ಒಳಗಾಗಿದೆ ಎಂದರೆ ಇದರ ಬಗ್ಗೆಯೂ ಕೂಡ ಕೂಲಂಕುಶವಾಗಿ ನಮ್ಮ ಆತ್ಮ ನಿರೀಕ್ಷಣೆ ಮಾಡಿಕೊಂಡು ಚರ್ಚೆ ಮಾಡಬೇಕಾಗಿದೆ ಇದು ನಮ್ಮ ಸಂವಿಧಾನ ಬರೆದಂಧವರಿಗೆ ಕೂಡ ಗೊತ್ತಿತ್ತು ಆದ್ದರಿಂದಲೇ ಸಂವಿಧಾನದ ಮೊದಲನೇ ಭಾಗದಲ್ಲಿಯೇ ಈ ಮಾತನ್ನು ಹೇಳುತ್ತಾರೆ The Constitution has reared immortality if the work of a man is entitled for that title in an hour of folly, in an hour of negligence, in an hour of corruption it will perish The only keepers are the people The people" is most important ಈ ಜನವರ್ಗ ಪ್ರಬುದ್ಧತೆಯಿಂದ ಕೂಡಿದವರಾದರೆ ಇಂತಹ ಎಲ್ಲಾ ತಪ್ಪುಗಳು, ಭ್ರಷ್ಟಾಚಾರಗಳು ತನ್ನಷ್ಟಕ್ಕೆ ತಾನೇ ಕಡಿಮೆಯಾಗತಕ್ಕಂಧಾದ್ದು ಇದೆ ಆದ್ದರಿಂದ ಈ ವ್ಯವಸ್ಥೆ ಬಗ್ಗೆ ಚರ್ಚೆ ಮಾಡುವಾಗ ಯಾವ್ಯಾವ ತರಹದಲ್ಲಿ ನಾವು ವ್ಯವಸ್ಥೆಯನ್ನು ಮಾಡಬೇಕು ಎನ್ನುವುದು ಏನಿದೆ, ಅದರ ಬಗ್ಗೆ ಮುಂದೆ ಬರತಕ್ಕಂಧ ದಿನಮಾನಗಳಲ್ಲಿ ನಮ್ಮ ವಂದನಾ ನಿರ್ಣಯದಲ್ಲಿ ಈ ಚರ್ಚೆಯನ್ನು ಮಾಡೋಣ ಇವತ್ತು ದಯವಿಟ್ಟು ಇದಕ್ಕೆ ಒತ್ತಾಯ ಮಾಡಬೇಡಿ ನಾವು ಸದನ ಸಮಿತಿಯನ್ನು ರಚನೆ ಮಾಡುವುದಿಲ್ಲ ಎನ್ನುವುದು ಯಾವುದೇ ಪ್ರತಿಷ್ಠೆಯ ಮಾತಲ್ಲ ನಮ್ಮ ಅನುಭವದ ಹಿನ್ನಲೆಯಲ್ಲಿ ಆಗಿರತಕ್ಕಂಧ ಮಾತಿಗಾಗಿ ಇದನ್ನು ಹೇಳಿದ್ದೇವೆ ದಯಮಾಡಿ ತಾವು ಸಹಕರಿಸಬೇಕೆಂದು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಮಾನ್ಯ ಸಭಾಧ್ಯಕ್ಷರೇ, ಒಂದು ವಿನಂತಿಯನ್ನು ನಾನು ಮತ್ತೊಮ್ಮೆ ಮಾಡುತ್ತೇನೆ ನಾವೆಲ್ಲಾ ಪ್ರತಿಪಕ್ಷದ ಮುಖಂಡರುಗಳು ಒಂದು ಚರ್ಚೆಯನ್ನು ಮಾಡಿದ್ದೇವೆ ಈ ಧರಣಿ, ವಾಕ್‌ಔಟ್ – ಇದು ಅನಿವಾರ್ಯವಾದಾಗ ಮಾಡೋಣ ಸರ್ಕಾರ ನಮ್ಮ ನ್ಯಾಯವಾದ ಬೇಡಿಕೆಗೆ ಮನ್ನಣೆಯನ್ನು ಕೊಡದೇ ಇದ್ದಾಗ, ಜನಹಿತಕ್ಕೆ ಸ್ಪಂದಿಸದೇ ಇದ್ದಾಗ ಇದನ್ನು ಮಾಡೋಣ ಇಲ್ಲದಿದ್ದರೆ ಆರೇಳು ತಿಂಗಳಿಂದ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿರುವ ಕಾಲದಲ್ಲಿ ಈ ವಿಧಾನ ಮಂಡಲದ ಪ್ರತಿ ನಿಮಿಷ ಕೂಡ ನಾಡಿನ ಜನರ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಹುಡುಕುವುದಕ್ಕೆ ಉಪಯೋಗ ಆಗಬೇಕು ವಾದ ವಿವಾದಗಳಿಂದಲೇ ನಾವು ತೃಪ್ತಿಪಟ್ಟುಕೊಂಡು ಹೋಗಬಾರದು ಇದೆಲ್ಲಾ ನಾವು ಕುಳಿತು ಮಾತನಾಡಿ ಬಹಳ ಗಂಭೀರವಾದ ವಿಷಯದ ಬಗ್ಗೆ ನಿನ್ನೆ ಮೊನ್ನೆಯಿಂದ ಚರ್ಚೆ ಮಾಡುತ್ತಿದ್ದೇವೆ ಈ ಸಮಯದಲ್ಲಿ ಎಲ್ಲೋ ಒಂದು ಕಡೆ ನಮಗೆ ಏನು ಅನುಮಾನ ಬರುತ್ತಿದೆ ಎಂದರೆ ನಮ್ಮ ಜೆ ಡಿ ಎಸ್ ನಾಯಕರು ಒಂದು ರೀತಿಯ ಸಂಕಷ್ಟದಲ್ಲಿ ನೀವು ಸಿಕ್ಕಿಕೊಂಡಿದ್ದೀರಿ ಏಕೆಂದರೆ ಮೊದಲ ಬಾರಿಗೆ ಈ ಸಮ್ಮಿಶ್ರ ಸರ್ಕಾರ ಆದಂಧ ಸಂದರ್ಭದಲ್ಲಿ ಈ ಜಂಟಿ ಸದನ ಸಮಿತಿಯ ವರದಿ ಹೊರಬಂದರೆ ಈ ರೀತಿ ಹಿಂದೆ ಲೂಟಿ ಮಡಿದವರ ಜತೆಗೆದ ಇವರು ಶಾಮೀಲಾಗಿದ್ದಾರಲ್ಲಾ ಎನ್ನುವಂಧ ಭಾವನೆ ಜನರಿಗ ಬಂದು ನಾವು ಅಪರಾಧಿ ಸ್ಥಾನದಲ್ಲಿ ನಿಲ್ಲುತ್ತೇವೆ ಎನ್ನುವಂಧ ಭಯ ನಿಮ್ಮನ್ನು ಕಾಡುತ್ತಿರಬಹುದು ಅಧವಾ ಈ ತರಹ ಹಗರಣ ಮಾಡಿರುವವರನ್ನು ರಕ್ಷಣೆ ಮಾಡುವುದಕ್ಕೆ ನಿಂತಿದ್ದಾರೆ ಎನ್ನುವಂಧ ಭಾವನೆ ಜನರಿಗೆ ಬಲುವಂತಹ ಸಂಭವ ಇದೆ ಮಾನ್ಯ ಸಿದ್ಧರಾಮಯ್ಯನವರು ಇಲ್ಲಿ ಇದ್ದಾರೆ ನಾನು ಅವರಲ್ಲಿ ವಿನಂತಿ ಮಾಡುತ್ತೇನೆ ನಾವು ಏನು ಕೇಳಿದ್ದೇವೆ ಸ್ವಾಮಿ? ನಾವು ಸಿ.ಬಿ ಐ ಗೆ ಕೇಳಿಲ್ಲ ಜಂಟಿ ಸದನ ಸಮಿತಿಯಲ್ಲಿ ನಿಮ್ಮ ಪಕ್ಷದ ಸದಸ್ಯರೇ ಅದಕ್ಕೆ ಅಧ್ಯಕ್ಷರಾಗಿ ಇರುತ್ತಾರೆ ಈ ವ್ಯವಸ್ಥೆಯ ಲೋಪದೋಷಗಳನ್ನು ತಿಳಿದುಕೊಂಡು ಇನ್ನು ಮುಂದಾದರು ಹೊಸದಾಗಿ ಒಂದು ಅಧ್ಯಾಯ ಪ್ರಾರಂಭವಾಗಲಿ, ಒಳ್ಳೆಯ ಆಡಳಿತ ಜನರಿಗೆ ಸಿಗಲಿ ಎನ್ನುವಂಧ ಸದುದ್ದೇಶದಿಂದ ಇದನ್ನು ಹೇಳಿದಮೇಲೂ ಕೂಡ ನೀವು ಜಂಟಿ ಸದನ ಸಮಿತಿಗೆ ನಿಮ್ಮದೇ ಆದಂಧ ವ್ಯಾಖ್ಯಾನವನ್ನು ಮಾಡಿ ಇದರಿಂದ ಉಪಯೋಗ ಆಗುವುದಿಲ್ಲ ಎನ್ನುವುದು ನಿಮ್ಮ ತರ್ಕವಾದರೆ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದಂತೆ ಬಹುಶಃ ಈ ರೀತಿಯ ಚರ್ಚೆಗೆ ಯಾವುದೇ ಬೆಲೆ ಇಲ್ಲ, ನೀವು ಬೇಕಾದದ್ದು ಹೇಳಿ, ಆಡಳಿತ ಪಕ್ಷದವರು ಹೇಳಿದಹಾಗೆ ಕೇಳಿಕೊಂಡು ಹೋಗಿ ಎಂದು ಹೇಳುವುದಕ್ಕೆ ನಾವು ಇಲ್ಲಿ ಕುಳಿತಿಲ್ಲ. ನಾವು ಒತ್ತಾಯ ಮಾಡುತ್ತಿದ್ದೇವೆ ಪ್ರತಿಪಕ್ಷವಾಗಿ ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ರಾಜ್ಯದ ಐದೂವರೆ ಕೋಟಿ ಜನ ನಿಮ್ಮ ಪ್ರತಿ ಕ್ಷಣಕ್ಷಣದ ಈ ಒಂದು ಚಿಂತನೆ, ಚರ್ಚೆ, ನೀವು ಹೋಗುತ್ತಿರುವ ದಾರಿಯನ್ನು ಗಮನಿಸುತ್ತಿದೆ ಅದಕ್ಕಾಗಿ ನಾನು ಒತ್ತಾಯ ಮಾಡುತ್ತಿದ್ದೇನೆ ಇಲ್ಲದಿದ್ದರೆ ಭ್ರಷ್ಟರನ್ನು ರಕ್ಷಿಸುವಂಧಾದ್ದು, ಯಾರೋ ಕೆಲವರನ್ನು ವ್ಯಾಪಾರಸ್ಥರನ್ನೋ, ಮತ್ತೊಬ್ಬರನ್ನೋ ತೋರಿಸಿಬಿಟ್ಟು ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡು 'ನೀನು ಸಸ್ಪೆಂಡ್ ಆಗಯ್ಯ, ಆಮೇಲೆ ಅದನ್ನು ರಿವೋಕ್ ಮಾಡುತ್ತೇವೆ, ಇದುವರೆಗೂ ಯಾವನು ಜೈಲಿಗೆ ಹೋಗಿದ್ದಾನೆ' ಎಂದು ಅವನಿಂದ ಎಲ್ಲಾ ಬರೆಸಿಕೊಂಡು ದಾಖಲೆಗಳನ್ನು ತಿರುಚಿ ಇದನ್ನು ಮುಚ್ಚಿಹಾಕತ್ಕಂಧ ವ್ಯವಸ್ಥಿತವಾದ ಷಡ್ಯಂತ್ರ, ಪ್ರಯತ್ನ ಮಾಡುತ್ತಿದ್ದೀರಿ ಎಂದು ಜನ ಭಾವಿಸುತ್ತಾರೆ ದಯಮಾಡಿ ಅದಕ್ಕೆ ಅವಕಾಶವನ್ನು ಕೂಡಬೇಡಿ ಆ ಕೆಟ್ಟ ಹೆಸರನ್ನು ತಾವು ತೆಗೆದುಕೊಳ್ಳಬೇಡಿ ಬಹುಶಃ ನಿಮ್ಮ ಆಡಳಿತ ಪಕ್ಷದಲ್ಲಿ ಇದ್ದವರೂ ಸಹ ಈ ಒಂದು ಚರ್ಚೆಯ ಹಿನ್ನಲೆಯಲ್ಲಿ 224

ಶಾಸಕರುಗಳ ಕ್ಷೇತ್ರಗಳಿಗೂ ಸಂಬಂಧಪಟ್ಟ ವಿಷಯವಾಗಿರುವುದರಿಂದ ನಿಮ್ಮ ನಾಯಕರಿಗೆ ಸ್ವಲ್ಪ ಬುದ್ಧಿಹೇಳಿ ಸದನ ಸಮಿತಿಯಲ್ಲಿ ನೀವೂ ಕೂಡ ಇರುತ್ತೀರಿ ಆದ್ದರಿಂದ ಸಮಗ್ರವಾಗಿ ತನಿಖೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎನ್ನುವಂಥ ಒತ್ತಾಯವನ್ನು ನಾನು ಮಾಡುತ್ತೇನೆ

ಶ್ರೀ ವಾಟಾಳ್ ನಾಗರಾಜ್ ತಾವು ಮೊದಲೇ ಇದರಲ್ಲಿ ಪ್ರತಿಷ್ಠೆ ಏನೂ ಇಲ್ಲವೆಂದು ಹೇಳಿದಿರಿ ಸದನ ಸಮಿತಿಯನ್ನು ಮಾಡಬೇಕು ಎಂದು ನಮಗೂ ಪ್ರತಿಷ್ಠೆ ಇಲ್ಲ ಈಗ ಶ್ರೀರಾಮರೆಡ್ಡಿಯವರು ಮತ್ತು ನಾವೆಲ್ಲರೂ ಮಾತನಾಡಿದ್ದೇವೆ ಈ ಸದನದಲ್ಲಿ ಮೂರು-ನಾಲ್ಕು ದಿವಸಗಳಿಂದ ಸಮಗ್ರವಾಗಿ ಚರ್ಚೆ ನಡೆದಿದ್ದು, ಜನ ಏನು ನಿರೀಕ್ಷಣೆ ಮಾಡುತ್ತಿದ್ದಾರೆ? ಏನೋ ಒಂದು ಹೊಸ ಚಿಂತನೆಯಾಗುತ್ತಿದೆ, ಏನೋ ಒಂದು ನಿರ್ಧಾರಕ್ಕೆ ಬರುತ್ತಿದ್ದಾರೆ ಎಂದು ನಿರೀಕ್ಷೆ ಮಾಡುತ್ತಿದ್ದಾರೆ ಈ ಸಿ ಓ ಡಿ ತನಿಖೆ ಮಾಡಬೇಕೆಂದು ನಾವೇನೂ ಕೇಳಿರಲಿಲ್ಲ ಅದನ್ನು ಮೊದಲೇ ನೀವು ಮಾಡಿದ್ದೀರಿ ಈ ಸದನ ಆರಂಭಕ್ಕೆ ಮುಂಚೆಯೇ ಸಿ ಓ ಡಿ ವ್ಯವಸ್ಥೆಯನ್ನು ಮಾಡಿದ್ದೀರಿ ಈಗ ಸದನ ಸಮಿತಿ ಮಾಡುವಾಗ ಅಧ್ಯಕ್ಷರ ನೇಮಕದ ಚಿಂತನೆಯನ್ನು ಮಾಡುವವರು ನೀವೇ ಈ ಸದನ ಸಮಿತಿಗೆ ನೀವು ಯಾರನ್ನಾದರೂ ಅಧ್ಯಕ್ಷರನ್ನಾಗಿ ಮಾಡಿ ಅದರಲ್ಲಿ ನಮ್ಮದೇನೂ ತಕರಾರಿಲ್ಲ ಸದನ ಸಮಿತಿಗೆ ಒಂದು ಹೊಸ ವ್ಯವಸ್ಥೆಯಾಗಬೇಕು ಇವತ್ತು ಕರ್ನಾಟಕದ ಇತಿಹಾಸದಲ್ಲಿ ಎರಡು ಬಹಳ ಮುಖ್ಯವಾದ ಪಕ್ಷಗಳು ಸೇರಿ ಒಂದು ಸರ್ಕಾರ ರಚನೆ ಮಾಡಿದ್ದೀರಿ ಬಹುಶಃ ಜಾತ್ಯಾರೀತ ದಳದವರದ್ದು ಹೊರಗಡೆ ನಿಮ್ಮ ಮಾತುಗಳು, ನಿಮ್ಮ ಟೀಕೆಗಳು, ನಿಮ್ಮ ಆರ್ಭಟಗಳು ಇದನ್ನೆಲ್ಲಾ ನೋಡಿದಾಗ ಒಂದು ನಿಮಿಷದಲ್ಲಿ ಈ ವಿಚಾರವನ್ನು ನೀವು ಒಪ್ಪಿಕೊಳ್ಳಬೇಕಾಗಿತ್ತು ಆದರೆ ನೀವು ಒಪ್ಪಿಕೊಳ್ಳುತ್ತಿಲ್ಲ ಏಕೆ ಇಷ್ಟು ಅನುಮಾನಕ್ಕೆ ಎಡೆ ಮಾಡಿಕೊಡುತ್ತೀರಿ? ನಾನು ತಮಗೆ ಬಹಳ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ ಇದೆಲ್ಲಾ ಗೊಂದಲವಾಗಿ, ಧರಣಿ ಮಾಡಿ ಅಂತಿಮವಾಗಿ ನೀವು ಒಪ್ಪಿಕೊಳ್ಳುವ ಬದಲು ಬಹಳ ಗೌರವವಾಗಿ ನೀವುಒಪ್ಪಿಕೊಂಡರೆ ನಿಮಗೂ ಈ ರಾಜ್ಯದಲ್ಲಿ ಒಳ್ಳೆಯ ಹೆಸರು ಬರುತ್ತದೆ ಶಕ್ತಿಯೂ ಬರುತ್ತದೆ ಮತ್ತು ನಿಮಗೆ ಹೆಚ್ಚು ಅನುಕೂಲವಾಗುತ್ತದೆ ಆ ದೃಷ್ಟಿಯಿಂದ ಮತ್ತೊಮ್ಮೆ ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇವೆ ಈ ಮನವಿಯನ್ನು ತಾವು ಸ್ವೀಕಾರ ಮಾಡಿ ಸದನ ಸಮಿತಿಗೆ ಒಪ್ಪಿಕೊಳ್ಳತಕ್ಕಂಥಾದ್ದು ಒಳ್ಳೆಯದು ಎನ್ನತಕ್ಕಂಥ ಮಾತನ್ನು ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ ಮತ್ತೆ ಮತ್ತೆ ನೀವು ಆಗುವುದಿಲ್ಲವೆಂದು ಹೇಳಿದರೆ ನಮ್ಮ ದಾರಿ ನಮ್ಮದು, ನಿಮ್ಮ ದಾರಿ ನಿಮ್ಮದು

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೇ, ಬೇಕಾದರೆ ಹದಿನೈದು ನಿಮಿಷ ಸದನವನ್ನು ಮುಂದೂಡಿ ಕುಳಿತು ಮಾತನಾಡಿ ಗೌರವಯುತವಾಗಿ ಒಂದು ತೀರ್ಮಾನ ತೆಗೆದುಕೊಳ್ಳೋಣ ರಾಜ್ಯದ ಜನತೆಗೆ ಒಂದು ಒಳ್ಳೆಯ ಸಂದೇಶ ಹೋಗಲಿ ನೀವು ಯಡಿಯೂರಪ್ಪನವರೇ, ಏನು ಬೇಕಾದರು ಮಾಡಿ, ನಮಗೇನು ಬೇಕೋ ಆ ತೀರ್ಮಾನ ನಾವು ತೆಗೆದುಕೊಳ್ಳುತ್ತೇವೆ ಎಂದು ನಿಮಗನ್ನಿಸಿದರೆ ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ

ಶ್ರೀ ಕೆ.ಎಸ್ ಈಶ್ವರಪ್ಪ (ಶಿವಮೊಗ್ಗ) ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದ ಜನತೆ ನೋಡುತ್ತಿದ್ದೆ. ಈ ಸರ್ಕಾರ ಈ ರೀತಿ ಭ್ರಷ್ಟರನ್ನು, ಕಳ್ಳರನ್ನು, ಸುಳ್ಳರನ್ನು ರಕ್ಷಣೆ ಮಾಡುತ್ತದೆಯೋ, ಅವರ ಪರವಾಗಿ ಇರುತ್ತದೆಯೋ ಅಥವಾ ಅವರ ವಿರುದ್ಧವಾಗಿ ಇರುತ್ತದೆಯೋ ಎಂದು ಇಡೀ ರಾಜ್ಯದ ಜನತೆ ನೋಡುತ್ತಿದ್ದಾರೆ ಈಗ ಈ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಒಬ್ಬೊಬ್ಬರನ್ನು, ಚಿಕ್ಕಮಟ್ಟವರನ್ನು ಅರೆಸ್ಟ್ ಮಾಡಿದ್ದಾರೆ, ಇನ್ನೂ ಅವರನ್ನು ಬಿಟ್ಟಿಲ್ಲ ಸ್ವಲ್ಪ ತಡೆಯಿರಿ, ವಿರೋಧ ಪಕ್ಷದವರು ಬಹಳ ಗಲಾಟೆ

ನಡೆಸುತ್ತಿದ್ದಾರೆ, ವಿಧಾನ ಸಭೆ ನಡೆಯುತ್ತಾ ಇದೆ ದೊಡ್ಡ ದೊಡ್ಡ ತಿಮಿಂಗಿಲಗಳು ಇನ್ನೂ ಹೊರಗಡೆ ಉಳಿಯುತ್ತಿವೆ ಹಾಗಾಗಿ, ವಿಧಾನ ಸಭೆ ಮುಗಿಯುತ್ತಿದ ಹಾಗೆ, ಇವರನ್ನೂ ಕೂಡ ಬಿಡುಗಡೆ ಮಾಡತಕ್ಕ ವ್ಯವಸ್ಥೆಗಳು ನಡೆಯುತ್ತಿವೆ ಇಡೀ ರಾಜ್ಯದ ಜನ, ನಿಜಕ್ಕೂ ನಿಮ್ಮ ಪ್ರಾಮಾಣಿಕತೆಯನ್ನು ವೀಕ್ಷಿಸುತ್ತಾದ್ದಾರೆ ಏಕೆಂದರೆ, ನಮ್ಮ ನಾಯಕರು ಹೇಳಿದರು ಈಗಿನ ಮಾನ್ಯ ಲೋಕೋಪಯೋಗಿ ಸಚಿವರಾದ ಹೆಚ್ ಡಿ ರೇವಣ್ಣನವರು ಸ್ವತಃ ಏನು ಹೇಳಿದ್ದಾರೆ ಎಂಬುದನ್ನು ನಿಮ್ಮ ಮುಂದೆ ಓದಿ, ಹೇಳಿದರು ಈ ರೀತಿ ಭ್ರಷ್ಟರು ಇದ್ದಾರೆ ಸಿಕ್ಕಾಬಟ್ಟೆ ಲೂಟಿಯಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳ ಬಗ್ಗೆ ನಾನು ಏನು ಹೇಳುತ್ತಾ ಇದ್ದೇವೆ ಅಂತಹ ಜಿಲ್ಲಾಧಿಕಾರಿಗಳೂ ಇದರಲ್ಲಿ ಶಾಮೀಲಾಗಿರಬಹುದು ಹಿಂದಿನ ಮಂತ್ರಿಗಳೂ ಇದರಲ್ಲಿ ಶಾಮೀಲಾಗಿರಬಹುದು ಆದರೆ, ಇಲ್ಲಿ ಅವರೆಲ್ಲರನ್ನೂ ನೀವು ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಾ? ನಿಮಗೆ ಏಕೆ ಪ್ರತಿಷ್ಠೆ? ನಿಮಗೆ ಏನು ಸಮಸ್ಯೆ? ಜಂಟಿ ಸದನದ ಸಮಿತಿ ಮಾಡುವುದಕ್ಕೆ ನಿಮಗೆ ಏನು ತೊಂದರೆ? ಅನ್ಯಾಯವಾಗಿರುವುದು ಹೊರಕ್ಕೆ ಬರುತ್ತದೆ ಎನ್ನುವ ಭಯ ನಿಮಗೇನಾದರೂ ಇದೆಯೇ? ಇದು ನಮಗಂತೂ ಅರ್ಥವಾಗುತ್ತಾ ಇಲ್ಲ ಜಂಟಿ ಸದನ ಸಮಿತಿ ಮಾಡಿ, ಇದು ಹೊರಗೆ ಬಂದರೆ ಈ ಸರ್ಕಾರ ಏನಾದರೂ ಎರಡು ತಿಂಗಳಿಗೆ, ಮೂರು ತಿಂಗಳಿಗೆ ಹೋಗಿಬಿಡುತ್ತದೆ ಎಂಬ ಭಯ ನಿಮಗೆ ಇದೆಯೇ ಎಂದು ಈಗತಾನೇ ಹಾಗೂ ಹೀಗೂ ಅಧಿಕರಕ್ಕೆ ಬಂದುಬಿಟ್ಟಿದ್ದೇವೆ, ಈ ಸಂದರ್ಭದಲ್ಲಿ ಜಂಟಿ ಸದನದ ಸಮಿತಿ 2–3 ತಿಂಗಳಲ್ಲಿ ವರದಿ ಕೊಟ್ಟರೆ, ಈ ಸರ್ಕಾರದಲ್ಲಿರುವಂಥ ಅನೇಕ ಶಾಸಕರು, ಮಂತ್ರಿಗಳೂ ಸಿಕ್ಕಿ ಬಿದ್ದು ಈ ಸರ್ಕಾರವೂ ಹೊರಟು ಹೋಗುತ್ತದೆ ಎಂಬ ಭಯದಿಂದ ನೀವು ಜಂಟಿ ಸದನದ ಸಮಿತಿ ಮಡುತ್ತಿಲ್ಲವೆಂಬ ಅನುಮಾನ ಕೂಡ ನಮಗಾಗುತ್ತಿದೆ ಶ್ರೀಯುತ ಹೆಚ್ ಡಿ, ರೇವಣ್ಣನವರು ಏನು ಹೇಳಿದ್ದಾರೆ "ಬರ ಪರಿಹಾರ ಯೋಜನೆಯಡಿ ಜಿಲ್ಲೆಗೆ ಬಿಡುಗಡೆಯಾದ ಆಹಾರಧಾನ್ಯದಲ್ಲಿ ಶೇಕಡ 70 ರಷ್ಟು ದುರುಪಯೋಗವಾಗಿದೆಯೆಂದು ಜಾತ್ಯಾತೀತ ಜನತಾ ದಳದ ಮುಖಂಡ, ಹೊಳೆನರಸೀಪುರ ಕ್ಷೇತ್ರದ ಶಾಸಕ ಹೆಚ್ ಡಿ ರೇವಣ್ಣನವರು ಆರೋಪಿಸಿದರು ಪತ್ರಿಕಾ ಗೋಷ್ಠಿಯಲ್ಲಿ ಅವರು ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ ಅಧಿಕಾರಿಗಳೇ ಆಹಾರಧಾನ್ಯ ದುರುಪಯೋಗಕ್ಕೆ ಹೊಣೆಗಾರರು ಜಿಲ್ಲಾಧಿಕಾರಿಯವರು ಈ ವೇಳೆಗಾಗಲೇ ದಾಖಲಾತಿಗಳನ್ನು ವಶಪಡಿಸಿಕೊಳ್ಳಬೇಕಾಗಿತ್ತು ಆದರೆ, ಇದುವರೆಗೂ ಈ ನಿಟ್ಟಿನಲ್ಲಿ ಕ್ರಮ ಕೈಗೊಂಡಿಲ್ಲ ಈಗಲಾದರೂ ದಾಖಲಾತಿಗಳನ್ನು ವಶಪಡಿಸಿಕೊಂಡು ಸಮಗ್ರ ತನಿಖೆ ಆರಂಭಿಸಬೇಕೆಂದು ಒತ್ತಾಯಿಸಿದರು ಅವರು ಯಾರಿಗೆ ಒತ್ತಾಯಿಸುತ್ತಾ ಸ್ವಾಮಿ? ವಿರೋಧ ಪಕ್ಷಕ್ಕೆ ಒತ್ತಾಯಿಸುತ್ತಿದ್ದಾರೆಯೇ? ಶ್ರೀಯುತರುಗಳಾದ ಯಡಿಯೂರಪ್ಪನವರು, ವಾಟಾಳ್ ನಾಗರಾಜ್‌ರು, ಮಾಧುಸ್ವಾಮಿ, ಶ್ರೀ ರಾಮರೆಡ್ಡಿಯವರಿಗೆ ಒತ್ತಾಯಿಸುತ್ತಿದ್ದಾರೆಯೇ? ಜಿಲ್ಲಾಧಿಕಾರಿಗಳ ಮುಖಾಂತರ ನೀವು ದಾಖಲಾತಿಗಳನ್ನು ಸಂಗ್ರಹ ಮಾಡಿ ಎಂದು ಹೇಳುತ್ತಿದ್ದಾರೆಯೇ? ಇದನ್ನು ಒಬ್ಬರು ಮಂತ್ರಿಗಳು ಹೇಳುತ್ತಿದ್ದಾರೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ ಮಾನ್ಯ ಹೆಚ್ ಡಿ ರೇವಣ್ಣನವರು ಸ್ಟೇಟ್‌ಮೆಂಟ್ ಮಾಡಿರತಕ್ಕಂಥಾದ್ದು ಶಾಸಕರಾಗಿ ಅವರು ಮಂತ್ರಿಗಳಾಗಿ ಅಲ್ಲ ಕಾರ್ಯಾಂಗದ ಮುಖ್ಯಸ್ಥರಾಗಿ ಅಲ್ಲ

ಗೊಂದಲ

ಶ್ರೀ ವಾಟಾಳ್ ನಾಗರಾಜ್ ಆ ಹೆಚ್ ಡಿ ರೇವಣ್ಣನವರು ಬೇರೆಯೇ, ಈ ರೇವಣ್ಣನವರು ಬೇರೆಯೇ

ಶ್ರೀ ಹೆಚ್ ಕೆ ಕುಮಾರಸ್ವಾಮಿ ಈಗ ಸರ್ಕಾರ ರಚನೆಯಾಗಿರಲಿಲ್ಲ

ಶ್ರೀ ವಾಟಾಳ್ ನಾಗರಾಜ್ ಹೌದು ಸ್ವಾಮಿ ಆದರೆ ಮಂತ್ರಿಯಾದಾಗ ಒಂದು ಹೇಳಿಕೆ, ಶಾಸಕರಾಗಿದ್ದಾರೆ ಒಂದು ಹೇಳಿಕೆ ಇದು ಎಲ್ಲಾದರೂ ಉಂಟೇ? ಗೊಂದಲ

ಈ ರೀತಿಯಿಂದ ನಿಮ್ಮ ಸರ್ಕಾರ ಏನಾದರೂ ಉರುಳುತ್ತದೆ ಎಂದರೆ, ನಾವು ನಿಮಗೆ ಬೆಂಬಲ ಕೊಡುತ್ತೇವೆ ನಿಮ್ಮ ಸರ್ಕಾರ ಉರುಳದೇ ಇರುವಹಾಗೆ ನೋಡಿಕೊಳ್ಳುತ್ತೇವೆ ಆದ್ದರಿಂದ, ಸದನದ ಸಮಿತಿ ಮಾಡಿ

ಶ್ರೀ ಎಂ ಪಿ ಪ್ರಕಾಶ್ ನೀವು ಸರ್ಕಾರ ಉರುಳುವುದಕ್ಕೆ ಬಿಡುವುದಿಲ್ಲ, ಅದು ನನಗೆ ಗೊತ್ತಿದೆ ನೀವು ಯಾವಾಗಲೂ ಕೂಡ ಒಂದು ಸಹಮತವನ್ನು ಕೊಟ್ಟು, ಸರ್ಕಾರ ಐದು ವರ್ಷಗಳ ಕಾಲ ನಡೆಯಲಿ ಎಂದು ಬಯಸುತ್ತೀರಿ ಅದಕ್ಕಾಗಿ ನಿಮಗೆ ಧನ್ಯವಾದಗಳು

ಶ್ರೀ ಸಿ ಎಂ ಉದಾಸಿ ಈಗ್ಗೆ ಎರಡು ವರ್ಷಗಳ ಮೊದಲು ಒಬ್ಬ ಜಿಲ್ಲಾಧಿಕಾರಿಗಳ ಮೇಲೆ ಬರಪರಿಹಾರದ ಕುಡಿಯುವ ನೀರು ಪೂರೈಕೆ ಯೋಜನೆಯಲ್ಲಿ ಆಗಿರುವಂಥ ಅವ್ಯವಹಾರದ ಬಗ್ಗೆ ನಾವು ಆರೋಪವನ್ನು ಮಾಡಿದಾಗ, ವಿರೋಧಪಕ್ಷದಲ್ಲಿ ಕುಳಿತುಕೊಂಡಂಥ ಅನೇಕ ಸದಸ್ಯರು ಪ್ರಸ್ತಾಪ ಮಾಡಿದರು 2 ಕೋಟಿ 32 ಲಕ್ಷ ರೂಪಾಯಿ ಹಾವೇರಿ ಜಿಲ್ಲೆಯಲ್ಲಿ ಕುಡಿಯುವ ನೀರು ಪೂರೈಕೆಗಾಗಿಯೇ ಇಡಲಾಗಿತ್ತು ಇದನ್ನು ವಿಚಾರಣೆ ಮಾಡುವಂಥ ಸಂದರ್ಭದಲ್ಲಿ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚು ಹಣ ಲೂಟಿಯಾಗಿದೆ ಎಂಬುದು ಬಂತು ಈ ವಿಷಯವಾಗಿ ಆ ಜಿಲ್ಲಾಧಿಕಾರಿಗಳ ಮೇಲೆ ಆರೋಪ ಮಾಡಿದಾಗ, ಹಾವೇರಿ ಜಿಲ್ಲಾಧಿಕಾರಿಗಳು ಒಂದು ಅಡಿಗೆ 80 ರೂಪಾಯಿ 80 ಪೈಸೆಯಂತೆ ಕೊಳವೆ ಬಾವಿ ತೆಗೆಸಿದ್ದರು ಅದೇ ಸಂದರ್ಭದಲ್ಲಿ ಗದಗ್ ಜಿಲ್ಲಾಧಿಕಾರಿಗಳು ಒಂದು ಅಡಿಗೆ 46 ರೂಪಾಯಿಯಂತೆ ಕೊಳವೆ ಬಾವಿ ತೆಗೆಸಿದ್ದರು ಇದೆಲ್ಲಾ ವಿವರಗಳನ್ನು ಕೊಟ್ಟಾಗ, ಇದರ ವಿಚಾರಣೆಯನ್ನು ಡೆವಲಪ್‌ಮೆಂಟ್ ಕಮಿಷನರು ಮಾಡಿದರು ನಂತರ, ಇದು ವಿಧಾನ ಸಭೆಯಲ್ಲಿ, ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪವಾದಾಗ, ಹಾಲಿ ಸನ್ಮಾನ್ಯ ಸಚಿವರಾಗಿರುವಂಥ ಶ್ರೀ ಎಂ ಪಿ ಪ್ರಕಾಶ್‌ರವರೂ ಕೂಡ ಪ್ರಸ್ತಾಪ ಮಾಡಿದ್ದರು ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ದುರ್ವ್ಯವಹಾರವಾಗಿದೆ, ಆ ಜಿಲ್ಲಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹೇಳಿದರೆ, ಲೋಕಾಯುಕ್ತಕ್ಕೆ ಒಂದು ಅರ್ಜಿಯನ್ನು ಕೊಟ್ಟರೆ, ಇವತ್ತಿನವರೆಗೂ ಕಳೆದ ಎರಡು ವರ್ಷಗಳಿಂದ ಏನೂ ಆಗಿರುವುದಿಲ್ಲ ಇಂತಹ ಅವ್ಯವಹಾರ ಬಂದಾಗ, ನಾವು ಸುಮ್ಮನೇ ಕುಳಿತುಕೊಂಡರೆ ಜನರಿಗೆ ತಪ್ಪು ಸಂದೇಶ ಹೋಗುತ್ತದೆ ಆ ಕಾರಣದ್ದಿಂದ ಸದನವು ಸಮಿತಿ ಮಾಡುವುದಕ್ಕೆ, ತಾವು ಅವಕಾಶ ಮಾಡಿ ಕೊಡುತ್ತೀರಿ ಎಂಬ ಮಾತನ್ನು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಕೊನೆಗೆ ನಾವು ಅಧ್ಯಕ್ಷರಲ್ಲಿ ಒಂದು ಮನವಿ ಮಾಡುತ್ತಿದ್ದೇವೆ ಈ ಸದನದ ಸಮಿತಿ ರಚನೆ ಮಾಡುವುದಕ್ಕೆ ತಮಗೂ ಅಧಿಕಾರ ಇದೆ, ತಮ್ಮ ಪರಮಾಧಿಕಾರವನ್ನು ಉಪಯೋಗಿಸಿ, ದಯವಿಟ್ಟು ತಾವೂ ಮಾಡಬಹುದು ಈ ಬಗ್ಗೆ ತಮ್ಮಲ್ಲಿಯೂ ಕಳಕಳಿಯ ಮನವಿ ಮಾಡುತ್ತೇವೆ

ಶ್ರೀ ಕೆ ಎಸ್ ಈಶ್ವರಪ್ಪ ನಕಲಿ ಛಾಪಾ ಕಾಗದದ ಹಗರಣವೂ ಕೂಡ ಇದೇ ರೀತಿಯದು ಬೇಡ ಬೇಡ ತಕ್ಷಣ ಮಾಡಿ, ಸಿ ಬಿ ಐ ಗೆ ಹಾಕಿ ಎಂದು ಹೇಳಿದರೂ ಕೂಡ ಹಿಂದಿನ ಸರ್ಕಾರದವರು ರಕ್ಷಣೆ ಕೊಟ್ಟುಕೊಂಡು ಬಂದರು ಈ ರೀತಿ ರಕ್ಷಣೆ ಕೊಟ್ಟುಕೊಂಡು ಬಂದು ಕೊನೆಗೆ ಏನಾಯಿತು? ಆಗ 135 ಜನ ಇದ್ದಂಥ ಕಾಂಗ್ರೆಸ್ ಸರ್ಕಾರ ಇವತ್ತು ಈ ಸ್ಥಿತಿಗೆ ಬಂದಿದ್ದಾರೆ ಈ ಭ್ರಷ್ಟರನ್ನು ನೇರವಾಗಿ ಅವರು ರಕ್ಷಣೆ ಮಾಡಿದರು ಅದನ್ನು ಈಗಿನ ಎರಡೂ ಪಕ್ಷಗಳೂ ಸೇರಿ ಮಾಡುತ್ತಿದ್ದೀರಿ

ಶ್ರೀ ಮಲ್ಲಿಕಾರ್ಜೂನ ಖರ್ಗೆ ಮಾನ್ಯ ಅಧ್ಯಕ್ಷರೇ, ನಾನು ಇದರಲ್ಲಿ ಇಂಟರ್‌ಫಿಯರ್ ಮಾಡಬಾರದೆಂದು ಸುಮ್ಮನೆ ಕುಳಿತಿದ್ದೆ ತೆಲಗಿ ವಿಷಯದಲ್ಲಿ ಹಿಂದಿನ ಸರ್ಕಾರ ರಕ್ಷಣೆ ಮಾಡಿತು ಎಂಬ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದರು ಈ ಸದನದಲ್ಲಿ ಇದು ನೂರಾರು ಸಾರಿ ಪ್ರಸ್ತಾಪವಾಗಿದೆ ಅದಕ್ಕೆ ನಾವು ಉತ್ತರವನ್ನೂ ಕೊಟ್ಟಿದ್ದೇವೆ ಇನ್ನೂ ಕೊಡತಕ್ಕಂಥ ಸಾಮರ್ಥ್ಯವೂ ನಮ್ಮಲ್ಲಿದೆ ಅದನ್ನು ಕಂಡುಹಿಡಿದಿದ್ದು ನಮ್ಮ ಸರ್ಕಾರ, ನಮ್ಮ ಸರ್ಕಾರ ಬಲಿ ಹಾಕಿದ್ದು, ನಾವು ಅರೆಸ್ಟ್ ಮಾಡಿದ್ದು, ಕೇಂದ್ರ ಸರ್ಕಾರದಲ್ಲಿ ಆ ಪ್ರಿಂಟಿಂಗ್ ಮಿಷನ್‌ನ್ನು ಯಾರು ಮಾರಿಕೊಂಡರು, ಎಲ್ಲಿ ಇದೆಯೆಂಬುದು ನಮ್ಮ ಪೊಲೀಸರು ಕಂಡುಹಿಡಿದಿದ್ದು ಅದಕ್ಕೆ, ದಯವಿಟ್ಟು ವಿಷಯ ಬೇರೆ ಕಡೆಗೆ ಹೋಗುವುದು ಬೇಡ ಈಗ ಅವರು ಉತ್ತರ ಸರಿಯಾಗಿ ಕೊಟ್ಟಿದ್ದಾರೆ ಅದರ ಬಗ್ಗೆ ಬೇಕಾದರೆ ಚರ್ಚೆ ನಡೆಯಲಿ, ಅದು ಮುಂದೆ ಬಂದಾಗ ನೋಡೋಣ

ಶ್ರೀ ಬಿ ಎಸ್ ಯಡಿಯೂರಪ್ಪ ತಾವೇನು ಹೇಳಿದಿರಿ ನಾವು ತನಿಖೆ ಮಾಡಲಿಲ್ಲವೆಂದು ಹೇಳಲಿಲ್ಲ ನೀವು ತನಿಖೆ ಮಾಡಿಸಿದಿರಿ ಸ್ಟಾಂಪಿಟ್ ಅಧಿಕಾರಿಗಳು ತನಿಖೆ ಮಾಡುತ್ತಾ ಇದ್ದರು ಬೆಂಗಳೂರಿನ ಪ್ರಿಂಟಿಂಗ್ ಪ್ರೆಸ್‌ಗಳಲ್ಲಿ ನಿಮ್ಮ ಮೂಗಿನ ಕೆಳಗಡೆ, 5-6 ಕಡೆಗಳಲ್ಲಿ ಡೂಪ್ಲಿಕೇಟ್ ಪ್ರಿಂಟ್ ಆಗುತ್ತಾ ಇತ್ತು ಇದನ್ನು ಹಿಡಿಯೂರು ನಿಮ್ಮ ಕೈಯಲ್ಲಿ ಆಗಲಿಲ್ಲ ಸಿ ಬಿ ಐ ನವರು ಇದನ್ನು ಹಿಡಿಯಬೇಕಾಯಿತು ನೀವು ಮುಚ್ಚಿ ಹಾಕಿದಿರಿ ಆಗ ಆಗಿದ್ದೇನು?

ಶ್ರೀ ಕೆ ಎಸ್ ಈಶ್ವರಪ್ಪ ಸಿ ಬಿ ಐ ತನಿಖೆ ಮಾಡಬೇಕು, ಮಾಡಬೇಕು ಎಂದು ಎಷ್ಟೋ ಬಾರಿ ಕೇಳಿದ್ದಲ ನೀವು ಹೇಳಿಕೊಂಡು ತಳ್ಳಿದಿರಿ, ಕೊನೆಗೆ ತಡೆದುಕೊಳ್ಳಲಾಗದೇ ಮಾಡುವಂಥ ಸ್ಥಿತಿ ಬಂತು ನಿಮಗೆ.

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಈಶ್ವರಪ್ಪನವರು ನೀವು ಇದನ್ನು ಸಿ ಬಿ ಐ ಗೆ ವಹಿಸಿಕೊಡಿ ಎಂದು ಹೇಳಿದಮೇಲೆ, ನೀವು ಮಾಡದೇ ಹೋಗಿದ್ದರಿಂದ ಈ ಸ್ಥಿತಿಗೆ ಬಂದಿರಿ ಎಂದು ಹೇಳಿದರು ಅವರು ಸ್ವಲ್ಪ ಜ್ಞಾಪಕ ಮಾಡಿಕೊಳ್ಳಬೇಕು ಶವಪೆಟ್ಟಿಗೆ ವಿಚಾರದಲ್ಲಿ ನೀವು ಸದನದ ಸಮಿತಿಯನ್ನು ಮಡಿ ಎಂದು ಲೋಕಸಭೆಯಲ್ಲಿ ಎಷ್ಟೋ ಸಲ ಜಾರಿ ಬಿನ್ನಹ ಮಾಡಿಕೊಂಡಾಗಲೂ ಕೂಡ, ನಾವು ಶವ ಪೆಟ್ಟಿಗೆ ಹಗರಣವನ್ನು ಸದನದ ಸಮಿತಿಗೆ ಕೊಡುವುದಿಲ್ಲ, ಅಲ್ಲಿರತಕ್ಕ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೂ ಕೂಡ ಅದರ ದಾಖಲೆಗಳನ್ನು ಕೊಡುವುದಿಲ್ಲ ಎಂದಿದ್ದಕ್ಕೆ, ನೀವು ಅಲ್ಲಿ ವಿರೋಧಪಕ್ಷದಲ್ಲಿ ಕೂಡುವ ಸ್ಥಾನಕ್ಕೆ ಬಂದಿದ್ದೀರಿ ಸದನದಲ್ಲಿ ಮಾತಿಗೆ ಪ್ರತ್ಯುತ್ತರ ಕೊಡತಕ್ಕಂಥಾದ್ದು ಇದೆ ಆದ್ದರಿಂದ, ಇದನ್ನು ನೀವು ಬಹಳ ಸ್ಪೋರ್ಟಿವ್ ಆಗಿ ತೆಗೆದುಕೊಳ್ಳಬೇಕು ಒಂದು ಮಾತು ಕೇಳಿದರೆ, ಮತ್ತೊಂದು ಕಡೆ ತೆಗೆದುಕೊಳ್ಳಬೇಕಾಗುತ್ತದೆ

ಶ್ರೀ ಅಗರ ಜ್ಞಾನೇಂದ್ರ ಆಗ ನಿಮ್ಮ ಅಧ್ಯಕ್ಷರೇ ಅಲ್ಲಿ ಸಚಿವರಾಗಿದ್ದರು ಅದನ್ನು ಮರೆಯಬಬಾರದು

ಶ್ರೀ ಎಂ ಪಿ ಪ್ರಕಾಶ್ ಅವರು ನಮ್ಮ ಅಧ್ಯಕ್ಷರಾಗಿರಲಿಲ್ಲ ಈಗ ಸಂಯುಕ್ತ ಜನತಾ ದಳ ಇರಲಿಲ್ಲ ಅವರು ಸಮತಾ ಪಕ್ಷದ ಅಧ್ಯಕ್ಷರಾಗಿದ್ದರು

ಶ್ರೀ ಕೆ ಎಸ್ ಈಶ್ವರಪ್ಪ ನಿಮ್ಮದು ಯಾರಿಗೂ ಅರ್ಥವಾಗದಂಥ ಪರಿಸ್ಥಿತಿಯಾಗಿದೆ ನೀವು ಯಾರು , ಯಾವ ಯಾವ ಪಾರ್ಟಿ ಎಲ್ಲೆಲ್ಲಿ ಇರುತ್ತೀರಿ ಎಂಬುದನ್ನು ತಿಳಿದುಕೊಳ್ಳಬೇಕಾದರೆ ಇದರ ಬಗ್ಗೆಯೇ ಒಂದು ಸಿ ಬಿ ಐ ತನಿಖೆ ಮಾಡಬೇಕಾಗುತ್ತದೆ ಇಲ್ಲಿ ಯಾವ ಯಾವ ಪಾರ್ಟಿಯಿಂದಲೋ ಬಂದವರನ್ನು ಸೇರಿಸಿಕೊಂಡು ನೀವು ಮಾತನಾಡುತ್ತಾ ಇಲ್ಲವೇ?

ಶ್ರೀ ವಾಟಾಳ್ ನಾಗರಾಜ್ ಸದನದ ಸಮಿತಿ ಬಗ್ಗೆ ಮಾತ್ರ ಹೇಳಿ ವಿಷಯ ಬೇರೆ ದಿಕ್ಕಿಗೆ ಹೋಗುತ್ತಿದೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಈಶ್ವರಪ್ಪನವರು ಪ್ರಸ್ತಾಪ ಮಾಡಿದ್ದರಿಂದ ಅದಕ್ಕೆ ನಾನು ಉತ್ತರವನ್ನು ಕೊಡಬೇಕಾಯಿತು ಈಗ ಸದನದ ಸಮಿತಿಯಿಂದ ನಮಗೆ ಪರಿಹಾರ ದೊರಕುವುದಿಲ್ಲ ಯಾವುದೇ ಪ್ರತಿಷ್ಠೆ ಮಾಡಬೇಕೆಂಬದೂ ನಮ್ಮ ಸರ್ಕಾರಕ್ಕೆ ಇಲ್ಲ ತಾವೆಲ್ಲರೂ ಕೂಡ ಏನು ಹೇಳಿದ್ದೀರಿ, ಸದನದ ಸಮಿತಿ ಮಾಡತಕ್ಕಂಥ ಅವಶ್ಯಕತೆ ಯಾವಾಗ ಉದ್ಭವವಾಗುತ್ತಿತ್ತು? ನಮ್ಮ ತನಿಖೆ ಏನಿದೆ, ಸಿ ಒ ಡಿ ತನಿಖೆ ನಡೆಯತಕ್ಕಂಥಾದ್ದು ಸರಿಯಾದ ದಿಕ್ಕಿನಲ್ಲಿ ನಡೆಯುತ್ತಾ ಇಲ್ಲ, ಅಲ್ಲಿ ಭ್ರಷ್ಟರನ್ನು ಮುಚ್ಚಿಡುವಂಥ ಪ್ರಯತ್ನ ನಡೆಯುತ್ತಾ ಇದೆ ಎಂಬ ಮಾತನ್ನು ತಾವು ಹೇಳಿದ್ದರೆ, ಮತ್ತೊಂದು ಸಮಾನಾಂತರವಾಗಿರತಕ್ಕಂಥ ವಿಚಾರಣೆಯನ್ನು ನಾವು ಮಾಡಲು ಪ್ರಯತ್ನ ಮಾಡಬಹುದಾಗಿತ್ತು ಆದರೆ, ತಾವೇ ಹೇಳಿದ್ದೀರಿ ಸಿ ಒ ಡಿ ತನಿಖೆ ಬಹಳ ಚೆನ್ನಾಗಿ ನಡೆಯುತ್ತಾ ಇದೆ, ಅಲ್ಲಿಯ ಅಧಿಕಾರಿಗಳು ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂದು ಹೇಳಿದ್ದೀರಿ ಈ ಹಿನ್ನೆಲೆಯಲ್ಲಿ ಸದನದ ಸಮಿತಿಯನ್ನು ಮಾಡಬೇಕಾದ ಅಗತ್ಯತೆ ಇಲ್ಲ ಸಮಾನಾಂತರವಾಗಿರತಕ್ಕ ಮತ್ತೊಂದು ವಿಚಾರಯಿಂದ ನಿರೀಕ್ಷಿತ ಪ್ರತಿಫಲ ಬರುವುದಿಲ್ಲವೆನ್ನುವ ಕಾರಣಕ್ಕಾಗಿ ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ ಅದನ್ನು ಕೈಬಿಟ್ಟು ಸರ್ಕಾರದೊಂದಿಗೆ ಸಹಕರಿಸಬೇಕು

ಶ್ರೀ ವಾಟಾಳ್ ನಾಗರಾಜ್ ನಾವು ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ ಯಾವುದೇ ಪ್ರಮುಖ ರಾಜಕಾರಣಗಳು ಇದರಲ್ಲಿ ಸಿಗದಂತೆ ಎಚ್ಚರ ವಹಿಸಬೇಕೆಂದು ಒತ್ತಾಯ ತರುವಂಥಾದ್ದು ಜಗಜ್ಜಾಹಿರಾಗಿರುವಂಥ ಸಂಗತಿ ಇದುವರೆಗೆ ಯಾವುದೇ ಪ್ರಮುಖ, ಮಾಜಿ ಜಿಲ್ಲಾ ಸಚಿವರ ಹೆಸರನ್ನು ಅವರು ಹೇಳುವುದಕ್ಕಾಗಿಲ್ಲ ರಾಜಕೀಯ ಪಕ್ಷದ ಮುಖಂಡರು ಯಾರು ಶಾಮೀಲಾಗಿದ್ದಾರೆ ಟಾಪ್ ಅಧಿಕಾರಿಗಳು ಇವರಿಗೆ ಸಿಕಿಲ್ಲ ಡೆಪ್ಯೂಟಿ ಕಮಿಷನರ್ ಆದಿಯಾಗಿ ಶಾಮೀಲಾಗಿರುವ ಉದಾಹರಣೆ ಇವೆ

ಶ್ರೀ ವಾಟಾಳ್ ನಾಗರಾಜ್ ಸದನದ ಸಮಿತಿಗೆ ಒತ್ತಾಯ ಮಾಡಿ, ನಮಗೆ ಧರಣಿ ಮಾಡುವುದೊಂದೇ ಉಳಿದಿರುವುದು

ಶ್ರೀ ಬಿ ಎಸ್ ಯಡಿಯೂರಪ್ಪ ಲೂಟಿ ಮಾಡಿ ಹೋಗುತ್ತಾ ಇದ್ದಾರೆಂಬ ಭಾವನೆ ಜನರಿಗೆ ಸ್ಪಷ್ಟವಾಗಿ ಇವತು ಗೊತ್ತಾಗುತ್ತಿದೆ ಆದ್ದರಿಂದ, ಇದನ್ನು ಪ್ರತಿಭಟನೆ ಮಾಡಿ ಇವತ್ತು ಈ ಸರ್ಕಾರ ಸತ್ಯ ಮುಚ್ಚಿಟ್ಟು, ಭ್ರಷ್ಟರನ್ನು ಮುಚ್ಚಿಡುವುದಕ್ಕೆ ಹೋಗಿರುವಂಥ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಅನಿವಾರ್ಯವಾಗಿ ಧರಣಿ ಕುಳಿತುಕೊಳ್ಳುತ್ತೇವೆ

ಗೊಂದಲ

(ಪ್ರತಿ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಧರಣಿ ಮಾಡಲು ಸಭಾಧ್ಯಕ್ಷರ ಮುಂದಿನ ಅಂಗಳಕ್ಕೆ ಬರುತ್ತಿದ್ದರು)

ಗೊಂದಲ

ಅಧ್ಯಕ್ಷರು ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಯ ವರೆಗೆ ಮುಂದೂಡುತ್ತಿದ್ದೇನೆ

(ಸದನವು ಸಂಜೆ ಐದು ಗಂಟೆ ಒಂದು ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ ದಿನಾಂಕ 17-6-04ನೇ ಗುರುವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ

ಗುರುವಾರ 17ನೇ ಜೂನ್ 2004ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 10 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

ಅಧ್ಯಕ್ಷರ ಅಪ್ಪಣೆ ಮೇರೆಗೆ

(ಸದನ ಪ್ರಾರಂಭವಾದಾಗ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳೆಲ್ಲರೂ ಸದನದ ಬಾವಿಯಲ್ಲಿ ಧರಣಿನಿರತರಾಗಿದ್ದರು)

ವಿಷಯ ಅಕ್ಕಿ ಹಗರಣ ತನಿಖೆ ನಡೆಸಲು ಜಂಟಿ ಸದನ ಸಮಿತಿ ರಚಿಸುವ ಕುರಿತು

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ಸದನ ಸಮಿತಿ ರಚಿಸುವುದಿಲ್ಲವೆಂದು ನಿನ್ನೆ ಹೇಳಿರುವುದರಿಂದ ನಮ್ಮ ಧರಣಿ ಇವೊತ್ತೂ ಸಹ ಮುಂದುವರಿಯಲಿದೆ ಸದನ ಸಮಿತಿ ರಚಿಸುತ್ತೇವೆಂದು ಸರ್ಕಾರ ಹೇಳುವವರೆಗೂ ನಾವು ಧರಣಿ ಕೈ ಬಿಡಲು ಸಾಧ್ಯವಿಲ್ಲ ತಮಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ನಾವು ಸದನದ ಮುಂದಿನ ಬಾವಿಯಲ್ಲಿ ನಿಂತು ಧರಣಿ ನಡೆಸಲು ತೀರ್ಮಾನಿಸಿದ್ದೇವೆ, ಸರ್ಕಾರ ಹೆಜ್ಜೆಹೆಜ್ಜೆಗೂ ಹರ ಮಾಡುತ್ತಿದೆ, ಸರ್ಕಾರದ ಧೋರಣೆ ಸರಿಯಲ್ಲ, ಅದರ ಮೊಂಡುತನ ನಿರಂತರವಾಗಿದೆ, ಇವೊತ್ತಿನ ಬೆಳಗ್ಗಿನವರೆಗೂ ಸಹ ಕೂಲಿಗಾಗಿ ಬಂದಿರುವ ಕಾಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ, ಲಾರಿಗಟ್ಟಲೆ ಲೂಟಿಯಾಗುತ್ತಿದೆ ದರೋಡೆಯಾಗುತ್ತಿದೆ ಅನ್ಯಾಯ ನಡೆಯುತ್ತಿದೆ, ಜಿಲ್ಲೆ ಜಿಲ್ಲೆಗಳಲ್ಲಿ ಮೋಸ ನಡೆಯುತ್ತಿದೆ, ಈ ಕುರಿತು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ನನಗನ್ನಿಸುತ್ತದೆ ಇದೊಂದು ಅತ್ಯಂತ ಅಪಾಯಕಾರಿ ಬೆಳವಣಿಗೆ ಸಿಓಡಿ ತನಿಖೆ ನಡೆಸುವುದಾಗಿ ಸರ್ಕಾರ ಒಂದು ಕಡೆ ಹೇಳಿದರೆ, ಮತ್ತೊಂದೆಡೆ ಏನೂ ಆಗಿಲ್ಲವೆಂಬಂತೆ ಸುಮ್ಮನಿದೆ ಸಿಓಡಿ ತನಿಖೆ ಬಗ್ಗೆ ಗೌರವವಿದೆ, ಆದರೂ ಫಲಪ್ರದವಾಗಿಲ್ಲ ಎಲ್ಲೆಲ್ಲಿ ನೋಡಿದರೂ ಅನ್ಯಾಯ ನಡೆಯುತ್ತಿದೆ ಎಲ್ಲಾ ಕಡೆಗಳಲ್ಲೂ ಕೂಲಿಗಾಗಿ ಕಾಳು ಅಕ್ಕಿ ಮೋಸದ ದಂಧೆಯಾಗುತ್ತಿದೆ, ಈ ದಂಧೆ ಕರ್ನಾಟಕ ರಾಜ್ಯದಲ್ಲಿ ಹೆಚ್ಚು-ಕಡಿಮೆ ಪ್ರತಿ ಜಿಲ್ಲೆಯಲ್ಲೂ ನಡೆದಿದೆ ಇದು ತಾಲ್ಲೂಕು ಮಟ್ಟಕ್ಕೂ ಹಬ್ಬಿದೆ ಬಹಳ ಅನ್ಯಾಯವಾಗುತ್ತಿದೆ ನನಗೆನ್ನಿಸುತ್ತದೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ ಇದರ ಬಗ್ಗೆ ಸಾರ್ವಜನಿಕವಾಗಿ, ಸಮಗ್ರ ತನಿಖೆ ಮಾಡಿಸಬೇಕು ಬಹಿರಂಗ ತನಿಖೆಯಾಗಲೇಬೇಕು ಆಗ ಮಾತ್ರ ಹಗರಣದಲ್ಲಿರುವ ಅನೇಕ ವಿಷಯಗಳು ಹೊರಗೆ ಬರುತ್ತದೆ ಸರ್ಕಾರ ಇಲ್ಲವೆಂದು ನನಗನ್ನಿಸುತ್ತದೆ. ಎಲ್ಲಿದೆ ಸರ್ಕಾರ? ಮುಖ್ಯಮಂತ್ರಿ ಇಲ್ಲ, ಉಪ ಮುಖ್ಯಮಂತ್ರಿ ಇಲ್ಲ, ಕೇಳುವವರು ಯಾರೂ ಇಲ್ಲದಂಥ ಪರಿಸ್ಥಿತಿ ನಿರ್ಮಾಣವಾದರೆ ಅದಕ್ಕೆ ನಾವು ಹೊಣೆಯಲ್ಲ ಇದನ್ನು

ರಾಜ್ಯದ ಐದು ಕೋಟಿ ಜನರು ನೋಡುತ್ತಿದ್ದಾರೆ ಆಗಿರುವ ಅನ್ಯಾಯ, ಭ್ರಷ್ಟಾಚಾರದ ಬಗ್ಗೆ ತತ್‌ಕ್ಷಣ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಬಂದು ಸದನ ಸಮಿತಿ ರಚನೆ ಕುರಿತು ಸ್ಪಷ್ಟವಾಗಿ ಹೇಳಲೇಬೇಕು ಅದು ಆಗುವುದಿಲ್ಲವೆಂದರೆ ತಿಂಗಳುಗಟ್ಟಲೆಯಾದರೂ ಚಿಂತೆ ಇಲ್ಲ ಇವೊತ್ತು ರಾತ್ರಿ ಸಹ ನಾವು ಇಲ್ಲಿಯೇ ಮಲಗುತ್ತೇವೆ, ನಾಳೆ ಏಳುತ್ತೇವೆಂಬ ಎಚ್ಚರಿಕೆಯನ್ನು ಸಹ ಸರ್ಕಾರಕ್ಕೆ ಕೊಡುತ್ತಿದ್ದೇನೆ

†**ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** ಸನ್ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ ನಿನ್ನೆ ನಾನು ಒಂದು ಸಲಹೆ ಕೊಟ್ಟೆ ನಾವು ಸದನದ ಬಾವಿಗೆ ಧರಣಿ ಹೂಡಲು ತೆರಳುವ ಮುಂಚೆ, ನಮ್ಮ ತೀರ್ಮಾನ ನಾವು ಕೈಗೊಳ್ಳುವ ಮುನ್ನ, "ಸಭಾ ನಾಯಕರು ಮತ್ತು ನೀವು 'ಒಳಗಡೆ ಕರೆಯಿರಿ, ಸಮಾಲೋಚಿಸಿದ ಮಾಡೋಣ, ಅವರ ಕಷ್ಟವೇನೆಂಬುದನ್ನು ಕೇಳೋಣ' ಎಂದು ಹೇಳಿದಿರಿ, ನಾವು ಸದನದ ಬಾವಿಗೆ ಬರುತ್ತಿದ್ದಂತೆ ಸಮಯವಾಗಿತ್ತು ತಾವು ನಿನ್ನೆ ಸದನವನ್ನು ಇವೊತ್ತಿಗೆ ಮುಂದೂಡಿ ತಮ್ಮ ಕೊರಡಿಗೆ ಹೋದಿರಿ ತಮ್ಮೊಂದಿಗೆ ಸಮಾಲೋಚಿಸಿದ ಸಂದರ್ಭದಲ್ಲೂ ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ವಿರೋಧ ಪಕ್ಷದವರಾದ ನಾವುಗಳೆಲ್ಲರೂ ಸ್ಪಷ್ಟವಾಗಿ ಹೇಳಿದ್ದೇವೆ "ನೀವೇನಾದರೂ ಜಂಟಿ ಸದನ ಸಮಿತಿ ರಚಿಸುವುದಕ್ಕೆ ಹಿಂದೆ–ಮುಂದೆ ನೋಡಿದರೆ, ಯಾರೋ ಭ್ರಷ್ಟರನ್ನು ಅಧಿಕಾರದಲ್ಲಿರುವ ಯಾರೋ ರಾಜಕೀಯ ಮುಖಂಡರನ್ನು, ಮಾಜಿ ಸಚಿವರುಗಳನ್ನು, ಉನ್ನತಾಧಿಕಾರಿಗಳನ್ನು ರಕ್ಷಿಸುವುದಕ್ಕೆ ಹೊರಟಿದ್ದಾರೆಂಬುದು ಸ್ಪಷ್ಟವಾಗುತ್ತದೆ" ಎಂಬ ಮಾತನ್ನು ಹೇಳಿದ್ದೇವೆ, ತಾವೂ ಎರಡೂ ಸದನಗಳ ಮಾನ್ಯ ಸದಸ್ಯರುಗಳನ್ನು ನಂಬದಿದ್ದರೆ ಬೇರೆ ಯಾರನ್ನು ನಂಬುತ್ತೀರಿ ? ಸಿಓಡಿ ತನಿಖೆ ನಡೆಯುತ್ತಿದೆ ಇವೊತ್ತು ಬೆಳಗಿನ ಉದಯ ಟಿವಿ ಈಟಿವಿ ಯಲ್ಲಿ ಪ್ರಸಾರವಾಯಿತು ಇವೊತ್ತಿನ ಯಾವುದೇ ಪತ್ರಿಕೆಯನ್ನು ತೆಗೆದು ನೋಡಿ ನಿರಂತರವಾಗಿ ಕಳ್ಳಸಾಗಾಣಿಕೆಯಲ್ಲಿ ಕೂಲಿಗಾಗಿ ಕಾಳು ಅಕ್ಕಿ ಹೋಗುತ್ತಿರುವುದರಿಂದ ಒಂದು ರೀತಿಯಲ್ಲಿ ಧಾರಾವಾಹಿ ತರಹ ಪ್ರತಿನಿತ್ಯವೂ ಬರುತ್ತಿದೆ, ಇದು ನಿಂತಿಲ್ಲ, ಈ ತನಿಖೆ ಪ್ರಾರಂಭವಾಗಿರುವುದು ಚುನಾವಣಾ ಪ್ರಕ್ರಿಯೆ ಆರಂಭವಾದ ನಂತರ, ಮತ್ತು ಅವ್ಯವಹಾರವಾಗಿರುವುದು ಕಳೆದ ಎರಡೂವರೆ–ಮೂರು ವರ್ಷಗಳಿಂದ ಈ ರೀತಿಯ ಹಗರಣವೊಂದು ನಡೆಯುತ್ತಿರಬೇಕಾದರೆ ನಿಮಗೆ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ ನಾವು ಸಾರ್ವಜನಿಕವಾಗಿ ಜಂಟಿ ಸದನ ಸಮಿತಿಯ ಮೂಲಕ ಹೋದರೆ ನಿರ್ಬೀತಿಯಿಂದ ಜನರು ಅನೇಕ ಮಾಹಿತಿಗಳನ್ನು ನೀಡುತ್ತಾರೆ ಮತ್ತು ಹಗರಣದಲ್ಲಿ ಯಾರು ಸಿಲುಕಿದ್ದಾರೋ ಅವರನ್ನೆಲ್ಲಾ ಶಿಕ್ಷಿಸಬಹುದು ಅವರು ಎಷ್ಟೇ ದೊಡ್ಡವರಿರಬಹುದು ಅಧಿಕಾರಿ ಇರಬಹುದು ಅಥವಾ ಜಿಲ್ಲಾ ಉಸ್ತುವಾರಿ ಸಚಿವರಾಗಿರಬಹುದು ಮತ್ತೊಬ್ಬರಿರಬಹುದು ಎನ್ನುವ ದೃಷ್ಟಿಯಿಂದ ನಾವು ಈ ಡಿಮ್ಯಾಂಡ್ ಅನ್ನು ತಮ್ಮ ಮುಂದಿಡುತ್ತಿದ್ದೇವೆ, ಸರ್ಕಾರವೂ ಸಹ ಸಹಜವಾಗಿ 'ಆಯಿತು ಯಡಿಯೂರಪ್ಪನವರೆ, ವಿರೋಧ ಪಕ್ಷದವರಾದ ನೀವೆಲ್ಲರೂ

ಒಪ್ಪಿಕೊಂಡು ಈ ಮಾತು ಹೇಳಿದ ನಂತರ ನಾವು ಇದರ ಬಗ್ಗೆ ಚಿಂತೆ ಮಾಡುವ ಅಗತ್ಯವಿಲ್ಲ ನಾವು ಜಂಟಿ ಸದನ ಸಮಿತಿ ರಚಿಸುತ್ತೇವೆ, ಚರ್ಚೆ ಮಾಡೋಣ' ಎಂದು ಹೇಳುವುದರ ಬದಲು, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆ ನಾಳೆ ಸಾಯಂಕಾಲ ಮುಗಿದು ಉತ್ತರ ಸಿಗಬೇಕಿದೆ ಅವರ ಮನಸ್ಸಿನಲ್ಲಿ ಏನಾದರೂ ರಾಜ್ಯಪಾಲರ ಭಾಷಣದಲ್ಲಿ ಈ ಎಲ್ಲಾ ಕರ್ಮಕಾಂಡಗಳನ್ನು ಬಹಿರಂಗ ಮಾಡುತ್ತಾರೆ ಮತ್ತು ನಮ್ಮ ಜನತಾ ದಳ(ಎಸ್) ಸ್ನೇಹಿತರು ಇಕ್ಕಟ್ಟಿನಲ್ಲಿ ಸಿಲುಕಬೇಕಾಗುತ್ತದೆ ಎಂದು ತಿಳಿದು ಹೇಗಾದರೂ ಮಾಡಿ ಈ ಸದನವನ್ನು ಮುಂದೂಡಿ ನಾವು ರಾಜ್ಯಪಾಲರ ಭಾಷಣಕ್ಕೆ ಹಾಗೆಯೇ ಅನುಮೋದನೆ ಪಡೆದುಕೊಂಡು ಹೋಗೋಣ ಎನ್ನುವಂತಹ ಕೆಟ್ಟ ಸಂಪ್ರದಾಯ ಮಾಡಬೇಕೆಂದು ಅವರ ಮನಸ್ಸಿನಲ್ಲಿದ್ದರೆ ನನ್ನದೇನೂ ಅಭ್ಯಂತರವಿಲ್ಲ, ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸದನದಲ್ಲಿ ಹೇಗೆ ಮಾತನಾಡುತ್ತೇವೆ, ಹೇಗೆ ನಡೆದುಕೊಳ್ಳುತ್ತೇವೆ, ಮುಂತಾದ ಎಲ್ಲಾ ಸಂಗತಿಗಳನ್ನು ಮಾಲೀಕರಾದ ಐದು ಕೋಟಿ ಜನರು ನೋಡುತ್ತಿದ್ದಾರೆ ಅವರಿಗೆ ನಾವು ಉತ್ತರ ಕೊಡಬೇಕು ಇಲ್ಲಿ ಕುಳಿತಾಗ ಇಷ್ಟು ವರ್ಷಗಳಿಂದ ಸತತವಾಗಿ ಹಗರಣ ನಡೆದಿರಬೇಕಾದರೆ, ತಿನ್ನುವ ಅನ್ನಕ್ಕೆ ಕಲ್ಲು ಬಿದ್ದಿರಬೇಕಾದರೆ, ಕಾವುಗಾರಿ ಆಗದೆ ಹಣವನ್ನು ದುರುಪಯೋಗಪಡಿಸಿಕೊಂಡಿರಬೇಕಾದರೆ, ನಿನ್ನೆ ಲಾರಿಗಳಲ್ಲಿ ರಾಜಾರೋಷವಾಗಿ ಸಾಗಿಸುತ್ತಿದ್ದ ಗೋಧಿ ಸಿಕ್ಕಾಗ ಇವರು ಕೋರ್ಟ್ ಮುಂದೆ ಹೋಗಿ ಹೇಳಿರುವ ಮಾತೇನು ? 'ನಾವು ಪರವಾನಗಿ ತೆಗೆದುಕೊಂಡು ಬೇರೆ ರಾಜ್ಯಗಳಿಂದ ನಮ್ಮ ಮಿಲ್‌ಗಳಿಗೆ ತರುತ್ತಿದೇವೆ ಇದರಲ್ಲಿ ಆ ಮಾಲು ಯಾವುದೂ ಇಲ್ಲ ಎಂದು ಹೇಳುವ ಮೂಲಕ ಪ್ರಕರಣವನ್ನು ತಿರುಚುವ ಪ್ರಯತ್ನ ಮಾಡುತ್ತಿದ್ದಾರೆ ಈ ರೀತಿ ದಾಖಲೆಗಳನ್ನು ತಿರುಚುವ ಮೂಲಕ ಯಾರಿಗೂ ಶಿಕ್ಷೆಯಾಗದೆ ಹೊರ ಬರುವಂತಹ ಪ್ರಯತ್ನ ಮತ್ತು ಅವರಿಗೆ ರಕ್ಷಣೆ ಕೊಡುವಂತಹ ಪ್ರಯತ್ನವಾಗುತ್ತಿದೆ ಏಕೆಂದರೆ, ಅವರನ್ನು ನೀವು ಹಿಡಿದ ತಕ್ಷಣ ಯಾವ ಜಿಲ್ಲಾ ಮಂತ್ರಿ ಯಾವ ಶಾಸಕ, ಯಾವ ಅಧಿಕಾರಿ ಇದಕ್ಕೆ ಬೆಂಬಲವಾಗಿ ನಿಂತಿದ್ದಾರೆಂದು ಬಹಿರಂಗ ಆಗುತ್ತದೆ, ಆಗ ಎಲ್ಲರ ಬಣ್ಣ ಬಯಲಾಗುತ್ತದೆಂಬ ಭಯದಿಂದ ಎಲ್ಲವನ್ನೂ ಮುಚ್ಚಿಹಾಕುವುದಕ್ಕೋಸ್ಕರ ಇವೊತ್ತು ಸದನ ಸಮಿತಿ ರಚಿಸುವುದಕ್ಕೆ ಹಿಂದು-ಮುಂದು ನೋಡುತ್ತಿದ್ದಾರೆ ಸದನಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬಂದಿರುವುದರಿಂದ ಅವರಲ್ಲಿ ಒತ್ತಾಯಿಸುವುದೇನೆಂದರೆ, ಸದನ ಸಮಿತಿ ರಚಿಸಿದರೆ ನಿಮ್ಮವರೇ ಅಧ್ಯಕ್ಷರಿರುತ್ತಾರೆ, ಸದಸ್ಯರಿರುತ್ತಾರೆ ಚುನಾಯಿತ ಪ್ರತಿನಿಧಿಗಳಾದ ನಮ್ಮನ್ನು ನೀವು ಅನುಮಾನದಿಂದ ನೋಡುವ ಅಗತ್ಯವಿಲ್ಲ ಏನಿದೆ ನೋಡಿಕೊಂಡು ಬಂದು, ಈ ಪ್ರಕರಣ ಪುನರಾವರ್ತನೆಯಾಗದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ, ಅದಕ್ಕಾದರೂ ದಯಮಾಡಿ ತಾವು ಮುಂದೆ ಬರಬೇಕು

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ಐದು ನಿಮಿಷಗಳ ಕಾಲ ತಾವು ಸದನ ಮುಂದೂಡಿದರೆ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತದೆ

†ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿ) ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ನಿನ್ನೆ ವಿಶೇಷವಾಗಿ ಕಂದಾಯ ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು ಬಹಳ ಪರಿಣಾಮಕಾರಿಯಾಗಿ, ಸಮರ್ಪಕವಾಗಿ, ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ, ಇದರಲ್ಲಿ ಬೇರೇನೂ ವಿಚಾರವಿಲ್ಲ ಇದರ ಬಗ್ಗೆ ಈ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರಾದ ವಾಟಾಳ್ ನಾಗರಾಜ್‌ರವರೂ ಕೂಡ ಒತ್ತಾಯಿಸುತ್ತಿದ್ದಾರೆ ನಿನ್ನೆ ನಾನು ಇರಲಿಲ್ಲ ಅವರುಗಳು ಸದನ ಸಮಿತಿ ರಚಿಸಬೇಕೆಂದು ಧರಣಿ ಪ್ರಾರಂಭಿಸಿದ್ದಾರೆ ನಿನ್ನೆ ದಿವಸ ನಿಮ್ಮ ಸಮ್ಮುಖದಲ್ಲಿ ಈ ವಿಚಾರ ಪ್ರಸ್ತಾಪಕ್ಕೆ ಬಂತು ಇವೊತ್ತು ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲೆ ಹಗರಣದ ಕರ್ಮಕಾಂಡಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಇನ್ನೂ ಬಹಳಷ್ಟು ಕಾಲಾವಕಾಶವಿದೆ ಅದರಲ್ಲೂ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೆಚ್ಚು ಅವಕಾಶ ಲಭ್ಯವಾಗುತ್ತದೆ ನಾವು ಹೇಗೂ ಮೊದಲೇ ಹೇಳಿರುವಂತೆ ಸಮ್ಮಿಶ್ರ ಸರ್ಕಾರ ರಚನೆಯಾಗಿದ್ದು, ಏನೇನು ಕರ್ಮಕಾಂಡಗಳಾಗಿವೆ ಎನ್ನುವುದನ್ನು ಕೇಳುವ ಪರಿಸ್ಥಿತಿಯಲ್ಲಿದ್ದೇವೆ ನಾವು ಇದಕ್ಕೆ ಹೆದರಿ ಹೋಗುವಂಥಾದ್ದೇನಿಲ್ಲ ಇದಕ್ಕೆ ಸಮರ್ಪಕ ಉತ್ತರ ಕೊಡುತ್ತೇವೆ, ಇದರ ಬಗ್ಗೆ ಈಗಾಗಲೇ ವಿರೋಧ ಪಕ್ಷದ ನಾಯಕರಿಗೆ ಸ್ಪಷ್ಟವಾಗಿ ತಿಳಿಸಿದ್ದೇವೆ ಅಕ್ಕಿ ಮತ್ತು ಗೋಧಿ ಹಗರಣ ಪ್ರಕರಣವನ್ನು ಸದನದಲ್ಲಿ ಪ್ರಸ್ತಾಪಿಸಿರುವುದರಿಂದ ಸರ್ಕಾರ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರೂ ಕೂಡ ಈಗಾಗಲೇ ಕ್ರಮ ಕೈಗೊಂಡಿದ್ದು ಸಿಓಡಿ ತನಿಖೆ ಸಾಗುತ್ತಿದೆ, ಪ್ರಕರಣದ ಕುರಿತು ಸಿಓಡಿ ತನಿಖೆಯನ್ನು ಸರ್ಕಾರ ಕೈಗೊಳ್ಳದೆ ಹೋದ ಪಕ್ಷದಲ್ಲಿ ಸದನ ಸಮಿತಿಗಾಗಲಿ ಇಲ್ಲವೇ ಸಿಬಿಐಗೆ ಒಪ್ಪಿಸಬೇಕೆಂದು ವಿರೋಧ ಪಕ್ಷದವರ ಬೇಡಿಕೆ ಏನಿದೆ ಅದನ್ನು ಪರಿಶೀಲಿಸುವ ದಿಸೆಯಲ್ಲಿ ಸರ್ಕಾರ ಸಿದ್ದವಿತ್ತು ಕರ್ನಾಟಕ ರಾಜ್ಯದಲ್ಲಿನ ಸಿಓಡಿ ತನಿಖೆ ಕಾರ್ಯ ವೈಖರಿಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಒಪ್ಪಿದ್ದಾರೆ ಮತ್ತು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಕೂಡ ಬಹಳಷ್ಟು ಸಲ ಕರ್ನಾಟಕದ ಪೊಲೀಸ್ ಇಲಾಖೆ ಹಾಗೂ ವಿಶೇಷವಾಗಿ ಸಿಓಡಿ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಡಾ, ಯು ಚಿತ್ತರಂಜನ್‌ರವರ ಕೊಲೆ ಪ್ರಕರಣವನ್ನು ತನಿಖೆಗಾಗಿ ಸಿಬಿಐಗೆ ವಹಿಸಿದರೂ ಏನೂ ಪ್ರಯೋಜನವಾಗಲಿಲ್ಲ ಆದರೆ, ನಮ್ಮ ಸಿಓಡಿಯವರು ತನಿಖೆ ನಡೆಸುವ ಮೂಲಕ ಒಳ್ಳೆಯ ಫಲಿತಾಂಶ ಕೊಟ್ಟಿದ್ದಾರೆ ಇಂತಹ ವಿಚಾರದಲ್ಲಿ ಇವೊತ್ತು ಸಿಓಡಿ ಬಹಳ ಸೂಕ್ಷ್ಮವಾಗಿ, ಆಳವಾಗಿ ಎಲ್ಲಾ ಕಡೆಗಳಿಂದಲೂ ತನಿಖೆ ನಡೆಸಿದೆ ಅಲ್ಲದೆ, ನಮಗೆ anonymons petition ಬಂದ ನಂತರವೂ ಕೂಡ ಮಂಗಳೂರಿನ ಜಿಲ್ಲಾಧಿಕಾರಿಗಳು ಮತ್ತು ಫುಡ್ ಕಾರ್ಪೋರೇಷನ್‌ನ ಡೆಪ್ಯುಟಿ ಡೈರೆಕ್ಟರ್ ಅವರುಗಳು ಗೋದಾಮಿನ ಮೇಲೆ ಧಾಳಿ ನಡೆಸಿದ್ದಾರೆ ತಾವು ಯಾವ್ಯಾವ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದೀರೋ ಅದನ್ನು ಮುಚ್ಚಿಡುವಂಥಾದ್ದೇನಿಲ್ಲ ನಿರ್ದಾಕ್ಷಿಣ್ಯವಾಗಿ ಹೇಳಿದ್ದೇವೆ, ಯಾವುದೇ

ರಾಜಕಾರಣಿಗಳಾಗಲಿ, ಅಧಿಕಾರಿಗಳಾಗಲಿ ತಪ್ಪು ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಹೊಸದಾಗಿ ಸಮ್ಮಿಶ್ರ ಸರ್ಕಾರ ರಚನೆಯಾದ ಬಳಿಕ ಪ್ರಪ್ರಥಮ ಅಧಿವೇಶನದಲ್ಲಿ ನಾವು ಸೇರಿದ್ದೇವೆ ಇದೇನೂ ಚುನಾವಣೆಗೆ ಹೋಗುವ ಕೊನೆಯ ಅಧಿವೇಶನವೇನೂ ಅಲ್ಲ ಇವೊತ್ತು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ವಿರೋಧ ಪಕ್ಷದ ನಾಯಕರೂ ಒಳಗೊಂಡಂತೆ ಇನ್ನಿತರ ನಾಯಕರುಗಳಿಗೆ ನಾನು ಸ್ಪಷ್ಟಪಡಿಸಬಯಸುವುದೇನೆಂದರೆ, ತಪ್ಪಿತಸ್ಥರು ಯಾರೇ ಆಗಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳಲು ನಾವು ತಯಾರಿದ್ದೇವೆ ಇದಕ್ಕೆ ತಾವು ಸಹಕಾರ ಕೊಡಬೇಕು ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದಿಂದ ನಾಳೆ ಉತ್ತರ ಬರುತ್ತದೆ, ಅದಕ್ಕೋಸ್ಕರ, ಮತ್ತೊಮ್ಮೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಸದನ ಸಮಿತಿ ರಚನೆ ಇದಕ್ಕೆ ಪ್ಯಾರಲಲ್ ಆಗುವುದಿಲ್ಲ ಹಗರಣದ ಕುರಿತು ತನಿಖೆ ಪ್ರಾರಂಭವಾಗಿರುವಾಗ, ಮತ್ತೊಂದೆಡೆ ಸದನ ಸಮಿತಿಯ ಎಲ್ಲಾ ಮಾನ್ಯ ಸದಸ್ಯರು ತನಿಖೆ ನಡೆಸಿದರೆ ಸಾಕಷ್ಟು ಒತ್ತಡ ಬರುತ್ತದೆ, ಆದಕಾರಣ, ಈ ಒತ್ತಡ ಬರುವುದು ಬೇಡ ಇವೊತ್ತು ತನಿಖೆ ಪ್ರಾರಂಭಿಸಿರುವುದರಿಂದ ತಮ್ಮ ಸಹಕಾರ ಬೇಕಾಗಿದೆ, ಮತ್ತು ಇದು ಪ್ರತಿಷ್ಠೆ ವಿಷಯವೂ ಅಲ್ಲ, ನನ್ನನ್ನು ತಾವು ಮೂವತ್ತೈದು ವರ್ಷಗಳಿಂದ ನೋಡಿದ್ದೀರಿ ನಾನು ಒಬ್ಬ ಸಾಮಾನ್ಯ ಪ್ರಜೆಯಾಗಿ ಕೆಲಸ ಮಾಡಿದ್ದೇನೆ, ಈ ವಿಚಾರದಲ್ಲಿ ಜನರ ಅಭಿಪ್ರಾಯ ಹಾಗೂ ಅವರ ಸಮಸ್ಯೆಗಳು ಏನೆಂಬುದೂ ಕೂಡ ಗೊತ್ತು ತಾವು ಹೋರಾಟಗಾರರಾಗಿದ್ದು, ಆ ಹೋರಾಟದ ಆಧಾರದ ಮೇಲೆ ಜನಸಾಮಾನ್ಯರ ಕುರಿತಾಗಿ ತಮ್ಮ ಚಿಂತನೆ, ಅಭಿಪ್ರಾಯ ವ್ಯಕ್ತಪಡಿಸಿರುವುಕ್ಕೆ ಸರ್ಕಾರ ಸ್ಪಂದಿಸುತ್ತದೆ ತಾವು ಇದಕ್ಕೆ ಸಹಕರಿಸಬೇಕೆಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ

†ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)

ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ತಮ್ಮ ಹತ್ತಿರ ಮತ್ತು ಮುಖ್ಯಮಂತ್ರಿಗಳ ಹತ್ತಿರ ಮಾತನಾಡತಕ್ಕ ಕಾಲದಲ್ಲಿ ಸ್ವಲ್ಪ ಹೆಚ್ಚುಕಮ್ಮಿ ಅವರ ಭಾವನೆ ಆಯಿತು, ಇದರಲ್ಲೇನಿದೆ ತನಿಖೆ ಮಾಡಿಸೋಣ, ಜಂಟಿ ಸದನದ ಸಮಿತಿ ನಮ್ಮದೇ ಅಲ್ಲವೇ ಎಂಬ ಇಂಗಿತವಿತ್ತು ಎಂದು ನಾವು ತಿಳಿದುಕೊಂಡಿದ್ದೇವು ಇಲ್ಲದಿದ್ದರೆ ಒಳಗಡೆ ಕರೆದು ಅವರ ಕಷ್ಟವೇನು ಎಂದು ಹೇಳಬಹುದಿತ್ತು ನನಗನ್ನಿಸುತ್ತದೆ ಈ ರಾಜ್ಯದ ಮುಖ್ಯಮಂತ್ರಿಗಳಿಗಿಂತ ಹೆಚ್ಚಾಗಿ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತೇವೆಂದು ರಾಜ್ಯದ ಜನರ ಮುಂದೆ ಹೋಗಿ ಗೆದ್ದು ಕಾಂಗ್ರೆಸ್‌ನವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿ ಆ ಸರ್ಕಾರಕ್ಕೆ ಬೆಂಬಲವನ್ನು ಕೊಡುತ್ತಿರುವ ನಮ್ಮ ಜೆಡಿಎಸ್ ಸ್ನೇಹಿತರು ಮುಂದೆ ಬಂದು ಇಲ್ಲ ಸದನದ ಸಮಿತಿಯಾಗಲೇಬೇಕೆಂದು ಹಿಂದೆಯೂ ಒತ್ತಾಯ ಮಾಡಿದ್ದೆವು ಅಧಿಕಾರದಲ್ಲಿದ್ದಾಗಲೂ ಮಾಡುತ್ತೇವೆ ಸತ್ಯ ಹೊರಕ್ಕೆ ಬರಲಿ, ಯಾರೇ ಈ ಹಗರಣದಲ್ಲಿ ಸಿಕ್ಕಿಹಾಕಿಕೊಂಡಿದ್ದರೂ ನಿಷ್ಪಕ್ಷಪಾತವಾಗಿ ತನಿಖೆ ಮಾಡೋಣ ಅವರಿಗೆ ಶಿಕ್ಷೆಯಾಗಲಿ ಎಂದು ಹೇಳುವಂಥ ಒಂದು ಧೋರಣೆಯನ್ನು ಜೆಡಿಎಸ್ ನಾಯಕರು ಮಾಡುತ್ತಾರೆ ಮುಖ್ಯಮಂತ್ರಿಗಳ ಮೇಲೆ ಪ್ರಭಾವ ಬೀರುತ್ತಾರೆ

ಎಂದು ನಾವು ಅಂದುಕೊಂಡಿದ್ದೆವು ಇಲ್ಲಿ ಸಮಸ್ಯೆ ಏನಾಗಿದೆಯೆಂದರೆ, ಇವರಿಗೆ ಹೈಕಮಾಂಡ್ ನಾಲ್ಕೈದು ಇದ್ದಾವೆ, ಮುಖ್ಯಮಂತ್ರಿಗಳ ಒಂದು ತೀರ್ಮಾನವನ್ನು ಕೈಗೊಳ್ಳಬೇಕಾದರೆ ಯಾರನ್ನು ಕೇಳಿ ತೀರ್ಮಾನ ತೆಗೆದುಕೊಳ್ಳಬೇಕು ? ಮಾನ್ಯ ಸಿದ್ಧರಾಮಯ್ಯನವರನ್ನು ಕೇಳಿ ತೀರ್ಮಾನ ತೆಗೆದುಕೊಳ್ಳಬೇಕೋ ? ಮಾನ್ಯ ದೇವೇಗೌಡರನ್ನು ಕೇಳಿ ತೀರ್ಮಾನ ತೆಗೆದುಕೊಳ್ಳಬೇಕೊ ? ದೆಹಲಿಯ ಹೈಕಮಾಂಡ್‌ನವರನ್ನು ಕೇಳಿ ತೀರ್ಮಾನ ತೆಗೆದುಕೊಳ್ಳಬೇಕೋ ಅಥವಾ ಇಲ್ಲೇ ಇರುವ ಮೂರ್‍ನಾಲ್ಕು ಗುಂಪುಗಳಲ್ಲಿ ಅವರ ಮನವೊಲಿಸಿ ತೆಗೆದುಕೊಳ್ಳಬೇಕೋ? ಈ ರೀತಿ ಒಂದು ಇಕ್ಕಟಿಗೆ ರಾಜ್ಯದ ಮುಖ್ಯಮಂತ್ರಿಗಳು ಸಿಕ್ಕಿಹಾಕಿಕೊಂಡು ಅವರ ಮನಸ್ಸಿನಲ್ಲಿ ಇದರ ಬಗ್ಗೆ ನಿಷ್ಪಪಕ್ಷಪಾತ ತನಿಖೆಯಾಗಬೇಕು ಸದನದ ಸಮಿತಿಯಾಗಬೇಕೆಂದು ಅವರ ಮನಸ್ಸಿನಲ್ಲಿ ಭಾವನೆ ಇದ್ದರೂ ಆ ತೀರ್ಮಾನ ತೆಗೆದುಕೊಳ್ಳಲು ಆಗದೆ ಇರತಕ್ಕ ಪರಿಸ್ಥಿತಿಯಲ್ಲಿ ಅವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರೆಂದು ಅನಿವಾರ್ಯವಾಗಿ ನಾನು ಹೇಳಬೇಕಾಗುತ್ತದೆ ನಾನು ಮುಖ್ಯಮಂತ್ರಿಗಳ ಮೇಲೆ ಯಾವುದೇ ದೂರನ್ನು, ಆರೋಪವನ್ನು ಹೊರಿಸಲು ಸಿದ್ಧನಿಲ್ಲ ಆದರೆ ಇವತ್ತು ತಮಗೆ ಆ ಸ್ವಾತಂತ್ರ್ಯ ಇಲ್ಲ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಲು ಆಗದೆಯೇ ನಿಮ್ಮ ಕೈಕಟ್ಟಿ ಇಕ್ಕಟಿನಲ್ಲಿ ಸಿಕ್ಕಿಸಿ ನಿಮ್ಮನ್ನು ಒಂದು ರೀತಿಯಲ್ಲಿ ಈ ರಾಜ್ಯದ ಜನರ ಮುಂದೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂಥ ಒಂದು ಷಡ್ಯಂತರವೇನು ನಡೆದಿದೆ ಅದಕ್ಕೆ ನೀವು ಸಿಕ್ಕಿಹಾಕಿಕೊಳ್ಳದೆಯೇ, ನೀವು ಎಷ್ಟೇ ದಿವಸ ಮುಖ್ಯಮಂತ್ರಿಗಳಾಗಿರಲಿ, ಆದರೆ ನಾನು ಇರುವವರೆಗೆ ಇದರ ಬಗ್ಗೆ ನಿಷ್ಪಕ್ಷಪಾತವಾದ ತನಿಖೆಯನ್ನು ಮಾಡುತ್ತೇನೆ, ನಾನು ಆ ಸರ್ಕಾರದಲ್ಲಿ ಹಿಂದೆ ಇರಬಹುದು, ಆದರೆ ಈಗ ಎಲ್ಲಾ ಬೆಳಕಿಗೆ ಬರುತ್ತಿರಬೇಕಾದರೆ, ಇವತ್ತು ಇದನ್ನು ಸರಿಪಡಿಸುವ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ ಯಡಿಯೂರಪ್ಪನವರೆ, ವಿರೋಧ ಪಕ್ಷದವರಿಗೆ ಬರವಸೆಯನ್ನು ಕೊಡುತ್ತೇನೆ ನೀವು ಮಾಡಿ, ಇದು ಸದನದ ಸಮಿತಿ ಹೋಗಲಿ, ಇನ್ನೂ ಏನೇನು ವಿಚಾರಗಳು ಇದ್ದಾವೆ ತನ್ನಿ, ನಾನು ತನಿಖೆ ಮಾಡಿಸುತ್ತೇನೆ ಎನ್ನುವಂಥ ಈ ಒಂದು ಧೋರಣೆಯನ್ನು ಈ ರಾಜ್ಯದ ಮುಖ್ಯಮಂತ್ರಿಯವರು ತೆಗೆದುಕೊಳ್ಳುತ್ತಾರೆಂದು ನಾವು ಅಂದುಕೊಂಡಿದ್ದೆವು ಆದರೆ ದುರ್ದೈವ ಇವತ್ತು ಅವರು ಆ ಕೆಲಸವನ್ನು ಅನಿವಾರ್ಯವಾಗಿ ನಾವು ಇವತ್ತು ಮತ್ತೆ ಧರಣಿಯನ್ನು ಮುಂದುವರೆಸಬೇಕಾಗಿದೆ

(ಗೊಂದಲ)

†**ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ)** ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಸದನದ ಸಮಿತಿಯನ್ನು ರಚನೆ ಮಾಡಿದರೆ ಸಿಓಡಿ ತನಿಖೆಗೆ ಅಡ್ಡಿಯಾಗುತ್ತದೆ ಪ್ಯಾರಲೆಲ್ ಆದಂಥ ಎರಡು ತನಿಖೆಯಾಗತಕ್ಕ ಸಂದರ್ಭದಲ್ಲಿ ಬಹಳ ಸಮಸ್ಯೆಯುಂಟಾಗುತ್ತದೆ ಅದರ ಮೇಲೆ ಪ್ರಭಾವವಾಗುತ್ತದೆ ಎಂದು ಹೇಳುತ್ತಿರತಕ್ಕದನ್ನು ಖಂಡಿತಾ ಒಪ್ಪಲು ಆಗುವುದಿಲ್ಲ ಏಕೆಂದರೆ ಸಿಓಡಿ ತನಿಖೆಯನ್ನು ನಿಲ್ಲಿಸಿ ಎಂದು ನಾವು ಹೇಳುತ್ತಿಲ್ಲ ಸಿಓಡಿ ತನಿಖೆಯಲ್ಲಿ ಸದನದ

ಸಮಿತಿ ಯಾವುದೇ ಹಸ್ತಕ್ಷೇಪವನ್ನು ಮಾಡುವುದಿಲ್ಲ, ಪ್ರಭಾವವನ್ನು ಬೀರಲು ಹೋಗುವುದಿಲ್ಲ ಎರಡನೆಯದಾಗಿ,ಸಿ ಓ ಡಿ ಯವರು ತನಿಖೆ ಮಾಡಿದರ ಅದು ಕಾಳಸಂತೆಯಲ್ಲಿ ಅಕ್ಕಿ ಮಾರಾಟ ಮಾಡುತ್ತಿದ್ದರು ಎಂದು ಒಂದು ಕೇಸನ್ನು ಹಾಕಿಬಿಡುತ್ತಾರೆ ಅಷ್ಟೆ ನಾವು ಇಲ್ಲಿ ಮಾತನಾಡುತ್ತಿರತಕ್ಕದ್ದು, ಮೂರು ದಿವಸಗಳಿಂದ ಚರ್ಚೆ ಮಾಡುತ್ತಿರತಕ್ಕದ್ದು ಇಡೀ ಯೋಜನೆ ದುರುಪಯೋಗವಾಗಿದೆ ಕೆಲಸ ಇಲ್ಲದೆಯೇ ಬಿಲ್ಲುಗಳನ್ನು ತೆಗೆದುಕೊಂಡಿದ್ದಾರೆ ಕೂಲಿ ದಿನಗಳನ್ನು ಸೃಷ್ಟಿ ಮಾಡದೆಯೇ ಹಣವನ್ನು ಪಡೆದಿದ್ದಾರೆ ಇವೆಲ್ಲದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು ಅದಕ್ಕೋಸ್ಕರ ಸದನದ ಸಮಿತಿಯಾಗಬೇಕೆಂದು ಕೇಳುತ್ತಿದ್ದೇವೆ ಕೇವಲ ಕಾಳಸಂತೆಯಲ್ಲಿ ಅಕ್ಕಿ ಮಾರಾಟ ಮಾಡುತ್ತಿದ್ದರು ಎಂದು ಸಿ ಓ ಡಿ ಯವರು ಒಂದು ಕೇಸನ್ನು ಹಾಕಲಿಕ್ಕೆ ಅಲ್ಲ ನಾವು ಕೇಳುತ್ತಿರುವುದು ? ಇಡೀ ಯೋಜನೆಯಿಂದ ದುರುಪಯೋಗವಾಗಿದೆ ಆ ಯೋಜನೆ ದುರುಪಯೋಗವಾಗಿರತಕ್ಕದ್ದನ್ನೇ ತನಿಖೆ ಮಾಡಲು ಶಕ್ತಿ ಇರತಕ್ಕದ್ದು ಸದನದ ಸಮಿತಿಗೆ, ಆಗುವುದಿಲ್ಲವೆಂದು ಹೇಳುತ್ತಾರೆ ಸಿ ಓ ಡಿ ತನಿಖೆಗೂ ಇದಕ್ಕೂ ಯಾವುದೇ ರೀತಿಯಲ್ಲಿ ಸಮಾನಾಂತರವಾಗಿ ತನಿಖೆಯಾಗುತ್ತದೆ ಸದನದ ಸಮಿತಿಯಿಂದು ಅದರ ಮೇಲೆ ಪ್ರಭಾವವಾಗುತ್ತದೆ ಎಂದು ಹೇಳತಕ್ಕದ್ದು ಸರಿಯಾದಂಥ ವಾದವಲ್ಲ ಅದಕ್ಕೂ ಇದಕ್ಕೂ ಸಂಬಂಧ ಇಲ್ಲ, ಸದನದ ಸಮಿತಿಯನ್ನು ಮಾಡಲು ಸರ್ಕಾರ ಒಪ್ಪಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ

ಶ್ರೀ ಕೆ ಆರ್ ರಮೇಶ್‌ಕುಮಾರ್ (ಶ್ರೀನಿವಾಸಪುರ) ಮಾನ್ಯ ಅಧ್ಯಕ್ಷರೇ, ನಮ್ಮ ಸದನದ ಇತಿಹಾಸದಲ್ಲಿ -ಇಂಥ ಸಂದರ್ಭಗಳು ಉಂಟಾಗತಕ್ಕದ್ದು ಅಪರೂಪವೇನಲ್ಲ, ಈ ಹೊಸ ಸದನ ರಚನೆಯಾಗಿ ನಿನ್ನೆಗೆ ಎಂಟು ದಿವಸವಷ್ಟೇ ಆಗಿದೆ ಪ್ರಾರಂಭಿಕ ದಿಸೆಯಲ್ಲೇ ನಾವು ಕಗ್ಗಂಟು ಮಾಡಿಕೊಂಡು ಕುಳಿತುಕೊಂಡರೆ ನಾವು ಉಳಿದ ಕಲಾಪವನ್ನು ನಡೆಸುವುದು ಕಷ್ಟವಾಗುತ್ತದೆ ಉತ್ಸುಕತೆಯಿಂದ ಹೊಸದಾಗಿ ಬಂದಿರತಕ್ಕವರಿಗೆಲ್ಲಾ ಬಹಳ ಕೆಲಸ ಮಾಡಬೇಕು, ಕಲಾಪಗಳಲ್ಲಿ ಭಾಗವಹಿಸಬೇಕು, ಎನ್ನತಕ್ಕ ಒಂದು ಆಸಕ್ತಿ ಒಂದು ಕಡೆ ಇರುತ್ತದೆ ಮಾಮೂಲಾಗಿ ಸದನದ ವ್ಯವಹಾರಗಳಲ್ಲಿ ಇಂಥ ಸನ್ನಿವೇಶ ಉಂಟಾದಾಗ ದಿವಂಗತ ಎಂ ಎಸ್ ಕೃಷ್ಣನ್‌ರವರು ಅಥವಾ ಇನ್ಯಾರಾದರೂ ಕೆಲವು ಹಿರಿಯರು ಮಧ್ಯಸ್ಥಿಕೆಯನ್ನು ವಹಿಸುತ್ತಿದ್ದರು ಆದರೆ ಇವತ್ತು ದುರಾದೃಷ್ಟವಶಾತ್ ವಿರೋಧ ಪಕ್ಷದಲ್ಲಿರತಕ್ಕ ಎಲ್ಲರೂ ಒಟ್ಟಿಗೆ ಅಲ್ಲಿಗೆ ಬಂದುಬಿಟ್ಟಿದ್ದಾರೆ ಈ ಕಡೆಗೆ ಆಡಳಿತ ಪಕ್ಷದವರು ಕುಳಿತಿದ್ದಾರೆ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಒಂದು ಐದು ವರ್ಷಗಳ ಕಾಲ ಸದನವನ್ನು ವಿರೋಧ ಪಕ್ಷದ ನಾಯಕರನ್ನು ಮತ್ತು ವಿರೋಧ ಪಕ್ಷದಲ್ಲಿರುವ ಇತರೆ ಮುಖಂಡರುಗಳನ್ನು ಸರ್ಕಾರದ ಪ್ರತಿನಿಧಿಗಳನ್ನು ತಮ್ಮ ಕೋಣೆಗೆ ಕರೆಯಬಹುದು ಇಲ್ಲದೇ ಇರತಕ್ಕದ್ದು ಯಾವುದೇ ಸಮಸ್ಯೆ ಇಲ್ಲ, ಇದಕ್ಕಿಂತ ಇನ್ನೂ ಗಂಭೀರವಾದ ವಿಚಾರಗಳನ್ನು ಶ್ರೀಮಾನ್ ಯಡಿಯೂರಪ್ಪನವರು ಹಿಂದೆ ಎತ್ತಿದ್ದಾರೆ ಅದಕ್ಕೆ ನಾವು ಪರಿಹಾರವನ್ನು ಕಂಡುಹಿಡಿದುಕೊಂಡಿದ್ದೇವೆ,

ನಾವು ಹೀಗೆ ವಾದವನ್ನು ಮಾಡಿಕೊಂಡು ಹೋಗುವುದಕ್ಕಿಂತ ಕೆಲಸವನ್ನು ಮುಂದುವರೆಸಿಕೊಂಡು ಹೋಗಲು ಇದನ್ನು ಕೊನೆಗಾಣಿಸಲು ತಾವು ಒಂದು ಐದು ನಿಮಿಷಗಳ ಕಾಲ ದೊಡ್ಡ ಮನಸ್ಸು, ಮಾಡಿ ಸದನವನ್ನು ಮುಂದೂಡಿ ಆ ಕಡೆ ಮತ್ತು ಈ ಕಡೆಯವರನ್ನು ತಮ್ಮ ಕೊರಡಿಗೆ ಕರೆದರೆ ಬಹುಶಃ ನಾವು ಒಂದು ಪರಿಹಾರವನ್ನು ಕಂಡುಹಿಡಿಯಬಹುದು, ಅದಕ್ಕೆ ತಾವು ದಯಮಾಡಿ ಸಹಕರಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೆ, ತಮ್ಮ ಕಛೇರಿಯಲ್ಲಿ ಸಹ ನಾವು ನಿನ್ನೆ ಮಾನ್ಯ ನಾಯಕರನ್ನು, ಅವರ ಪಕ್ಷದ ಎಲ್ಲಾ ಹಿರಿಯ ಸಚಿವರನ್ನು ಕೇಳಿಕೊಂಡಿದ್ದೇವೆ ಕಾಲ ಬಹಳ ಕಡಿಮೆ, ಇದೆ ರಾಜ್ಯಪಾಲರ ಭಾಷಣದ ಮೇಲೆ ಭಾಷಣಗಳು ಆರಂಭ ಆಗಿಯೇ ಇಲ್ಲ ಈ ಸಲ ಅನೇಕ ಜನ ನೂತನ ಶಾಸಕರಿಗೆ ಈ ಅಧಿವೇಶನದಲ್ಲಿ ಮಾತನಾಡಬೇಕೆಂಬ ಇರಾದೆ ಇರುವುದರಿಂದ, ಸುಮ್ಮನೆ ಇದರಲ್ಲೇ ಬಹಳ ಕಾಲವನ್ನು ವ್ಯಯ ಮಾಡುವುದರ ಬದಲು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು ನಾವು ನಮ್ಮ ನಿಲುವನ್ನು ಸ್ಪಷ್ಟ ಮಾಡಿದ್ದೇವೆ ನಾವೇನು ಬಹಳವಾದದ್ದನ್ನು ಕೇಳಿಲ್ಲ, ಜಂಟಿ ಸದನದ ಸಮಿತಿ ಮಾಡಿ, ಸಿ ಓ ಡಿ ವಿಚಾರಣೆ ಒಂದು ಪೊಲೀಸ್ ವಿಚಾರಣೆ ಅವರು ತೆಗೆದುಕೂಳ್ಳುವ ಮಾಹಿತಿಗೂ ನಾವು ತೆಗೆದುಕೊಳ್ಳುವ ಮಾಹಿತಿಗೂ ಯಾವುದೇ ಡೂಪ್ಲಿಕೇಷನ್ ಆಗುವುದಿಲ್ಲ ಒಂದೆರಡು ತಿಂಗಳು ನಮಗೆ ಅವಕಾಶವನ್ನು ಕೊಟ್ಟು ನಮಗೆ ವರದಿ ಕೊಡಲು ಅವಕಾಶ ಕೊಡಿ ಎಂದಿದ್ದೇವೆ, ಇದರಲ್ಲಿ ಸರ್ಕಾರ ಏಕೆ ಪ್ರತಿಷ್ಠೆ ಮಾಡಿಕೊಳ್ಳಬೇಕೋ ನಮಗೆ ಅರ್ಥವಾಗುವುದಿಲ್ಲ ನಾವು ಈಗಲೂ ಅವರನ್ನು ಒತ್ತಾಯ ಮಾಡುತ್ತೇವೆ, ಈ ಸದನದ ವೇಳೆ ಎಷ್ಟು ಅಮೂಲ್ಯವೆಂದು ನಮಗೆ ಗೊತ್ತು ಅಲ್ಲಿಂದ ಬಂದು ಧರಣಿ ಮಾಡಿ ಜನರಿಗೆ ಹೋಗಬೇಕೆಂದು ನಾವ್ಯಾರೂ ಶಾಸಕರುಗಳಾಗಿ ಬಂದಿಲ್ಲ ದಯಮಾಡಿ ಈ ವಿಷಯದ ತೀವ್ರತೆಯನ್ನು ಅರ್ಥಮಾಡಿಕೊಂಡು ಮತ್ತೆ ಏಕೆ ಚರ್ಚೆಯಾಗಬೇಕೆಂದು ನನಗನ್ನಿಸುವುದಿಲ್ಲ ಮಾನ್ಯ ನಾಯಕರು ಎದ್ದು ಉದಾರವಾಗಿ ಇಲ್ಲಿ ಜಂಟಿಸದನದ ಸಮಿತಿಯನ್ನು ಮಾಡುವ ಬಗ್ಗೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ

ಶ್ರೀ ಕೆ ಎಸ್ ಈಶ್ವರಪ್ಪ ಮಾನ್ಯ ಅಧ್ಯಕ್ಷರೆ ಕೇಂದ್ರಸರ್ಕಾರದಿಂದ ಬಂದಂಥ ಬರಗಾಲದ ಅಕ್ಕಿ ಉಚಿತವಾಗಿ ಬಂದಂಥ ಅಕ್ಕಿ

ಅಧ್ಯಕ್ಷರು ನಾನು ತಮ್ಮಿಂದ ನಿರೀಕ್ಷಣೆ ಮಾಡುವುದೇನೆಂದರೆ ಇದರ ಬಗ್ಗೆ ಏನು ಕಗ್ಗಂಟಾಗಿದೆ ಅದನ್ನು ಬಿಡಿಸಲು ಏನಾದರೂ ಸಲಹೆಯನ್ನು ಹೇಳಬೇಕು ನಿಮ್ಮ ನಾಯಕರು ಹೇಳಿದ್ದನೇ ನೀವು ಹೇಳಿದರೆ ಏನು ಪ್ರಯೋಜನ ?

ಶ್ರೀ ಕೆ ಎಸ್ ಈಶ್ವರಪ್ಪ ತಾವು ಹೇಳುವುದು ಸತ್ಯ ನಮ್ಮ ನಾಯಕರು ಹೇಳಿರತಕ್ಕದಕ್ಕೆ, ಎಲ್ಲಾ ಪಕ್ಷದ ನಾಯಕರು ಹೇಳಿರುವ ಪ್ರಕಾರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಹೇಳುತ್ತೇನೆ, ದಯವಿಟ್ಟು ಸಭೆಯನ್ನು ಐದು ನಿಮಿಷ ಮುಂದಕ್ಕೆ ಹಾಕಿ ಚರ್ಚೆ ಮಾಡೋಣ ಕರ್ನಾಟಕ ರಾಜ್ಯ ಭ್ರಷ್ಟರಾಜ್ಯವಲ್ಲವೆಂದು

ಇಡೀ ದೇಶಕ್ಕೆ ತೋರಿಸಬೇಕು ಅದರ ನೇತೃತ್ವವನ್ನು ರಾಜ್ಯದ ಮುಖ್ಯಮಂತ್ರಿಯವರು ವಹಿಸಬೇಕು ಹೀಗಾಗಿ ಭ್ರಷ್ಟರಿಗೆ ರಕ್ಷಣೆಯನ್ನು ಕೊಡುವ ಅವಕಾಶ ಮಾಡುತ್ತಿದ್ದಾರೆ ಇದನ್ನು ತಪ್ಪಿಸಬೇಕು ಆದ್ದರಿಂದ ದಯವಿಟ್ಟು ಸದನವನ್ನು ಒಂದು ಐದು ನಿಮಿಷ ಮುಂದಕ್ಕೆ ಹಾಕಲಿ ಐದು ನಿಮಿಷ ಕುಳಿತು ಚರ್ಚೆ ಮಾಡೋಣ

ಅಧ್ಯಕ್ಷರು ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗಿದೆ

(ಸದನವು 11 25 ಕ್ಕೆ ಮುಂದೂಡಲ್ಪಟ್ಟು ಮತ್ತೆ ಹತ್ತು ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು),

(ಸದನವು 12 ಗಂಟೆ 50 ನಿಮಿಷಕ್ಕೆ ಮನಃ ಸಮಾವೇಶಗೊಂಡಿತು ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಸನ್ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಂಕರಿಸಿದರು,

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ ಅಕ್ಕಿ ಹಗರಣದ ಬಗ್ಗೆ

†ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಸಭಾನಾಯಕರು ಈ ಕಡೆಗೆ ಗಮನ ಕೊಡಬೇಕು ಮತ್ತೆ ಮತ್ತೆ ನಿಮ್ಮಲ್ಲಿ ಬಂದು, ಕೊರಡಿಗೆ ಬಂದು ಚರ್ಚೆ ಮಾಡಿ ಗುಟ್ಟನ್ನು ಇಡುವಂಥ ವಿಷಯ ಇನ್ನೇನೂ ಇಲ್ಲ, ಇಡೀ ರಾಜ್ಯಕ್ಕೆ ನಕಲಿ ಛಾಪಾ ಕಾಗದದ ಹಗರಣದ ಒಂದು ವಿಚಾರ ಹೊರಗಡೆ ಬಂದ ಮೇಲೆ ನೂರಾರು ಕೋಟಿ ರೂಪಾಯಿ ಹಗರಣ ಹೊರಗಡೆ ಬಂದ ಮೇಲೆ ಇಡೀ ನಮ್ಮ ರಾಜ್ಯದ ಈ ವ್ಯವಸ್ಥೆಯೇ ಕುಸಿದು ಹೋಗುವಂಥ ಸ್ಥಿತಿಗೆ ಬಂದಿರುವಂಥ ಹಗರಣ ಈ ಅಕ್ಕಿ ಗೋಧಿ ಹಗರಣ, ಪುಕ್ಕಟೆಯಾಗಿ ಕೊಟ್ಟಿರುವಂಥ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಿಕೊಂಡಿದ್ದು ಪಡಿತರ ವ್ಯವಸ್ಥೆಯಲ್ಲಿ ಕೊಡಬೇಕಾದಂಥ ಗೋಧಿ ಇನ್ನಿತರ ವಸ್ತುಗಳನ್ನು ಮಾರಾಟ ಮಾಡಿಕೊಂಡಿರುವಂಥದ್ದು ಮತ್ತೆ ಅದನ್ನು ಮುಚ್ಚಿಹಾಕುವಂಥ ಪ್ರಯತ್ನವನ್ನು ಮಾಡಿರುವಂಥದ್ದು ಅಧಿಕಾರಿಗಳು ತನಿಖೆ ಮಾಡುತ್ತಾರೆಂದು ಹೇಳಿ, ಅಧಿಕಾರಿಗಳು ತನಿಖೆಯನ್ನು ಮಾಡದೆ ಅದನ್ನು ಮುಚ್ಚಿಟ್ಟಿರುವಂಥದ್ದು ಮತ್ತೆ ಬಹಳ ಸ್ಪಷ್ಟವಾಗಿ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರುಗಳ ಮಟ್ಟದಲ್ಲಿ ಈ ಹಗರಣ ನಡೆದಿರುವಂಥದ್ದು ಜಗಜ್ಜಾಹೀರವಾಗಿರುವಂಥ ಸಂದರ್ಭ ಇವತ್ತು ನಾನು ಮುಖ್ಯ ಮಂತ್ರಿಗಳಿಗೆ ಒತ್ತಾಯವನ್ನು ಮಾಡಿದೆ ನಿಮ್ಮ ಕೊರಡಿಯಲ್ಲಿ ಹಾಗೂ ಇಲ್ಲಿಯೂ ಸಹ, ಮಾನ್ಯ ರಮೇಶ್‌ಕುಮಾರ್‌ರವರು ಆ ಅಧ್ಯಕ್ಷ ಪೀಠದಲ್ಲಿ ಕುಳಿತಂಥ ಕಾಲದಲ್ಲಿ ಗ್ರಾನೈಟ್ ಹಗರಣ ಸರ್ಕಾರ ಹಿಂದೆಮುಂದೆ ನೋಡಲಿಲ್ಲ ಕೆಲವೇ ನಿಮಿಷಗಳಲ್ಲಿ ಸದನ ಸಮಿತಿಯನ್ನು ಮಾಡುವುದಕ್ಕೆ ಒಪ್ಪಿಗೆಯನ್ನು ಕೊಟ್ಟಿತು ಅದೇ ರೀತಿ ಶಿರಾ ಗೋಲಿಬಾರ್ ಹಗರಣಕ್ಕೆ ತಡವಾಗಲಿಲ್ಲ, ಅದಕ್ಕೆ ಸದನ ಸಮಿತಿಯನ್ನು ಮಾಡಲಾಯಿತು ಟ್ಯಾರೀಫ್ ಬಗ್ಗೆ ಗೊಂದಲವಾಯಿತು ಸದನ ಸಮಿತಿಯನ್ನು ಮಾಡಿದ್ದೇವೆ ಇದೇ ಛೇರ್‌ನಲ್ಲಿ ಮಾನ್ಯ ರಮೇಶ್ ಕುಮಾರ್‌ವರು ಕುಳಿತಂಥ ಕಾಲದಲ್ಲಿ, ಅಂದರೆ ಈ ಸದನ ಸಮಿತಿಯನ್ನು ಮಾಡುವಂಥದ್ದು

ಇದು ಹೊಸದು ಏನೂ ಇಲ್ಲ ಸದನ ಸಮಿತಿಯ ಇತಿಮಿತಿಗಳು ಏನು ? ಶಕ್ತಿ ಎಷ್ಟು ಇದೆ ಎಂದರೆ, ಅದರ ಬಗ್ಗೆ ನಾವೂ ರೂಲ್‌ನ್ನು ಚೇಂಜ್ ಮಾಡಿಕೊಳ್ಳೋಣ ಯಾವ ಸದನ ಸಮಿತಿಯನ್ನು ಕಾನೂನಿನ ಅಡಿಯಲ್ಲಿ ನಾವೇ ಕುಳಿತುಕೊಂಡು ರಚನೆಯನ್ನು ಮಾಡಿಕೊಂಡಿದ್ದೇವೆ, ಆ ಸದನ ಸಮಿತಿ ನಿರುಪಯುಕ್ತವಾದಂಥದ್ದು ಯಾವ ಅಧಿಕಾರ ಆ ಸದನ ಸಮಿತಿಗೆ ಇಲ್ಲವೆಂದರೆ, ಆ ಸದನ ಸಮಿತಿ ಏತಕ್ಕೆ ಬೇಕು ? ನಾವು ನೀವು ಕುಳಿತುಕೊಂಡು ರೂಲ್‌ನ್ನು ಅಮೆಂಡ್‌ಮೆಂಟ್ ಮಾಡಿ ಅದಕ್ಕೆ ಇನ್ನಷ್ಟು ಶಕ್ತಿಯನ್ನು ತುಂಬುವಂಥ ಕೆಲಸವನ್ನು ಮಾಡೋಣ ಅದು ಬೇರೆ ವಿಷಯ ಇವತ್ತು ಕೆಲವು ಸಲಹೆಗಳು ಬಂದವು ಪಬ್ಲಿಕ್ ಅಕೌಂಟ್ ಕಮಿಟಿಯಲ್ಲಿ ಇದನ್ನು ಏಕೆ ಮಾಡಬಾರದೆಂದು ? ಅದಕ್ಕೆ ನಮ್ಮ ವಿರೋಧ ಪಕ್ಷದವರು ಅಧ್ಯಕ್ಷರಾಗಿರುತ್ತಾರೆ ಅದನ್ನು ಅವರು ಯಾವುದು ಬೇಕೋ ಅದನ್ನು ತನಿಖೆ ಮಾಡುವುದಕ್ಕೆ ಅವರಿಗೆ ಅವಕಾಶವಿದೆ, ಅದರ ಬಗ್ಗೆ ಹೊಸದಾಗಿ ಯಾರು ಸಲಹೆ ಕೊಡುವಂಥ ಅವಶ್ಯಕತೆ ಇಲ್ಲ ಅವರಿಗೆ ಇರುವಂಥ ಶಕ್ತಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಸಲಹೆಯನ್ನು ಕೊಡುವಂಥದ್ದು ಈ ಸದನ ಸಮಿತಿಯನ್ನು ಮಾಡಿದರೆ ಉದಾಹರಣೆಗೆ ಮಂಡ್ಯ ಜಿಲ್ಲೆಗೆ ಸಮಿತಿ ಹೋಗುತ್ತದೆ ಸುಮಾರು ಮಧ್ಯಾಹ್ನ , 12 ಗಂಟೆಯಿಂದ 2 ಗಂಟೆಯವರೆಗೆ ಅಲ್ಲಿ ಇರುತ್ತೇವೆ, ಇಡೀ ಮಂಡ್ಯ ಜಿಲ್ಲೆಯಲ್ಲಿ ಈ ಹಗರಣದ ಪಡಿತರ ವ್ಯವಸ್ಥೆಯಲ್ಲಿ ಏನು ಅವ್ಯವಸ್ಥೆಯಾಗಿದೆ ? ಕೂಲಿಗಾಗಿ ಕಾಳು ಯೋಜನೆಯಲ್ಲಿ ಅವ್ಯವಸ್ಥೆಯಾಗಿದೆ,? ಯಾರು ಈ ಹಗಲು ದರೋಡೆಯಲ್ಲಿ ಪಾಲ್ಗೊಂಡಿದ್ದಾರೆ, ನಿಮಮ ಹತ್ತಿರ ದಾಖಲೆಗಳು ಇದ್ದರೆ ಸಾಕ್ಷಾಧಾರಗಳು ಇದ್ದರೆ ತಂದುಕೊಡಿ ನಾವು ವರದಿಯನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇವೆಂದು ಇಟ್ಟುಕೊಳ್ಳಿ ಬಂದು ಅವರು ಏನೋ ಒಂದು ವರದಿಯನ್ನು ಕೊಡುತ್ತಾರೆ, ಮತ್ತೆ ನಾವು ಇನ್ನೊಂದು ಜಿಲ್ಲೆಗೆ ಹೋಗುತ್ತೇವೆ ಒಂದು ತಿಂಗಳಲ್ಲಿ ಪ್ರಮುಖವಾದಂಥವುಗಳನ್ನು ನೋಡಿ ಯಾವುದಾದರೂ ಒಂದೆರಡು ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿ, ಆದಾಖಲೆಗಳನ್ನು ಪರಿಶೀಲನೆ ಮಾಡಿ ಅಕ್ಕಿಯು ಹೋಗದೇ ಗೋಧಿಯು ಹೋಗದೇ ಪಡಿತರ ವ್ಯವಸ್ಥೆಯಲ್ಲಿ, ಈ ಕೂಲಿಗಾಗಿ ಕಾಳು ಯೋಜನೆಯಲ್ಲಿ ವ್ಯತ್ಯಾಸ ಮಾಡಿದ್ದಾರೆ ಮಧ್ಯಾಹ್ನದ ಬಿಸಿಯೂಟ ವ್ಯವಹಾರದಲ್ಲಿ ವ್ಯತ್ಯಾಸವನ್ನು ಮಾಡಿಕೊಂಡಿದ್ದರೆ ಅದನ್ನು ಬಹಿರಂಗ ಮಾಡುವುದಕ್ಕೆ ಒಂದು ಅವಕಾಶ ಸಿಗುತ್ತದೆ ಆಮೇಲೆ ನಿಮಗೆ ಅದರ ಬಗ್ಗೆ ಒಂದು ವರದಿಯನ್ನು ಕೊಡುತ್ತೇವೆ ಆ ಒಂದು ವರದಿಯ ಆಧಾರದ ಮೇಲೆ ಬೇಕಾದರೆ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ವರದಿಯನ್ನು ಮಾಡೋಣ ಅವರ ಮೇಲೆ ಶಿಕ್ಷೆ ಅಥವಾ ಏನಾದರೂ ಮಾಡಿ ಎಂದು, ಪಿಎಸಿ ಕಮಿಟಿಯಲ್ಲಿ 10 ವರ್ಷದ್ದು ಪೆಂಡಿಂಗ್ ಇದೆ, ಯಾರು ಜೈಲಿಗೆ ಹೋಗಿದ್ದಾರೆ ? ಯಾವ ಅಧಿಕಾರಿ ಮೇಲೆ ವರದಿ ಕೊಟ್ಟಿರುವುದನ್ನು ಕ್ರಮ ತೆಗೆದುಕೊಳ್ಳುವಂಥ ಪ್ರಯತ್ನವಾಗಿದೆ ? ಅಂದರೆ ಈ ವ್ಯವಸ್ಥೆಯೇ ಕುಸಿದು ಹೋಗಿ ನಾವು ಸದನದಲ್ಲಿ ಮಾತನಾಡಿರುವಂಥ ರೀತಿಯನ್ನು ನೋಡಿದರೆ ನಾವು ನಿಸ್ಸಾಯಕರು ಇದರಲ್ಲಿ ಯಾವುದಕ್ಕೂ ಸಮಗ್ರ ಕ್ರಮ

ತೆಗೆದುಕೊಳ್ಳುವುದಕ್ಕೆ ಅಧಿಕಾರವಿಲ್ಲ, ನಡೆಯುವುದು ನಡೆಯುತ್ತಾ ಇರುತ್ತದೆ, ಹೀಗೆ ನಡೆಯುವುದು ಈ ವ್ಯವಸ್ಥೆ ಇದೆ ಮುಂದುವರೆಯಲಿ ಎನ್ನುವುದಾದರೆ, ನಮ್ಮನ್ನು ನಂಬಿ ಇಲ್ಲಿಗೆ ಕಳುಹಿಸಿರುವಂಥ ಮತದಾರರ ಗತಿ ಏನು ? ಆ ಶ್ರೀಸಾಮಾನ್ಯರ ಗತಿ ಏನು ? ಅಂತಿಮವಾಗಿ ನಾವು ಇಲ್ಲಿ ಯಾರ ಪರವಾಗಿ ಇದ್ದೇವೆ, ಎನ್ನುವುದರ ಬಗ್ಗೆ ನಮಗೆ ಬರುವಂಥ ಒಂದು ಅನುಮಾನ, ಯಾರನ್ನೋ ಉಳಿಸಿಕೊಳ್ಳುವುದಕ್ಕೋಸ್ಕರ, ಯಾರನ್ನೋ ರಕ್ಷಣೆ ಮಾಡುವುದಕ್ಕೋಸ್ಕರ, ಎಲ್ಲಿ ಹಿಂದೆ ಇರುವ ಬಣ್ಣ ಬಯಲಾಗುತ್ತದೆ ಎನ್ನುವ ವಾತಾವರಣ ಮೂಡುತ್ತದೆಂದರೆ, ಇದು ಸರಿಯೇ ? ನಾನು ಆಸೆ ಇಟ್ಟುಕೊಂಡಿದ್ದೇನೆ ಸ್ವಾಮಿ, ಈ ರಾಜ್ಯದ ಜನರು ಆಸೆಯನ್ನು ಇಟ್ಟುಕೊಂಡಿದ್ದರು, ಇವತ್ತು ಕಾಂಗ್ರೆಸ್‌ನ್ನು ಜನ ತಿರಸ್ಕಾರ ಮಾಡಿರುವಂಥ ಒಂದು ಸಂದರ್ಭದಲ್ಲಿ, ಇವತ್ತು ಸಮ್ಮಿಶ್ರ ಸರ್ಕಾರ ಬಂದಿರುವಂಥ ಕಾಲದಲ್ಲಿ, ನಮ್ಮ ಜೆಡಿ(ಎಸ್) ಸ್ನೇಹಿತರು ವಿಶೇಷವಾಗಿ ಕಳೆದ 6 ತಿಂಗಳಿಂದ ಚುನಾವಣೆಯ ಸಂದರ್ಭದಲ್ಲಿ ಇವರು ಏನೆಲ್ಲಾ ಮಾತನಾಡಿದರೋ ಅದರ ಆಧಾರದ ಮೇಲೆ ಬಿಗಿ ಬರುತ್ತದೆ ಹಿಂದೆ ಆಗಿರುವಂಥ ಅವ್ಯವಹಾರಗಳು ಬಯಲಾಗುತ್ತವೆ, ಒಳ್ಳೆಯ ಒಂದು ಆಡಳಿತವನ್ನು ಕೊಡಬಹುದು ಎಂದು ನಾವು ತಿಳಿದುಕೊಂಡಿದ್ದೆವು ಇವತ್ತು ಬಹಳ ಪ್ರಮುಖವಾದಂಥ ವಿಷಯಗಳು ಚರ್ಚೆಯಾಗಬೇಕಾಗಿದೆ ನ್ಯಾಯವಾಗಿ ಇವರು ಅಧಿಕಾರಕ್ಕೆ ಬಂದ ಎರಡೇ ನಿಮಿಷದಲ್ಲಿ ಅವರೇ ಹೇಳಿದ್ದರು ಇವತ್ತು ಲ್ಯಾಂಡ್‌ಸ್ಕ್ಯಾಮ್ ಬಗ್ಗೆ ವಿಶೇಷವಾದ ಒಂದು ನ್ಯಾಯಾಲಯವನ್ನು ರಚನೆ ಮಾಡುತ್ತೇವೆ, ಜೈಲಿಗೆ ಕಳುಹಿಸುತ್ತೇವೆ, ಎಲ್ಲಿ ಇದುವರೆಗೆ ನೀವು ಅದನ್ನು ಪ್ರಕಟಣೆ ಮಾಡಲಿಲ್ಲ,? ಅಂದರೆ ಇವತ್ತು ಇದರ ಬಗ್ಗೆ ನೀವು ಸದನ ಸಮಿತಿಯನ್ನು ರಚನೆ ಮಾಡುವುದಕ್ಕೆ ಸಿದ್ಧವಿಲ್ಲದಿದ್ದವರು, ನಾಳೆ ದಿವಸ ಸ್ಪೆಷಲ್ ಕೋರ್ಟ್‌ನ್ನು ಮಾಡುತ್ತೀರಾ ? ಫನಿಷ್‌ಮೆಂಟ್ ಕೊಡುತ್ತೀರಾ ? ಜನ ಇವತ್ತು ನಿಮಗೆ ಯಾವುದಕ್ಕೋಸ್ಕರ ಓಟನ್ನು ಕೊಟ್ಟರು ? ಇದೆಲ್ಲವನ್ನೂ ನೀವು ಹೇಳಿದ್ದಕ್ಕೆ ನಿಮಗೆ 65 ಸೀಟ್ ಬಂತು ನಿರುದ್ಯೋಗಿ ಯುವಕರಿಗೆ ತಿಂಗಳಿಗೆ 500 ರೂಪಾಯಿಗಳ ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದಕ್ಕೋಸ್ಕರ, 5 ಲಕ್ಷ ಜನ ನಿರುದ್ಯೋಗಿಗಳಿಗೆ ಭತ್ಯೆ ಕೊಡುತ್ತೇವೆಂದು ಹೇಳಿದ್ದೀರಿ ರೈತರ ಎಲ್ಲಾ ಸಾಲಗಳ ಮೇಲೆ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಕ್ಕೋಸ್ಕರ ನಿಮಗೆ ಓಟನ್ನು ಕೊಟ್ಟರು ಕ್ಯಾಬಿನೆಟ್ ಮೊದಲನೆಯ ಸಭೆಯಲ್ಲಿಯೇ 5 ಲಕ್ಷ ಜನರಿಗೆ ನೀವು ಪರಿಹಾರವನ್ನು ಕೊಡುತ್ತೇವೆ, 500 ರೂಪಾಯಿಗಳ ಭತ್ಯೆಯನ್ನು ಕೊಡುತ್ತೇವೆಂದು ಹೇಳಿದಿರಿ, ಅದನ್ನು ನೀವು ಮಾಡಲಿಲ್ಲ ನೇಕಾರರ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿದಿರಿ, ಇದುವರೆಗೆ ನಿಮಗೆ ಶಾಲೆಗಳಿಗೆ ಪುಸ್ತಕವನ್ನು ಕೊಡುವುದಕ್ಕಾಗಲಿಲ್ಲ ಯೂನಿಫಾರಂನ್ನು ಕೊಡಲಿಲ್ಲ, ಇಂತಹ ಒಂದು ಪರಿಸ್ಥಿತಿ ಇರುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯವನ್ನು ಮಾಡುತ್ತೇನೆ, ನಾವು ಖಂಡಿತವಾಗಿ ನಿಮಗೆ ಸಹಕಾರವನ್ನು ಕೊಡುವುದಕ್ಕೆ ರೆಡಿಯಾಗಿದ್ದೇವೆ, ನೀವು ಒಂದು ಕ್ಷಣ ತಡಮಾಡದೆ, ಇವತ್ತು ರಾಜ್ಯದ ಜನ ನಿಮ್ಮ ಕಡೆ ನೋಡುತ್ತಿದ್ದಾರೆ ಪರಿಣಾಮ

ನೆಟ್ಟಗಾಗಲಿಕ್ಕಿಲ್ಲ ಜನ ಕಾತೂರತೆಯಿಂದ ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಹುಡುಕಬಹುದು ಎಂದು ಹೇಳಿ ನೋಡುತ್ತಿದ್ದರೆ ಇದರ ಬಗ್ಗೆ ಧಾರಾವಾಹಿಯಂತೆ ಎಲೆಕ್ಟ್ರಾನಿಕ್ ಮಿಡಿಯಾದಲ್ಲಿ ಹಾಗೂ ಪತ್ರಿಕೆಗಳಲ್ಲಿ ಬರುವಂಥ ಸಂದರ್ಭಗಳಲ್ಲಿ ಅದನ್ನು ರಕ್ಷಣೆ ಮಾಡುವಂಥ, ಮುಚ್ಚಿಹಾಕುವಂಥ, ನಿಮ್ಮ ಹಿಂದಿನ ಸಚಿವ ಸಂಪುಟದಲ್ಲಿದ್ದ ಅನೇಕ ಸದಸ್ಯರುಗಳು ಇದರಲ್ಲಿ ಶಾಮೀಲಾಗಿರುವಂಥದ್ದು ಬಹಿರಂಗವಾಗಿ ಮತ್ತೆ ಎಲ್ಲಿ ಪರದಾಟಕ್ಕೆ ನಾವು ಎಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ ಎಂದು ಗೊಂದಲದಲ್ಲಿ ನೀವು ಇದ್ದೀರಿ ? ನಿಮಗೆ ನಾಯಕರು ಯಾರು ಎನ್ನುವುದು ನಮಗೆ ಗೊತ್ತಿಲ್ಲ ಒಬ್ಬ ಮಾನ್ಯ ಮುಖ್ಯಮಂತ್ರಿಗಳಿಗೆ ಇಲ್ಲಿ ಯಾವ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ, ಹತ್ತಾರು ಜನರನ್ನು ಕೇಳಬೇಕು ಪ್ರತಿಯೊಬ್ಬ ಮಂತ್ರಿಗಳಿದ್ದು ಒಂದೊಂದು ಸಲಹೆಗಳು, ಈ ರೀತಿಯಾದ ಒಂದು ಗೊಂದಲದಲ್ಲಿ ನಮ್ಮ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳು ಸಿಕ್ಕಿಹಾಕಿಕೊಂಡಿರುವಂಥದ್ದು ಬಹಳ ನೋವಿನ ಸಂಗತಿ ಈಗಲಾದರೂ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ, ದಯಮಾಡಿ ನೀವು ಧೈರ್ಯವನ್ನು ಮಾಡಿ, ನಿಮಗೆ ಒಳ್ಳೆಯ ಹೆಸರು ಬರುತ್ತದೆ ಮಾನ್ಯ ಮುಖ್ಯಮಂತ್ರಿಗಳು ಇಂತಹ ಪ್ರಶ್ನೆ ಬಂದಾಗ ಪ್ರೆಸ್ಟೀಜ್ ಎಂದು ನಿಲ್ಲಲಿಲ್ಲ, ಸದನ ಸಮಿತಿ ತನಿಖೆಗೆ ಹೋಗಲಿ, ಸತ್ಯ ಹೊರಗೆ ಬರಲಿ, ಕ್ರಮ ಕೈಗೊಳ್ಳುವಂಥ ನಿರ್ಧಾರವಾಗಬೇಕೇ ಹೊರತು, ಇಲ್ಲದಿದ್ದರೆ ಈ ರಾಜಕೀಯ ಕ್ಷೇತ್ರದಲ್ಲಿದ್ದಂಥವರು ರಕ್ಷಣೆ ಮಾಡುವುದಕ್ಕೋಸ್ಕರ ಈ ನಿಲುವುಗಳನ್ನು ನೀವು ತೆಗೆದುಕೊಳ್ಳುತ್ತಿದ್ದೀರಿ, ನೀವು ಹಿಂದೆ ಮುಂದೆ ನೋಡುತ್ತಿದ್ದೀರಿ ಎನ್ನುವಂಥ ಒಂದು ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ ಎನ್ನುವಂಥ ಮಾತನ್ನು ಹೇಳುತ್ತಾ, ತಾವು ಈಗಲಾದರೂ ಒಂದು ಕ್ಷಣವನ್ನು ತಡಮಾಡದೆ ಸದನ ಸಮಿತಿಗೆ ಒಪ್ಪಿಸಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ

†**ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)** ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸರ್ಕಾರದವರು ಒಂದು ತೀರ್ಮಾನವನ್ನು ಮಾಡಬೇಕಾಗುತ್ತದೆ The supremacy of legislature ಕೂಡ ಇವತ್ತು ಕ್ವೆಶ್ಚನದಲ್ಲಿದೆ ನಾವು ಏತಕ್ಕಾಗಿ ರೆಜಿಸ್ಲೇಟರ್ಸ್‌ಗಳಾಗಿದ್ದೇವೆ, ಈ ಶಾಸಕಾಂಗಕ್ಕೆ ಏನಾದರೂ ಘನತೆ ಗೌರವ ಉಳಿದಿದೆಯಾ ? ರಾಜ್ಯದಲ್ಲಿ ಇಷ್ಟೆಲ್ಲಾ ಆದರೂ ಕೂಡ ನಮ್ಮಿಂದ ಏನಾದರೂ ಮಾಡುವುದಕ್ಕೆ ಯೋಗ್ಯತೆ, ಅರ್ಹತೆ ಇದೆಯಾ ಎಂದು ನಾವು ಸಾರ್ವಜನಿಕರ ಎದುರು ಹೋಗಬೇಕಾಗುತ್ತದೆ ಸಿಒಡಿಯಲ್ಲಿ ಪೊಲೀಸ್‌ನವರು ಮಾಡುವುದೇ ಶ್ರೇಷ್ಠವೆಂದು ಈ ಸರ್ಕಾರ ಪ್ರೆಸ್ಟೀಜ್ ಮಾಡಿಕೊಂಡು ಎರಡು-ಮೂರು ಪಕ್ಷಗಳ ಸದಸ್ಯರುಗಳ ಒಂದು ಸಮಿತಿಯನ್ನು ಮಾಡಿ ನಮಗೊಂದು ವರದಿಯನ್ನು ಕೊಡುತ್ತಾರೆ, ಅದರಿಂದ ನಮಗೊಂದು ಒಳ್ಳೆಯ ಕೆಲಸವನ್ನು ಮಾಡುವುದಕ್ಕಾಗುತ್ತದೆ, ಇದರ ಮೇಲೆ ಶಿಸ್ತುಕ್ರಮ ಜರುಗಿಸಲಿಕ್ಕೆ ಇದೊಂದು ನಮಗೆ ಅವಕಾಶವಾಗುತ್ತದೆ ಇದೊಂದು ನಮಗೆ ಮಾಡುತ್ತಿರುವ ಅಸಿಸ್ಟೆನ್ಸ್ ಎಂದು ಭಾವಿಸದೆ ಇಷ್ಟೊಂದು ಹರ ಮಾಡುವುದು ಇದನ್ನು ಯಾರನ್ನು ಶೀಲ್ಡ್ ಮಾಡುವುದಕ್ಕೆ ಮಾಡುತ್ತಿದ್ದಾರೋ

ಗೊತ್ತಿಲ್ಲ ನಾವು ಇವತ್ತಿನವರೆಗೆ ಯಾರನ್ನೂ ಚಾರ್ಜ್ ಮಾಡಿಲ್ಲ, ಅಕಸ್ಮಿಕವಾಗಿ ಒಂದು ಘಟನೆ ನಡೆದಿದೆ, ಆಗಬಾರದಾಗಿತ್ತು, ಅಕ್ಕಿಯನ್ನು ಇವತ್ತು ಕಾಳಸಂತೆಯಲ್ಲಿ ಮಾರಿದ್ದಾರೆ, ಅಲ್ಲಿ ಕೆಲಸಕಾರ್ಯಗಳು ಆಗಿದೆಯೋ ಇಲ್ಲವೋ ನೋಡಬೇಕಾಗಿದೆ ಇದಕ್ಕೆ ಮುಖ್ಯವಾಗಿರತಕ್ಕಂತಹ ಜಿಲ್ಲಾಧಿಕಾರಿಗಳು ಮತ್ತು ಇಂಜಿನಿಯರ್‌ಗಳನ್ನು ನೀವು ಸಿಒಡಿ ವ್ಯಾಪ್ತಿಯೊಳಗೆ ತಂದಿಲ್ಲ, ಅವರು ಯಾವುದೋ ಒಂದು ಎಸೆನಿಷಿಯಲ್ ಕಮಾಡಿಟೀಸ್ ಆ್ಯಕ್ಟ್‌ನಲ್ಲಿ ಕೇಸ್ ಹಾಕಿಕೊಂಡು ಕುಳಿತುಕೊಂಡುಬಿಟ್ಟರೆ ರಿಪೀಲ್ ಆಗಿರುವಂತಹ ಆ್ಯಕ್ಟ್‌ಗಳನ್ನು ತಂದು ನೀವು ಕೇಸು ಹಾಕಿಕೊಂಡು ಕುಳಿತರೆ ಏನು ಮಾಡುತ್ತೀರಾ ಸರ್ಕಾರದಿಂದ ಅದಕ್ಕೆ ಉತ್ತರವಿಲ್ಲ ಒಂದು ಸಮಿತಿಯನ್ನು ಮಾಡಿದರೆ ಏನು ತಪ್ಪಾಗುತ್ತದೆ ? ನಿಮ್ಮ ಪಕ್ಷದ ಸದಸ್ಯರು ಇರುತ್ತಾರೆ ಹಾಗೂ ನಾವೂ ಇರುತ್ತೇವೆ, ನಾವು ನಿಮಗೆ ಒಂದು ವರದಿಯನ್ನು ಕೊಡುತ್ತೇವೆ ನಾವು ಅವರನ್ನು ಗಲ್ಲಿಗೆ ಹಾಕುವುದಕ್ಕಾಗುತ್ತದೆಯೇ ? ನಮಗೆ ಪ್ರಾಸಿಕ್ಯೂಟ್ ಮಾಡುವಂತಹ ಅಧಿಕಾರವಿದೆಯೇ ? ಕನಿಷ್ಟ ಏನಾದರೂ ಮಾಡಿ ಒಂದು ತನಿಖೆ ಮಾಡಿದ ಹಾಗೆ ಮಾಡಿ, ಇಲ್ಲಿ ಒಂದು ಮನೆ ಇದೆ, ನಾಳೆ ಬಂದು ನೋಡುತ್ತಾರೆ ಎನ್ನುವಂತಹ ಭಯ ಸೃಷ್ಟಿ ಮಾಡದೇ ಹೋದರೆ ನಾಳೆ ಈ ರಾಜ್ಯದ ಆಡಳಿತ ಏನಾಗುತ್ತದೆ ? ಸರ್ಕಾರ ನಡೆಸುವಂತಹವರು ಇದರ ಬಗ್ಗೆ ಯೋಚನೆಯನ್ನು ಮಾಡಬೇಕು, ಸದನ ಸಮಿತಿಗೆ ತಾವು ಒಪ್ಪಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ಜಾತ್ಯಾತೀತ ಜನತಾದಳ ಮತ್ತು ಕಾಂಗ್ರೆಸ್ ಎರಡು ಸೇರಿ ಸರ್ಕಾರವನ್ನು ಮಾಡಿದೆ ಇತಿಹಾಸದಲ್ಲಿ 56 ವರ್ಷಗಳಿಂದ ಇಂತಹ ಸರ್ಕಾರ ಬಂದಿರಲಿಲ್ಲ ಇದು ಹೊಸ ವಿಶೇಷ, ಚುನಾವಣೆಯ ಸಂದರ್ಭದಲ್ಲಿ ಜಾತ್ಯಾತೀತ ಜನತಾದಳದವರು ಮಾಡಿರತಕ್ಕಂತಹ ಟೀಕೆಗಳು, ಘೋಷಣೆಗಳು ಅಪಾದನೆಗಳು, ಅವೆಲ್ಲವನ್ನೂ ನಾವು ನೋಡಿದಾಗ ಬಾಹುಶಃ ನನಗನ್ನಿಸುತ್ತದೆ ಇವರೆಡೂ ಸೇರಿ ಸರ್ಕಾರ ಮಾಡತಕ್ಕಂತಹ ಮಟ್ಟಕ್ಕೆ ಬರುವುದಕ್ಕೆ ಸಾಧ್ಯವೇ ಇಲ್ಲ ಯಾವ ಉದ್ದೇಶಕ್ಕಾಗಿ ಸರ್ಕಾರವನ್ನು ಮಾಡಿದರು, ? ಆದರೆ ಇವತ್ತು ಅವರು ಅಧಿಕಾರಕ್ಕೆ ಬಂದಿರುವಾಗ ಇದರಲ್ಲಿ ಇನ್ನು ಮುಂದೆ ಹೋಗಿ ನೀವು ಸದನ ಸಮಿತಿಯನ್ನು ಕೇಳ್ತುತ್ತಿದ್ದೀರಿ, ಇಲ್ಲ ನಾವು ಸಿಬಿಐಗೆ ವಹಿಸುತ್ತೇವೆ ಎಂದು ಹೇಳತಕ್ಕಂತಹ ಧೈರ್ಯ, ಶಕ್ತಿ, ಆತ್ಮಸ್ಥೈರ್ಯ ಜಾತ್ಯಾತೀತ ಜನತಾದಳದವರಿಗೆ ನಮ್ಮ ಸ್ನೇಹಿತರುಗಳಿಗೆ ಇರಬೇಕಾಗಿತ್ತು ಅದನ್ನು ಬಿಟ್ಟು ಇವತ್ತು ತಾವೇ ಮುಂದೆ ನಿಂತುಕೊಂಡು ಸದನ ಸಮಿತಿ ಬೇಡ ಎನ್ನುವ ಒಂದು ಪ್ರತಿಷ್ಠೆಗೆ ಬಿದ್ದರೆ ಹೇಗೆ ? ಇದರ ಬಗ್ಗೆ ನನಗನ್ನಿಸುತ್ತದೆ, ನನಗೆ ಗೊತ್ತಿರುವಾಗ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಹಳ ಮುಕ್ತವಾಗಿದ್ದಾರೆ ಅವರಿಗೆ ಈ ಬಗ್ಗೆ ಯಾವುದೇ ಒಂದು ಪೂರ್ವ ಚಿಂತನೆಯಿಲ್ಲ ಅವರು ನಿನ್ನೆಯ ದಿವಸ ನಿಮ್ಮ ಕಾರ್ಯಾಲಯದಲ್ಲಿ ನಡೆದಂತಹ ಕಾರ್ಯಕ್ರಮವನ್ನು ನಾನು ಇವತ್ತು ಬಹಳ ಬಹಿರಂಗ ಮಾಡಬೇಕಾಗಿದೆ ನಿನ್ನೆ ನಡೆದ ಹೆಚ್ಚು ಕಡಿಮೆ

ಲ್ಲಿ ಸದನ ಸಮಿತಿ ಮಾಡುವ ಬಗ್ಗೆ ಅವರು ಒಪ್ಪಿಕೊಳ್ಳುತ್ತಿದ್ದರು ಒಂದು ೀತಿಯಲ್ಲಿ ಕೈ, ಬಾಯಿ ನೋಡಿದಾಗ ಒಪ್ಪಿಕೊಳ್ಳೋಣ ನಾಳೆ ಎಂಬ ರೀತಿ ಇತ್ತು ಷ್ಟು ಹೊತ್ತಿಗೆ ಅದು ಮುಗಿದು ಹೋಗುತ್ತಿತ್ತು ಆದರೆ ಈ ಮಧ್ಯೆ ನಿನ್ನೆ ನಡೆದ ಬ್ಬಕ್ಕೂ ಬೆಳಗ್ಗೆವರೆಗೆ ನಡೆದಂತಹ ಯಾವ ಒಂದು ಪಿತೂರಿ ಯಾರ ಒತ್ತಡಕ್ಕೆ ಯಾರು ಮಣಿದರು ಎಂಬುದು ನನಗೆ ಅರ್ಥವಾಗುತ್ತಿಲ್ಲ ಇವತ್ತು 3 ದಿವಸದಿಂದ ಂತಹ ಗುರುತರವಾದಂತಹ ಕೂಲಿಗಾಗಿ ಕಾಳಿನ ಬಗ್ಗೆ, ಅಲ್ಲಿ ಬಿಹಾರದಲ್ಲಿ ಮೇವಿನ ಬಗ್ಗೆ ಏನು ನಡೆಯಿತು, ಅದಕ್ಕಿಂತ ದೊಡ್ಡ ಹಗರಣವು ಇಲ್ಲಿ ನಡೆದಿದೆ ಇದರ ಬಗ್ಗೆ ಒಂದು ಸದನ ಸಮಿತಿಯನ್ನು ಮಾಡೋಣವೆಂದು ಕೇಳಿದರೆ ಸದನ ಸಮಿತಿ ಮಾಡಲಿಕ್ಕೆ ಶಾಸಕರ ಬಗ್ಗೆಯೂ ಗೌರವ ಇಲ್ಲ, ಸದನದ ಬಗ್ಗೆಯೂ ಕೂಡ ಗೌರವವಿಲ್ಲ, ಇನ್ನು ಈ ರೀತಿಯಾದರೆ ಇವರು ಪ್ರತಿಷ್ಠೆಗೆ ಅಂಟಿಕೊಂಡಿದ್ದಾರೆ ನಾವಂತೂ ಪ್ರತಿಷ್ಠೆಗಿಂತ ಹೆಚ್ಚಾಗಿ ಸರ್ಕಾರಕ್ಕೆ ಹೇಳುವುದೇನೆಂದರೆ ಇನ್ನು ಮುಂದೆ ನಾವು ಸದನ ಸಮಿತಿಗೆ ತಾವು ಒಪ್ಪಿಕೊಳ್ಳಿ ಇನ್ನು ಮುಂದೆ ಇದೇ ರೀತಿ ಅನೇಕ ಸಂದರ್ಭಗಳು ಬಂದಾಗ, ನಾವು ಇದಕ್ಕೆ ಹರ ಹಿಡಿದುಕೊಂಡು ಹೋಗುವಂತಹ ಪ್ರಶ್ನೆಯಿಲ್ಲ ಇಂತಹ ಪರಿಸ್ಥಿತಿ ಮುಂದೆ ಬರಲಾರದು ಆದ್ದರಿಂದ ಮಾನ್ಯ ಅಧ್ಯಕ್ಷರೆ, ಕಮ್ಮಲ್ಲೂ ಸಹ ನಾನು ಅತ್ಯಂತ ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತೇನೆ ರ್ಕಾರಕ್ಕೆ ಒಂದು ಸಮಿತಿಯನ್ನು ಮಾಡಲಿಕ್ಕೆ ಒಪ್ಪಿಕೊಳ್ಳುವುದರಿಂದ ಅವರಿಗೆ ಗೌರವ ಬರುತ್ತದೆ, ಎರಡೂ ಪಕ್ಷಗಳು ಬಂದಾಗ ಹೊಸ ಸರ್ಕಾರ ರಚನೆಯಾಗಿದೆ ಇದು ಒಂದೇ ಪಕ್ಷದ ಸರ್ಕಾರವಲ್ಲ ಆದ್ದರಿಂದ ಎರಡು ಪಕ್ಷಗಳು ಅದರಲ್ಲೂ ಷಾಸ್ತಿ ಟೀಕೆ ಮಾಡುತ್ತಿದ್ದವರು ಈ ಸರ್ಕಾರಕ್ಕೆ ಸೇರಿರುವುದರಿಂದ ಇದಕ್ಕೆ ಒಪ್ಪಿಗೆ ಕೊಡತಕ್ಕದ್ದು ಬಹಳ ಒಳ್ಳೆಯದು ಎನ್ನತಕ್ಕಂತಹ ಮಾತನ್ನು ನಾನು ಹೇಳುತ್ತೇನೆ ಮತ್ತೊಂದು ಬಹಿರಂಗವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತೇನೆ ನಿಮ್ಮ ಕಿವಿ ಹಿತ್ತಾಳೆ ಕಿವಿಯಾಗಬಾರದು ೀವು ಒಂದು ನಿರ್ಧಾರಕ್ಕೆ ತಾವು ಬರಬೇಕು ಬಹುಶಃ ನನಗನ್ನಿಸುತ್ತದೆ, ನಿಮ್ಮ ಕಾಲು ಎಳೆಯತಕ್ಕಂತಹ ಜನ ಬಹಳ ಇದ್ದಾರೆ ಎಚ್ಚರದಿಂದರಿ ನಾವೇನು ನಮ್ಮ ಕಾಲನ್ನು ಎಳೆಯುವುದಕ್ಕೆ ಬರುವುದಿಲ್ಲ ನಿಮ್ಮ ಬಗ್ಗೆ ನನಗೆ ಗೌರವವಿದೆ 5 ವರ್ಷದಲ್ಲಿ ನಿಮ್ಮ ನಾಯಕತ್ವದಲ್ಲಿ ಈ ರಾಜ್ಯ ನಡೆಯಬೇಕೆಂದು ನಾವು ಪ್ರಾಮಾಣಿಕವಾಗಿದ್ದೇವೆ ಆದರೆ ಈ ಪ್ರಾಮಾಣಿಕತೆಯನ್ನು ಮತ್ತು ಸಹಕಾರವನ್ನು ನಮ್ಮಿಂದ ತೆಗೆದುಕೊಳ್ಳಬೇಕು ದಯಮಾಡಿ ತಾವು ಅವರಿವರ ಮಾತುಗಳನ್ನು ಕೇಳದೆ ಸಂಪೂರ್ಣವಾಗಿ ಸದನ ಸಮಿತಿ ಮಾಡುವ ಬಗ್ಗೆ ಒಪ್ಪಿಕೊಳ್ಳಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ

†ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಅಧ್ಯಕ್ಷರೆ, ನಾನು ನಿನ್ನೆಯ ದಿವಸ ಮಾತನಾಡುವಾಗಲೂ ಕೂಡ ಇದರ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ ಸರ್ಕಾರ ಯಾವುದಾದರೂ ಒಂದು ತನಿಖೆ ಮಾಡಿಸುವುದರ ಬಗ್ಗೆ ಒಪ್ಪಿಕೊಳ್ಳಬೇಕು ನಾನು ಮೊದಲು ಸಿಬಿಐ ಎನ್‌ಕ್ವಾಯರಿ ಮಾಡುವ ಬಗ್ಗೆ

ಒತ್ತಾಯ ಮಾಡಿದ್ದು ಸಿಬಿಐ ಎನ್‌ಕ್ವಾಯರಿ ಏತಕ್ಕಾಗಿ ಆಗಬೇಕೆಂಬುದರ ಬಗ್ಗೆ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, ಇದರಲ್ಲಿ ಕೇಂದ್ರ ಸರ್ಕಾರದ ಪಾಲಿ ಜವಾಬ್ದಾರಿ ಇದೆ ರಾಜ್ಯ ಸರ್ಕಾರದೂ ಕೂಡ ಜವಾಬ್ದಾರಿ ಇದೆ, ಎರಡೂ ಇರತಕ್ಕಂತಹ ಕಾರಣಕ್ಕೋಸ್ಕರ ಸಿಬಿಐ ಎನ್‌ಕ್ವಾಯರಿಯಾಗಬೇಕೆಂದು ಒತ್ತಾಯವನ್ನು ನಾನು ಮಾಡಿದ್ದೇನೆ ಈಗಲೂ ಕೂಡ ನಾನು ಸಿಬಿಐ ಎನ್‌ಕ್ವಾಯರಿ ಮಾಡಿಸುವುದರ ಬಗ್ಗೆ ಕೇಳುತ್ತಿದ್ದೇನೆ ಸಿಬಿಐ ಎನ್‌ಕ್ವಾಯರಿ ಬೇಡವೆಂದು ತಮಗೆ ಅನಿಸಿದರೆ ಸದನ ಸಮಿತಿ ಮಾಡಿ ಎಂದು ಹೇಳಿದ್ದೇವೆ ಯಾವುದೂ ಮಾಡುವುದಕ್ಕಾಗುವುದಿಲ್ಲ ಸಿಓಡಿ ಎನ್‌ಕ್ವಾಯರಿಯಿಂದ ಎಲ್ಲಾ ಸತ್ಯವು ಹೊರಬರುತ್ತದೆ ಎನ್ನುವುದಾದರೆ ರಾಜ್ಯದಲ್ಲಿ ನಡೆದಿರುವಂತಹ ಹಲವಾರು ಘಟನೆಗಳನ್ನು ಸಿಓಡಿ ಎನ್‌ಕ್ವಾಯರಿಗೆ ಏತಕ್ಕಾಗಿ ಒಪ್ಪಿಸಲಿಲ್ಲ ? ಬರೀ ಬೇರೆ ಬೇರೆ ಎಜೆನ್ಸಿಗೆ ಏತಕ್ಕಾಗಿ ಒಪ್ಪಿಸಿದರು ? ಹಿಂದೆ ಸದನ ಸಮಿತಿಗಳನ್ನು ಏತಕ್ಕಾಗಿ ಮಾಡಿದರೂ? ಹಿಂದೆ ಸಿಬಿಐನವರಿಗೆ ಒಪ್ಪಿರುವುದು ಏತಕ್ಕೆ ? ಇದನ್ನೆಲ್ಲವನ್ನೂ ಸಿಓಡಿಯವರು ತನಿಖೆ ಮಾಡಬಹುದಾಗಿತ್ತಲ್ಲಾ ಅವರೇ ಸರ್ವಜ್ಞರು, ಸರ್ವಶಕ್ತರು ಎನ್ನುವ ಹಾಗಿದ್ದರೆ ಸಿಓಡಿಯವರೇ ಎಲ್ಲಾ ತನಿಖೆಯನ್ನು ಮಾಡಬಹುದಾಗಿತ್ತು ಇದೇ ಸರ್ಕಾರಗಳು ಇದೇ ರಾಜ್ಯದಲ್ಲಿ ಹಲವಾರು ಎನ್‌ಕ್ವಾಯರಿ ಎಜೆನ್ಸಿಗಳಿಗೆ ರೆಫರ್ ಮಾಡಿರತಕ್ಕಂತಹ ಉದಾಹರಣೆಗಳು ಇವೆ 5 ವರ್ಷದ ಒಂದೇ ಟರ್ಮಿನಲ್ಲಿ ಬಹುಶಃ ಇತಿಹಾಸದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದ ಇತಿಹಾಸದಲ್ಲಿ ನಾಲ್ಕುವರೇ ವರ್ಷದಲ್ಲಿ 3 ಸದನ ಸಮಿತಿ ಮಾಡಿರತಕ್ಕಂತಹ ಇತಿಹಾಸ ಇರುವಂತಹದ್ದು ಈ ಸದನಕ್ಕೆ ಇದೆ, ಗ್ರಾನೈಟ್, ಪವರ್, ಹಾಗೂ ಶಿರಾ ಗೋಲಿಬಾರ್ ಬಗ್ಗೆ ಮೂರು ಸದನ ಸಮಿತಿಗಳಾದರೆ 5 ವರ್ಷದಲ್ಲಿ ಬೇರೆ ಯಾವ ರಾಜ್ಯದಲ್ಲಿಯೂ ಸಹಿತ ಇಷ್ಟು ಸದನ ಸಮಿತಿಗಳು ಆಗಿಲ್ಲ ಹಾಗಾಗಿ ಇದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಂಡು ಇವತ್ತು ಇಡೀ ಸದನದ ಕಲಾಪಗಳು ಬೇರೆ ಬೇರೆ ಪ್ರಮುಖವಾದಂತಹ ವಿಚಾರಗಳ ಬಗ್ಗೆ ಚರ್ಚೆಯಾಗಬೇಕಾಗಿರುವಂತಹ ಸಂದರ್ಭದಲ್ಲಿ ಇದರ ಬಗ್ಗೆ ಕಾಲಾಹರಣ ಮಾಡುವಂತಹ ಅವಶ್ಯಕತೆ ಇಲ್ಲ ಅವರು ಸಿಬಿಐ ಎನ್‌ಕ್ವಾಯರಿಗಾದರೂ ಒಪ್ಪಿಸಲಿ, ಅಥವಾ ಸದನ ಸಮಿತಿಗಳಾದರೂ ಒಪ್ಪಿಸುವ ಬಗ್ಗೆ ನೀವು ಮಧ್ಯಪ್ರವೇಶ ಮಾಡಬೇಕೆಂದು ತಮ್ಮಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ

†**ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)** ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಎಲ್ಲಾ ಭಾವನೆಗಳನ್ನು ಸರ್ಕಾರ ಅತ್ಯಂತ ಗೌರವದಿಂದ ಅದರ ಕಡೆಗೆ ನಾವು ಗಮನವನ್ನು ಕೊಟ್ಟಿದ್ದೇವೆ ಈ ತರಹದ ನಡವಳಿಕೆಗಳಿಂದ ಯಾರಿಗೂ ಕೂಡ ಭೂಷಣವಾಗುವುದಿಲ್ಲ ಎನ್ನುವಂತಹ ಕಾರಣಕ್ಕಾಗಿಯೂ ಕೂಡ ತಮ್ಮ ಕೋಣೆಯಲ್ಲಿ ಎಲ್ಲಾ ವಿರೋಧಪಕ್ಷದ ನಾಯಕರುಗಳ ಜೊತೆಗೆ ನಮ್ಮ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಹಿರಿಯ ಸಚಿವರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಮಾನ್ಯ ರಮೇಶ್‌ಕುಮಾರ್‌ರವರು ಎಲ್ಲರೂ ಕಲಿತು ಇದಕ್ಕೇನಾದರೂ ಪರ್ಯಾಯವಾದಂತಹ

ರೀತಿಯಲ್ಲಿ ಮಾರ್ಗ ಕಂಡು ಹಿಡಿದು ನಮ್ಮ ಸದನಕ್ಕೆ ದೊಡ್ಡದಾದ ಸಂಪ್ರದಾಯ ಇರುವುದರಿಂದ ಇದಕ್ಕೊಂದು ಪರಿಹಾರವನ್ನು ಕಂಡುಹಿಡಿಯಬೇಕೆಂಬ ದೃಷ್ಟಿಯಲ್ಲಿ ಕೂಡ ನಮ್ಮ ಸರ್ಕಾರ ಪ್ರತಿಕ್ರಿಯೆಯನ್ನು ವ್ಯಕ್ತಮಾಡಿತು ಈಗ ಮಾನ್ಯ ವಿರೋಧಪಕ್ಷದ ನಾಯಕರಾಗಲಿ ಅಥವಾ ಹಿರಿಯರಾಗಲಿ ನಾನು ಹೇಳುವುದೇನೆಂದರೆ ಸದನ ಸಮಿತಿಯ ಮೂಲಕ ನಾವು ಯಾರನ್ನೂ ಗಲ್ಲಿಗೇರಿಸುವುದಕ್ಕಾಗುವುದಿಲ್ಲ ಸದನ ಸಮಿತಿಯಿಂದ ಜನಗಳಿಗೆ ಒಂದು ಹೆಸರು ಬರುತ್ತದೆ ಅಧಿಕಾರಿಗಳಿಗೂ ಕೂಡ ಒಂದು ರೀತಿಯಿಂದ ಎಚ್ಚರಿಕೆಯ ಗಂಟೆಯನ್ನು ಬಾರಿಸುವುದಕ್ಕೆ ಸಾಧ್ಯವಾಗುತ್ತದೆ, ಎನ್ನುವಂತಹ ಆ ಸದನ ಸಮಿತಿಯ ಸೀಮಿತವಾದಂತಹ ಅಧಿಕಾರದ ವ್ಯಾಪ್ತಿಯನ್ನು ಅವರೇ ಪ್ರಸ್ತಾಪ ಮಾಡಿದ್ದಾರೆ ಒಂದು ಕಾರಣಕ್ಕಾಗಿಯೇ ನಾವು ಹೇಳಿದೆವು ಒಂದು ಸಮಾನಂತರವಾದಂತಹ ವಿಚಾರಣೆಯನ್ನು ಪಕ್ಕಪಕ್ಕದಲ್ಲಿಯೇ ಇಟ್ಟುಕೊಳ್ಳುವುದಾಗಿದ್ದರೆ ಈಗ ಸಿಓಡಿಯ ತನಿಖೆಯು ಬಹಳ ಚೆನ್ನಾಗಿ ನಡೆದಿದೆ ಬಹಳ ಪ್ರಾಮಾಣಿಕತೆಯಿಂದ ತೀವ್ರಗತಿಯಲ್ಲಿ ದಕ್ಷತೆಯಿಂದ ಮಾಡುತ್ತಿರುವಂತಹ ಆ ಒಂದು ವಿಚಾರಣೆಗೆ ಈ ಸದನ ಸಮಿತಿಯಿಂದ ಪರಿಹಾರ ಸಿಗುವುದು ಆಗುವುದಿಲ್ಲ ಆದರೆ ಇದನ್ನೇ ನಾವು ಪ್ರತಿಷ್ಠೆಯಾಗಿ ಮಾಡಿಕೊಳ್ಳಬಾರದು ಎನ್ನುವಂತಹದ್ದು ಸರ್ಕಾರ ಉದ್ದೇಶವೂ ಕೂಡ ಆಗಿದೆ ಈಗ ಅವರ ಅನುಮಾನವನ್ನು ವ್ಯಕ್ತಮಾಡಿ ನೀವು ಸದನ ಸಮಿತಿಗೆ ಒಪ್ಪದೆ ಹೋದರೆ ನೀವು ಯಾರನ್ನೋ ರಕ್ಷಿಸುವುದಕ್ಕಾಗಿ ಈ ರೀತಿಯಾಗಿ ಒಪ್ಪದೆ ಹೋಗಿದ್ದೀರಿ ಎನ್ನುವಂತಹ ಮಾತು ಏನಿದೆ ಅದು ಸತ್ಯಬಾಹಿರವಾಗಿರುವಂತಹದ್ದು ಯಾರನ್ನೂ ರಕ್ಷಿಸಬೇಕಾದಂತಹ ಅಗತ್ಯವಿಲ್ಲ ಯಾರನ್ನೂ ರಕ್ಷಿಸಬೇಕಾದಂತಹ ಮುಲಾಜು ಕೂಡ ನಮಗೆ ಇಲ್ಲ ನಾವು ನೀವು ಮಾತನಾಡತಕ್ಕಂತಹ ಮಾತನ್ನು ಕೇಳಿದ್ದೇವೆ ಸನ್ಮಾನ್ಯ ನಾಯಕರೆ, ತಾವು ಏನು ಮಾತನಾಡಿದ್ದೀರಿ ನಾವು ತಾಳ್ಮೆಯಿಂದ ಕೇಳಿದ್ದೇವೆ ತಾವು ತಮ್ಮ ಸೀಟಿನಲ್ಲಿ ಇಲ್ಲ, ಇದನ್ನು ಒಪ್ಪಿಕೊಳ್ಳುವುದು ಬಿಡುವುದು ತಮ್ಮ ವಿವೇಚನೆಗೆ ಬಿಟ್ಟಿದ್ದು ಆ ತರಹದಲ್ಲಿ ನೀವು ಪರಿಭಾವಿಸಿಕೊಳ್ಳುವುದಾದರೆ, ಪ್ರತಿಯೊಂದು ವಿಷಯದಲ್ಲಿಯೂ ಕೂಡ

(ಮಾನ್ಯ ಸದಸ್ಯರೊಬ್ಬರು ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

(ಗೊಂದಲ)

(ಸದನದ ಬಾವಿಯಿಂದ ಬಿಜೆಪಿ ಶಾಸಕರು ಈ ಹಂತದಲ್ಲಿ ಧಿಕ್ಕಾರ ಕೂಗುತ್ತಿದ್ದರು)

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಈ ರೀತಿಯಾದಂತಹ ವರ್ತನೆ ಸರಿಯಿಲ್ಲ

ಅಧ್ಯಕ್ಷರು ಈ ಮನೆಯ ಮಾನ್ಯ ಸದಸ್ಯರೆಲ್ಲರಿಗೂ ನನ್ನ ಮನವಿ ಏನೆಂದರೆ, ಸರ್ಕಾರ ಆಗಿರಬಹುದು, ಅಥವಾ ವಿರೋಧಪಕ್ಷ ಆಗಬಹುದು ಯಾರೂ ಕೂಡ ಪ್ರತಿಷ್ಠೆಗೆ ಒಳಗಾಗುವುದು ಸರಿಯಿಲ್ಲ

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಿದ್ದರು)

ಅಧ್ಯಕ್ಷರು ಈ ತರಹದ ಧಿಕ್ಕಾರಗಳನ್ನು ಕೂಗುವುದು ಸರಿಯಿಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಅವರು ಏನು ಹೇಳುತ್ತಾರೆಂದು ಇವರು ಕೇಳುವುದಕ್ಕೆ ತಯಾರಿಲ್ಲವೆಂದರೆ ಹೇಗೆ ? ಅವರು ಏನು ಹೇಳುತ್ತಾರೆಂದು ಮೊದಲು ಕೇಳಲಿ ಕೇಳಿದ ನಂತರ ಅವರು ನಿರ್ಣಯವನ್ನು ಮಾಡಲಿ ಅವರು ಹೇಳುವುದನ್ನು ಕೇಳದೆ ಇಲ್ಲಿ ಕೂಗಾಡುವುದಕ್ಕೆ ಮೊದಲು ಹೊರಗಡೆ ಹೋಗಿ ಕೂಗಾಡಬಹುದಲ್ಲಾ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಹೇಳುವುದಕ್ಕೆ ಅವಕಾಶವಿಲ್ಲವೆಂದರೆ ಇದು ಡಿಕ್ಟೇಟರ್‌ಶಿಪ್ ಆಗುತ್ತದೆ ಪ್ರಜಾಪ್ರಭುತ್ವದಲ್ಲಿ ಹೇಳುವುದಕ್ಕೆ ಅವಕಾಶವಿಲ್ಲವೆಂದರೆ ಏನರ್ಥ?

ಅಧ್ಯಕ್ಷರು ಸರ್ಕಾರದವರು ಏನು ಹೇಳುತ್ತಾರೆಂಬುದನ್ನು ದಯಮಾಡಿ ಕೇಳಿ ಇದು ಸರಿಯಿಲ್ಲ, ನೀವು ಇಲ್ಲಿ ಕೂಗಾಡವುದಕ್ಕೆ ಬಂದಿಲ್ಲ ನಾವು ಕೆಲಸ ಮಾಡುವುದಕ್ಕೆ ಬಂದಿದ್ದೀರಿ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷರೆ, ಈಗ ಹೇಳುವುದಕ್ಕು ಅವಕಾಶ ಇಲ್ಲವೆಂದರೆ ಇದೊಂದು ಡಿಕ್ಟೇಟರ್‌ಶಿಪ್ ಆಯಿತು ಪ್ರಜಾಪ್ರಭುತ್ವದಲ್ಲಿ ಹೇಳುವುದಕ್ಕೂ ಅವಕಾಶ ಇಲ್ಲವೆಂದರೆ ಏನರ್ಥ ?

(ಗೊಂದಲ)

ಅಧ್ಯಕ್ಷರು ಅವರು ಏನು ಹೇಳುತ್ತಾರೆ ಎಂಬುದನ್ನು ದಯಮಾಡಿ ಕೇಳಿ ನೀವು ಇಲ್ಲಿ ಕೂಗಾಟ ಮಾಡುವುದಕ್ಕೆ ಬಂದಿಲ್ಲ ನೀವು ಇಲ್ಲಿ ಚರ್ಚೆ ಮಾಡುವುದಕ್ಕೆ ಬಂದಿದ್ದೀರಿ ಅವರು ಹೇಳುವುದನ್ನು ದಯಮಾಡಿ ಕೇಳಿ ಇದು ಸರಿಯಿಲ್ಲ ಸದನದ ಆ ಕಡೆಯ ಸದಸ್ಯರಿಗೆ ಮತ್ತು ಈ ಕಡೆಯ ಸದಸ್ಯರಿಗೂ ನಾನು ಇದನ್ನು ಹೇಳುತ್ತೇನೆ ಸರ್ಕಾರದವರು ಏನು ಹೇಳುತ್ತಾರೆಂದು ಕೇಳಿ ನಂತರ ನೀವು ಏನು ಮಾಡಬೇಕು ಅಂತ ಮಾಡಿರಿ ಇದು ಸರಿಯಲ್ಲ I am very sorry ಏಕೆ ಕೂಗಾಡುತ್ತಿದ್ದೀರಿ ? ಇದರಿಂದ ಏನು ಪ್ರಯೋಜನ ? ಅವರು ಏನು ಹೇಳುತ್ತಿದ್ದರೆ ಅಂತ ಮೊದಲು ಕೇಳಿ

(ಗೊಂದಲ)

†**ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, ತಪ್ಪಿತಸ್ಥರನ್ನು ಜೈಲಿಗೆ ಕಳುಹಿಸಿಯೇ ಕಳುಹಿಸುತ್ತೇವೆ, ಇದರಲ್ಲಿ ಯಾವುದೇ ಸಂಶಯ ಇಟ್ಟುಕೊಳ್ಳಬೇಕಾಗಿಲ್ಲ ಪ್ರಚಾರಕ್ಕೋಸ್ಕರ ನೀವು ಈ ತರಹ ಮಾಡುವುದನ್ನು ಬಿಟ್ಟು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಒಪ್ಪಿಕೊಳ್ಳಿ ನಾವು ಇನ್ನೂ ಪವರ್‌ಫುಲ್ ಕಮಿಟಿಗೆ ಕೊಡುತ್ತಿದ್ದೇವೆ, ಇನ್ನೂ ಹೆಚ್ಚು ಅಧಿಕಾರ ಇರತಕ್ಕಂಥ ಸಮಿತಿಗೆ ನಾವು ಕೊಡುತ್ತಿದ್ದೇವೆ ನೀವು ಅದನ್ನು ಒಪ್ಪಿಕೊಳ್ಳುವುದಕ್ಕೇ ತಯಾರಿಲ್ಲ ಅದರ ಅರ್ಥ ಏನೆಂದರೆ ಕಳ್ಳರನ್ನು ಪತ್ತೆಹಚ್ಚುವುದಕ್ಕೆ ನಿಮಗೆ ಸದುದ್ದೇಶ ಇಲ್ಲ ಪ್ರಚಾರಕ್ಕೋಸ್ಕರ ಹೀಗೆ ಮಾಡುವುದನ್ನು ನಿಲ್ಲಿಸಿ ನಿಜವಾಗಿ ಕಳ್ಳನಿಗೆ ಶಿಕ್ಷೆಯಾಗಬೇಕೆಂದು ಇಚ್ಛೆಯಿದ್ದರೆ

ಯಾವನೇ ಎಷ್ಟೇ ಎತ್ತರದ ಅಧಿಕಾರಿ, ಯಾವನೇ ರಾಜಕಾರಣಿ, ಯಾವನೇ ಮಂತ್ರಿಯಾಗಲಿ, ಯಾರನ್ನೂ ರಕ್ಷಣೆ ಮಾಡತಕ್ಕಂಥ ಉದ್ದೇಶ ಈ ಸರ್ಕಾರಕ್ಕೆ ಇಲ್ಲ ಅದಕ್ಕೇನೆ ಇನ್ನೂ ಹೆಚ್ಚು ಅಧಿಕಾರ ಇರತಕ್ಕಂಥ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಒಪ್ಪಿಸಲಿಕ್ಕೆ ಸರ್ಕಾರ ತಯಾರಾಗಿದೆ ಇದನ್ನು ತಾವು ಒಪ್ಪಿಕೊಳ್ಳಬೇಕು ಹರ ಮಾಡುವುದನ್ನು ಬಿಟ್ಟು ಪ್ರಚಾರಕ್ಕೋಸ್ಕರ ಈ ತರಹ ಗಲಾಟೆ ಮಾಡುವುದನ್ನು ಬಿಡಬೇಕು ಇದು ಪ್ರಜಾಪ್ರಭುತ್ವದ ಲಕ್ಷಣ ಅಲ್ಲ ಪ್ರಜಾಪ್ರಭುತ್ವದಲ್ಲಿ ಸರ್ಕಾರಕ್ಕೆ ಹೇಳುವುದಕ್ಕೂ ಕೂಡ ಅವಕಾಶ ಇರಬೇಕಾಗುತ್ತದೆ

(ಗೊಂದಲ)

ಶ್ರೀ ಸಿದ್ಧರಾಮಯ್ಯ ಅಲ್ಲಿ ಡೆಲ್ಲಿಯಲ್ಲಿ ಇದ್ದಾಗ ಏನು ಮಾಡಿದ್ದೀರಿ ಎಂಬುದು ಇಡೀ ಜಗತ್ತಿಗೇ ಗೊತ್ತು ಶವಪೆಟ್ಟಿಗೆ ಕೇಸ್‌ನಲ್ಲಿ ಏನಾಯಿತು ಎಂಬುದು ಜಗತ್ತಿಗೆಲ್ಲಾ ಗೊತ್ತಿದೆ

(ಗೊಂದಲ)

ಅಧ್ಯಕ್ಷರು ದಯಮಾಡಿ ತಮ್ಮ ತಮ್ಮ ಆಸನಗಳಿಗೆ ಹೋಗಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ ಇವರು ಕೂಗಿದರೆ ನಾವು ಹೆದರುವುದಿಲ್ಲ ಈ ತರಹ ಪ್ರವೃತ್ತಿಯನ್ನು ನಾವು ಸಹಿಸುವುದಕ್ಕೆ ಆಗುವುದಿಲ್ಲ ಮಾನ್ಯ ಸದಸ್ಯರುಗಳು ಜವಾಬ್ದಾರಿಕೆಯಿಂದ ನಡೆದುಕೊಳ್ಳಬೇಕಾಗುತ್ತದೆ ಈ ರೀತಿಯಾಗಿ ಘೋಷಣೆಗಳನ್ನು ಕೂಗುವುದರಿಂದ ಏನನ್ನೂ ಕೂಡ ಸರಿಪಡಿಸಲಿಕ್ಕೆ ಆಗುವುದಿಲ್ಲ

ಅಧ್ಯಕ್ಷರು ತಮ್ಮ ಸ್ಥಾನಗಳಲ್ಲಿ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶ ಇದೆ ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ

(ಗೊಂದಲ)

ಶ್ರೀ ಸಿದ್ದರಾಮಯ್ಯ ಮಾನ್ಯ ಅಧ್ಯಕ್ಷರೆ, ನಾವು ಜೈಲಿಗೆ ಕಳುಹಿಸುತ್ತೇವೆ ಸದನ ಸಮಿತಿಯ ಮೂಲಕ ಜೈಲಿಗೆ ತಪ್ಪಿತಸ್ಥರನ್ನು ಕಳಿಹಿಸುವುದಕ್ಕೆ ಆಗುವುದಿಲ್ಲ ಅದಕ್ಕೆ ಶಿಫಾರಸ್ಸು ಮಾಡುವುದಕ್ಕೆ ಅಧಿಕಾರ ಇದೆಯೇ ಹೊರತು ಸದನ ಸಮಿತಿಗೆ ತಪ್ಪಿತಸ್ಥರನ್ನು ಜೈಲಿಗೆ ಕಳುಹಿಸುವುದಕ್ಕೆ ಆಗುವುದಿಲ್ಲ ಅದಕ್ಕೋಸ್ಕರವೇ ಇನ್ನೂ ಹೆಚ್ಚು ಅಧಿಕಾರ ಇರತಕ್ಕಂಥ ಪಿ ಎ ಸಿ ಗೆ ಒಪ್ಪಿಸಿ ಅಂತಹವರನ್ನು ಜೈಲಿಗೆ ಕಳುಹಿಸಬೇಕು ಎನ್ನತಕ್ಕಂಥ ಉದ್ದೇಶ ಇರುವುದರಿಂದಲೇ ಇನ್ನೂ ಹೆಚ್ಚು ಅಧಿಕಾರ ಇರತಕ್ಕಂಥ ಸಮಿತಿಗೆ ನಾವು ಒಪ್ಪಿಸಲಿಕ್ಕೆ ತಯಾರಿದ್ದೇವೆ, ನೀವು ಇದಕ್ಕೆ ಒಪ್ಪಿಕೊಳ್ಳಬೇಕು ಬರೇ ಪ್ರಚಾರಕ್ಕೋಸ್ಕರ ಇದನ್ನು ಮಾಡಬಾರದು ನಿಮ್ಮ ಧರಣಿಯನ್ನು ಮುರಿದು ದಯಮಾಡಿ ನೀವು ಒಪ್ಪಬೇಕು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಎನ್‌ಕ್ವೈರಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು

(ಗೊಂದಲ)

ಅಧ್ಯಕ್ಷರು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಸದಸ್ಯರುಗಳು ಏನಿದ್ದೀರಿ ತಮ್ಮಲ್ಲಿ ನನ್ನ ಮನವಿ ಏನೆಂದರೆ, ದಯಮಾಡಿ ತಮ್ಮ ಆಸನಗಳಿಗೆ ಹೋಗಬೇಕು ಮತ್ತೆ ಕುಳಿತು ಚರ್ಚೆ ಮಾಡಿದರೆ ಹೊಸ ದಾರಿ ಕಾಣಬಹುದು ನೀವು ಆಗಬಹುದು ಸರ್ಕಾರ ಆಗಬಹುದು ಯಾರೂ ಪ್ರತಿಷ್ಠೆಯ

ಮೇಲೆ ನಿಲ್ಲತಕ್ಕಂಥ ಅಗತ್ಯ ಇಲ್ಲ ನಿಮ್ಮನ್ನೆಲ್ಲಾ ಜನ ಆರಿಸಿ ಕಳುಹಿಸಿರತಕ್ಕಂಥಾದ್ದು ಇಲ್ಲಿ ಚರ್ಚೆ ಮಾಡಿ ಏನಾದರೂ ಒಂದು ಹೊಸ ದಾರಿಯನ್ನು ಕಂಡುಕೊಂಡು ಕರ್ನಾಟಕದ ಸ್ಥಿತಿ ಉತ್ತಮ ಆಗಲಿ ಎನ್ನುವ ಉದ್ದೇಶದಿಂದ ಇಲ್ಲಿಗೆ ಕಳುಹಿಸಿದ್ದಾರೆ ದಯಮಾಡಿ ಶಾಂತಚಿತ್ತರಾಗಿ ಕುಳಿತು ಚರ್ಚೆ ಮಾಡಿ ದಯಮಾಡಿ ತಮ್ಮ ಆಸನಗಳಿಗೆ ಹೋಗಿ ಚರ್ಚೆ ಆಸನಗಳಿಗೆ ಹೋಗಿ ಚರ್ಚೆಮಾಡಿ 'ಮರಳಿ ಯತ್ನವ ಮಾಡು' ಅಂತ ಮತ್ತೊಮ್ಮೆ ಚರ್ಚೆ ಮಾಡಿದರೆ ಒಂದು ದಾರಿ ಕಾಣುತ್ತದೆ ಆದ್ದರಿಂದ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ನಾನು ಹೇಳುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಈಗ ಅವರು ತಮ್ಮ ಸ್ಥಾನಗಳನ್ನು ಬಿಟ್ಟು ಇಲ್ಲಿ ಕೂಗುತ್ತಿದ್ದಾರೆ ದಯಮಾಡಿ ಇದು ಯಾವುದೂ ಕೂಡ ರೆಕಾರ್ಡಿಗೆ ಹೋಗಬಾರದು ಇದು ಪತ್ರಿಕೆಗಳಲ್ಲಿ ಕೂಡ ಹೋಗಬಾರದು ಕಾರಣ, ಅವರವರ ಸ್ಥಾನಗಳನ್ನು ಬಿಟ್ಟು ಅವರು ಇಲ್ಲಿ ಮಾತನಾಡುತ್ತಿದ್ದಾರೆ ಕೂಗಾಡುತ್ತಿದ್ದಾರೆ ಈಗ ಹೌಸ್ ಆರ್ಡರ್‌ನಲ್ಲಿ ಇಲ್ಲ ಇದು ಯಾವುದೂ ಕೂಡ ಪತ್ರಿಕೆಗಳಲ್ಲಾಗಲೀ, ಪ್ರೊಸೀಡಿಂಗ್ಸ್‌ನಲ್ಲಾಗಲೀ ಬರಬಾರದು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ, ಪಿ ಎ ಸಿ ಬಗ್ಗೆ ಮಾನ್ಯ ಪ್ರಕಾಶ್ ಅವರು ಈಗಾಗಲೇ ಪ್ರಸ್ತಾಪನೆ ಮಾಡಿದರೂ ಕೂಡ ಅದನ್ನು ಕೇಳುವುದಕ್ಕೆ ತಯಾರಿಲ್ಲ ಎಂದರೆ ಇದರ ಅರ್ಥ ಏನು ? ನಿಜಾಂಶ ಹೊರಬರಬೇಕು ತಪ್ಪಿಸ್ಥರಿಗೆ ಶಿಕ್ಷೆಯಾಗಬೇಕು ಎನ್ನತಕ್ಕಂಥ ಅಭಿಪ್ರಾಯ ಅವರಿಗೆ ಇಲ್ಲ ಪ್ರಚಾರ ತೆಗೆದುಕೊಳ್ಳಬೇಕು ಬೇರೆಯವರಿಗೆ ತೊಂದರೆ ಕೊಡಬೇಕು ಎನ್ನತಕ್ಕಂಥಾದ್ದು ಇದೆಯೇ ಹೊರತು ಬೇರೆ ಸದುದ್ದೇಶ ಇವರಿಗೆ ಇಲ್ಲ

ಅಧ್ಯಕ್ಷರು ಹೋಗಿ ಚರ್ಚೆ ಮಾಡಿ ಚರ್ಚೆಯಿಂದ ಬೆಳಕು ಚೆಲ್ಲುತ್ತದೆ ಹೊಸ ದಾರಿ ಕಾಣುತ್ತದೆ ದಯಮಾಡಿ ಎಲ್ಲರೂ ತಮ್ಮ ಆಸನಗಳಿಗೆ ಹೋಗಬೇಕು

(ಗೊಂದಲ)

ಅಧ್ಯಕ್ಷರು ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ಹೇಳಬೇಕು ದಯ ಮಾಡಿ ತಮ್ಮ ಆಸನಗಳಿಗೆ ಹೋಗಿ ಚರ್ಚೆ ಮಾಡಿ ಮರಳಿ ಯತ್ನವ ಮಾಡು ಅಂತ ಹೇಳಿದ ಹಾಗೆ ನಿಮ್ಮ ಸ್ಥಾನಗಳಿಗೆ ಹೋಗಿ ಚರ್ಚೆ ಮಾಡಿದರೆ ಒಂದು ದಾರಿ ಕಾಣುತ್ತದೆ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಇವರು ಸದನದ ವೇಳೆಯನ್ನು ಹಾಳು ಮಾಡುತ್ತಿದ್ದಾರೆ ತಾವು ಇವರನ್ನು ಸಸ್ಪೆಂಡ್ ಮಾಡಿ ಹೊರಹಾಕಬೇಕು ಮತ್ತು ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು

(ಗೊಂದಲ)

ಅಧ್ಯಕ್ಷರು ಈಗ ಭೋಜನ ವಿರಾಮಕ್ಕೆ ಮೂರು ಗಂಟೆವರೆಗೆ ನಾನು ಸದನವನ್ನು ಮುಂದೂಡುತ್ತಿದ್ದೇನೆ

(ಸದನವು 1 ಗಂಟೆ 17 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 3 ಗಂಟೆಗೆ ಸೇರಬೇಕೆಂದು ನಿರ್ಧರಿಸಿತು)

(ಸದನವು 3 ಗಂಟೆ 18 ನಿಮಿಷಕ್ಕೆ ಮತ್ತೆ ಸಮಾವೇಶಗೊಂಡಿತು)
(ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)
(ಭಾರತೀಯ ಜನತಾ ಪಕ್ಷದ ಸದಸ್ಯರು ಬಾವಿಯಲ್ಲಿ ಧರಣಿ ಹೂಡಿದ್ದರು)

ಅಧ್ಯಕ್ಷರು ಮಾನ್ಯ ಸದಸ್ಯರು ತಮ್ಮ ತಮ್ಮ ಆಸನಗಳಿಗೆ ದಯಮಾಡಿ ಹೋಗಿ ಕುಳಿತುಕೊಳ್ಳಬೇಕು ಆಗ ಇದರ ಬಗ್ಗೆ ಚರ್ಚೆ ಮಾಡಿ ಯಾವುದಾದರೊಂದು ದಾರಿಯನ್ನು ಕಂಡುಹಿಡಿದುಕೊಳ್ಳಬಹುದು ದಯಮಾಡಿ ತಮ್ಮ ಆಸನಗಳಿಗೆ ಹೋಗಬೇಕು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ತಾವು ಬೆಳಿಗ್ಗೆ ಒಂದು ಮಾತನ್ನು ಹೇಳಿದ್ದೀರಿ ಅವರು ಸ್ವಲ್ಪ ಭಾಗ ದಾರಿ ಮಾಡಿಕೊಡಿ ಎಂದು ಹೇಳಿದ್ದಾರೆ ಆದ್ದರಿಂದ ತಾವು ಏನಾದರೂ ಮನಸ್ಸು ಮಾಡಿ ಮಧ್ಯಸ್ಥಿಕೆ ಮಾಡಿ

†ಶ್ರೀ ಮಲ್ಲಿಕಾರ್ಜುನ ಖರ್ಗೆ (ನೀರಾವರಿ ಮತ್ತು ಸಾರಿಗೆ ಸಚಿವರು) ಮಾನ್ಯ ಅಧ್ಯಕ್ಷರೆ ಮಾನ್ಯ ಜಯಪ್ರಕಾಶ್ ಹೆಗಡೆಯವರು ಹೇಳಿದಂತೆ ನಾವು ಮುಂದೆ ಬಂದಿದ್ದೇವೆ ಅವರು steps ಒಂದು ಮುಂದೆ ಬರಬೇಕು ನಾವು ಒಂದು steps ಮುಂದೆ ಬರಬೇಕೆಂದಾಗಲೇ ಮುಂದೆ ಬಂದಿದ್ದು ಮುಂದೆ ಬಂದು ಸ್ಯಾಚುಟರಿ ಕಮಿಟಿ ಪಬ್ಲಿಕ್ ಅಕೌಂಟ್ಸ್ ಕಮಿಟಿ ಅದರ ಅಧ್ಯಕ್ಷರೇ ವಿರೋಧ ಪಕ್ಷದ ನಾಯಕರು ಇರುತ್ತೀರಿ ಅದರಲ್ಲಿ ಪ್ರತಿಪಕ್ಷದವರು ಒಬ್ಬೊಬ್ಬರು ಸದಸ್ಯರಾಗಿರುತ್ತಾರೆ ನಮ್ಮ ಕಡೆಯವರೂ ಇರುತ್ತಾರೆ ಅವರ ಕಡೆಯವರು ಇರುತ್ತಾರೆ ಮತ್ತು ಬೇರೆ ಪಕ್ಷದ ಸದಸ್ಯರೂ ಕೂಡ ಇರುತ್ತಾರೆ ಅಂಥ ಒಂದು ಸ್ಟಾಚುಟರಿ ಕಮಿಟಿಗೆ ಈ ಎಲ್ಲಾ ತನಿಖೆ ಮಾಡತಕ್ಕಂಥದ್ದು ಸಂಪೂರ್ಣವಾಗಿ enquiry ಮಾಡತಕ್ಕಂಥದ್ದು ಕೆಲಸ ನಾವು ಒಪ್ಪಿಸಿಕೊಡುತ್ತೇವೆ ಎಂದು ಹೇಳಿದ ಮೇಲೆ ಪುನಃ ಇದನ್ನು ಕಮಿಟಿ ಮಾಡಿ ಎಂದು ಹರ ಏಕೆ ಮಾಡಬೇಕು ? ನಾವು ಅವರೂ ಸೇರಿ ಇದನ್ನು ಸರಿಪಡಿಸಬೇಕೆನ್ನುವ ಎನ್ನುವ ಭಾವನೆಯಿಂದಲೇ ಇಲ್ಲಿ ಕೆಲಸ ಮಾಡುತ್ತಿದ್ದೇವೆ ಅಂದಾಗ ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದು ಒಂದು ಒಳ್ಳೆಯ ಕಮಿಟಿ ಇದೆ ಅವರು ಎಷ್ಟು ಬೇಗ ಅಷ್ಟು enquiry ಯನ್ನು ಮಾಡಬಹುದು ಎಲ್ಲಿ ಬೇಕೋ ಅಲ್ಲಿ ತಿರುಗಾಡಬಹುದು ಓಡಾಡಬಹುದು ಇದರ ಬಗ್ಗೆ ಸಂಪೂರ್ಣವಾದ ತನಿಖೆಯನ್ನು ನಡೆಸತಕ್ಕಂಥದ್ದು ಅವರಿಗೆ ಎಲ್ಲಾ ಅಧಿಕಾರ ಇದೆ ಅಂದಾಗ ಈ ಒಂದು ಸಲಹೆಯನ್ನು ಈಗಾಗಲೇ ಕೊಟ್ಟಮೇಲೆ ಇಲ್ಲಾ ನಮಗೆ ಸದನದ ಸಮಿತಿಯೇ ಆಗಬೇಕು ಅದರಿಂದಲೇ enquiry ಆಗುತ್ತದೆ ಅಂದರೆ ಅದು ಸಾಧ್ಯವಿಲ್ಲ ಈಗ ಅವರಿಗೂ ಕೂಡ ಗೊತ್ತಿದೆ ಗೊತ್ತಿಲ್ಲವೆಂದು ಏನೂ ಇಲ್ಲ ಸುಮಾರು ಒಂದು ಲಕ್ಷದ ಮೂವತ್ತು ಸಾವಿರ ಕೆಲಸಗಳಾಗಿವೆ ಇಡೀ ಕರ್ನಾಟಕ ರಾಜ್ಯದಲ್ಲಿ ಅದು ಅಂಗನವಾಡಿ ಕೆಲಸ ಇರಬಹುದು ಸ್ಕೂಲ್‌ದೇ ಇರಬಹುದು ರಸ್ತೆ ಇರಬಹುದು ಬೇರೆ ಬೇರೆ ಅವೆಲ್ಲವನ್ನೂ ಕೂಡ ಸದನದ ಸಮಿತಿ ಕೇವಲ ಒಂದು [illegible] ಎಲ್ಲಾ [illegible] ತ್ತಾವುದಕ್ಕೆ

ಆಗುವುದಿಲ್ಲ ಅಥವಾ ಪಬ್ಲಿಕ್ ಅಕೌಂಟ್ಸ್ ಕಮಿಟಿಯಿಂದಲೂ ಆಗುವುದಿಲ್ಲ ಆದರೂ ಕೂಡ ಒಂದು ಸ್ಟ್ಯಾಚುಟರಿ ಕಮಿಟಿ ಪ್ರೊಲಾಂಗ್ ಮಾಡಬಹುದು ನಾಲ್ಕು, ಐದು, ಆರು ತಿಂಗಳಾಗಬಹುದು ಆ ಕೆಲಸವನ್ನು ಅವರು ಮಾಡಬಹುದು ಆದರೆ ಇಷ್ಟೊಂದು ಅಧಿಕಾರ ಅವರ ಬಳಿ ಇದ್ದರೂ ಕೂಡ ಇದಕ್ಕೆ ಏತಕ್ಕೆ ಒಪ್ಪುತ್ತಿಲ್ಲವೊ ನನಗಂತೂ ಗೊತ್ತಾಗುತ್ತಿಲ್ಲ ಮತ್ತು ಈ ಹಗರಣವನ್ನು ಮುಚ್ಚಿಡಬೇಕೆಂದು ಯಾರಿಗೆ ಇದೆ ? ಯಾರಿಗೂ ಕೂಡ ಇದನ್ನು ಮುಚ್ಚಬೇಕು, ಇದರಲ್ಲಿ ಅವರು ಇದ್ದಾರೆ, ಇವರು ಇದ್ದಾರೆ, ಆ ಮೆಂಬರ್ ಇದ್ದಾರೆ, ಆ ಮಂತ್ರಿಗಳಿದ್ದಾರೆ, ಅನ್ನುವ ಭಯ ಯಾರಿಗೂ ಕೂಡ ಇಲ್ಲ, ಆದರೆ ಸತ್ಯಾಂಶ ಹೊರಗೆ ಬರುವುದಕ್ಕೆ ನಿಮಗೆ ಅಧಿಕಾರವನ್ನು ಕೊಡುತ್ತಿದ್ದೇವೆ ತಾವೇ ಅಧ್ಯಕ್ಷರಾಗಿ ಆ ಕೆಲಸವನ್ನು ನಿರ್ವಹಿಸಿ ಎಲ್ಲಾ ಸದಸ್ಯರೂ ಅದರಲ್ಲಿರುತ್ತಾರೆ ಏನು ಹಗರಣ ಇದೆ ಅದನ್ನು ಬಯಲಿಗೆಳೆಯಿರಿ ಅದಕ್ಕೆ ನಾನು ದಯವಿಟ್ಟು ತಮ್ಮ ಮುಖಾಂತರ ವಿರೋಧಪಕ್ಷದ ನಾಯಕರಿಗೆ ಮತ್ತೆ ಹಿರಿಯ ಸದಸ್ಯರಿಗೆ, ಮಾನ್ಯ ವಾಟಾಳ್ ನಾಗರಾಜ್‌ರವರಿಗೆ, ಮಾನ್ಯ ಹೆಗಡೆಯವರಿಗೆ, ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಡಿ ಮತ್ತೆ ಈ ಕಮಿಟಿ ಮುಖಾಂತರ ಮತ್ತೊಮ್ಮೆ ಅವರಿಗೆ ನಾನು ಕೈಜೋಡಿಸಿ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ ನಾನು ನಿನ್ನೆಯೇ ಹೇಳಿದೆ ಈ ಹಗರಣದಲ್ಲಿ ಸಾಧಾರಣ ಒಂದು ತಿಂಗಳು ಎರಡು ತಿಂಗಳು ತನಿಖೆಯನ್ನು ಮಾಡಿದರೆ ಸಾಕಾಗುವುದಿಲ್ಲ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ರೆಫರ್ ಮಾಡಿದರೆ ಸಾಧಾರಣ ಇಡೀ ವರ್ಷ ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದೇ ಕೆಲಸವನ್ನು ಮಾಡಬೇಕಾಗುತ್ತದೆಯೇ ಹೊರತು ಬೇರೆ ಏನೂ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಅದನ್ನು ರೆಫರ್ ಮಾಡುವ ಅವಶ್ಯಕತೆಯೇನೂ ಬರುವುದಿಲ್ಲ ಏಕೆಂದರೆ on their own suo-moto ಅವರೇ ತನಿಖೆಗೆ ತೆಗೆದುಕೊಳ್ಳಬಹುದು ಅದು ಸ್ಟಾಚುಟರಿ ಕಮಿಟಿ ಅವರೇ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ನಮಗೆ ಪರ್‌ಪಸ್ ಆಗಬೇಕು they can take, ಅದಕ್ಕೆ ಅದು ಬೇಡ, ಇದೇ ಸರಿ ಎಂತಲೋ ?

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಆ ರೀತಿ ಅಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ ನಿಮಗೆ Whether the purpose will be solved or not,

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಇನ್ನೊಂದು ಹೇಳುತ್ತೇನೆ ಆ ಕಮಿಟಿಯವರು ಬೇರೆ ಎಲ್ಲಾ ಕೆಲಸವನ್ನು ಬಿಟ್ಟು ಕೇವಲ ಇದನ್ನು ಮಾತ್ರ ತನಿಖೆ ಮಾಡುತ್ತಾ ಕುಳಿತುಕೊಳ್ಳಬೇಕಾಗುತ್ತದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ನಿಮ್ಮ ಪರ್‌ಪಸ್ ಈಡೇರುತ್ತದೋ ಇಲ್ಲವೋ? ಅದನ್ನು ನೋಡಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಬೇರೆ ಯಾವುದೇ ಕೆಲಸವನ್ನು ಮಾಡದೆ, ಬೇರೆ ಯಾವುದರ ಬಗ್ಗೆಯೂ ತನಿಖೆಯನ್ನು ಮಾಡದೆ ಕೇವಲ ಈ ಹಗರಣದ ಬಗ್ಗೆ ಇಡೀ ವರ್ಷ ತನಿಖೆಯನ್ನು ಮಾಡುವಂಥ ಪರಿಸ್ಥಿತಿ ಆ ಕಮಿಟಿಗೆ ಬಂದಿತು

ಅಧ್ಯಕ್ಷರು ಮಾನ್ಯ ಸದಸ್ಯರು ದಯಮಾಡಿ ತಮ್ಮ ತಮ್ಮ ಆಸನಗಳಿಗೆ ಹೋಗಿ ಕುಳಿತುಕೊಳ್ಳಬೇಕೆಂದು ಹೇಳಿ ನಾನು ಪ್ರಾರ್ಥನೆ ಮಾಡುತ್ತೇನೆ ಈಗ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಕುಳಿತು ಚರ್ಚೆ ಮಾಡಿ ಏನಾದರೂ ಒಂದು ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳತಕ್ಕಂಥದ್ದು ಆ ರೀತಿ ನಡೆದುಕೊಂಡು ಬಂದ ಸಂಪ್ರದಾಯ ಎಲ್ಲಾ ಹಂತದಲ್ಲೂ ಅದೆಲ್ಲಾ ನಮ್ಮ ಸದಸ್ಯರುಗಳಿಗೆ ಗೊತ್ತಿದೆ ಅದರಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಮತ್ತೊಮ್ಮೆ ಸರ್ಕಾರ ಮತ್ತೆ ವಿರೋಧಪಕ್ಷದವರೂ ಕುಳಿತು ಚರ್ಚೆ ಮಾಡಿ ಏನು ಗಂಭೀರವಾದ ಸಮಸ್ಯೆ ಇದೆ, ಅದನ್ನು ಬಗೆಹರಿಸಿಕೊಂಡು ಸದನದಲ್ಲಿ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆ ಬಹಳ ಮುಖ್ಯವಾದುದು ರಾಜ್ಯಪಾಲರಿಗೆ ವಂದನೆಯನ್ನು ಸಲ್ಲಿಸತಕ್ಕಂಥದ್ದು ಅದರ ಮೇಲೆ ಚರ್ಚೆ ಮಾಡಿ ಈ ನಾಡಿನ ಸಮಸ್ಯೆಗಳನ್ನು ಚರ್ಚೆ ಮಾಡಿ ಸರ್ಕಾರಕ್ಕೆ ರೀತಿಯ ಒಂದು ಮಾರ್ಗದರ್ಶನವನ್ನು ಮಾಡತಕ್ಕಂಥದ್ದು ತಮ್ಮೆಲ್ಲರ ಕರ್ತವ್ಯ ಆದ್ದರಿಂದ ಆ ದಿಕ್ಕಿನಲ್ಲಿ ತಾವು ಪ್ರಯತ್ನವನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು ದಯಮಾಡಿ ವಿರೋಧ ಪಕ್ಷದ ಎಲ್ಲಾ ಹಿರಿಯ ಸದಸ್ಯರೂ ಸರ್ಕಾರದವರೂ ಬಂದು ನಮ್ಮ ಛೇಂಬರ್‌ನಲ್ಲಿ ಕುಳಿತು ಮತ್ತೊಂದು ಸಾರಿ ಒಂದು ಪ್ರಯತ್ನವನ್ನು ಮಾಡಿ ಏನಾದರೂ ಮಾಡಿ ಈ ಸಮಸ್ಯೆಯನ್ನು ಪರಿಹಾರವನ್ನು ಮಾಡಿಕೊಳ್ಳಬೇಕು ಒಂದು ದಾರಿಯನ್ನು ಹುಡುಕಿಕೊಳ್ಳಬೇಕು ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಈಗ ಸದನವನ್ನು ನಾಲ್ಕು ಗಂಟೆಯವರೆಗೆ ಮುಂದೂಡಿದ್ದೇನೆ

(ಸದನವು 3–25 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ 4 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು),

(ಸದನವು ಸಂಜೆ 4 ಗಂಟೆ 50 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು)

ಸನ್ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಂಕರಿಸಿದರು)

(ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿಯನ್ನು ಮುಂದುವರೆಸಿದ್ದರು)

ಅಧ್ಯಕ್ಷರು ಸದನವನ್ನು ನಾಳೆ ಬೆಳಿಗ್ಗೆ 11 00 ಗಂಟೆವರೆಗೆ ಮುಂದೂಡುತ್ತಿದ್ದೇನೆ,

(ಸದನವು ಸಂಜೆ 4 ಗಂಟೆ 51 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ನಾಳೆ ದಿನಾಂಕ 18ನೇ ಜೂನ್ 2004 ರಂದು ಬೆಳಿಗ್ಗೆ 11 00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ

ಶುಕ್ರವಾರ 18ನೇ ಜೂನ್2004ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 12 ಗಂಟೆ 7 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

ಅಧ್ಯಕ್ಷರ ಅಪ್ಪಣೆ ಮೇರೆಗೆ

1 ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಅಕ್ಕಿ ಹಗರಣ ಕುರಿತು ಸದನ ಸಮಿತಿ ರಚಿಸುವಂತೆ ಒತ್ತಾಯ ಮತ್ತು ವಿರೋಧ ಪಕ್ಷದವರಿಂದ ಧರಣಿ

(ಬಿ ಜೆ ಪಿಯ ಸದಸ್ಯರುಗಳು ಸದನದ ಭಾವಿಯಲ್ಲಿ ನಿಂತುಕೊಂಡು ಜಂಟಿ ಸದನ ಸಮಿತಿ ಆಗಲೇಬೇಕು, ಸದನ ಸಮಿತಿ ಬೇಕೇಬೇಕು ಎಂದು ಕೂಗುತ್ತಾ, ಧರಣಿ ನಡೆಸುತ್ತಿದ್ದರು)

ಅಧ್ಯಕ್ಷರು , ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾಪ, ಈ ಪ್ರಸ್ತಾವದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ,

ಶ್ರೀ ಎಸ್ ರಾಜೇಂದ್ರನ್ (ಕೆ ಜೆ ಎಫ್) ಸನ್ಮಾನ್ಯ ಸಭಾಧ್ಯಕ್ಷರೇ, ಈ ಸದನದ ಒಳಗೆ ಪ್ರಸ್ತಾಪಿಸಲು ನಮಗೆ ಬೇಕಾದಷ್ಟು ವಿಷಯಗಳಿವೆ

†**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)** ಮಾನ್ಯ ಸಭಾಧ್ಯಕ್ಷರೇ, ಇವತ್ತು ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರುಗಳು, ಅಕ್ಕಿ ಹಗರಣದ ವಿಚಾರವಾಗಿ ಸಾಕಷ್ಟು ವಿವರವಾಗಿ ಮಾತನಾಡಿದ್ದಾರೆ, ಇದನ್ನು ಸರ್ಕಾರವು ಸಿ ಒ ಡಿ ತನಿಖೆಗೆ ವಹಿಸಿಕೊಟ್ಟಿದೆ ಸುಮ್ಮನೆ ಕುಳಿತಿಲ್ಲ, ಮೊಟ್ಟ ಮೊದಲನೆಯದಾಗಿ ರಾಜ್ಯದಲ್ಲಿ ದೊಡ್ಡ ಪ್ರಮಾಣದ ಹಗರಣ ನಡೆದಿದೆ, ಇದರಲ್ಲಿ ಯಾರೇ ಪ್ರತಿಷ್ಠಿತ ವ್ಯಕ್ತಿಗಳಿರಲಿ, ರಾಜಕಾರಣಗಳಿರಲಿ ಬೇರೆ ಯಾರೇ ಆಗಿರಲಿ, ನಾವು ಸಹಿಸುವುದಿಲ್ಲ, ಅವರ ಬಗ್ಗೆ ನಿರ್ಧಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇವೆನ್ನುವಂತಹ ಮಾತನ್ನು ನಾವು ಪದೇ ಪದೇ ಹೇಳಿದ್ದೇವೆ ಇದಾದ ಮೇಲೆ ಸದನ ಸಮಿತಿಯಾಗಬೇಕೆಂದು ತಮ್ಮ ಕೊರಡಿಯಲ್ಲಿ ನಿನ್ನೆ ದಿವಸ ಎರಡು, ಮೂರು ಸಲ ಮಾತನಾಡಿದ್ದೇವೆ, ಇವತ್ತು ಕೂಡ ಮಾತನಾಡಿದ್ದೇವೆ ಇವತ್ತು ನಾವು alternative proposal ಏನು ಕೊಡುತ್ತಿದ್ದೇನೆಂದರೆ, ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದೆ ಅದಕ್ಕೆ ಇದನ್ನು ಒಪ್ಪಿಸಬಹುದು ಸದನ ಸಮಿತಿ ಹೋದರೆ, ಈ ವಿಚಾರವಾಗಿ ಈಗಾಗಲೇ ಸಿ ಒ ಡಿ ತನಿಖೆ ನಡೆಯುತ್ತಿದೆ, ಅದರಲ್ಲಿ overlap ಆಗಬಹುದು, ಈಗ ಸರ್ಕಾರಕ್ಕೆ ಬರುತ್ತಿರುವಂತಹ ಮಾಹಿತಿಗಳಲ್ಲಿ ವ್ಯವಹಾರಿಕವಾಗಿ ತೊಂದರೆಯಾಗಬಹುದೆಂದು, ಹೇಳಿ, ಇವತ್ತು ನಾವು ಏನು ಹೇಳಿದ್ದೇವೆ ಇದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ವಹಿಸಿಕೊಡುತ್ತೇವೆ, ಇದರಿಂದ ಈ ಕಮಿಟಿಯಲ್ಲಿರುವಂತಹ ಅಧ್ಯಕ್ಷರಿಗೆ, ರಾಜ್ಯದಲ್ಲಿರುವಂತಹ ಸಮಸ್ಯೆಗಳ ಬಗ್ಗೆ, ಯಾವ ವಿಷಯವಾಗಿ ಸರ್ಕಾರಕ್ಕೆ ಚರ್ಚೆ ಮಾಡಿ ವರದಿಯನ್ನು ಕೊಡಬೇಕೆಂಬ ಹಕ್ಕು ಅವರಿಗಿದೆ, ಆದರೂ ಕೂಡ ವಿಶೇಷವಾದಂಥ ಸಂದರ್ಭದಲ್ಲಿ, ವಿರೋಧ ಪಕ್ಷದ ನಾಯಕರು ರಾಜ್ಯದ ಹಿತದೃಷ್ಟಿಯಿಂದ ಜನರ ಮನಸ್ಸಿನಲ್ಲಿರತಕ್ಕಂಥ ಸಮಸ್ಯೆಗಳ

ಬಗ್ಗೆ ಬಹಳ ಪರಿಣಾಮಕಾರಿಯಾಗಿ ಪ್ರಸ್ತಾಪ ಮಾಡಿದ್ದಾರೆ ನಾವು ಏನು ಹೇಳುತ್ತೇವೆ ಎಂದರೆ, ಇದರ ಬಗ್ಗೆ ಈಗಾಗಲೇ ಸಿ ಓ ಡಿ ಎನ್‌ಕ್ವೈರಿ ಆಗುತ್ತಿದೆ ಪ್ರತಿದಿನವು ಅಧಿಕಾರಿಗಳ ಹಗರಣವನ್ನು ಬೆಳಕಿಗೆ ತರುತ್ತಿದ್ದಾರೆ, ಸಾರ್ವಜನಿಕರ ಗಮನಕ್ಕೆ ತರುತ್ತಿದ್ದಾರೆ ಇಂಥ ಕೆಲಸವನ್ನು, ಇಂಥ ಕ್ರಮವನ್ನು ಯಾವ ಕಾಲದಲ್ಲಿಯೂ ಕೂಡ ಯಾವ ಸರ್ಕಾರವೂ ಮಾಡಿಲ್ಲ ನಾವು ಏನನ್ನೂ ತಪಾಸಣೆ ಮಾಡಿಲ್ಲವೆನೋ ಎನ್ನುವ ರೀತಿಯಲ್ಲಿ ನೀವು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ ಇದು ಸರ್ಕಾರದ ಗಮನಕ್ಕೆ ಮೊದಲೇ ಬರದಿದ್ದರೆ, ತಾವು ಹೇಳುವುದನ್ನು ನಾವು ಒಪ್ಪುತ್ತಿದ್ದೆವು ಆದರೆ ಈಗಾಗಲೇ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಂಡಿದೆ ಅದಕ್ಕೂ ಮಿಗಿಲಾಗಿ, ಇದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಕೊಡಬಹುದು ಎನ್ನುವ ಸಲಹೆಯನ್ನೂ ಕೊಟ್ಟಿದ್ದೇವೆ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಸ್ವಾಚುಟರಿ ಪವರ್ಸ್ ಇದೆ, ಅದು ಯಾವ ರೀತಿಯಲ್ಲಿಯಾದರೂ ಶಿಫಾರಸ್ಸು ಮಾಡಬಹುದು ನಿನ್ನೆ ಇಡೀ ಒಂದು ದಿವಸದ ಕಾಲ ಯಾವುದೇ ಕಾರ್ಯಕಲಾಪ ನಡೆಯಲಿಲ್ಲ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗಬೇಕಾಗಿದೆ ಇವತ್ತು ಅಧಿವೇಶನದ ಕೊನೆಯ ದಿನ ಅದಕ್ಕಾಗಿ ನಾನು ಸರ್ಕಾರದ ಪರವಾಗಿ ವಿರೋಧ ಪಕ್ಷದವರಲ್ಲಿ ವಿನಂತಿ ಮಾಡುತ್ತಿದ್ದೇನೆ ಪ್ರಪ್ರಥಮವಾಗಿ ಸೇರಿದಂಥ ಈ ಅಧಿವೇಶನದಲ್ಲಿ ನಮಗೆ ತಮ್ಮ ಸಹಕಾರ ಬೇಕು ಇನ್ನೂ ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡುವಂಥಾದ್ದು ಇದೆ ಯಾವುದೇ ಬಿಟ್ಟು ಹೋದರೂ ಸಹ ಅದನ್ನು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡತಕ್ಕಂಥ ಅವಕಾಶವಿದೆ ಹಿಂದಿನ ಅಧಿವೇಶನಗಳಲ್ಲಿ ಕೂಡ ಈ ರೀತಿ ಗಲಾಟೆಗಳಾಗಿರತಕ್ಕಂಥಾದ್ದಿದೆ ಯಾವುದೇ ರೀತಿಯ ಒಂದು ನಿರ್ಣಯಕ್ಕೆ ಬರಲು ಆಗಲಿಲ್ಲ ಆದ್ದರಿಂದ, ಈ ಬಾರಿ ನಾವು ಒಂದು ಹೊಸ ಧಾಟಿಯಲ್ಲಿ ಕೆಲಸ ಮಾಡಬೇಕು ಎಂದು ನಾನು ಈಗಾಗಲೇ ತಮಗೆ ಮನವಿ ಮಾಡಿಕೊಂಡಿದ್ದೇನೆ ಆದ್ದರಿಂದ, ಇವತ್ತು ತಾವು ವಿರೋಧ ಪಕ್ಷದ ನಾಯಕರಾಗಿ ಮತ್ತು ಎಲ್ಲಾ ಸದಸ್ಯರೂ ಇದನ್ನು ಗಮನಿಸಿ, ಸರ್ಕಾರದ ಪರವಾಗಿ ನಾವು ಮಾಡಿರುವ ಸಲಹೆಯನ್ನು ತಾವು ಒಪ್ಪಿಕೊಳ್ಳಬೇಕು ಮತ್ತು ಮುಂದಿನ ಕಾರ್ಯಕಲಾಪಗಳಿಗೆ ಸುಗಮ ಹಾದಿ ಮಾಡಿಕೊಡಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ

†ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಸನ್ಮಾನ್ಯ ಅಧ್ಯಕ್ಷರೆ, ಮುಖ್ಯ ಮಂತ್ರಿಗಳು ನಿನ್ನೆಯಿಂದ ಅದೇ ಧಾಟಿಯಲ್ಲಿ ಒಪ್ಪಿಕೊಳ್ಳುತ್ತಿದ್ದಾರೆ, ಇದು ದೊಡ್ಡ ಹಗರಣ ಇದನ್ನು ಸಿ ಓ ಡಿ ಗೆ ಕೊಟ್ಟಿದ್ದೇವೆ, ಒಳ್ಳೆಯ ತನಿಖೆಯಾಗುತ್ತಿದೆ, ಅದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಕೊಡಲು ನಾವು ರೆಡಿ ಇದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ, ಸರ್ಕಾರ ಏನು ನಿಲುವು ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳಲಿ ಅವರಿಗೆ ಗೊತ್ತಿದೆ, ಕಳೆದ ಆರು ತಿಂಗಳಿಂದ ರಾಜ್ಯ ಅಭಿವೃದ್ಧಿ ಕಾರ್ಯಗಳು ನಿಂತುಹೋಗಿ, ನಾವು ಚುನಾವಣಾ ಪ್ರಕ್ರಿಯೆಯಲ್ಲೇ ಮುಳುಗಿಹೋಗಿ ಜನರ ಹಿತವನ್ನು ಸಂಪೂರ್ಣವಾಗಿ ಮರೆತಿದ್ದೆವು, ಹಾಗಾಗಿ, ನಾವು ಮೂರು ದಿವಸಗಳ ಕಾಲ ಬಹಳ ಉಪಯುಕ್ತವಾದಂಥ ಚರ್ಚೆಯನ್ನು ಮಾಡಿದಂಥ ಸಂದರ್ಭದಲ್ಲಿ ಬಡಮರ

ಪರವಾಗಿರತಕ್ಕಂಥ ಕಾಳಜಿಯನ್ನು ಸರ್ಕಾರವೂ ವ್ಯಕ್ತಪಡಿಸಿತು, ನಾವೂ ವ್ಯಕ್ತಪಡಿಸಿದ್ದೇವೆ ರಾಜ್ಯಪಾಲರ ಭಾಷಣ ಎಂದು ಹೇಳಿದರೆ, ಕಳೆದ ಒಂದು ವರ್ಷದಲ್ಲಿ ಆದಂಥ ಆಗುಹೋಗುಗಳು, ಮುಂದೆ ಏನಾಗಬೇಕು, ಏನು ಕೊರತೆಗಳಾಗಿವೆ, ಚುನಾವಣೆ ಸಮಯದಲ್ಲಿ ಜನರು ಏನು ಸಂಕಷ್ಟಕ್ಕೆ ಸಿಕ್ಕಿದ್ದರು, ಬರಗಾಲಕ್ಕೆ ಸಿಕ್ಕ ರೈತನ ಗತಿ ಏನು, ನೇಕಾರರ ಬಗ್ಗೆ ಇವುಗಳೆಲ್ಲದರ ಬಗ್ಗೆ ಚರ್ಚೆ ಮಾಡಬೇಕಾಗಿರತಕ್ಕಂಥ ಕಾಲವಿದು ಅದಕ್ಕಿಂತ ಬಹಳ ಮುಖ್ಯವಾದುದೆಂದರೆ, ಮೊದಲ ಬಾರಿಗೆ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಜೆ ಡಿ ಎಸ್ ಮತ್ತು ಕಾಂಗ್ರೆಸ್ ಪಕ್ಷಗಳ ಸಮ್ಮಿಶ್ರ ಸರ್ಕಾರ ಇರುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾದುದೆಂದರೆ, ಇದುವರೆಗೆ ಪ್ರತಿಪಕ್ಷದಲ್ಲಿ ಕುಳಿತಿದ್ದಂಥ ನಮ್ಮ ಜೆ ಡಿ ಎಸ್ ಸ್ನೇಹಿತರು ಹೇಳಿದಂತೆ, ಅವರು ಈ ರೀತಿಯ ಶ್ರೀ ಸಾಮಾನ್ಯನ ಸಮಸ್ಯೆಗಳಿಗೆ ಸ್ಪಂದಿಸುವುದಕ್ಕೆ ಆದ್ಯತೆಯನ್ನು ಕೊಡುತ್ತಾರೆ ಎಂದು ನಾವು ತಿಳಿದುಕೊಂಡಿದ್ದೆವು ದುರ್ದೈವವೆಂದರೆ, ನಾನು ಮುಖ್ಯಮಂತ್ರಿಗಳನ್ನು ಕೇಳಲು ಇಚ್ಛೆಪಡುತ್ತೇನೆ, ತಾವು ಇಷ್ಟು ವರ್ಷ ಅನುಭವಗಳಿಸಿದ್ದೀರಿ, ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಯಾವುದು ತೆಗೆದುಕೊಳ್ಳಬೇಕು, ಯಾವುದು ತೆಗೆದುಕೊಳ್ಳಬಾರದು ಎಂಬುದು ತಮಗೆ ಗೊತ್ತಿದೆ ನಾಳೆಯ ದಿವಸ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ವಿರೋಧ ಪಕ್ಷದವರೊಬ್ಬರು ಚೇರ್‌ಮೆನ್ ಆದಂಥ ಸಂದರ್ಭದಲ್ಲಿ ಯಾವುದನ್ನು ಆದ್ಯತೆ ಮೇಲೆ ತೆಗೆದುಕೊಳ್ಳಬೇಕು ಎನ್ನುವ ಅವರ ನಿರ್ಧಾರವನ್ನು ತಡೆಯಲು ನಮಗ್ಯಾರಿಗೂ ಅಧಿಕಾರವಿಲ್ಲ ನಾನು ನಿನ್ನೆ ಸಹಾ ಹೇಳಿದ್ದೇನೆ, ನಮ್ಮ ರಾಜ್ಯದ ಇತಿಹಾಸದಲ್ಲಿ ನಾವು ಹತ್ತಾರು ಬಾರಿ ಸದನ ಸಮಿತಿಗಳನ್ನು ಮಾಡಿದ್ದೇವೆ ಅದಕ್ಕೆ ಮಹತ್ವವಿಲ್ಲ, ಅದರಿಂದ ಏನೂ ಆಗುವುದಿಲ್ಲ ಎನ್ನುವ ಮಾತು ಆಡಳಿತ ಪಕ್ಷದಿಂಧ, ವಿರೋಧ ಪಕ್ಷದಿಂದ ಬರಬಾರದು ಎನ್ನುವ ಮಾತನ್ನು ನಾನು ಹೇಳಿದ್ದೇನೆ ಬಹಳ ಮುಖ್ಯವಾಗಿರತಕ್ಕಂಥಾದ್ದು ಎಂದರೆ, ನಾವು ರಾಜ್ಯಪಾಲರ ಭಾಷಣದಲ್ಲಿ, ಈ ನಾಡಿನ ಐದೂವರೆ ಕೋಟಿ ಜನರ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿತ್ತು ನೇಕಾರರ ಸಮಸ್ಯೆ ಬಗ್ಗೆ ಚರ್ಚೆ ಮಾಡಬೇಕಾಗಿತ್ತು ಅವರ ಪರಿಸ್ಥಿತಿ ಕೈಮೀರಿ ಹೋಗುತ್ತಿದೆ ಯುವಕರ ನಿರುದ್ಯೋಗ ಸ್ಥಿತಿ ನಮ್ಮನ್ನು ಕಾಡುತ್ತಿದೆ, ಬರಗಾಲಕ್ಕೆ ಸಿಕ್ಕಂಥ ರೈತರಿಗೆ ನೀವು ಅನೇಕ ಭರವಸೆಗಳನ್ನು ಕೊಟ್ಟಿದ್ದೀರಿ, ಎಲ್ಲಕ್ಕಿಂತ ಮುಖ್ಯವಾಗಿ ಈ ಸದನದಲ್ಲಿ ನಾವು ಬಹಳ ಪ್ರಮುಖವಾಗಿ ಚರ್ಚೆ ಮಾಡಬೇಕಾಗಿರತಕ್ಕಂಥಾದ್ದು ಎಂದರೆ, ಐದು ಲಕ್ಷ ನಿರುದ್ಯೋಗಿ ಯುವಕರಿಗೆ 500 ರೂಪಾಯಿಗಳ ನಿರುದ್ಯೋಗಿ ಭತ್ಯೆ ಕೊಡುತ್ತೇವೆ ಎಂದು ತಾವು ಮೊದಲನೇ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ನಿರ್ಧಾರ ತೆಗೆದು ಕೊಳ್ಳುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದೀರಿ ಆದರೆ ರಾಜ್ಯಪಾಲರ ಭಾಷಣದಲ್ಲಿ ಅದರ ಬಗ್ಗೆ ಒಂದು ಶಬ್ದವೂ ಇಲ್ಲ ರೈತರ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದೀರಿ ಆದರೆ ಇವತ್ತು ಬ್ಯಾಂಕ್‌ಗಳವರು, ನೋಟಿಸ್ ಕೊಟ್ಟು ಜಮೀನುಗಳನ್ನು ಜಪ್ತಿ ಮಾಡುತ್ತಿರುವಂಥಾದ್ದು ಬೆಳಗಾಂ ಮತ್ತು ಬೇರೆಲ್ಲಾ ಕಡೆ ನಡೆಯುತ್ತಿದೆ

ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದು ನಾನು ಈ ವಿಷಯವನ್ನು ತಿಳಿಸಿದ್ದೇನೆ ಈ ರೀತಿಯ ಜ್ವಲಂತ ಸಮಸ್ಯೆಗಳು ನಮ್ಮ ರಾಜ್ಯವನ್ನು ಕಾಡುತ್ತಿರುವಂಥ ಸಂದರ್ಭದಲ್ಲಿ ನಾವು ಚರ್ಚೆಗೆ ಸಿದ್ದರಿದ್ದೆವು, ಅವುಗಳಿಗೆ ಪರಿಹಾರ ಹುಡುಕಬೇಕು ಎನ್ನುವ ಸದುದ್ದೇಶದಿಂದ ನಾವು ಬಂದಿದ್ದೇವೆ, ನೀವು ಆಡಳಿತ ಪಕ್ಷದಲ್ಲಿರಬಹುದು, ನಾವು ವಿರೋಧ ಪಕ್ಷದಲ್ಲಿರಬಹುದು ಆದರೆ ಎಲ್ಲರ ಉದ್ದೇಶವೂ ಅದೇ ಆಗಿದೆ ಇಲ್ಲಿ ನಮಗೆ ಅರ್ಥವಾಗದಿರುವಂಥ ಒಂದು ಸಂಗತಿಯೆಂದರೆ, ಇಂಥ ಸಂದರ್ಭದಲ್ಲಿ ಜೆ ಡಿ ಎಸ್ ಸ್ನೇಹಿತರು ರಾಜ್ಯದ ಜನರಿಗೆ ಭರವಸೆ ಕೊಟ್ಟು ಇಲ್ಲಿದೆ ಬಂದಿದ್ದೀರಿ, ಇವತ್ತು ನೀವು ಯಾವುದೋ ಕಾರಣಕ್ಕಾಗಿ ಅನಿವಾರ್ಯವಾಗಿ ಅಲ್ಲಿ ಕುಳಿತಿದ್ದೀರಿ, ಅಲ್ಲಿದ್ದು ಅವರನ್ನು ರಕ್ಷಣೆ ಮಾಡುವಂಥ ಕೆಲಸವನ್ನು ಅಕ್ಷಮ್ಯ ಅಪರಾಧವನ್ನು ನೀವು ಮಾಡುತ್ತಿದ್ದೀರಲ್ಲಾ, ಇದನ್ನು ಜನ ಮೆಚ್ಚುತ್ತಾರೆಯೇ ? ಈ ವಿಷಯದಲ್ಲಿ ನಾವು ಏನು ಕೇಳಿದ್ದೇವೆ ? ಸಿ ಬಿ ಐ ಗೆ ಕೊಡಿ ಎಂದು ಕೇಳಿದ್ದೇವೆಯೇ ? ಜುಡಿಷಿಯಲ್ ಎನ್‌ಕ್ವೈರಿ ಆಗಬೇಕೆಂದು ಕೇಳಿದ್ದೇವೆಯೇ ? ಇಲ್ಲ, ಸದನದ ಸಮಿತಿ ಮಾಡಿ ಎಂದಷ್ಟೇ ಕೇಳಿದ್ದೇವೆ ಅದರಲ್ಲಿ ನಿಮ್ಮವರು, ನಮ್ಮವರು ಒಟ್ಟಿಗೆ ಇರುತ್ತಾರೆ, ನಿಮ್ಮವರೇ ಅದಕ್ಕೆ ಅಧ್ಯಕ್ಷರಾಗಿರುತ್ತಾರೆ, ವಿಚಾರಣೆ ಹೋದಾಗ, ಅಲ್ಲಿ ಏನಾಗಿದೆ ಎನ್ನುವುದನ್ನು ಜನ ನಮಗೆ ನಿರ್ಭೀತಿಯಿಂದ ತಿಳಿಸುತ್ತಾರೆ, ಕೂಲಿಗಾಗಿ ಕಾಳು ಯೋಜನೆಗಿಂತ ಬಹಳ ಮಹತ್ತರವಾದುದು ಎಂದರೆ, ಪಡಿತರ ವ್ಯವಸ್ಥೆಯಲ್ಲಿ ಬಡವರಿಗೆ ಸಿಗಬೇಕಾದಂಥ ಅಕ್ಕಿ, ಗೋಧಿಯನ್ನು ದುರುಪಯೋಗ ಮಾಡಿಕೊಂಡು, ಅದು ಬಿಡುಗಡೆಯಾಗಿಲ್ಲ ಎಂದು ಸುಳ್ಳು ಹೇಳಿ ದೊಡ್ಡ ಪ್ರಮಾಣದಲ್ಲಿ ತಿಂದು ಹಾಕುವಂಥ ಪ್ರಯತ್ನ ನಡೆದಿದೆ ಎಲ್ಲಾ ಕಡೆಗಳಲ್ಲೂ ಸುಮಾರು 500 ಕಾರ್ಡುಗಳಿದ್ದರೆ, 50–60 ಡೂಪ್ಲಿಕೇಟ್ ಕಾರ್ಡುಗಳಿನ್ನಿಟ್ಟುಕೊಂಡು, ಅಕ್ಕಿಯೇ ಬಂದಿಲ್ಲ, ಗೋಧಿಯೇ ಬಂದಿಲ್ಲ ಎಂದು ಹೇಳಿ ಅದನ್ನು ತಿಂದುಹಾಕಿದ್ದಾರೆ, ಇದೆಲ್ಲವೂ ಬಹಿರಂಗ ಮಾರುಕಟ್ಟೆಯಲ್ಲಿ ಹರಾಜಾಗುತ್ತಿರುವುದನ್ನು ನೀವು ನೋಡುತ್ತಿದ್ದೀರಿ, ಈ ರೀತಿಯಲ್ಲಿ, ಹಿಂದೆಂದೂ ಕಾಣದಿರುವಂಥ ರೀತಿಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿರುವ ಸಂದರ್ಭದಲ್ಲಿ ನೀವು ಯಾರನ್ನು ರಕ್ಷಣೆ ಮಾಡಲು ಹೊರಟಿದ್ದೀರಿ ? ಅಧಿಕಾರಿಗಳನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರೋ ಅಥವಾ ಯಾರು ಜಿಲ್ಲಾ ಉಸ್ತುವಾರಿ ಸಚಿವರಿದ್ದರು ಅಥವಾ ಪ್ರಮುಖರಿದ್ದರು, ಎಲ್ಲಿ ಅವರ ಮೈಮೇಲೆ ಬರುತ್ತದೋ ಎನ್ನುವ ಭಯ ನಿಮ್ಮನ್ನು ಕಾಡುತ್ತಿದೆಯೇ ಎಂದು ನಾವು ಜೆ ಡಿ ಎಸ್ ಸ್ನೇಹಿತರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇವೆ ಸ್ಪೆಷಲ್ ಕೋರ್ಟ್ ಮಾಡಿ, ಎನ್‌ಕ್ವೈರಿ ಮಾಡಿ, ಜೈಲಿಗೆ ಕಳುಹಿಸುವುದಕ್ಕೆ ಸಿದ್ದರಿದ್ದೇವೆ ಎಂದು ಹೇಳಿದಂಥವರು ನೀವು ಇದರ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ಮಾಡಿ ಅವರು ಯಾರೇ ಆಗಿರಲಿ, ಯಾವುದೇ ಪಕ್ಷದವರಿರಲಿ, ಯಾವುದೇ ಅಧಿಕಾರಿ ಇರಲಿ, ಅವರ ಬಗ್ಗೆ ತನಿಖೆ ಮಾಡೋಣ ಎಂದು ಹೇಳಬೇಕಲ್ಲವೇ ? ಸಿ ಓ ಡಿಗೆ ವಹಿಸಿದ್ದೇವೆ ಎಂದು ಹೇಳುತ್ತಿದ್ದೀರಿ ಇದುವರೆಗೆ ಎಷ್ಟು ಸಿ ಓ ಡಿಗೆ ತನಿಖೆಗಳಾಗಿವೆ ಸಿ ಓ ಡಿ ವರದಿ ಕೊಟ್ಟಿರುವಂಥಾದ್ದನ್ನು ಮುಚ್ಚಿಟ್ಟಿರುವಂಥ ಎಷ್ಟೊಂದು

ಉದಾಹರಣೆಗಳಿವೆ ಪ್ರಬಲವಾದಂಥ ಒಂದು ಸರ್ಕಾರ ಇರುವಂಥ ಸಂದರ್ಭದಲ್ಲಿ , ಈ ಹಗರಣದಲ್ಲಿ ಒಬ್ಬ ಮಾಜಿ ಅಥವಾ ಹಾಲಿ ಮಂತ್ರಿ ಇದರಲ್ಲಿ ಇನ್‌ವಾಲ್ವ್ ಆಗಿದ್ದರೆ ಅಥವಾ ದೊಡ್ಡ ದೊಡ್ಡ ಪೊಲಿಟೀಷಿಯನ್‌ಗಳು ಇನ್‌ವಾಲ್ವ್ ಆಗಿದ್ದರೆ ಸಿ ಓ ಡಿ ಯವರು ಅದರ ಬಗ್ಗೆ ಮಾತನಾಡಲು ಸಾಧ್ಯವೇ ? ನಾಮಕಾವಸ್ಥೆಗಾಗಿ ಯಾವುದೋ ಮಿಲ್ ಓನರ್ ಅಥವಾ ಕೆಲಸಕ್ಕೆ ಬಾರದಂಥ 4–5 ಅಧಿಕಾರಿಗಳನ್ನು ಸಸ್ಪೆನ್‌ಷನ್‌ನಲ್ಲಿಟ್ಟು ಅಮೇಲೆ ನೀವು ದಾಖಲೆಗಳನ್ನು ತಿದ್ದಿ, ಸರಿಪಡಿಸಿ, ಮುಂದೆ ಬರುವಂಥ ಒಂದು ತಿಂಗಳಲ್ಲಿ ಎಲ್ಲವೂ ಸರಿ ಇದೆ ಎಂದು ಸದನಕ್ಕೆ ಹೇಳುವಂಥ ವ್ಯವಸ್ಥಿತವಾದಂಥ ಷಡ್ಯಂತ್ರವನ್ನು ಮಾಡಲು ಹೊರಟಿದ್ದೀರಿ ಮಾನ್ಯ ಧರ್ಮಸಿಂಗ್‌ರಂಥವರು ಮುಖ್ಯ ಮಂತ್ರಿಗಳಾಗಿರುವಂಥ ಈ ಕಾಲದಲ್ಲಿ, ಹೋರಾಟ ಮಾಡುವಂಥ ಮಾನ್ಯ ಸಿದ್ದರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿರುವಂಥ ಸಂದರ್ಭದಲ್ಲಿ ಈ ರೀತಿ ಆಗಬಾರದು, ಜೆ ಡಿ ಎಸ್ ನವರು ಕಳೆದ ಮೂರು ತಿಂಗಳಲ್ಲಿ ಚುನಾವಣೆಯ ಸಮಯದಲ್ಲಿ ರಾಜ್ಯದ ಉದ್ದಗಲಕ್ಕೂ ಕೊಟ್ಟಿದ್ದ ಭರವಸೆಗಳಿಗೆ ತದ್ದಿರುದ್ದವಾಗಿ ನೀವು ನಡೆದುಕೊಳ್ಳುತ್ತಿರುವಂಥಾದ್ದು ಅಕ್ಷಮ್ಯ ಅಪರಾಧ ಇದನ್ನು ನಾಡಿನ ಜನ ಕ್ಷಮಿಸುವುದಿಲ್ಲ ನಾನು ಈಗಲೂ ಹೇಳುತ್ತೇನೆ, ದಯಮಾಡಿ ಇದನ್ನು ಒಂದು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬೇಡಿ ಇದು ನಮ್ಮ ನಿಮ್ಮ ಪ್ರಶ್ನೆಯಿಲ್ಲ ರಾಜ್ಯದ ಜನರ ಪ್ರಶ್ನೆ ರಾಜ್ಯದಲ್ಲಿ ಮನೆಮನೆಯಲ್ಲಿ ಮಾತನಾಡುತ್ತಿದ್ದಾರೆ ನೀವು ಒಂದು ವರದಿಯನ್ನು ತರಿಸಿಕೊಳ್ಳಿ ಕಳೆದ ನಾಲ್ಕೈದು ದಿವಸಗಳ ಚರ್ಚೆಯ ಪರಿಣಾಮ ಏನಾಗಿದೆ ಎಂದು ನೀವು ಯೋಚನೆ ಮಾಡಬೇಕು ತಾವು ದಯಮಾಡಿ, ನ್ಯಾಯಾಬದ್ಧವಾದಂಥ ಸದನ ಸಮಿತಿಗೆ ಅವಕಾಶ ಮಾಡಿಕೊಡಿ, ನಿಷ್ಪಕ್ಷವಾದಂಥ ವರದಿ ಕೊಡುತ್ತೇವೆ, ಮುಂದೆ ಇಂಥ ಅನಾಹುತಗಳಾಗದಂತೆ, ಅಜಾತುರ್ಯವಾಗದಂತೆ, ಜನರಿಗೆ ಅನ್ಯಾಯವಾಗದಂತೆ ಒಂದು ನಿರ್ಧಾರ ತೆಗೆದುಕೊಳ್ಳುವುದಕ್ಕೆ ಇದು ಸೂಕ್ತವಾದಂಥದ್ದು, ಇದು ಎಲ್ಲರ ಭಾವನೆ, ಆಡಳಿತ ಪಕ್ಷದಲ್ಲಿರುವ ಅರ್ಧಕಿಂತ ಹೆಚ್ಚು ಸದಸ್ಯರ ಅಭಿಪ್ರಾಯವೂ ಇದೇ ಆಗಿದೆ ಆದರೆ ಅವರು ಆಡಳಿತ ಪಕ್ಷದಲ್ಲಿದ್ದುಕೊಂಡು ಹೀಗೆ ಮಾತನಾಡಲಾಗುವುದಿಲ್ಲವೆನ್ನುವುದು ನನಗೆ ಅರ್ಥವಾಗುತ್ತದೆ ಇಲ್ಲಿ ಅಲ್ಲದಿದ್ದರೂ, ನಂತರ ನಿಮ್ಮ ಮುಖ್ಯಮಂತ್ರಿಗಳಿಗೆ ಉಪ ಮುಖ್ಯಮಂತ್ರಿಗಳಿಗೆ ಹೇಳಿ, ಶಾಸಕರಾಗಿ, ನಾವು ರಸ್ತೆಗಳಲ್ಲಿ ಓಡಾಡಲು ಕಷ್ಟವಾಗುತ್ತದೆ, ಇದರ ಬಗ್ಗೆ ಸ್ವತಂತ್ರವಾಗಿ ನಿಷ್ಪಕ್ಷವಾದ ತನಿಖೆಯಾಗಲಿ, ಸದನದ ಶಾಸಕರನ್ನು ನಂಬದೇ ನೀವು ಇನ್ಯಾರನ್ನು ನಂಬುತ್ತೀರಿ ಎನ್ನುವ ಮಾತನ್ನು ಹೇಳಿ ಎಂದು ಕಿವಿಮಾತನ್ನು ಹೇಳಿ, ಈಗಲಾದರೂ ಇದಕ್ಕೆ ಒಪ್ಪಿಸಬೇಕು ಎನ್ನುವ ಒತ್ತಾಯವನ್ನು ನಾನು ಮತ್ತೊಮ್ಮೆ ಮಾಡುತ್ತಿದ್ದೇನೆ

†**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)** ಮಾನ್ಯ ಅಧ್ಯಕ್ಷರೆ, ತಾವು ತಮ್ಮ ಕರ್ತವ್ಯವನ್ನು ಬಹಳ ಜವಾಬ್ದಾರಿಯಿಂದ, ಪ್ರೀತಿ ವಿಶ್ವಾಸದಿಂದ ನಿರ್ವಹಿಸುತ್ತಿದ್ದೀರಿ, ಈ ಸದನ ನಡೆಯಬೇಕು ಎನ್ನುವ ಉದ್ದೇಶದಿಂದ ತಾವು ನಾಲ್ಕೈದು ಬಾರಿ ಸಭೆಯನ್ನು ಕರೆದಿರಿ ತಾವು ಕರೆದಾಗಲೆಲ್ಲಾ ನಾವು ಸಭೆಗೆ

ಬಂದಿದ್ದೇವೆ ಸರ್ಕಾರದ ಪ್ರಕಾರ ಸಿ ಓ ಡಿ ತನಿಖೆ ನಡೆಯುತ್ತಿದೆ ಭ್ರಷ್ಟಚಾರ ನಡೆದಿದೆ ಎನ್ನತಕ್ಕಂಥಾದ್ದು ಸರ್ಕಾರಕ್ಕೆ ಮನವರಿಕೆ ಆಗಿರುವುದರಿಂದ ಸಿ ಓ ಡಿ ತನಿಖೆಗೆ ನೇಮಿಸಿದ್ದಾರೆ ಭ್ರಷ್ಟಾಚಾರ ನಡೆದಿದೆ ಎನ್ನುವಾಗ ಸಿ ಓ ಡಿ ಗಿಂತಲೂ ಸ್ವಲ್ಪ ಭಿನ್ನವಾದ ಸದನ ಸಮಿತಿಯನ್ನು ಏಕೆ ಮಾಡಬಾರದು ? ಒಂದು ಕಡೆ ಸಿ ಓ ಡಿ ತನಿಖೆ ನಡೆಯಲಿ, ಮತ್ತೊಂದು ಕಡೆ ಜಂಟಿ ಸದನ ಸಮಿತಿ ನೇಮಕ ಮಾಡಿ, ಸದನ ಸಮಿತಿ ಎಂದರೆ ಅದರಲ್ಲಿ ಕೇವಲ ವಿರೋಧ ಪಕ್ಷದ ಸದಸ್ಯರು ಮಾತ್ರ ಇರುವುದಿಲ್ಲ ಆಡಳಿತ ಪಕ್ಷ, ವಿರೋಧ ಪಕ್ಷದ ಸದಸ್ಯರು ಎಲ್ಲರೂ ಇರುವಂಥಾದ್ದು ಸದನ ಸಮಿತಿ ಅದಕ್ಕೆ ಯಾರನ್ನು ಬೇಕಾದರೂ ಅಧ್ಯಕ್ಷರನ್ನಾಗಿ ಮಾಡಲಿ ಅದರ ಬಗ್ಗೆ ಬೇರೆ ಪ್ರಶ್ನೆಯೇ ಇಲ್ಲ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಹಿಂದೆ ಅನೇಕ ಸಂದರ್ಭಗಳಲ್ಲಿ ಸದನ ಸಮಿತಿ ಮಾಡಿರುವುದು ಉಂಟು, ಹಿಂದೆ, ಗ್ರಾನೈಟ್ ವಿಷಯ ಬಂದಾಗ, ಅದನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡಿದ ತಕ್ಷಣ, ಅದರ ಬಗ್ಗೆ ಸದನ ಸಮಿತಿ ನೇಮಕವಾಯಿತು ಒಂದು ವರ್ಷದಲ್ಲಿ 4–5 ಸದನ ಸಮಿತಿಗಳು ನೇಮಕವಾಗಿರುವುದೂ ಉಂಟು ಇವರು ಕೇಳಿದರು ಎಂದು ಸದನ ಸಮಿತಿಯನ್ನು ಏಕೆ ಮಾಡಬೇಕು ಎನ್ನುವುದು ಸರ್ಕಾರಕ್ಕೆ ಒಂದು ಪ್ರತಿಷ್ಠೆಯ ಪ್ರಶ್ನೆಯಾಗಿ ಉಳಿದಿದೆಯೇ ಹೊರತು, ಇದರಲ್ಲಿ ಬೇರೆ ಪ್ರಶ್ನೆ ಇಲ್ಲ, ಆದ್ದರಿಂದ, ನಾನು ಮಾನ್ಯ ಅಧ್ಯಕ್ಷರಲ್ಲಿ ಕಳಕಳಿಯ ಮನವಿ ಮಾಡುತ್ತೇನೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಅನೇಕ ಪ್ರಮುಖ ವಿಚಾರಗಳ ಮೇಲೆ ಚರ್ಚೆ ಮಾಡಬೇಕು ಎಂದು ನಾವು ಇದ್ದೇವೆ, ಅದರಲ್ಲಿ ಹಿಂದೆ ಹೋಗಬೇಕು ಎನ್ನುವ ಉದ್ದೇಶವೇನೂ ನಮ್ಮದಲ್ಲ, ಎಲ್ಲಕ್ಕಿಂತ ಮಿಗಿಲಾಗಿ, ಪ್ರಧಾನ ಮಂತ್ರಿಗಳು ಹೇಳಿದರು ಎಂದು ಇವತ್ತು ಸರ್ಕಾರದವರು ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟುಬಿಟ್ಟಿದ್ದಾರೆ ನಮ್ಮನ್ಯಾರನ್ನೂ ಕೇಳಲಿಲ್ಲ, ವಿರೋಧ ಪಕ್ಷಗಳವರನ್ನು ಕೇಳಲಿಲ್ಲ, ಇದುವರೆಗೂ ಇವರು ವಿರೋಧ ಪಕ್ಷಗಳವರನ್ನು ಕರೆದು ಕಾವೇರಿ ಬಗ್ಗೆ ಏನು ಮಾಡೋಣ ಎಂದು ಅನೇಕ ಸಾರಿ ಮಾತನಾಡಿದರು, ಆದರೆ ಈಗ ನಮಗೆ ಹೇಳಲಿಲ್ಲ, ಕೇಳಲಿಲ್ಲ, ಪ್ರಧಾನಮಂತ್ರಿಗಳು ಹೇಳಿದ್ದಾರೆ ಎಂದು ನೀರು ಬಿಟ್ಟಿದ್ದಾರೆ, ಇದು ಏನೆಂಬುದು ನನಗೆ ಅರ್ಥವಾಗುತ್ತಿಲ್ಲ ಕಾವೇರಿ ನೀರನ್ನು ಬಿಡುವುದಕ್ಕೆ ಮುಂದೆ ನಮ್ಮನ್ನು ಕರೆದು, ಸೌಜನ್ಯಕ್ಕಾದರೂ, ಪರಿಸ್ಥಿತಿ ಇದೆ, ಪ್ರಧಾನ ಮಂತ್ರಿಗಳು ಈ ರೀತಿ ಹೇಳಿದ್ದಾರೆ, ಸಭೆ ಈ ರೀತಿ ನಡೆದಿದೆ, ಇತ್ಯಾದಿ ಏನಾದರೂ ಹೇಳಬಹುದಿತ್ತು ಅದ್ಯಾವುದನ್ನೂ ಮಾಡಲಿಲ್ಲ

(ಗೊಂದಲ)

(ಅನೇಕ ಮಾನ್ಯ ಸದಸ್ಯರು ಏಕಕಾಲದಲ್ಲಿ ಮಾತನಾಡುತ್ತಿದ್ದರು)

ಮಾನ್ಯ ಸದಸ್ಯರು ಲಕ್ಕಿಯ ವಿಷಯ ಹೇಳಲಿ ಕೂಲಿಗಾಗಿ ಕಾಳು ವಿಷಯದ ಬಗ್ಗೆ ಹೇಳಲಿ ಅದನ್ನು ಬಿಟ್ಟು ಎಲ್ಲೆಲ್ಲೋ ಹೋಗುತ್ತಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ಸಭೆ ಕರೆಯದೇ ಕಾವೇರಿ ನೀರು ಬಿಟ್ಟಿದ್ದು ಸರಿಯಲ್ಲ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಕಾವೇರಿ ನೀರು ಬಿಟ್ಟಿದ್ದು ಸರಿಯಿಲ್ಲ ನಮ್ಮನ್ನು ಆ ಸಭೆಗೆ ಕರೆಯಬೇಕಾಗಿತ್ತು ಸಭೆ ಕರೆಯದೆ ನೀರು ಬಿಟ್ಟದ್ದು ಸರಿಯಲ್ಲ ಅದು ಸ್ಪಷ್ಟ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ವಿರೋಧ ಪಕ್ಷದವರು ಮಾತನಾಡುವಾಗ ಆಡಳಿತ ಪಕ್ಷದವರು ಏಕೆ ಅಡ್ಡಿಪಡಿಸುತ್ತಿದ್ದೀರಿ ? ಸರ್, ಅವತ್ತು ಶ್ರೀ ಎಸ್ ಎಂ ಕೃಷ್ಣ ಅವರು ಪಾದಯಾತ್ರೆ ಮಾಡಿ ನೀರು ಬಿಡುವುದಿಲ್ಲವೆಂದು ಹೇಳಿ ನೀರು ಬಿಟ್ಟರು ! ಈ ಸಲವೂ ಪ್ರತಿಪಕ್ಷದವರ ಸಭೆ ಕರೆದು ನೀರು ಬಿಡುವುದಿಲ್ಲವೆಂದು ಹೇಳಿ, ನಂತರ ಪ್ರಧಾನ ಮಂತ್ರಿಗಳು ಹೇಳಿದರೆಂದು ರಾತ್ರೋರಾತ್ರಿ ನೀರು ಬಿಡುವುದಾದರೆ ಪ್ರತಿಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡ ತೀರ್ಮಾನ ಕೈಗೊಳ್ಳುವ ಜವಾಬ್ದಾರಿಯಾದರೂ ಸರ್ಕಾರಕ್ಕೆ ಇರಬೇಡವೇ ? ಹಾಗಾದರೆ, ಇನ್ನು ಮುಂದೆ ಕಾವೇರಿ ನೀರಿಗೆ ಸಂಬಂಧಿಸಿದಂತೆ ಯಾವುದೇ ಸಭೆ ಕರೆದರೂ ನಾವು ಬಾಯ್ಕಾಟ್ ಮಾಡುತ್ತೇವೆ ಜನರ ಮುಂದೆ ಹೋಗುತ್ತೇವೆ ಇವತ್ತು ಮಳೆ ಬಂದಿದ್ದರೆ ಪರಿಸ್ಥಿತಿಯನ್ನು ತಿಳಿಸಬಹುದಾಗಿತ್ತಲ್ಲವೇ ? ಪ್ರಧಾನಮಂತ್ರಿಗಳ ಹೇಳಿದ್ದನ್ನು ನೀವು ಹೇಗೆ ಒಪ್ಪಿಕೊಂಡಿರಿ ? ನೀರು ಹೇಗೆ ಬಿಡುಗಡೆ ಮಾಡಿದಿರಿ ? ನೀರು ಬಿಡುವ ಸಂದರ್ಭದಲ್ಲಿ ನಮ್ಮನ್ನು ಕರೆಯಬೇಕಾಗಿತ್ತು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು

(ಗೊಂದಲ)

(ಬಿ ಜೆ ಪಿ ಶಾಸಕರು ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು ಸದನದ ಭಾವಿಯಲ್ಲಿ ಧರಣಿ ನಿರತರಾಗಿರುವ ಪ್ರತಿಪಕ್ಷದ ಮಾನ್ಯ ಸದಸ್ಯರುಗಳಲ್ಲಿ ನನ್ನ ಮನವಿ ಏನೆಂದರೆ, ದಯಮಾಡಿ ಘೋಷಣೆಗಳನ್ನು ಕೂಗಬೇಡಿ ಅದನ್ನು ನಿಲ್ಲಿಸಬೇಕೆಂಧು ನನ್ನ ಮನವಿ

ಶ್ರೀ ವಾಟಾಳ್ ನಾಗರಾಜ್ ಬಹಳ ಪ್ರಮುಖವಾದ ವಿಚಾರಗಳನ್ನು ಚರ್ಚೆ ಮಾಡುವುದರಲ್ಲಿ ನಾವು ಉತ್ಸುಕರಾಗಿದ್ದೇವೆ ಅದರ ಬಗ್ಗೆ ಎರಡು ಮಾತಿಲ್ಲ ಇಂಧ ಅನೇಕ ವಿಚಾರಗಳನ್ನು ನಾವು ಚರ್ಚೆ ಮಾಡಬೇಕಾಗಿದೆ ರಾಜ್ಯಪಾಲರ ಭಾಷಣ ಮತ್ತು ಹಿಂದೆ, ಚುನಾವಣೆ ಪೂರ್ವದಲ್ಲಿ ಜನತಾದಳ (ಜಾತ್ಯಾತೀತ) ದವರು ನಿಂತುಕೊಂಡು ಏನೇನು ಹೇಳಿದ್ದರೋ ಅವೆಲ್ಲವನ್ನೂ ಹೇಳಬೇಕಾಗುತ್ತದೆ

ಅಧ್ಯಕ್ಷರು ಚರ್ಚೆ ಮಾಡಲು ಅವಕಾಶವಿದೆ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳನ್ನು ಅಲಂಕರಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ ರಾಜ್ಯದಲ್ಲಿ ಬೇಕಾದಷ್ಟು ಜ್ವಲಂತ ಸಮಸ್ಯೆಗಳಿವೆ ಇಂಧ ಸಮಸ್ಯೆಗಳನ್ನು ಚರ್ಚೆ ಮಾಡುವ ಮೂಲಕ ಏನಾದರೊಂದು ಪರಿಹಾರ ಕಂಡುಹಿಡಿಯಬೇಕೆಂದು ನಾಡಿನ ಜನತೆ ನಿರೀಕ್ಷಿಸುತ್ತಿದ್ದಾರೆ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ಸದನ ಸಮಿತಿ ರಚಿಸಲು ನಿಮಗಿರುವ ಅಧಿಕಾರವನ್ನು ಚಲಾಯಿಸಿ ತಾವು ಆದೇಶ ಕೊಡಿ ಈ ರಾಜ್ಯದ ಜನರ ಹಿತದೃಷ್ಟಿಯಿಂದ ಸದನ ಸಮಿತಿ ರಚಿಸಬೇಕು, ಇದಕ್ಕೆ ಒಪ್ಪಿಗೆ ಕೊಡಿ

(ಗೊಂದಲ)

ಅಧ್ಯಕ್ಷರು ದಯವಿಟ್ಟು ತಾವು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿ ಅಲಂಕರಿಸಬೇಕೆಂದು ಮಾನ್ಯ ಸದಸ್ಯರುಗಳಲ್ಲಿ ಕಳಕಳಿಯ ಮನವಿಮಾಡಿಕೊಳ್ಳುತ್ತೇನೆ

ಶ್ರೀ ಜಿ ವಿ ರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ದಯವಿಟ್ಟು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು

(ಈ ಹಂತದಲ್ಲಿ ಬಾವಿಯಲ್ಲಿ ಧರಣಿನಿರತರಾಗಿದ್ದ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು "ಸದನ ಸಮಿತಿ ಬೇಕೇ ಬೇಕು, ಎಂಬ ಘೋಷಣೆಗಳನ್ನು ಕೂಗುತ್ತಿದ್ದರು)

2 ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವಕ್ಕೆ ಮುಖ್ಯಮಂತ್ರಿಗಳಿಂದ ಉತ್ತರ,

ಅಧ್ಯಕ್ಷರು ಈಗ ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿ) ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಸದಸ್ಯರಾದ ಡಾ, ಜಿ ಪರಮೇಶ್ವರ್ ಅವರು ಮಾತನಾಡಿ ಸಾಕಷ್ಟು ಬೆಳಕು ಚೆಲ್ಲಿದ್ದಾರೆ ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲನೆಯದಾಗಿ ಸಮ್ಮಿಶ್ರ ಸರ್ಕಾರ ಹೊರಹೊಮ್ಮಿದೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನೇನು ಪ್ರಕಟವಾಗಿದೆ ಅವೆಲ್ಲವನ್ನೂ ಕೂಡ ಅನುಷ್ಠಾನಕ್ಕೆ ತರುವ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತದೆಂಬ ಮಾತನ್ನು ನಾನು ಹೇಳಬಯಸುತ್ತೇನೆ

(ಗೊಂದಲ)

ಇವತ್ತು ವಿರೋಧ ಪಕ್ಷದವರು ಈ ರೀತಿ ವರ್ತಿಸಿದರೆ ಹೇಗೆ ? ನಾವು ಇಟ್ಟುಕೊಂಡಿರುವ ಉದ್ದೇಶಗಳ ಗುರಿ ಮುಟ್ಟಬೇಕಾದರೆ ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮವಾಗಿ ಏನು ನಮ್ಮ ಸರ್ಕಾರ ಬಂದಿದೆ ರಾಜ್ಯದ ಸಮಸ್ಯೆ ಬಗ್ಗೆ ಪ್ರಾಮಾಣಿಕವಾಗಿ ನಿರ್ವಹಣೆ ಮಾಡುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ ಈ ಬಗ್ಗೆ ಇವತ್ತಿನ ದಿವಸ ನಮ್ಮ ಸದನದಲ್ಲಿ ಕೂಡ ರಾಜ್ಯಪಾಲರು ಮಾಡಿರುವ ಸರ್ಕಾರದ ವತಿಯಿಂದ ವಂದನಾ ನಿರ್ಣಯವನ್ನು ತರುತ್ತಿದ್ದೇವೆ

ಅಧ್ಯಕ್ಷರು ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ ಪ್ರಸ್ತಾವ ಏನೆಂದರೆ, "2004ನೇ ಜೂನ್ 11ರಂದು ವಿಧಾನಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾಗಿ ವಂದನೆಗಳನ್ನು ಸಮರ್ಪಿಸುತ್ತೇವೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು ಅಂಗೀಕರಿಸಿದ ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು

3 ಚುನಾವಣಾ ಪ್ರಸ್ತಾವ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ "ದಿನಾಂಕ 14ನೇ ಜೂನ್ 2004ರಂದು ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ಅನಾಧಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ ಈ ಕುರಿತು ವಿವಿಧ ಪಕ್ಷಗಳ ಸಚೇತಕರುಗಳು ನೀಡಿರುವ ಒಡಂಬಡಿಕೆ ಪಟ್ಟಿಯ ರೀತ್ಯಾ ಮಾನ್ಯ ವಿಧಾನಸಭೆ ಸದಸ್ಯರುಗಳನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ಅನಾಧಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಮಾನ್ಯ ಸದಸ್ಯರನ್ನು ನೇಮಿಸಲು ಮಾನು ವಿಧಾನ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡುತ್ತದೆ"

ಅಧ್ಯಕ್ಷರು ಪ್ರಸ್ತಾವ ಏನೆಂದರೆ, " ದಿನಾಂಕ 14ನೇ ಜೂನ್ 2004ರಂದು ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ಅನಾಧಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ ಈ ಕುರಿತು ವಿವಿಧ ಪಕ್ಷಗಳ ಸಚೇತಕರುಗಳು ನೀಡಿರುವ ಒಡಂಬಡಿಕೆ ಪಟ್ಟಿಯ ರೀತ್ಯಾ ಮಾನ್ಯ ವಿಧಾನಸಭೆ ಸದಸ್ಯರುಗಳನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ಅನಾಧಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಮಾನ್ಯ ಸದಸ್ಯರನ್ನು ನೇಮಿಸಲು ಮಾನ್ಯ ವಿಧಾನ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡುತ್ತದೆ",

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು)

4 ಸಚಿವರ ಹೇಳಿಕೆ

ಜೂನ್ 2004 ರಿಂದ ಆಗಸ್ಟ್–2004 ರ ಮುಂಗಾರಿನ ಅವಧಿಯಲ್ಲಿ ವಿದ್ಯುತ್ ಬಳಕೆಯನ್ನು ಹೆಚ್ಚುಸುವುದರ ಬಗ್ಗ ಲೋಕೋಪಯೋಗಿ ಹಾಗೂ ವಿದ್ಯುತ್ ಸಚಿವರ ಹೇಳಿಕೆ

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) ಮಾನ್ಯ ಅಧ್ಯಕ್ಷರೆ, 2004ರ ಮಾರ್ಚ್ ತಿಂಗಳಿನಲ್ಲಿ ರಾಜ್ಯದ ವಿದ್ಯುತ್ ಬೇಡಿಕೆಯ ಶೃಂಗಕ್ಕೇರಿ 100 ದಶಲಕ್ಷಯೂನಿಟ್ಟುಗಳಿಗೆ (ದ ಲ ಯೂ) ಏರಿತು. ತರುವಾಯ ಈ ಬೇಡಿಕೆಯ 92 ದ ಲ ಯೂ ಗಳಿಗೆ ಇಳಿಯಿತು ಮೇ ತಿಂಗಳಿನಲ್ಲಿ ಒಳ್ಳೆಯ ಮಳೆಯಾಯಿತು ಮತ್ತು ಇದು ಈ ತಿಂಗಳಿನಲ್ಲಿಯೂ ಮುಂದುವರೆದಿದೆ ವಿದ್ಯುತ್

ಜಾಲದ ದಿನಂ ಪ್ರತಿ ಬೇಡಿಕೆಯು 58 ದ ಲ ಯೂ ಗಳಿಗೆ ಇಳಿದಿದ್ದು ಮತ್ತು ಇದು ಈಗ 65 ರಿಂದ 70 ದ ಲ ಯೂ ಗಳ ಮಟ್ಟದಲ್ಲಿದೆ ಈಗ ಹೆಚ್ಚು ದರವನ್ನು ನೀಡಬೇಕಾಗಿರುವ ಖಾಸಗೀ ವಿದ್ಯುತ್ ಉತ್ಪಾದಕರಿಗೆ, ರಾಯಚೂರು ಶಾಖೋತ್ಪನ್ನ ವಿದ್ಯುತ್ ಉತ್ಪಾದನ ಕೇಂದ್ರದ ಎರಡು ಘಟಕಗಳಿಗೆ ಮತ್ತು ಹಲವು ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸೇರಿ, ಜಾಲಕ್ಕೆ ವಿದ್ಯುತ್ತನ್ನು ರವಾನಿಸದಿರಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕವಿಪ್ರನಿನಿ) ನಿರ್ದೇಶನವನ್ನು ನೀಡಿದೆ ಅದಾಗ್ಯೂ ರಾತ್ರಿ ವೇಳೆಯಲ್ಲಿ ವಿದ್ಯುತ್ ಭಾರವು ಇಳಿಮುಖವಾಗುವುದರಿಂದ ಜಾಲದ ತರಂಗವು ಏರಿ ವೋಲ್ಟೇಜ್ ಜಾಸ್ತಿಯಾಗುವು ಕಾರಣ ನಿಗಮದ ವಿದ್ಯುತ್ ರವಾನೆ ಕೇಂದ್ರವು ಸಮಸ್ಯೆಗಳನ್ನು ಎದುರಿಸುತ್ತಿದೆ ಜಾಲದ ತರಂಗವು 50 5 ಹೆಚ್ ಜಡ್‌ಗಿಂತ ಜಾಸ್ತಿಯಾದಾಗ ಸರಬರಾಜು ಮಾಡಲಾದ ವಿದ್ಯುತ್ತಿಗೆ ಹಣವು ಬರುವುದಿಲ್ಲ ವೋಲ್ಟೇಚ್ ಹೆಚ್ಚಾದಾಗ ಇದು ಉತ್ಪಾದನಾ ಸ್ಥಿರತೆಗೆ ಧಕ್ಕೆ ಉಂಟುಮಾಡುತ್ತದೆ ಮತ್ತು ಪ್ರಸರಣಾ ಸಾಮಗ್ರಿಗಳಿಗೂ ಹಾನಿಯಾಗುತ್ತದೆ ಕವಿಪ್ರನಿನಿಯು ಅಸಂಪ್ರದಾಯಕ ಇಂಧನ ಮೂಲ ವಿದ್ಯುತ್ ಉತ್ಪಾದನಾ ಕೇಂದ್ರಗಳು ರಾತ್ರಿ ವೇಳೆ ಅಂದರೆ ರಾತ್ರಿ 11 00 ರಿಂದ ಬೆಳಗ್ಗೆ 7 00 ಗಂಟೆಯವರಿಗೆ ಉತ್ಪಾದಿಸದಿರುವಂತೆ ನಿಬಂಧನೆಯನ್ನು ಹಾಕಲು ಪ್ರಯತ್ನಿಸಿತು ಆದರೆ ಇದಕ್ಕೆ ಅಸಂಪ್ರದಾಯಿಕ ವಿದ್ಯುತ್ ಉತ್ಪಾದನಾ ಕೇಂದ್ರಗಳ ಅಭಿವೃದ್ಧಿಗಾರರಿಂದ ತೀವ್ರ ವಿರೋಧ ವ್ಯಕ್ತವಾಯಿತು ಅವರ ಪ್ರಕಾರ ಕಿರುಜಲವಿದ್ಯುತ್ ಉತ್ಪಾದನಾ ಕೇಂದ್ರಗಳು ಮತ್ತು ಪವನ ವಿದ್ಯುತ್ ಉತ್ಪಾದನಾ ಕೇಂದ್ರಗಳು ಮುಂಗಾರಿನ ಅವಧಿಯಲ್ಲಿ ಮಾತ್ರ ಹೆಚ್ಚು ವಿದ್ಯುತ್ ಉತ್ಪಾದಿಸಬಹುದು ಮತ್ತು ಇದಕ್ಕೆ ನಿಗಮವು ಕಡಿವಾಣ ಹಾಕಿದಲ್ಲಿ ಅವರ ಆರ್ಥಿಕ ವ್ಯವಸ್ಥೆಗೆ ಅಡ್ಡಿಯಾಗುತ್ತದೆ ಅವರುಗಳ ಈ ಅಭಿಪ್ರಾಯ ಒಪ್ಪಬಹುದಾದ ಅಂಶ

ಕೈಗಾರಿಕಾ ಸಂಯುಕ್ತ ಸಂಘವು (ಜಿ ಎಂ ಸಿ ಐ ಎಫ್ ಕೆ ಸಿ ಸಿ ಐ ಮತ್ತು ಸಿ ಐ ಐ) ಕೆಲ ತಿಂಗಳಿನ ಹಿಂದೆ ಹೆಚ್ ಟಿ ಕೈಗಾರಿಕೆಗಳ ಹೆಚ್ಚುವರಿ ವಿದ್ಯುತ್ ಬಳಕೆಯ ಬಗ್ಗೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಿತ್ತು ಇದರ ಪ್ರಕಾರ ಮುಂಗಡ ರೇವಣಿಯನ್ನು ದ್ವಿಮಾಸ (2 MMD) ದಂತೆ ಪಡೆಯುವುದು ಮತ್ತು ಬಿಲ್ಲುಗಳನ್ನು ತಿಂಗಳಿಗೆ ಎರಡು ಸಲ ಅಂದರೆ 15 ದಿವಸಗಳಿಗೆ ಒಮ್ಮೆ ನೀಡುವುದು ಆದರೆ ವಿದ್ಯುತ್ ನಿಯಂತ್ರಣಾ ಆಯೋಗ ಇದಕ್ಕೆ ಅನುಮೋದನೆಯನ್ನು ನೀಡಲಿಲ್ಲ ಆದ್ದರಿಂದ ಕವಿಪ್ರನಿನಿಯು ಈ ದಿಸೆಯಲ್ಲಿ ಮುಂದುವರೆಯಲು ಸಾಧ್ಯವಾಗಲಿಲ್ಲ ಕೈಗಾರಿಕಾ ಸಂಯುಕ್ತ ಸಂಘಗಳು ಅವರ ಪ್ರಸ್ತಾವನೆಯನ್ನು ಒಪ್ಪಿದಲ್ಲಿ ಒಂದು ದಿನಕ್ಕೆ 6 ರಿಂದ 7 ದ ಲ ಯೂ ಹೆಚ್ಚುವರಿ ಬಳಕೆಯ ಬಗ್ಗೆ ಆಶ್ವಾಸನೆಯನ್ನು ನೀಡಿದ್ದರು

ಇಂದಿನ ವಿದ್ಯುತ್ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಕೈಗಾರಿಕಾ ವಲಯದ ವಿದ್ಯುತ್ ಬಳಕೆಯನ್ನು ಈ ಮುಂಗಾರಿನ ಅವಧಿಯಲ್ಲಿ ಹೆಚ್ಚಿಸಲು ಹಲವು ದಿಟ್ಟ ಹೆಜ್ಜೆಗಳನ್ನು ತೆಗೆದುಕೊಳ್ಳಬೇಕು ಎನ್ನುವುದು ದಿಟವಾಗುತ್ತದೆ ಇದರಿಂದ

ವಿದ್ಯುತ್ ಸರಬರಾಜು ಕಂಪನಿಗಳು ಹೆಚ್ಚು ಹಣವನ್ನು ಪಡೆಯಲು ಸಹಾಯವಾಗುತ್ತದೆ ಮತ್ತು ಅಸಂಪ್ರದಾಯಕ ಇಂಧನ ಮೂಲ ವಿದುತ್ ಉತ್ಪಾದನಾ ಕೇಂದ್ರಗಳು ಅವರಿಗಿರುವ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಅನವು ಮಾಡಿಕೂಟ್ಟಂತಾಗುತ್ತದೆ ಆದ್ದರಿಂದ ಈ ಕೆಳಕಂಡ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ

ಅ) ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ರಾತ್ರಿ 10 00 ರಿಂದ ಬೆಳಗ್ಗೆ 6 00 ಗಂಟೆಯವರೆವಿಗೂ ಉಪಯೋಗಿಸಿದ ವಿದ್ಯುತ್ತಿಗೆ ಹೆಚ್ ಟಿ ಗ್ರಾಹಕರಿಗೆ ಅನ್ವಯವಾಗುವ ದರದ ಮೇಲೆ ಶೇ 10 00 ರಿಯಾಯಿತಿಯನ್ನು ನೀಡುವುದು (ಹೆಚ್ ಟಿ ಗ್ರಾಹಕರ ವಿದ್ಯುತ್ ಬಳಕೆಯನ್ನು ಪ್ರೋತ್ಸಾಹಿಸಲು ಈಗಾಗಲೇ ಒಂದು ಯೂನಿಟ್ಟಿಗೆ ರೂ 3 80 ರಂತೆ ಸರಬರಾಜು ಮಾಡುವ ವ್ಯವಸ್ಥೆ ಜಾರಿಯಲ್ಲಿದೆ ಈಗ ಪ್ರಸ್ತಾಪಿಸಿರುವ ರಿಯಾಯಿತಿಯು ಈ ವ್ಯವಸ್ಥೆಗೂ ರಾತ್ರಿ ವೇಳೆಯಲ್ಲಿ ಉಪಯೋಗಿಸುವ ವಿದ್ಯುತ್ತಿಗೆ ಅನ್ವಯವಾಗಬೇಕು)

ಆ) ವಿದ್ಯುತ್ ಸರಬರಾಜು ಕಂಪನಿಗಳು ಹೆಚ್ ಟಿ ಗ್ರಾಹಕರಿಂದ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳ ಅವಧಿಯಲ್ಲಿ ಉಪಯೋಗಿಸಿದ ಹೆಚ್ಚುವರಿ ವಿದ್ಯುತ್ತಿಗೆ ಹೆಚ್ಚುವರಿ ರೇವಣಿಯನ್ನು ಪಡೆಯದಿರಲು ಸೂಚನೆಯನ್ನು ನೀಡುವುದು

ಇ) ಗ್ರಾಮಾಂತರ ಫೀಡರುಗಳಿಗೆ ರಾತ್ರಿ 10 00 ರಿಂದ ಮರುದಿನ ಸಾಯಂಕಾಲ 6 00 ಗಂಟೆಯವರಿಗೆ ಸತತವಾಗಿ 20 ಗಂಟೆಗಳ ಕಾಳ 3 ಫೇಸ್ ವಿದ್ಯುತ್ ಸರಬರಾಜು ನೀಡುವುದು ಇದರಿಂದ ಗ್ರಾಮಾಂತರ ಕೈಗಾರಿಕೆಗಳು ಹೆಚ್ಚು ವಿದ್ಯುತ್ ಬಳಸಲು ಅನುವಾಗುತ್ತದೆ

ಈ) ಗ್ರಾಮಾಂತರ ಪ್ರದೇಶಗಳಿಗೆ ದಿನಂ ಪ್ರತಿ ರಾತ್ರಿ 6 00 ರಿಂ 10 00 ಗಂಟೆಯವರೆವಿಗೆ 4 ಗಂಟೆ ಒಂದು ಫೇಸ್ ಮತ್ತು ಮಿಕ್ಕ 20 ಗಂಟೆಗಳ ಅವಧಿ 3 ಫೇಸ್ ಸರಬರಾಜು ಮಾಡುವುದು ಹೀಗಾಗಿ ಗ್ರಾಮಾಂತರ ಪ್ರದೇಶಕ್ಕೆ 24 ತಾಸು ವಿದ್ಯುತ್ ಒದಗಿಸಲಾಗುವುದು

ಉ) ಪವನ ವಿದ್ಯುತ್ ಮತ್ತು ಕಿರುಜಲನ ವಿದ್ಯುತ್ ಉತ್ಪಾದನಾ ಕೇಂದ್ರಗಳಿಗೆ ವಿದ್ಯುತ್ ಉತ್ಪಾದನೆಯ ಬಗ್ಗೆ ಯಾವುದೇ ಮಿತಿಯನ್ನು ಹಾಕದಿರುವುದು ಆದರೆ ಸಕ್ಕರೆ ಕಾರ್ಖಾನೆಯ ಸಹ ವಿದ್ಯುತ್ ಉತ್ಪಾದನಾ ಕೇಂದ್ರಗಳು ಮತ್ತು ವ್ಯವಸಾಯ ರದ್ದಿ ಆಧಾರಿತ ಉತ್ಪಾದನಾ ಕೇಂದ್ರಗಳು ರಾತ್ರಿ 11 00 ರಿಂದ ಬೆಳಗ್ಗೆ 5 00 ಗಂಟೆಯವರಿಗೂ ಅವರ ಉತ್ಪಾದನೆಯನ್ನು ಶೇ 60 00 ಕ್ಕೆ ಮಿತಿಗೊಳಿಸುವುದು

ಅಧ್ಯಕ್ಷರು ಸದನದ ಕಾರ್ಯಕಲಾಪಗಳ ಸಲಹಾ ಸಭೆಯಲ್ಲಿ ತೀರ್ಮಾನವಾಗಿರುವಂತೆ ಈ ತಿಂಗಳು 28ನೇ ತಾರೀಖು ಸೋಮವಾರದಂದು ಬೆಳಿಗ್ಗೆ 11 00 ಗಂಟೆಗೆ ಸೇರುವಂತೆ ಈ ಸಭೆಯನ್ನು ಮುಂದೂಡಲಾಗಿದೆ

(ಸದನವು ಮಧ್ಯಾಹ್ನ 12 ಗಂಟೆ 29 ನಿಮಿಷಕ್ಕೆ ಮುಂದೂಡಲ್ಪಟ್ಟುಗೊಂಡು ಪುನಃ ದಿನಾಂಕ 28ನೇ ಜೂನ್ ಮಾಹೆ 2004ರ ಸೋಮವಾರದಂದು ಬೆಳಿಗ್ಗೆ 11 00 ಗಂಟೆಗೆ ಸೇರಲು ನಿಶ್ಚಯಿಸಿತು)

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ

ಸೋಮವಾರ 28ನೇ ಜೂನ್ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ) ರವರು

ಪೀಠವನ್ನು ಅಲಂಕರಿಸಿದ್ದರು

ಭಾಗ–I

1 ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ

(ಈ ಹಂತದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದ ಮಾನ್ಯ ಸದಸ್ಯರು ಆಂಗ್ಲ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸಲು ಪ್ರಾರಂಭಿಸಿದರು)

Sri Ivan Nigli (Nominated) Ivan Nigli having been nominated a Member of the Legislative Assembly

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) ತಾವು ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸಬೇಕು ತಾವು ಈ ರಾಜ್ಯದ ಶಾಸನ ಸಭೆಗೆ ನಾಮಕರಣಗೊಂಡಿದ್ದೀರಿ ಈ ರಾಜ್ಯದ ಭಾಷೆ ಕನ್ನಡ ಅದರ ಬಗ್ಗೆ ತಮಗೆ ಗೌರವ ಇರಬೇಕು ತಮಗೆ ಹೇಗೆ ಬರುತ್ತದೋ ಹಾಗೆ ಕನ್ನಡದಲ್ಲೇ ಮಾತನಾಡಿ ತಾವು ಇಂಗ್ಲಿಷ್‌ನಲ್ಲೇ ಮಾತನಾಡಬೇಕೆಂದಿದ್ದರೆ ಈ ಸದನಕ್ಕೆ ಬರುವ ಅವಶ್ಯಕತೆ ಇರಲಿಲ್ಲ ದಯವಿಟ್ಟು ಕನ್ನಡದಲ್ಲೇ ಪ್ರಮಾಣ ವಚನ ತಗೆದುಕೊಳ್ಳಿ

ಶ್ರೀ ಕೆ ಎಂ ಕೃಷ್ಣಮೂರ್ತಿ ಕನ್ನಡ ಮಾತ್ರ ಚೆನ್ನಾಗಿಯೇ ಮಾತನಾಡಬೇಕು ಹೇಗೇಗೋ ಮಾತನಾಡಿದರೆ ಅದು ಕನ್ನಡ ಆಗುವುದಿಲ್ಲ

ಅಧ್ಯಕ್ಷರು ಮಾನ್ಯ ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ

Sri Ivan Nigli (Nominated) I, Ivan Nigli having been nominated a member of the Legislative Assembly do swear in the name of god that I will bear true faith and allegiance to the constitution of India as by law established, that I will upheld the sovereignty and integrity of India and that I will faithfully discharge the duty upon which I am about to enter

(ಆದಾಗ್ಯೂ ಭಾರತ ಸಂವಿಧಾನದ 333ನೇ ಅನುಚ್ಛೇದದ ಮೇರೆಗೆ ಸನ್ಮಾನ್ಯ ರಾಜ್ಯಪಾಲರಿಂದ 12ನೇ ವಿಧಾನ ಸಭೆಗೆ ಸದಸ್ಯರಿಗೆ ನಾಮ ನಿರ್ದೇಶನಗೊಂಡಿರುವ **ಶ್ರೀ ಐವಾನ್ ನಿಗ್ಲಿರವರು** ಆಂಗ್ಲ ಭಾಷೆಯಲ್ಲಿ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು)

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ,.

ಅಧ್ಯಕ್ಷರು ಮಾನ್ಯ ವಾಟಾಳ್‌ರವರೇ, ನಾನು ತಮಗೆ ಅನಂತರ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಮಂಡನೆ

2 ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿ ಅವರ ಪರವಾಗಿ)

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ, 8(3)ರ ಪ್ರಕರಣದ ಮೇರೆಗೆ

1 2000ದ ಕರ್ನಾಟಕ ನಾಗರೀಕ ಸೇವಾ (ಕಾರ್ಯನಿರ್ವಹಣ ವರದಿಗಳ) ನಿಯಮಾವಳಿಯ ನಿಯಮ 3ಕ್ಕೆ ತಿದ್ದುಪಡಿವಾಡಿ ದಿನಾಂಕ 23 04 2004ರಂದು ಹೊರಡಿಸಲಾದ ಡಿಪಿಎಆರ್ 02 ಎಸಿಆರ್ 2003ನೇ ಸಂಖ್ಯೆಯ ಅಧಿಸೂಚನೆ.

1983ರ ಕರ್ನಾಟಕ ಶಿಕ್ಷಣ ಅಧಿನಿಯಮ (1995ರ ಕರ್ನಾಟಕ ಅಧಿನಿಯಮ-1) 145 (4)ರ ಪ್ರಕರಣದ ಮೇರೆಗೆ

2 1998ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಶಿಕ್ಷಣ ಸಂಸ್ಥೆಗಳಿಗೆ ಅನುದಾನ) ನಿಯಮಗಳ ನಿಯಮ 3ಕ್ಕೆ ತಿದ್ದುಪಡಿಮಾಡಿ ದಿನಾಂಕ 27 04 2004ರಂದು ಹೊರಡಿಸಲಾದ ಇಡಿ 127 ಸಿಇವಿ 2004ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉಪ ಮುಖ್ಯಮಂತ್ರಿ ಅವರ ಪರವಾಗಿ)

1957 ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಕಲಂ 39ರ ಪ್ರಕರಣದ ಮೇರೆಗೆ

3 ಆಇ:13 ಸಿಎಸ್ಎಲ್ 98 ದಿನಾಂಕ 29 08 1998ರಂದು ಹೊರಡಿಸಲಾದ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 31 03 2004ರಂದು ಹೊರಡಿಸಲಾದ ಆಇ.345.ಸಿಎಸ್ಎಲ್ 2003(1) ಸಂಖ್ಯೆಯ ಅಧಿಸೂಚನೆ,

4 ಆಇ 216.ಸಿಎಸ್ಎಲ್-2000(1) ದಿನಾಂಕ 14 08.2000ರಂದು ಹೊರಡಿಸಲಾದ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 31 03 2004ರಂದು ಹೊರಡಿಸಲಾದ ಆಇ 345 ಸಿಎಸ್ಎಲ್-2003(2)ನೇ ಸಂಖ್ಯೆಯ ಅಧಿಸೂಚನೆ

1965ರ ಕರ್ನಾಟಕ ಅಬಕಾರಿ ಕಾಯ್ದೆ 71(4)ರ ಪ್ರಕಣದ ಮೇರೆಗೆ

5 1967ರ ಕರ್ನಾಟಕ ಅಬಕಾರಿ (ಬಾಟ್ಲಿಂಗ್ ಆಫ್ ಲಿಕ್ಕರ್ಸ್) ನಿಯಮಾವಳಿಗಳ ನಿಯಮ 15ಕ್ಕೆ ತಿದ್ದುಪಡಿ ಹಾಗೂ ಹೊಸದಾಗಿ 15ಎ ಸೇರ್ಪಡೆಗೊಳಿಸಿ ದಿನಾಂಕ 06 04-2004ರಂದು ಹೊರಡಿಸಲಾದ ಎಫ್ಡಿ 10 ಪಿಇಎಸ್ 96(1)ನೇ ಸಂಖ್ಯೆಯ ಅಧಿಸೂಚನೆ,

6 1967ರ ಕರ್ನಾಟಕ ಅಬಕಾರಿ ಸನ್ನದು (ಸಾಮಾನ್ಯ ಷರತ್ತುಗಳು) ನಿಯಮಾವಳಿಯ ನಿಯಮ 11ಎ ಯನ್ನು ಹೊಸದಾಗಿ ಸೇರ್ಪಡೆಗೊಳಿಸಿ ದಿನಾಂಕ 06 04 2004ರಂದು ಹೊರಡಿಸುಲಾದ ಎಫ್ಡಿ 10 ಪಿಇಎಸ್ 96(2)ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) I(ಮುಖ್ಯಮಂತ್ರಿ ಅವರ ಪರವಾಗಿ)

1973ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿನಿಯಮ, 39(1)ರ ಮೇರೆಗೆ

1 ಕರ್ನಾಟಕ ನಗರ ನೀರು ಸರಬರಾಜು
ಮತ್ತು ಒಳಚರಂಡಿ ಮಂಡಳಿಯ 2001-02ನೇ ಸಾಲಿನ ವಾರ್ಷಿಕ ವರದಿ

1995ರ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧಿನಿಯಮ, ಕಲಂ 13(2) (3) ಮತ್ತು (6)ರ ಮೇರೆಗೆ

1 ಕರ್ನಾಟಕ ರಾಜ್ಯ ಮಹಿಳಾ ಆಯೋಗದ 2002-03ನೇ ಸಾಲಿನ ವಾರ್ಷಿಕ ವರದಿ

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ

1 ಹಾಸನ ಜಿಲ್ಲಾ ಪಂಚಾಯತ್‌ನ 1999–2000ನೇ ಸಾಲಿನ ವಾರ್ಷಿಕ ಲೆಕ್ಕಗಳ ಮತ್ತು ಪರಿಶೋಧನಾ ವರದಿ

2 ಉತ್ತರ ಕನ್ನಡ ಜಿಲ್ಲಾ ಪಂಚಾಯತ್, ಕಾರವಾರದ 2002–03ನೇ ಸಾಲಿನ ವಾರ್ಷಿಕ ಆಡಳಿತ ವರದಿ

3 ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 2000–01ನೇ ಸಾಲಿನ ವಾರ್ಷಿಕ ಲೆಕ್ಕಗಳ ಮತ್ತು ಆಡಿಟ್ ವರದಿಗಳನ್ನು ಮಂಡಿಸುತ್ತೇನೆ

II ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) ಅವರು

1956ರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿನಿಯಮ, 33(2),34(2), ಹಾಗೂ 354 ಪ್ರಕರಣದ ಮೇರೆಗೆ

1 ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿಯ 2002–03ನೇ ಸಾಲಿನ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

III (ಬೃಹತ್ ಹಾಗು ಮಧ್ಯಮ ಕೈಗಾರಿಕೆ, ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರ ಪರವಾಗಿ)

1956ರ ಕಂಪನಿ ಕಾಯಿದೆಯ, 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿ

2 ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತದ 2002–03ನೇ ಸಾಲಿನ 39ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ

IV ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) ಅವರು

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 45(2)ನೇ ಪ್ರಕರಣದ ಮೇರೆಗೆ

1 ಗುಲ್ಬರ್ಗಾ ವಿಶ್ವವಿದ್ಯಾಲಯದ 2001–02ನೇ ಮತ್ತು 2002–03ನೇ ಸಾಲುಗಳ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

V (ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ)

1956ರ ಕಂಪನಿ ಕಾಯಿದೆಯ, 619(ಎ) ಪ್ರಕರಣದ ಮೇರೆಗೆ

1 ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ 2002–03ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

VI (ಕೃಷಿ ಸಚಿವರು ಪರವಾಗಿ)

1956ರ ಕಂಪನಿ ಕಾಯಿದೆಯ, 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ನಿಯಮಿತ 2002–03ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
VII (ಪಶುಸಂಗೋಪನೆ ಮತ್ತು ವಕ್ಫ್ ಸಚಿವರ ಪರವಾಗಿ)
1956ರ ಕಂಪನಿ ಕಾಯಿದೆಯ, 619(ಎ) ಪ್ರಕರಣದ ಮೇರೆಗೆ

1 ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಹೆಬ್ಬಾಳ, ಬೆಂಗಳೂರು 2002–03ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

ಅಧ್ಯಕ್ಷರು ಎಲ್ಲಾ ಕಾಗದ ಪತ್ರಗಳನ್ನು ಸದನದ ಮುಂದೆ ಮಂಡಿಸಲಾಯಿತು

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಕುರಿತು

†**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)** ಮಾನ್ಯ ಅಧ್ಯಕ್ಷರೇ, ನಾನು ಹಿಂದೆ ಈ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೆ, ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಬಗ್ಗೆ ಸರ್ಕಾರ ಮಂದಗತಿಯ ಧೋರಣೆ ತಾಳುತ್ತಿದೆ, ಸರ್ಕಾರ ಪ್ರಮಾಣಿಕವಾದ ಪ್ರಯತ್ನ ಮಾಡುತ್ತಿಲ್ಲ ಎಂದು ನನಗೆ ಎಲ್ಲೋ ಒಂದು ಕಡೆ ಅನುಮಾನ ಬರುತ್ತಿದೆ ಇವತ್ತು ಉತ್ತರ ಕರ್ನಾಟಕದಲ್ಲಿ ಸತ್ಯಾಗ್ರಹ ಮತ್ತೆ ಪ್ರಾರಂಭವಾಗಿದೆ ವಕೀಲರುಗಳೆಲ್ಲಾ ನ್ಯಾಯಾಲಯವನ್ನು ಬಹಿಷ್ಕಾರ ಮಾಡಿದ್ದಾರೆ, ಮತ್ತು ಸತ್ಯಾಗ್ರಹವನ್ನು ಆರಂಭಿಸಿದ್ದಾರೆ ಸರ್ಕಾರ ಇದರ ಬಗ್ಗೆ ವಿಳಂಬ ಮಾಡುವುದರಿಂದ ಅದು ಬೇರೆ ದಾರಿಗೆ ತಲುಪತಕ್ಕಂತಹ ಚಿಂತನೆ ನಡೆಯುತ್ತಿದೆ ತಮಿಳುನಾಡು ಮತ್ತು ಕರ್ನಾಟಕದವರು ಇಬ್ಬರೂ ಒಂದೇ ಸಾರಿ ಹೈಕೋರ್ಟ್ ಸ್ಥಾಪನೆಗಾಗಿ ಮನವಿಯನ್ನು ಸಲ್ಲಿಸಿದ್ದರು ಆದರೆ ತಮಿಳುನಾಡಿನಲ್ಲಿ ಈಗಾಗಲೇ ಹೈಕೋರ್ಟ್ ಪೀಠ ಸ್ಥಾಪನೆಯಾಗಿದೆ ಕರ್ನಾಟಕದಲ್ಲಿ ವಿಳಂಬವಾಗುತ್ತಿದೆ ಇದಕ್ಕೆ ಕಾರಣವೇನು ಇದು ಬಹಳ ದೊಡ್ಡ ಸಮಸ್ಯೆಯಾಗಿ ಪರಿವರ್ತನೆಯಾಗುತ್ತಿದೆ 1956ರಲ್ಲಿ ಕರ್ನಾಟಕ ಏಕೀಕರಣವಾಯಿತು ಕರ್ನಾಟಕ ಏಕೀಕರಣಕ್ಕೋಸ್ಕರವಾಗಿ ಅನೇಕ ಹೋರಾಟಗಳು ನಡೆದು ತಪಸ್ಸಿನ ಬಲದಿಂದ ಕರ್ನಾಟಕ ಏಕೀಕರಣವಾಯಿತು ಕರ್ನಾಟಕ ಏಕೀಕರಣವಾಗಿದ್ದರೂ ಇನ್ನೂ ಉತ್ತರ ಕರ್ನಾಟಕ ಮತ್ತು ಹಳೆಯ ಮೈಸೂರು ಎನ್ನುವ ಭಾವನೆ ಇನ್ನು ಹೋಗಿಲ್ಲ ಭಾವನಾತ್ಮಕವಾಗಿ ಅದು ಇನ್ನು ಬೆಳೆದಿಲ್ಲ ಈ ಪರಿಸ್ಥಿರಿಯಲ್ಲಿ ಉತ್ತರ ಕರ್ನಾಟಕದ ಮೇಲೆ ನಿರಂತರವಾಗಿ ಏಟಿನ ಮೇಲೆ ಏಟು ಬೀಳುತ್ತಿದೆ ಉತ್ತರ ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಹೈದರಬಾದ್ ಕರ್ನಾಟಕವನ್ನು ಕಡೆಗಾಣಿಸಿದ್ದಾರೆ ಈ ಕಡೆ ಕೊಡಗು ಜಿಲ್ಲೆಯನ್ನೂ ಕೂಡ ಕಡೆಗಣಿಸಿದ್ದಾರೆ ಇದರ ಬಗ್ಗೆ ಯಾವುದೇ ಸರ್ಕಾರಗಳು ಬಂದರೂ ಪ್ರಾಮಾಣಿಕವಾಗಿ ಈ ಭಾಗಗಳ ಬೆಳಬಣಿಗೆ ಬಗ್ಗೆ ಮತ್ತು ಈ ಭಾಗಗಳ ಅಭಿವೃದ್ಧಿ ಬಗ್ಗೆ ಯಾವುದೂ ಚಿಂತನೆಯಾಗಿಲ್ಲ ಇಲ್ಲಿ ಹನುಮಂತಯ್ಯನವರು ಕಟ್ಟಿದ ವಿಧಾನಸೌಧ ಸಾಕಾಗಿತ್ತು ವಿಧಾನಸೌಧದ ಪಕ್ಕದಲ್ಲಿ 100 ಕೋಟಿ ರೂಪಾಯಿಯ ಮತ್ತೊಂದು ಸೌಧ ಬೇಕಾಗಿರಲಿಲ್ಲ ನೀವು ಹುಬ್ಬಳ್ಳಿ ಧಾರವಾಡದಲ್ಲಿ ಕಟ್ಟಿಸಬಹುದಾಗಿತ್ತು ಗುಲ್ಬರ್ಗದಲ್ಲಿ ಕಟ್ಟಿಸಬಹುದಾಗಿತ್ತು ಬೆಳಗಾಂನಲ್ಲಿ ಕಟ್ಟಿಸಬಹುದಾಗಿತ್ತು ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇಲ್ಲಿ ಇವರು ತಾರತಮ್ಯ ಮಾಡುತ್ತಿದ್ದಾರೆ

ಅಧ್ಯಕ್ಷರು ಮಾನ್ಯ ಹಿರಿಯ ಸದಸ್ಯರು ಯಾವ ವಿಚಾರದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೀರೋ ಅದರ ಬಗ್ಗೆ ನೇರವಾಗಿ ಹೇಳಿ, ಸರ್ಕಾರ ಅದಕ್ಕೆ ಪರಿಹಾರ ಕಂಡುಕೊಳ್ಳುತ್ತದೆ ದಯಮಾಡಿ ಬೇರೆ ಬೇರೆ ವಿಚಾರಗಳಿಗೆ ಹೋಗಬಾರದು

ಶ್ರೀ ವಾಟಾಳ್ ನಾಗರಾಜ್ ತಾರತಮ್ಯ ಏನಾಗಿದೆ ಎಂದರೆ, ಗಡಿನಾಡುಗಳಿಂದ ಜನ ಬರುತ್ತಿದ್ದಾರೆ ರಾಯಚೂರು, ಬುಲ್ಬರ್ಗಾ, ಬೆಳಗಾವಿ ಮತ್ತು ಬೀದರ್‌ನಿಂದ ಜನ ಬರುತ್ತಿದ್ದಾರ ಬೀದರ್ ಎಂದರೆ, ಕರ್ನಾಟಕದ ಬೀದರ್ ಇಲ್ಲವೆಂದು ತೀರ್ಮಾನವಾಗಿದೆ ಗುಲ್ಬರ್ಗಾ ಎಲ್ಲೋ ಒಂದು ಕಡೆ ಹೋಗಿದೆ ಈ ಪರಿಸ್ಥಿತಿ ಜನರಲ್ಲಿ ಕಾಡುತ್ತಿದೆ ನಾನು ತಮಗೆ ಹೇಳುತ್ತಿದ್ದೇನೆ, ಇದೇ ರೀತಿ ಪರಿಸ್ಥಿತಿ ಮುಂದುವರೆದರೆ ತೆಲಂಗಾಣ ಮಾದರಿ ಚಳುವಳಿ ಕರ್ನಾಟಕದಲ್ಲಿ ಕೂಡ ಪ್ರಾರಂಭವಾಗುತ್ತದೆ ಎನ್ನುವ ಎಚ್ಚರಿಕೆಯನ್ನು ನಾನು ಕೊಡುತ್ತಿದ್ದೇನೆ ಆದ್ದರಿಂದ ಕರ್ನಾಟಕ ಸರ್ಕಾರ ಇವತ್ತು ಯಾವ ಕಾರಣಕ್ಕಾಗಿ ಹೈಕೋರ್ಟ್ ಪೀಠ ಸ್ಥಾಪನೆ ವಿಚಾರದಲ್ಲಿ ವಿಳಂಬ ಮಾಡುತ್ತಿದೆ, ವಿಳಂಬಕ್ಕೆ ಕಾರಣವೇನು? ಇದನ್ನು ಸರ್ಕಾರ ನೇರವಾಗಿ ರಾಜ್ಯದ ಜನತೆಗೆ ತಿಳಿಸಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ ಮತ್ತು ಮಹತ್ವದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಈಗಾಗಲೇ ಧಾರವಾಡ ವಕೀಲರ ಸಂಘದ ಮಾನ್ಯ ಹಿರೇಮರ್‌ರವರು ಮತ್ತು ಅವರ ಸ್ನೇಹಿತರು ಅಲ್ಲಿ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ, ಮತ್ತು ಸರದಿಯ ಉಪವಾಸ ಸತ್ಯಾಗ್ರಹವನ್ನೂ ಕೂಡ ಪ್ರಾರಂಭ ಮಾಡಿದ್ದಾರೆ ಯಾವುದೇ ಸರ್ಕಾರವಾಗಲಿ ಜನತೆಯ ಅಭಿಪ್ರಾಯಗಳಿಗೆ ಮನ್ನಣೆಯನ್ನು ಕೊಡಬೇಕಾಗುತ್ತದೆ ದಿವಂಗತ ಜೆ.ಹೆಚ್ ಪಟೇಲರು ಮುಖ್ಯ ಮಂತ್ರಿಗಳಾದ ಸಂದರ್ಭದಲ್ಲಿ ಕೂಡ ನಾವು ಅಲ್ಲಿರುವಂತಹ ಕಟ್ಟಡಗಳನ್ನು ಈಗಾಗಲೇ ತೋರಿಸಿದ್ದೇವೆ. ಅನೇಕ ಬಾರಿ ದೆಹಲಿಯವರೆಗೆ ಹೋಗಿ ಈ ವಿಚಾರದಲ್ಲಿ ಮನವಿ ಪತ್ರವನ್ನು ಸಲ್ಲಿಸಿದ್ದೇವೆ ಶ್ರೇಷ್ಠ ನ್ಯಾಯಾಧೀಶರ ಒಂದು ಸಮಿತಿ ಕೂಡ ರಚನೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆ ದುರ್ದೈವದ ಸಂಗತಿ ಎಂದರೆ, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿಯೇ ಒಂದು ಸಹಮತವಾದ ಅಭಿಪ್ರಾಯ ಮೂಡಿ ಬರದೆ ಇರುವುದು ವಿಳಂಬಕ್ಕೆ ಒಂದು ಕಾರಣ ಕೂಡ ಆಗಿದೆ ಬೆಳಗಾವಿಯಲ್ಲಿ ಪೀಠ ಆಗಬೇಕೆಂದು ಕೆಲವರ ವಾದ, ಹುಬ್ಬಳ್ಳಿ ಧಾರವಾಡಗಳಲ್ಲಿ ಪೀಠ ಆಗಬೇಕೆನ್ನುವ ಬಹುದಿವಸಗಳ ಬೇಡಿಕೆ, ಬಳ್ಳಾರಿಯಲ್ಲಿ ಗಲಿ, ಗುಲ್ಬರ್ಗದಲ್ಲಿ ಆಗಲಿ, ಎನ್ನುವಂತಹ ದೊಡ್ಡದಾದ ಬೇಡಿಕೆ ಮತ್ತು ಹೋರಾಟಗಳು ನಡೆದಿರುವಂತಹ ಹಿನ್ನೆಲೆಯಲ್ಲಿ ಒಬ್ಬ ಮುಖ್ಯ ನ್ಯಾಯಾಧೀಶರು ನಿಮ್ಮ ನಿಮ್ಮಲ್ಲಿಯೇ, ಈ ರೀತಿಯಾದ ಒಮ್ಮತಾಭಿಪ್ರಾಯ ಬರದೆ ಇದ್ದಂತಹ ಸಂದರ್ಭದಲ್ಲಿ ಎಲ್ಲಿ ಕೇಂದ್ರ ಸ್ಥಾನ ಆಗಬೇಕೆಂದು ತಾವು ಪ್ರಯತ್ನ ಮಾಡಿ ಸಹಮತಕ್ಕೆ ಬನ್ನಿ ಎನ್ನುವಂತಹ ಮಾತಾಗಿತ್ತು ಅದಕ್ಕಾಗಿ ರಾಜಕೀಯ ಮುಂದಾಳುಗಳು ಮತ್ತು ಸಮಾಜ ಸೇವಾ ಕಾರ್ಯಕರ್ತರು, ವಕೀಲರು, ಮತ್ತು ನ್ಯಾಯಾವಾದಿಗಳು ಎಲ್ಲರನ್ನೂ ಕರೆದು ಈ ವಿಚಾರದಲ್ಲಿ ಚರ್ಚೆ ಮಾಡಿದ ನಂತರ, ಒಂದು ಸಹಮತಕ್ಕಾಗಿ ಈ ವಿಚಾರದಲ್ಲಿ ಎರಡು ಬಾರಿ ಚರ್ಚೆಗಳು ನಡೆದವು ಎರಡು ಸಾರಿ ಕರೆದಾಗ ಕೂಡ ಭಿನ್ನಾಭಿಪ್ರಾಯಗಳು ಹಾಗೆಯೇ ಮುಂದುವರೆದಿದ್ದವು ಅದಾದ ನಂತರ ಮೊನ್ನೆ ನನಗೆ ಗೊತ್ತಾಯಿತು, ಮಾನ್ಯ ಹಿರೇಮರ್‌ರವರು ಧಾರವಾಡ ವಕೀಲರ ಸಂಘದ ಅಧ್ಯಕ್ಷರು ಅಮರಣಾಂತರ ಉಪವಾಸ ಕೈಗೊಂಡಿದ್ದರು ಅವರನ್ನು ಆ ಕಾಲದಲ್ಲಿ ನಾನು ಮಂತ್ರಿ ಪರಿಷತ್ತಿನ ಪರವಾಗಿ ಹೋಗಿ ಅವರನ್ನು ಭಿನ್ನವಿಸಿಕೊಂಡು ಅವರು ಅಮರಣಾಂತ ಉಪವಾಸದಿಂದ ಹೊರಗೆ ಬರುವಂತಹ ರೀತಿಯಲ್ಲಿ ನೋಡಿ ಸತ್ಯಾಗ್ರಹಕ್ಕಾಗಿ ನಾವು ಬೆಂಬಲವನ್ನು ಕೂಡ ಕೊಟ್ಟಿದ್ದೇವೆ ಅವರ ಪ್ರಕಾರ ಈಗ ಯಾವುದೇ ಭಿನ್ನಾಭಿಪ್ರಾಯ ಇಲ್ಲ ಎಲ್ಲಿಯಾದರೂ ಹೈ ಕೋರ್ಟ್ ಪೀಠ ಇರಲಿ ಪರವಾಗಿಲ್ಲ ಎನ್ನುವ ರೀತಿಯಲ್ಲಿ ಅಭಿಪ್ರಾಯ ಮೂಡಿ ಬಂದಿದೆ ಎಂದು ಅವರು ಹೇಳುತ್ತಾರೆ ಆದರೆ ಈ ಸಮಸ್ಯೆ ನಾವು ಅಂದುಕೊಂಡಷ್ಟು

ಸುಲಭವಾಗಿ ಮೇಲ್ಮೋಟಕ್ಕೆ ಕಂಡು ಬಂದರೂ ಕೂಡ, ಆ ಸಮಸ್ಯೆ ಇನ್ನೂ ದೀರ್ಘವಾಗಿರುವುದರಿಂದ ತತ್ಕ್ಷಣದಲ್ಲಿ ಸರ್ಕ್ಯುಟ್ ಬೆಂಚ್‌ಗಳನ್ನು ಮಾಡಬೇಕೆನ್ನುವಂತಹ ವಾದ ಕೂಡ ಇದೆ ಒಂದು ಗುಲ್ಬರ್ಗಾದ ಪ್ರದೇಶದಲ್ಲಿ ಮತ್ತೊಂದು ಧಾರವಾಡದ ಕಡೆ ಆಗಬೇಕೆಂಬ ವಾದ ಕೂಡ ಇದೆ ಸರ್ಕ್ಯುಟ್ ಬೆಂಚನ್ನು ಎಲ್ಲಿ ಮಾಡಬೇಕೆಂಬ ಬಗ್ಗೆ ನಿರ್ಧಾರ ಮಾಡುವುದಕ್ಕೆ ಆಯವ್ಯಯದಲ್ಲಿ ಹಣಕಾಸನ್ನು ಒದಗಿಸಿಕೊಡಬೇಕೆಂಬ ಬೇಡಿಕೆಯನ್ನೂ ಕೂಡ ಇಟ್ಟಿದ್ದಾರೆ ಈ ವಿಚಾರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಬಹಳ ಮುಕ್ತ ಮನಸ್ಸಿನವರು ಇದ್ದಾರೆ, ಮತ್ತು ಬಂದಿರತಕ್ಕಂತಹ ಎಲ್ಲರಿಗೂ ಕೂಡ ಪ್ರತಿ ಸಂದರ್ಭದಲ್ಲಿ ನಾವು ಬದ್ಧರಾಗಿದ್ದೇವೆ, ಉತ್ತರ ಕರ್ನಾಟಕದ ಭಾಗದಲ್ಲಿ ಒಂದು ಹೈಕೋರ್ಟ್ ಪೀಠ ಆಗಲೇಬೇಕಾಗಿದೆ ನಮ್ಮ ಮುಖ್ಯವಾದ ಉದ್ದೇಶ ನ್ಯಾಯ ದೊರಕಿಸುವಲ್ಲಿ ವಿಳಂಬವಾಗತಕ್ಕಂಥದ್ದೂ ಕೂಡ ನ್ಯಾಯವನ್ನು ನಿರಾಕರಿಸಿದಂತಾಗುತ್ತದೆ ಅಂಥದ್ದರಲ್ಲಿ ನ್ಯಾಯದ ವಿಳಂಬ ಆಗಬಾರದು ಮತ್ತು ಅದು ದುಬಾರಿ ಕೂಡ ಆಗಬಾರದು ಜನಸಾಮಾನ್ಯರ ಬಾಗಿಲಿಗೆ ನ್ಯಾಯ ಹೋಗಬೇಕೆಂಬ ಲೆಕ್ಕಾಚಾರ ಇರಬೇಕೇ ವಿನಃ ಅಲ್ಲಿ ಎಷ್ಟು ಕಡತಗಳಿವೆ, ಎಷ್ಟು ವಿಲೇವಾರಿ ಆಗುವಂತಹ ಕೇಸುಗಳು ಬಾಕಿ ಇವೆ, ಅದಕ್ಕಾಗಿ ಬರುವಂತಹ ಖರ್ಚು ಏನು ಎನ್ನುವುದಕ್ಕಿಂತ ಹೆಚ್ಚಾಗಿ ನ್ಯಾಯವನ್ನು ಜನಸಾಮಾನ್ಯರಿಗೆ ದೊರಕಿಸಿ ಕೊಡುವ ಕಾರಣಕ್ಕಾಗಿ ಭಾರತ ದೇಶದ ವಿವಿಧ ಪ್ರದೇಶಗಳಲ್ಲಿ ಈ ರೀತಿಯಾದ ಪೀಠಗಳಿವೆ ಆ ರೀತಿಯಾದ ಒಂದು ಪೀಠವನ್ನು ಬಹು ದೊಡ್ಡದಾದ ಕರ್ನಾಟಕದಲ್ಲಿ ಉತ್ತರ ಕರ್ನಾಟಕದಲ್ಲಿ ಆಗಲೇಬೇಕೆಂಬ ತಮ್ಮ ಕಳಕಳಿ ಏನಿದೆ ಅದಕ್ಕೆ ಸರ್ಕಾರ ಬದ್ಧವಾಗಿದೆ ಮುಖ್ಯ ಮಂತ್ರಿಗಳೂ ಕೂಡ ಈ ವಿಚಾರದಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ ಇವತ್ತು ಅಥವಾ ನಾಳೆ ಒಳಗಾಗಿ ಅವರು ಮುಖ್ಯ ನ್ಯಾಯಾಧೀಶರನ್ನು ಕರೆದು ಈ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತಾರೆ, ಉಪ ಮುಖ್ಯ ಮಂತ್ರಿಗಳು ಮಂಡಿಸುವಂತಹ ಬಜೆಟ್‌ನಲ್ಲಿ ಕೂಡ ಈ ವಿಚಾರದಲ್ಲಿ ಅವರು ಚರ್ಚೆ ಮಾಡಿ ನಿರ್ಧಾರ ತೆಗೆದುಕೊಳ್ಳುವಂಥದ್ದು ಇದೆ ಸರ್ಕಾರದ ಪರವಾಗಿ ಏನೆಲ್ಲಾ ಕಾರ್ಯಕ್ರಮಗಳನ್ನು ಮಾಡಬೇಕು ಅವೆಲ್ಲವನ್ನೂ ಮಾಡಿದ್ದೇವೆ ಮುಂದೆ ಕೂಡ ಮಾಡುವಂತಹವರು ಇದ್ದೇವೆ ನಿಮ್ಮೆಲ್ಲರ ಸಹಕಾರದ ಮೂಲಕ ನಾವು ಮತ್ತೆ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರುವಂತಹ ಕೆಲಸವನ್ನು ಖಂಡಿತವಾಗಿ ಮಾಡುತ್ತೇವೆ ಈ ವಿಚಾರದಲ್ಲಿ ನಮ್ಮ ಪ್ರಮಾಣಿಕತೆಯನ್ನಾಗಲಿ, ಆಗಲೇಬೇಕೆನ್ನುವ ಜರೂರರು ವಿಚಾರದಲ್ಲಿ ಹಿಂಜರಿಯುವ ಪ್ರಶ್ನೆ ಇಲ್ಲವೇ ಇಲ್ಲ ಎನ್ನುವ ಮಾತನ್ನು ನಾಣು ಸರ್ಕಾರದ ಪರವಾಗಿ ಮಾನ್ಯ ಸದಸ್ಯರಿಗೆ ಹೇಳುತ್ತೇನೆ ಉಳಿದಿರತಕ್ಕಂತಹ ವಿಚಾರ ಏನೆಂದರೆ, ಉತ್ತರ ಕರ್ನಾಟಕ, ಬೀದರ್, ಮೊದಲಾದಬುಗಳ ಬಗ್ಗೆಯೂ ಕೂಡ ಮಾನ್ಯ ಮಂತ್ರಿಗಳು ಈಗಾಗಲೇ ನಂಜುಂಡಪ್ಪನವರ ವರದಿಯ ಆಧಾರದ ಮೇಲೆ 8,000 ಕೋಟಿ ರೂಪಾಯಿಗಳು ಪ್ರತಿ ವರ್ಷ ನಾವು ಆ ಭಾಗಕ್ಕೆ ಖರ್ಚು ಮಾಡುತ್ತಾ ಹೋಗುಬೇಕಾಗುತ್ತದೆ ಅದಕ್ಕೆ ಬೇಕಾಗಿರತಕ್ಕಂತಹ ಸಂಪನ್ಮೂಲಗಳ ರಚನೆಯಾಗಬೇಕಾಗಿದೆ ಒಂದು ಚಿಕ್ಕದಾದ ಹೆಜ್ಜೆ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಿರತಕ್ಕಂಥದ್ದು ಅದೇ ರೀತಿಯಾಗಿ ಬೀದರ್‌ನಲ್ಲಿರತಕ್ಕಂತಹ ಪಶು ವಿಶ್ವವಿದ್ಯಾನಿಲಯವನ್ನು ಪಶುಸಂಗೋಪನೆ ಇಲಾಖೆ ಮೂಲಕ ಪ್ರಾರಂಭ ಮಾಡಿ, ಬೀದರ್‌ನಲ್ಲಿರತಕ್ಕಂಥ ಕಾಲೇಜನ್ನು ಮೇಲ್ದರ್ಜೆಗೇರಿಸಿ ಒಂದು ವಿಶ್ವವಿದ್ಯಾನಿಲಯವನ್ನು ಪ್ರಥಮ ಬಾರಿಗೆ ಆ ಭಾಗದಲ್ಲಿ ಮಾಡಿರತಕ್ಕಂಥದ್ದೂ ಕೂಡ ತಮಗೆ ಗೊತ್ತಿದೆ

11 30 ಎಎಂ

ಆದರೆ ಇಷ್ಟೆಲ್ಲಾ ಹೇಳಿದಾಗ ಆಗಲೇ ಬೇಕಾಗಿರತಕ್ಕಂಥ ಕೆಲಸ ಇರುವುದರಿಂದ ಡಾ ನಂಜುಂಡಪ್ಪನವರ ವರದಿಯನ್ನು ನಮ್ಮ ಸಂಪನ್ಮೂಲಗಳ ಇತಿಮಿತಿಯಲ್ಲಿ ಖಂಡಿತವಾಗಿ ಕೂಡ

ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಮುಂಬಯಿ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಅನಭಿವೃದ್ಧಿ ಪ್ರದೇಶಗಳಿಗೆ ಹೆಚ್ಚಿನ ಪ್ಯಾಕೇಜ್ ಅನ್ನು ಅದಕ್ಕೆ ಬೇಕಾದಂತಹ ಹಣಕಾಸನ್ನು ಒದಗಿಸುವಂತಹ ಯೋಜನೆಯನ್ನು ನಾನು ಮಾಡಿದ್ದೇನೆ, ಅದನ್ನು ಕಾರ್ಯರೂಪಕ್ಕೆ ತರುತ್ತೇವೆಂದು ನಿನ್ನೆ ಕೂಡ ಹೇಳಿದ್ದಾರೆ ಆದುದರಿಂದ ಸರ್ಕಾರದ ಪ್ರಾಮಾಣಿಕತೆ ಬಗ್ಗೆ ಸಂಶಯ ಪಡತಕ್ಕಂಥದಲ್ಲ ನಿಮ್ಮ ಜೊತೆಗೆ ನಮ್ಮ ಸಹಮತ ಇದೆ ಎನ್ನುವಂತಹ ಮಾತನ್ನು ಕೂಡ ತಮ್ಮ ಅಪ್ಪಣೆ ಮೂಲಕ ಹೇಳುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ನಾನು ಮುಗಿಸುತ್ತೇನೆ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಇದು ಬೆಳಗಾಂನಲ್ಲಿ ಆಗಬೇಕೇ ಅಥವಾ ಗುಲ್ಬರ್ಗದಲ್ಲಿ ಆಗಬೇಕು ಎನ್ನುವಂತಾದ್ದು ಅಲ್ಲಿ ಜಿಜ್ಞಾಸೆ ಇವತ್ತು ಇಲ್ಲ ಇವತ್ತು ಅವರು ಒಮ್ಮತದಲ್ಲಿ ಇದ್ದಾರೆ ಅವರಿಗೆ ಬೇಕಾಗಿರತಕ್ಕಂಥಾದ್ದು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಒಮದೆ ಒಂದು ಎಲ್ಲಾದರೂ ಮಾಡಿ ಆ ಪ್ರಶ್ನೆ ಇಲ್ಲ ಆದರೆ ಇವತ್ತು ವಿಳಂಬ ಆಗುವುದಕ್ಕೆ ಕಾರಣವೇನು? ಇದು ಉದ್ದೇಶಪೂರ್ವಕವಾಗಿ ಎಲ್ಲೋ ಒಂದು ಕಡೆ ಪಿತೂರಿ ನಡೆಯುತ್ತಿದೆ ತಮಿಳುನಾಡಿನಲ್ಲಿ ಆಯಿತಲ್ಲ, ಇಲ್ಲಿ ಏಕೆ ಆಗಲಿಲ್ಲ? ತಮಗೆ ಹೇಳುತ್ತೇನೆ, ಮುಖ್ಯ ನ್ಯಾಯಾಧೀಶರಾಗಿ ಮಾನ್ಯ ಶ್ರೀ ಡಿ ಎಂ ಚಂದ್ರಶೇಖರ್ ಇದ್ದರು ಆಗಲೇ ಹೈಕೋರ್ಟ್ ಪೀಠ ಉತ್ತರ ಕರ್ನಾಟಕಕ್ಕೆ ಆಗಬೇಕೆಂದು ತೀರ್ಮಾನವಾಗಿದೆ ಈಗ ಒಂದು ಉಪಸಮಿತಿ ಕೂಡ ನೇಮಕವಾಯಿತು ಆ ಉಪಸಮಿತಿ ಕೂಡ ಸಂಪೂರ್ಣವಾಗಿ ಹೈಕೋರ್ಟ್ ಪೀಠ ಉತ್ತರ ಕರ್ನಾಟಕದಲ್ಲಿ ಆಗಬೇಕೆಂದು ಆಗಿದೆ. ಇಷ್ಟೆಲ್ಲಾ ವ್ಯವಸ್ಥೆ ಇದ್ದರೂ ಕೂಡ ಉತ್ತರ ಕರ್ನಾಟಕದ ಬಗ್ಗೆ ಮಾನ್ಯ ಸಂಸದೀಯ ಸಚಿವರು ಏನು ಹೇಳಿದರು ಆ ವಿಚಾರವನ್ನು, ಇದೇ ಉಪದೇಶವನ್ನು ಈ ಸದನದಲ್ಲಿ ಹೇಳುತ್ತಾ ಬಂದಿದ್ದಾರೆ. ಇದರ ಬಗ್ಗೆ ಸ್ಪಷ್ಟವಾದಂತಹ ನಿಲುವು ಇಲ್ಲ ಒಂದು ಸಾರಿ ಸದನ ಆರಂಭವಾಯಿತೆಂದರೆ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡುವುದು, ಅಲ್ಲಿಂದ ಬರುವುದು ಅಲ್ಲಿಗೆ ಮುಗಿಯಿತು ಈಗಾಗಲೇ ಪಶುಸಂಗೋಪನಾ ಇಲಾಖೆ, ಅದೇ ದನದ ಕೊಟ್ಟಿಗೆ ಅಲ್ಲಿ ಒಂದು ಆರಂಭವಾಗಿದೆ ಉತ್ತರ ಕರ್ನಾಟಕದ ಬೆಳವಣಿಗೆ ಮುಗಿಯಿತ್ತಾ? ಖಂಡಿತಾ ಇಲ್ಲ ಡಾ ನಂಜುಂಡಪ್ಪನವರ ವರದಿ ಮೂಲೆಗುಂಪು ಮಾಡಿದ್ದಾರೆ ನಾಣು ತಮಗೆ ಹೇಳುತ್ತಿದ್ದೇನೆ, ನನಗೆ ಇವತ್ತು ಸರ್ಕಾರದ ನೀತಿಯ ಬಗ್ಗೆ ನಂಬಿಕೆ ಇಲ್ಲ ಆದುದರಿಂದ ಉತ್ತರ ಕರ್ನಾಟಕಕ್ಕೆ ಹೈಕೋರ್ಟ್ ಪೀಠ ಆಗಬೇಕು, ಹಾಗು ಡಾ ನಂಜುಂಡಪ್ಪ ಅವರ ವರದಿ ಸೇರಿದಂತೆ ಅನುಷ್ಠಾನ ಮಾಡಬೇಕೆಂದು ಹೇಳಿ ನಾನು ಧರಣಿ ಮಾಡುತ್ತೇನೆ

ಸಭಾಧ್ಯಕ್ಷರು ವಾಟಾಳ್ ನಾಗರಾಜ್ ಅವರೆ, ತಾವು ಈ ವಿಚಾರವನ್ನು ಬೇರೆ ರೂಪದಲ್ಲಿ ಪ್ರಸ್ತಾಪ ಮಾಡಬಹುದು ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ ಆಗ ಹೈಕೋರ್ಟ್ ಪೀಠದ ಬಗ್ಗೆ ಮಾತನಾಡಿ

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಆಸನವನ್ನು ಬಿಟ್ಟು ಧರಣಿ ಮಾಡಲು ಭಾವಿಗೆ ಬಂದು ಕುಳಿತರು)

(ಅ) ವಿಷಯ ಚಿಕ್ಕಮಗಳೂರು ಹಾಗೂ ಇತರ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ನಕ್ಸಲೈಟ್ ಹಾವಳಿ ಬಗ್ಗೆ

†ಶ್ರೀ ಸಿ ಟಿ ರವಿ (ಚಿಕ್ಕಮಗಳೂರು) ಮಾನ್ಯ ಅಧ್ಯಕ್ಷರೆ, ಪಶ್ಚಿಮ ಘಟ್ಟದ ಪ್ರದೇಶದಲ್ಲಿ, ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ ಭಾಗದಲ್ಲಿ ನಕ್ಸಲೈಟ್ ಹಾವಳಿ ಗಂಭೀರವಾಗಿದೆ ಜನ ಆತಂಕದ ಸ್ಥಿತಿಯಲ್ಲಿ ಬದುಕಬೇಕಾದಂತಹ ಒಂದು ವಾತಾವರಣ ಇದೆ ಹಾಡುಹಗಲೇ ಅವರು

ಬಂದು ನಾಗರೀಕರಿಗೆ ಬೆದರಿಗೆ ಒಡ್ಡುತ್ತಿದ್ದಾರೆ ನಮ್ಮ ಪರವಾಗಿ ನಿಂತುಕೊಳ್ಳದೆ ಇದ್ದರೆ, ನೀವು ನಮಗೆ ತಿಂಗಳಿಗೆ ಇಷ್ಟು ಎಂದು ಫಿಕ್ಸ್ ಮಾಡಿಕೊಡದೇ ಹೋದರೆ ನಿಮ್ಮನ್ನು ಇಲ್ಲಿ ಬದುಕುವುದಕ್ಕೆ ಬಿಡುವುದಿಲ್ಲ ಎನ್ನುವಂತಹ ಬೆದರಿಕೆಯನ್ನು ಮಾಡುತ್ತಿದ್ದಾರೆ ಅದರ ಬಗ್ಗೆ ಪೊಲೀಸ್ ರಾಣೆಯಲ್ಲಿ ದೂರುಗಳು ದಾಖಲಾಗಿದ್ದವು ಆದರೆ ಸರ್ಕಾರದ ದ್ವಂದ್ವ ನೀತಿಯಿಂದಾಗಿ ಅಲ್ಲಿರತಕ್ಕಂಥ ಗಿರಿಜನರು ಮೂಲನಿವಾಸಿಗಳು ಅನಿವಾರ್ಯವಾಗಿ ಈ ನಕ್ಸಲೀಯರಿಗೆ ಬೆಂಬಲಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆ ಗಿರಿ ಜನರಿಗೆ ಈ ಕಡೆ ಪರ್ಯಾಯ ವ್ಯವಸ್ಥೆಯನ್ನು ಮಾಡದೆ, ಆ ಕಡೆ ಾಗರೀಕರ ಸೌಲಭ್ಯಕ್ಕೂ ಕತ್ತರಿ ಹಾಕಿ, ನಕ್ಸಲೀಯರನ್ನು ಬೆಳೆಸತಕ್ಕಂಥ ಕೆಲಸವನ್ನು ಸರ್ಕಾರವೇ ಪರೋಕ್ಷವಾಗಿ ಮಾಡುತ್ತಿದೆ ಹಾಗಾಗಿ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದಂತಹ ಮಾನ್ಯ ಚಕ್ರವರ್ತಿ ಅವರು ಒಂದು ವರದಿ ಹಾಗೂ ಭಕವಸೆಯನ್ನು ಕೊಟ್ಟಿದ್ದರು ಅದೇನೆಂದರೆ ಮೂಲಭೂತ ಸೌಕರ್ಯಗಳು ಮತ್ತು ಪರ್ಯಾಯ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದರು ಅದೂ ನೆನೆಗುದಿಗೆ ಬಿದ್ದಿರುವುದರಿಂದ, ಸರ್ಕಾರವೇ ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಳ್ಳ ಬೇಕಾದಂತಹ ಸ್ಥಿತಿ ನಿರ್ಮಾಣವಾಗಬಹುದು ಹಾಗಾಗಿ ಅದರ ಬಗ್ಗೆ ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ, ನಕ್ಸಲೀಯರ ಚಟುವಟಿಕೆಯನ್ನು ಹತ್ತಿಕ್ಕುವಂತಹ ಕ್ರಮವನ್ನು ಕೈಗೊಳ್ಳಬೇಕು ಮತ್ತು ಏಕಕಾಲದಲ್ಲಿ ಮೂಲ ನಿವಾಸಿಗಳಿಗು ಗಿರಿ ಜನರಿಗೂ ಕೂಡ ಮೂಲಭೂತ ಸೌಲಭ್ಯವನ್ನು ಮತ್ತು ಪರ್ಯಾಯ ವ್ಯವಸ್ಥೆಗಾಗಿ ಯೋಜನೆ ಮಾಡಬೇಕೆಂದು ವಿನಂತಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ ಮಾಣ್ಯ ಅಧ್ಯಕ್ಷರೆ, ಬಹಳ ಹಿಂದೆ ನಕ್ಸಲ್‌ಬರಿ ಎನ್ನುವಂತಹ ಪ್ರದೇಶದಲ್ಲಿ ಕನುಸನಾಯಿರ ಅವರ ಮೂಲಕವಾಗಿ ಈ ಒಂದು ವಾದ ಮತ್ತು ಅವರದೇ ಆದಂತಹ ಕನಸಿನ ರಾಜ್ಯವನ್ನು ಕಟ್ಟುವಂತಹ ಪ್ರಯತ್ನ ಆ ಕಾಲದಲ್ಲಿ ಆಯಿತು ಅದೇ ರೀತಿ ಸೀತಾರಾಮು ರಾಜು ಅವರು ಪೀಪಲ್ಸ್ ವಾರ್ ಗ್ರೂಪ್ ಮಾಡಿಕೊಂಡಿದ್ದರು ಮತ್ತು ಅದಕ್ಕಿಂತ ಮುಂಚಿತವಾಗಿ ತರ್ಮಿಳಾ ನಾಗಿರೆಡ್ಡಿ ಅವರು ಈ ಪ್ರಜಾಪ್ರಭುತ್ವದ ಹಾದಿಯಲ್ಲಿ ಹೋದರೆ ಬಡವರ ಬಡತನವನ್ನು ನೀಗಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಹಿಂಸೆಯ ಮೂಲಕವಾಗಿ ಒಂದು ಕ್ರಾಂತಿಯನ್ನು ಈ ದೇಶದಲ್ಲಿ ತರಬೇಕು ಎನ್ನುವ ಕಾರಣಕ್ಕಾಗಿ ಕೂಡ ಆ ಪ್ರಯತ್ನವನ್ನು ಅವರು ಮಾಡಿದರು ಮುಂದೆ ಈ ಪ್ರಯತ್ನದಿಂದ ಪೊಲೀಸರನ್ನು ಕೊಲ್ಲುವುದರಿಂದ ಅಥವಾ ಮುಗ್ಧ ಜನರನ್ನು ಕೊಲ್ಲುವುದರಿಂದಲ್ಲೋ ಈ ಕೆಲಸ ಕಾರ್ಯಗಳು ಬಹೆ ಹರಿಯುವುದಿಲ್ಲವೆನ್ನುವ ಕಾರಣಕ್ಕೆ ಅನೇಕ ಜನ ಶರಣಾಗತಿಯಾಗಿರತಕ್ಕಂಥಾದ್ದು ಮತ್ತು ಹಿಂಸೆಯ ಮಾರ್ಗವನ್ನು ಬಿಟ್ಟು ಬೇರೆ ಕಡೆಗೆ ಬಂದಿರುವುದನ್ನು ನಾವು ಕಂಡಿದ್ದೇವೆ ಈಗ ಮಾನ್ಯ ಸದಸ್ಯರು ನಕ್ಸಲೈಟ್ ಬಗ್ಗೆ, ಅವರಿಗೆ ನೀವು ಹೆಚ್ಚು ಬೆಂಬಲವನ್ನು ಕೊಡುತ್ತಿದ್ದೀರಿ ಎನ್ನುವಂತಹ ಮಾತನ್ನು ಹೇಳಿದರು ಇಲ್ಲಿ ಬೆಂಬಲದ ಪ್ರಶ್ನೆಯಲ್ಲ ಇದು ಸಿದ್ಧಾಂತದ ಪ್ರಶ್ನೆ, ಅಲ್ಲಿ ತಪ್ಪಾದಂತಹ ಗ್ರಹಿಕೆಗಳ ಮೂಲಕ, ನಂಬಿಕೆಗಳ ಮೂಲಕ ಅವರು ಹೋರಾಡುತ್ತಾರೆ ಚಂದಲವಾಲಿಯ ಡಕಾಯಿತರು ಎಂದು ತಮ್ಮನ್ನು ತಾವು ಗುರುತಿಸಿಕೊಂಡಿರತಕ್ಕಂಥವರು ಅಲ್ಲ ಅಥವಾ ನೀವು ಹೇಗೆ ದತ್ತಪೀರದ ಬಗ್ಗೆ ಹೋರಾಟವನ್ನು ಮಾಡುತ್ತೀರಿ, ನಿಮ್ಮದೆ ಆದಂತಹ ಹಿಂದೂತ್ವದ ಬಗ್ಗೆ, ತಮ್ಮದೇ ಆದಂತಹ ವಾಚಾರಿಕವಾದಂತಹ ನಿಲುವೇನಿದೆ, ಅದೇರೀತಿ ನಕ್ಸಲೆಬರಿ ತಮ್ಮದೇ ಆದಂತಹ ಹೋರಾಟಕ್ಕೆ ಸಂಬಂದಪಟ್ಟಿರತಕ್ಕಂಥಾದ್ದು ಕೂಡ ತಮ್ಮದೇ ಆಗಿರತಕ್ಕಂಥ ವೈಚಾರಿಕ ನಿಲುವಿದೆ ತಾವು ಅಹಿಂಸಾ ಮಾರ್ಗದಲ್ಲಿ ಇದನ್ನು ಮಾಡುತ್ತೇವೆಂದು ಹೇಳುವಂತಹ ಮಾತನ್ನು ಹೇಳುತ್ತಿರುತ್ತೀರಿ ಒಮ್ಮೊಮ್ಮೆ ಅಹಿಂಸೆ ಮಾರ್ಗ ಇರಲಿ ಬಿಡಲಿ, ನಾವು ಅದನ್ನು ಮಾಡುತ್ತೇವೆ

ಎಂದು ಹೇಳುತ್ತೀರಿ ಒಮ್ಮೆ ರಾಮಮಂದಿರ ಕಟ್ಟುವ ವಿಚಾರ ಬಂದಾಗ ಸುಪ್ರೀಂ ಕೋರ್ಟ್ ಇದರ ಬಗ್ಗೆ ತೀರ್ಮಾನ ಕೊಡಬೇಕಾದಂತಹ ಅಗತ್ಯ ಇಲ್ಲ ಎನ್ನುವಂತಹ ಮಾತನ್ನು ಹೇಳುತ್ತೀರಿ ಅದರೂ ಕೂಡ ನಿಮ್ಮನ್ನು ಮನವೊಲಿಸಿಕೊಳ್ಳುವಂತಹ ರೀತಿಯಲ್ಲಿ ನಾವು ಸಂಧಾನಗಳನ್ನು ಮಾಡುತ್ತಿರುತ್ತೇವೆ. ಕಾನೂನಿಗೆ ಅನುಗುಣವಾಗಿ ಕಾರ್ಯಕ್ರಮಗಳು ಆಗಬೇಕಾಗುತ್ತದೆ ನ್ಯಾಯಾಂಗ ಕೊಡುವಂತಹ ತೀರ್ಪನ್ನು ಶಾಸಕಾಂಗ ಮತ್ತು ಕಾರ್ಯಾಂಗಗಳು ಜಾರಿಗೊಳಿಸಬೇಕೆಂದು ನಾವು ತೀರಾ ಬಾಹಿರವಾಗಿ ಕಾಣಬೇಕಾದ್ದಿಲ್ಲ ಹಿಂಸೆಯ ಮಾರ್ಗದಿಂದ ಹೊರಗೆ ಬನ್ನಿ. ತಪ್ಪು ಅಭಿಪ್ರಾಯದ ಮೂಲಕ ತಾವು ಬಂದಿದ್ದೀರಿ ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಜನಮನವನ್ನು ಒಲಿಸಿಕೊಳ್ಳವುದರ ಮೂಲಕವಾಗಿ ತಾವು ಸದನದ ಒಳಗಡೆ ಬರುವುದರ ಮೂಲಕ, ನಾವು ಆರ್ಥಿಕ ಸಂಪನ್ಮೂಲವನ್ನು ಹೆಚ್ಚಿಸುವುದರ ಮೂಲಕ ಅಲ್ಲಿರುವಂತಹ ಅಸಮಾನತೆಯನ್ನು, ಅಲ್ಲಿರುವಂತಹ ನಿಕೃಷ್ಟತೆ ಇವುಗಳನ್ನು ತೆಗೆದು ಹಾಕಬೇಕು ಎನ್ನುವಂತಹ ಪ್ರಯತ್ನ ಒಂದು ಕಡೆ ಮಾಡುತ್ತಿದ್ದೇವೆ ಎಲ್ಲರ ಜೊತೆ ಮಾತನಾಡತಕ್ಕಂಥಾದ್ದು ಕೂಡ ಇದೆ ತಮಗೂ ಕೂಡ ಅದು ಗೊತ್ತಿದೆ ಹಿಂದೆ ಮಾನ್ಯ ವಾಜಪೇಯಿ ಅವರು ಪ್ರಧಾನಿಗಳಾದಂತಹ ಸಂದರ್ಭದಲ್ಲಿ ಪಾಕಿಸ್ತಾನದವರ ಜೊತೆ ಅನೇಕ ಸಲ ಮಾತುಕತೆ ನಡೆದಾಗ ನಮ್ಮವರೇ ಆದಂತಹ ಸಹೋದರರು ತಪ್ಪು ಅಭಿಪ್ರಾಯ ಮೂಲಕ ಹಿಂಸೆಗೆ ತಳ್ಳುತ್ತಿದ್ದಾರೆ ಅವರ ಜೊತೆಗೆ ಮಾತನಾಡತಕ್ಕಂಥಾದ್ದು ಯಾವುದೂ ತಪ್ಪಿಲ್ಲ ಈ ತಪ್ಪಿಲ್ಲದ ಕಾರಣಕ್ಕಾಗಿ ನಾವು ಅವರನ್ನು ಅವರ ಜೊತೆ ಗುರುತಿಸಿಕೊಳ್ಳುವುದಿಲ್ಲವೆಂದು ಅಲ್ಲ ಅವರನ್ನು ಸರಿದಾರಿಗೆ, ಮುಖ್ಯವಾಹಿನಿಗೆ ತರತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ ಎರಡನೆಯದಾಗಿ, ಬಹಳ ಮುಖ್ಯವಾದ ವಿಷಯವನ್ನು ಎತ್ತಿದ್ದೀರಿ ಅಲ್ಲಿರುವಂತಹ ಗಿರಿಜನರು ಯಾರಿದ್ದಾರೆ, ಅರಣ್ಯ ಪ್ರದೇಶದಲ್ಲಿ ವಾಸಿಸುವಂತಹ ಜನರು ಅವರಿಗೆ ಬಹಳ ಕಿರುಕುಳ ಆಗುತ್ತಿದೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ ಅದನ್ನು ನಾವು ಖಂಡಿತ ಸಹಿಸುವುದಿಲ್ಲ ಅದಕ್ಕೆ ಬೇಕಾಗಿರುವಂತಹ ಒಂದು ಯೋಚನೆಯನ್ನು ಈಗಾಗಲೇ ಜಾರಿಗೊಳಿಸಿದ್ದೇವೆ ಆ ಯೋಜನೆಯಲ್ಲಿ ಪರಿಸರವಾದಿಗಳಲ್ಲಿ ಭಿನ್ನಾಭಿಪ್ರಾಯ ಇದೆ ಈಗಾಗಲೆ ನಿಮಗೆ ಗೊತ್ತಿದ್ದ ಹಾಗೆ ಒಂದಿಷ್ಟು ಜನ, ಸೋಲಿಗರನ್ನು, ಕಾಡು ಕುರುಬರು, ಜೇನು ಕುರುಬರನ್ನು ಬೇರೆ ಕಡೆಗೆ ತರಬೇಕಾದಾಗ ಸ್ಥಳಾಂತರಗೊಳಿಸತಕ್ಕಂಥಾದ್ದು ಪರಿಹಾರವಲ್ಲವೆನ್ನುವಂತಹ ಮಾತನ್ನು ಹೇಳುತ್ತೇವೆ ಅರಣ್ಯದಲ್ಲೇ ಹುಟ್ಟಿ ಬೆಳೆಯತಕ್ಕಂಥ ಜನರಿಗೆ ಆ ಪರಿಸರದಲ್ಲಿ ಬದುಕುವಂತಹ ಅಜನ್ಮ ಸಿದ್ಧ ಹಕ್ಕು ಅವರಿಗೆ ಇದೆ ಆ ಕಾರಣಕ್ಕಾಗಿ ಅವರಿಗೆ ನಾಗರೀಕರ ಪ್ರಪಂಚಕ್ಕೆ ತಂದು ಕೊಡಬೇಕಾಗಿರತಕ್ಕಂಥಾದ್ದು ಇಲ್ಲ ಮೂಲಭೂತ ಸೌಕರ್ಯಗಳಾಗಿರತಕ್ಕಂಥ, ಅಕ್ಷರ, ಆರೋಗ್ಯ, ಕುಡಿಯುವ ನೀರು ಅವರಿಗೆ ಬೇಕಾಗಿರತಕ್ಕಂಥ ಉದ್ಯೋಗದ ಭರವಸೆ ಮತ್ತು ಕಾಡು ಉತ್ಪನ್ನಗಳಿಗೆ ಬೇಕಾದಂತಹ ಮಾರುಕಟ್ಟೆ ಇದನ್ನು ಒದಗಿಸಿದರೆ ಸಾಕು ಎನ್ನುವಂತಹ ವಿಚಾರ ಕೆಲವು ಪರಿಸರವಾದಿಗಳಲ್ಲಿ ಇದೆ ಉಲ್ಲಾಸ್ ಕಾರಂತ್ ಅವರ ವಾದ ಹಾಗೂ ಕೆಲವರದು ತಮಗೆ ಗೊತ್ತಿದೆ ಆ ಕಾರಣಕ್ಕೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಡಿಜಿಪಿ ಅವರ ಜೊತೆ ಮಾತನಾಡಿದ್ದಾರೆ ಅಲ್ಲಿರುವಂತಹ ಎಲ್ಲಾ ನಮ್ಮ ಪೊಲೀಸ್ ಅಧಿಕಾರಿಗಳ ಜೊತೆ ಈ ವಿಚಾರದಲ್ಲಿ ಮಾತಾನಾಡಿದ್ದಾರೆ ನಿನ್ನೆ ತಾನೆ ಈ ವಿಚಾರದಲ್ಲಿ ಅವರು ಪತ್ರಿಕಾ ಹೇಳಿಕೆಯನ್ನು ಕೊಟ್ಟು ಅವರ ಜೊತೆ ನಾವು ಮಾತನಾಡುತ್ತೇವೆ ಏಕೆಂದರೆ ಹಿಂಸೆಯಿಂದ ಪರಿಹಾರ ಸಿಗುವುದಿಲ್ಲ ನಿಮಗೆಲ್ಲಾ ಗೊತ್ತಿದ್ದ ಹಾಗೆ ಪಕ್ಕದ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಚಂದ್ರಬಾಬು ನಾಯ್ಡು ಅವರ ಜೊತೆ ಸಂಘರ್ಷಕ್ಕೆ ಇಳಿದಾಗ ಆರೇಳು ಜಿಲ್ಲೆಗಳಲ್ಲಿ ಸರ್ಕಾರ ಇಲ್ಲದಂತಹ ವ್ಯವಸ್ಥೆಯನ್ನು ನಾವು ಕಂಡಿದ್ದೇವೆ. ಕರ್ನಾಟಕ ಶಾಂತಿಪ್ರಯವಾದಂತಹ

ರಾಜ್ಯ ಮಾನ್ಯ ಶಾಸಕರ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ಮನ್ನಣೆ ಮಾಡುತ್ತೇವೆ ಗಿರಿಜನರಿಗೆ ಆದಂತಹ ತೊಂದರೆಯನ್ನೂ ಕೂಡ ನಾವು ತಪ್ಪಿಸುತ್ತೇವೆ. ಈ ವಿಚಾರದಲ್ಲಿ ತಾವು ರಚನಾತ್ಮಕವಾದಂತಹ ಸಲಹೆಗಳು ಇದ್ದರೆ ಅದರ ಬಗೆ ಕೂಡಲೇ ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದು ಅದರ ಮೂಲಕ ಅವರ ಸಂಕಷ್ಟಗಳನ್ನು ಪರಿಹಾರ ಮಾಡುತ್ತಾರೆ

ಸಭಾಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್ ಅವರು ತಮ್ಮ ಆಸನಕ್ಕೆ ಹಿಂದುರಗಬೇಕು ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಅದರ ಬಗ್ಗೆ ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದಾರೆ

(ಇ) ವಿಷಯ ಉತ್ತರ ಕರ್ನಾಟಕದ ಭಾಗದಲ್ಲಿ ಹೃದ್ರೋಗ ಆಸ್ಪತ್ರೆ ಪ್ರಾರಂಭಿಸುವ ಬಗ್ಗೆ

†ಶ್ರೀ ಜೆ ಏ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ಬಾವಿಯಲ್ಲಿ ಕುಳಿತಿದ್ದಾರೆ ಅವರ ಬೇಡಿಕೆ ಸರ್ಕಾರ ಈಡೇರಿಸಬೇಕು ಏಕೆಂದರೆ ಸುಮಾರು ವರ್ಷಗಳಿಂದ ಇದೆ ಅದರ ಜೊತೆಗೆದ ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಹೇಲುವುದೇನೆಂದರೆ ಹೈಕೋರ್ಟ್ ಪೀರ ಉತ್ತರ ಕರ್ನಾಟಕದಲ್ಲಿ ಎಷ್ಟು ಮುಖ್ಯ ಇದೆಯೋ ಹಾಗೆ ಹೃದ್ರೋಗ ಆಸ್ಪತ್ರೆ ಆ ಭಾಗದಲ್ಲಿಬೇಕಾಗಿದ್ದು ಸರ್ಕಾರ ಅಲ್ಲಿ ಸ್ಥಾಪನೆ ಮಾಡಬೇಕು ಏಕೆಂದರೆ ಹೈಕೋರ್ಟ್ ಕೇಸ್ ಬೇಕಾದರೆ ಒಂದು ವಾರ ನಿಧಾನವಾದರೂ ಪರವಾಗಿಲ್ಲ ಆದರೆ ಹೃದ್ರೋಗಿಗಳು ನಿಮಿಷದಲ್ಲಿ ಸಾಯುತ್ತಾರೆ ಅಂತಹ ವ್ಯವಸ್ಥೆ ಇವತ್ತು ಉತ್ತರ ಕರ್ನಾಟಕದಲ್ಲಿ ಇಲ್ಲ ಇಡೀ ಉತ್ತರ ಕರ್ನಾಟಕ, ಹೈಕೋರ್ಟ್ ಕರ್ನಾಟಕ ಮತ್ತು ಬಂಬೆ ಕರ್ನಾಟಕ ಪ್ರದೇಶದಲ್ಲಿ ಕಾರ್ಡಿಯಾಲಜಿ ಸ್ಪೆಷಲೈನೇಷನ್ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಸರ್ಕಾರದವರು ಸ್ಥಾಪನೆ ಮಾಡಿದರೆ ಅದು ಬಹಳ ಉಪಯೋಗವಾಗುತ್ತದೆ ಅದಕ್ಕೆ ಸರ್ಕಾರ ಕೂಡ ಇದನ್ನು ಪರಿಗಣನೆ ಮಾಡತಕ್ಕಂಥ ಅವಶ್ಯಕತೆ ಇದೆ ಏಕೆಂದರೆ ಬಡ ರೋಗಿಗಳು ಬೆಂಗಳೂರಿಗೆ ಬರುವುದಕ್ಕೆ ಕಷ್ಟವಾಗುತ್ತದೆ ಆ ಕಡೆಯ ಬಡ ರೋಗಿಗಳು ಬೆಂಗಳೂರಿಗೆ ಬಂದು, ಜಯದೇವ ಇಸ್ಟಿಟ್ಯೂಟ್ ನಲ್ಲಿ ನೋಡಿಸಿಕೊಳ್ಳುವಂತಹ ಸ್ಥಿತಿಯಲ್ಲಿ ಇಲ್ಲ, ಇದು ಬಹಳ ಮುಖ್ಯವಾದಂತಹ ಅಂಶವಾಗಿದೆ, ಇದನ್ನು ಸಹ ಸರ್ಕಾರವೂ ಪರಿಗಣಿಸಬೇಕು, ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳಿದ್ದಾರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ದಯವಿಟ್ಟು ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ಬಂದರೆ ಒಳ್ಳೆಯದೆಂದು, ನಾಣೂ ಸಹ ಅವರಲ್ಲಿ ಮನವಿಯನ್ನು ಮಾಡುತ್ತೇನೆ

(ಈ) ವಿಷಯ ಗುಲ್ಬರ್ಗ ಜಿಲ್ಲೆಯಲ್ಲಿ ಆನೆಕಾಲು ರೋಗ ದಾಖಲಾಗಿರುವ ಬಗ್ಗೆ

ಶ್ರೀ ಎಂ ವೈ. ಪಾಟೀಲ್ (ಅಫ್ಜಲ್‌ಪುರ್) ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ಜಿಲ್ಲೆಯಲ್ಲಿ " ಆನೆಕಾಲು ರೋಗ ಬಹಳ ಇದೆ, 4,680 ಕೇಸ್ ರಿಜಿಸ್ಟರ್ ಆಗಿ ಬೆಳಕಿದೆ ಬಂದಿದೆ, ಇನ್ನು ಆಸ್ಪತ್ರೆಗೆ ಬರದೇ ಇರುವಂತಹ ಇನ್ನು ಬಹಳಷ್ಟು ಕೇಸ್‌ಗಳು ಇವೆ, ಈ ವಿಚಾರವಾಗಿ ಸರ್ಕಾರವೂ ತೀವ್ರವಾಗಿ ಕ್ರಮವನ್ನು ತೆಗೆದುಕೊಳ್ಳ ಬೇಕು, ಮತ್ತು ಈ ರೋಗ ಹೆಚ್ಚಿಗೆ ಹರಡದಂತೆ ನೋಡಿಕೊಳ್ಳಬೇಕು ಮತ್ತೆ ಅಫಜಲ್‌ಪುರ್ ತಾಲ್ಲೂಕ್‌ನಲ್ಲಿ ಒಂದು ಡೆತ್ ಆಗಿದೆ, ಚಿಂಚೋಳಿಯಲ್ಲಿ ಒಂದು ಡೆತ್ ಆಗಿದೆ, ಮತ್ತೆ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ, ಈ ಬಗ್ಗೆ ಉದಾಹರಣೆಗಾಗಿ ಹೇಳುವುದಾದರೆ, ಅ ಫಜಲ್‌ಪುರ ತಾಲ್ಲೂಕಿನಲ್ಲಿ ಎರಡು ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ, ಸಿಬ್ಬಂದಿಗಳು ಇಲ್ಲ, ಕಡಚಗಿ ಮತ್ತು ಉಡಚಾಣದಲ್ಲಿ ಡಾಕ್ಟರ್‌ಗಳು ಇಲ್ಲ ಸಿಬ್ಬಂದಿಗಳು ಇಲ್ಲ, ಈ ರೀತಿಯಾದರೆ ಆಸ್ಪತ್ರೆಗಳು ಇದ್ದು, ಏನು ಪ್ರಯೋಜನ? ಆದುದರಿಂದ ಸರ್ಕಾರ ಈ ವಿಷಯದ ಬಗ್ಗೆ ಹೇಳಿಕೆ ನೀಡಬೇಕೆಂದು, ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಜಿ ವಿ ಶ್ರೀರಾಂರೆಡ್ಡಿಯವರು ಬಹಳ ಮುಖ್ಯವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಅವರಿಗೆ ಮಾಹಿತಿಯ ಅಭಾವವಿರಬಹುದು, ಓಪಕ್ ದೇಶದಿಂದ ಬಳುವಳಿಯಾಗಿ 32ಕೋಟಿ ರೂಪಾಯಿಗಳಲ್ಲಿ ಒಂದು ಹೃದ್ರೋಗದ ಆಸ್ಪತ್ರೆಯನ್ನು, ಸೂಪರ್ ಸ್ಪೆಷಲೈಜೇಷನ್‌ಗೆ ಸಂಬಂಧಪಟ್ಟಂತಹ ಆಸ್ಪತ್ರೆಯನ್ನು, ರಾಯಚೂರಿನಲ್ಲಿ ಈಗಾಗಲೇ ಶ್ರೀಮಾನ್ ಜೆ ಹೆಚ್ ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ, ಅದಕ್ಕಿಂತ ಪೂರ್ವದಲ್ಲಿ ಪ್ರಾರಂಭವಾಗಿದ್ದಂಥಾದ್ದು ಇದೆ, ಅಲ್ಲಿ ಉನ್ನತಮಟ್ಟದ ಮತ್ತೆ ವಿಶೇಷವಾದ ತರಬೇತಿಯನ್ನು ಹೊಂದಿರುವಂತಹ ವೈದ್ಯರ ಅಭಾವವಿರುವುದರಿಂದ, ಅಪೋಲೋ ಆಸ್ಪತ್ರೆಯವರೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಅದನ್ನು ಖಾಸಗೀಕರಣಕ್ಕೆ ಒಳಪಡಿಸಿರುವಂತಹ ಒಂದು ವ್ಯವಸ್ಥೆ ಇದೆ, ಹಾಗೆ ಮಾನ್ಯ ಡಿ ಆರ್ ಪಾಟೀಲ್ ಎನ್ನುವವರು ಬಹಳ ವರ್ಷಗಳಿಂದ "ಜಯದೇವ ಇನ್‌ಸ್ಟಿಟ್ಯೂಟ್" ಬರುವುದಕ್ಕೆ ಮುಂಚೆ ಹುಬ್ಬಳ್ಳಿಯಲ್ಲಿ ಕ್ಯಾನ್ಸರ್ ರೋಗಕ್ಕೆ ಸಂಬಂಧಪಟ್ಟಂತೆ ಆಸ್ಪತ್ರೆಯನ್ನು ಈಗಾಗಲೇ ಮಾಡಿದ್ದಾರೆ, ಈಗ ನಮ್ಮ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲೂ ಕೂಡ, Cobalt Rays ಅನ್ನು ಕೊಡುವಂತಹ ವ್ಯವಸ್ಥೆಗೆ ಮಾಣ್ಯ ಎ ಬಿ ಮಲಕರೆಡ್ಡಿ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ, ಹಣಕಾಸನ್ನು ಒದಗಿಸಿಕೊಟ್ಟಿದ್ದಾರೆ, ಆದರೆ ಅಲ್ಲಿಗೆ ಬೇಕಾದಂತಹ ವಿಶೇಷ ಏನಿದೆ, ಮುಂದೆ ಇದರ ಬಗ್ಗೆ ಸರ್ಕಾರ ತೀವ್ರವಾದಂತಹ ಗಮನವನ್ನು ಕೊಡುತ್ತದೆ, ತಾವು ಕೂಡ ಮಾಣ್ಯ ಮುಖ್ಯಮಂತ್ರಿಯವರೊಡನೆ ಮಾತನಾಡಿದರೆ ಈ ಸಮಸ್ಯೆ ಬಗೆಹರಿಯುತ್ತದೆ, ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಹೇಳುತ್ತೇನೆ

ಶ್ರೀ ಜಿ ವಿ ಶ್ರೀರಾಂರೆಡ್ಡಿ ಮಾನ್ಯ ಅಧ್ಯಕ್ಷರೇ, ನಾನು ಕೇಳುವಂಥಾದ್ದು ಇದನ್ನು ಖಾಸಗಿಯವರ ಸಹಭಾಗಿತ್ವದಲ್ಲಿ ಮಾಡಿದರೆ, ಹಣ ಹೆಚ್ಚಿಗೆ ಒಡವರು ಖರ್ಚು ಮಾಡಬೇಕಾಗುತ್ತದೆ, ಇದು ಸಮಸ್ಯೆ ಇದೆ, ಇದನ್ನು ಕಡಿಮೆ ವೆಚ್ಚದಲ್ಲಿ, ವೈದ್ಯಕೀಯ ವ್ಯವಸ್ಥೆ ಇರುವಂತಹ ಸರ್ಕಾರಿ ಆಸ್ಪತ್ರೆಯನ್ನು, ಸರ್ಕಾರ ಸ್ಥಾಪನೆ ಮಾಡಬೇಕು, ಈಗ ಇದನ್ನು ಅಪೋಲೊ, ಇನ್ನಿತೆ ಖಾಸಗಿಯವರ ಸಹಭಾಗಿತ್ವದಲ್ಲಿ ಮಾಡುವುದರಿಂದ, ಹೆಚ್ಚಿಗೆ ಹಣವನ್ನು ತೆರಬೇಕಾಗುತ್ತದೆ, ಅದರಲ್ಲೂ ಬಡವರಿಗೆ ಇದು ಸಾಧ್ಯವಾಗುವುದಿಲ್ಲವೆಂಬುದು ತಮಗೂ ಗೊತ್ತಿದೆ, ಈಗ ಪ್ರೈವೇಟ್ ಆಸ್ಪತ್ರೆಗಳಲ್ಲಿ ಎಷ್ಟು ಹಣ ಖರ್ಚಾಗುತ್ತದೆಂಬುದು ಗೊತ್ತಿದೆ, ಅಷ್ಟು ಹಣವನ್ನು ಖರ್ಚು ಮಾಡುವಂತಹ ಶಕ್ತಿ ಉತ್ತರ ಕರ್ನಾಟಕದ ಜನತೆಗೆ ಇಲ್ಲ, ಅವರು ಆರ್ಥಿಕವಾಗಿ ಹಿಂದುಳಿದಿರುವಂತಹ ಜನರಾಗಿದ್ದಾರೆ, ಆದುದರಿಂದ ಅವರಿಗೆ ಸರ್ಕಾರವೇ ಕಡಿಮೆ ವೆಚ್ಚದಲ್ಲಿ ಅಂತಹ ಸೌಲಭ್ಯ ಸಿಗುವಂತಹ, ಆಸ್ಪತ್ರೆಯಾಗಬೇಕೆಂದು ಹೇಳುತ್ತಿರುವಂಥಾದ್ದು

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಮಹತ್ವವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ ಕರ್ನಾಟಕದಲ್ಲಿ ಯಾವ ಬಡವರಿಗೂ ಇಂತಹ ದುಬಾರಿಯಾದಂತಹ ಚಿಕಿತ್ಸೆಯನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಆ ಕಾರಣಕ್ಕೆ "ಯಶಸ್ವಿನಿ ಕಾರ್ಯಕ್ರಮ" ಇದೆ, ಇಲ್ಲಿ ಕೇವಲ 60 ರೂಪಾಯಿಗಳನ್ನು ಒಂದು ವರ್ಷಕ್ಕೆ ಕಟ್ಟಿದರೆ, ಈ ಕಾರ್ಯಕ್ರಮದಡಿಯಲ್ಲಿ, ನಾವು ಘೋಷಿಸಲ್ಪಟ್ಟಿರುವಂತಹ ಆಸ್ಪತ್ರೆಗಳಲ್ಲಿ, ಅವರು ಉಚಿತವಾಗಿ ಚಿಕಿತ್ಸೆಯನ್ನು ಪಡೆಯಬಹುದು, ಮತ್ತೆ ಮುಂದೆ ನಮ್ಮ ಮುಂದೆ ಇರತಕ್ಕಂಥ ಸಾಮಾನ್ಯ ಕಾರ್ಯಕ್ರಮಗಳ ಆಧಾರದ ಮೇಲೆ ಎರಡೂ ಪಕ್ಷಗಳು ಮಾತನಾಡುವಾಗ, ಹಿಂದೆ ನಾವು ನೂರು ಕೋಟಿ ರೂಪಾಯಿಗಳ

ನಿಧಿಯ ಮೂಲಕ ಇವರಿಗೆ ಹಳದಿ ಕಾರ್ಡ್‌ಗಳನ್ನು ಕೊಟ್ಟು ಆ ಚಿಕಿತ್ಸೆಯ ಭಾರವನ್ನು ಸರ್ಕಾರವೇ ತೆಗೆದುಕೊಳ್ಳಬೇಕೆಂಬ ಯೋಚನೆಯನ್ನು ಮಾಡುತ್ತಿದೆ, ಅದನ್ನು ನಾವು ಖಂಡಿತವಾಗಿ ನಿಮ್ಮ ಸಲಹೆಯ ಆಧಾರದ ಮೇಲೆ, ಆ ಯೋಜನೆಯನ್ನು ರೂಪಿಸುತ್ತೇವೆ

(ಉ) ವಿಷಯ ಜುರಾಲದಲ್ಲಿ ಹಳ್ಳಿಗಳು ಮುಳುಗಡೆಯಾಗಿರುವ ಬಗ್ಗೆ

ಶ್ರೀ ಎ ಪಾಪರೆಡ್ಡಿ (ರಾಯಚೂರು) ಮಾನ್ಯ ಅಧ್ಯಕ್ಷರೇ, ಜುರಾಲದಲ್ಲಿ 5 ಹಳ್ಳಿಗಳು ಮುಳುಗಡೆಯಾಗಿವೆ, ಎರಡು ದೇವಸ್ಥಾನಗಳು ಮುಳುಗಡೆಯಾಗಿವೆ, ನಾರದಗಟ್ಟ ದತ್ತಾತ್ರೇಯಾ ದೇವಸ್ಥಾನಗಳು ಮುಳುಗಡೆಯಾಗಿವೆ, ಇಲ್ಲಿಯವರೆಗೆ ಈ 5 ಹಳ್ಳಿಗಳಿಗೂ ಪುನರ್ವಸತಿಯನ್ನು ಕಲ್ಪಿಸಿಲ್ಲ, ಮತ್ತೆ ಜಿಲ್ಲಾಧಿಕಾರಿಗಳು ಪುನರ್ವಸತಿಗೆ ಬೇಕಾದಂತಹ ಎಲ್ಲಾ ಮಾಹಿತಿಯನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ, ಇದರ ಬಗ್ಗೆ ಇದುವರೆಗೂ ಏನು ಕ್ರಮವನ್ನು ತೆಗೆದುಕೊಂಡಿಲ್ಲ, ಇಲ್ಲಿ ದೇವಸ್ಥಾನಗಳಿಗೆ ಹೋಗುವುದಕ್ಕೆ ದಾರಿ ಇಲ್ಲ, ಲಕ್ಷಾಂತರ ಭಕ್ತಾದಿಗಳು ಹೋಗುತ್ತಿದ್ದಾರೆ, ಅಲ್ಲಿ ದಾರಿ ಇಲ್ಲ, ಇದಕ್ಕೆ ಬ್ರಿಡ್ಜ್ ಕಟ್ಟಿಕೊಡುತ್ತೇವೆಂದು ಆಗ್ರಿಮೆಂಟ್ ಆಗಿದೆ, ಆಂಧ್ರ ಪ್ರದೇಶದ ಮತ್ತು ಕರ್ನಾಟಕ ಸರ್ಕಾರದಿಂದ ಇಲ್ಲಿಯವರೆಗೂ ಯಾವ ಕಾರ್ಯಕ್ರಮಗಳು ಆಗಲಿಲ್ಲ, ಆ ಕ್ಷೇತ್ರದಲ್ಲಿರುವಂತಹ ಜನರು ದೇವಸ್ಥಾನಗಳಿಗೆ ಹೋಗುವುದಕ್ಕೆ ತೊಂದರೆಯಾಗಿದೆ, ಆದುದರಿಂದ ಈ 5 ಹಳ್ಳಿಗಳ ಜನರಿಗೆ ಪುನರ್ವಸತಿಯನ್ನು ಕಲ್ಪಿಸಿಕೊಡಬೇಕೆಂದು, ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ, ಈಗಾಗಲೇ ಪುನರ್ವಸತಿಯ ವಿಚಾರದಲ್ಲಿ, ಜುರಾಲದಿಂದ ಬರುವಂಥಾದ್ದು ಗೋದಾವರಿ ಕಣವೆಗೆ ಸೇರಿರುವುದರಿಂದ ಅದರಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿದೆ, ಹಿನ್ನೀರನ್ನು ಆಂಧ್ರಪ್ರದೇಶದವರು ಬಳಸುವಂಥಾದ್ದು ಅದು ಅವರ ಹಕ್ಕು, ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ನಮ್ಮ ಪಾಲು ಇದೆ ಇಲ್ಲಿ ಪುನರ್ವಸತಿಯನ್ನು ಮಾಡುವುದಕ್ಕೆ ಆಂಧ್ರ ಪ್ರದೇಶದವರು ದುಡ್ಡು ಕೊಡಬೇಕೆಂಬ ಮಾತು ಇದೆ, ದಿವಂಗತ ದೇವರಾಜ್ ಅರಸುರವರ ಕಾಲದಲ್ಲಿ ಈ ಒಪ್ಪಂದ ಆಗಿದೆ, ಇಲ್ಲಿ ಎರಡು ದೊಡ್ಡ ಸೇತುವೆಗಳನ್ನು ಕಟ್ಟಿಸಿಕೊಡಬೇಕೆಂದು ಇದೆ, ಆ ಕಾರಣಕ್ಕಾಗಿ ಈಗಾಗಲೇ ವಿಶೇಷವಾದಂತಹ ಕರ್ತವ್ಯಗಳನ್ನು ನಾವು ಅವರಿಗೆ ಇಟ್ಟುಕೊಂಡಿದ್ದೇವೆ, ಈಗ ತಾವು ಏನು ಹೇಳಿದ್ದೀರಿ, ಅದಕ್ಕೆ ನಾವು ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಯಾವ ರೀತಿಯಾಗಿ ಪುನರ್ವಸತಿ ಯೋಜನೆಯನ್ನು ರೂಪಿಸಿದ್ದೀರಿ, ಅದೇ ರೀತಿಯಲ್ಲಿ ಇಲ್ಲೂ ರೂಪಿಸುತ್ತೇವೆ, ಈಗ ತಾವು ಏನು ಆತಂಕಕ್ಕೆ ಒಳಪಟ್ಟಿದ್ದೀರಿ, ತಾವು ಇಷ್ಟು ದಿವಸ ಏನು ಕಷ್ಟಗಳನ್ನು ಅನುಭವಿಸಿದ್ದೀರಿ, ಅದು ಪರಿಹಾರವಾಗುತ್ತೆದೆಂಬ ಮಾತನ್ನು ಹೇಳಲಿಚ್ಚಿಸುತ್ತೇನೆ ಈಗ ಅಲ್ಲಿರುವಂಥ ಆಂಧ್ರಪ್ರದೇಶದ ಸರ್ಕಾರದ ಜೊತೆಯಲ್ಲಿ ಇಲ್ಲಿ ಇರುವಂತಹ ಸಮ್ಮಿಶ್ರ ಸರ್ಕಾರದ ನಮ್ಮ ಮಾನ್ಯ ಮುಖ್ಯಮಂತ್ರಿಯವರು, ಮಾತನಾಡಿ , ಆ ಸೇತುವೆ ಕಟ್ಟುವ ವಿಚಾರ ಹಾಗೂ ಪುನರ್ವಸತಿಗೆ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ನಾವು ಒತ್ತಾಯ ಮಾಡಿ, ಕೆಲಸವನ್ನು ಪ್ರಾರಂಭ ಮಾಡುತ್ತೇವೆ

ಶ್ರೀ ಸಿದ್ದುಸಾವದಿ ಮಾನ್ಯ ಅಧ್ಯಕ್ಷರೇ, ಇಂದಿನ ಕಾರ್ಯಕಲಾಪಗಳ ಪಟ್ಟಿ ಯಲ್ಲಿರುವಂತಹ ಕೈಮಗ್ಗ ನೇಕಾರರ ವಿಷಯವಾಗಿ ನಿಯಮ 69ರ ಮೇಲೆ ಚರ್ಚೆಸಲು ತಾವು ಅವಕಾಶವನ್ನು ಕೊಟ್ಟಿದ್ದೀರಿ, ರಾಜ್ಯದಲ್ಲಿ 1975ರಲ್ಲಿ ಕೈಮಗ್ಗ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಲು, ಅದನ್ನು ಘೋಷಿಸಲು, ಅದರಲ್ಲೂ ವಿಶೇಷವಾಗಿ ಕೈಮಗ್ಗ ನೇಕಾರರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು.. ..

ಅಧ್ಯಕ್ಷರು ಮಾನ್ಯ ಸದಸ್ಯರೇ, ಈಗ ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಲು ಹೆಸರುಗಳನ್ನು ಕೊಟ್ಟಿದ್ದಾರೆ, ಇದಾದನಂತರ ತಮಗೆ ನಿಯಮ 69ರ ಮೇಲೆ ಚರ್ಚೆ ಮಾಡಲು ತಮಗೆ ಅವಕಾಶವನ್ನು ಕೊಡುತ್ತೇನೆ ದಯಮಾಡಿ ತಾವು ಕುಳಿತುಕೊಳ್ಳಿ, ಈ ವಿಷಯದ ಬಗ್ಗೆ ಮಾನ್ಯ ಗೋವಿಂದ ಎಂ ಕಾರಜೋಳ, ಮಾನ್ಯ ಡಿ ಆರ್ ಪಾಟೀಲ್ ಹಾಗೂ ಇನ್ನಿತರ ಸದಸ್ಯರುಗಳು ಹೆಸರುಗಳನ್ನು ಕೊಟ್ಟಿದ್ದೀರಿ, ನಿಮಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ, ಈಗ ಶೂನ್ಯ ವೇಳೆಯಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲು ಸದಸ್ಯರು ಇಚ್ಛಿಸಿದ್ದಾರೆ, ಇದಾದನಂತರ ತೆಗೆದುಕೊಳ್ಳೋಣ,

(ಊ) ವಿಷಯ ಬೆಳೆ ವಿಮೆ ಹಣ ಪಾವತಿಯಾಗದೇ ಇರುವ ಬಗ್ಗೆ

†ಶ್ರೀ ಸಿ ಎಂ ಉದಾಸಿ ಮಾನ್ಯ ಅಧ್ಯಕ್ಷರೇ, ನಾನು ಹಿಂದೆ ಶೂನ್ಯವೇಳೆಯಲ್ಲಿ ಕರ್ನಾಟಕ ರೈತರ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ, 2002ನೇ ಇಸವಿಯ ಹಿಂಗಾರು ಬೆಳೆಯ ವಿಮೆ ಪರಿಹಾರದ ಹಣ ಸುಮಾರು 27 ಕೋಟಿ ರೂಪಾಯಿಗಳಷ್ಟು ರೈತರಿಗೆ ಬಿಡುಗಡೆಯಾಗಬೇಕಾಗಿತ್ತು, ಈ 2002ರ ಪರಿಹಾರದ ಹಣ 2003ರ ಜೂನ್ ತಿಂಗಳ 30 ರೊಳಗೆ ದೊರೆಯಬೇಕಾದಂತಹ ಹಣ, ಇದುವರೆಗೂ ಇದು ದೊರೆತಿಲ್ಲವೆಂಬ ವಿಚಾರವನ್ನು ಸರ್ಕಾರದ ಗಮನಕ್ಕೆ ತರುವಂತಹ ಕೆಲಸವನ್ನು ಮಾಡಿದ್ದೆ, ಆಗ 27 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ, ಎಂಬ ಮಾತನ್ನು ಹೇಳಿದ್ದರು, ಇದುವರೆಗೂ ರಾಜ್ಯಸರ್ಕಾರ ತನ್ನ ಪಾಲಿನ ವಂತಿಗೆಯನ್ನು ಕಟ್ಟದೇ ಇರುವುದರಿಂದ, ಕಳೆದ ಒಂದು ವರ್ಷದಿಂದಲೂ ಸಹ ಹಿಂಗಾರು ಬೆಳೆ ವಿಮೆ ಪರಿಹಾರ 2002–2003ನೇ ಸಾಲಿನದ್ದು ಸಿಗುತ್ತಿಲ್ಲ, ಹಾಗೂ 2002–2003ನೇ ಸಾಲಿನ ಮುಂಗಾರು ಬೆಳೆ ವಿಮೆ ಪರಿಹಾರದಲ್ಲಿ ಸುಮಾರು 8 ಕೋಟಿ ರೂಪಾಯಿಗಳಷ್ಟು ಬಾಕಿ ಉಳಿದಿದ್ದು, ಇದು ಸೇರಿ ಪರಿಹಾರದ ಹಣ ಪಾವತಿಯಾಗುತ್ತಿಲ್ಲ, ಇದರ ಜೊತೆಗೆ 2003–20034ನೇ ಸಾಲಿನಲ್ಲಿ ಸುಮಾರು 7 ಲಕ್ಷ ಜನ ರೈತರು ಕರ್ನಾಟಕ ರಾಜ್ಯದಾದ್ಯಂತ "ಬೆಳೆ ವಿಮೆ" ಯನ್ನು ಮಾಡಿಸಿದ್ದಾರೆ, ಅದು ಒಟ್ಟು 931 ಕೋಟಿ ರೂಪಾಯಿಗಳು, ಈ ಹಿಂದಿನ ಮೂರು ವರ್ಷಗಳು ಸತತವಾಗಿ ಭೀಕರ ಬರಗಾಲ ಬಂದಂತಹ ಸಂದರ್ಭದಲ್ಲಿ ಬೆಳೆ ವಿಮೆ ಪರಿಹರ, 450 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಪರಿಹಾರ, ರೈತರಿಗೆ ದೊರೆಯಬೇಕಾಗಿತ್ತು, ಈ ಹಣ ಇವತ್ತಿನವರೆಗೂ ಬಿಡುಗಡೆ ಮಾಡುವಂತಹ ವಿಚಾರದಲ್ಲಿ ಸರ್ಕಾರ ಯಾವುದೇ ಕ್ರಮವನ್ನು ಕೈಗೊಂದಿಲ್ಲ, ತನ್ನ ಪಾಲಿನ ವಂತಿಕೆಯನ್ನು ಕಟ್ಟಿಲ್ಲ, ಆ ಕಾರಣದಿಂದ ರೈತರಿಗೆ ವಿಮೆ ಪರಿಹಾರದ ಹಣ ದೊರೆಯುತ್ತಿಲ್ಲ, ಈ ರೀತಿ ಇರಬೇಕಾದರೆ, ಇವತ್ತು ಏನು ಮಾಡಿದ್ದಾರೆಂದರೆ, ರೈತರು ಬೆಳೆ ವಿಮೆ ಮಾಡಿಸಬೇಕಾದರೆ, idemnity ಮಾಡಬೇಕಾಗಿತ್ತು, ಅದನ್ನು ಶೇಕಡಾ 90 ಇರುವಂಧಾದ್ದನ್ನು ಶೇಕಡಾ 80 ಮಾಡಿದರು, ಶೇಕಡಾ 80 ಇದ್ದದ್ದನ್ನು ಶೇ 60 ಮಾಡಿದ್ದಾರೆ, ಮತ್ತು ವಿಮೆ ಹಣ ಕಂತು ಏನು ಕಟ್ಟಬೇಕಾಗಿದೆ, ಆ ಹಣವನ್ನು ಜಾಸ್ತಿ ಮಾಡಿ, ವಿಮೆ ಹಣ ಕಾರಣದಿಂದ ಇಡೀ ರಾಜ್ಯದಾದ್ಯಂತ ರೈತರು ಹಿಂಗಾರಿ ಬೆಳೆ ವಿಮೆ ಮಾಡಿದಂತಹ 11 ಲಕ್ಷ ಜನ ರೈತರಿಗೆ ಈ ಬೆಲೆ ವಿಮೆ ಪರಿಹಾರ ಸಿಗುತ್ತಿಲ್ಲ, ಮುಂಗಾರು ಬೆಳೆ ವಿಮೆ ಮಾಡಿರುವಂತಹ 7 ಲಕ್ಷ ಜನ ರೈತರಿಗೆ, ಪರಿಹಾರದ ಹಣ ಸಿಗುತ್ತಿಲ್ಲ, ಸರ್ಕಾರ ಇದರ ಬಗ್ಗೆ ನಿರ್ಲಕ್ಷ್ಯ ತೋರಿಸಿರುವುದರಿಂದ, ನಾನು ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಈ ವಿಷಯದಲ್ಲಿ ಅತೀ ಶೀಘ್ರದಲ್ಲಿ ಹಣ ಬಿಡುಗಡೆಯಾಗದಿದ್ದರೆ, ಉಗ್ರ ಹೋರಾಟಕ್ಕೆ ದಾರಿಯಾಗುತ್ತದೆ, ಹಿಂದೆ 2002–2003ನೇ ಸಾಲಿನಲ್ಲಿ ಬೆಳೆ ವಿಮೆ ಹಣಕ್ಕಾಗಿ ಹೋರಾಟ ಮಾಡಬೇಕಾದಂತಹ ಸಂದರ್ಭದಲ್ಲಿ, ಹಣ ಪಾವತಿಯಾಗದೇ

ಇದ್ದ ಕಾರಣಕ್ಕಾಗಿ ಪ್ರತಿಭಟನೆಯನ್ನು ಮಾಡಿದ್ದಾರೆ, ಅನೇಕ ಜನರು ಜೈಲಿಗೆ ಹೋಗಬೇಕಾದತಂಹ ಪರಿಸ್ಥಿತಿ ನಿರ್ಮಾಣವಾಯಿತು, 192ಜನ ರೈತರು ಬೆಳೆ ವಿಮೆ ಹಣಕಾಗಿ ನನ್ನ ಜಿಲ್ಲೆಯಲ್ಲೇ ಹೋರಾಟ ಮಾಡಿ, ಜೈಲಿಗೆ ಹೋಗಬೇಕಾದಂತಹ ಸಂದರ್ಭದಲ್ಲಿ, ಇವತ್ತು ಶಾಸಕರಾಗಿರುವವರಲ್ಲಿ ಇಬ್ಬರು ಆರೋಪಿಗಳಾಗಿದ್ದಾರೆ, ಅವರು ಶ್ರೀ ನೆಹರು ಓಲೆಕಾರ್, ಶ್ರೀ ಬಿ ಸಿ ಪಾಟೀಲ್, ಈಗ ಅವರು ಆರೋಪದಿಂದ ಜೈಲಿಗೆ ಹೋಗಿ ಬಂದು, ಇವತ್ತು ವಿಧಾನಸಭೆಯ ಒಳಗಡೆ ಬರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ

ಅಧ್ಯಕ್ಷರು ಮಾನ್ಯ ಉದಾಸಿಯವರೆ, ಈ ವಿಷಯ ಬಹಳ ಗಂಭೀರವಾಗಿದೆ, ಅದುದರಿಂದ ಇದನ್ನು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಿದರೆ ಒಳ್ಳೆಯದು,

ಶ್ರೀ ಸಿ ಎಂ ಉದಾಸಿ ಮಾನ್ಯ ಅಧ್ಯಕ್ಷರೇ, ಇವತ್ತು ಒಂದೇ ದಿವಸದ ಕಲಾಪವಾಗಿರುವುದು

ಶ್ರೀ ಸಿ ಎಂ ಉದಾಸಿ ನನಗೆ ಅನುಮಾನ ಇರುವುದೇನೆಂದರೆ, ಸದನದ ಕಲಾಪ ಇವತ್ತು ಒಂದೇ ದಿವಸ ಇರುವುದರಿಂದ, ಮತ್ತೆ ಇದು ಹದಿನೈದು ದಿವಸ ಮುಂದೆ ಹೋಗುವ ಸಂಭವವಿರುವುದರಿಂದ, ನಾನು ಏನು ಹೇಳುತ್ತಿದ್ದೇನೆಂದರೆ, ಇದನ್ನು ವಿಳಂಬ ಮಾಡಿದರೆ ರೈತರಿಗೆ ಮತ್ತಷ್ಟು ತೊಂದರೆಯಾಗುತ್ತದೆ, ಬಹಳಷ್ಟು ಜನ ರೈತರು ತಾಪಗೊಂಡಿದ್ದಾರೆ, ಬರಗಾಲದಿಂದ ಬವಣೆಗೊಳಗಾಗಿದ್ದಾರೆ, ಹಾಗಾಗಿ ರೈತ ಸಮಸ್ಯೆಗಳಿಗೆ ಶೀಘ್ರವಾಗಿ ಪರಿಹಾರ ಸಿಗಬೇಕಾಗಿದೆ ಸನ್ಮಾನ್ಯ ಮಂತ್ರಿಗಳಾದಂಥ ಎಂ ಪಿ ಪ್ರಕಾಶ್‌ರವರು ಇದಕ್ಕೆ ಸರಿಯಾದಂಥ ಉತ್ತರವನ್ನು ಹೇಳಿ, ಶೀಘ್ರದಲ್ಲಿ ಹಣವನ್ನು ಬಿಡುಗಡೆ ಮಾಡುವ ವ್ಯವಸ್ಥೆ ಮಾಡಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ

ಅಧ್ಯಕ್ಷರು ಮಾನ್ಯ ಉದಾಸಿಯವರು ಎತ್ತಿರುವಂಥ ವಿಚಾರಕ್ಕೆ ಸರ್ಕಾರ ಉತ್ತರ ಕೊಟ್ಟಮೇಲೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಬಹುದು

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಉದಾಸಿಯವರನ್ನು ನಾಣು ಈ ವಇಚಾರದಲ್ಲಿ ಅಭಿನಂದಿಸುತ್ತೇನೆ ಅವರು ಕಳೆದ ಎರಡು ವರ್ಷಗಳಿಂದ ನಿರಂತರವಾಗಿ ಹಾವೇರಿ ಜಿಲ್ಲೆ ಮತ್ತು ಉತ್ತರ ಕರ್ನಾಟಕದ ಅನೇಕ ಕಡೆಗಳಲ್ಲಿ ಇಂಥ ಹೋರಾಟದ ಸಂಘಟನೆಗಳನ್ನು ಮಾಡಿದ್ದರು ನೂತನ ಶಾಸಕರಾಗಿ ಬಂದಿರುವಂಥ ಇಬ್ಬರು ಶಾಸಕರಾದ ಮಾನ್ಯ ಬಿ ಸಿ ಪಾಟೀಲ್‌ರವರು ಮತ್ತು ಮಾನ್ಯ ನೆಹರೂ ಓಲೆಕಾರ್‌ರವರು ಈ ವಿಚಾರದಲ್ಲಿ ಹಿಂಡಲಗಾ ಜೈಲಿಗೆ ಹೋಗಿ, ಅಲ್ಲಿ ಶಿಕ್ಷೆಯನ್ನೂ ಕೂಡ ಅನುಭವಿಸಿದ್ದರು, ಇದೊಂದು ರಾಜಕೀಯವಾಗಿರತಕ್ಕಂತ ರೈತರ ಹೋರಾಟವಾಗಿರುವುದರಿಂದ, ಇದಕ್ಕೆ ಸಂಬಂಧಿಸಿದ ಎಲ್ಲಾ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು ಎನ್ನುವ ವಿಚಾರವನ್ನೂ ಕೂಡ ಸರ್ಕಾರ ಬಹಳ ತೀವ್ರವಾಗಿ ಮತ್ತು ಗಂಭೀರವಾಗಿ ಯೋಚನೆ ಮಾಡುತ್ತಿದೆ ತಮಗೇ ಗೊತ್ತಿರುವ ಹಾಗೆ, ತಾವು ಅದರ ಬಗ್ಗೆ ಕಳೆದ ಬಾರಿ ಹೋರಾಟ ಮಾಡಿದಂಥ ಕಾಲದಲ್ಲಿ ಮುಖ್ಯಮಂತ್ರಿಗಳ ಜೊತೆ ಇದೇ ವಿಷಯವಾಗಿ ಎರಡು ಬಾರಿ ಮಾತನಾಡಿದಂಥಾದ್ದು ಇದೆ ಇದನ್ನು ನಾವೆಲ್ಲರೂ ಮೇಲ್ಮನೆಯಲ್ಲಿ ಮತ್ತು ಕೆಳಮನೆಯಲ್ಲಿ ಪ್ರಸ್ತಾಪ ಮಾಡಿದಂಥಾದ್ದೂ ಇದೆ ಸುಮಾರು 8 ಕೋಟಿ ರೂಪಾಯಿಗಳ ಬಾಕಿ ಕಳೆದ ಬಾರಿ ಮತ್ತು ಆಚೆಂಟು ಬಾರಿಯದು ಬಾಕಿ ಇರತಕ್ಕಂಥಾದ್ದು ಇದೆ ಕೊಡಬೇಕಾದಂಥ ಹಣದಲ್ಲಿ 27 ಕೋಟಿ ರೂಪಾಯಿಗಳನ್ನು ತೀವ್ರವಾಗಿ ಬಿಡುಗಡೆ ಮಾಡಬೇಕು ಎನ್ನುವ ಬಗ್ಗೆ ನಿರ್ಧಾರವನ್ನು ತೆಗೆದುಕೊಂಡು, ಮುಂದಿನ ಕ್ಯಾಬಿನೆಟ್‌ನಲ್ಲಿ ಈ ವಿಚಾರ ಬರಬೇಕು ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದಾರೆ 930 ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಆಗುವಂಥಾದ್ದು ಏನಿದೆ,

ಅಂದರೆ ಪ್ರೀಮಿಯಂ ದರವನ್ನು ಏರಿಸತಕ್ಕಂಧಾದ್ದು ಏನಿದೆ, ಅದು ವೈಜ್ಞಾನಿಕವಾಗಿ ಇಲ್ಲ ಎನ್ನುವ ವಾದವಿದೆ ಬೆಳೆ ವಿಮೆ ವಿಚಾರದಲ್ಲಿ ಬಹಳ ವೈಜ್ಞಾನಿಕವಾದಂಧ ಒಂದು ಯೋಜನೆಯನ್ನು ಕೇಂದ್ರ ಸರ್ಕಾರ ರೂಪಿಸಬೇಕಾದಂಧ ಅಗತ್ಯವಿದೆ ಹೋಬಳಿ ಮಟ್ಟದಲ್ಲಿ ಕ್ರಾಫ್ ಕಟಿಂಗ್ ಆಗತಕ್ಕಂಧಾದ್ದನ್ನು ತೆಗೆದು ಹಾಕಿ, ಗ್ರಾಮಮಟ್ಟದಲ್ಲಿ ಅದನ್ನು ತೆಗೆಯಬೇಕು ಎನ್ನುವ ಒಂದು ವಾದ ಕೂಡ ಇದೆ ಮಾನ್ಯ ಎಸ್ ಆರ್ ಬೊಮ್ಮಾಯಿಯವರು ಕೇಂದ್ರ ಸರ್ಕಾರದಲ್ಲಿ ಹ್ಯೂಮನ್ ರಿಸೋರ್ಸಸ್ ಮಿನಿಸ್ಟರ್ ಆಗಿದ್ದಂಧ ಸಂದರ್ಭದಲ್ಲಿ ಪ್ರಾಯೋಗಿಕವಾಗಿ ಬಿಜಾಪುರ ಜಿಲ್ಲೆಯನ್ನು ಆಯ್ಕೆ ಮಾಡಿ ಇಂಧ ಒಂದು ಪ್ರಯತ್ನವನ್ನು ಅಲ್ಲಿ ಮಾಡಿದ್ದರು ಅದು ಬಹಳ ವೈಜ್ಞಾನಿಕವಾಗಿದೆ, ಸಮರ್ಪಕವಾಗಿದೆ ಎನ್ನುವಂಧ ವಾತಾವರಣವಿದೆ ನಾವು ನೀವು ಎಲ್ಲರು ಕಲೆತು ಈ ವಿಚಾರದಲ್ಲಿ ಮಾನ್ಯ ಶರದ ಪವಾರ್‌ರವರಿಗೆ ಒಂದು ಬೇಡಿಕೆಯನ್ನು ಮಂಡಿಸಬೇಕಾದಂಧ ಅಗತ್ಯತೆ ಇದೆ. ಇದರ ಅತ್ಯಂತ ಮುಖ್ಯವಾದಂಧ ಉತ್ತರ ಕೇಂದ್ರ ಸರ್ಕಾರದ ಯೋಜನೆಯಲ್ಲೂ ಕೂಡ ಇದೆ ಬೆಳೆ ವಿಮೆ ಎನ್ನುವುದು ಬಹಳ ಅತ್ಯಗತ್ಯವಾಗಿರತಕ್ಕಂಧಾದ್ದು ಮಳೆಗಾಲ ಇದೇ ರೀತಿಯಾಗಿರುತ್ತದೆ ಎಂದು ಹೇಳಲಿಕ್ಕಾಗುವುದಿಲ್ಲ ಮಳೆಯ ಮೇಲೆ ಆಧಾರಿತವಾಗಿರತಕ್ಕಂಧ ರೈತ ಬಹಳ ಕಾಲ ಕಷ್ಟವನ್ನೆದುರಿಸಿದ್ದಾನೆ ಆ ಕಾರಣಕ್ಕಾಗಿ, ಈ ಸರ್ಕಾರ ಕೊಡಬೇಕಾಗಿರತಕ್ಕಂಧ ಬಾಕಿಯ ಬಗ್ಗೆ, ನಮ್ಮ ಸಂಪನ್ಮೂಲಗಳ ಇತಿಮಿತಿಯಲ್ಲಿ, ಹಂತಹಂತವಾಗಿ ಬಿಡುಗಡೆಯನ್ನು ಮಾಡುತ್ತೇವೆ ತಾವು ಸಲಹೆ ಕೊಟ್ಟಂತೆ ಮುಂದಿನ ಬಾರಿಯಾದರೂ ಈ ವಿಚಾರದ ಚರ್ಚೆಗೆ ಮಾನ್ಯ ಅಧ್ಯಕ್ಷರು ಅವಕಾಶವನ್ನು ಕೊಡಬೇಕು ಮಾನ್ಯ ಮುಖ್ಯ ಮಂತ್ರಿಗಳು ಬಂದ ತಕ್ಷಣ, ಅವರು ಬೆಳೆ ವಿಮೆಗೆ ಸಂಬಂಧಿಸಿದಂತೆ ರೈತ ಮುಖಂಡರುಗಳ ಒಂದು ಸಭೆಯನ್ನು ಕರೆಯಬೇಕು ಎಂದು ಅವರಲ್ಲಿ ನಾನು ನಿಮ್ಮ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ ನಾವು ಬಹಳ ಸಕಾರಾತ್ಮವಾಗಿರತಕ್ಕಂಧ ಪ್ರತಿಕ್ರಿಯೆಯನ್ನು ಮಾಡುತ್ತೇವೆ

ಶ್ರೀ ಸಿ ಎಂ ಉದಾಸಿ 2003–04ನೇ ಸಾಲಿನ ಮುಂಗಾರು ಬೆಳೆ ವಿಮೆಯ ಪರಿಹಾರದ ಹಣ ಮಾರ್ಚ್ 30ರೊಳಗೆ ದೊರೆಯಬೇಕಾಗಿತ್ತು 7 ಲಕ್ಷ ಜನ ರೈತರು 730 ಕೋಟಿ ರೂಪಾಯಿಗಳ ಬೆಳೆ ವಿಮೆಯನ್ನು ಮಾಡಿದ್ದಾರೆ ಅವರು ಸಾಲ ತೀರಿಸಲು ಅವರಿಗೆ ಡ್ಯೂ ಡೇಟ್ ಇರುವುದು ಮಾರ್ಚ್ 30ನೇ ತಾರೀಖು ಆದ್ದರಿಂದ, ಆ ಬೆಳೆ ವಿಮೆಯ ಪರಿಹಾರ ಮಾರ್ಚ್ 30 ರೊಳಗೆ ಸಿಗಬೇಕಾಗಿತ್ತು ಈಗಾಗಲೇ ಅದು ಮುಗಿದು 3 ತಿಂಗಳಾಯಿತು ಇನ್ನೂ ಪರಿಹಾರ ಸಿಕ್ಕಿಲ್ಲ ಇದರ ಜೊತೆಗೆ, ಹಿಂದಿನ ಒಂದು ವರ್ಷದ ಹಿಂಗಾರು ಬೆಳೆ ವಿಮೆ ಪರಿಹಾರವೂ ಬಾಕಿ ಇದೆ ಹಿಂಗಾರು ಬೆಳೆ ವಿಮೆ ಪರಿಹಾರ ಬಾಕಿ 11 ಲಕ್ಷ ಜನ ರೈತರದ್ದು ಬಾಕಿ ಇದೆ ಇವೆರಡನ್ನೂ ಯಾವ ದಿನಾಂಕದಲ್ಲಿ ಕೊಡುತ್ತೀರಿ ಎಂದು ಹೇಳಬೇಕು ಏತಕ್ಕೆಂದರೆ, ಬಹಳ ವಿಳಂಬವಾದರೆ, ಬರದಿಂದ ಕಂಗೆಟ್ಟಿರುವ ರೈತರು ತೊಂದರೆಗೀಡಾಗುತ್ತಾರೆ,

ಶ್ರೀ ಎಂ ಪಿ ಪ್ರಕಾಶ್ ಸಂಪನ್ಮೂಲಗಳ ಕೊರತೆಯ ಜೊತೆಗೆ, ಕಳೆದ ನಾಲ್ಕು ತಿಂಗಳ ಕಾಲ ಚುನಾವಣೆಯ ಸಂದರ್ಭವಿದ್ದುದರಿಂದ, ಚುನಾವಣಾ ನೀತಿ ಸಂಹಿತೆಯ ಕೆಳಗೆ ಹಣವನ್ನು ಬಿಡುಗಡೆ ಮಾಡಬಾರದು ಎನ್ನುವುದೂ ಕೂಡ ಇತ್ತು ಅಲ್ಲದೆ, ಅಧಿಕಾರಿಗಳು ಚುನಾವಣಾ ಕಾರ್ಯದಲ್ಲಿ ನಿರತರಾಗಿದ್ದರು ಎನ್ನುವ ಕಾರಣಕ್ಕಾಗಿ ಮತ್ತು ನೀತಿ ಸಂಹಿತೆಯಲ್ಲಿ ಇದೂ ಕೂಡ ಒಳಗೊಂಡಿದ್ದರಿಂದ, ಮಾರ್ಚ್ ಒಳಗೆ ಕೊಡಬೇಕಾದುದ್ದರಲ್ಲಿ ವಿಳಂಬವಾಗಿದೆ ತಮಗೇ ಗೊತ್ತಿರುವಂತೆ, ಈ ಸರ್ಕಾರ ಅಸ್ತಿತ್ವಕ್ಕೆ ಬಂದು ಒಂದು–ಒಂದೂವರೆ ತಿಂಗಳಾಗಿದೆ ಇದಕ್ಕೆ ಸಂಪನ್ಮೂಲಗಳನ್ನು ಕ್ರೋಡೀಕರಿಸುತ್ತೇವೆ, ಆಯವ್ಯಯದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡುತ್ತೇವೆ ಮತ್ತು ನಾವು ಆದಷ್ಟು ಶೀಘ್ರವಾಗಿ ಹಣವನ್ನು ಬಿಡುಗಡೆ ಮಾಡುತ್ತೇವೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರು ಹಿರಿಯ ಸದಸ್ಯರು ಈಗ ಇಲ್ಲಿ ಅನೇಕ ವಿಚಾರಗಳು ಪ್ರಸ್ತಾಪಿಸಲ್ಪಡುತ್ತಿವೆ ಅವುಗಳಲ್ಲಿ ಅವರ ಸಲಹೆ ಬಹಳ ಮುಖ್ಯವಾಗಿರುವುದರಿಂದ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ದಯಮಾಡಿ ಅವರು ತಮ್ಮ ಆಸನಕ್ಕೆ ಹೋದರೆ ಒಳ್ಳೆಯದು ನಂತರ ನಾನು ಅವರನ್ನು ಕರೆಸಿ ಮಾತನಾಡಿಸುತ್ತೇನೆ

ಶ್ರೀ ಕೆ ಎನ್ ರಾಜಣ್ಣ ಮಾನ್ಯ ಅಧ್ಯಕ್ಷರೇ, ನಾನು ತಮಗೆ 16ನೇ ತಾರೀಖಿನಂದೇ ಒಂದು ವಿಚಾರದ ಬಗ್ಗೆ ಪತ್ರವನ್ನು ಕಳುಹಿಸಿ ಕೊಟ್ಟಿದ್ದೆ ಪಟ್ಟಿಯಲ್ಲಿ ನನ್ನ ಹೆಸರಿದೆ ತಾವು ಬೇರೆಯವರಿಗೆಲ್ಲಾ ಅವಕಾಶವನ್ನು ಕೊಡುತ್ತಿದ್ದೀರಿ ಇದುವರೆಗೂ ನನ್ನ ಹೆಸರನ್ನು ಕರೆದಿಲ್ಲ ತಾವು ಕರೆಯುತ್ತೀರಿ ಎಂದು ನಾಣು ಕಾಯುತ್ತಿದ್ದೇನೆ ಆದರೆ ಬೇರೆಯವರು ಯಾರ್ಯಾರು ಬೇಕೋ ಅವರು ಎದ್ದು ಅಹರಷ್ಟಕ್ಕೆ ಅವರೇ ಹೇಳುತ್ತಿದ್ದಾರೆ

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಒಬ್ಬೊಬ್ಬರಾಗಿ ಕರೆಯುತ್ತೇನೆ ತಮಗೂ ಅವಕಾಶ ಮಾಡಿಕೊಡುತ್ತೇವೆ

ವಿಷಯ ಶ್ರೀ ವಾಟಾಳ್ ನಾಗರಾಜ್‌ರವರು ಧರಣಿಯನ್ನು ನಿಲ್ಲಿಸಿ ತಮ್ಮ ಸ್ಥಾನಕ್ಕೆ ಹೋಗಲು ಮನವಿ

ಶ್ರೀ ಎಂ ಪಿ ಪ್ರಕಾಶ್ ವಾಟಾಳ್ ನಾಗರಾಜ್‌ರವರು ಎತ್ತಿರುವಂಥ ಪ್ರಶ್ನೆಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಅವರ ಜೊತೆ ಮಾತನಾಡಿ, ಅವರ ಪ್ರಶ್ನೆಗೆ ಸಮಾಧಾನಕರವಾಗಿರತಕ್ಕಂಥ ಉತ್ತರವನ್ನು ಸರ್ಕಾರದಿಂದ ಕೊಡಿಸುತ್ತೇನೆ, ಅವರ ಕೊಣೆಗೆ ಕರೆಸಿ ಮಾತನಾಡುತ್ತೇನೆ ಹಿರಿಯ ಸದಸ್ಯರುಗಳು ಅನೇಕ ವಿಚಾರಗಳನ್ನು ಎತ್ತಿದ್ದಾರೆ ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಬಂದು ಸಹಕರಿಸಬೇಕು ಎಂದು ನಾನು ಅವರಲ್ಲಿ ವಿನಂತಿ ಮಾಡುತ್ತೇನೆ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದರೆ, ಇಲ್ಲೇ ಉತ್ತರ ಕೊಡಿಸುತ್ತೇನೆ, ಅಕಸ್ಮಾತ್ ಸಮಯದ ಅಭಾವವಿತ್ತು ಎಂದರೆ, ನಿಮ್ಮನ್ನು ಅವರ ಕೊಣೆಗೆ ಕರೆಸಿ ವಿಚಾರಗಳನ್ನು ಮಾತನಾಡಿಸುತ್ತೇನೆ ದಯಮಾಡಿ ತಾವು ತಮ್ಮ ಸ್ಥಾನಕ್ಕೆ ಬರಬೇಕು

ಅಧ್ಯಕ್ಷರು ದಯಮಾಡಿ, ತಾವು ತಮ್ಮ ಸ್ಥಾನಕ್ಕೆ ಹಿಂತಿರುಗಿ

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

ಅಧ್ಯಕ್ಷರು ಈಗ ಎಂ ಪಿ ಕುಮಾರಸ್ವಾಮಿಯವರು ತಾವು ಮಾತನಾಡಿ

ಎ) ವಿಷಯ ಜಿಲ್ಲಾ ಪಂಚಾಯತಿಗಳಲ್ಲಿ ಕುಡಿಯುವ ನೀರಿನ ಕಾಮಗಾರಿಗಳು ಸ್ಥಗಿತಗೊಂಡಿರುವ ಬಗ್ಗೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಬೇಲೂರು) ಕಳೆದ ಸರ್ಕಾರ, ಬೇಲೂರು ಘೋಷಣೆಯಂತೆ, ಕುಡಿಯುವ ನೀರಿನ ಕಾಮಗಾರಿಯನ್ನು ಗ್ರಾಮ ಪಂಚಾಯಿತಿಗೆ ವರ್ಗಾಯಿಸಿ ಆದೇಶ ಹೊರಡಿಸಿತ್ತು ಆದರೆ ಇವತ್ತಿಗೂ ಕೂಡ ಗ್ರಾಮ ಪಂಚಾಯಿತಿಗಳಿಗೆ ಹಣ ಬಂದಿಲ್ಲ ಜಿಲ್ಲಾ ಪಂಚಾಯಿತಿಗಳಲ್ಲಿ ಕಳೆದ 6–7 ತಿಂಗಳುಗಳಿಂದ ಯಾವುದೇ ಕುಡಿಯುವ ನೀರಿನ ಕಾಮಗಾರಿ ಆಗುತ್ತಿಲ್ಲ ಇದು ಸರ್ಕಾರದ ನೀತಿ ಇದು ನಮಗೆ ತಪ್ಪಾಗಿ ಕಾಣುತ್ತಿದೆ ಶಾಸಕರಾದ, ನವು, ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯನ್ನಾಗಲೀ ಅಥವಾ ಅಧ್ಯಕ್ಷರನ್ನಾಗಲೀ ಕುಡಿಯುವ ನೀರನ್ನು ಕೇಳಲು ನಮಗೆ ಮುಜುಗರವಾಗುತ್ತದೆ ಆದ್ದರಿಂದ, ಆ ಕಾಮಗಾರಿಯನ್ನು ಜಿಲ್ಲಾ ಪಂಚಾಯಿತಿಯವರು ಅನುಷ್ಠಾನಗೊಳಿಸಿದರೆ ಒಳ್ಳೆಯದು ಆಗ ನಮ್ಮ ಘನತೆಯೂ ಸ್ವಲ್ಪ

ಉತ್ತಮವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ ಅದು ಗ್ರಾಮ ಪಂಚಾಯಿತಿಯಲ್ಲಿ ಅನುಷ್ಠಾನಗೊಳ್ಳುವ ಬದಲು, ಜಿಲ್ಲಾ ಪಂಚಾಯಿತಿಯಿಂದ ಅನುಷ್ಠಾನವಾದರೆ,ನಮ್ಮ ಘನತೆ ಗೌರವಗಳಿಗೆ ಸ್ವಲ್ಪ ತೃಪ್ತಿ ತರುತ್ತದೆ ಎನ್ನುವುದು ನನ್ನ ಅಭಿಪ್ರಾಯ ಮತ್ತು ಈ ಕಾಮಗಾರಿ ಬೇಗ ಚಾಲುವಾಗುವಂತೆ ಸರ್ಕಾರ ಗಮನ ಕೊಡಬೇಕು ಎನ್ನುವುದು ನನ್ನ ಅಭಿಪ್ರಾಯ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ, ಅಧಿಕಾರ ವಿಕೇಂದ್ರೀಕರಣಕ್ಕೆ ಬದ್ಧವಾಗಿರತಕ್ಕಂಥ ನಾವು, ಕರ್ನಾಟಕ ಪಂಚಾಯತ್‌ರಾಜ್ ಕಾನೂನಿನ ಪ್ರಕಾರ ಏನು ಶೆಡ್ಯೂಲ್ ಇದೆ, ಆ ಶೆಡ್ಯೂಲಿನ ಪ್ರಕಾರ ಗ್ರಾಮ ಪಂಚಾಯಿತಿಗಳು ಕುಡಿಯುವ ನೀರಿನ ನಿರ್ವಹಣೆಯನ್ನು ಮಾಡಬೇಕಾಗುತ್ತದೆ ತಮ್ಮ ಪಕ್ಷದ ಶಾಸಕರೇ ಆದಂಥ ಮಾನ್ಯ ಜ್ಞಾನೇಂದ್ರರವರನ್ನು ತಾವು ಕೇಳಬಹುದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕಳೆದ 10–12 ವರ್ಷಗಳಿಂದಲೂ ಕೂಡ ಗ್ರಾಮ ಪಂಚಾಯಿತಿಯವರೇ ಸಂಪೂರ್ಣವಾಗಿ ಕುಡಿಯುವ ನೀರಿನ ನಿರ್ವಹಣೆಯನ್ನು ಮಾಡುತ್ತಿದ್ದಾರೆ ದಿವಂಗತ ಅಬ್ದುಲ್ ನಜೀರ್ ಸಾಬ್‌ರವರು ಇದ್ದಂಥ ಸಂದರ್ಭದಲ್ಲಿ ಟ್ರೈಸಮ್ ಸ್ಕೀಮಿನಲ್ಲಿಯಾಗಲೀ, ಅಥವಾ ಉದ್ಯೋಗ ತರಬೇತಿಗೆ ಸಂಬಂಧಪಟ್ಟಂಥ ವಿಚಾರಗಳಲ್ಲಿ ಆಯಾ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರತಕ್ಕಂಥ ಯುವಕರನ್ನು, ಈ ಕೊಳವೆ ಬಾವಿಗಳ ರಿಪೇರಿ ಮುಂತಾದ ವಿಚಾರಗಳಲ್ಲಿ ತರಬೇತಿಯನ್ನು ಕೊಟ್ಟು, ಅಲ್ಲಿ ಅವರು 2–3 ಸಬ್‌ಮರ್ಸಿಬಲ್ ಪಂಪ್‌ಸೆಟ್ಟುಗಳನ್ನು ಸ್ಟ್ಯಾಂಡ್–ಬೈ ಆಗಿ ಇಟ್ಟುಕೊಳ್ಳುತಕ್ಕಂಥಾದ್ದು, ಅದರ ಜೊತೆಗೆ ಬೇಕಾದಂಥ ಸಂದರ್ಭದಲ್ಲಿ ಅವರು ಎರಡು ಟೂಲ್ ಕಿಟ್‌ಗಳನ್ನಿಟ್ಟುಕೊಂಡು ರಿಪೇರಿ ಮಾಡಬೇಕು ಎನ್ನುವ ವಿಚಾರಗಳೂ ಕೂಡ ಪ್ರಸ್ತಾಪಿಸಲ್ಪಟ್ಟಿದ್ದವು. ಆದರೆ ಈಗ ತಾವು ಹೇಳಿದಂತೆ, ಕುಡಿಯುವ ನೀರಿನ ವಿಚಾರಕ್ಕೆ ಬಂದರೆ, ಗ್ರಾಮ ಪಂಚಾಯಿತಿಗಳಲ್ಲಿ ಸಂಪೂರ್ಣವಾದಂಥ ಸಿಬ್ಬಂದಿಯಿಲ್ಲ ಹಾಗೂ ಅಲ್ಲಿ ಬೇರೆಬೇರೆ ಕಾರಣಗಳಿಂದಾಗಿ ದುರುಪಯೋಗವಾಗಿರತಕ್ಕಂಥ ಸಂದರ್ಭದಲ್ಲಿ ಕೂಡ ಇವೆ ಈ ಕಾರಣದಿಂದಾಗಿ, ಈಗಾಗಲೇ ಜಿಲ್ಲಾಪಂಚಾಯಿತಿಯವರು ತಾತ್ಕಾಲಿಕವಾಗಿ ಕೆಲವು ಕಡೆಗಳಿಗೆ ಹೋಗುತ್ತಿದ್ದಾರೆ ಆದರೆ ಅದರ ನಿರ್ವಹಣಾ ವೆಚ್ಚಕ್ಕೆ ಬೇರೆ ಒಂದು ಲೆಕ್ಕ ಶೀರ್ಷಿಕೆ ಇದೆ ಅದರಿಂದಾಗಿ ಸ್ವಲ್ಪ ತೊಂದರೆಯಾಗಿದೆ ಅಧಿಕಾರಿ ವಿಕೇಂದ್ರೀಕರಣಕ್ಕೆ ಬದ್ಧರಾಗಿರುವಂಥ ನಾವು, ಪ್ರಾರಂಭದ ಹಂತದಲ್ಲಿ ಸ್ವಲ್ಪ ತೊಂದರೆಯಾಗಿದ್ದರೂ ಕೂಡ ನಾವು ಅಲ್ಲಿ ನಾಯಕತ್ವದ ತರಬೇರಿಯನ್ನು ಮಾಡಬೇಕು ಆದ್ದರಿಂದ, ಏಕೇಕಿ ಅಧಿಕಾರಿವನ್ನು ವಾಪಸ್ಸು ತೆಗೆದುಕೊಳ್ಳುದೆ, ಅಲ್ಲಿಯ ವಾಸ್ತವ ಸಂಗತಿಗಳಿಗೆ ಅನುಗುಣವಾದಂಥ ರೀತಿಯಲ್ಲಿ ಜಿಲ್ಲಾ ಪಂಚಾಯಿತಿಯವರೇ ಕಾರ್ಯನಿರ್ವಹಣೆ ಮಾಡಬೇಕು ಎನ್ನುವ ವಿಚಾರವನ್ನು ಎಲ್ಲಾ ಮಾನ್ಯ ಶಾಸಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ ಈಗ ಇದರಲ್ಲಿ ಸ್ವಲ್ಪಮಟ್ಟಿನ ತೊಂದರೆಯಿದೆ ಈ ಖಾತೆಗೆ ಪ್ರತ್ಯೇಕ ಮಂತ್ರಿಗಳು ಬಂದಂಥ ಸಂದರ್ಭದಲ್ಲಿ ಅದಕ್ಕೆ ಹೆಚ್ಚು ಗಮನವನ್ನು ಕೊಡುತ್ತಾರೆ ತಾವು ಹೇಳಿದ ಮಾತಿನ ಹಿನ್ನಲೆಯಲ್ಲಿ, ಜಿಲ್ಲಾ ಪಂಚಾಯಿತಿಯವರು ಸರಿಯಾದಂಥ ವಾಸ್ತವ ಸಂಗತಿಗಳ ಆಧಾರದ ಮೇಲೆ ಮಾಡಬೇಕು ಎನ್ನುವ ಸೂಚನೆಯನ್ನು ನಾವು ಕಳುಹಿಸಿಕೊಡುತ್ತೇವೆ

ಏ) ಬಾಗಲಕೋಟೆಯ ಮುಳೂಗಡೆ ಯಾದವರಿಗೆ ಪರಿಹಾರ ನೀಡುವ ಬಗ್ಗೆ

ಶ್ರೀ ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) ಮಾನ್ಯ ಅಧ್ಯಕ್ಷರೇ, ಬಾಗಲಕೋಟೆಯು ಬಹಳಷ್ಟು ವರ್ಷಗಳಿಂದ ಮುಳುಗಡೆಯ ಬೇನೆಯಲ್ಲಿ ತತರಿಸುತ್ತಿದೆ ಅದಕ್ಕೆ ನಾವು ಹೋದ ವರ್ಷ ಬಹಳ ದೊಡ್ಡದಾದ ಒಂದು ಹೋರಾಟವನ್ನು ಮಾಡಿದ್ದು, ಹಿಂದಿನ ಸರ್ಕಾರ

ಅದಕ್ಕೆ 638 ಕೋಟಿ ರೂಪಾಯಿಗಳ ಒಂದು ಪ್ಯಾಕೇಜನ್ನೂ ಕೂಡ ಅನೌನ್ಸ್ ಮಾಡಿತ್ತು ಇವತ್ತು ಹಿರಿಯ ಸಚಿವರಾಗಿರುವಂಥವರೂ ಕೂಡ ಆವತ್ತು ಅಲ್ಲಿಗೆ ಬಂದು ನಮ್ಮ ಹೋರಾಟಕ್ಕೆ ಬೆಂಬಲನ್ನು ವ್ಯಕ್ತಪಡಿಸಿದ್ದರು ಆದರೆ ಈಗ ಅಲ್ಲಿ ಏನಾಗಿದೆಯೆಂದರೆ, ಅಲ್ಲಿನ ಜನರಿಗೆ ನವನಗರದಿಂದ ಯಾವುದೇ ರೀತಿಯ ಕೆಲಸ ಕಾರ್ಯಗಳು ಸಿಗುತ್ತಿಲ್ಲ

12 00 ಪಿಎಂ

ಅವರು ಹಳೆಯ ಊರಿಗೆ ಕೆಲಸ ಮಾಡಬೇಕೆಂದರೆ ಅವರಿಗೆ ಅಲ್ಲಿ 30–40 ರೂಪಾಯಿಗಳ ಕೂಲಿ ಸಿಗುವುದಿಲ್ಲ, ಅಂಥದ್ದರಲ್ಲಿ ಬಸ್ಸಿನ ದರವನ್ನು ರೂ 1.50 ರಿಂದ ಏಕಾಏಕಿ 5 ರೂಪಾಯಿಗಳಿಗೆ ಏರಿಸಿದ್ದಾರೆ ಹೀಗಾಗಿ ಹೋಗಿ ಬರುವುದಕ್ಕೆ 10 ರೂಪಾಯಿ ಬಸ್ ಚಾರ್ಜ್‌ಗೆ ವ್ಯಯವಾಗುವುದರಿಂದ ಅವರಿಗೆ ಕೂಲಿ ಏನೂ ಉಳಿಯುವುದಿಲ್ಲ ಆದ್ದರಿಂದ ದಯವಿಟ್ಟು ಮೊದಲು ಬಸ್‌ಚಾರ್ಜ್ ಒಂದೂವರೆ ರೂಪಾಯಿ ಏನಿತ್ತು ಅದನ್ನೇ ಮುಂದುವರಿಸಬೇಕು ಹಾಗೂ ಅದಕ್ಕೆ ಶಾಶ್ವತವಾದಂಥ ಪರಿಹಾರವನ್ನು ಕಂಡುಹಿಡಿಯಬೇಕೆನ್ನುವಂಥ ಒತ್ತಾಯವನ್ನು ನಾನು ಸರ್ಕಾರಕ್ಕೆ ಮಾಡುತ್ತೇನೆ ಹಾಗೂ ಆವಾಗ 638 ಕೋಟಿ ರೂಪಾಯಿಗಳ ಪ್ಯಾಕೇಜ್ ಅನ್ನು ಅನೌನ್ಸ್ ಮಾಡುವಾಗ 523ರ ವರೆಗೆ ಮೊದಲನೇ ಹಂತದಲ್ಲಿ, 525ರವರೆಗೆ 2ನೇ ಹಂತದಲ್ಲಿ ಆ ಮುಳುಗಡೆ ಪ್ರದೇಶವನ್ನು ಅಕ್ವೆಯರ್ ಮಾಡಿಕೊಳ್ಳುವಂಥ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದರು ಅವರೇ ಅಲ್ಲಿಗೆ ಬಂದು ಆ 638 ಕೋಟಿ ರೂಪಾಯಿಗಳ package ಅನ್ನು announce ಮಾಡಿದ್ದರು ಆವಾಗ 4(1) notification ಕೂಡ ಆಗಿತ್ತು ಅಲ್ಲಿಂದ ಒಂದು ವರ್ಷದಲ್ಲಿ ಆ 4(1) ನೋಟಿಫಿಕೇಶನ್‌ಗೆ 6(1) ನೋಟಿಫಿಕೇಶನ್ ಆಗದೇ ಹೋದರೆ ಅದು ರದ್ದು ಆಗುತ್ತಿದೆ ಎನ್ನುವ ಸೂಚನೆ ನಮಗೆ ತಿಳಿದುಬಂದಿದೆ ದಯವಿಟ್ಟು ಅದಕ್ಕಾಗಿ 6(1) notification ಅನ್ನು ಮಾಡಬೇಕೆನ್ನುವಂಥ ಒತ್ತಾಯವನ್ನು ಮಾಡುತ್ತೇನೆ ಮತ್ತು ಈ ಕಾರ್ಯ ಬಹಳ ಬೇಗ ಆಗಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಅವರು 4ನು ಇಡೀ ಬಾಗಲಕೋಟೆಯಲ್ಲಿ ಸತ್ಯಾಗ್ರಹ ಮಾಡುವಂಥ ಸಂದರ್ಭದಲ್ಲಿ ನಾವೆಲ್ಲಾ ಹೋಗಿದ್ದೇವೆ ಅವರ ಜೊತೆಗೆ ಸಹಮತವನ್ನು ವ್ಯಕ್ತಮಾಡಿ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಕೂಡ ನಾವು ಸೆಳೆದಂಥ ಸಂದರ್ಭದಲ್ಲಿ 524 ರ ವಿಚಾರದಲ್ಲಿ ಈಗ ಸುಪ್ರೀಂಕೋರ್ಟ್‌ನಲ್ಲಿ ಆಂಧ್ರಪ್ರದೇಶದವರು ಮಾಡಿರುವಂಥ ಒಂದು ವಿವಾದ ತಮಗೆ ಗೊತ್ತಿರತಕ್ಕಂಥದ್ದು ನಾವು 519 ಮತ್ತು 524ರ ನಡುವೆ ನಿಲ್ಲಿಸುವಂಥ ನೀರು ಏನಿದೆ, ಅದನ್ನು ವಿದ್ಯುಚ್ಛಕ್ತಿಗೆ ಬಳಸಿಕೊಳ್ಳುತ್ತೇವೆ ಮತ್ತೆ ನೀರನ್ನು ನಿಮಗೇ ಬಿಡುತ್ತೇವೆ ಎನ್ನುವಂಥ ಮಾತು ಇದೆ ಈ ವಿಚಾರ ಸುಪ್ರೀಂಕೋರ್ಟ್‌ನಲ್ಲಿ ಈಗಾಗಲೇ ಇರುವುದರಿಂದ ಆ ವಿವಾದದ ಬಗ್ಗೆ ನಾನೇನು ಹೆಚ್ಚಿಗೆ ಹೇಳತಕ್ಕಂಥದ್ದೇನೂ ಇಲ್ಲ ಆದರೆ ಅಲ್ಲಿರುವಂಥ ಬಾಗಲಕೋಟೆಯ ನಿವಾಸಿಗಳು ಹೇಳತಕ್ಕಂಥದ್ದು 524ಕ್ಕೆ ಅಂತಿಮವಾಗಿ ನಿರ್ಧಾರ ಆದಂಥ ಸಂದರ್ಭದಲ್ಲಿ 525ರ contour ವರೆಗೆ ನೀರನ್ನು ನಿಲ್ಲಿಸತಕ್ಕಂಥ ಸಂಭವ ಬರಬಹುದು ಅಥವಾ ಅದರ ಅಚೆ ಇರುವಂಥ ಜಮೀನುಗಳಿಗೆ ಮತ್ತು ಮನೆಗಳು ಇರತಕ್ಕಂಥವರು ವಾಸ ಮಾಡಲಿಕ್ಕೆ ಅಯೋಗ್ಯವಾಗುತ್ತದೆ, ಅಲ್ಲಿ ರೋಗರುಜಿನಗಳಿಗೆ ಅವರು ತುತ್ತಾಗುತ್ತಾರೆ, ಆ ಕಾರಣಕ್ಕಾಗಿ ಅಲ್ಲಿರುವವರಿಗೂ ಕೂಡ ನೀವು ಪರಿಹಾರವನ್ನು ಕೊಡಬೇಕೆನ್ನುವಂಥ ಮಾತೇನು ಇದೆ, ಸರ್ಕಾರ ಅದಕ್ಕೇ ಒಪ್ಪಿದೆ ಅದಕ್ಕಾಗಿ 680 ಕೋಟಿ ರೂಪಾಯಿಗಳ ಒಂದು ವಿಶೇಷ package

ಅನ್ನುಕೊಡುವುದರ ಜೊತೆಗೆ 4(1) notification ಆ ಸಂದರ್ಭದಲ್ಲಿ ಆಯಿತು 4(1) ನೋಟಿಫಿಕೇಷನ್ ಆದ ತಕ್ಷಣವೇ 6(1) ನೋಟಿಫಿಕೇಷನ್ ಆಗುವುದಿಲ್ಲವೆನ್ನುವಂಥದ್ದು ಏನಿದೆ, ಆ ಬಗ್ಗೆ ತಾವು ಆತಂಕ ಪಡಬೇಕಾದಂಥದ್ದು ಇಲ್ಲ ಈ ಸರ್ಕಾರ ಅಂಥ ದಿಶೆಯಲ್ಲಿ ಯೋಚನೆ ಮಾಡುತ್ತಿಲ್ಲ ತಾವು ಹೇಳಿದಂತೆ ಅದನ್ನು ಖಂಡಿತವಾಗಿಯೂ ಕೂಡ 525ರ ವರೆಗೆ ಇರತಕ್ಕಂಥದ್ದಕ್ಕೆ ನಾವು ಪರಿಹಾರವನ್ನು ಕೊಡಬೇಕಾಗುತ್ತದೆ, ಪುನರ್‌ವ್ಯವಸ್ಥೆಯ ಏರ್ಪಾಡುಗಳನ್ನು ಸಹ ಮಾಡಬೇಕಾಗುತ್ತದೆ ಇನ್ನು ಬಸ್ಸಿನ ವಿಚಾರವಾಗಿ ಹೇಳುವುದಾದರೆ, ತಾತ್ಕಾಲಿಕವಾಗಿ ಪುನರ್‌ವಸತಿಗೆ ಸಂಬಂಧಪಟ್ಟಂಥವರು ತಮ್ಮ ಹಳೆಯ ಊರಿಗೆ ಹೋಗಬೇಕಾಗುತ್ತದೆ ನವಗ್ರಾಮದ ಮೂಲಕವಾಗಿ ಅಲ್ಲಿಗೆ ಹೋಗಲಿಕ್ಕೆ ಬಹಳ ತೊಂದರೆಯಾಗುತ್ತದೆ ಎನ್ನುವಂಥ ಸಂದರ್ಭದಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯ ಪುನರ್‌ವಸತಿಗೆ ಸಂಬಂಧಪಟ್ಟಿರತಕ್ಕಂಥವರು ಅದನ್ನು subsidize ಮಾಡಿದರು ಕೆ.ಎಸ್ ಆರ್ ಟಿ.ಸಿಗೆ ಸಂಬಂಧಪಟ್ಟಂತೆ ಒಂದೂವರೆ ರೂಪಾಯಿ ದರ ಇತ್ತು ಆ ಒಂದೂವರೆ ರೂಪಾಯಿಗಿಂತ ಮಿಕ್ಕಿ ಬಂದಂಥದ್ದು ಅಂದರೆ ಆ ಮೂರುವರೆ ರೂಪಾಯಿ ದರವನ್ನು ಪುನರ್‌ವಸತಿಗೆ ಸಂಬಂಧಪಟ್ಟಿರತಕ್ಕಂಥ ಅಧಿಕಾರಿಗಳಾದ ಮಾನ್ಯ ಜಾಮ್‌ದಾರ್‌ರವರು ಇದರ ಬಗ್ಗೆ ವಿಶೇಷ ಸಹಾನುಭೂತಿಯಿಂದ ಒಂದು ಕಾಲಮಿತಿಯಾದ ಅವಧಿಯಲ್ಲಿ ಅದನ್ನು ನಾವು ಕೊಡುತ್ತೇವೆ ಎನ್ನುವಂಥ ಮಾತನ್ನು ಹೇಳಿದರು ಆದರೆ ಆ ಕಾಲಮಿತಿ ಈಗಾಗಲೇ ಮುಗಿದು ಹೋಗಿದೆ ಆದರೆ ಅದನ್ನು ನಿರಂತರವಾಗಿ ಕೊಡಲಿಕ್ಕೆ ನಮಗೆ ಸಾಧ್ಯವಾಗುವುದಿಲ್ಲ ಆದರೆ ಈಗ ಸ್ವಲ್ಪ ದಿವಸಗಳ ವರೆಗೆ ವಿಸ್ತರಿಸಬಹುದೇನೋ, ಮಾನ್ಯ ಶಾಸಕರು ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ನಾನು ಶ್ರೀ ಜಾಮ್‌ದಾರರ ಜೊತೆಗೆ ಕೂಡ ಸರ್ಕಾರದ ಮಾತನಾಡಿ ಇನ್ನು ಸ್ವಲ್ಪ ದಿವಸಗಳ ಕಾಲಕ್ಕಾದರೂ ಕೂಡ ಇದರ ವ್ಯವಸ್ಥೆ ಮಾಡಬಹುದೆಂದು ಹೇಳುತ್ತೇನೆ ಪೂರ್ಣ ಮಾಹಿತಿ ಬಂದಮೇಲೆ ಮನ್ಯ ಶಾಸಕರಿಗೆ ಈ ವಿಚಾರವನ್ನು ತಿಳಿಸುತ್ತೇನೆ

ವಿಷಯ (ಐ) ರಾಜಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಕೊಳಚೆ ನಿರ್ಮೂನ ಮಂಡಳಿ ನೋಟಿಫೈ ಮಾಡಿದ ಜಾಗದಲ್ಲಿರುವ ಅಂಗನವಾಡಿ ಕೇಂದ್ರವನ್ನು ತೆರವು ಗೊಳಿಸಿರುವ ಬಗ್ಗೆ

†ಶ್ರೀ ಎನ್ ಎಲ್ ನರೇಂದ್ರ ಬಾಬು (ರಾಜಾಜಿನಗರ) ಮಾನ್ಯ ಅಧ್ಯಕ್ಷರೆ, ನಮ್ಮ ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಪಶ್ಚಿಮಕಾರ್ಡ್ ರಸ್ತೆಯ ಶಿವನಹಳ್ಳಿ ಸರ್ವೆ ನಂಬರ್ 5 ಹಾಗೂ 8ರ ಮಧ್ಯದಲ್ಲಿ slum clearance board notify ಮಾಡಿರತಕ್ಕಂಥ ಗುಡಿಸಲುಗಳು, ಗುಡಿಸಲು ಮನೆಗಳು, ಇಲ್ಲಿ ಪರಿಶಿಷ್ಟ ಜಾತಿ ಹಿಂದುಳಿದ ವರ್ಗದವರು ಮತ್ತು ಆರ್ಥಿಕವಾಗಿ ದುರ್ಬಲವರ್ಗದವರು ವಾಸಿಸುತ್ತಿರುವಂಥ ಮನೆಗಳನ್ನು ಕಳೆದ ಮೂರು ದಿವಸಗಳ ಹಿಂದಿನಿಂದ ಹಿರಂತರವಾಗಿ ಪಟ್ಟಭದ್ರ ಹಿತಾಸಕ್ತಿಗಳು ಆ ಜಾಗವನ್ನು slum clearance board notify ಮಾಡಿದ್ದರೂ ಸಹ, ನಾನು ಪೋಲೀಸ್ ಇಲಾಖೆಯ ಗಮನಕ್ಕೂ ತಂದಿದ್ದೇನೆ, ಅವರು ಅದನ್ನು demolish ಮಾಡಿ ಅಲ್ಲಿ ನಡೆಯುತ್ತಿದ್ದಂಥ ಅಂಗನವಾಡಿ ಕೇಂದ್ರದ ಸಾಮಾನನ್ನು ತೆಗೆದು ಹೊರಗೆ ಹಾಕಿರುವಂಥದ್ದು ಮತ್ತು ಅಲ್ಲಿ ನೆಲೆಸಿರತಕ್ಕಂಥ ಬಡಜನ, ಹಿಂದುಳಿದ ಮತ್ತು ಪರಿಶಿಷ್ಟ ಜನ ನಿನ್ನೆ ರಾತ್ರಿಯಷ್ಟೇ ನನ್ನ ಬಳಿ ಬಂದು ಅವರ ಭಯ ಮತ್ತು ಆತಂಕವನ್ನು ವ್ಯಕ್ತಪಡಿಸಿದ್ದಾರೆ ಅವರಿಗೆ ಯಾವ ರೀತಿಯಾದಂಥ ಬೆದರಿಕೆಯನ್ನು ಹಾಕಿದ್ದಾರೆಂದರೆ, ನೀವೇನಾದರೂ ಖಾಲಿ ಮಾಡದೇ ಹೋದರೆ ಆ ಜಾಗದಲ್ಲಿ ನಾವು ಬೇರೆ ರೀತಿಯಲ್ಲಿ ನಡೆದುಕೊಳ್ಳಬೇಕಾಗುತ್ತದೆ ಎನ್ನತಕ್ಕಂಥ ಬೆದರಿಕೆಯನ್ನು ಹಾಕಿದ್ದಾರೆ

ನಾನು ತಮ್ಮ ಮುಖೇನ ಹಾಗೂ ಈ ಸದನದಲ್ಲಿ ವಿನಂತಿಸುವುದೇನೆಂದರೆ, ಇದರ ಬಗ್ಗೆ ಆ ಜನಗಳಿಗೆ ರಕ್ಷಣೆ ಕೊಡಬೇಕು, ಈಗಾಗಲೇ ಏನು slum clearance board notify ಮಾಡಲಿಕ್ಕೆ ಕ್ರಮವನ್ನು ತೆಗೆದುಕೊಂಡಿದೆ, ಅದನ್ನು ಆದಷ್ಟು ಬೇಗ, ಮಾಡಿ, ಅಲ್ಲಿ ಬಡವರು ಸುಮಾರು 20–25 ವರ್ಷಗಳಿಂದ ಆ ಜಾಗದಲ್ಲಿ ಏನು ನೆಲೆಸಿದ್ದಾರೆ, ಅವರಿಗೆ ಸೂಕ್ತ ರಕ್ಷಣೆಯನ್ನು ಕೊಡಬೇಕು, ಇಲ್ಲದಿದ್ದರೆ ಅಲ್ಲಿ ಬಹಳಷ್ಟು ಜನಗಳಿಗೆ ಕಷ್ಟವಾಗುತ್ತದೆ ಅಲ್ಲಿರತಕ್ಕಂಥ ಜನ ಅವರಿಗೆ ಬಾಯಿ ಇಲ್ಲದಂಥ ರೀತಿಯಲ್ಲಿ ಆಗಿದ್ದಾರೆ ದಯವಿಟ್ಟು ತಮ್ಮ ಮುಖೇನ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ, slum clearance board notify ಮಾಡಿರತಕ್ಕಂಥ proceedings ಅನ್ನು ಮುಂದುವರಿಸಿ ಸೂಕ್ತ ಕ್ರಮ ತೆಗೆದುಕೊಂಡು ಅಲ್ಲಿಯ ಜನರಿಗೆ ರಕ್ಷಣೆ ಕೊಡಬೇಕು ಮತ್ತು ಅಂಗನವಾಡಿ ಕೇಂದ್ರದ ಟೀಚರ್‌ಗೆ ಸಹ ಬೆದರಿಕೆ ಹಾಕಿದ್ದಾರೆ ಬಸವೇಶ್ವರನಗರ ಪೊಲೀಸ್ ಠಾಣೆಗೆ ಈ ಬಗ್ಗೆ ದೂರನ್ನು ಕೊಟ್ಟಿರತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ ಈ ರೀತಿ ನೆಲವನ್ನು ಕಬಳಿಸತಕ್ಕಂಥ ಅಥವಾ ಕಾನೂನಿನ ರೀತಿಯಲ್ಲಿ ಅಲ್ಲಿ proceedings ಆಗದೇ ಇರುವಾಗ ಅವರು ನೆಲವನ್ನು ಅಥವಾ ಮನೆಗಳನ್ನು ಒಡೆಯಲಿಕ್ಕೆ ಹೇಗೆ ಸಾಧ್ಯ? Karnataka Municipal ಕಾಯಿದೆ ಹಾಗೂ buildings ಬೈಲಾ ಪ್ರಕಾರವಾಗಿ ಯಾವುದೇ ಕಟ್ಟಡವನ್ನು demolish ಮಾಡಬೇಕಾದರೆ ಕಟ್ಟಬೇಕಾದರೆ ಇವರು ಅನುಮತಿಯನ್ನು ಸಂಬಂಧಪಟ್ಟ Local bodies ನಿಂದ ತೆಗೆದುಕೊಳ್ಳಬೇಕು ಅದ್ಯಾವುದೂ ತೆಗೆದುಕೊಳ್ಳದೆ ಇವತ್ತು ಮಾಡಿರತಕ್ಕಂಥದ್ದು ಆತಂಕ ಉಂಟುಮಾಡಿದೆ ಎನ್ನುವುದರ ಬಗ್ಗೆ ಈ ಸಂದರ್ಭದಲ್ಲಿ ತಮ್ಮ ಮೂಲಕ ಸಂಬಂಧಪಟ್ಟವರ ಗಮನವನ್ನು ಸೆಳೆಯಲಿಕ್ಕೆ ಬಯಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಈಗತಾನೆ ಈ ವಿಷಯ ಪ್ರಸ್ತಾಪಿಸಲ್ಪಟ್ಟಿದೆ ಬಹಳ ಗುರುತರವಾದಂಥ ವಿಚಾರಗಳಿವೆ ನಾನು ಈ ಕೂಡಲೇ ಅಧಿಕಾರಿಗಳ ಜೊತೆಗೆ ಮಾತನಾಡಿ ಸಾಧ್ಯವಾದರೆ ಈ ದಿವಸವೇ ಇಲ್ಲದಿದ್ದರೆ ನಾಳೆ ಮಾನ್ಯ ಶಾಸಕರಿಗೆ ಸಂಪೂರ್ಣ ಮಾಹಿತಿಯನ್ನು ಕೊಡತಕ್ಕಂಥದ್ದನ್ನು ಮಾಡುತ್ತೇವೆ ರಕ್ಷಣೆಯನ್ನು ಖಂಡಿತವಾಗಿ ಕೊಡುತ್ತೇವೆ

ವಿಷಯ(ಕ) ತುಮಕೂರು ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿ

ಶ್ರೀ ಕೆ ಎನ್ ರಾಜಣ್ಣ (ಬೆಳ್ಳಾವಿ) ತುಮಕೂರು ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ವಶದಲ್ಲಿರತಕ್ಕಂಥ ರಸ್ತೆಗಳು, ಜಿಲ್ಲಾ ಪಂಚಾಯತಿ ವಶದಲ್ಲಿ ಬರತಕ್ಕಂಥ ರಸ್ತೆಗಳು ಅದು ಎಷ್ಟು ಹಾಳಾಗಿದೆ ಎಂದರೆ ಯಾರಾದರೂ ಗರ್ಭಿಣಿ ಹೆಂಗಸು ಆ ರಸ್ತೆಯಲ್ಲಿ ಪ್ರಯಾಣ ಮಾಡಿದರೆ ಆಸ್ಪತ್ರೆಗೆ ತಲುಪತಕ್ಕಂಥ ಅವಶ್ಯಕತೆಯೇ ಇರುವುದಿಲ್ಲ ಆ ಮಟ್ಟಕ್ಕೆ ಆ ರಸ್ತೆಗಳು ಹಾಳಾಗಿವೆ ಅಂಥ ರಸ್ತೆಗಳನ್ನು ದುರಸ್ತಿ ಮಾಡಲಿಕ್ಕೆ ಪದೇ ಪದೇ ಸಂಬಂಧಪಟ್ಟಂಥ ಇಲಾಖೆಯ ಅಧಿಕಾರಿಗಳಿಗೆ ನಾವು ಮನವಿಮಾಡಿದರೂ ಕೂಡ ಕ್ರಮ ಜರುಗಿಸಿಲ್ಲ ಎಂದು ಹೇಳಿ 15ನೇ ತಾರೀಖು ಆ ರಸ್ತೆಯಲ್ಲಿ ಓಡಾಡತಕ್ಕಂಥ ಪ್ರಯಾಣಿಕರು ಎಲ್ಲರೂ ಕೂಡ 28– ಪ್ರತಿಭಟನೆಯನ್ನು ಮಾಡಿದ್ದಾರೆ, ಇಷ್ಟೊಂದು ಜನರಿಂದ ಅಲ್ಲಿ ಪ್ರತಿಭಟನೆ ಇದ್ದರೂ ಕೂಡ ಈ ಬಗ್ಗೆ ಸೂಕ್ತ ಗಮನವನ್ನು ಸಂಬಂಧಪಟ್ಟ ಇಲಾಖೆಯ ಹಿರಿಯ ಅಧಿಕಾರಿಗಳು ವಹಿಸಿಲ್ಲ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಾ ಈ ಒಂದು ವಿಚಾರದಲ್ಲಿ ಸರ್ಕಾರದ ವತಿಯಿಂದ ತುರ್ತು ಕ್ರಮವನ್ನು ತೆಗೆದುಕೊಳ್ಳಬೇಕು ಲೋಕೋಪಯೋಗಿ

ವಶದಲ್ಲಿ ಬರತಕ್ಕಂಥ ರಸ್ತೆಗಳು ಹಾಗೂ ಜಿಲ್ಲಾಪಂಚಾಯತಿ ವಶದಲ್ಲಿ ಬರತಕ್ಕಂಥ ರಸ್ತೆಗಳನ್ನು ಆದಷ್ಟು ಜಾಗ್ರತೆ ದುರಸ್ಥಿ ಮಾಡಿಸತಕ್ಕಂಥ ಶೀಘ್ರವಾಗಿ ಮಾಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಮಳೆ ಜಾಸ್ತಿ ಬಂದಿರುವಂಥ ಪ್ರದೇಶದಲ್ಲಿ ಈ ರೀತಿ ರಸ್ತೆಗಳು ಹಾಳಾಗಿವೆ ಎನ್ನುವುದನ್ನು ಅನೇಕ ಶಾಸಕರು ಮತ್ತು ಸಾರ್ವಜನಿಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ ಪ್ರಕೃತಿ ವಿಕೋಪ ನಿಧಿಯಿಂದ ನಮಗೆ ಈಗಾಗಲೇ ಬೇರೆ ಬೇರೆ ಜಿಲ್ಲೆಗಳಿಗೆ ವಹಿಸಿಕೊಟ್ಟಿರುವಂಥ ಆಹಾರಧಾನ್ಯಗಳನ್ನು ಉಪಯೋಗಿಸಿ ಅದರ ಮೂಲಕ ತುರ್ತಾಗಿ ಕೆಲಸವನ್ನು ಪ್ರಾರಂಭ ಮಾಡಿ ಎಂದು ಹೇಳಿದ್ದೇವೆ ಆದರೆ ಅದಕ್ಕೆ ಬೇಕಾಗಿರತಕ್ಕಂಥ ನಗದು ಹಣದ ಹೊಂದಾಣಿಕೆ ಇಲ್ಲಿಯವರೆಗೂ ಕೂಡ ಆಗಿಲ್ಲ ಈಗಾಗಲೇ ಉಪ ಮುಖ್ಯಮಂತ್ರಿಗಳ ಜೊತೆಗೆ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ ಆ ನಗದು ಹಣವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ ಈ ಪ್ರಕೃತಿ ವಿಕೋಪ ನಿಧಿಯಿಂದ ಎಷ್ಟು ಸಾಧ್ಯವೋ ಅಷ್ಟನ್ನು ಆಯಾಯ ಜಿಲ್ಲೆಯ ಶಾಸಕರ ಶಿಫಾರಸ್ಸಿನ ಮೇಲೆ ಹಾಳಾಗಿರತಕ್ಕಂಥ ರಸ್ತೆಗಳ ದುರಸ್ತಿ ಕಾರ್ಯವನ್ನು ಕೈಗೊಳ್ಳುತ್ತೇವೆ ಮತ್ತು ಲೇಕೋಪಯೋಗಿ ಇಲಾಖೆಯ ರಸ್ತೆಗಳ ವಿಚಾರದಲ್ಲಿಯೂ ಕೂಡ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಸದನದಲ್ಲಿ ತಮ್ಮ ಅಪ್ಪಣೆಯ ಮೇರೆಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ

ವಿಷಯ (ಖ) ಆಶ್ರಯ ಮನೆಗಳ ರಿಜಿಸ್ಟ್ರೇಷನ್ ಅವಧಿಯನ್ನು ವಿಸ್ತರಿಸುವ ಬಗ್ಗೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ಆಶ್ರಯ ಮನೆಗಳ ವಿತರಣೆಯನ್ನು ಚುನಾವಣೆಯ ಪೂರ್ವದಲ್ಲಿ ನಾವು ಮಾಡಿದ್ದೆವು ಅದಕ್ಕೆ ರಾಜೀವಗಾಂಧಿ ಹೌಸಿಂಗ್ ಕೊ–ಆಪರೇಟೀವ್ ಸೊಸೈಟಿಯಿಂದ ಒಂದು ಸರ್ಕ್ಯುಲರ್ ಹೊರಡಿಸಿ ಮೇ 31ನೇ ತಾರೀಖಿನೊಳಗೆ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳದಿದ್ದರೆ ಅದನ್ನೆಲ್ಲವನ್ನು ಕ್ಯಾನ್ಸಲ್ ಮಾಡುತ್ತೇವೆಂದು ಹೇಳಿದ್ದರೆ ಪುನಃ ಅದನ್ನು ಜೂನ್ 30 ನೇ ತಾರೀಖಿನವರೆಗೆ extend ಮಾಡಿದ್ದಾರೆ ಆದರೆ ಅವರಿಗೆ ರಿಜಿಸ್ಟ್ರೇಷನ್ ಮಾಡಬೇಕಾದರೆ ಆರ್ ಟಿ ಸಿ ಎಲ್ಲವನ್ನೂ ಪಡಯಬೇಕಾಗುತ್ತದೆ ಈ ಚುನಾವಣೆ ಸಂದರ್ಭದಲ್ಲಿ ಕಂದಾಯ ಇಲಾಖಾಧಿಕಾರಿಗಳು ಎಲ್ಲರೂ ಚುನಾವಣೆಯ ಕೆಲಸದಲ್ಲಿದ್ದರು ಆರ್ ಟಿ ಸಿ ಪಡೆಯುವುದು, ರಿಜಿಸ್ಟರ್ ಮಾಡುವುದು ಬಹಳ ತಡವಾಗುತ್ತಿರುವುದರಿಂದ, ಅದನ್ನು ಕ್ಯಾನ್ಸಲ್ ಮಾಡಬಾರದು ಒಂದು ವೇಳೆ ಟೈಂ ಕೊಡುವುದಾದರೆ ಡಿಸೆಂಬರ್‌ವರೆಗೆ ಎಕ್ಸ್‌ಟೆಂಡ್ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳುತ್ತೇನೆ ಏಕೆಂದರೆ, ಕೊಟ್ಟು ಉದ್ದೇಶವೇ ಸಫಲವಾಗುವುದಿಲ್ಲ ಅದಕ್ಕೆ ಗಡಿಯನ್ನು ತೆಗೆದು ಹಾಕಬೇಕು ಇಲ್ಲದಿದ್ದರೆ, ಡಿಸೆಂಬರ್‌ವರೆಗೆ ಆದರೂ ಎಕ್ಸ್‌ಟೆಂಷನ್ ಕೊಡಬೇಕು

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಈಗಾಗಲೇ ಅನೇಕ ಶಾಸಕರು ಆಶ್ರಯ ಯೋಜನೆಗಳ ವಿಚಾರದಲ್ಲಿ ಪ್ರಸ್ತಾಪಿಸಿದ್ದಾರೆ ಈಗಾಗಲೇ ನಾವು ನಿರ್ಧಾರ ತೆಗೆದುಕೊಂಡಿದ್ದೇವೆ ಮುಂದೆ ಆಶ್ರಯ ಯೋಜನೆಗಳಾಗಬಹುದು ಅಥವಾ ಅದರ ಸಮಿತಿಯಗಳಾಗಬಹುದು ಅಥವಾ ಆರಾಧನಾ ಸಮಿತಿಗಳಾಗ ಬಹುದು, ಆ ಸಮಿತಿಗಳನ್ನು ಆಯಾಯ ತಾಲ್ಲೂಕಿನಲ್ಲಿ, ಆಯಾಯ ಶಾಸಕರ ಅಧ್ಯಕ್ಷತೆಯಲ್ಲಿ ಸಭೆಯನ್ನು, ಸಮಿತಿಯನ್ನು ಮಾಡುವ ನಿರ್ಧಾರ ಮಾಡಿದ್ದೇವೆ ಅದರ ಜೊತೆಗೆ, ಸುತ್ತೋಲೆ ಕೂಡ ಹೋಗುತ್ತದೆ ಆದರೆ, ಹಿಂದಿನ ಬಾರಿ ಯಾರ್ಯಾರು ಫಲಾನುಭವಿಗಳ ಯಾದಿಯನ್ನು ತಯಾರಿಸಿದ್ದಾರೆ, ಅದರಲ್ಲಿ ಕೆಲವು

ಹೊಸ ಶಾಸಕರುಗಳು ಆಕ್ಷೇಪಣೆ ಮಾಡಿದ್ದಾರೆ ಆ ಸಂದರ್ಭದಲ್ಲಿ ಕೂಡ ನಾವು ಸೂಚನೆ ಕಳುಹಿಸಿಕೊಟ್ಟಿದ್ದೇವೆ ಅನರ್ಹ ಫಲಾನುಭವಿಗಳೇನಾದರೂ ಆ ಯಾದಿಯಲ್ಲಿದ್ದರೆ, ಆ ಅನರ್ಹ ಫಲಾನುಭವಿಗಳನ್ನು ನಾವು ವಿಚಾರಣೆ ಮಾಡಿ, ಅವರನ್ನು ತೆಗೆದು ಹಾಕಿ ಎನ್ನುವ ಮಾತನ್ನು ಹೇಳಿದ್ದೇವೆ. ತಾವು ಹೇಳಿದಂತೆ, ಈ ದಿವಸವೇ ನಾವು ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್‌ನ ಮಾನ್ಯ ಎಂ ಡಿ ಶ್ರೀಶೈಲಂರವರ ಜೊತೆ ಮಾತನಾಡಿ ಆ ಗಡುವನ್ನು ವಿಸ್ತರಿಸುವ ಕೆಲಸ ಮಾಡುತ್ತೇವೆ ರಿಜಿಸ್ಟ್ರೇಷನ್ ಆಗದಿದ್ದರೆ, ಕೆಲಸವಾಗುವುದಿಲ್ಲವೆನ್ನುವಂಧಾದ್ದಿದೆ ನಾವು ಕೂಡಲೇ ನಮ್ಮ ಗುರಿಯನ್ನು ಮುಟ್ಟಿದ್ದಿದ್ದರೆ, ಹುಡ್ಕೋದಿಂದ ಬರುವ ಸಾಲ, ಕೇಂದ್ರ ಸರ್ಕಾರದಿಂದ ಬರುವ ಸಾಲಕ್ಕೂ ತೊಂದರೆಯಾಗುತ್ತದೆ ತಾವು ಹೇಳಿದ ಮಾತಿಗೆ ನಾವು ಗುಡುವನ್ನು ವಿಸ್ತರಿಸಲಿಕ್ಕೆ ಅವರ ಜೊತೆ ಮಾತನಾಡುತ್ತೇವೆ

ಜ) ವಿಷಯ ಮೈಸೂರಿನಲ್ಲಿ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಎಂಬ ಸಂಸ್ಥೆ ಜಾಹೀರಾತು ನೀಡಿರುವ ಬಗ್ಗೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಇಲ್ಲಿ ಒಂದು ಅಡ್ವರ್‌ಟೈಸ್‌ಮೆಂಟ್ ನೋಡಿ ನಾನು ಇದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ ಮೈಸೂರಿನ ದಳವಾಯಿ ಹೈಸ್ಕೂಲ್ ಕಟ್ಟಡದಲ್ಲಿ ನಡೆಯುತ್ತಿರುವ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಂಗ್ ಇವರದ್ದು ಒಂದು ಅಡ್ವರ್‌ಟೈಸೆಮೆಂಟ್ ಬಂದಿದೆ ಇದರಲ್ಲಿ ಏನು ಹೇಳುತ್ತಾರೆಂದರೆ, ಇಂಜಿನಿಯರಿಂಗ್‌ಗೆ ಸಮಾನವಾದ ಕೋರ್ಸ್ ಎಂದು ಇವರು ಹೇಳುತ್ತಾರೆ ಅದರಲ್ಲಿ Air Hostess Engineering, Marine Engineering, Electronic Engineering ಎಲ್ಲವನ್ನೂ ಕೊಟ್ಟು ಒಂದು ನೋಟ್ ಅನ್ನು ಕೊಡುತ್ತಾರೆ ಫೀಸ್ ಎಲ್ಲಾ ಹಾಕಿ, The above Engineering courses are recognised by Government of India and all the state Governments as equivalent to B E degree in Engineering ಎಂದು ಹಾಕುತ್ತಾರೆ ಇದರ ಸತ್ಯಾಸತ್ಯತೆ ಬಗ್ಗೆ ತಿಳಿದುಕೊಳ್ಳಬೇಕು ಏಕೆಂದರೆ, ಮುಗ್ಧ ಮಕ್ಕಳು ಅಲ್ಲಿ ಹೋಗಿ ಫೀಸ್ ಕಟ್ಟಿ, ಕೆಲವು ದಿವಸ ಕೋರ್ಸಿಗೆ ಹೋಗಿ, ನಂತರ ಬೋಗಸ್ ಎಂದು ಆದರೆ ಅದರಿಂದ ದೊಡ್ಡ ಸಮಸ್ಯೆ ಉದ್ಭವವಾಗುತ್ತದೆ ಅವರೇನು ಹೇಳುತ್ತಾರೆಂದರೆ, ಈ ಸಿ ಇ ಟಿ ಪ್ರಾಬ್ಲಂ ಇದ್ದದ್ದರಿಂದ, ಇದನ್ನು ಪ್ರಾರಂಭ ಮಾಡಿದ್ದೇವೆ ಎಂದು ಹೇಳುತ್ತಾರೆ ಅದಕ್ಕೋಸ್ಕರ ದಯವಿಟ್ಟು ಸರ್ಕಾರದವರು ಇದರ ಬಗ್ಗೆ ಗಮನಹರಿಸಬೇಕು ಒಂದು ವೇಳೆ ರೆಕಗ್ನೈಸ್ಡ್ ಆದರೆ ನಾವು ಅದರ ಬಗ್ಗೆ ಆತಂಕ ಪಡುವುದಿಲ್ಲ ಆದರೆ, ಅದು ರೆಕಗ್ನೈಸ್ಡ್ ಹೌದೋ, ಅಲ್ಲವೋ? ಒಂದು ವೇಳೆ Whether is is equivalent to B E ? ಇದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು, ಸುಳ್ಳಾದರೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇವೆ

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) ಇದರ ಬಗ್ಗೆ ನಮಗೆ ಯಾವುದೇ ಖಚಿತವಾದ ದೂರು ಬಂದಿಲ್ಲ ಅವರು ಅನ್-ರೆಕಗ್ನೈಸ್ಡ್ ಕಾಲೇಜು ಪ್ರಾರಂಭ ಮಾಡಿದ್ದರೆ, ಪೇರೆಂಟ್ಸ್ ಅನ್ನು ತಪ್ಪುದಾರಿಗೆ ಎಳೆದಿದ್ದರೆ ಎಳೆದಿದ್ದರೆ, ಅದಕ್ಕೆ ನಾವು ಜವಾಬ್ದಾರರಲ್ಲ ನಮಗೆ ಇಲ್ಲಿಯವರೆಗೆ ಯಾವುದೇ ದೂರು ಬಂದಿಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅವರು ಅಡ್ವರ್‌ಟೈಸ್‌ಮೆಂಟ್ ಕೊಟ್ಟಿದ್ದಾರೆ

ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ) ತಾವು ಹಿರಿಯರಾಗಿ ಈ ರೀತಿ ಹೇಳಬಾರದು

Sri K Jayaprakash Hegde They have advertised that Government of India has recognised it

Sri K R Ramesh Kumar He is misleading the public You must immediately initiate action, get the information ಅವರಿಗೆ ರೆಕಗ್ನಿಷನ್ ಇಲ್ಲದೇ, ಅಡ್ವರ್ಟೈಸ್‌ಮೆಂಟ್ ಕೊಟ್ಟಿದ್ದರೆ, you must take criminal action against that fellow that fellow Can the Government plead helplessness? ಎಲ್ಲಾದರೂ ಉಂಟೆ, You can't wait for a complaint from the parents You should immediately suomoto start the action Get the information telephonically from your officers whether that institution has the recognisition ಅವರಿಗೆ ರೆಕಗ್ನಿಷನ್ ಇಲ್ಲವೆಂದರೆ, by this evening you must initiate criminal action against them

ಶ್ರೀ ಡಿ ಮಂಜುನಾಥ ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರ ಸಲಹೆ ಪ್ರಕಾರ, ಇವತ್ತಿನ ದಿವಸ ತಕ್ಷಣ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತೇವೆ

ಶ್ರೀ ಎಂ ಪಿ ಪ್ರಕಾಶ್ ಅದಕ್ಕೆ ಪೂರಕವಾಗಿ ನಾನು ಮಾನ್ಯ ಉನ್ನತ ಶಿಕ್ಷಣ ಸಚಿವರು ಹೇಳಿದ ಮಾತಿಗೆ ..

ಅಧ್ಯಕ್ಷರು ಗಂಭೀರವಾದ ಸಮಸ್ಯೆಯನ್ನು ಮಾನ್ಯ ಹೆಗ್ಡೆಯವರು ಎತ್ತಿದ್ದಾರೆ ಅನೇಕ, ಜನ, ಅನೇಕ ರೀತಿಯಲ್ಲಿ, ಈ ದೇಶದಲ್ಲಿ ಸರ್ಕಾರಗಳೇ ಇಲ್ಲವೆನ್ನುವ ರೀತಿಯಲ್ಲಿ ಸಂಘ-ಸಂಸ್ಥೆಗಳು .. ಇವೆಲ್ಲಾ ಮಾಡುತ್ತಿವೆ ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕು ಅದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು

ಶ್ರೀ ಎಂ ಪಿ ಪ್ರಕಾಶ್ ಹಿಂದೆ ವಿಧಾನ ಸೌಧ ಹಿನ್ನೆಲೆಯನ್ನಿಟ್ಟುಕೊಂಡು ಒಬ್ಬ ಮಹನೀಯ ತಾಂತ್ರಿಕ ವಿದ್ಯಾಲಯವನ್ನು ಮಾಡುತ್ತೇನೆ ಎಂಬ ಹೇಳಿಕೆ ಕೊಟ್ಟಿದ್ದಿತ್ತು ಅದೇ ರೀತಿ, ವೈಟ್‌ಫೀಲ್ಡ್ ಹತ್ತಿರ ಡೇರಿ ವಿಚಾರಕ್ಕೆ ಸಂಬಂಧಪಟ್ಟಂತೆ ಪ್ರಾಯಶಃ ಕೃಷಿ ವಿಶ್ವವಿದ್ಯಾಲಯ ಬಿಟ್ಟರೆ ಬೇರೆ ಯಾರೂ ಪ್ರಾರಂಭ ಮಾಡಬಾರದೆಂದು ಇದ್ದಾಗಲೂ ಕೂಡ ಅದರಲ್ಲಿ ನಾನು ಶಿಕ್ಷಣವನ್ನು ಕೊಡುತ್ತೇನೆಂದು ಹೇಳಿ ಪ್ರಚಾರ ಮಾಡಿದ್ದಿತ್ತು ಅವರ ಮೇಲೆ ಹಿಂದೆ ಕ್ರಮ ತೆಗೆದುಕೊಂಡಿದ್ದೇವೆ ಈಗ ಸಿ ಇ ಟಿ ಗೊಂದಲವಿರುವುದರಿಂದ ಕೆಲವು ಜನ ಮುಗ್ಧ ಬಾಲಕರನ್ನು ದಾರಿ ತಪ್ಪಿಸುವ ರೀತಿಯಲ್ಲಿ ಶೋಷಣೆಗಳನ್ನು ಮಾಡಿರುತ್ತಾರೆ ಇದಕ್ಕೆ ಪ್ರಾಯಶಃ ಯಾವ ವಿಶ್ವವಿದ್ಯಾಲಯವೂ ಕೂಡ ಮಾನ್ಯತೆ ಕೊಡಲಿಕ್ಕೆ ಸಾಧ್ಯವೇ ಇಲ್ಲ ಅದಕ್ಕೆ ತತ್ಸಮಾನವಾದ ಎ ಎಂ ಐ ಇ ಎಂಬ ಕೋರ್ಸ್ ಇದೆ ಅದು ಬಿ ಇ.ಗೆ ತತ್ಸಮಾನವಾದದ್ದೆಂದು ಹೇಳಿ ಸರ್ಕಾರದ ಮಾನ್ಯತೆ ಪಡೆದಿರುವ ಕೋರ್ಸ್ ಬಿಟ್ಟರೆ, ಉಳಿದಿದ್ದು ಇಲ್ಲ ಆ ಕಾರಣಕ್ಕಾಗಿ ತಾವು ಏನು ಹೇಳಿದ್ದೀರಿ ಅದಕ್ಕೆ ಉನ್ನತ ಶಿಕ್ಷಣ ಸಚಿವರು ಈ ದಿವಸವೇ ಅವರನ್ನು ಕರೆಸಿ ಮಾತನಾಡಿ, ಅವರು ಯಾರೇ ಆಗಿರಲಿ, ಮೋಸ ಮಾಡುವ ಈ ಜನರನ್ನು 420 ಎಂದೇ ನಾವು ಪರಿಭಾವಿಸುತ್ತೇವೆ ಐ ಪಿ.ಸಿ ಕೆಳಗೇ ರಿಜಿಸ್ಟರ್ ಮಾಡುತ್ತೇವೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ

ವಿಷಯ (ಚ) ರೇಷ್ಮೆ ಧಾರಣೆ ಕುಸಿತದಿಂದ ಉಂಟಾಗಿರುವ ತೊಂದರೆ ಬಗ್ಗೆ

ಶ್ರೀ ಆರ್ ಧ್ರುವನಾರಾಯಣ್ (ಸಂತೇಮಾರನಹಳ್ಳಿ) ರೇಷ್ಮೆ ಕೃಷಿ ಇವತ್ತು ಭಾರತ ದೇಶದಲ್ಲಿ ಕರ್ನಾಟಕ ರಾಜ್ಯ ಮೊದಲನೇ ರಾಜ್ಯವಾಗಿದೆ ಇವತ್ತು ವಿಷಾದದ ಸಂಗತಿ ಎಂದರೆ,

ರೇಷ್ಮೆಗೂಡಿನ ದರ ಬಹಳ ಕುಸಿತಕ್ಕೆ ಈಡಾಗಿ ನಮ್ಮ ರಾಜ್ಯದ ರೈತರು ಸಂಕಷ್ಟಕ್ಕೀಡಾಗಿದ್ದಾರೆ ಮೇ ತಿಂಗಳಲ್ಲಿ ಸಣ್ಣಗೂಡಿನ ದರ 70ರಿಂದ 80 ರೂಪಾಯಿ ಇತ್ತು ಅದೇ ರೀತಿ, ಏಪ್ರಿಲ್‌ನಲ್ಲಿ ಕೂಡ ಒಳ್ಳೆಯ ಧಾರಣೆ ಇತ್ತು ಆದರೆ, ಜೂನ್ ತಿಂಗಳಲ್ಲಿ ಆ ರೇಷ್ಮೆ ಗೂಡಿನ ಧಾರಣೆ ಬಹಳ ತಳ ಮಟ್ಟಕ್ಕೆ ಹೋಗಿ, ಇವತ್ತು ರೈತರು ಸಂಕಷ್ಟದಲ್ಲಿದ್ದಾರೆ ಸರ್ಕಾರವನ್ನು ನಾನು ಮನವಿ ಮಾಡಿಕೊಳ್ಳುವುದೆಂದರೆ, ಸಣ್ಣ ಗೂಡಿಗಾಗಲಿ, ದಪ್ಪ ಗೂಡಿಗಾಗಲಿ ಮಿನಿಮಂ ಪ್ರೈಸ್ ಫಿಕ್ಸ್ ಮಾಡಬೇಕು ಬೆಲೆ ಕುಸಿದಾಗ ಅದಕ್ಕೆ ಸರ್ಕಾರ ಬೆಂಬಲ ಬೆಲೆ ಕೊಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಈ ಬೆಂಬಲ ಬೆಲೆಯನ್ನು ವೈಜ್ಞಾನಿಕ ಬೆಲೆಯನ್ನು ಕೊಡಬೇಕೆನ್ನುವುದೇ ನಮ್ಮ ಸರ್ಕಾರದ ಉದ್ದೇಶ ಆ ಕಾರಣಕ್ಕಾಗಿ ಹಿಂದೆ 400 ಕೋಟಿ ರೂಪಾಯಿಯ ಒಂದು ಆವರ್ತ ನಿಧಿಯನ್ನು ಏರ್ಪಾಟು ಮಾಡಿದ್ದೇವೆ. ಶಂಕರ್‌ಸಿಂಗ್ ವಘೇಲಾ, ಕೇಂದ್ರದ ಮಂತ್ರಿಗಳು ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಅವರ ಜೊತೆ ಪ್ರಸ್ತಾಪ ಮಾಡಿದ್ದಾರೆ ಬೈವೋಲ್ಟೀನ್ ಆಗಿರುವ ತಳಿ ಆಗಬಹುದು, ದಕ್ಷಿಣ ಕೊರಿಯ, ಥೈವಾನ್, ಜಪಾನ್‌ನಿಂದ ಬಹಳ ತೀವ್ರವಾದಂಥ ಸ್ಪರ್ಧೆಯನ್ನು ಎದುರಿಸುತ್ತಿರುವ ಹಿನ್ನೆಲೆಯಲ್ಲಿ ಇದೊಂದು ಡಂಪಿಂಗ್ ಯಾರ್ಡ್ ಆಗಿರುವ ಪರಿಸ್ಥಿತಿ ಇದೆ ಆ ಕಾರಣಕ್ಕೆ ನಮ್ಮ ರೇಷ್ಮೆ ಬೆಳೆಗಾರರ ಸಂಕಷ್ಟ ಸ್ಥಿತಿಯನ್ನು ಮಾನ್ಯ ಶಾಸಕರು ಏನು ಗಮನಕ್ಕೆ ತಂದಿದ್ದೀರಿ, ಅದರ ಬಗ್ಗೆ ಮುಖ್ಯಮಂತ್ರಿಗಳಿಗೆ ತಿಳಿಸಿ, ಶೀಘ್ರದಲ್ಲಿ ಸರ್ಕಾರ ಯಾವ ರೀತಿ ಪರಿಹಾರ ಮಾಡಬೇಕೆನ್ನುವ ಬಗ್ಗೆ ಚರ್ಚೆ ಮಾಡಿ, ನಿರ್ಧಾರ ತೆಗೆದುಕೊಳ್ಳುತ್ತೇವೆ

ಶ್ರೀ ಆರ್ ಧ್ರುವನಾರಾಯಣ್ ಚೈನಾ ಸಿಲ್ಕ್ ಎಂದು ಇದೆ ಅದನ್ನು ಬ್ಯಾನ್ ಮಾಡಬೇಕು ಅದನ್ನು ಬ್ಯಾನ್ ಮಾಡಿದರೆ ನಮ್ಮ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತದೆ ಚೈನಾ ಸಿಲ್ಕ್ ಕಳ್ಳಸಾಗಾಣಿಕೆ ಮಾಡುವುದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ವಿಶ್ವ ವಾಣಿಜ್ಯ ಒಪ್ಪಂದ (ಡಬ್ಲ್ಯುಟಿಒ)ಕ್ಕೇ ನಾವು ಸಹಿ ಹಾಕಿರುವುದರಿಂದ, ಯಾವುದೇ ದೇಶದಿಂದ ಬರುವ 750 ಐಟೆಂಗಳು ಏನಿವೆ, ಅವುಗಳನ್ನು ನಾವು ಬ್ಯಾನ್ ಮಾಡಲಿಕ್ಕೆ ಬರುವುದಿಲ್ಲ ಆದರೆ, ಅದಕ್ಕೆ ಬೇಕಾಗಿರುವಂಥ ರಕ್ಷಣಾತ್ಮಕ ಕ್ರಮಗಳನ್ನು ಹೇಗೆ ಕೈಗೊಳ್ಳಬೇಕು, ಅದಕ್ಕೆ ತೆರಿಗೆಗಳನ್ನು ಯಾವ ರೀತಿ ಹಾಕಬೇಕೆನ್ನುವ ವಿಚಾರದ ಬಗ್ಗೆ ಮಾನ್ಯ ಶಂಕರ್‌ಸಿಂಗ್ ವಘೇಲಾರವರು, ರೇಷ್ಮೆ ಮಂತ್ರಿಗಳು, ಕೇಂದ್ರಸರ್ಕಾರದಿಂದ ಬಂದಿದ್ದರು ಅವರ ಜೊತೆ ಮಾತನಾಡಿದ್ದೇವೆ ಇಲ್ಲಿ ನಮ್ಮ ರೇಷ್ಮೆ ಮಹಾಮಂಡಲ ಕೇಂದ್ರ ಕಛೇರಿ ಕೂಡ ಇರುವುದರಿಂದ ಅದರ ಬಗ್ಗೆ ಕೂಡ ನಾವು ಕ್ರಮ ಕೈಗೊಳ್ಳುತ್ತೇವೆ ಈ ಸಲಹೆ ಹಿನ್ನೆಲೆಯಲ್ಲಿ ಯಾವ ರೀತಿ ರಕ್ಷಣಾತ್ಮಕ ಕ್ರಮಗಳನ್ನು ನಮ್ಮ ರೈತರ ಪರವಾಗಿ ತೆಗೆದುಕೊಳ್ಳಬೇಕೆನ್ನುವ ನಿರ್ಧಾರ ಮಾಡುತ್ತೇವೆ

ವಿಷಯ (ಛ) ಹಿರೇಕೆರೂರಿನಲ್ಲಿ ರೈತರಿಗೆ ಬರ ಬೇಕಾದ ಬೆಳೆ ವಿಮೆ ಹಾಗೂ ತುಂಗಭದ್ರಾ ಮೇಲ್ದಂಡೆಗಾಗಿ ಭೂಮಿ ಸ್ವಾಧೀನ ಪಡಿಸಿಕೊಂಡ ಹಣವನ್ನು ಸಕ್ಕರೆ ಕಾರ್ಖಾನೆ ಶೇರಿಗೆ ಮುರಿದು ಕೊಳ್ಳುವುದನ್ನು ನಿಲ್ಲಿಸುವ ಬಗ್ಗೆ

†ಶ್ರೀ ಬಿ ಸಿ ಪಾಟೀಲ್ (ಹಿರೇಕೆರೂರು) ಮೊದಲನೆಯದಾಗಿ, ತಾವು ನನಗೆ ಅವಕಾಶ ಕೊಟ್ಟಿದ್ದೀರಿ ಅದಕ್ಕೆ ತಮಗೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ 16ನೇ ತಾರೀಖು ನಾನು ಒಂದು ಪ್ರಶ್ನೆ ಕಳುಹಿಸಿಕೊಟ್ಟಿದ್ದೆ. ಹಿರೇಕೆರೂರು ತಾಲ್ಲೂಕಿನಲ್ಲಿ 1996–97ನೇ ಇಸವಿಯಿಂದ ಸಕ್ಕರೆ

ಫ್ಯಾಕ್ಟರಿ ಕಟ್ಟುತ್ತೇವೆಂದು ಮಾಜಿ ಶಾಸಕರು, ಬಸವೇಶ್ವರ ಸಕ್ಕರೆ ಫ್ಯಾಕ್ಟರಿ ಕಟ್ಟುತ್ತೇವೆಂದು ಷೇರು ಹಣವನ್ನು ರೈತರಿಂದ ಅಂದರೆ ಬ್ಯಾಂಕಿನ ಮೂಲಕ ಸಾಲದ ಹಣ ತೆಗೆದುಕೊಂಡು, ರೈತರಿಂದ ಷೇರು ಹಣವನ್ನು ಸಾಳದ ರೂಪದಲ್ಲಿ ತೆಗೆದುಕೊಂಡರು ಆದರೆ, ಫ್ಯಾಕ್ಟರಿ ಕಟ್ಟಡ ಇದುವರೆಗೂ ಆಗಿಲ್ಲ ಈಗೇನಾಗಿದೆ ಎಂದರೆ, ಅದರ ಜೊತೆಗೆ, ಅಪ್ಪರ್‌ತುಂಗಾ ಪ್ರಾಜೆಕ್ಟ್ ಎಂದು ಹೇಳಿ, ತುಂಗಭದ್ರಾ ಬಲದಂಡೆ ಯೋಜನೆ ಕೂಡ ನಡೆಯುತ್ತಿದ್ದು, ಆ ಮೇಲ್ದಂಡೆಗೆ ಭೂಮಿಯನ್ನು ಸರ್ಕಾರದವರು ಅಕ್ವಾಯರ್ ಮಾಡಿದ್ದಾರೆ ಈಗ ಮೊದಲನೆಯದಾಗಿ ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಭೂಮಿ ಕಳೆದುಕೊಂಡವರಿಗೆ ಪರಿಹಾರ ಬಂದಿಲ್ಲ ಕೆಲವು ಕಡೆ ಪರಿಹಾರ ಬಂದಂಧ ಸಂದರ್ಭದಲ್ಲಿ ಆ ಪರಿಹಾರದ ಹಣವನ್ನು ಸಕ್ಕರೆ ಫ್ಯಾಕ್ಟರಿ ಷೇರಿಗೆ ಸರ್ಕಾರದವರು ಹೊಂದಿಸಿಕೊಳ್ಳುತ್ತಿದ್ದಾರೆ ಅದರ ಜೊತೆಗೆ, ಬೆಳೆ ವಿಮೆ ಹಣ ಕೂಡ ಎಲ್ಲೆಲ್ಲಿ ಬಂದಿದೆ, ಅದನ್ನೂ ಕೂಡ ಆ ಸಕ್ಕರೆ ಫ್ಯಾಕ್ಟರಿ ಷೇರಿಗೆ ಹೊಂದಿಸಿಕೊಳ್ಳುತ್ತಿದ್ದಾರೆ ಇದರಿಂದ ಏನಾಗಿದೆ ಎಂದರೆ, ಅನ್ನ ಇಲ್ಲವೆಂದರೆ ಕೊನೆಪಕ್ಷ ಗಂಜಿಯನ್ನಾದರೂ ಸಿಗುತ್ತದೆಂದರೆ, ಬೆಳೆ ವಿಮೆ ಹಣ ಬಂದಿದ್ದನ್ನೂ ಸಕ್ಕರೆ ಫ್ಯಾಕ್ಟರಿ ಷೇರಿಗೆ ತೆಗೆದುಕೊಳ್ಳುತ್ತಿದ್ದಾರೆ ಆ ಒಂದು ಅನ್ಯಾಯ ರೈತರಿಗೆ ಆಗುತ್ತಿದ್ದರೆ, ಇನ್ನೊಂದು ಕಡೆ ಭೂಮಿಯನ್ನು ಕಳೆದುಕೊಂಡು, ಭೂಮಿ ಪರಿಹಾರ ಹಣವೂ ಬಂದಿಲ್ಲ, ಬಂದಂಧ ಸಂದರ್ಭದಲ್ಲಿ ಅದನ್ನು ಕೂಡ ಸಕ್ಕರೆ ಫ್ಯಾಕ್ಟರಿ ಷೇರಿಗೆ ಹೊಂದಿಸಿಕೊಳ್ಳುತ್ತಿರುವುದರಿಂದ, ರೈತರ ಶೋಷಣೆಯಾಗುತ್ತಿದೆ ಅದುದರಿಂದ ತತ್ಷಣವಾಗಿ ಸರ್ಕಾರ ಈ ಬೆಳೆ ವಿಮೆ ಹಣ ಮತ್ತು ತುಂಗಭದ್ರ ಮೇಲ್ದಂಡೆಗಾಗಿ ಸ್ವಾಧೀನ ಪಡಿಸಿಕೊಂಡ ಭೂಮಿಯ ಹಣವನ್ನು ಸಕ್ಕರೆ ಫ್ಯಾಕ್ಟರಿಯ ಷೇರಿಗೆ ಮುರಿದುಕೊಳ್ಳದೆ ನೇರವಾಗಿ ರೈತರಿಗೆ ಪಾವತಿ ಮಾಡಬೇಕೆಂದು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ, ಮುಜರಾಯಿ, ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಈ ಪರಿಹಾರ ಕೊಟ್ಟಿರತಕ್ಕಂಧ ಹಣವಾಗಲಿ, ಅಥವಾ ಬೆಳೆಯ ವಿಮೆಗೆ ಬಂದಿರತಕ್ಕಂಧ ಹಣವನ್ನಾಗಲಿ, ನಾವು ಷೇರುದಾರರಿಗೆಂದು ಮುರಿದುಕೊಳ್ಳುವ ಪ್ರಯತ್ನ ಮಾಡಬಾರದು, ಇದು ಕಾನೂನು ಬಾಹಿರ ಕೂಡ ಆ ಬಗ್ಗೆ ನಾವು ಕ್ರಮ ಕೈಗೊಳ್ಳುತ್ತೇವೆ, ತಾವು ಈ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದೀರಿ, ಅಲ್ಲಿಯ ವಸ್ತುಸ್ಥಿತಿಯನ್ನು ತಿಳಿದುಕೊಂಡು ಅದಕ್ಕೆ ಶೀಘ್ರವಾಗಿ ಬೇಕಾಗಿರುವಂಧ ಸೂತ್ರೋಲೆ ಬೇಕಾದರೆ ಸುತ್ರೊಲೆ ಕಳುಹಿಸಿ ಸುತ್ತೇವೆ, ಜಿಲ್ಲಾಧಿಕಾರಿಗಳಿಗೆ ಈ ವಿಚಾರವನ್ನು ತಿಳಿಸಿ ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಬಿ ಸಿ ಪಾಟೀಲ್ ತತ್‌ಕ್ಷಣ ಅದು ಬಂದರೆ ಬಹಳ ಸಂತೋಷ.

ಶ್ರೀ ಎಂ ಪಿ ಪ್ರಕಾಶ್ ಆಗಬಹುದು

ವಿಷಯ (ಜ) ಹುಲಿಗುಡ್ಡ ಯೋಜನೆಗೆ ಹಣ ಬಿಡುಗಡೆ ಮಾಡುವ ಬಗ್ಗೆ

†ಶ್ರೀ ಎಸ್ ಎಸ್ ಪಾಟೀಲ್ (ಮುಂಡರಗಿ) ಮಾನ್ಯ ಅಧ್ಯಕ್ಷರೆ, ಮುಂಡರಗಿ, ಕೊಪ್ಪಳ, ಗದಗ್ ಹಾಗೂ ಹಡಗಲಿ ತಾಲ್ಲೂಕುಗಳಿಗೆ ವರದಾನವಾಗಿರುವಂಧ ಹುಲಿಗುಡ್ಡದ ಯೋಜನೆ ಏನು ಇದೆ, ಇದು ನೀರಾವರಿ ಯೋಸಜನೆಯಾಗಿದ್ದು, ಹಿಂದೆ ಮಾಣ್ಯ ಜೆ ಹೆಚ್ ಪಾಟೀಲ್‌ರವರ ಸರ್ಕಾರ ಇದ್ದಾಗ ಮಾನ್ಯ ಪ್ರಕಾಶ್‌ರವರು ಹಾಗೂ ನಾನೂ ಕೂಡ ಅವರ ಸಂಪುಟದಲ್ಲಿ ಇದ್ದೆವು. ಬರಗಾಲ ಪೀಡಿತ ಈ ಪ್ರದೇಶಗಳಲ್ಲಿ ಅನುಕೂಲವಾಗತಕ್ಕಂಧ ಒಂದು ಯೋಜನೆಯನ್ನು ಶಾಶ್ವತವಾಗಿ ಬರಗಾಲ ಇದ್ದಂಧ ಈ ನಾಲ್ಕುತಾಲ್ಲೂಕುಗಳಿಗೆ ವರದಾನವಾಗುವ ಯೋಜನೆಯನ್ನು ಅಂದಿನ ಸರ್ಕಾರ ಅದನ್ನು ಪ್ರಾರಂಭಿಸಿ ಕೆಲಸ ಕೂಡ ಅರ್ಧಕ್ಕೆ ಬಂದು ನಿಂತಿತ್ತು ಮುಂದೆ ಮಾನ್ಯ

ಹೆಚ್ ಕೆ ಪಾಟೀಲ್‌ರವರು ಭಾರಿ ನೀರಾವರಿ ಸಚಿವರು ಆದ ಮೇಲೆ ನಿಜವಾಗಿ ಅವರು ಬಹಳ ಒಳ್ಳೆಯ ಕೆಲಸ ಮಾಡಿದರು ಅಂಥ ಒಂದು ದೊಡ್ಡ ಯೋಜನೆ ಮಾಡಿ ಅದು ಸುಮಾರು 18 ಟಿಎಂಸಿ ನೀರನ್ನು ಬಳಸಿಕೊಳ್ಳಬೇಕು, ಮತ್ತು ಇದನ್ನು ಬಳಸಿಕೊಳ್ಳಲಿಕ್ಕೆ ಯಾವುದೂ ತೊಂದರೆಯಿಲ್ಲ, ನೂರು ಟಿಎಂಸಿ ನೀರು ಹೆಚ್ಚುವರಿಯಾಗಿ ಹರಿದು ಹೋಗುತ್ತದೆಂದು ಎಲ್ಲಾ ಅದನ್ನು ತೆಗೆದು ಆ ಕೆಲಸ ಮುಂಜೂರು ಆಗಿತ್ತು ದುರ್ದೈವದಿಂದಾಗಿ ಕೆಲವು ಕಡೆ ಆ ಕೆಲಸ ನಿಂತರೂ ಕೊನೆಗೆ ಈಗ ಅದನ್ನು ಪ್ರಾರಂಭಿಸಬೇಕೆಂದು ಅದು ಚಾಲನೆಯಲ್ಲಿದೆ ಆದರೆ ನೀವು ದುರ್ದೈವದಿಂದ ಹಣವನ್ನೇ ನೀವು ಬಿಡುಗಡೆ ಮಾಡುತ್ತಿಲ್ಲ ಅದೂ ಹೀಗೆ 600, 800 ಕೋಟಿ ರೂಪಾಯಿಗಳ ಯೋಜನೆ ಗಳಿಗೆ ಬಜೆಟ್‌ನಲ್ಲಿ 10 ಕೋಟಿ, 20 ಕೋಟಿ, ರೂ ಇಟ್ಟು ಅದನ್ನು ಚಾಲೂ ಮಾಡಿದರೆ ಇನ್ನೂ 50, 100 ವರ್ಷಗಳಾದರೂ ಅದನ್ನು ಮುಗಿಸಲಿಕ್ಕೆ ಸಾಧ್ಯವಿಲ್ಲ, ಏನೂ ಕೆಲಸವಾಗುವುದಿಲ್ಲ, ಅಷ್ಟೊತ್ತಿಗೆ ಅದು 600 ಕೋಟಿ ರೂ ಇದ್ದದ್ದು 6000 ಕೋಟಿ ರೂ ಆಗುತ್ತದೆ ಈ ಕಾರಣದಿಂದಾಗಿ ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಪ್ರಕಾಶ್‌ರವರೂ ಕೂಡ ಆ ಭಾಗಕ್ಕೆ ಸಂಬಂಧಪಡುವುದರ ಜೊತೆಗೆ ಅವರೂ ಕೂಡ ಕ್ಯಾಬಿನೆಟ್‌ನಲ್ಲಿ ಇರುವುದರಿಂದ ಬಹಳ ಅನುಕೂಲವಾಗುತ್ತದೆ ದಯವಿಟ್ಟು ಪ್ರತಿ ವರ್ಷ ಕನಿಷ್ಠ 300 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟು, ಈ ವಿಚಾರವನ್ನು ತಾವು ಬಜ್‌ಟ್‌ನಲ್ಲಿಯೇ ಹೇಳಿಸಬೇಕು, ಕನಿಷ್ಠ 300 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಅದಕ್ಕೆ ಹಣವನ್ನು ಒದಗಿಸಿ ಎರಡು ವರ್ಷಗಳಲ್ಲಿ ಆ ಯೋಜನೆ ಮುಗಿಸಿ ಶಾಶ್ವತವಾಗಿ ಬರಗಾಲ ಇರುವ ಆ ನಾಲ್ಕು ತಾಲ್ಲೂಕುಗಳಿಗೆ ಶಾಶ್ವತ ಬರಗಾಲ ಏನು ಇದೆ ಅದನ್ನು ನಿವಾರಣೆ ಮಾಡಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ವಿನಂತಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ, ಮುಜರಾಯಿ, ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರು ಒಳ್ಳೆಯ ವಿಚಾರವನ್ನು ಪ್ರಸ್ತಾಪಿಸಿದ್ದಾರೆ ಬಹಳ ವರ್ಷಗಳಿಂದ ನೆನಗುದಿಗೆ ಬಿದ್ದಿರತಕ್ಕಂಥ ಈ ಯೋಜನೆ ಈಗಾಗಲೇ ಪರಿಷ್ಕೃತ ಅಂದಾಜಿಗೆ ಒಳಪಟ್ಟಿದೆ ಮೊದಲು 595 ಕೋಟಿ ರೂಪಾಯಿಗಳಿಗೆ ಪರಿಷ್ಕೃತ ಅಂದಾಜು ಆಗಿ 18 ಟಿಎಂಸಿ ನೀರು ಉಪಯೋಗಿಸಿಕೊಂಡು ಒಂದು ಲಕ್ಷದ ಆರವತ್ತೊಂದು ಸಾವಿರ ಎಕರೆಯನ್ನು ಗದಗ್ ಭಾಗದ ಜನಗಳಿಗೆ ನೀರುಣಿಸಬೇಕೆಂದು ಒಂದು ಯೋಜನೆಗೆ ತಾಂತ್ರಿಕ ಹಾಗೂ ಆಡಳಿತಾತ್ಮಕ ಮಂಜೂರಾತಿ ಸಿಕ್ಕಿತ್ತು ಆದರೆ ಕೆಳಗಡೆ ಇರುವ ಅಚ್ಚುಕಟ್ಟುದಾರರು, ಈಗಾಗಲೇ ಸ್ಟೆಬಿಲೈಸ್ಡ್ ಅಚ್ಚುಕಟ್ಟುದಾರರೆಂದು ನಾವೇನು ಕರೆಯುತ್ತೇವೆ, ಈಗಾಗಲೇ ಭತ್ತದ ಕಣಜ ಎಂದು ಪ್ರಖ್ಯಾತವಾಗಿರುವ ರಾಯಚೂರು, ಮಾನ್ವಿ, ಗಂಗಾವತಿ, ಹೊಸಪೇಟೆ, ಬಳ್ಳಾರಿ, ಸಿಗುಗುಪ್ಪ, ಈ ಭಾಗದ ರೈತರು ಆತಂಕಕ್ಕೆ ಒಳಗಾಗಿ 18 ಟಿಎಂಸಿ ನೀರು ಉಳಿಯುತ್ತದೆ ಎನ್ನುವ ವಿಚಾರದ ಬಗ್ಗೆ ಸಂಶಯವನ್ನು ವ್ಯಕ್ತ ಮಾಡಿದ ಮೇಲೆ, ಮಾನ್ಯ ಅಂಗಡಿಯವರು ಕೊಟ್ಟಂಥ ವರದಿಯಾಧಾರದ ಹಿನ್ನೆಲೆಯಲ್ಲಿ ಹಾಗೂ ಹಿಂದಿನ ಮುಖ್ಯಮಂತ್ರಿಗಳು ಮಾನ್ಯ ಕೆ ಸಿ ರೆಡ್ಡಿಯವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದರು ಕೆ.ಸಿ ರೆಡ್ಡಿಯವರು ಅಲ್ಲಿ ಹೂಳು ತುಂಬಿರತಕ್ಕಂಥ ಆ ಅಣೆಕಟ್ಟಿನ ಸಾಮರ್ಥ್ಯದ ಬಗ್ಗೆ ಲಭ್ಯವಾಗುವ ನೀರಿನ ಬಗ್ಗೆ, ಆ ಎಲ್ಲಾ ವಿಚಾರಗಳನ್ನು ವೈಜ್ಞಾನಿಕವಾಗಿ ಯೋಜನೆ ಮಾಡಿ ಒಂದು ವರದಿಯನ್ನು ಕೊಟ್ಟು, 12 ಟಿಎಂಸಿ ನೀರು ಲಭ್ಯವಾಗುತ್ತದೆ ಎನ್ನತಕ್ಕಂಥ ಆಧಾರದ ಮೇಲೆ, ಮತ್ತೆ ಈ 595 ಕೋಟಿ ರೂಪಾಯಿಗಳ ಆ ಯೋಜನೆಯನ್ನು ಪುನರ್ ವಿಮರ್ಶೆಗೆ ಒಳಪಟ್ಟು 787

ಕೋಟಿ ರೂಪಾಯಿಗಳಿಗೆ ಆಗಿದೆ ಈ 787 ಕೋಟಿ ರೂಪಾಯಿಗಳಿಗೆ ಆಡಳಿತಾತ್ಮಕ ಮಂಜೂರಾತಿ ಆಗಬೇಕಾಗಿದೆ ಈಗಾಗಲೇ ಅವರು ಹೇಳಿದಂತೆ, ನಾನು ಭಾರೀ ನೀರಾವರಿ ಮಂತ್ರಿಗಳಿಗೆ ಈ ವಿಚಾರದಲ್ಲಿ ಬಿನ್ನಹ ಮಾಡಿ ತಾವು ಒಂದು ಸಭೆಯನ್ನು ಕರೆಯಬೇಕು, ಕೆಲಸಪ್ರಾರಂಭಿಸಬೇಕು, ಎಂದು ಹೇಳುತ್ತೇನೆ ತಾವು ಹೇಳಿದಂತೆ ಹಣಕಾಸಿನ ವಿಚಾರದಲ್ಲಿ ತೊಂದರೆ ಬರಬೇಕಾದಂಥ ಅಗತ್ಯತೆ ಇಲ್ಲ. ಆವತ್ತು ದಿವಂಗತ ಜೆ ಹೆಚ್ ಪಾಟೀಲ್ ಇದ್ದಂಥ ಕಾಲದಲ್ಲಿ ಕರ್ನಾಟಕ ನೀರಾವರಿ ನಿಗಮ ಎಂದು ಮಾಡಿ ಕ್ರಿಟಿಕಲ್ ಪ್ರಾಜೆಕ್ಟ್ ಎಂದು ಏನು ಗುರುತಿಸಲ್ಪಟ್ಟಿದ್ದವು, ಅದರಲ್ಲಿ ಹುಲಿಗುಡ್ಡದ ಯೋಜನೆ ಕೂಡ ಒಂದಾಗಿದೆ ಆ ಕಾರಣಕ್ಕಾಗಿ ಕರ್ನಾಟಕ್ಕಾಗಿ ನೀರಾವರಿ ನಿಗಮದಿಂದ ಈಗ 79 ಕೋಟಿ ರೂಪಾಯಿಗಳ ಹಣ ಲಭ್ಯವಾಗಿದೆ ಮುಂದೆ ಕೂಡ ಹಣ, ಆಯವ್ಯಯದ ಮೇಲೆ ಅವಲಂಬಿತರಾಗಿರಬೇಕಾಗಿಲ್ಲ ಈ ನೀರಾವರಿ ನಿಗಮದ ಮೂಲಕವಾಗಿ ಆ ಒಂದು ಅಣೆಕಟ್ಟಿಗೆ ನಾವು ಹನ ಕೊಡುತ್ತಿರುವುದರಿಂದ ಇಲ್ಲಿ ಆಡಳಿತಾತ್ಮಕ ದೋಷ ಮತ್ತು ವಿಳಂಬ ಕಾರಣವಾಗಿದೆ, ಹಣಕಾಸಿನ ತೊಂದರೆಯಿಲ್ಲ, ನಾವು ನೀವು ಕೂಡಿ ಪ್ರಯತ್ನಿಸಿ ಸ್ವಲ್ಪ ದಿವಸಗಳಲ್ಲಿ ಒಂದು ಸಭೆಯನ್ನು ಕರೆಸಿ ಈ ಕಾರ್ಯಕ್ರಮಗಳನ್ನು ಮಾಡಬೇಕಾಗಿದೆ ಎಂದು ನಾನು ಸರ್ಕಾರದ ಪರವಾಗಿ ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತಿದ್ದೇನೆ

ಅಧ್ಯಕ್ಷರು ಮಾನ್ಯ ಕೆ ಎಂ ತಿಮ್ಮರಾಯಪ್ಪರವರು.. ಮಾನ್ಯ ಹೆಚ್ ಡಿ ಬಸವರಾಜು ಅವರು.. ಮಾನ್ಯ ಅರಗ ಜ್ಞಾನೇಂದ್ರರವರು ಮಾನ್ಯ ಶಿಕಾಂತ ಅಕ್ಕಪ್ಪ ನಾಯಕ್‌ರವರು ಮಾನ್ಯ ಎಂ ಪಿ ರೇಣುಕಾಚಾರ್ಯರವರು.. ಮಾನ್ಯ ಪ್ರಭಾಕರ್ ಬಂಗೇರ್ ಅವರು ಯಾರೂ ಇಲ್ಲ ಮಾನ್ಯ ಶಿವರಾಜ್ ಸಜ್ಜನ್ ರವರು

ವಿಷಯ (ಝ) ಪಡಿತರ ವ್ಯವಸ್ಥೆಯಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಕ್ಕೂ ಇರತಕ್ಕ ತಾರತಮ್ಯವನ್ನು ಹೋಗಲಾಡಿಸುವ ಬಗ್ಗೆ

ಶ್ರೀ ಶಿವರಾಜ್ ಸಜ್ಜನ್ (ಹಾವೇರಿ) ಮಾನ್ಯ ಅಧ್ಯಕ್ಷರೆ, ಪಡಿತರ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ನಗರಕ್ಕೆ 28 ಕೆ ಜಿ ಅಕ್ಕಿ, 7 ಕೆ ಜಿ ಗೋಧಿ, 2 ಕೆ ಜಿ ಸಕ್ಕರೆಯನ್ನು ವಿತರಣೆ ಬೇಕೆನ್ನುವ ಸರ್ಕಾರದ ನಿಯಮ ಇದ್ದರೂ ಕೂಡ, ಹಾವೇರಿ ತಾಲ್ಲೂಕಿನ ಒಂದು ಉದಾಹರಣೆ ಕೊಡುವುದಾದರೆ, ಹಾವೇರಿ ನಗರಕ್ಕೆ 28 ಕೆ ಜಿ ಅಕ್ಕಿ ಮತ್ತು 7 ಕೆ ಜಿ ಗೋಧಿ,ಯನ್ನು ಕೊಡುತ್ತಿದ್ದಾರೆ, ಸಕ್ಕರೆಯನ್ನು ಅನೇಕ ತಿಂಗಳುಗಳಿಂದ ಕೊಡುತ್ತಿಲ್ಲ ಆದರೆ ಗ್ರಾಮೀಣ ಪ್ರದೇಶಕ್ಕೆ ಕೇವಲ 21 ಕೆ.ಜಿ ಅಕ್ಕಿ, 2 ಕೆ.ಜಿ 400 ಗ್ರಾಂ ಗೋಧಿ, ಕೊಟ್ಟು ಸುಮಾರು 6–7 ತಿಂಗಳುಗಳಿಂದ ಸಕ್ಕರೆಯನ್ನು ವಿತರಣೆ ಮಾಡುತ್ತಿಲ್ಲ ಈ ನಗರ ಪ್ರದೇಶಕ್ಕೂ ಮತ್ತು ಗ್ರಾಮೀಣ ಪ್ರದೇಶಕ್ಕೂ ಏಕೆ ಈ ಅಕ್ಕಿ ಮತ್ತು ಗೋಧಿಯ ವಿತರಣೆಯಲ್ಲಿ ತಾರತಮ್ಯವನ್ನು ಮಾಡುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ನಾವು ಕೇಳಿದರೆ, ಸರ್ಕಾರದಿಂದ ಸಂಪೂರ್ಣ ಪ್ರಮಾಣದಲ್ಲಿ ಬರಬೇಕಾದಂಥ ಸಬ್ಸಿಡಿ ಬಾರದೇ ಇರುವುದರಿಂದ ನಾವು ನಗರ ಹಾಗೂ ಗ್ರಾಮೀಣ ಪ್ರದೇಶಕ್ಕೂ ಈ ಅಕ್ಕಿ ಹಾಗೂ ಗೋಧಿಯ ಸರಬರಾಜಿನಲ್ಲಿ ವ್ಯತ್ಯಾಸ ಆಗುತ್ತಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸುತ್ತಿದ್ದಾರೆ ಇದು ಅನೇಕ ತಿಂಗಳುಗಳಿಂದ, ಇದು ಈ ತಿಂಗಳಿನಿಂದ ಅಷ್ಟೇ ಅಲ್ಲ ಅನೇಕ ತಿಂಗಳುಗಳಿಂದ ಈ ಒಂದು ತಾರತಮ್ಯ ನಡೆಯುತ್ತಿರುವುದರಿಂದ ಇದನ್ನು ಶೀಘ್ರವಾಗಿ ಸಂಬಂಧಪಟ್ಟಂಥ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕೆಂದು ಹೇಳುತ್ತಾ, ಈ ತಾರತಮ್ಯವನ್ನು ಮಾಡಬಾರದು ಎಂದು ಹೇಳುತ್ತಾ ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ ಪ್ರಕಾಶ್ (ಕಂದಾಯ, ಮುಜರಾಯಿ, ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಈ ದಿವಸವೇ ಜಿಲ್ಲಾಧಿಕಾರಿಗಳ ಜೊತೆಗೆ ಮಾತನಾಡಿ ತಾರತಮ್ಯದ ವಿಚಾರವನ್ನು ಪ್ರಸ್ತಾಪ ಮಾಡುತ್ತೇವೆ, ಆದರೆ ನಮ್ಮ ನೀತಿಯ ಪ್ರಕಾರ ಅಲ್ಲಿ 28 ಕೆ ಜಿ ಅವಶ್ಯಕತೆ ಇದೆ ಎಂದು ಹೇಳಿ ಅಲ್ಲಿಯ ಬೇಡಿಕೆಗಳಿಗನುಗುಣವಾಗಿ ಶೇಕಡ 50 ರಷ್ಟು ಕೊಡತಕ್ಕಂಥದ್ದನ್ನು ಇಲ್ಲಿಯವರೆವಿಗೂ ಪರಿಪಾಲಿಸಿಕೊಂಡು ಬಂದಿರುವಂಥದ್ದು ಒಂದು ಪದ್ಧತಿ ಅದರಲ್ಲಿ 28 ಕೆ ಜಿ ಯ ಗರಿಷ್ಟ ಮಿತಿ ಬೇಕು ಎಂದು ಕೇಳುವುದಾದರೆ, ಅಷ್ಟು ಕೂಡ ಕೊಡುತ್ತಾರೆ ಅಥವಾ ಅಲ್ಲಿ ಅಷ್ಟು ಕೂಡ ಬೇಡಿಕೆ–ಯಿಲ್ಲ ಎನ್ನುವ ಸಂದರ್ಭ ಬಂದಾಗ ಶೇಕಡ 50 ರಷ್ಟು ಕೊಡುತ್ತಾರೆ ಅದು ಈ ತರಹದಲ್ಲಿ ಏನಾದರೂ ತೊಂದರೆಯಾಗಿದೆಯೋ ಗೊತ್ತಿಲ್ಲ ಆ ರೀತಿ ಏನಾದರೂ ಭಿನ್ನಾಭಿಪ್ರಾಯ, ತಾರತಮ್ಯ, ಎನ್ನತಕ್ಕಂಥದ್ದು ಇದ್ದರೆ ಅದಕ್ಕೆ ಕಾರಣ ಏನೆಂಬುದನ್ನು ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ಮಾನ್ಯ ಶಾಸಕರಿಗೆ ವಿಚಾರವನ್ನು ತಿಳಿಸುತ್ತೇನೆ

ಶ್ರೀ ಶಿವರಾಜ್ ಸಜ್ಜನ್ ಸುಮಾರು ತಿಂಗಳಿಗಳಿಂದ ಸಕ್ಕರೆಯನ್ನು ವಿತರಣೆ ಮಾಡುತ್ತಿಲ್ಲ, ಸುಮಾರು 6–7 ತಿಂಗಳುಗಳಿಂದ ಸಕ್ಕರೆಯನ್ನು ಕೊಡುತ್ತಿಲ್ಲ, ಮತ್ತು ಅಲ್ಲಿ ತಾರತಮ್ಯ ಏಕೆ ಮಾಡುತ್ತಿದ್ದಾರೆಂದರೆ, ಬೇಡಿಕೆ ಇರುವುದೇ ಗ್ರಾಮೀಣ ಪ್ರದೇಶದಲ್ಲಿ ಅಕ್ಕಿ ಮತ್ತು ಗೋಧಿಗೆ ಹೆಚ್ಚಿನ ಬೇಡಿಕ ಇರುವುದೇ ಗ್ರಾಮೀಣ ಪ್ರದೇಶದಲ್ಲಿ ಆದುದರಿಂದ, ನಗರ ಪ್ರದೇಶಕ್ಕೆ 28 ಕೆ ಜಿ ಕೊಡುತ್ತಿದ್ದಾರೆ, ಗ್ರಾಮೀಣ ಪ್ರದೇಶಕ್ಕೆ ಕೇವಲ 21 ಕೆ ಜಿ ಅಕ್ಕಿ ಹಾಗೂ ಗೋಧಿಯನ್ನು 2 ಕೆ.ಜಿ 400 ಗ್ರಾಂ ಕೊಡುತ್ತಿದ್ದಾರೆ

ವಿಷಯ (ಟ) ಭಿತ್ತನೆ ಬೀಜಗಳಿಗೆ ಸಬ್ಸಿಡಿ ನೀಡುವ ಬಗ್ಗೆ

ಶ್ರೀ ಹೆಚ್ ನಿಂಗಪ್ಪ (ಕುಣಿಕಲ್) ಮಾನ್ಯ ಅಧ್ಯಕ್ಷರೆ, ಇವತ್ತು ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕ ಮಾರಾಟ ಮಾಡುತ್ತಿದ್ದರು ಅದಕ್ಕೆ ಮೊದಲು ಸಬ್ಸಿಡಿಯನ್ನು ಕೊಡುತ್ತಿದ್ದರು ಆದರೆ 24ನೇ ತಾರೀಖಿನಿಂದ ಸಬ್ಸಿಡಿ ಕೊಡತಕ್ಕಂಥದ್ದನ್ನು ನಿಲ್ಲಿಸಿದ್ದಾರೆ ಇದರಿಂದ ರೈತರಿಗೆ ಬಹಳ ಅನಾನುಕೂಲವಾಗಿ ಬೀಜಗಳನ್ನು, ಬಿತ್ತನೆ ಬೀಜಗಳನ್ನು ಕೊಳ್ಳತಕ್ಕಂಥ ಪರಿಸ್ಥಿತಿಯಲ್ಲಿ ಇವತ್ತು ರೈತರು ಇಲ್ಲ ಅದಕ್ಕೆ ಈಗ ತಾನೇ ಕುಣಿಕಲ್‌ನಿಂದ ಬಂದಂಥ ಸುದ್ದಿಯ ಪ್ರಕಾರ ರೈತರು ಒಂದು ಪ್ರತಿಭಟನೆ ಮಾಡತಕ್ಕಂಥ ಒಂದು ಕೆಲಸವನ್ನು ಮಾಡುತ್ತಿದ್ದಾರೆ ಅದುದರಿಂದ, ದಯಮಾಡಿ ಸರ್ಕಾರದವರು ಈ ಬಗ್ಗೆ ಶೀಘ್ರವಾಗಿ ಗಮನ ಹರಿಸಿ, ರೈತ ಸಂಪರ್ಕ ಕೇಂದ್ರಗಳ ಮೂಲಕ ಏನು ಇವತ್ತು ಬಿತ್ತನೆ ಬೀಜಗಳನ್ನು ಮಾರಾಟ ಮಾಡುತ್ತಿದ್ದರೋ ಅದಕ್ಕೆ ಸಬ್ಸಿಡಿಯನ್ನು ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮುಂದು ವರಿಸಬೇಕೆಂದು ನಾನು ಇವತ್ತು ಕೇಳಿಕೊಳ್ಳುತ್ತೇನೆ

12 30 ಪಿ ಎಂ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ, ಮುಜರಾಯಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಹಿಂದಿನ ಸರ್ಕಾರ ಬಿತ್ತನೆ ಬೀಜಗಳಿಗೆ ರಿಯಾಯ್ತಿ ಕೊಡಬೇಕೆಂದು 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಸಣ್ಣ ಮತ್ತು ಅತೀ ರೈತರಿಗೆ ಕೊಡಬೇಕಾಗಿರತಕ್ಕಂಥ ಸೌಲಭ್ಯ ಇದಾಗಿದೆ ಅದರೆ, ಅನೇಕ ಕಡೆ ಇದರ ದುರುಪಯೋಗವಾಗಿರತಕ್ಕಂಥದ್ದು, ಅಂದರೆ, ಇದರ ಲಾಭವನ್ನು ದೊಡ್ಡ ರೈತರು ಪಡೆದುಕೊಂಡಿದ್ದಾರೆ ಎನ್ನತಕ್ಕಂಥ ದೂರುಗಳೂ ಸಹ ಬಂದಿವೆ ಮತ್ತೆ ಈಗಾಗಲೇ ಕೊಟ್ಟಿರತಕ್ಕಂಥ 50 ಕೋಟಿ ರೂಪಾಯಿ ಸಾಕಾಗುವುದಿಲ್ಲ ಎನ್ನತಕ್ಕಂಥ ವಿಚಾರ ಕೂಡ ಸರ್ಕಾರದ ಗಮನಕ್ಕೆ ಬಂದಿದೆ ಹಣಕಾಸಿನ ಸಚಿವರು ಆಗಿರತಕ್ಕಂಥ ಮಾನ್ಯ ಉಪ ಮುಖ್ಯಮಂತ್ರಿಯವರ ಜೊತೆ ಮಾತನಾಡಿ ತಾವು ಹೇಳಿದಂತೆ ಈ ಹಂಗಾಮಿನಲ್ಲಿಯೇ ಬೀಜವನ್ನು ಒದಗಿಸಿ ಕೊಡತಕ್ಕಂಥ ಜವಾಬ್ದಾರಿ ನಮ್ಮ ಮೇಲಿರುವುದರಿಂದ

ಹೆಚ್ಚಿನ ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡಿ ಈ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ

ವಿಷಯ (ರ) ಶ್ರೀನಿವಾಸಪುರ ವಿಧಾನ ಸಭಾ ಕ್ಷೇತ್ರದಲ್ಲಿ ಅಧಿಕೃತ ಮತದಾರರ ಪಟ್ಟಿಯನ್ನು ವಿಕೃತಗೊಳಿಸಿರುವ ಅಧಿಕಾರಿ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ

†**ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ)** ಮಾನ್ಯ ಅಧ್ಯಕ್ಷರೆ, ಕಳೆದ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳ ಪೂರ್ವದಲ್ಲಿ ಕೇಂದ್ರ ಚುನಾವಣಾ ಆಯೋಗದ ಆದೇಶದ ಮೇರೆಗೆ ಒಂದು ವೇಳಾ ಪಟ್ಟಿಯನ್ನು ಪ್ರಕಟಿಸಿ ಮತದಾನ ಪಟ್ಟಿಯ ಪರಿಷ್ಕರಣ ಕಾರ್ಯವನ್ನು ಕೈಗೊಳ್ಳಲಾಗಿತ್ತು ನನ್ನ ಮತಕ್ಷೇತ್ರದಲ್ಲಿಯೂ ಕೂಡ ಮತದಾರರ ಆಕ್ಷೇಪಣೆಗಳನ್ನು ಕೇಳಿದ ಮೇಲೆ ಮತ್ತು ಇದರ ವಿಚಾರಣೆ ಪೂರ್ಣಗೊಂಡನಂತರ ಆಖ್ಯೈರು ಮತದಾರರ ಪಟ್ಟಿಯನ್ನು ಪ್ರಕಟಣೆ ಮಾಡಿದ ಮೇಲೆ ಇದೇ ನಿಜವಾದಂಥ ಮತದಾರರ ಪಟ್ಟಿಯೆಂದು ನಂಬಿ ಅದನ್ನು ನಾವು ಆಶ್ರಯಿಸಿದ್ದವು ಆದರೆ, ಮತದಾನದ ದಿವಸ ನಮ್ಮ ಅರಿವಿಗೆ ಬಂದಿದೇನೆಂದರೆ, ಜಿಲ್ಲಾಧಿಕಾರಿಯವರ ಗಮನಕ್ಕೆ ಹೋಗಿ ಅಧಿಕೃತವಾಗಿ ಆಖ್ಯೈರುವಾದಂಥ ಮತದಾರರ ಪಟ್ಟಿ ಪ್ರಕಟಣೆಗೆಂದು ಪ್ರೆಸ್‌ಗ ಪ್ರಿಂಟ್‌ಗೆ ಹೋಗುವಂಥ ವೇಳೆಯಲ್ಲಿ ಆಯ್ದ ಕೆಲವು ಗ್ರಾಮಗಳಲ್ಲಿ ಕೆಲವು ಮತದಾರರ ಹೆಸರು ಸೇರ್ಪಡೆಯಾಗಿರುವುದರಿಂದ ಮತ್ತು ತೆಗೆದು ಹಾಕಿರುವುದರಿಂದ ಹೆಚ್ಚು ಕಡಿಮೆ ಸುಮಾರು 10 ಸಾವಿರ ಮತದಾರರ ಹೆಸರು ಪಟ್ಟಿಯಿಂದ ಬಿಡಲಾಗಿದೆ ಈ ರೀತಿಯಾದ ಅನ್ಯಾಯ ಮಾಡುವುದಕ್ಕೆ ಸಆಧ್ಯತೆ ಇದೆಯೇ ಎಂದು ನಾನು ಎಲ್ಲಾ ದಾಖಲೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಕಛೇರಿಯಲ್ಲಿ ವಿಚಾರಣೆ ಮಾಡಿ ನೋಡಿದೆ ಜಿಲ್ಲಾಧಿಕಾರಿಯವರ ಗಮನಕ್ಕೂ ಕೂಡ ತರದೆ ಸಹಾಯಕ ಚುನಾವಣಾ ಅಧಿಕಾರಿಯಗಿರತಕ್ಕಂಥ ಒಬ್ಬ ತಹಸೀಲ್ದಾರ್‌ರವರು ಅಧಿಕೃತ ಪಟ್ಟಿಯನ್ನು ಪೂರ್ಣವಾಗಿ ವಿಕೃತಗೊಳಿಸಿ ಆತನ ಮನಸೋ ಇಚ್ಛೆ ಮತದಾರರ ಪಟ್ಟಿಯನ್ನು ತಯಾರು ಮಾಡಿರತಕ್ಕಂಥ ಸ್ಥಿತಿಗೆ ನಾವು ತಲುಪಿದ್ದೇವೆ ಪ್ರಜಾಪ್ರಭುತ್ವದಲ್ಲಿ ಜನರ ಆಯ್ಕೆಗೆ ಬಿಡತಕ್ಕಂಥದ್ದು ಮತ್ತು ಅವರ ನಿರ್ಣಯಕ್ಕೆ ತಲ ಭಾಗತಕ್ಕಂಥದ್ದು ಬಏರೆ ಆದರೆ, ಇಂಥವರು ಅರ್ಧ ಡಜನ್ ಒಂದೊಂದು ಕ್ಷೇತ್ರದಲ್ಲಿದ್ದರೆ ಏನು ಆಗಬಹುದು ಎಂಬುದನ್ನು ತಾವೇ ಯೋಚನೆ ಮಾಡಬಹುದು ಈತ ಇದುವರೆಗೂ ಸರ್ಕಾರಿ ಸೇವೆಯಲ್ಲಿ ಮುಂದುವರಿಯುತ್ತಿದ್ದಾನೆ ಈ ಹಂತದಲ್ಲಿ ಈ ರೀತಿಯಾದ ಕೃತ್ಯವನ್ನು ಮಾಡಲು ಧೈರ್ಯ ಮಾಡಿರತಕ್ಕಂಥ ಅಧಿಕಾರಿ ಸರ್ಕಾರಿ ಸೇವೆಯಲ್ಲಿ ಮುಂದುವರಿಯುವುದಾದರೆ ಸರ್ಕಾರ ಪಾಡು ಏನು ಆಗಬಹುದು? ಮತ್ತೆ ಸರ್ಕಾರವನ್ನು ಆಶ್ರಯಿಸಿರುವ ಜನರ ಪಾಡು ಏನು ಆಗಬಹುದು? ನನ್ನ ಮತ ಕ್ಷೇತ್ರದಲ್ಲಿ ಈ ರೀತಿಯಾಗಿರತಕ್ಕಂಥದ್ದು ಬಹಳ ಗಂಭೀರ ಸ್ವರೂಪದ ಆರೋಪವಾಗಿದೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಬೇರೆ ಆದರೆ, ಇಲ್ಲಿಯವರೆಗೆ ಸಾಕಷ್ಟು ತಡವಾಗಿದೆ ಈ ವಿಷಯವನ್ನು ಈಗಾಗಲೇ ಜಿಲ್ಲಾಧಿಕಾರಿಯವರ ಗಮನಕ್ಕೆ ತಂದಿದ್ದೇನೆ ಆದರೆ, ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ಮಾಡಿರತಕ್ಕಂಥ ಈ ಅಪಾದನೆ ಮೇಲ್ನೋಟಕ್ಕೆ ಸಾಬೀತು ಆಗತಕ್ಕಂಥ ವಿಷಯವಾಗಿದ್ದರೆ ಇದರ ಬಗ್ಗೆ ಜಿಲ್ಲಾಧಿಕಾರಿಯವರ ಜೊತೆ ಚರ್ಚೆ ಮಾಡಿ ಈ ಕೂಡಲೇ ಆ ಅಧಿಕಾರಿಯನ್ನು ಅಮಾನತ್ತು ಮಾಡಬೇಕು ಮತ್ತೆ ಅಮಾನತ್ತು ಬಹಳ ದಿವಸ ಮುಂದುವರಿಯಬಾರದು ಏಕೆಂದರೆ, ಇಂಥವರನ್ನು ಸರ್ಕಾರಿ ಸೇವೆಯಿಂದ ತೆಗೆಯತಕ್ಕಂಥ ಕೆಲಸ ಮಾಡಿದರೆ ಬಹುಶಃ ಮುಂದೆ ಈ ರೀತಿ ಕೆಲಸಕ್ಕೆ ಕೈ ಹಾಕಲಿಕ್ಕೆ ಸ್ವಲ್ಪ ಎಚ್ಚರಿಕೆ ಕೊಟ್ಟಂತಾಗುತ್ತದೆ ಪ್ರಜಾಪ್ರಭುತ್ವ ಇವರ ಕೈಯಲ್ಲಿ ಊರ್ಜಿತವಾಗುವ ಸ್ಥಿತಿಗೆ ನಾವು ಬರಬಾರದೆಂದು ಅತ್ಯಂತ ಕಳಕಳಿಯಿಂದ ಸರ್ಕಾರಕ್ಕೆ ನಿವೇದನೆ ಮಾಡಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ, ಮುಜರಾಯಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಮತದಾನದ ಹಕ್ಕು ಅಂತರ್ಗತವಾದ ಒಂದು ಹಕ್ಕಾಗಿದೆ The denial of vote is a negation of democracy ಈ ಒಂದು ಕಾರಣಕ್ಕಾಗಿ ಮಾನ್ಯ ಶಾಸಕರು ಪ್ರಸ್ತಾಪ ಮಾಡಿರತಕ್ಕಂಥ ವಿಷಯಕ್ಕೆ ಸಂಪೂರ್ಣವಾದಂಥ ಸಹಮತ ಸಮ್ಮದೂ ಕೂಡ ಇದೆ ಆದರೆ, ತಮಗೆಲ್ಲಾ ಗೊತ್ತಿರತಕ್ಕಂಥ ವಿಚಾರವಾಗಿದೆ ಚುನಾವಣಾ ಆಯೋಗದಲ್ಲಿ ಸಿಬ್ಬಂದಿಗಳ ಕೊರತೆ ಇದ್ದು, ಚುನಾವಣೆ ಪ್ರಕ್ರಿಯೆಗಳು ಪ್ರಾರಂಭವಾದಂಥ ಸಂದರ್ಭದಲ್ಲಿ ಸಿಬ್ಬಂದಿಗಳನ್ನು ಎರವಲು ಸೇವೆ ಮೇಲೆ ತೆಗೆದುಕೊಂಡು ಚುನಾವಣಾ ಕೆಲಸವನ್ನು ನಿರ್ವಹಿಸುವುದಕ್ಕೆ ಅವರಿಗೆ ವಹಿಸಿರಲಾಗಿರುತ್ತದೆ ಚುನಾವಣಾ ಆಯೋಗ ಕೂಡ ಮತದಾರರ ಪಟ್ಟಿಯನ್ನು ಯಾವರೀತಿಯಾಗಿ ತಯಾರು ಮಾಡಬೇಕೆಂಬುದರ ಬಗ್ಗೆ ಜನತಾ ಪ್ರತಿನಿಧಿ ಕಾಯಿದೆ ಕೆಳಗೆ ಹಂತ ಹಂತವಾಗಿ ಸಂಪೂರ್ಣವಾದಂಥ ಮಾಹಿತಿಗಳನ್ನು ಕೂಡ ಕೊಡಲಾಗಿದೆ ಅಂದರೆ, ಇಂಥ ತಾರೀಖಿನ ದಿವಸವೇ ಎನ್ಯೂಮರೇಟ್‌ಗೆ ಹೋಗಬೇಕೆಂದು ಮತ್ತು ಇಂಥ ತಾರೀಖಿನದಿವಸವೇ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಇದೆ ಮತ್ತೆ ಇದು ಆದನಂತರ ಅವರಿಗೆ ಪ್ರತಿಯನ್ನೂ ಕೂಡ ಬೇಕೆಂದು ಮತ್ತು ಆನಂತರ ಅದನ್ನು ಎನ್‌ಕ್ವೈರಿ ಮಾಡಬೇಕು ಎನ್ನತಕ್ಕಂಥ ಸಂಪೂರ್ಣವಾದಂಥ ವಿಚಾರಗಳು ಪ್ರಸ್ತಾಪಸಲ್ಪಟ್ಟಿದ್ದರೂ ಕೂಡ ಬಹಳ ಆಲಕ್ಷ್ಯಕ್ಕೆ ದೂರಾಗಿ ಒಂದು ಮತ ಕ್ಷೇತ್ರವಲ್ಲದೆ ಎಲ್ಲಾ ಮತ ಕ್ಷೇತ್ರದಲ್ಲಿಯೂ ಕೂಡ ಈ ರೀತಿಯಾದಂಥ ಅನ್ಯಾಯ ಮಾರ್ಗಗಳಿಂದ ಗೆದ್ದು ಬರತಕ್ಕಂಥ ಕುತಂತ್ರ ಮತ್ತು ಹುನ್ನಾರಗಳು ನಡೆದಿರುವಂಥದ್ದನ್ನು ನಾವು ಕಂಡಿದ್ದೇವೆ ಯಾವ ಅಧಿಕಾರಿ ಈ ಕೆಲಸವನ್ನು ಮಾಡಿದ್ದಾನ,ಎ ಆತ ನಿಜವಾಗಿಯೂ ಕೂಡ ಅಧಿಕರದಲ್ಲಿ ಮುಂದುವರಿಯುವುದು ಅನರ್ಹ ಆದರೆ, ಚುನಾವಣಾ ಆಯೋಗ ಈ ಕೆಲಸವನ್ನು ಮಾಡಬೇಕು ಇದು ನಮ್ಮ ಸಂಪೂರ್ಣವಾದಂಥ ಜವಾಬ್ದಾರಿ, ಈ ಜವಾಬ್ದಾರಿಯನ್ನು ನಿರ್ವಹಣೆ ಮಾಡುವಾಗ ಆಗಿರತಕ್ಕಂಥ ಲೋಪದೋಷಗಳನ್ನು ನಾವೇ ಸರಿಪಡಿಸುತ್ತೇವೆಂದು ನೆನ್ನೆದಿವಸ ಚುನಾವಣಾ ಆಯೋಗದ ಆಯುಕ್ತರು ಆಗಿರತಕ್ಕಂಥ ಶ್ರೀ ಕೃಷ್ಣಮೂರ್ತಿಯವರು ಹೇಲಿದ್ದಾರೆ ಮತ್ತೆ ಫುಲ್‌ಪ್ರೂಫ್ ಆಗಿ ಸೋರಿಕೆ ಆಗಲಾರದಂತೆ ಮತ್ತು ತಪ್ಪಾಗದಂತೆ ಈ ಯೋಜನೆಯನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ ಈ ದಿವಸ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ ಆದ್ದರಿಂದ, ಆ ಅಧಿಕಾರಿಯ ಈ ದಿವಸ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ ಆದ್ದರಿಂದ, ಆ ಅಧಿಕಾರಿಯ ಪೂರ್ವ ಹಿನ್ನಲೆ ಮತ್ತು ಆತನ ದಕ್ಷತೆ ಹಾಗೂ ಬೇರೆ ಬೇರೆ ವಿಚಾರಗಳ ಬಗ್ಗೆ ಜಿಲ್ಲಾಧಿಕಾರಿಯವರಿಂದ ಮಾಹಿತಿ ಪಡೆದುಕೊಂಡು ನಮ್ಮ ಕಾನೂನಿನ ಅನುಗುಣವಾಗಿ ಆತನ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನವು ಖಂಡಿತ ತೆಗೆದುಕೊಳ್ಳುತ್ತೇವೆ

ವಿಷಯ (ಡ) ಶಿರಹಟ್ಟಿ ತಾಲ್ಲೂಕಿನಲ್ಲಿ ವಿಪರೀತ ಮಳೆಯಿಂದ ರೈತರಿಗೆ ಆಗಿರುವ ನಷ್ಟದ ಬಗ್ಗೆ

†ಶ್ರೀ ಜಿ ಎಸ್ ಗಡ್ಡದೇವರಮಠ್ (ಶಿರಹಟ್ಟಿ) ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ತೀವ್ರ ಬರಗಾಲವನ್ನು ನಮ್ಮ ಕ್ಷೇತ್ರದ ಜನರು ಎದುರಿಸುತ್ತಿದ್ದಾರೆ ಆದರೆ, ಇತ್ತೀಚೆಗೆ ಒಳ್ಳೆಯ ಮಳೆಯಾಗಿರುವುದರಿಂದ ಬಹಳ ಆಶಾದಾಯಕರಾಗಿ ರೈತ ಚಟುವಟಿಕೆಗಳನ್ನು ನಡೆಯುತ್ತಿವೆ 20 ದಿವಸಗಳ ಹಿಂದೆ ವಿಪರೀತ ಮಳೆ ಸಂಭವಿಸಿದ್ದು ಆ ಸಂದರ್ಭದಲ್ಲಿ ನನ್ನ ಕ್ಷೇತ್ರದ ಸುಂರು ಐದಾರು ಹಳ್ಳಿಗಳ ರಐತರು ಬೆಳೆದಂಥ ವಿಶೇಷ ಬೆಳೆಗಳಾದ ಭತ ಮತ್ತು ಬಾಳೆ ಪೂರ್ಣವಾಗಿ ಲುಕ್ಸಾನ್ ಆಗಿದೆ ಹಾಗೆಯೇ ಹಡಗಲಿ ಕ್ಷೇತ್ರದ ಕೆಲವೊಂದು ಹಳ್ಳಿಗಳಲ್ಲಿಯೂ ಕೂಡ ಭತ್ತದ ಬೆಳೆ

ಹಾನಿಯಾಗಿರುವುದನ್ನು ಎಲ್ಲಾ ಕಂದಾಯ ಅಧಿಕಾರಿಗಳು ಸರ್ಕಾರದ ಗಮನಕ್ಕೆ ತಂದಿರತಕ್ಕಂಥದ್ದು ತಮಗೆ ತಿಳಿದಿದೆ ಆದರೆ, ಸರ್ಕಾರ ಇದಕ್ಕೆ ಪರಿಹಾರ ಕೊಡತಕ್ಕಂಥ ದಿಸೆಯಲ್ಲಿ ವಿಳಂಬವಾಗಿರತಕ್ಕಂಥದ್ದು ನಿಜವಾಗಿಯೂ ಕೂಡ ಶೋದನೀಯವಾಗಿದೆ ಈ ವಿಚಾರವನ್ನು ಏತಕ್ಕಾಗಿ ಹೇಳುತ್ತಿದ್ದೇನೆ ಎಂದರೆ, ಕಳೆದ ಮೂರು ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿರತಕ್ಕಂಥ ರೈತಾಪಿ ಜನರು ಈಗ ಮಳೆಯಾಗಿರುವುದರಿಂದ ಏನೇನು ಆಶಾಭಾವನೆಗಳನ್ನು ಇಟ್ಟುಕೊಂಡು ಎಲ್ಲೆಲ್ಲೋ ಸಾಲ ಮಾಡಿ ಹಣ ತಂದು ಬಿತ್ತನೆ ಕಾರ್ಯವನ್ನು ಕೂಡ ಮಾಡಿದ್ದಾರೆ ಆದರೆ, ಈಗ ಒಂದು ಕರಿಣ ಪ್ರಸಂಗ ಬಂದಿದೆ ಅದೇನೆಂದರೆ, ರೈತರು ಬಿತ್ತನೆ ಮಾಡಿರತಕ್ಕಂಥ ಹೆಸರು ಬೆಳೆಗೆ ಹೊಸ ಸಮೂನೆಯ ಕೀಟ ಬಂದು ಸುಮಾರು 3000 ಎಕರೆ ಭೂಮಿಯಲ್ಲಿ ಬೆಳೆದಂಥ ಹೆಸರು ಬೆಳೆಯನ್ನು ಮೇಯ್ದಿಬಿಟ್ಟಿದೆ ಇವತ್ತಿನದಿವಸ ಇದಕ್ಕೆ ಯಾವುದೇ ರೀತಿಯ ವಿಮೆಯನ್ನೂ ಕೂಡ ಮಾಡಿಲ್ಲ ಆದ್ದರಿಂದ, ಇದಕ್ಕೆ ಯಾವುದೇ ದೃಷ್ಟಿಯಿಂದ ಸರ್ಕಾರ ಸಹಾಯಕ್ಕಾಗಿ ಹೋಗುಬೇಕು ಎನ್ನತಕ್ಕಂಥದ್ದು ನಮಗೆ ತಿಳಿಯದಂಥ ಪ್ರಸಂಗವಾಗಿದೆ ಹಿರಿಯ ಸದಸ್ಯರಾದಂಥ ಶ್ರೀ ಸಿ ಎಂ ಉದಾಸಿರವರು ಈ ವಿಷಯವನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ ಮತ್ತೆ ಶೇಂಗಾ ಬೆಳೆಗೂ ಕೂಡ ಕೀಟ ಬಂದಿರತಕ್ಕಂಥ ಪ್ರಸಂಗ ಕೂಡ ಬಂದಿದೆ ಮತ್ತ ಇಗಕ್ಕೂ ಕೂಡ ರೈತರು ವಿಮೆ ಮಾಡಿಲ್ಲ 65ನೇ ದಿವಸಕ್ಕೆ ಹೆಸರು ಬೆಳೆ ಕಟಾವಿಗೆ ಬರುತ್ತದೆ ಆದರೆ, ಇದನ್ನು ಬಿತ್ತನೆ ಮಾಡಿ ಕೇವಲ 15 ರಿಂದ 20 ದಿವಸದೊಳಗೆಯೇ ಈ ಬೆಳೆಯನ್ನು ಪೂರ್ಣವಾಗಿ ಮೇಯ್ದ ಹೋಗತಕ್ಕಂಥ ಕರಿಣ ಪ್ರಸಂಗದಲ್ಲಿ ಇವತ್ತಿನದಿವಸ ನಮ್ಮ ಕ್ಷೇತ್ರದ ರೈತರು ಬ್ಬರೆ ಆದ್ದರಿಂದ, ಈ ಒಂದು ಸಂದರ್ಭದಲ್ಲಿ ಸರ್ಕಾರ ಯಾವರೀತಿಯಾದಂಥ ಒಂದು ಸಹಾಯಕ್ಕೆ ಮುಂದಾಗುತ್ತದೆ ಎನ್ನತಕ್ಕಂಥದ್ದನ್ನು ಈ ಸದನದ ಮುಂದೆ ತಿಳಿಸಪಡಿಸಬೇಕೆಂದು ಕೇಳಿ ಕೊಳ್ಳುತ್ತೇನೆ ಮತ್ತೆ ವಿಶೇಷವಾಗಿ ಸುಮಾರು ಐದಾರು ನೂರು ಎಕರೆ ಪ್ರದೇಶದಲ್ಲಿ ಪರಿಪೂರ್ಣವಾಗಿ ಬೆಳೆದಿರತಕ್ಕಂಥ ಭತ್ತದ ಬೆಳೆಯನ್ನು ವಿಪರೀತ ಮಳೆಯಿಂದ ಕಿತ್ತು ಹೊಕ್ಕುವುದಕ್ಕೂ ಆಗದೇ ಇರತಕ್ಕಂಥ ಪರಿಸ್ಥಿತಿ ಉಂಟಾಗಿದೆ ಒಂದು ವೇಳೆ ಹೊಕ್ಕಿದರೂ ಕೂಡ ಎಕರೆಗೆ ಅಲ್ಪಸ್ವಲ್ಪ ಅಂದರೆ ಕೇವಲ 2 ರಿಂದ 3 ಚೀಲ ಭತ್ತ ಆಗಿದ್ದರೂ ಕೂಡ ಅದು ಸಹ ಕಪ್ಪಾಗಿರುವುದರಿಂದ ಮಾರಾಟವಾಗದೇ ಇರತಕ್ಕಂಥ ಪ್ರಸಂಗ ಇವತ್ತಿನದಿವಸ ಉಂಟಾಗಿದೆ ಪರಿಹಾರ ಕೊಡಬೇಕೆಂದು ಸರ್ಕಾರಕ್ಕೆ ತಿಳಿಸುತ್ತೇವೆಂದು ಅಧಿಕಾರಿಗಳು ಈಗಾಗಲೇ ರೈತರಿಗೆ ಹೇಳಿಕೆಯನ್ನು ಕೊಟ್ಟಿದ್ದಾರೆ ಆದ್ದರಿಂದ, ನಮಗೆ ಸರ್ಕಾರದಿಂದ ಪರಿಹಾರ ಸಿಗುತ್ತದೆ ಎಂಬ ವಿಚಾರದಲ್ಲಿ ರೈತರಿದ್ದಾರೆ ಆದ್ದರಿಂದ, ಈ ವಿಷಯಕ್ಕೆ ಸಂಬಂಧಪಟ್ಟಂತೆ ರೈತರಿಗೆ ಈ ಸದನದಿಂದ ಒಂದು ಸಂದೇಶ ಹೋಗಬೇಕೆಂದು ನಾನು ಆಶಿಸುತ್ತೇನೆ ಮತ್ತೆ ಯಾವ ಪ್ರಕಾರದ ಸಹಾಯಕ್ಕಾಗಿ ಸರ್ಕಾರ ಮುಂದಾಗುತ್ತದೆ ಎಂಬುದು ತಿಳಿಸಬೇಕು ಹಾಗೆಯೇ ಎಕರೆಗೆ ಎಷ್ಟು ರೂಪಾಯಿಗಳ ಪರಿಹಾರ ಕೊಡುವುದಕ್ಕೆ ಸಾಧ್ಯವಿದೆ ಎನ್ನತಕ್ಕಂಥ ವಿಚಾರವನ್ನು ತಿಳಿಸಬೇಕು ನಿಜವಾಗಿಯು ಕೂಡ ಇದೊಂದು ಕ್ಲಿಷ್ಟವಾದಂಥ ಸಮಸ್ಯೆಯಾಗಿದೆ ಮತ್ತೆ ಹೆಸರು ಬೆಳೆ ಎಷ್ಟು ಲುಕ್ಸಾನ್ ಆಗಿದೆ ಎನ್ನತಕ್ಕಂಥ ಹೇಳಿಕೆಯನ್ನು ಕೊಡಬೇಕೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ, ಮುಜರಾಯಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಪ್ರಸ್ತಾಪ ಮಾಡಿರತಕ್ಕಂಥ ವಿಷಯ ನಿಜಕ್ಕೂ ಕೂಡ ಗಂಭೀರವಾದಂಥದ್ದು ವಿಪರೀತ ಮಳೆಯಿಂದ ಈ ರೀತಿಯಾದ ತೊಂದರೆಗೆ ಗುರಿಯಾಗಿದೆ ರೈತರು ಬೆಳೆದಂಥ ಬೆಳೆ ಎಷ್ಟು ನಷ್ಟವಾಗಿದೆ ಎಂಬುದರ ಅಂದಾಜನ್ನು ತಯಾರು ಮಾಡಿ ಪ್ರಕೃತಿ ವಿಕೋಪ ನಿಧಿಯಿಂದ ಪರಿಹಾರ ಹಣವನ್ನು ಕೊಡಬೇಕೆಂದು ಸರ್ಕಾರದಿಂದ ಆದೇಶ

ಕಳುಹಿಸಿಕೊಟ್ಟಿದ್ದೇವೆ ಮಾನ್ಯ ಸದಸ್ಯರ ಶಿರಹಟ್ಟಿ ತಾಲ್ಲೂಕಿನ ಈ ಕಡೆ ಬದಿಯಲ್ಲಿ ನನ್ನ ಕ್ಷೇತ್ರ ಇದೆ ಇಲ್ಲಿಯೂ ಕೂಡ ಭತ್ತದ ಬೆಳೆಗೆ ಆಗಿರತಕ್ಕಂಥ ನಷ್ಟಕ್ಕೆ ಪರಿಹಾರ ಕೊಡಬೇಕೆಂದು ಜಿಲ್ಲಾಧಿಕಾರಿಯವರಿಗೆ ಈಗಾಗಲೇ ಸೂಚನೆ ಮಾಡಿದ್ದೇವೆ. ಗದಗ್ ಜಿಲ್ಲಾಧಿಕಾರಿಗಳಿಗೆ ಪ್ರಕೃತಿ ವಿಕೋಪದ ನಿಧಿಯಿಂದ ಪರಿಹಾರವನ್ನು ಕೊಡಲಿಕ್ಕೆ ಹಣದ ಅಭಾವ ಇದೆ ಎನ್ನುವುದು ಕಂಡು ಬಂದರೆ, ಆ ಪ್ರಸ್ತಾವನೆಯನ್ನು ಅವರು ಈಗಾಗಲೇ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದರೆ ಕ್ರಮ ಕೈಗೊಳ್ಳುತ್ತೇವೆ, ಅವರು ಕಳುಹಿಸಿಕೊಡದಿದ್ದರೆ ಮಾನ್ಯ ಶಾಸಕರು ಅವರ ಜೊತೆಯಲ್ಲಿ ಮಾತನಾಡಿ ವಿಷಯವನ್ನು ನಮಗೆ ತಿಳಿಸಿದರೆ ನಮ್ಮ ನಿಯಮಾವಳಿಗಳ ಪ್ರಕಾರವಾಗಿ ಅವರಿಗೆ ಎಷ್ಟು ಹಣವನ್ನು ಕೊಡಬೇಕಾಗುತ್ತದೆ ಅಷ್ಟು ಹಣವನ್ನು ನಾವು ಖಂಡಿತವಾಗಿ ಕೂಡ ಬಾಳೆ, ಭತ್ತ ಮೊದಲಾಗಿರುವಂಥದ್ದವುಗಳ ಬಗ್ಗೆ ಕೊಡುತ್ತೇವೆ ಇನ್ನು ತಾವು ಅಲ್ಲಿರುವಂಥ ಹೆಸರು ಬಗ್ಗೆ ಪ್ರಸ್ತಾಪವನ್ನು ಮಾಡಿರುತ್ತೀರಿ, ಈಗ ಅಲ್ಲಿ ರೋಗ ಬಂದಿರತಕ್ಕಂಥದ್ದು ನಿಜವಿದೆ

ಶ್ರೀ ಜಿ ಎಸ್ ಗಡ್ಡದೇವರಮಠ ಮಾನ್ಯ ಅಧ್ಯಕ್ಷರೆ, ಇದರೊಳಗೆ ನನ್ನ ವೈಯಕ್ತಿಕದ ಜೊತೆಗೆ ಬಹಳಷ್ಟು ಜನ ಶಾಸಕರು ಇದಕ್ಕೆ ಬೆಂಬಲವನ್ನು ಕೊಡುತ್ತಾರೆಂದು ನಾನು ಭಾವಿಸಿ ಕೊಂಡಿದ್ದೇವೆ ಸುಮಾರು ಮೂರು ವರ್ಷಗಳುದ್ದಕ್ಕೂ ಬರಗಾಲವನ್ನು ಎದುರಿಸುವಂಥ ನಮಗೆ ಸಣ್ಣ ರೈತರೆಂದು ನೀವೇನು ಹೇಳಿ ರೈತರಲ್ಲಿ ತಾವು ವಿಂಗಡಿಸುತ್ತೀರಿ, ದೊಡ್ಡ ರೈತರದ್ದು ಸಣ್ಣ ರಐತರಿಗಿಂತ ಕಷ್ಟ ಪರಿಸ್ಥಿತಿ ಇವತ್ತು ಆಗಿದೆ ನಮ್ಮಲ್ಲಿ 40 ರಿಂದ 50 ಎಕರೆ ಜಮೀನುದಾರರು ಬಹುತೇಕ ಇವ್ರೊತ್ತು ಗುದ್ದಲಿಯನ್ನು ಹಿಡಿದುಕೊಂಡು ಬದುವು ಹಾಕುವುದಕ್ಕೆ ಹೊರಡುವಂಥ ಪ್ರಸಂಗ ದೊಡ್ಡ ರೈತರದ್ದು ಇವತ್ತು ಇದೆ ಅದಕ್ಕಾಗಿ ಈ ಸದನದ ಮುಖಾಂತರವಾಗಿ ನಾನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ, ರೈತರೊಳಗಹೆ ಸಣ್ಣ ಮತ್ತು ದೊಡ್ಡ ರೈತರೆಂದು ಬೀಜವನ್ನು ಕೊಡುವಂಥ ಸಂದರ್ಭದಲ್ಲಿಯಾಗಲಿ ಪರಿಹಾರವನ್ನು ಕೊಡುವಂಥ ಸಂದರ್ಭದಲ್ಲಿಯಾಗಲಿ ಇವತ್ತು ಯಾವುದನ್ನೂ ತಾವು ಬೇರ್ಪಡಿಸ ಬಾರದು, ಇವತ್ತು ಸಣ್ಣ ರಐತರಿಗೆ ಆದಂಥ ಏನು ನೋವು ಇದೆ, ಅದರ ಹತ್ತು ಪಟ್ಟು ನೋವು ದೊಡ್ಡ ರೈತರದ್ದು ಇದೆ, ಬಹುತೇಕ ಸರ್ಕಾರ ಆ ದಿಸೆಯೊಳಗೆ, ಸಣ್ಣರೈತರು ಎಂದು ಕ್ಲಾಸಿಫೈ ಮಾಡದೆ ದೊಡ್ಡ ರೈತರಿಗೂ ಸಹಿತ ಬೀಜವನ್ನು ಕೊಡುವಂಥ ವ್ಯವಸ್ಥೆಯೊಳಗಾಗಲಿ ಅಥವಾ ಪರಿಹಾರವನ್ನು ಕೊಡುವಂಥ ವ್ಯವಸ್ಥೆಯೊಳಗಾಗಲಿ ಸರ್ಕಾರ ಮುಂದೆ ಬರಬೇಕೆಂದು ಹೇಳಿ ತಮ್ಮ ಮುಖೇನವಾಗಿ ಈ ಸರ್ಕಾರವನ್ನು ನಾನು ಅಗ್ರಹವನ್ನು ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರ ಒತ್ತಾಯವನ್ನು ಸಹಾನುಭೂತಿಯಿಂದ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ

ಅಧ್ಯಕ್ಷರು ಮಾನ್ಯ ಕಿರಣ್‌ಕುಮಾರ್‌ರವರು,ಅವರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ

ವಿಷಯ (ಣ) ಕಳ್ಳಂಬೆಳ್ಳ ವಿಧಾನ ಸಭಾ ಕ್ಷೇತ್ರದಲ್ಲಿ ಆಶ್ರಯ ಯೋಜನೆಯ ಫಲಾನುಭವಿಗಳಿಗೆ ಎರದನೇ ಕಂತಿನ ಹಣ ಬಿಡುಗಡೆ ಬಗ್ಗೆ

ಶ್ರೀ ಕೆ ಎಸ್ ಕಿರಣ್‌ಕುಮಾರ್ (ಕಳ್ಳಂಬೆಳ್ಳ) ಮಾನ್ಯ ಅಧ್ಯಕ್ಷರೆ, ಚುನಾವಣೆಯ ಸಮಯದಲ್ಲಿ ಹೆಚ್ಚುವರಿ ಪಟ್ಟಿಯೆಂದು ಹೇಳಿ ಆಶ್ರಯ ಮತ್ತು ರಾಜೀವಗಾಂಧಿ ನಿವೇಗಳನ್ನು ಕೊಟ್ಟಿದ್ದಾರೆ ಆ ಪಟ್ಟಿಯನ್ನು ತಯಾರು ಮಾಡತಕ್ಕಂಥ ಸಂದರ್ಭದಲ್ಲಿ ಅಧಿಕಾರಿಗಳು ಮಾಡದೆ ಕೆಲವೊಂದು ಪುಡಾರಿಗಳು ಕುಳಿತುಕೊಂಡು ಮಾಡಿ ಹೆಸರುಗಳು ತಪ್ಪಾಗಿರುತ್ತವೆ ಉದಾಹರಣೆಗಾಗಿ ಜಯಲಕ್ಷ್ಮೀ ಎನ್ನುವುದರ ಬದಲಾಗಿ ಸುಜಾತಾ ಎಂದು ಆಗಿ ಅಥವಾ ಗಂಡನ ಹೆಸರನ್ನು ತಪ್ಪಾಗಿ

ಮಾಡಿದ್ದು ಅದು ಅಪ್ರೂವ್ ಆಗಿ ಬಂದುಬಿಟ್ಟಿದೆ ರಿಜಿಸ್ಟ್ರೇಷನ್ ಸಮಯದಲ್ಲಿ ಹೆಸರು ತಪ್ಪಾಗಿ ಇರುವುದರಿಂದ ಅದನ್ನು ರಿಜಿಸ್ಟ್ರೇಷನ್ ಮಾಡಿಸುವುದಕ್ಕಾಗುತ್ತಿಲ್ಲ ಆ ಬದಲಾವಣೆಗಾಗಿ ಒಂದು ಅವಕಾಶವನ್ನು ಮಾಡಿಕೊಡಬೇಕು, ಕೆಲವೊಂದು ಅನರ್ಹರನ್ನು ಪಟ್ಟಿಯಲ್ಲಿ ಸೇರಿಸಿಬಿಟ್ಟಿದ್ದಾರೆ, ಸುವ್ಯವಸ್ಥಿತವಾಗಿ ಆ ಮನೆಯಲ್ಲಿ ಇರುವಂಥವರಿಗೆ ಹೆಚ್ಚುವರಿ ಮನೆಗಳು ಬಂದುಬಿಟ್ಟಿವೆ ಆ ಹೆಸರುಗಳನ್ನು ಬದಲಾಯಿಸಿ ಹೊಸ ವಸತಿಹೀನರಿಗೆ ಮನೆಗಳನ್ನು ಕಟ್ಟಿ ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಲು ಒಂದು ಬದಲಾವಣೆಯನ್ನು ಮಾಡಲಿಕ್ಕೆ ಸರ್ಕಾರ ಒಂದು ಆದೇಶ ಮಾಡಬೇಕೆಂದು ನಾನು ತಮ್ಮ ಮೂಲಕವಾಗಿ ಕೇಳುತ್ತೇನೆ ಮನೆಗಳನ್ನು ಈಗಾಗಲೇ ಅರ್ಧಭಾಗವನ್ನು ಕಟ್ಟಿದ್ದಾರೆ ಅದಕ್ಕೆ ಇನ್ನುವರೆಗೆ ಬಿಲ್ ಬಂದಿಲ್ಲವೆಂದು ಆ ಬಡಪಾಯಿಗಳು ಕಛೇರಿಗೆ ಅಲೆದು ಅಲೆದು ಸಾಕಷ್ಟು ದುಡ್ಡನ್ನು ಕಳೆದುಕೊಳ್ಳುತ್ತಿದ್ದಾರೆ ಆದ್ದರಿಂದ ಆ ಹಣವನ್ನು ಬಿಡುಗಡೆ ಮಾಡಿ ಆ ಫಲಾನುಭವಿಗಳಿಗೆ ಆದಷ್ಟು ಬೇಗನೆ ಹಣ ಪವತಿ ಮಾಡಬೇಕೆಂದು ಸರ್ಕಾರಕ್ಕೆ ನಾಣು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಈಗಾಗಲೇ ಬೇರೊಬ್ಬ ಶಾಸಕರು ಈ ವಿಷಯವಾಗಿ ಎತ್ತಿರುವ ವಿಷಯಕ್ಕೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ ಅನರ್ಹ ಫಲಾನುಭವಿಗಳು ಇದ್ದಾರೆ ಹೆಸರಿನಲ್ಲಿ ಬದಲಾವಣೆಗಳಾಗಿದ್ದರೆ ಅಲ್ಲಿರುವಂಥ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಅಥವಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಮಟ್ಟದಲ್ಲಿ ಆ ಬದಲಾವಣೆಯನ್ನು ತರತಕ್ಕಂಥ ಅಧಿಕಾರ ಅಂತರ್ಗತವಾಗಿ ಅವರಿಗಿದೆ ಅದನ್ನು ಅವರು ಪ್ರಾಯಶಃ ಉಪಯೋಗಿಸಿರಲಿಕ್ಕಿಲ್ಲ, ಅದನ್ನು ತಾವು ಅವರ ಗಮನಕ್ಕೆ ತಂದು ಅದನ್ನು ತಾವು ಮಾಡಿ, ಅದಕ್ಕೆ ಮತ್ತೊಂದು ಹೊಸ ಸುತ್ತೋಲೆಯನ್ನು ಮಾಡಿ ಕಳುಹಿಸುವ ಅಗತ್ಯತೆ ಇಲ್ಲ ಆದರೆ ತಾವು ಏನು ಹೇಳಿದ್ದೀರಿ, ಎರಡನೆಯ ಕಂತಿನ ಹಣ ಏನು ಬಿಡುಗಡೆಯಾಗಿಲ್ಲವೆಂದು ಹೇಳಿದ್ದೀರಿ, ನಿರ್ದಿಷ್ಟವಾದ ಪ್ರಕರಣವನ್ನು ತಾವು ಬರೆದು ಕಳುಹಿಸಿದರೆ ನಾಣು ಆ ಸಂಬಂಧಪಟ್ಟ ಅಧಿಕಾರಿಗಳಿಂದ ಸಮಜಾಯಿಷಿಯನ್ನು ಕೇಳಿ ಸರಿಯಾದ ಉತ್ತರವನ್ನು ನಾಣು ತಮಗೆ ಒದಗಿಸಿಕೊಡುತ್ತೇನೆ, ಕಂತು ಬಿಡುಗಡೆಯಾಗದಿದ್ದರೆ ಅದನ್ನು ಒದಗಿಸುವಂಥ ವ್ಯವಸ್ಥೆ ಮಾಡುತ್ತೇನೆ

ವಿಷಯ (ತ) ಮಾಲೂರು ವಿಧಾನಸಭಾ ಕ್ಷೇತ್ರದಲ್ಲಿನ ತಾಲ್ಲೂಕು ಪಂಚಾಯಿತಿಯಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ

†ಶ್ರೀ ಎಸ್ ಎನ್ ಕೃಷ್ಣಯ್ಯಶೆಟ್ಟಿ (ಮಾಲೂರು) ಮಾನ್ಯ ಅಧ್ಯಕ್ಷರೆ, ನನ್ನ ವಿಧಾನಸಭೆ ಕ್ಷೇತ್ರದಲ್ಲಿ ತಾಲ್ಲೂಕು ಪಂಚಾಯತಿ ಸಭೆಯಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳವರೆಗೆ ಅವ್ಯವಹಾರವಾಗಿದೆ, ಅಧಿಕಾರಿಗಳು ಆ ಹಣವನ್ನು ದುರುಪಯೋಗಪಡಿಸಿ ಕೊಂಡಿದ್ದಾರೆ ಅದರಲ್ಲಿ ಸಾಕಷ್ಟು ಅಧಿಕಾರಿಗಳು ಸಸ್ಪೆಂಡಾಗಿದ್ದಾರೆ ಆದರೆ ಅದರ ಬಗ್ಗೆ ಮುಂದೆ ಏನಾಗಿದೆ ಎನ್ನುವುದರ ಬಗ್ಗೆ ನಮಗೆ ಒಂದು ವರದಿ ಬೇಕಾಗಿದೆ, ಈ ಒಂದು ದುರುಪಯೋಗದಿಂದ ಯಾವುದೇ ಒಂದು ರೀತಿಯ ಹಣ ತಾಲ್ಲೂಕಿಗೆ ಬರದಿರುವುದರಿಂದ ಬಹಳ ಕಷ್ಟವಾಗಿದೆ ಅದಕ್ಕೆ ತುರ್ತಾಗಿ ಹಣವನ್ನು ಖರ್ಚು ಮಾಡಬೇಕಾಗಿದೆ, ಯಾವುದೇ ಕೆಲಸಕ್ಕೂ ಹಣ ಇಲ್ಲದಿರುವುದರಿಂದ ನಮ್ಮ ತಾಲ್ಲುಕು ಮಟ್ಟದ ಸಮಿತಿ ಒಂದು ದುಸ್ಥಿತಿಯಲ್ಲಿದೆ ಅದರ ಜೊತೆಯಲ್ಲಿ ಹಿಂದಿನ ಸರ್ಕಾರದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿದ್ದೇವೆಂದು ಸ್ಪಿಲ್‌ಒವರ್ ವರ್ಕ್‌ನಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳನ್ನು ತೋರಿಸಿದ್ದಾರೆ ಈ ವರ್ಷ ಬಂದಿರುವ 50 ಲಕ್ಷ ರೂ ಗಳ ಹಣ ಅದಕ್ಕೆ ಖರ್ಚು ಮಾಡುವುದಕ್ಕಾಗಿ

ತಾಲ್ಲೂಕು ಸಮಿತಿಯವರು ಹೊರಟಿದ್ದಾರೆ, ನಾನು ಇದರ ಬಗ್ಗೆ ಮನವಿಯನ್ನು ಮಾಡಿದರೂ ಸಹಿತ ಅವರು ಹಳೆಯ ಕೆಲಸಕ್ಕೆ ಆ ಹಣವನ್ನು ಬಳಸಲಿಕ್ಕೆ ಅವರು ಪ್ರಯತ್ನವನ್ನು ಪಡುತ್ತಿದ್ದಾರೆ ಆ ಅಧಿಕಾರಿಗಳಿಂದ ಆಗಿರುವ ಅವ್ಯವಹಾರದ ಒಂದು ಕೋಟಿ ರೂ ಗಳು ಈ ವರ್ಷ ಬಂದಿರುವಂಥ ಹಣ, ಯಾವುದೇ ಹೊಸ ಹಣ ಇಲ್ಲದೆ, ಹೊಸದಾಗಿ ಇರುವ ತುರ್ತಾಗಿ ಕೆಲಸಗಳಿಗೆ ಹಣವಿಲ್ಲದೆ ತಾಲ್ಲೂಕು ಸಮಿತಿ ಇದೆ ದಯವಿಟ್ಟು ಅದನ್ನು ಪರಿಶೀಲಿಸಿ ಆ ಅಧಿಕಾರಿಗಳು ಮಾಡಿರುವಂಥ ತಪ್ಪನ್ನು ಆ ಅಧಿಕಾರಿಗಳ ಮೇಲೆ ಹೊರಿಸಿ ಸರ್ಕಾರದಿಂದ ಒಂದು ಕೋಟಿ ರೂ ಗಳನ್ನು ಬಿಡುಗಡೆ ಮಾಡಿ ತಾಲ್ಲೂಕಿನ ಅಭಿವೃದ್ಧಿ ಅನುಕೂಲ ಮಾಡಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಅದರ ಜೊತೆಗೆ ತಾಲ್ಲೂಕಿನ ಆಶ್ರಯ ಸಮಿತಿಯಲ್ಲಿ ಶೇಕಡಾ 60 ಪರ್ಸೆಂಟ್‌ದಷ್ಟು ಹಣ ದುರುಪಯೋಗವಾಗಿದೆ ಮೂರು–ನಾಲ್ಕು ಮನೆಗಳು ಇದ್ದರಿಗೂ ಕೂಡ ಆಶ್ರಯ ಸಮಿತಿಯಲ್ಲಿ ಮನೆಗಳನ್ನು ಅಲಾಟ್ ಮಾಡಿದ್ದಾರೆ ಆ ಲಿಸ್ಟ್‌ನ್ನು ಪರಿಶೀಲನೆ ಮಾಡಿ ಕ್ಯಾನ್ಸಲ್ ಮಾಡಿ ಹೊಸ ಲಿಸ್ಟ್‌ನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾಣು ತಮ್ಮಲ್ಲಿ ಮನವಿ ಮಾಡುತ್ತೇನೆ ಅದರ ಜೊತೆಗೆ ನಮ್ಮ ಮಾಲೂರು ಮುನಿಸಿಪಾಲಿಟಿಯಲ್ಲಿ ಸುಮಾರು 1300 ಜನಕ್ಕೆ ಆಶ್ರಯ ಯೋಜನೆಯಲ್ಲಿ ಸೈಟ್ ಕೊಡುತ್ತೇವೆಂದು ಹಣವನ್ನು ತೆಗೆದುಕೆ ಂಡಿದ್ದಾರೆ ಅದನ್ನು ಯಾವರೀತಿಯಾಗಿ ಮಾಡಿದ್ದಾರೆನ್ನುವ ಬಗ್ಗೆ ಅರ್ಧವಾಗುತ್ತಿಲ್ಲ ಅದಕ್ಕಾಗಿ ತಾವು ದಯವಿಟ್ಟು ತಿಳಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ ಅದರ ಜೊತೆಗೆ ನವಗ್ರಾಮ ಯೋಜನೆಯಲ್ಲಿ 10 ಹಳ್ಳಿಗಳಲ್ಲಿ ಮನೆಗಳನ್ನು ಹರಿಚಿದ್ದಾರೆ ಒಂದು ಕಡೆ ಮನೆಗಳನ್ನು ಕೊಡಬೇಕಾಗುತ್ತದೆ ದಯವಿಟ್ಟು ನಮ್ಮ ತಾಲ್ಲೂಕಿನಲ್ಲಿ ಆಗಿರುವ ಅನ್ಯಾಯಗಳಿಗೆ ಒಂದು ವ್ಯವಸ್ಥೆ ಮಾಡಬೇಕು ಇದರಿಂದ ಜನತೆಗೆ ಬಹಳ ದ್ರೋಹವಾಗಿದೆ, ಹಣವನ್ನು ಬಿಡುಗಡೆ ಮಾಡುವುದರಿಂದ ನಮ್ಮ ತಾಲ್ಲೂಕಿನ ಅಭಿವೃದ್ಧಿಗಳಿಗೆ ಹಣ ಬೇಕಾಗಿದೆ ತಾವು ಹಣವನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕ ಮಿತ್ರರಲ್ಲಿ ಅವರೇ ಎಂದು ಅಲ್ಲ, ತಪ್ಪಾಗಿ ಅವರು ಭಾವಿಸಬಾರದು, ಯಾರಾದರೂ ಸದಸ್ಯರುಗಳು ಎದ್ದುನಿಂತು ಮಾತನಾಡುವಾಗ ಅವರ ಮುಂದೆ ಹಾದು ಹೋಗಬಾರದು ಅವರ ಹಿಂದೆ ಅಥವಾ ತಲೆಯನ್ನು ತಗ್ಗಿಸಿ ಬರಬೇಕು, ಆ ಕಾರಣಕ್ಕಾಗಿ, ದಯಮಾಡಿ ನಾಣು ಉಪದೇಶ ಮಾಡುತ್ತೀನೆಂದು ತಪ್ಪುಭಾವಿಸಬೇದಿ, ಮುಂದೆ ತರಬೇತಿಯನ್ನು ಕೊಡುವಂಥ ವಿಚಾರದಲ್ಲಿ ಅವರ ಬಗ್ಗೆ ಹೇಳುತ್ತಾರೆ ಅದನ್ನು ಪರಿಪಾಲಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ ತಾವು ಹಣ ದುರುಪಯೋಗ ಮಾಡಿದ್ದಾರೆಂದು ಏನು ಹೇಳಿದ್ದೀರಿ, ಅದಕ್ಕೆ ಮತ್ತೆ ಸರ್ಕಾರ ಒಂದು ಕೋಟಿ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲ ಆದರೆ ದುರುಪಯೋಗ ಮಾಡಿರುವ ಬಗ್ಗೆ ನಿರ್ದಿಷ್ಟವಾದ ಪ್ರಕರಣಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದರೆ ಅವರ ಮೇಲೆ ಕಾನೂನಿನ ಪ್ರಕಾರವಾಗಿ ಕೈಗೊಳ್ಳುವುದರ ಜೊತೆಗೆ ಆ ಹಣವನ್ನು ವಸೂಲಾತಿಯಲ್ಲಿಯೂ ಕ್ರಮ ಕೈಗೊಳ್ಳುತ್ತೇವೆ ಈಗಾಗಲೇ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದೇವೆ, ಅನರ್ಹ ಫಲಾನುಭವಿಗಳು ಯಾರ್ಯಾರಿದ್ದಾರೆ ಅವರನ್ನು ತೆಗೆದು ಹಾಕಬೇಕು, ಯಾವ ಲಿಸ್ಟ್ ಹಿಂದೆ ಒಪ್ಪಿಗೆಯಾಗಿದೆ ಆ ಒಪ್ಪಿಗೆಯ ಯಾದಿಯನ್ನು ಪುನರ್ ಬದಲಾವಣೆ ಮಾಡುವುದಕ್ಕಾಗುವುದಿಲ್ಲ ಸರ್ಕಾರಗಳು ನಿರಂತರ ಆ ಸರ್ಕಾರ ಈ ಸರ್ಕಾರವೆಂದು ಹೇಳಿ, ವಾಡಿಕೆಯಲ್ಲಿ ಇದೊಂದು ಸಮ್ಮಿಶ್ರ ಸರ್ಕಾರವೆಂದು ಅನ್ನುತ್ತೇವೆ ಅದು ಭಾರತೀಯ ಜನತಾ ಪಕ್ಷ, ಅಥವಾ ಕಾಂಗ್ರೆಸ್ ಪಕ್ಷದ ಸರ್ಕಾರ ಅನ್ನುತ್ತೇವೆ ಆದರೆ ಅದು ಕನ್ನಡಿಗರ ಸರ್ಕಾರ ನಿರಂತರವಾಗಿ ನಡೆಯುತ್ತಿರುತ್ತದೆ ಆ ಕಾರಣಕ್ಕಾಗಿ ಈ ಯೋಜನಗಳು ಏನು

ಬಂದಿರುತ್ತವೆ ಆ ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗಬೇಕಾಗಿರುವಂಥದ್ದು ನಮ್ಮ ಜವಾಬ್ದಾರಿ. ಅನರ್ಹ ಫಲಾನುಭವಿಗಳು ಯಾದಿ ಏನಾದರೂ ತಯಾರಾಗಿದ್ದರೆ ಅದನ್ನು ರದ್ದುಮಾಡುವಂಥ ಕೆಲಸವನ್ನು ಮಾಡುತ್ತೇವೆ ಹೆಚ್ಚುವರಿ ಮನೆಗಳು ಬೇಕು ಎಂದು ಕೇಳಿದ್ದೀರಿ ಅದನ್ನು ಒದಗಿಸಿಕೊಡುವಂತಹ ಪ್ರಯತ್ನವನ್ನು ಮಾಡುತ್ತೇವೆ ನವಗ್ರಾಮ ನಿರ್ಮಾಣ ಮಾಡುವಂಥದ್ದು ಏನಿದೆ ಕನಿಷ್ಟ 20 ಗುಂಪು ಮನೆಗಳು ಇರಬೇಕು 20 ಗುಂಪು ಮನೆಗಳು ಇದ್ದರಿದ್ದರೆ ಅದು ನವಗ್ರಾಮ ಆಗುವುದಿಲ್ಲ ಅದಕ್ಕೆ ಯಾರೂ ಒಪ್ಪಿಗೆಯನ್ನು ಕೊಟ್ಟಿರುವುದಿಲ್ಲ ಆದ್ದರಿಂದ ಅಂತಹ ಪ್ರಕರಣಗಳು ಏನಾದರೂ ಇದ್ದಾರೆ ಕಾನೂನುಬಾಹಿರವಾದ ಪ್ರಕರಣಗಳು ಇದ್ದರೂ ಕೂಡ ನಾವು ಕ್ರಮವನ್ನು ಕೈಗೊಳ್ಳುತ್ತೇವೆ

ವಿಷಯ (ಥ) ಕಾಪು ಕ್ಷೇತ್ರದಲ್ಲಿ ಕೈಗಾರಿಕಾ ಅಭಿವೃದ್ಧಿ ಬೋರ್ಡ್‌ನವರು ಸರ್ಕಾರಿ ಜಾಗವನ್ನು ಅಳತೆ ಮಾಡುತ್ತಿರುವ ಬಗ್ಗೆ

ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು) ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆ ಕಾಪು ಕ್ಷೇತ್ರದಲ್ಲಿ ಎಲ್ಲೂರು, ಮುದರುಗತಿ ಪರಿಸರದಲ್ಲಿ ಕಳೆದವಾರ ಅಲ್ಲಿ ಜನರ ವಿರೋಧ ಇದ್ದರೂ ಕೂಡ ಕೈಗಾರಿಕಾ ಡೆವಲಪ್‌ಮೆಂಟ್ ಬೋರ್ಡಿನವರು ಅಲ್ಲಿ ಜಾಗದ ಅಳತೆಯನ್ನು ಮಾಡಿದ್ದಾರೆ, ಖಾಸಗಿ ಮತ್ತು ಸರ್ಕಾರಿ ಎರಡು ಜಾಗಗಳನ್ನು ಅಳತೆ ಮಾಡಿದ್ದಾರೆ ಉಡುಪಿ ಜಿಲ್ಲಾಧಿಕಾರಿ ಮತ್ತು ತಾಲ್ಲೂಕು ತಹಸೀಲ್ದಾರ್‌ರವರ ಮೂಲಕ ವಿನಂತಿಯನ್ನು ಮಾಡಿದರೂ ಕೂಡ ಅಲ್ಲಿ ವಿರೋಧದ ನಡುವೆ ಅಳತೆಯನ್ನು ಮಾಡಿದ್ದಾರೆ ಅದರ ಬಳಕೆ ಜಿಲ್ಲಾಧಿಕಾರಿಗಳು ನಮಗೆ ಮಾಹಿತಿಯನ್ನು ನೀಡುವುವ ಬಗ್ಗೆ ಸಭೆ ಕರೆದಿದ್ದರು ಕಳೆದ ಶನಿವಾರ ಸಭೆಯನ್ನು ಕರೆದಾಗ ಜಿಲ್ಲಾಧಿಕಾರಿಗಳೇ ಆ ಸಭೆಯಲ್ಲಿ ಇಲ್ಲದೆ ಜನರ ವಿರೋಧದಿಂದ ಆ ಸಭೆ ಮುಂದೂಡಲ್ಪಟ್ಟಿದೆ ನಮ್ಮಲ್ಲಿ ಬರುವಂತಹ ಬೃಹತ್ ಕೈಗಾರಿಕೆಗಳಿಗೆ ಹಿಂದೆಯೂ ಕೂಡ ತುಂಬಾ ವಿರೋಧ ವಿತ್ತು. ಅಲ್ಲದೆ ಧರ್ಮಲ್ ಆಧಾರಿತ ವಿದ್ಯುತ್ ಉತ್ಪಾದನಾ ಘಟಕಗಳು ಬರುತ್ತದೆಂದು ಜನರಲ್ಲಿ ಹೆದರಿಕೆ ಇದೆ ಹಾಗಾಗಿ ಅದರ ಬಗ್ಗೆ ಸರಿಯಾದಂತಹ ಮಾಹಿತಿಯೂ ಬೇಕಾಗಿದೆ ಜನರ ವಿರೋಧ ಇದ್ದಾಗ ಕೂಡ ಇಂತಹ ಕೈಗಾರಿಕೆಗಳು ಬರುವುದು ಸಮಂಜಸವಲ್ಲವೆಂದು ನಮ್ಮ ಜನತೆಯ ವಾದವಾಗಿದೆ ಅದರ ಬಗ್ಗೆ ಸರಿಯಾದಂತಹ ಮಾಹಿತಿಯನ್ನೂ ಕೊಡಬೇಕಾಗಿ ಸಂಬಂಧಪಟ್ಟ ಇಲಾಖೆಗೆ ಹಾಗೂ ಮಂತ್ರಿಗಳಿಗೆ ತಾವು ಸೂಚಿಸಬೇಕೆಂದು ಹಾಗೂ ಇದರ ಬಗ್ಗೆ ಇಲಾಖೆಯವರು ಮಾಹಿತಿ ನೀಡಬೇಕೆಂದು ನನ್ನ ವಿನಂತಿಯಗಿದೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಮೊದಲೇ ಭೂಸ್ವಾಧೀನ ಪ್ರಕ್ರಿಯೆಯನ್ನು ಕೆಐಎಡಿಬಿಯವರು ಪ್ರಾರಂಭ ಮಾಡಿದ್ದರೆ ಅದರ ಬಗ್ಗೆ ಈಗಾಗಲೇ ಅದು ರಾಜ್ಯಪತ್ರದಲ್ಲಿ ಪ್ರಕಟಣೆಯಾಗಿರುತ್ತದೆ ಅದರ ಬಗ್ಗೆ ಎಲ್ಲರಿಗೂ ಮಾಹಿತಿ ಬಂತು ಎಂದು ಅದರ ಅರ್ಥ ಆದರೆ ಆ ವಿಚಾರದಲ್ಲಿ ವಿರೋಧಾಭಿಪ್ರಾಯಗಳು ಇದ್ದರೆ, ಯಾವ ಹಂತದಲ್ಲಿ ಆ ವಿರೋಧವನ್ನೂ ಪರಿಗಣಿಸಬೇಕು ಆ ವಿರೋಧದ ಹಂತ ಮೀರಿದ ನಂತರ ಅಧಿಕಾರಿಗಳಿಗೆ ಕೂಡ ಮತ್ತೆ ಅನೂರ್ಜಿತಗೊಳಿಸುವುದಕ್ಕಾಗಲಿ ಅಥವಾ ಅಧಿಕೃತವಾಗಿ ಘೋಷಿಸಿರುವಂತಹದ್ದನ್ನು ಕೈಬಿಡತಕ್ಕಂತಹ ಪ್ರಶ್ನೆಗೆ ಅದು ಮತ್ತೆ ಸರ್ಕಾರಕ್ಕೆ ಬರಬೇಕಾಗುತ್ತದೆ ಆ ಕಾರಣಕ್ಕಾಗಿ ಮಾನ್ಯ ಶಾಸಕರು ನಿರ್ದಿಷ್ಟ ಪ್ರಕರಣದ ಬಗ್ಗೆ ಬರೆದು ಕಳುಹಿಸಿದರೆ ಇದರ ಬಗ್ಗೆ ಸಂಬಂಧಪಟ್ಟಂತಹ ಮಂತ್ರಿಗಳ ಗಮನಕ್ಕೆ ತಂದು ಆ ಅಧಿಕಾರಿಗಳ ಒಂದು ವರ್ತನೆಯಾಗಿರಬಹುದು, ಅಗತ್ಯತೆ ಅಥವಾ ಅನಗತ್ಯತೆ ಕುರಿತಾಗಿ ಸರ್ಕಾರ ಶೀಘ್ರವಾಗಿ ನಿರ್ಧಾರವನ್ನೂ ತೆಗೆದುಕೊ

ವಿಷಯ (ಧ) ಬಾಗಲಕೋಟೆ ಜಿಲ್ಲೆಯಲ್ಲಿ ಸಬ್ಸಿಡಿ ಬೀಜಗಳ ಪೂರೈಕೆ

ಶ್ರೀ ಮುರುಗೇಶ್ ಆರ್ ನಿರಾಣಿ (ಬೀಳಗಿ) ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಜಿಲ್ಲೆಯಲ್ಲಿ ಚೆನ್ನಾಗಿ ಮಳೆಯಾಗಿರುವುದರಿಂದ ಸಬ್ಸಿಡಿ ಬೀಜಗಳು ಒಂದು ಕೋಟಿ 86 ಲಕ್ಷ ರೂಗಳಷ್ಟು ಕೊಟ್ಟಿದ್ದರು ಅದು ಪೂರ್ತಿ ಮುಗಿದುಹೋಗಿರುತ್ತದೆ ಮುನಃ ಸಬ್ಸಿಡಿ ದರದಲ್ಲಿ ಬೀಜಗಳು ಸಿಗುತ್ತಿಲ್ಲ ಇದೇ ರೀತಿಯಾಗಿ ಬೇರೆ ಬೇರೆ ಜಿಲ್ಲೆಗಳಲ್ಲಿ 4 ರಿಂದ 5 ಕೋಟಿ ರೂಗಳಷ್ಟು ಸಬ್ಸಿಡಿ ಹಣವನ್ನು ಕೊಟ್ಟಿದ್ದಾರೆ, ಆದರೆ ಬಾಗಲಕೋಟೆ ಜಿಲ್ಲೆಯಲಿಲ್ಲ ಒಂದು ಕೋಟಿ 50 ಲಕ್ಷ ರೂಪಾಯಿಗಳ ಸಬ್ಸಿಡಿ ದರದಲ್ಲಿ ಬೀಜಗಳನ್ನೂ ರೈತರಿಗೆ ಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ವಿನಂತಿಸಿ ಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಈಗಾಗಲೇ ಸದನದಲ್ಲಿ ಇದರ ಬಗ್ಗೆ ಸರ್ಕಾರದ ಪರವಾಗಿ ಉತ್ತರವನ್ನು ಕೊಟ್ಟಿದ್ದೇವೆ ನಿಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ ದೇಶಪಾಂಡೆಗಳು, ನಾಡಗೌಡರುಗಳು, ದೇಸಾಯಿಯವರುಗಳು ಬಹಳ ಇರುವುದರಿಂದ ಅಲ್ಲಿ ಸಣ್ಣ ಹಿಡುವಳಿಗಾರರು, ಅತಿ ಸಣ್ಣ ಹಿಡುವಳಿದಾರರು ಬಹಳ ಕಡಿಮೆ ಇರುತ್ತಾರೆ ಯಾವ ಯಾವ ಜಿಲ್ಲೆಯಲ್ಲಿ ಸಣ್ಣ ಹಿಡುವಳಿದಾರರು ಹಾಗೂ ಅತಿ ಸಣ್ಣ ಹಿಡುವಳಿದಾರರು ಇರುತ್ತಾರೆ, ಅದರ ದಾಮಾಂಶದ ಪ್ರಕಾರವಾಗಿ ಅನುಪಾತಕ್ಕೆ ಅನುಗುಣವಾಗಿ ಹನ ಬಿಡುಗಡೆಯಾಗಿದೆ. ತಾವು ಹೇಳಿದ ಪ್ರಕಾರ 1 ಕೋಟಿ 80 ಲಕ್ಷರೂಗಳು ಏನು ಬಿಡುಗಡೆಯಾಗಿದೆ, ಅದು ಬಹಳ ಕಡಿಮೆಯಾಗಿದೆ, ಈ ವಿಚಾರದಲ್ಲಿ ಸರ್ಕಾರ 50 ಕೋಟಿ ರೂಪಾಯಿಗಳನ್ನು ಕೊಟ್ಟಿದೆ ಅದಕ್ಕಿಂತಲೂ ಹೆಚ್ಚು ಹಣವನ್ನು ಕೊಡಬೇಕೆಂದು ಮಾನ್ಯ ಹಣಕಾಸಿನ ಸಚಿವರೊಂದಿಗೆ ಮಾತನಾಡಿ ಇದಕ್ಕೆ ಸರಿಯಾದಂತಹ ರೀತಿಯಲ್ಲಿ ಸರ್ಕಾರ ಸ್ಪಂದಿಸುತ್ತದೆ ಎಂಬ ಮಾತನ್ನು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ

ವಿಷಯ (ಧ) ಸೂಳೆಕೆರೆಯಲ್ಲಿರುವ ಹೂಳು ತೆಗೆಯುವ ಬಗ್ಗೆ

ಶ್ರೀ ಮಹಿಮ ಜೆ ಪಟೇಲ್ (ಚನ್ನಗಿರಿ) ಮಾನ್ಯ ಅಧ್ಯಕ್ಷರೆ, ಪ್ರಪಂಚದಲ್ಲಿ ಅತ್ಯಂತ ಸೂಕ್ಷ್ಮ ಪ್ರದೇಶಗಳು, ಪರಿಸರದ ಸಮತೋಲನ ದೃಷ್ಟಿಯಲ್ಲಿ ಅತ್ಯಂತ ಸೂಕ್ಷ್ಮ ಪ್ರದೇಶಗಳಲ್ಲಿ ಪಶ್ಚಿಮ ಘಟ್ಟಗಳನ್ನು ಪ್ರಪಂಚದ 5ನೇ ಅತಿ ಸೂಕ್ಷ್ಮ ಪ್ರದೇಶವೆಂದು ಹೇಳಿ ಈಗಾಗಲೇ ಗುರುತುಮಾಡಿದ್ದಾರೆ ಕಳೆದ 25–30 ವರ್ಷಗಳಿಂದ ಅಲ್ಲಿ ಅವ್ಯಾಹತವಾಗಿ ಗಣಿಗಾರಿಕೆ ನಡೆದು ಅದರಿಂದಾಗಿ ತುಂಗಭದ್ರ ನದಿಗಳು ಹರಿಯುವುದರ ಮೇಲೆ ಸಾಕಷ್ಟು ಪರಿಣಾಮವಾಗಿದೆ, ಏಕೆಂದರೆ ಪಶ್ಚಿಮಘಟ್ಟದಲ್ಲಿರುವ ಆ ಬೆಟ್ಟಗಳು, ಮಳೆಗಾಲದಲ್ಲಿ ನೀರನ್ನು ಹಿಡಿದಿಟ್ಟು ಬೇಸಿಗೆಯ ಕಾಲದಲ್ಲಿಯೂ ಕೂಡ ನದಿಗಳಿಗೆ ನೀರನ್ನು ಬಿಟ್ಟುಕೊಡುವಂತಹದ್ದು ಈಗ ಗಣಿಗಾರಿಕೆಯ ಪ್ರಾರಂಭವಾದ ಮೇಲೆ ಭದ್ರಾ ಜಲಾಶಯವಿರಬಹುದು, ತುಂಗಭದ್ರಾ ಜಲಾಶಯ ಈ ತರಹದ ಎಲ್ಲಾ ಜಲಾಶಯಗಳಲ್ಲಿ ಹೂಳು ತುಂಬಿ ಸಾಕಷ್ಟು ಪರಿಸರದ ಅಸಮತೋಲನವುಂಟಾಗುತ್ತದೆ ಇಷ್ಟೆಲ್ಲಾ ಆಸಗ್ಯೂ ಕೂಡ ಪರಿಸರವಾದಿಗಳಾದ ಪ್ರೊ ಯು ಆರ್ ಅನಂತಮೂರ್ತಿಯವರು, ನಮ್ಮ ಈಗಿನ ಸಂಸದೀಯ ಮಂಡಳಿಯ ಸಚಿವರಾದ ಶ್ರೀ ಎಂ ಪಿ ಪ್ರಕಾಶ್‌ರವರು ಅವರೂ ಕೂಡ ಈ ತುಂಗಭದ್ರಾ ನದಿಗಳನ್ನು ಉಳಿಸಬೇಕೆಂದು ಹಿಂದೆ ಹೋರಾಟ ಮಾಡಿದ್ದರು ಆಗ ಸರ್ಕಾರ ಈ ವಿಚಾರದ ಬಗ್ಗೆ ಎಚ್ಚೆತ್ತು ಈ ಗಣಿಗಾರಿಕೆಯನ್ನು 3–4 ವರ್ಷಗಳಲ್ಲಿ ನಿಲ್ಲಿಸಬೇಕು ಎಂಬ ಆದೇಶವನ್ನು ಹೊರಡಿಸಲಾಗಿದೆ ಇತ್ತೀಚೆಗೆ ಮತ್ತೆ ಕೊಡಚಾದ್ರಿ ಬೆಟ್ಟಗಳ ಬಳಿ ಮ್ಯಾಂಗನೀಸ್‌ನ್ನು ತೆಗೆಯಬೇಕೆಂದು ತಮಿಳುನಾಡಿನ ಒಂದು ಕಂಪನಿಯವರು ಯಾವಾಗಲೂ ರಾತ್ರೋರಾತ್ರಿ ಬಂದು ಕೆಲಸವನ್ನು ಪ್ರಾರಂಭ ಮಾಡಿ ಮತ್ತೆ ಗಲಾಟೆಯನ್ನು ಮಾಡಿದ ಮೇಲೆ

ಬಿಟ್ಟು ಓಡಿಹೋಗಿದ್ದಾರೆಂದು ಸುದ್ದಿ ಬಂದಿದೆ ಈಗಾಗಲೇ ಬೇರೆ ಬೇರೆ ಕಡೆಗಳಲ್ಲಿ ಅಂದರೆ ಗಂಗಡಿ ಕಲ್ಲು, ನಲ್ಲಿಬೇಡು ಈ ತರಹದ ಬೆಟ್ಟ ಪ್ರದೇಶಗಳನ್ನು ಗುರುತಿಸಿಕೊಂಡು ಅಲ್ಲಿ ಮ,ತ್ತೆ ಗಣಿಗಾರಿಕೆಯನ್ನು ಪ್ರಾರಂಭಿಸಬೇಕೆಂದು ಹೇಳಿ ಬಹಳಷ್ಟು ಕಂಪನಿಗಳು ಅಲೋಚನೆಯನ್ನು ಮಾಡಿ ಇದರ ಬಗ್ಗೆ ತಯಾರಿಯನ್ನು ನಡೆಸುತ್ತಿವೆ ಪ್ರಪಂಚದ ಸಮತೋಲನದ ದೃಷ್ಟಿಯಿಂದ ಈ ಪಶ್ಚಿಮಘಟ್ಟಗಳನ್ನು ಬಹಳ ಜರೂರಾಗಿ ಇದರ ಬಗ್ಗೆ ಒಂದು ವಿಶೇಷವಾದಂತಹ ಕಾನೂನನ್ನು ಮಾಡಿ, ಅಲ್ಲಿ ಯಾರೂ ಕೂಡ ಗಣಿಗಾರಿಕೆಯನ್ನು ಮಾಡಬಾರದು, ಅಲ್ಲಿ ಕಾಡನ್ನು ಉಳಿಸುವುದಕ್ಕೆ ಅಲ್ಲಿ ಶೋಲಾ ಆಫ್ ಫಾಫಾರೆಸ್ಟ್ ನಿತ್ಯಹರಿದ್ವರ್ಣ ಕಾಡು ಏನಿದೆ, ನಮ್ಮ ರಾಜ್ಯದ ಸಂಪತ್ತು ಏನಿದೆ ಅದನ್ನು ಉಳಿಸಬೇಕು ನಮ್ಮ ರಾಜ್ಯದ ಸಂಪತ್ತು ಎಂದು ಇದ್ದರೆ, ಈ ಪಶ್ಚಿಮ ಘಟ್ಟದ ಸಂಪತ್ತೆ ಇರುವುದು ಅದನ್ನು ಉಳಿಸುವ ಬಗ್ಗೆ ವಿಶೇಷವಾದಂತಹ ಒಂದು ಕಾನೂನನ್ನು ಮಾಡಿ ಅಲ್ಲಿ ಯಾರೂ ಕೂಡ ಯಾವುದೇ ತರಹದ ತೊಂದರೆಯೂ ಆಗದಹಾಗೇ ಗಣಿಗಾರಿಕೆ ಮಾಡುವುದಾಗಲಿ, ಕಾಡನ್ನು ಕಡಿಯುವುದಾಗಲಿ, ಆ ತರಹ ಅಗದಹಾಗೇ ಒಂದು ವಿಶೇಷವಾದಂತಹ ಕನೂನನ್ನು ಸರ್ಕಾರ ತರುವುದರ ಕಡೆಗೆ ಗಮನಕೊಡಬೇಕು ಹಾಗೆಯೇ ನಮ್ಮ ತಾಲ್ಲೂಕಿನಲ್ಲಿ ಬರುವಂತಹ ಸೊಳೆಕೆರೆಯು ಏಷ್ಯಾ ಖಂಡದಲ್ಲಿ ಅತ್ಯಂತ ದೊಡ್ಡ ಕೆರೆಗಳಲ್ಲಿ ನ್ಯಾಚುರಲ್ Reservoir ಈ ಸೂಳೆ ಕೆರೆ ಒಂದು Reservoir ಈಗ ಅದರಲ್ಲಿ 8 ಅಡಿಗಳಷ್ಟು ಹೂಳು ತುಂಬಿದೆ, ಮೊದಲು ತುಂಬಾ ಅಪಾರವಾದಂತಹ ನೀರನ್ನು ಹಿಡಿಯುತ್ತಿದ್ದಂತಹ ಈ ಸೂಳೆಕೆರೆ ಈಗ ನೀರೇ ಇಲ್ಲದಂತಹ ಪರಿಸ್ಥಿತಿಗೆ ಬಂದು ನಮ್ಮ ಚನ್ನಗಿರಿ, ಚಿತ್ರದುರ್ಗ, ಜಗಳೂರು ಹೀಗೆ ಬಹಳಷ್ಟು ಜಾಗಗಳಿಗೆ ನೀರನ್ನು ಕೊಡುವಂತಹ ಈ ಕೆರೆ ಒಣಗಿ ಹೋಗುವಂತಹ ಪರಿಸ್ಥಿತಿ ಬಂದಿದೆ ಅಲ್ಲಿ ಹೂಳನ್ನು ತೆಗೆಯುವುದರ ಬಗ್ಗೆ ಹಾಗೂ ಅಲ್ಲಿ ಕೆರೆಗಳನ್ನು ಸಂರಕ್ಷಿಸುವ ಬಗ್ಗೆ ವಿಶೇಷವಾಗಿ ಸರ್ಕಾರ ಗಮನವನ್ನು ವಹಿಸಬೇಕೆಂದು ಹೇಳಿ ನನ್ನ ಒಂದು ಕೋರಿಕೆಯಾಗಿದೆ

ಶ್ರೀ ಎಂಪಿ ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿರುವಂತಹ ವಿಚಾರವನ್ನು ಮಾಣ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಅವರೂ ಕೂಡ ಆ ಹೋರಾಟದ ಮುಂಚೂಣಿಯಲ್ಲಿದ್ದರು, ಪಶ್ಚಿಮ ಘಟ್ಟಗಳ ಕುದುರೆಮುಖದ ಭಾಗಕ್ಕೂ ಕೂಡ ಅವರು ದೈಹಿಕ ಕಷ್ಟವನ್ನು ಅನುಭವಿಸಿ 6–7 ದಿವಸ ಅವರು ಹೋಗಿಬಂದಿರುವ ಬಗ್ಗೆಯೂ ಕೂಡ ನನ್ನ ಗಮನಕ್ಕೆ ಬಂದಿದೆ ತುಂಗಾ ಮೂಲವನ್ನು ಉಳಿಸಿ ಎಂದು ಹೇಳಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಿಂದ ಹಿಡಿದು ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ನಮ್ಮ ಕಮ್ಯೂನಿಷ್ಟ್ ಸ್ನೇಹಿತರು ಮತ್ತು ಬೇರೆಯವರು ನಿರಂತರವಾಗಿ ಹೋರಾಟ ಮಾಡಿರುವಂತಹದ್ದು ಇದೆ ಇತ್ತೀಚಿನ ವಿದ್ಯಾಮಾನಗಳಲ್ಲಿ ಅದನ್ನು ಮತ್ತೆ 20 ವರ್ಷಗಳ ಕಾಲ ನವೀಕರಿಸಬೇಕೆಂಬ ವಿಚಾರ ಬಂದಾಗ ಪ್ರಪಂಚ ಇದರ ಕಡೆ ಗಮನ ಕೊಡುವಂತಹ ಪ್ರಯತ್ನವಾಗಿದೆ ತಮ್ಮ ಹೋರಾಟದ ಹಿನ್ನೆಲೆಯಲ್ಲಿ ಏನೂ ಸೂಕ್ಷ್ಮವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ, ಪಶ್ಚಿಮ ಘಟ್ಟಗಲ ಜೀವಸಂಕಲವನ್ನು ಉಳಿಸಿಕೊಡುವಂತಹದ್ದು, ವನ್ಯಸಂಕುಲವನ್ನು ಉಳಿಸುವುದು, ನಮ್ಮ ಅದ್ಯಕರ್ತವ್ಯವಾಗಿದೆ ಏಕೆಂದರೆ ಇದು ಪೃಥ್ವಿ ನಮಗೆ ಬಳುವಳಿಯಾಗಿ ಬಂದಿರತಕ್ಕಂತಹದ್ದು ಅಲ್ಲ, ಈ ಪೃಥ್ವಿ ನಾವು ಮುಂದಿನ ತಲೆಮಾರಿನ ರಿಗೆ ಕೊಡಬೇಕಾದಂತಹ ಋಣಭಾಧೆ ನಮ್ಮದು ಆದ್ದರಿಂದ ಈ ರುಣಬಾಧೆಯನ್ನು ಉ ಳಿಸಿಕೋ ್ಳ ವಾಗ ಈ ವಿಚಾರಗಲ ಬಗ್ಗೆ ಸರ್ಕಾರ ಗಮನವನ್ನೂ ಕೊಡುತ್ತದೆ ಹಿಂದಿನ ಸರ್ಕಾರ ಈ ಬಗ್ಗೆಯು ೨ ಕೂಡ ಕೇಂದ್ರ ಸರ್ಕಾರದೊಂದಿಗೆ ಮಾತನಾಡಿದ ಮೇಲೆ ಮತ್ತೆ 5 ವರ್ಷಗಳ ಕಾಲ

ಗುತ್ತಿಗೆಯನ್ನು ನವೀಕರಣ ಮಾಡುವಮತಹದ್ದು ಆಯಿತು ಆದರೆ ಅಲ್ಲಿರುವಂತಹ ಕಾರ್ಮಿಕರಿಗೆ ಪರ್ಯಾಯವಾಗಿ ಉದ್ಯೋಗವನ್ನು ಒದಗಿಸಬೇಕೆಂದು ಬಂದಾಗ ಈ ಹಿಂದೆ ಈ ಸಬೆಗಳು ನಡೆದಾಗ ನಮ್ಮ ಎನ್ ಎಂ ಡಿ ಸಿ ವಲಯದಲ್ಲಿ ಅಗಲಿ, ಅಥವಾ ಸಂಡೂರು ಭಾಗದಲ್ಲಿಯೇ ಆಗಲಿ, ಈ ಕುದುರೆಮುಖದ ಇಡೀ ಗಣಿಗಾರಿಕೆಯನ್ನು ಅಲ್ಲಿಗೆ ಹಸ್ತಾಂತರಿಸಬಹುದು ಎನ್ನತಕ್ಕಂತಹ ಮಾತು ಮತ್ತು ಸಲಹೆಯನ್ನು ಕೊಟ್ಟಂತಹ ಉದಾಹರಣೆಯೂ ಕೂಡ ಇದೆ ಈ ಸನ್ನಿವೇಶದಲ್ಲಿ ತಾವು ಏನು ಪ್ರಸ್ತಾಪ ಮಾಡಿದ್ದೀರಿ, ಅದನ್ನು ಸಂಪೂರ್ಣವಾಗಿ ಗಮನದಲ್ಲಿಟ್ಟುಕೊರಡು, ನಮ್ಮ ನದಿ ಮೂಲವನ್ನೂ ಉಳಿಸಿಕೊಳ್ಳುವಂತಹ ಕೆಲಸವನ್ನು ನಾವು ಮಾಡಬೇಕಾಗಿದೆ ಈಗ ನಮ್ಮಲ್ಲಿ ಒಂದು ಗಾದೆ ಮಾತು ಇದೆ, "ಋಷಿ ಮೂಲ ಮತ್ತು ನದಿ ಮೂಲಗಳನ್ನೂ ನೋಡಬಾರದು ಎಂದು ಹೇಳಿ" ಆದರೆ ಇವತ್ತು ನದಿ ಮೂಲವನ್ನು ನೋಡಬೇಕಾದದ್ದು ಇದೆ ಋಷಿ ಮೂಲವನ್ನೂ ನೋಡುತ್ತೇವೆಯೋ ಇಲ್ಲವೋ ಅದು ಬೇರೆ, ಆದರೆ ನದಿ ಮೂಲವನ್ನೂ ನೋಡುವಂತಹದ್ದು ಅತ್ಯಂತ ಅವಶ್ಯಕತೆಯಾಗಿದೆ ತಾವು ಹೇಳಿದಂತೆ ಶಾಂತಿ ಸಾಗರವೆಂದು ಮೊದಲು ಅದಕ್ಕೆ ಹೆಸರನ್ನು ಇಟ್ಟಿದ್ದರು ಆದರೆ ಅದು ಸೂಳೇ ಕೆರೆ ನೀವು ಉದ್ದೇಶಪೂರ್ವಕವಾಗಿ ಸೂಳೇ ಕೆರೆ ಎಂದು ಆ ಶಬ್ದವನ್ನು ಉಚ್ಚಾರಣೆಗೆ ಉಪಯೋಗಿಸಿದಕ್ಕಾಗಿ ನಿಮ್ಮನ್ನು ನಾವು ಅಭಿನಂದಿಸುತ್ತೇವೆ ಇದರ ಬಗ್ಗೆಯೂ ಕೂಡ ಬಹಳ ಹೋರಾಟವಾಗಿದೆ, ನೀವು ಅನಾವಶ್ಯಕವಾಗಿ ಆ ಭಾಗದಲ್ಲಿದ್ದಂತಹ ಒಬ್ಬ ಸೂಳೆ ಹೆಣ್ಣು ಹೋರಾಟವಾಗಿದೆ, ನೀವು ಅನಾವಶ್ಯಕವಾಗಿ ಆ ಭಾಗದಲ್ಲಿದ್ದಂತಹ ಒಬ್ಬ ಸೂಳೆ ಹೆಣ್ಣು ಮಗಳು ಇದ್ದಳು, ಈ ಜನಗಳಿಗೆ ಅನುಕೂಲವಾಗಲಿ ಎಂದು ಕೆರೆ ಕಟ್ಟಿಸಿದ್ದರಿಂದ ಆ ಹೆಸರನ್ನು ಇಟ್ಟಿದ್ದರು ಅದನ್ನು ನೀವು ಮತ್ತೆ ಬೇರೆ ಬೇರೆ ಕಾರಣಕ್ಕಾಗಿ ಶಾಂತಿಕೆರೆ ಎಂದು ಮಾಡಬಾರದು ಎಂದು ಹೋರಾಟ ಕೂಡ ಆಗಿದೆ ದಿವಂಗತ ಶ್ರೀ ಜೆ ಹೆಚ್ ಪಟೇಲ್‌ರವರು ಮುಖ್ಯಮಂತ್ರಿಗಳಾಗಿ ಇದಕ್ಕೆ ಸಹಮತಿಯನ್ನು ಕೊಟ್ಟಿದ್ದರು ಅವರು ಆ ಪ್ರದೇಶದಿಂದ ಬಂದವರಾಗಿದ್ದರಿಂದ ಅದನ್ನು ನಾನು ಇವತ್ತೂ ಕೂಡಿ ಸೂಳೇಕೆರೆ ಎಂದು ಕರೆಯುತ್ತೇನೆ ಆ ದಾಳಕೆಗಳು ಕೂಡ ಹಾಗೆಯೇ ಆಗಬೇಕೆನ್ನುವಂತಹ ಮಾತನ್ನು ಹೇಳಿದರು ಅದನ್ನು ತಾವು ಕೂಡ ಹಾಗೆಯೇ ಮುಂದುವರಿಸಿದ್ದೀರಿ, ಆ ಹೂಳನ್ನು ತೆಗೆಯುವುದಕ್ಕೆ ಒಂದು ಕಾರ್ಯಕ್ರಮವಿದೆ, ಇದರ ಬಗ್ಗೆ ಸಣ್ಣ ನೀರಾವರಿ ಮಂತ್ರಿಗಳ ಗಮನಕ್ಕೆ ತಂದು, ವಿಶ್ವಬ್ಯಾಂಕಿನ ಯೋಜನೆಯಡಿಯಲ್ಲಿ ಇದಕ್ಕೆ ಹೆಚ್ಚು ಹಣ ಬರುತ್ತದೆ, ಮತ್ತು ಪ್ರಕೃತಿ ವಿಕೋಪ ನಿಧಿಯಲ್ಲಿ ಸ್ವಲ್ಪ ಮಟ್ಟಿಗೆ ಹಣವೂ ಸಿಗುತ್ತದೆ ಆ ಹೂಳು ತೆಗೆಯುವಂತಹ ಕೆಲಸಕ್ಕೆ ತಾವು ಒಂದು ಯೋಜನೆಯನ್ನು ಸಣ್ಣ ನೀರಾವರಿ ಇಲಾಖೆಯವರ ಕಡೆಯಿಂದ ರೂಪಿಸಿ ಅದನ್ನು ಕಳುಹಿಸಿಕೊಟ್ಟರೆ ಸರ್ಕಾರ ಸಕಾರಾತ್ಮಕವಾಗಿ ಅದಕ್ಕೆ ಪ್ರತಿಕ್ರಿಯೆಯನ್ನು ಮಾಡುತ್ತದೆ

ಶ್ರೀ ಮಹಿಮ ಜೆ ಪಟೇಲ್ ಈ ಸೂಳೆ ಕೆರೆಯದ್ದು ಹೂಳು ತೆಗೆದುವುದು ಏನೆದೆ, ಮೈನರ್ ಇರಿಗೇಷನ್ ಮತ್ತು ಬೇರೆ ಈ ಡಿಪಾರ್ಟ್‌ಮೆಂಟ್‌ನಲ್ಲಿ ಆಗುವಂತಹದ್ದು ಅಲ್ಲ ಇದರ ಬಗ್ಗೆ ವಿಶೇಷವಾದಂತಹ ಒಂದು ಯೋಜನೆಯನ್ನು ಮಾಡಬೇಕಾಗುತ್ತದೆ ಏಕೆಂದರೆ ಇದರಲ್ಲಿ ಹೂಳು ತುಂಬಿರುವುದು ಸುಮಾರು 33 ಚದರ ಮೈಲಿ ಸುತ್ತಳತೆ ಇರುವಂತಹ ಈ ಕೆರೆಯಲ್ಲಿ 8 ಅಡಿಗಳಷ್ಟು ಹೂಳು ಇದೆ ಎಂದರೆ ಲಕ್ಷಾಂತರ ಟನ್‌ನಷ್ಟು ಹೂಳು ಬರುತ್ತದೆ ಆ ಹೂಳನ್ನು ಸಾಗಣಿಕೆ ಮಾಡುವುದಕ್ಕಾಗಿ ಲಾರಿಗಳು ಅಲ್ಲಿ ಓಡಾಗಿದರೆ ಅದರ ಸುತ್ತಮುತ್ತ ಸುಮಾರು 250 ಕಿಲೋಮೀಟರ್ ರಸ್ತೆಗಳೆಲ್ಲವೂ ಹಾಳಾಗಿ ಹೋಗುವಂತಹದ್ದು ಸಂಭವ ಇರುವುದರಿಂದಲೇ ಹೂಳನ್ನು ತೆಗೆದಯುವುದರ ಬಗ್ಗೆ ಬೇರೆ ಹೊಸದಾದ ಸ್ಕೀಮ್‌ನ್ನು ಹಾಕಿಕೊಳ್ಳು ಬೇಕಾಗುತ್ತದೆ ನಮ್ಮ ಭಾರತ ದೇಶದಲ್ಲಾಗಲಿ,

ನಾನು ಇದರ ಬಗ್ಗೆ ಬಹಳಷ್ಟು ಸ್ಟಡಿ ಮಾಡಿ ನೋಡಿದ್ದೇನೆ ಈಗ ಇರತಕ್ಕ ತಂತ್ರಜ್ಞಾನದಲ್ಲಿ ನೀರಿದ್ದಾಗ ಹೂಳನ್ನು ತೆಗೆಯುವ ತಂತ್ರಜ್ಞಾನ ಇಲ್ಲ ಆ ಹೂಳನ್ನು ಲಾರಿಗಳಲ್ಲಿ ಸಾಗಾಣಿಕೆ ಮಾಡುವುದು ಆಸ್ಥಾಧ್ಯವಾದುದು ಆದ್ದರಿಂದ ಇಲ್ಲಿ ಬೇರೆ ಪದ್ಧತಿಯಿಂದ ಆ ಹೂಳನ್ನು ಬೇರೆ ಕಡೆಗೆ ಸಾಗಾಣಿಕೆ ಮಾಡಲು ಸಾಧ್ಯತೆ ಇದೆಯೇ ಎಂಬ ಬಗ್ಗೆ ಪ್ರಪಂಚದ ಮಟ್ಟದಲ್ಲಿ ಅಧ್ಯಯನ ಮಾಡಬೇಕಾಗಿದೆ ಇದನ್ನು ಮೈನರ್ ಇರಿಗೇಷನ್‌ನಲ್ಲಿ ಮಾಡುತ್ತೇವೆ ಎಂಬುದಕ್ಕಿಂತ ಇಂಥ ದೊಡ್ಡ ಕೆರೆ ಹೂಳನ್ನು ತೆಗೆಯಲು ಬೇರೆ ಯಾವುದಾದರೂ ಒಂದು ವಿಶೇಷವಾದ ಅಂಗ ರಚನೆಯಾಗಬೇಕು ಎಂಬುದು ಸರ್ಕಾರಕ್ಕೆ ನನ್ನ ಸಲಹೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಬಂದರುಗಳಲ್ಲಿ ಹೂಳು ತುಂಬಿದಂಥ ಪ್ರದೇಶ ಬಂದಾಗ dredger ಗಳನ್ನು ಉಪಯೋಗಿಸಿಕೊಳ್ಳುವಂಥದ್ದು ಒಂದು ಸಹಜವಾದಂಥ ರೀತಿ ಆದರೆ ಈಗ dredger ಗಳನ್ನು ಇಲ್ಲಿ ಉಪಯೋಗಿಸಲಿಕ್ಕೆ ಬರುವುದಿಲ್ಲ ಅವರು ಹೇಳಿದಂತೆ 133 ಟಿ ಎಂ ಸಿ ನೀರನ್ನು ಹಿಡಿದಿಡುವಂಥ ಸಾಮರ್ಥ್ಯದ ತುಂಗಭದ್ರ ಅಣೆಕಟ್ಟಿನ ಸಾಮರ್ಥ್ಯ ಇವತ್ತು 108 ಟಿ ಎಂ ಸಿ ಸಾಮರ್ಥ್ಯಕ್ಕೆ ಬಂದಿದೆ ಆ ಹೂಳನ್ನು ಕೆಳಗಡೆಯವರೆಗೆ ಕೊರೆದು ಅದನ್ನು ಬ್ಲಾಸ್ಟ್ ಮಾಡಿ ಕಾಲುವೆಗಳ ಮೂಲಕ ಬಿಡಬೇಕು ಎನ್ನುವಂಥ ಕೆಳಗಡೆಯವರೆಗೆ ಕೊರೆದು ಅದನ್ನು ಬ್ಲಾಕ್ಸ್ ಮಾಡಿ ಕಾಲುವೆಗಳ ಮೂಲಕ ಬಿಡಬೇಕು ಎನ್ನುವಂಥ ಸಲಹೆ ಬಂದಿತ್ತು ಆದರೆ ಅದು ಆರ್ಥಿಕವಾಗಿ ಸರಿಯಾಗುವಂಥದಲ್ಲ ಮತ್ತು ಕಾಲುವೆಯಲ್ಲಿ ಹೂಳು ತುಂಬುವುದರಿಂದ ಅದನ್ನು ಎತ್ತಲಿಕ್ಕೂ ಸಾಧ್ಯವಾಗುವುದಿಲ್ಲ ಎನ್ನತಕ್ಕದ್ದು ಇದೆ ಈ ಕಾರಣಕ್ಕಾಗಿಯೇ ವಿಶೇಷವಾದಂಥ ಒಂದು ಯೋಜನೆಯನ್ನು ರೂಪಿಸಬೇಕು ಎಂಬುದಕ್ಕೆ ಸರ್ಕಾರದವರು ಒಪ್ಪುತ್ತೇವೆ ಆದರೆ ಅದಕ್ಕಿಂತ ಹೆಚ್ಚಾಗಿ ಮಾನ್ಯ ಅಂಗಡಿಯವರು ಇಂಥ ವಿಚಾರದಲ್ಲಿ ಒಂದು ಹೊಸ ನೀತಿಯನ್ನು ಪ್ರಕಟಣೆ ಮಾಡಿದ್ದರು ಅವರು ನಮ್ಮ ನಿವೃತ್ತ ಮುಖ್ಯ ಇಂಜಿನಿಯರ್ ಆಗಿದ್ದರು, ಒಬ್ಬ ಒಳ್ಳೆಯ ಇಂಜಿನಿಯರ್ ತಜ್ಞರಾಗಿದ್ದರು ಅವರು ಇತ್ತೀಚೆಗೆ ಗತಿಸಿದ್ದಾರೆ ಅವರ ಬಗ್ಗೆ ಸದನ ಸಹ ಸಂತಾಪ ಸೂಚನೆಯನ್ನು ಮಾಡಿತ್ತು ಹೂಳನ್ನು ತೆಗೆಯುವುದರ ಬದಲು ಏರಿಯನ್ನು ಎತ್ತರಿಸುವಂಥದ್ದು ಎಂದು ಅಲ್ಲಿಯ ಜ್ಞಾನದ ವಿಚಾರದಿಂದ ಅವರು ಹೇಳಿದ್ದರು ಏರಿಯನ್ನು ಎತ್ತರಿಸುವುದರ ಮೂಲಕ ನೀರನ್ನು ಹಿಡಿದಿಡುವ ಸಾಮರ್ಥ್ಯ ಹೆಚ್ಚಾಗುತ್ತದೆ, ಅದನ್ನು ನೀವು ಪರಿಶೀಲಿಸಬೇಕು ಎಂಬ ಮಾತನ್ನು ಅವರು ಹೇಳಿದ್ದಾರೆ ವಿಶ್ವಬ್ಯಾಂಕ್ ಯೋಜನೆಯಿಂದ ಹೆಚ್ಚು ಹಣವನ್ನು ಪಡೆದು ಈಗ ತಾತ್ಕಲಿಕವಾಗಿ ಏರಿಯನ್ನು ಎತ್ತರಿಸುವ ಮೂಲಕ ನೀರನ್ನು ಹಿಡಿದಿಡುವ ಸಾಮರ್ಥ್ಯವನ್ನು ಹೆಚ್ಚು ಮಾಡತಕ್ಕ ಕೆಲಸನವನ್ನು ನಾವು ಮಾಡಬಹುದು

ವಿಷಯ ಕುದುರೆಮುಖ ವ್ಯಾಪ್ತಿಯ ರಾಷ್ಟ್ರೀಯ ಉದ್ಯಾನವನದ ಯೋಜನೆ

ಶ್ರೀ ಎಂ ಪಿ ಕುಮಾರ್ ಸ್ವಾಮಿ (ಮೂಡಿಗೆರೆ) ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಕುದುರೆಮುಖ ವ್ಯಾಪ್ತಿಯ ರಾಷ್ಟ್ರೀಯ ಉದ್ಯಾನವನದ ಯೋಜನೆ ಸರ್ಕಾರದಲ್ಲಿರುವದರಿಂದ, ಅಲ್ಲಿ ಈಗಾಗಲೇ ಕುದುರೆಮುಖ ಕಂಪನಿ ಮಾಡಬೇಕಾದರೆ ಒಮ್ಮೆ ಅಲ್ಲಿನ ನಿವಾಸಿಗಳನ್ನೆಲ್ಲಾ ಸ್ಥಳಾಂತರ ಮಾಡಲಾಗಿದೆ ಮತ್ತೆ ಈಗ ರಾಷ್ಟ್ರೀಯ ಉದ್ಯಾನವನವನ್ನು ಮಾಡುತ್ತೇವೆಂದು ಮತ್ತೆ ಅಲ್ಲಿನ ನಿವಾಸಿಗಳನ್ನು ಏಳಿಸಬೇಕಾಗುತ್ತದೆ ಇದರಿಂದ ಸುಮಾರು ಎರಡು ತಲೆಮಾರಿನ ಜನಗಳಿಗೆ ತೊಂದರೆಯಾಗುತ್ತಿದೆ ಅಲ್ಲಿ ಈಗ ಏನು ಜನರು ವಾಸವಿದ್ದಾರೆ ಅವರಿಗೆ ಸರ್ಕಾರದ ವತಿಯಿಂದ ಅಲ್ಲೇ ನಿವೇಶನದ ಹಕ್ಕುಪತ್ರವನ್ನು ಕೊಡುವ ವ್ಯವಸ್ಥೆ ಮಾಡಿದರೆ ಅವರ ಜೀವನಕ್ಕೆ ಅನುಕೂಲವಾಗುತ್ತದೆ.

ಅಲ್ಲೇ ಸಾಗುವಳಿ ಹಕ್ಕುಪತ್ರವನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ ಹಿಂದಿನ ಜಿಲ್ಲಾಧಿಕಾರಿಗಳಾಗಿದ್ದ ಮಾನ್ಯ ಗೋಪಾಲಕೃಷ್ಣಗೌಡರು ಒಂದು ಆಜ್ಞೆಯನ್ನು ಹೊರಡಿಸಿ ಒಂದು ಲಕ್ಷದ ಇಪ್ಪತ್ತೆಂಟು ಸಾವಿರ ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿದರು ಅದರಿಂದ ಅನೇಕ ಪಟ್ಟಣಗಳು, ಕಳಸದಂಥ ಪಟ್ಟಣಗಳು, ಇವತ್ತು ಅರಣ್ಯ ಇಲಾಖೆಯ ಕಾನೂನು ಅನೇಕ ಊರುಗಳನ್ನು ಪಟ್ಟಣಗಳನ್ನು ನುಂಗುವಂಥ ಪರಿಸ್ಥಿತಿ ಬಂದಿದೆ ದಯಮಾಡಿ ಅದು ಆ ರೀತಿ ಆಗಬಾರದು ಅದು ಪುನ ಕಂದಾಯ ಇಲಾಖೆಗೆ ವರ್ಗ ಆಗಬೇಕೆಂದು ಸರ್ಕಾರಕ್ಕೆ ಆ ಕ್ಷೇತ್ರದ ಪ್ರತಿನಿಧಿಯಾಗಿ ನಾನು ಮನವಿಯನ್ನು ಮಾಡುತ್ತೇನೆ ಎರಡನೆಯದಾಗಿ ಸಾಮಾಜಿಕ ಸಮಸ್ಯೆ ನಕ್ಸಲಿಯರ ಸಮಸ್ಯೆಯನ್ನು ನಮ್ಮ ಸ್ನೇಹಿತರೊಬ್ಬರು ಪ್ರಸ್ತಾಪ ಮಾಡಿದ್ದಾರೆ ಬಂದೂಕು ಮತ್ತು ಮದ್ದುಗುಂಡುಗಳು-ಪೋಲೀಸರಿಗೆ ಮಾತ್ರ ಬೇಗನೆ ಹೋಗುತ್ತವೆ, ಆದರೆ ಸಾಮಾಜಿಕ ಸಮಸ್ಯೆಯನ್ನು ಬಗೆಹರಿಸಲು ಏಕೆ ಪರಿಹಾರ ಅಲ್ಲಿಗೆ ಬೇಗನೆ ಹೋಗುವುದಿಲ್ಲ? ಅಷ್ಟೇ ತ್ವರಿತವಾಗಿ ಪರಿಹಾರದ ಹಣವೂ ಅಲ್ಲಿಗೆ ಹೋಗಬೇಕು ಕೇವಲ ಮದ್ದು ಗುಂಡುಗಳು ಬೇಗನೆ ಪೋಲೀಸರಿಗೆ ಹೋದರೆ ಆ ಸಮಸ್ಯೆ ಪರಿಹಾರವಾಗುವುದಿಲ್ಲ ಅನಂತರ ಕಾಫಿ ತೋಟದ ಕಾರ್ಮಿಕರಿಗೆ ಹಳದಿ ಕಾರ್ಡುಗಳನ್ನು ವಿತರಣೆ

1 00 ಪಿಎಂ

ಮಾಡಬೇಕು ಎಂಬ ಬಗ್ಗೆ ಬಹಳ ಚರ್ಚೆಯಾಗುತ್ತಿದೆ ಆದ್ದರಿಂದ ಆ ಕಾರ್ಮಿಕರಿಗೆ ಹಳದಿ ಕಾರ್ಡುಗಳನ್ನು ವಿತರಣೆ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ವಿಚಾರದಲ್ಲಿ ದೀರ್ಘವಾದ ಉತ್ತರವನ್ನು ಸರ್ಕಾರದ ವತಿಯಿಂದ ಕೊಟ್ಟಿದ್ದೇವೆ ರಾಷ್ಟ್ರೀಯ ಉದ್ಯಾನವನಕ್ಕೆ ಕೇಂದ್ರ ಸರ್ಕಾರದ ಕಾನೂನು ಇದೆ ಅದರನ್ವಯ ರಾಷ್ಟ್ರೀಯ ಉದ್ಯಾನವನಗಳೆಂದು ಎಲ್ಲೆಲ್ಲಿ ಬರುತ್ತದೆ ಅಲ್ಲಿರುವಂಥ ಜನವಸತಿಯನ್ನು ಸ್ಥಳಾಂತರಗೊಳಿಸಬೇಕು ಎಂಬುದು ಆ ಕಾನೂನಿನ ಅಡಿಯಲ್ಲಿರುವ ವಿಷಯ ಆದ್ದರಿಂದ ಆ ಗಡಿಪ್ರದೇಶಗಳಲ್ಲಿ, ಅಂದರೆ ರಾಷ್ಟ್ರೀಯ ಉದ್ಯಾನವನದ ಹೊರಗಡೆಯ ಗಡಿಪ್ರದೇಶದಲ್ಲಿ ಇರುವಂಥ ನಿವಾಸಿಗಳನ್ನು ಪುನರ್ವಸತಿ ಮಾಡಿಕೊಡತಕ್ಕ ಕ್ರಮವನ್ನು ಈಗಾಗಲೇ ಕೈಗೊಂಡಿದ್ದೇವೆ ನೀವು ಈಗಾಗಲೇ ಪ್ರಸ್ತಾಪ ಮಾಡಿದಿರಿ, ಮಾನ್ಯ ಸದಸ್ಯರಾದಂಥ ಮಹಿಮಾಪಾಟೀಲರು, ಹಾಗೂ ರವಿಯವರು ಇದರ ಬಗ್ಗೆ ಪ್ರಸ್ತಾಪ ಮಾಡಿದರು ಅಲ್ಲಿಯ ಗಣಿ ಕೈಗಾರಿಕೆಯಿಂದ ತುಂಗಾ ನದಿಯ ಮತ್ತು ತುಂಗಭದ್ರಾ ನದಿಯ ಮೂಲಗಳು ಬತ್ತಿಹೋಗಿ ಹೂಳು ತುಂಬುತ್ತಿದೆ ಎಂದು ಹೇಳಿದಾಗ, ಉದ್ಯಾನವನವನ್ನು ಕಾಪಾಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ ಆ ಜೀವಸಂಕಲನವನ್ನು ಉಳಿಸಿಕೊಳ್ಳಬೇಕಾಗಿದ್ದರೆ ರಾಷ್ಟ್ರೀಯ ಉದ್ಯಾನವನ ಆಗತಕ್ಕದ್ದು ಅತ್ಯಂತ ಅದತ್ಯ ಎರಡಕ್ಕೂ ವಿರೋಧ ಮಾಡಲು ಆಗುವುದಿಲ್ಲ ಇದು ವಿರೋಧಾಭಾಸವಾದ ರೀತಿಯಾಗುತ್ತದೆ ಆ ಕಾರಣಕ್ಕಾಗಿ ತಾವು ಸಂಪೂರ್ಣವಾದ ಸಹಕಾರವನ್ನು ಈ ವಿಚಾರದಲ್ಲಿ ಕೊಡಬೇಕು ಉಳಿದಿರತಕ್ಕ ವಿಚಾರವೇನಿದೆ ಅದರ ಬಗ್ಗೆ ಸರ್ಕಾರ ತೀವ್ರವಾಗಿ, ನಕ್ಸಲಿಯರ ವಿಚಾರದಲ್ಲಿ ಬಂದಿರುವ ಪರಿಹಾರ ವಿಚಾರವೇನಿದೆ ಆ ಸಮಸ್ಯೆಯನ್ನು ಬಗೆಹರಿಸಲು ಸಂಪೂರ್ಣವಾದ ಗಂಭೀರವಾದ ಗಮನವನ್ನು ಸರ್ಕಾರ ಕೊಡುತ್ತದೆಂದು ಹೇಳುತ್ತೇನೆ

ವಿಷಯ (ಪ) ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ ಕುಡಿಯುವ ನೀರಿಗಾಗಿ ಟ್ರಾನ್ಸ್‌ಫಾರ್ಮರ್ ಒದಗಿಸುವ ಬಗ್ಗೆ

ಶ್ರೀ ಜೆ ನರಸಿಂಹಸ್ವಾಮಿ (ದೊಡ್ಡಬಳ್ಳಾಪುರ) ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಕೆ ಪಿ ಟಿ ಸಿ ಎಲ್ ನಿಂದ ಕುಡಿಯುವ ನೀರಿಗೆ ಒದಗಿಸುವಂಥ ಟ್ರಾನ್ಸ್‌ಫಾರ್ಮರ್ಸ್‌ನದ್ದು ಬಹಳ

ಸಮಸ್ಯೆಯಾಗಿದೆ ಸಂಬಂಧಪಟ್ಟ ಅಧಿಕಾರಿಯವರನ್ನು ಕೇಳಿದರೆ ಮುಖ್ಯ ಇಂಜಿನಿಯರ್‌ರವನ್ನು ನೋಡಿ ಎಂದು ಹೇಳುತ್ತಾರೆ, ಮುಖ್ಯ ಇಂಜಿನಿಯರ್‌ರವರನ್ನು ಕೇಳಿದರೆ ಟೆಕ್ನಿಕಲ್ ಡೈರೆಕ್ಟರ್‌ನ್ನು ನೋಡಿ ಎಂದು ಹೇಳುತ್ತಾರೆ, ಅವರನ್ನು ಕೇಳಿದರೆ ಮೆನೇಜಿಂಗ್ ಡೈರೆಕ್ಟರ್‌ನ್ನು ನೋಡಿ ಎಂದು ಹೇಳುತ್ತಾರೆ ಹೀಗಾಗಿ 20 ರಿಂದ 25 ದಿವಸಗಳಾದರೂ ಟ್ರಾನ್ಸ್‌ಫಾರ್ಮರ್‌ಗಳ ವ್ಯವಸ್ಥೆ ಏನಿದೆ ಅದನ್ನು ಸರಿಯಾಗಿ ಒದಗಿಸುತ್ತಿಲ್ಲ ಇದು ಮಾನ್ಯ ಎಂ ಪಿ ಪ್ರಕಾಶ್‌ರವರಿಗೂ ಅನುಭವ ಬಂದಿದೆ ಮಾಗಡಿ ತಾಲ್ಲೂಕಿನ ಶಾಸಕರು ಗೌರಿಬಿದನೂರಿನ ಶಾಸಕರು ಮತ್ತು ಚಿಕ್ಕಬಳ್ಳಾಪುರದ ಶಾಸಕರು ನಮಗೆಲ್ಲಾ ಅನುಭವವಾಗಿದೆ ಇದನ್ನು ಕೇವಲ ಒಂದು ಏಜನ್ಸಿಗೆ ಕೊಟ್ಟು ಅವರು ತೆಗೆದುಕೊಳ್ಳದೆ ಇರುವುದರಿಂದ ಅವರು ಬಿಟ್ಟಿದ್ದರಿಂದ ಈ ವ್ಯವಸ್ಥೆ ಅವ್ಯವಸ್ಥೆಯಾಗಿದೆ ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ಸಂಭವವಿರುವುದರಿಂದ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಸಾಧ್ಯವಾದಷ್ಟು ಬೇಗ ಈ ವ್ಯವಸ್ಥೆಯನ್ನು ಸರಿಮಾಡಬೇಕೆಂದು ಮತ್ತೊಮ್ಮೆ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಇಂಧನ ಸಚಿವರಾದಂಥ ಮಾನ್ಯ ರೇವಣ್ಣನವರು ಎರಡು ಬಾರಿ ಸಭೆಯನ್ನು ಕರೆದಿದ್ದಾರೆ ನೀವು ಹೇಳಿದಂತೆ 230 ಕೋಟಿ ರೂಪಾಯಿಗಳಿಗೆ ಒಂದು ಗುತ್ತಿಗೆ ಕಂಪನಿಗೆ ಕೊಟ್ಟಂಥದ್ದು ಕೂಡ ಈ ಅವವಸ್ಥೆಗೆ ಕಾರಣವಾಗಿದೆ ಇಲ್ಲಿ ಅನೇಕ ಕಡೆ ಟ್ರಾನ್ಸ್‌ಫಾರ್ಮರ್‌ನ ಚಿಕ್ಕ ಚಿಕ್ಕ ಕಲ್ಲುಗಳನ್ನು ಹಾಕಿ ಆ ಎಣ್ಣೆ ಮೇಲೆ ಬರುವಂಥ ರೀತಿಯಲ್ಲಿ ನೋಡಿ ಆ ಎಣ್ಣೆಯನ್ನು ಸಂಗ್ಹ ಮಾಡಿ ಬೆಂಗಳೂರು ಹೈದ್ರಾಬಾದ್ ನಗರಗಳಿಗೆ ಕಳುಹಿಸಿಕೊಡತಕ್ಕದ್ದು ಇದೆ ಈ ಟ್ರಾನ್ಸ್‌ಫಾರ್ಮರ್‌ಗಳನ್ನು ನಾವು ದುರಸ್ತಿ ಮಾಡುವಾಗ ಕಳುಹಿಸಿಕೊಡಬೇಕಾಗಿದ್ದರೆ ಸಂಬಂಧಪಟ್ಟ ಇಂಜಿನಿಯರ್‌ರವರು ಆ ಎಣ್ಣೆಯನ್ನು ತೆಗೆದುಕೊಂಡು ಇಟ್ಟುಕೊಂಡು ಅದರ ಬಗ್ಗೆ ಬರೆಯಬೇಕಾಗುತ್ತದೆ, they have to surrender that oil ಆದರೆ ಆ ಕೆಲಸವನ್ನು ಅನೇಕ ಕಡೆ ಮಾಡಿಲ್ಲ ಇದರಿಂದ ದುರಸ್ಥಿ ಮಾಡಿರತಕ್ಕವರೂ ಕೂಡ ಇದರ ಬಗ್ಗೆ ನೀವು ಎಣ್ಣೆಯನ್ನು ನಾನು ಕೊಡು ಎಂದರೆ ಕೊಡಲು ಆಗುವುದಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಾರೆ ಈ ಟ್ರಾನ್ಸ್‌ಫಾರ್ಮರ್ ಎಣ್ಣೆ ಬಹಳ ದುಬಾರಿಯಾಗಿರುವುದರಿಂದ ಈ ಕಾಳಸಂತೆ ವ್ಯಾಪ್ರ ನಡೆಯುತ್ತಿದೆ ಈ ಕಾರಣಕ್ಕಾಗಿ ನಾವು ರೈತರ ಕ್ಷಮೆಯನ್ನು ಕೇಳುತ್ತಿದ್ದೇವೆ ಈ ಸರ್ಕಾರ ಇದರ ಬಗ್ಗೆ ತೀವ್ರವಾದಂಥ ಗಮನ ಕೊಟ್ಟಿದೆ ಈಗಾಗಲೇ ಎರಡುಮೂರು ಸಭೆಗಳೂ ಸಹ ಆಗಿವೆ ಮಾನ್ಯ ಇಂಧನ ಸಚಿವರ ಈ ಒಂದು ತಿಂಗಳೊಳಗಾಗಿ ಈ ಎಲ್ಲಾ ಏನು ಕಷ್ಟ ಇದೆ ಇದನ್ನು ಪರಿಹಾರಿಸತಕ್ಕದ್ದು ಮತ್ತು ದುರಸ್ಥಿ ಮಾಡಿ ಉತ್ತಮ ಗುಣಮಟ್ಟದ ಟ್ರಾನ್ಸ್‌ಫಾರ್ಮರ್‌ಗಳನ್ನೂ ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ ನಿಮಗೆ ಈಗಾಗಲೇ ಗೊತ್ತಿರುವಂತೆ ಕೆಲವು ಕಾರ್ಯಕ್ರಮಗಳೂ ಕೂಡ ಇದೆ ಖಾಸಗಿಯಾಗಿ ಯಾರಾದರೂ ಟ್ರಾನ್ಸ್‌ಫಾರ್ಮರ್‌ಗಳನ್ನು ತೆಗೆದುಕೊಳ್ಳುವುದಾಗಿದ್ದಾರೆ ಅದನ್ನು 14 ಸಾವಿರ ರೂಪಾಯಿಗಳಿಂದ ಹಿಡಿದು 35 ಸಾವಿರ ರೂಪಾಯಿಗಳವರೆಗೆ ಇರತಕ್ಕ ಬೆಲೆಗೆ ಆ ಕೆ ವಿ ಮೇಲೆ ಆಧಾರಿತವಾಗಿ ತೆಗೆದುಕೊಳ್ಳತಕ್ಕದ್ದು ಸಹ ಇದೆ ಇದರಲ್ಲಿ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಡುತ್ತೇವೆ ಅನಂತರ ರೈತರ ಪಂಪುಸೆಟ್ಟುಗಳಿಗೆ ಆದ್ಯತೆಯನ್ನು ಕೊಡುತ್ತೇವೆ ತಾವು ಹೇಳಿದ ಮಾತು ಅಕ್ಷರಶಃ ಸತ್ಯ ಇದರ ಬಗ್ಗೆ ಸರ್ಕಾರ ಖಂಡಿತವಾಗಿ ಕ್ರಮ ಕೈಗೊಳ್ಳುತ್ತದೆ

ವಿಷಯ (ಫ) ಕಮಲಾಪುರ ಮೀಸಲು ಕ್ಷೇತ್ರದಲ್ಲಿ ಆಶ್ರಯ ಹಾಗೂ ಅಂಬೇಡ್ಕರ್ ಮನೆಗಳ ಹಂಚಿಕೆ

ಶ್ರೀ ರೇವು ನಾಯಕ ಬೆಳಮಗಿ (ಕಮಲಾಪುರ) ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ನನ್ನ ಕಲಾಲಾಪುರ ಮೀಸಲು ಕ್ಷೇತ್ರ ಮೀಸಲು ಕ್ಷೇತ್ರ ಅಲ್ಲಿ ಆಶ್ರಯ ಮತ್ತು ಅಂಬೇಡ್ಕರ್ ಮತ್ತು ನವ ನವ ನಿರ್ಮಾಣ ಎಂದು ಫಲಾನುಭವಿಗಳಿಗೆ ಆಶ್ರಯ ಕಮಿಟಿ ಸದಸ್ಯರು ಮತ್ತು ನಾವು ಕೂಡಿ ಗ್ರಾಮ ಸಭೆಯ ಮೂಲಕ ಆಯ್ಕೆ ಮಾಡಿದ್ದೆವು ಆಯ್ಕೆ ಮಾಡಿದ ಅದರ ಪ್ರೊಸೀಡಿಂಗ್ಸ್ ಮಾಡಿ ಸರ್ಕಾರಕ್ಕೆ ಕಳುಹಿಸಬೇಕೆಂದು ಮನವಿ ಮಾಡಿದೆವು ಆದರೂ ಅಧಿಕಾರಿಗಳು ಅದನ್ನು ಸರ್ಕಾರಕ್ಕೆ ಕಳುಹಿಸಿದ್ದಾರೋ ಇಲ್ಲವೋ ಗೊತ್ತಿಲ್ಲ ಅಲ್ಲಿ ಮನೆಗಳು ಆಗಿಲ್ಲವೆಂದು ಹೇಳುತ್ತಿದ್ದಾರೆ ಇದು ಬಡವರ ಮನೆ ಹೆಚ್ಚುವರಿ ಮನೆಯನ್ನು ಕೇಳುತ್ತಿಲ್ಲ ಈ ಮೀಸಲು ಕ್ಷೇತ್ರಕ್ಕೆ ಹೆಚ್ಚಿನ ಮನೆಯನ್ನು ಕೊಡಬೇಕಾದುದು ಸರ್ಕಾರದ ಅದ್ಯ ಕರ್ತವ್ಯವೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ ಅದರಲ್ಲಿ ನನ್ನ ಕ್ಷೇತ್ರದಲ್ಲಿ 206 ಆಶ್ರಯ ಮನೆ, 56 ಅಂಬೇಡ್ಕರ್ ಮನೆ, 103 ನವ ನಿರ್ಮಾಣ ಮನೆಗಳು ಇವೆಲ್ಲದರ ಬಗ್ಗೆ ನಾವು ಪ್ರೊಸೀಡಿಂಗ್ ಮಾಡಿ ಆಶ್ರಯ ಕಮಿಟಿ ಸದಸ್ಯರು ನಾವು ಎಲ್ಲರೂ ಕೂಡಿ ರೆಸಲ್ಯೂಷನ್ ಮಾಡಿ ಸರ್ಕಾರಕ್ಕೆ ಕಳಿಸಬೇಕೆಂದು ಕೊಟ್ಟಿದ್ದೆವು, ಚುನಾವಣೆ ಮೂವ್‌ಮೆಂಟ್‌ನಲ್ಲಿ ಅದೇ ಗುಲ್ಬರ್ಗಾ ತಾಲ್ಲುಕಿನದ್ದು ಆಗಿದೆ, ಆದರೆ ಆಳಂದ ತಾಲ್ಲೂಕಿನದ್ದು ಆಗಿಲ್ಲ ನನಗೆ ಆಳಂದ ತಾಲ್ಲೂಕಿನ ಅರ್ಧ ಭಾಗ ಗುಲ್ಬರ್ಗಾ ತಾಲ್ಲೂಕಿನ ಅರ್ಧ ಭಾಗ ಬರುತ್ತದೆ ಗುಲ್ಬರ್ಗಾ ತಾಲ್ಲೂಕಿನವರು ಕಳಿಸಿದ್ದಾರೆ, ಅದು ಅಪ್ರೂವ್ ಆಗಿ ಕೆಲಸ ಪ್ರಾರಂಭವಾಗಿದೆ

ಆದರೆ ನನ್ನ ಆಳಂದ ತಾಲ್ಲೂಕಿನ ನನ್ನ ಕ್ಷೇತ್ರದ್ದು ಮಾತ್ರ ಕಳಿಸಿಲ್ಲ ಆದ್ದರಿಂದ ಈ ಬಡವರಿಗೆ ಮನೆಗಳನ್ನು ನೀವು ಮಂಜೂರು ಮಾಡಿ ಮುಂದುವರೆಸಬೇಕೆಂದು ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ ಇದರ ಜತೆಯಲ್ಲಿ ಸರ್ಕಾರ ಮೂವತ್ತನೇ ತಾರೀಖಿನೊಳಗೆ ರಿಜಿಸ್ಟ್ರೇಶನ್ ಮಾಡಬೇಕೆಂದು ಆದೇಶ ಮಾಡಿದ್ದಾರೆ ದಯವಿಟ್ಟು ಈ ಕಾಲಮಿತಿಯನ್ನು ಮಂದೂಡಬೇಕು ಕನಿಷ್ಟ ಪಕ್ಷ ಮುಂದಿನ ತಿಂಗಳು ಹತ್ತನೇ ತಾರೀಖಿನವರೆಗಾದರೂ ಕಾಲಾವಕಾಶವನ್ನು ಕೊಟ್ಟರೆ ಎಲ್ಲಾ ಫಲಾನುಭವಿಗಳಿಗೆ ರಿಜಿಸ್ಟ್ರೇಶನ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಸರ್ಕಾರವನ್ನು ಈ ಸಂದರ್ಭದಲ್ಲಿ ಮನ ಮಾಡಿಕೊಳ್ಳುತ್ತೇನೆ ಇದರ ಜತೆಗೆ ಬಡವರು ಎಲ್ಲೆಲ್ಲಿ ಸ್ವತಃ ಮನೆಗಳನ್ನು ಕಟ್ಟಿಸಿಕೊಳ್ಳುತ್ತಿದ್ದಾರೆ ಅವರು ಚೆಕ್ ಸಲುವಾಗಿ ಓಡಾಡುತ್ತಿದ್ದಾರೆ ಅದರ ಬಗ್ಗೆ ನೀವು ಡೈರೆಕ್ಷನ್ ಕೊಟ್ಟು ಇಂತಹ ಬಡ ಫಲಾನುಭವಿಗಳಿಗೆ ಚೆಕ್ ಮುಖಾಂತರ ಹಣ ಪಡೆಯುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾಣು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ ಇದರ ಜತೆಯಲ್ಲಿ ಈ ಗಂಗಾಕಲ್ಯಾನ ಬಾವಿಗಳ ಬಗ್ಗೆ ಹೇಳಬೇಕು ಇದನ್ನು ಎಸ್‌ಸಿ ಎಸ್‌ಟಿ ಕಾರ್ಪೊರೇಷನ್‌ನಿಂದ ಸರ್ಕಾರದವರು ಕಟ್ಟಿಸಿಕೊಟ್ಟಿದ್ದಾರೆ ಅವರೆಲ್ಲರೂ ಬಡವರು ಆಗಿರುವುದರಿಂದ ಅರವತ್ತೈದು ಸಾವಿರ ರೂ ಏನು ಲಿಮಿಟ್ ಇದೆ ಅದನ್ನು ಒಂದು ಲಕ್ಷಕ್ಕಾದರೂ ಏರಿಸಬೇಕು ಅದಕ್ಕೆ ಕರೆಂಟ್ ತೆಗೆದುಕೊಳ್ಳಬೇಕೆಂದರೆ, ಪೈಪ್‌ಲೈನ್, ಮೋಟಾರ್ ಕೂಡಿಸಬೇಕಾದರೆ ಹೆಚ್ಚಿನ ಹಣ ತುಂಬಬೇಕೆಂದು ಹೇಳಿದಾಗ, ಅದು ಅವರ ಕೈಯಲ್ಲಿ ಸಾಧ್ಯವಾಗುವುದಿಲ್ಲ ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ ಆ ಫಲಾನುಭವಿಗಳಿಗೆ, ದಲಿತ ಜನರಿಗೆ ನೀವು ಹೆಚ್ಚಿನ ಹಣಕಾಸು ಕೊಟ್ಟು ಅದನ್ನು ನೀವೇ ಮಾಡಿಸಿಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಸಂಸದೀಯ ವ್ಯವಹಾರಗಳು ಮತ್ತು ಕಂದಾಯ ಮಂತ್ರಿ) ಮಾನ್ಯ ಶಾಸಕರ ಎಲ್ಲಾ ಸಲಹೆಗಳನ್ನು ನಾನು ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ತಿಳಿಸಿ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ

ವಿಷಯ (ಬ) ಬನ್ನೂರು ಕ್ಷೇತ್ರದಲ್ಲಿರುವ ರಸ್ತೆಗಳ ದುರಸ್ತಿ

†ಶ್ರೀಮತಿ ಜೆ ಸುನೀತಾ ವೀರಪ್ಪಗೌಡ (ಬನ್ನೂರು) ಮಾನ್ಯ ಅಧ್ಯಕ್ಷರೇ, ಟಿ ನರಸೀಪುರ ತಾಲ್ಲೂಕಿನ ಬನ್ನೂರು ವಿಧಾನಸಭಾ ಕ್ಷೇತ್ರವು ಅನೇಕ ಯಾತ್ರಾಸ್ಥಳಗಳನ್ನು ಮತ್ತು ಪ್ರವಾಸಿ ತಾಣಗಳನ್ನು ಹೊಂದಿದ್ದು ಪ್ರತಿನಿತ್ಯ ಸಾವಿರಾರು ಪ್ರವಾಸಿಗರು ಈ ಕ್ಷೇತ್ರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸುತ್ತಾರೆ ಪವಿತ್ರ ಪ್ರವಾಸಿ ಕ್ಷೇತ್ರವಾದ ಸೋಮನಾಥಪುರದ ಶ್ರೀ ಚೆನ್ನಕೇಶವ ದೇವಸ್ಥಾನ, ಜಗತ್ಪ್ರಸಿದ್ಧವಾದ ಪಮಚಲಿಂಗ ಯಾತ್ರೆಯ ತಾಣವಾದ ತಲಕಾಡು, ಮಲ್ಲಿಕಾರ್ಜುನ ದೇವಸ್ಥಾನ ಹೊಂದಿರುವ ಮುಡುಕುತೊರೆ ಇತ್ಯಾದಿ ಪವಿತ್ರ ಸ್ಥಳಗಳು ಬನ್ನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತವೆ ಇವುಗಳಿಂದಾಗಿ ಈ ಕ್ಷೇತ್ರವು ದಕ್ಷಿಣಕಾಶಿಯೆಂದು ಕರೆಯಲ್ಪಟ್ಟು ಇತಿಹಾಸ ಪ್ರಸಿದ್ಧವಾಗಿರುತ್ತದೆ ಈ ಕ್ಷೇತ್ರದಲ್ಲಿ ಹರಿಯುತ್ತಿರುವ ಕಾವೇರಿ, ಕಪಿಲಾ ಮತ್ತು ಸ್ಫಟಿಕಾ ಸರೋವರಗಳ ಸಮ್ಮಿಳನದಿಂದಾಗಿ ಇದು ಒಂದು ಪವಿತ್ರವಾದಂಥ ಪ್ರದೇಶವಾಗಿದೆ ಮತ್ತು ಬನ್ನೂರು ವಿಧಾನಸಭಾ ಕ್ಷೇತ್ರಕ್ಕೆ ಹೊಂದಿಕೊಂಡಂತೆ ಇರುವ ತಿರುಮಕೂಡಲು ನರಸೀಪುರ ಪ್ರದೇಶದಲ್ಲಿ ಉತ್ತರ ಭಾರತದಲ್ಲಿ ನೆರವೇರುವ ನಾಲ್ಕು ಕುಂಭಮೇಳಗಳಂತೆಯೇ ಪ್ರತಿ ಮೂರು ವರ್ಷಕ್ಕೊಮ್ಮೆ ಕುಂಭಮೇಳ ಎಂಬ ಪವಿತ್ರ ಕಾರ್ಯಕ್ರಮ ಇಲ್ಲಿ ನೆರವೇರುತ್ತದೆ ಈ ಕಾರ್ಯಕ್ರಮದಲ್ಲಿ ಭಾಗಬಹಿಸಲು ಪ್ರಸಿದ್ಧ ಜಗದ್ಗುರುಗಳು ಹಾಗೂ ಅನೇಕ ಸನ್ಯಾಸಿಗಳು, ಸಾದುಸಂತರು ಹಾಗೂ ದೇಶದಾದ್ಯಂತ ಅನೇಕ ಗಣ್ಯ ವ್ಯಕ್ತಿಗಳು ಮತ್ತು ಇನ್ನಿತರ ಜನಸಾಮಾನ್ಯರು ಈ ಪ್ರದೇಶಕ್ಕೇ ಭೇಟಿನೀಡಿ ಈ ನದಿಗಳ ಸಂಗಮದಲ್ಲಿ ಪುಣ್ಯಸ್ನಾನ ಮಾಡಿ ಪಾವನರಾಗುವುದು ವಾಡಿಕೆಯಾಗಿರುತ್ತದೆ ಈ ಸಂದರ್ಭದಲ್ಲಿ ಬನ್ನೂರು ವಿಧಾನಸಭಾ ಕ್ಷೇತ್ರದ ರಸ್ತೆಗಳ ಮುಖಾಂತರ ಅನೇಕ ವಾಹನಗಳು ಸಂಚರಿಸುತ್ತವೆ ಈ ಮೇಲೆ ತಿಳಿಸಲಾದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಪ್ರದೇಶವನ್ನು ಹಾಯ್ದುಹೋಗುವ ಎಲ್ಲಾ ರಸ್ತೆಗಳನ್ನು ಸುಸ್ಥಿತಿಯಲ್ಲಿಡುವುದು ಅಗತ್ಯವಾಗಿರುತ್ತದೆ ಗಣ್ಯ ವ್ಯಕ್ತಿಗಳು ಮತ್ತು ಪ್ರವಾಸಿಗರರ ಸಂಚಾರಕ್ಕೆ ಸುಗಮವಾಗುವಂತೆ ಅವುಗಳನ್ನು ಆಗಿಂದಾಗ್ಗೆ ಅಭಿವೃದ್ಧಿಪಡಿಸಿ ನಿರ್ವಹಿಸುವ ಮೂಲಕ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ ಆದರೆ ಪ್ರತಿವರ್ಷವೂ ಇಪ್ಪತ್ತು–ಮೂವತ್ತು ಲಕ್ಷ ರೂಪಾಯಿಗಳು ಎಂದು ಖರ್ಚುಮಾಡಿ ಯಾವ ರಸ್ತೆಯೂ ಕೂಡ ಪಕ್ಕಾ ರಸ್ತೆಯಾಗಿಲ್ಲ, ಸುಮಾರು ಹದಿನೈದು–ಇಪ್ಪತ್ತು ವರ್ಷಗಳಿಂದಲೂ ಕೂಡ ನಾವು ಇದೇ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ ಈ ರಸ್ತೆಗಳು ಯಾವಾಗಲೂ ಕೂಡ ಸರಿಹೋಗಲೇ ಇಲ್ಲ ಅಲ್ಲಿ ಬಂದವರೆಲ್ಲರೂ ಕುಡ ಇಲ್ಲಿಯ ವಿಧಾನಸಭಾ ಸದಸ್ಯರು ಯಾರು ಎಂದು ಕೇಳುವಂತಹಗ ಪರಿಸ್ಥಿತಿಯನ್ನು ನಾವು ಇದುವರೆಗೂ ನೋಡಿದ್ದೇವೆ ದಯಮಡಿ ಅಲ್ಲಿ ಪಕ್ಕಾ ರಸ್ತೆಯನ್ನು ತಾವು ಮಾಡಿಸಿಕೊಡಬೇಕು ಮತ್ತು ಸರ್ಕಾರಕ್ಕೆ ನಾಣು ಇನ್ನೊಂದು ಮನವಿಯನ್ನು ಸಲ್ಲಿಸುತ್ತಿದ್ದೇನೆ ಈಗ ನಮ್ಮಲ್ಲಿ ವಿದ್ಯುತ್ ಕೊರತೆ ಇರುವಾಗ ನನ್ನ ಕ್ಷೇತ್ರದಲ್ಲಿ ಆಃ ಸಿ ಗಳು ದಿನನಿತ್ಯ ಸುಟ್ಟುಹೋಗುವಂತಹ ಪರಿಸ್ಥಿತಿ ಇದೆ ಅಧಿಕಾರಿಗಳನ್ನು ಕೇಳಿದರೆ ಅವರು ಅನಧಿಕೃತವಾಗಿ ಏನು ಐ ಪಿ ಸೆಟ್ಟುಗಳನ್ನು ಹಾಕಿಕೊಂಡಿದ್ದಾರೆ, ಅದಕ್ಕೋಸ್ಕರ ಈ ತರಹ ಆಗುತ್ತಿದೆ, ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಅವರು ಹೇಳುತ್ತಾರೆ ದಯವಿಟ್ಟು ಇದನ್ನು ಸರಿಮಾಡಬೇಕು ಮತ್ತು ನನ್ನ ಕ್ಷೇತ್ರದಲ್ಲಿ ಇನ್ನೊಂದು ವಿಚಾರ ಏನೆಂದರೆ, ಕಳೆದವರ್ಷ ಸರಿಯಾದ ಫಲಾನುಭವಿಗಳನ್ನು ಗುರುತಿಸಲಾಗದ ಕಾರಣಕ್ಕೆ ಐದುನೂರು ಆಶ್ರಯ ಮನೆಗಳದ್ದು ಲ್ಯಾಪ್ಸ್ ಆಗಿ ಸರ್ಕಾರದ ಹಣ ವಾಪಸ್ಸು ಬಂದಿದೆ ಆದ್ದರಿಂದ ಈ ವರ್ಷ ಫಲಾನುಭವಿಗಳಿಗೆ ಅನುಕೂಲವಾಗುವಂತೆ ಐದುನೂರು ಮನೆಗಳನ್ನು ಹೆಚ್ಚುವರಿಯಾಗಿ ನನ್ನ ಕ್ಷೇತ್ರಕ್ಕೆ ಕೊಡಬೇಕೆಂದು ನಾನು ಸರ್ಕಾರದರಲ್ಲಿ ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಅಧ್ಯಕ್ಷರೇ, ಈ ಕ್ಷೇತ್ರವು ಬಹಳ ಪವಿತ್ರವಾಗಿರುವಂತಹ ದೇವಸ್ಥಾನಗಳು ಮತ್ತು ಪುಣ್ಯ ಕ್ಷೇತ್ರಗಳನ್ನು ಹೊಂದಿದೆ ಎನ್ನುವುದರ ಬಗ್ಗೆ ನಾನು ಒಪ್ಪಿಕೊಳ್ಳುತ್ತೇನೆ ಮಾನ್ಯ ಶಾಸಕಿಯವರು ಈ ರಸ್ತೆಗಳನ್ನು ಸರಿಪಡಿಸಬೇಕೆಂದು ಹೇಳಿದ್ದಾರೆ ಖಂಡಿತವಾಗಿಯೂ ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಇಲ್ಲಿಯವರೆಗೆ ಕೂಡ Indian Roads are as bad as their Politicians' ಅಂತ ಒಂದು ಮಾತು ಇತ್ತು ಇದು ಭಾರತದ ರಾಜಕಾರಣಿಗಳಷ್ಟೇ ಭಾರತ ದೇಶದ ರಸ್ತೆಗಳು ಕೆಟ್ಟಿವೆ ಎಂದು ಹಿಂದೆಲ್ಲಾ ಹೇಳುತ್ತಿದ್ದರು ಆದರೆ ಈಗ ಆ ರೀತಿ ಆಗುತ್ತಿಲ್ಲ We are now better Really Indian Politicians are much better than the other politicians of the rest ಈ ಕಾರಣಕ್ಕಾಗಿ ತಾವು ಹೇಳಿದ ವಿಚಾರದ ಬಗ್ಗೆ ಖಂಡಿತವಾಗಿಯೂ ಗಮನಕೊಟ್ಟು ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) ಮಾನ್ಯ ಅಧ್ಯಕ್ಷರೇ, ಈ ಎರಡೂ ಸೇತುವೆಗಳು ಬಹಳ ಪ್ರಮುಖವಾದಂಥ ಸೇತುವೆಗಳು ಒಂದು ಕಾವೇರಿ ಮತ್ತು ಇನ್ನೊಂದು ಕಪಿಲಾ ಸೇತುವೆ ಇವುಗಳು ಯಾವುದೋ ಬ್ರಿಟೀಷರ ಕಾಲದ್ದಾಗಿದ್ದು ಇವುಗಳ ರಿಪೇರಿ ಆಗಬೇಕೆಂದು ಒಂದೇಸಮನೆ ನಿರಂತರವಾ ಒತ್ತಾಯ ಇದೆ ತಾವು ಒಂದೇ ಮಾತಿನಲ್ಲಿ ಇದನ್ನು ಹೇಳಿಬಿಟ್ಟರೆ ಆಗುವುದಿಲ್ಲ, ಸ್ಪಷ್ಟವಾಗಿ ನಿರ್ಧಾರವಾಗಿ ಹೇಳಿ ಈ ಎರಡೂ ಸೇತುವೆಗಳು ಇವತ್ತು ಮುರಿದುಬೀಳುವ ಹಾಗಿವೆ ನಾನು ಮಾನ್ಯ ಶಾಸಕಿಯವರ ಬೇಡಿಕೆಗೆ ಬೆಂಬಲ ಸೂಚಿಸುತ್ತೇನೆ ಇವುಗಳು ನೂರಾರು ವರ್ಷಗಳ ಹಳೆಯಕಾಲದ ಸೇತುವೆಗಳು ಇವುಗಳ ದುರಸ್ಥಿ ಕಾರ್ಯ ಮಾಡಬೇಕೆಂದು ಸರ್ಕಾರಕ್ಕೆ ಅನೇಕ ಮನವಿಗಳು ಬಂದಿವೆ ಈ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ಎಂಬುದನ್ನು ದಯವಿಟ್ಟು ತಿಳಿಸಬೇಕು

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೇ, ಈ ಸೇತುವೆಗಳ ನಿರ್ಮಾಣಕ್ಕೇ ಒಂದು ಪ್ರತ್ಯೇಕವಾದಂಥ ನಿಗಮ ಇದೆ ಎಂಬುದು ತಮಗೆ ಗೊತ್ತಿದೆ ಮಾನ್ಯ ಶಾಸಕಿಯವರು ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಮತ್ತು ಮಾನ್ಯ ಶಾಸಕರೂ ಕೂಡ ಪ್ರಸ್ತಾಪ ಮಾಡಿದ್ದಾರೆ ಅದನ್ನು ಈ ವರ್ಷದಲ್ಲಿ ಸೇರಿಸಿಕೊಳ್ಳತಕ್ಕಂಥಾದ್ದಕ್ಕೆ ತಾವು ಮನವಿಯನ್ನು ಕೊಟ್ಟಾಗ ನಾನು ಲೋಕೋಪಯೋಗಿ ಮಂತ್ರಿಗಳ ಜತೆಗೆ ಮಾತನಾಡಿ ಅದನ್ನು ಸೇರಿಸುವಂತಹ ಎಲ್ಲಾ ಪ್ರಯತ್ನವನ್ನೂ ಮಾಡುತ್ತೇನೆ

ವಿಷಯ (ಭ) ಪಶ್ಚಿಮ ಘಟ್ಟದಲ್ಲಿ ಗಾಂಜಾ ಬೆಳೆಯುತ್ತಿರುವ ಬಗ್ಗೆ

ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು) ಮಾನ್ಯ ಅಧ್ಯಕ್ಷರೇ, ಪುತ್ತೂರು ಕ್ಷೇತ್ರ ಪಶ್ಚಿಮ ಘಟ್ಟದ ಬುಡದಿಂದ ಪ್ರಾರಂಭವಾಗುತ್ತದೆ ಬಹಳಷ್ಟು ಔಷಧೀಯ ಗುಣಗಳಿರುವಂತಹ ಮರಗಳನ್ನು ಹೊಂದಿದ ಆ ಪಶ್ಚಿಮ ಘಟ್ಟದ ಒಳಗಡೆ ಅಂದರೆ ಸಾಧಾರಣ ಶಿರಾಡಿ, ಗುಂಡ್ಯ ಹಾಗೂ ಬೆಳ್ತಂಗಡಿ ತಾಲ್ಲೂಕಿನ ಶಿಶಿಲ, ಶಿವಾಜೆ ಆ ಘಾಟಿ ಬದಿಯಲ್ಲಿ ಹೊರಗಡೆಯೆಲ್ಲಾ ಮರಗಳನ್ನು ಕಾಣುತ್ತಿದ್ದೇವೆ ಆದರೆ ಒಳಗಡೆಯೆಲ್ಲಾ ಮರಗಳನ್ನು ಕಡಿದು ಕಳೆದ ಮೂರು-ನಾಲ್ಕು ವರ್ಷಗಳಿಂದ ಪರರಾಜ್ಯದ ಜನರು ಬಂದು ಅಲ್ಲಿ ಗಾಂಜಾವನ್ನು ಬೆಳೆಸುತ್ತಿದ್ದಾರೆ ಅದನ್ನು ತಡೆಯುವಂತಹ ಕೆಲಸವನ್ನು ಈ ತನಕ ಯಾವುದೇ ಸರ್ಕಾರ ಮಾಡಿಲ್ಲ ಎನ್ನಿಸುತ್ತದೆ ಇನ್ನಾದರೂ ಇದನ್ನು ಮಾಡಬೇಕೆಂದು ನಾಣು ಕೇಳಿಕೊಳ್ಳುತ್ತೇನೆ ಇನ್ನೊಂದು ಸುಳ್ಯ ಕ್ಷೇತ್ರದಲ್ಲಿ ಪ್ರಸಿದ್ಧ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಇದೆ ಅಲ್ಲಿಂದ ನನ್ನ ಪುತ್ತೂರು ಕ್ಷೇತ್ರದ ಮುಖಾಂತರ ಬೆಳ್ತಂಗಡಿ ಕ್ಷೇತ್ರದಲ್ಲಿ ಇರುವುದು

ಶ್ರೀ ಧರ್ಮಸ್ಥಳ ಕ್ಷೇತ್ರ ಇವುಗಳ ಮಧ್ಯದಲ್ಲಿ ಒಂದು ಸೇತುವೆ ಆಗಬೇಕಾಗಿದೆ ಆ ರಸ್ತೆ ಏನು ಚೆನ್ನಾಗಿಲ್ಲ ಆದ್ದರಿಂದ ರಸ್ತೆಯ ವ್ಯವಸ್ಥೆ ಸರಿಯಾಗಬೇಕಾಗಿದೆ ಇನ್ನೊಂದು ವಿಷಯ ಎಂದರೆ, ಈ ತಿಂಗಳ ಪ್ರಾರಂಭದಲ್ಲಿ ಆನೆಕಾಲು ರೋಗಕ್ಕೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರೆಗಳನ್ನು ಹಂಚಿದರು ನಮ್ಮಲ್ಲಿ ಕೊಣಾಲು ಶಾಲೆಯ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದ ಹರೀಶ್ ಎಂಬ ಪರಿಶಿಷ್ಟ ಜಾತಿಗೆ ಸೇರಿದ ಹುಡುಗ ಆ ಮಾತ್ರೆಯನ್ನು ತಿಂದು ಅಸೌಖ್ಯಗೊಂಡು ತೀರಿಕೊಂಡಿದ್ದಾನೆ ಆ ಮನೆಯವರಿಗೆ ಸಾಂತ್ವನದ ಜತೆಗೆ ಅವರಿಗೆ ಪರಿಹಾರವಾಗಿ ಒಂದು ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಒದಗಿಸಿಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ

ವಿಷಯ (ಮ) ಸಕಲೇಶಪುರ ಕ್ಷೇತ್ರದಲ್ಲಿ ಗುಂಡ್ಯ ಮತ್ತು ಬಿಸ್ಲೆ ಅರಣ್ಯ ಸಿಬ್ಬಂದಿಗೆ ವಾಹನ ಇತ್ಯಾದಿ ಸೌಲಭ್ಯ ಒದಗಿಸುವ ಬಗ್ಗೆ

ಶ್ರೀ ಹೆಚ್ ಎಂ ವಿಶ್ವನಾಥ್ (ಸಕಲೇಶಪುರ) ಮಾನ್ಯ ಅಧ್ಯಕ್ಷರೇ, ಇದಕ್ಕೇ ಪೂರಕವಾಗಿ ಇನ್ನೊಂದು ಪ್ರಶ್ನೆ. ಮಾನ್ಯ ಸದಸ್ಯೆಯವರು ಏನು ಪ್ರಸ್ತಾಪ ಮಾಡಿದರು, ಅದರ ಮಗ್ಗುಲಲ್ಲಿ ನನ್ನ ಸಕಲೇಶಪುರ ಕ್ಷೇತ್ರ ಇದೆ ಬಿಸ್ಲೆ ಅರಣ್ಯ ಮತ್ತು ಆ ಭಾಗದಲ್ಲಿ ಬರತಕ್ಕಂಥ ಏನು ಗುಂಡ್ಯ ಅರಣ್ಯ ಬರುತ್ತದೆ, ಅದರ ಒಳಗಡೆ ಭಾರಿ ದೊಡ್ಡ ಪ್ರಮಾಣದಲ್ಲಿ ಗಾಂಜಾವನ್ನು ಬೆಳೆಯುತ್ತಿದ್ದಾರೆ ಈ ಗಾಂಜಾ ಬೆಳೆಸುವುದು ಮತ್ತು ಅಲ್ಲಿ ಆಗತಕ್ಕಂಥ ಅನೈತಿಕೆ ಚಟುವಟಿಕೆಗಳನ್ನು ನಿಲ್ಲಿಸುವುದಕ್ಕೆ ನಮ್ಮ ಇಲಾಖೆ ಸಮರ್ಥವಾಗಿಲ್ಲ ಅದರ ಭಾಗದಲ್ಲಿ ಬರತಕ್ಕಂಥ ಎಸ್ಟೂರು ರೇಂಜ್ ಅಂತ ಏನೊಂದು ಅರಣ್ಯ ಇಲಾಖೆಯ ರೇಂಜ್ ಇದೆ, ಅದಕ್ಕೆ ಅಗತ್ಯವಾದ ಸಿಬ್ಬಂದಿ ಇಲ್ಲ ಜತೆಗೆ ಅಲ್ಲಿ ಒಂದು ಜೀಪು ಕೂಡ ಇಲ್ಲ ಬಿಸ್ಲೆ ಮತ್ತು ಆ ಭಾಗದಲ್ಲಿ ಬರತಕ್ಕಂಥ ದೊಡ್ಡ ಅರಣ್ಯ ಇಡೀ ನಮ್ಮ ದೇಶದಲ್ಲೇ ಅತ್ಯುನ್ನತವಾದಂಥ ಅರಣ್ಯವಾಗಿದೆ ಅದನ್ನು ಸಂರಕ್ಷಣೆ ಮಾಡುವುದಕ್ಕೆ ಒಂದು ಇಲಾಖೆಗೆ ಜೀಪು ಇಲ್ಲ, ಮತ್ತು ಬೇಕಾದಂಥ ಸಿಬ್ಬಂದಿಯೂ ಇಲ್ಲವೆನ್ನುವ ಕಾರಣಕ್ಕೆ ಅಲ್ಲಿ ಗಾಂಜಾ ಬೆಳೆಯುವುದನ್ನು ತಪ್ಪಿಸಲು ಮತ್ತು ಅಲ್ಲಿರತಕ್ಕಂಥ ಅತ್ಯುನ್ನತವಾದಂಥ ಬೆತ್ತ ಮತ್ತು ಶ್ರೀಗಂಧ, ಶ್ರೀಹೊನ್ನೆ ಮರಗಳನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ ಆದ್ದರಿಂದ ಸರ್ಕಾರ ಕೂಡಲೇ ಅಲ್ಲಿಗೆ ಬೇಕಾದಂಥ ಸಿಬ್ಬಂದಿ ಮತ್ತು ಅಗತ್ಯವಾದಂಥ ವಾಹನ ಸೌಕರ್ಯಗಳನ್ನು ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಹಾಗು ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರುಗಳಿಬ್ಬರೂ ಬಹಳ ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಮಾದಕ ವಸ್ತುಗಳ ನಿಬಂಧನೆಗಳಿಗೆ ಸಂಬಂಧಪಟ್ಟಿರತಕ್ಕಂಥ Narcotics Prevention Avt ಏನಿದೆ, ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿ ಕೊರತೆ ಬಹಳ ಇದೆ ಗಾಂಜಾ ಬೆಳೆಯತಕ್ಕ ಪ್ರದೇಶಗಳನ್ನು ಗುರುತಿಸುವುದೂ ಕೂಡ ಬಹಳ ಕಷ್ಟ ಆಗುತ್ತಿದೆ ಆದರೂ ಕೂಡ ಆ ದಟ್ಟ ಅರಣ್ಯದ ಒಳಗಡೆಗೆ ಬೆಳೆಯತಕ್ಕಂಥ ಮಾದಕ ವಸ್ತುಗಳು, ಗಾಂಜಾ ಮೊದಲಾದುದನ್ನು ನಿಷೇಧಿಸುವುದಕ್ಕೆ ಕ್ರಮ ಕೈಗೊಳ್ಳಬೇಕಾಗಿದೆ ಅದಕ್ಕೆ ತಾವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ ಸರ್ಕಾರ ಈ ಬಗ್ಗೆ ಗಮನವನ್ನು ಕೊಡುತ್ತದೆ ಈಗ ಭಾರತ ದೇಶ ಸುದೈವವಶಾತ್ it is only a peddler state ಎಂದು ಕರೆಯುತ್ತಾರೆ ಅಫ್‌ಘಾನಿಸ್ತಾನ ಮೊದಲಾದಂಥ ಅದರಲ್ಲಿ ಬರ್ಮಾ ಕಡೆಯಿಂದ ಇಂತಹ ಮಾದಕ ವಸ್ತುಗಳು ಬಹಳ ಬರುತ್ತವೆ ಈ ಮಾರ್ಗದಿಂದ ಬೇರೆ ಕಡೆಗೆ ಹೋಗುತ್ತವೆ ಇದು ಇನ್ನೂ ಕನ್‌ಸ್ಯೂಮರ್ ಸ್ಟೇಟ್ ಆಗಿಲ್ಲ ಬಳಸತಕ್ಕ ಉದ್ದೇಶ ಇನ್ನೂ ಆಗಿಲ್ಲ ಆದರೆ, ಅದನ್ನು ಬೆಳೆಯತಕ್ಕಂಥ

ದೇಶ ಆಗಿದೆ ಅದನ್ನು ನಾವು ನಿಲ್ಲಿಸಬೇಕಾದಂಥ ತಮ್ಮ ಸಲಹೆ ಏನಿದೆ, ಅದಕ್ಕೆ ನಾನು ಒತ್ತುಕೊಡುತ್ತೇನೆ ತಾವು ಬೇರೆ ಬೇರೆ ವಿಷಯಗಳನ್ನೂ ಪ್ರಸ್ತಾಪ ಮಾಡಿದ್ದೀರಿ ಆಯುರ್ವೇದ ಗಿಡಮೂಲಿಕೆಗಳನ್ನು ಬೆಳೆಸುವುದಕ್ಕೆ ವ್ಯಾಪಕವಾಗಿ, ಕೇರಳದಲ್ಲಿ ಏನಿದೆಯೋ ಆ ತರಹದ ಉತ್ತೇಜನ ಕ್ರಮಗಳನ್ನು ನಮ್ಮ ಭಾರತೀಯ ವೈದ್ಯ ಪದ್ಧತಿ ಮಂಡಳಿಯವರೂ ಕೂಡ ಕ್ರಮ ಕೈಗೊಳ್ಳುತ್ತಾರೆ ಈ ಬಗ್ಗೆ ತಮ್ಮ ಸಲಹೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಸೂಕ್ತ ಪ್ರತಿಕ್ರಿಯೆಯನ್ನು ಮಾಡುತ್ತದೆ

3 ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ (ಅ) ರಾಜ್ಯಾದ್ಯಂತ ಶಾಲಾ ಕಾಲೇಜುಗಳಿಗೆ ಪ್ರವೇಶ ಕೋರಿರುವ ವಿದ್ಯಾರ್ಥಿಗಳಿಗೆ ಶಿಕ್ಷಣ ಸಂಸ್ಥೆಗಳಿಂದ ಉಂಟಾಗುತ್ತಿರುವ ತೊಂದರೆಯ ಬಗ್ಗೆ

†ಶ್ರೀ ನೆ ಲ ನರೇಂದ್ರಬಾಬು (ರಾಜಾಜಿನಗರ) ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಯಾವ ವಿಷಯದ ಬಗ್ಗೆ ನಾನು ಈ ಸದನದ ಗಮನ ಸೆಳೆಯಬಯಸುತ್ತೇನೆ ಎಂದರೆ, ಸಂವಿಧಾನ ದತ್ತವಾಗಿ ಈ ದೇಶದ ಪ್ರತಿಯೊಬ್ಬ 14 ವರ್ಷದ ಕೆಳಗಡೆ ಇರತಕ್ಕ ಮಗುವಿಗೆ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕು ಎನ್ನತಕ್ಕಂಥಾದ್ದು ಸ್ವತಂತ್ರ ಭಾರತದ ಪ್ರತಿಯೊಬ್ಬರ ಬಯಕೆ ಹಾಗೂ ಸಂವಿಧಾನ ದತ್ತವಾಗಿ ಅದನ್ನು ನಾವು ಒಪ್ಪಿಕೊಂಡಿದ್ದೇವದೆ ಅದು ಅನುಷ್ಠಾನ ಆಗಬೇಕಾಗಿದೆ ಇವತ್ತು ರಾಜ್ಯಾದ್ಯಂತ ಶಾಲಾ ಕಾಲೇಜುಗಳು ಆರಂಭವಾದ ದಿನಗಳಲ್ಲಿ ಪ್ರತಿಯೊಬ್ಬ ಪೋಷಕರಿಗೆ ಅಗತಕ್ಕಂಥ ಆ ವೇದನೆ, ಹೇಳತೀರದು ಶಾಲಾ ಕಾಲೇಜುಗಳ ಅಡ್ಮಿಷನ್ ಅದು ಎಲ್ ಕೆ ಜಿ ಇರಬಹುದು ಅಥವಾ ಒಂದನೇ ತರಗತಿ ಇರಬಹುದು, ಎಂಟನೇ ತರಗತಿ ಇರಬಹುದು ಅಥವಾ ಹತ್ತನೇ ತರಗತಿ ಪಾಸಾಸ ನಂತರ ಪ್ರಥಮ ಪಿ ಯು.ಸಿ ಗೆ ಪ್ರವೇಶ ದೊರತಕ್ಕಂಥಾದ್ದು ಇರಬಹುದು ಅಥವಾ ಪಿ ಯು ಸಿ ಪಾಸಾದ ಮೇಲೆ ವೃತ್ತಿನಿರತ ಪ್ರೊಫೆಷನಲ್ ಕೋರ್ಸ್ ಇರಬಹುದು ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನೀಡತಕ್ಕಂಥ ಸಂದರ್ಭದಗಳಲ್ಲಿ, ಬೆಂಗಳೂರು ನಗರದಲ್ಲೇ ಅಲ್ಲ ನಮಗೆ ಗೊತ್ತಿರುವಹಾಗೆ ಬಹುತೇಕ ಎಲ್ಲಾ ನಗರಗಳಲ್ಲಿ, ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಇವತ್ತು ಈ ಶೋಷಣೆಯನ್ನು, ತೊಂದರೆಯನ್ನು ಪೋಷಕರು, ವಿದ್ಯಾರ್ಥಿಗಳು ಅನುಭವಿಸುತ್ತಿದ್ದಾರೆ ಈ ಸಂದರ್ಭದಲ್ಲಿ ಪ್ರತಿಯೊಬ್ಬ ಪೋಷಕರಿಗೂ ಸಹ ಅಗತಕ್ಕ ವೇದನೆ ಅಥವಾ ನೋವನ್ನು, ಬಹುಶಃ ಎಲ್ಲಾ ಕಡೆ ಸರ್ಕಾರಗಳಲ್ಲಿ ಇದಕ್ಕೆ ಒಂದು ಕಮಿಟಿ ಇದ್ದರೂ ಸಹ ಹೇಳಿಕೊಳ್ಳುವುದಕ್ಕಾಗದೇ ಅವರ ಅಳಲನ್ನು ಹಲವಾರು ಸಂದರ್ಭದಲ್ಲಿ ನಮ್ಮ ಮುಂದೆ ತೋಡಿಕೊಂಡಿರುವುದನ್ನು ಕಳೆದ 15 ವರ್ಷಗಳಿಂದ ನಾನು ಕಂಡಿದ್ದೇನೆ ಇವತ್ತು ಸ್ವತಂತ್ರ ಭಾರತದಲ್ಲಿ ಪಂಡಿತ್ ಜನಹರ ಲಾಲ್ ನೆಹರೂರವರು ಒಂದು ಮಾತು ಹೇಳುತ್ತಾರೆ Schools and colleges are modern temples of free India " ಎಂದು ಆದರೆ, ಇವತ್ತು ಶಾಲೆ ಮತ್ತು ಕಾಲೇಜು ಕೆಲವರಿಗೆ ಒಂದು ರೀತಿಯಲ್ಲಿ ಹಣವನ್ನು ಸಂಪಾದನೆ ಮಾಡುವ ಮಾರ್ಗವಾಗಿದೆ ಬಹಳ ನೊಂದು, ನಾನೊಬ್ಬ ಯುವಕನಾಗಿ ಈ ಮಾತನ್ನು ಹೇಳುತ್ತೇನೆ ಇವತ್ತು ನನಗೆ ವಿಶೇಷವಾದ ಗೌರವ ಇದೆ ರಾಜ್ಯದಲ್ಲಿ ಬಹಳಷ್ಟು ಶಿಕ್ಷಣ ಸಂಸ್ಥೆಗಳು ಸೇವಾ ಮನೋಭಾವನೆಯಿಂದ ಕೆಲಸ ಮಾಡುತ್ತಿದೆ ಆದರೆ, ಕೆಲವು ಶಿಕ್ಷಣ ಸಂಸ್ಥೆಗಳು ಇದನ್ನೇ ಒಂದು ಮಾರ್ಗವನ್ನಾಗಿ ಇಟ್ಟುಕೊಂಡು ಪ್ರಾಥಮಿಕ ಶಿಕ್ಷಣಕ್ಕೂ ಸಹ, ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವ ದಿಕ್ಕಿನಲ್ಲಿ ಪೋಷಕರು ಮುಂದಾದಾಗ ವಿಶೇಷವಾಗಿ ಬಡವರು, ಪರಿಶಿಷ್ಟವರ್ಗದವರು, ಹಿಂದುಳಿದವರು ಆರ್ಥಿಕವಾಗಿ ಹಿಂದುಳಿದವರು ಶಿಕ್ಷಣ ಸಂಸ್ಥೆಗಳಿಗೆ ಇವತ್ತು ಹಣ ಇಲ್ಲದೇಹೋದರೆ ಪ್ರವೇಶ ಇಲ್ಲ ಎನ್ನತಕ್ಕ ರೀತಿಯ ಧೋರಣೆಯನ್ನು

ತಾಳಿರತಕ್ಕಂಧಾದ್ದು ಇವತ್ತು ಪೋಷಕರು ನೊಂದು ಹೇಳಲಾರದ ಸ್ಥಿತಿಯಲಲಿ ಒದ್ದಾಡುತ್ತಿದ್ದಾರೆ ಇತ್ತೀಚೆಗೆ 9ನೇ ಫೆಬ್ರವರಿ 2004ರಲ್ಲಿ ಡಿಪಾರ್ಟ್‌ಮೆಂಟ್ ಆಫ್ ವುಮೆನ್ ಅಂಡ್ ಚೈಲ್ಡ್ ಡೆವಲಪ್‌ಮೆಂಟ್‌ನಲ್ಲಿ, Ministry of Human Resources ಒಂದು ರೆಸಲ್ಯೂಷನ್ ಅನ್ನು ಮಾಡಿತು ಅದರಲ್ಲಿ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ Children To reiterate its commitment to the cause of the children in order to see that no child remains hungry, illiterate or sick after the consideration it has been decided to adopt the National Charter of childern enuciated below Article 15(3)- The State can make special provision for the children The State shall provide free and compulsory education to all children of age of 6 to 14 ಎಂದು ಆ ನಿರ್ಣಯದಲ್ಲಿ ಹೇಳಿದ್ದಾರೆ The State shall endeavour to provide early childhood care and education for all the children untill they complete the age of 16 ಎಂದು ಹೇಳುತ್ತಾರೆ *In Article 51A whereas it is the fundamental duty of the parent or the guardian to provide the opportunity for education to his child or ward between the age of 6 and 14 ಎನ್ನತಕ್ಕ ಮಾತನ್ನು ಸಂವಿಧಾನ ದತ್ತವಾಗಿ ನಾವೆಲ್ಲರೂ ಒಪ್ಪಿದ್ದೇವೆ ಆದರೆ, ಪ್ರತಿಯೊಂದು , ಲವೂ ಶಾಲಾ ಕಾಲೇಜುಗಳಲ್ಲಿ ಅಡ್ಮಿಷನ್ ಪ್ರಾರಂಭವಾದ ಸಂದರ್ಭದಲ್ಲಿ ಇವತ್ತು ಅತಂತ್ರ ಸ್ಥಿತಿಯಲ್ಲಿ ಪೋಷಕರು ತಿರುಗಾಡಬೇಕಾಗುತ್ತದೆ ಉದಾಹರಣೆಗೆ ಪ್ರಾಥಮಿಕ ಶಿಕ್ಷಣ ಬಗ್ಗೆ ನನ್ನ ಕ್ಷೇತ್ರ ಮತ್ತು ನಮ್ಮ ನಗರದಲ್ಲಿ ಹಾಗೂ ಸುತ್ತಮುತ್ತ ನಾನು ಕಂಡಿರುವುದನ್ನು ತಮಗೆ ಉದಾಹರಿಸುವುದಕ್ಕೆ ಬಯಸುತ್ತೇನೆ ಶಾಲಾ ಕಾಲೇಜುಗಳ ಪ್ರವೇಶ ಸಂದರ್ಭದಲ್ಲಿ ಏಡೆಡ್ ಮತ್ತು ಅನ್ ಏಡೆಡ್ ಸ್ಕೂಲುಗಳೇನಿವೆ ಅವುಗಳಲ್ಲಿ ರೋಸ್ಟ್‌ರ್ ಪದ್ಧತಿಯನ್ನು ಕಡ್ಡಾಯವಾಗಿ ಅನುಸರಿಸಬೇಕೆಂದು ಸರ್ಕಾರ ಹೇಳಿದೆ ಶೇಕಡ 50ನ್ನು ಮ್ಯಾನೇಜ್‌ಮೆಂಟ್ ಕೊಡಬಹುದು ಉಳಿದ ೨೦ನ್ನು ರೋಸ್ಟ್‌ರ್ ಪದ್ಧತಿಯ ಪ್ರಕಾರ ಕೊಡಬೇಕೆಂದು ಹೇಳಿದೆ ಬಹುಶಃ ಬೆಂಗಳೂರಿನಲ್ಲಿರತಕ್ಕ ಶಾಲೆಗಳ ಪಟ್ಟಿಯನ್ನು ಕೊಡುತ್ತೇನೆ ಯಾವ ಶಾಲಾ ಕಾಲೇಜುಗಳಲ್ಲಿ ರೋಸ್ಟ್‌ರ್ ಪದ್ಧತಿಯನ್ನು ಅನುಸರಿಸಿ ಪ್ರವೇಶವನ್ನು ಕೊಟ್ಟಿದ್ದಾರೆ? ಇವತ್ತು ಶಾಲಾ ಕಾಲೇಜುಗಳನ್ನು ತೆರೆಯಬೇಕಾದರೆ, ಅವರು ಬಹಳ ಸ್ಪಷ್ಟವಾಗಿ application ನಲ್ಲಿ ಹೇಳುತ್ತಾರೆ There is a need of a school ಎಂದು ಹೇಳುತ್ತಾರೆ ಈ ರೀತಿ ಹೇಳಿದಾಗ, ಸ್ಥಳೀಯ ಜನರು ಪ್ರವೇಶವನ್ನು ಕೋರಿದಾಗ ಅಪ್ಲಿಕೇಷನ್ ಕೊಡುವುದಕ್ಕೂ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಡೆಸತಕ್ಕವರು ಇವತ್ತು ನಿರಾಕರಿಸುತ್ತಾರೆ ತದನಂತರ, ಆ ಶಿಕ್ಷಣ ಸಂಸ್ಥೆಗಳಲ್ಲಿ ವಂತಿಕೆಯಾಗಲೀ, ಪ್ರವೇಶ ಶುಲ್ಕವಾಗಲೀ ಮತ್ತೊಂದು, ಮಗದೊಂದು ಎಲ್ಲಾ ಬಹಳ ಗುಪ್ತವಾಗಿ ನಡೆಯುತ್ತದೆ ಅದನ್ನು ಯಾರೂ ಹೇಳಲಿಕ್ಕಾಗುವುದಿಲ್ಲ ಪ್ರವೇಶ ಕೊಡತಕ್ಕ ಮ್ಯಾನೇಜ್‌ಮೆಂಟ್‌ನವರು ಎಲ್ಲಿಯೋ ಕುಳಿತಿರುತ್ತಾರೆ ಪ್ರಿನ್ಸಿಪಾಲರು ಇಂಟರ್‌ವ್ಯೂ ಮಾಡುತ್ತಾರೆ, ಮೊದಲನೆಯದಾಗಿ ತಂದೆ ತಾಯಿಗಳಿಗೆ ಇಂಟರ್‌ವ್ಯೂ ನಡೆಯುತ್ತದೆ ಈ ವಿಚಾರವಾಗಿ ನಾನು ಒಂದು ಮಾತನ್ನು ಕೇಳುತ್ತೇನೆ ಉದಾಹರಣೆಗೆ ನಮ್ಮ ಕ್ಷೇತ್ರದಲ್ಲಿ ತಂದೆ ತಾಯಿಗಳು ಕಡ್ಡಾಯವಾಗಿ ಪದವೀಧರರಾಗಿರಬೇಕೆಂಬುದನ್ನು ಹೇಳುತ್ತಾರೆ ಇಂಗ್ಲೀಷ್ ಮಾತುಗಾಡಲಿಕ್ಕೆ ಬರಲೇಬೇಕು ಎಂದು ಹೇಳುತ್ತಾರೆ ಸರ್ ಎಂ ವಿಶ್ವೇಶ್ವರಯ್ಯನವರ ತಂದೆ ತಾಯಿಗಳಿಗೆ ಇಂಗ್ಲೀಷ್ ಬರುತ್ತಿತ್ತೇ? ಅವರ ತಂದೆ ತಾಯಿಗಳು ದೊಡ್ಡ ಪಾಂಡಿತ್ಯರಾಗಿದ್ದರೇ

ಅಥವಾ ಬಹಳಷ್ಟು ಜನರ ಅಪ್ಪ ಅಮ್ಮಂದಿರು ಹಿಂದೆ ಪದವೀಧರರಾಗಿದ್ದರೇ? ಇವತ್ತು ಮೂಳಭೂತವಾಗಿ ಸರ್ಕಾರದಲ್ಲಿ ಅಥವಾ ಈ ಸದನದಲ್ಲಿ ಇದರ ಬಗ್ಗೆ ಒಂದು ತೀರ್ಮಾನವನ್ನು ಮಾಡಬೇಕಾಗುತ್ತದೆ ಈ ರೀತಿಯಾಗಿ ಪೋಷಕರನ್ನು ಶೋಷಣೆ ಮಾಡುವುದು ಅಲ್ಲಿಂದ ಆರಂಭವಾಗುತ್ತದೆ ಅಲ್ಲಿ ಆರಂಭವಾದ ನಂತರ ಒಂದೊಂದು ಶಾಲಾ ಕಾಲೇಜುಗಳಲ್ಲಿ ಫ್ಯಾನ್ಸಿ ರೇಟ್, ಹತ್ತು ಸಾವಿರದಿಂದ ಹಿಡಿದು ಐವತ್ತು ಸಾವಿರ ವರೆಗೆ ಇದೆ ಇನ್ನೊಂದು ಪ್ರತಿಷ್ಟಿತ ಸಂಸ್ಥೆ ಸದಶಿವನಗರದಲ್ಲಿ 2 ಲಕ್ಷ ರೂ, 3 ಲಕ್ಷ ರೂಗಳ ಬ್ಲಾಂಕ್ ಚೆಕ್ ಕೊಟ್ಟರೂ ಕೂಡ ಇವತ್ತು ಪ್ರವೇಶ ಇಲ್ಲ ನಾನೇ ಸ್ವತಃ ಒಬ್ಬರನ್ನು ಭೇಟಿ ಮಾಡಿದಾಗ ಈ ರೀತಿ ಹೇಳಿದ್ದಾರೆ ಇವತ್ತು ಇದಕ್ಕೆ ಕಡಿವಾಣ ಹಾಕದೇ ಹೋದರೆ, No money, no education ಹಣ ಇಲ್ಲದೇ ಹೋದರೆ ಇವತ್ತು ವಿದ್ಯಾಭ್ಯಾಸವನ್ನೇ ಮಾಡಿಸಲಿಕ್ಕೆ ಆಗುವುದಿಲ್ಲ ಎನ್ನತಕ್ಕಂಥಾದ್ದು ಬರುತ್ತದೆ ಈ ದೇಶದಲ್ಲಿ ಸಾಮಾಜಿಕ ನ್ಯಾಯ ಅಗಲೀ ಅಥವಾ ಒಬ್ಬ ಬಡವನ ಮಗನ ವಿದ್ಯಾಭ್ಯಾಸ ಮಾಡಬೇಕಾದರೆ ಇವತ್ತು ಸಾಧ್ಯವಿಲ್ಲ ಎನ್ನತಕ್ಕಂಥಾದ್ದು ಇದೆ ಎಷ್ಟೋ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಬಡವರಿಗೆ ಪ್ರವೇಶವೇ ಇಲ್ಲ ಏಕೆ ಈ ರೀತಿಯಾದ ಧೋರಣೆಯನ್ನು ತಾಳುತ್ತಿದ್ದಾರೆ? ಇವತ್ತು ಶಿಕ್ಷಣ ನೀತಿಯಲ್ಲಿ ಹೇಳಿದ್ದಾರೆ ಇವತ್ತು ಡೊನೇಷನ್ ಎಷ್ಟು ಅಥವಾ ಬೆಟರ್‌ಮೆಂಟ್ ಫೀಯನ್ನು ಎಷ್ಟು ತೆಗೆದುಕೊಳ್ಳಬೇಕೆಂದು ಹೇಳಿದ್ದರೂ ಸಹ ಪ್ರತಿಯೊಂದು ತರಗತಿಯಿಂದ, ತರಗತಿಗೆ ಹೋಗಬೇಕಾದರೆ ಬಿಲ್ಡಿಂಗ್ ಫಂಡ್ ತೆಗೆದುಕೊಳ್ಳುತ್ತಾರೆ ಈ ರೀತಿ ಬಿಲ್ಡಿಂಗ್ ಫಂಡ್ ಎಂಬುದಾಗಿ ತೆಗೆದುಕೊಂಡ ಹಣ, ನಾನು ಲೆಕ್ಕ ಹಾಕಿದ್ದೇನೆ ಸುಮಾರು ಒಂದು ಶಾಲೆಯಲ್ಲಿ ಐದು ಕೋಟಿ ರೂಪಾಯಿಗಳ ಆದಾಯ ಇದೆ ಆದರೆ, ಖರ್ಚಾಗತಕ್ಕಂಥಾದ್ದು ಆ ವರ್ಷದಲ್ಲಿ ಕೇವಲ ಒಂದೂವರೆ ಕೋಟಿ ರೂಪಾಯಿಗಳು ಐದು ವರ್ಷಗಳಲ್ಲಿ ಅವರು ಗಳಿಸತಕ್ಕ ಹಣ ಸುಮಾರು ಕೋಟ್ಯಾಂತರ ರೂಪಾಯಿಗಳಾಗುತ್ತದೆ ಅದನ್ನು ಯಾರು ಅಡಿಟ್ ಮಾಡುತ್ತಾರೆ? ಆಡಿಟ್ ಆದಮೇಲೆ, ಬಹುಶಃ ಆಡಿಟಿಂಗ್ ಸರಿ ಇದೆಯೇ, ಇಲ್ಲವೇ ಇದನ್ನು ಪರಿಶೀಲನೆ ಮಾಡುವಂಥಾದ್ದು ಸಾರ್ವಜನಿಕವಾಗಿ ಆಗುವುದಿಲ್ಲ ಇದರ ಚರ್ಚೆಯೇ ಆಗುವುದಿಲ್ಲ ಈ ರೀತಿ ಕೊಟ್ಟಂಥ ಹಣ ಏನಾಯಿತು ಎಂಬುದು ಯಾರಿಗೂ ಗೊತ್ತಾಗುವುದಿಲ್ಲ ಅದಕ್ಕಾಗಿ ಈ ಸಂದರ್ಭದಲ್ಲಿ ತಮ್ಮ ಮುಖೇನ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇತ್ತೀಚೆಗೆ ನಮ್ಮ ಕ್ಷೇತ್ರದಲ್ಲಿ ಒಂದು ಸಾವು ಸಂಭವಿಸಿತು ಒಂದು ಶಾಲೆಯ ಪೋಷಕರೋಬ್ಬರು ಎಲ್ ಕೆ ಜಿ ಯಿಂದ ಯು ಕೆ ಜಿ ಗೆ ಪಾಸಾದ ಮಗುವಿಗೆ ಹಣವನ್ನು ಕಟ್ಟಲಿಕ್ಕಾಗಲಿಲ್ಲ ಇದಕ್ಕಾಗಿ ತಾಯಿ ಮತ್ತು ಮಗು ಆತ್ಮಹತ್ಯೆ ಮಾಡಿಕೊಂಡ ಪ್ರಕರಣ, ಒಂದು ಧಾರುಣ ಪ್ರಕರಣ ನಡೆದು, ಅದು ಪತ್ರಿಕೆಗಳಲ್ಲೂ ಬಂತು ಸ್ವತಂತ್ರ ಭಾರತದಲ್ಲಿ ಇಂತಹ ಘಟನೆಗಳು ಸಂಭವಿಸಿದಾಗ ನಾವು ಅನುಕಂಪವನ್ನು ತೋರಿಸಿ, ಕಣ್ಣೀರು ಹಾಕಿ ಸುಮ್ಮನಾಗಿ ಬಿಡುತ್ತೇವೆ ಆದರೂ ಇವತ್ತು ಎಷ್ಟೋ ಘಟನೆಗಳು ನಮಗೆ ಗೋಚರವಾಗುವುದಿಲ್ಲ ಯಾರಿಗೂ ಕಾಣದೆ ಹಾಗೆಯೇ ಮುಚ್ಚಿಹೋಗುತ್ತವೆ ಇಂತಹ ಪ್ರಕರಣಗಳು ಒಂದು ಕಡೆಯಾದರೆ, ಬಹುಶಃ ಕಳೆದ ಮೂರು ವರ್ಷಗಳ ಹಿಂದೆ ಒಂದು ಘಟನೆಯನ್ನು ನಾನು ಪತ್ರಿಕೆಗಳಲ್ಲಿ ಓದಿದೆ ಒಬ್ಬ ಆಟೋ ಡ್ರೈವರನ್ನು ಪೋಲೀಸಿನವರು ಅರೆಸ್ಟ್ ಮಾಡಿದಾಗ, ನೀನು ಏಕೆ ಕಳ್ಳತನ ಮಾಡಿದೆ ಎಂದರೆ ನನ್ನ ಮಗುವಿಗೆ ಅನಿವಾರ್ಯವಾಗಿ ಡೊನೇಷನ್ ಕಟ್ಟಬೇಕಾಗಿತ್ತು ಹಣ ನನ್ನಲ್ಲಿರಲಿಲ್ಲ, ಅದರಿಂದಾಗಿ ನಾನು ಕಳ್ಳತನಕ್ಕೆ ಮೊರೆ ಹೋಗಬೇಕಾಯಿತು ಎಂಬ ಮಾತನ್ನು ಹೇಳುತ್ತಾನೆ ಈ ರೀತಿಯಾದ ಸಾಮಾಜಿಕವಾದ ಏರುಪೇರುಗಳಿವೆ ಜೊತೆಗೆ ಇವತ್ತು ತಂದೆ ತಾಯಿಗಳು, ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡತಕ್ಕ ಒಬ್ಬ ಕಾರ್ಮಿಕನಿಗೆ

ಎರಡೂವರೆಯಿಂದ ಮೂರು ಸಾವಿರ ರೂಪಾಯಿ ಸಂಬಳ ಬರುತ್ತದೆ ಆದರೆ, ತನ್ನ ಮಗನ ಶಾಲೆಯ ಫೀಜು ಕೊಡಬೇಕೆಂದರೆ, 250–300–350–400 ರೂಪಾಯಿಗಳನ್ನು ನಿಗದಿಪಡಿಸುತ್ತಾರೆ

1 30 ಪಿಎಂ

ಇದಕ್ಕೆ ಯಾವುದೇ ರೀತಿಯಾದ ಮಾನದಂಡಗಳು ಇಲ್ಲ ಇದರ ಬಗ್ಗೆ ನಾವು ಕಡಿವಾಣವನ್ನು ಹಾಕಿ ಪಾರದರ್ಶಕವನ್ನು ಕಾಪಾಡಿಕೊಳ್ಳದೇ ಹೋದರೆ ಬಡವರಿಗೆ ವಿದ್ಯಾಭ್ಯಾಸ ಈ ನಗರದಲ್ಲಿ ಅಗಲಿ, ಅಥವಾ ರಾಜ್ಯದ ಬೇರೆ ಬೇರೆ ನಗರದಲ್ಲಿ ಅಗಲಿ ಕೊಡಲಿಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿಯನ್ನು ನಾವು ಮುಟ್ಟುತ್ತೇವೆ ಮಾನ್ಯ ಅಧ್ಯಕ್ಷರೇ, ಇವತ್ತು ತಮಗೆ ಗೊತ್ತಿರಬಹುದು, ವರದಕ್ಷಿಣೆ ಪಿಡಗು ಎಷ್ಟು ಅಪಾಯವೋ ಅದೇ ರೀತಿಯಲ್ಲಿ ಗುರುಗಳ ಹೆಸರಿನಲ್ಲಿ, ವಿದ್ಯೆಯ ಹೆಸರಿನಲ್ಲಿ ಏನು ದಕ್ಷಿಣೆಯನ್ನು ತೆಗೆದು ಕೊಳ್ಳುತ್ತಾರೆ ಅದಕ್ಕೆ ಸರಿಯಾದ ಲೆಕ್ಕವನ್ನು ಸಾರ್ವಜನಿಕವಾಗಿ ಬಹಿರಂಗಪಡಿಸತಕ್ಕಂಥ ಒಂದು ಅಡಿಟಿಂಗ್ ಆಗಬೇಕು, ಅದು ಸೋಷಿಯಲ್ ಅಡಿಟಿಂಗ್ ಅಗಿರಬಹುದು, ಅಥವಾ ಬ್ಯಾಂಕ್‌ಗಳಲ್ಲಿ ಹೇಗೆ ಹೊರಗಡೆಯಿಂದ ಬಂದು ಅಡಿಟಿಂಗ್ ಮಾಡುತ್ತಾರೋ ಹಾಗೆ ಪ್ರತಿಯೊಂದು ಶಿಕ್ಷಣ ಸಂಸ್ಥೆಗಳಲ್ಲಿ ಅಡಿಟಿಂಗ್ ಆಗಬೇಕು ಅಡಿಟಿಂಗ್ ಅದನಂತರ ವರದಿಯನ್ನು ಬಹಿರಂಗಪಡಿಸಬೇಕು ದೊಡ್ಡ ದೊಡ್ಡ ಸಂಸ್ಥೆಗಳು ಪತ್ರಿಕೆಗಳಲ್ಲಿ ಬಹಿರಂಗಪಡಿಸಬೇಕು, ನೋಟೀಸ್ ಬೋರ್ಡ್‌ನಲ್ಲಿ ಡಿಸ್‌ಪ್ಲೇ ಮಾಡಬೇಕು ಇಲ್ಲ ಅಂದರೆ ಬಹುಶಃ ಹಣ ಕೊಡತಕ್ಕಂಥ ಸಾರ್ವಜನಿಕರ ಹಣ ಇವತ್ತು ಏನಾಯಿತು ಎಂಬುದು ಗೊತ್ತಾಗುವುದಿಲ್ಲ ಮತ್ತೆ ನನ್ನ ಅನುಭವದಲ್ಲಿ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಒಂದು ಶಿಕ್ಷಣ ಸಂಸ್ಥೆ ನಮ್ಮ ಸಾರ್ವಜನಿಕರಿಂದ, ಪೋಷಕರಿಂದ ಸಂಗ್ರಹ ಮಾಡಿದಂತಹ ಹಣದಿಂದ ಸುಮಾರು ಎಕರೆಗಟ್ಟಲೆ ಜಮೀನನ್ನು ಎಲ್ಲೋ ಮೈಸೂರಿನ ಹತ್ತಿರ, ನೆಲಮಂಗಲ ರಸ್ತೆಯ ಹತ್ತಿರ ಇನ್ನೆಲ್ಲೋ ಅವರು ಜಮೀನುಗಳನ್ನು ಕೊಂಡುಕೊಳ್ಳುವುದಾದರೆ ಹೇಗೆ? ಅಕ್ಟ್‌ನಲ್ಲಿ ಬಹಳ ಕ್ಲಿಯರ್ ಆಗಿ ಇದೆ ಏತಕ್ಕೋಸ್ಕರ ಹಣ ತೆಗೆದುಕೊಳ್ಳುತ್ತೇವೆಯೋ ಅದನ್ನು ಅಲ್ಲಿಗೆ ಖರ್ಚು ಮಾಡಬೇಕೆಂದು ಎಜುಕೇಷನ್ ಅಕ್ಟ್‌ನಲ್ಲಿದೆ ಆದರೆ ಅವರು ಆ ರೀತಿ ಖರ್ಚು ಮಾಡುತ್ತಿಲ್ಲ ಇವತ್ತು ದಯವಿಟ್ಟು ನಾನು ಹೇಳುತ್ತೇನೆ, ಕಳೆದ ಸಲ ನಾಣು ಪೋಷಕರ ಸಂಘಟನೆಯ ಅಧ್ಯಕ್ಷನಾಗಿ ಹಲವಾಗು ರೀತಿಯ ಹೋರಾಟಗಳನ್ನು ಮತ್ತು ಸಾರ್ವಜನಿಕರು ಕೊಟ್ಟಂತಹ ದೂರಿನ ಮೇಲೆ ಅಧ್ಯಯನ ಮಾಡಿದಾಗ ನನಗೆ ಗೊತ್ತಾಗಿದ್ದು ಏನೆಂದರೆ ಹಿಂದುಳಿದ ವರ್ಗಗಳ ಮತ್ತು ಆಲ್ಪಸಂಖ್ಯಾತರ ಕಲ್ಯಾಣ ಸಮಿತಿ ಇದೇ ಒಂದು ಸದನದಲ್ಲಿ 2001–2002ರಲ್ಲಿ ಅಧ್ಯಯನ ಮಾಡಿ ಒಂದು ವರದಿಯನ್ನು ಸರ್ಕಾರದ ಮುಂದೆ ಇಟ್ಟಿದೆ ಅದು ಸರ್ಕಾರದ ಗಮನಕ್ಕೆ ಈಗಾಗಲೇ ಬಂದಿರಬಹುದು ಎಂದು ನಾನು ಭಾವಿಸುತ್ತೇನೆ ಅದರಲ್ಲಿ ಯಾವ ಯಾವ ಶಾಲೆಗಳಲ್ಲಿ, ಕಾಲೇಜುಗಳಲ್ಲಿರೋಸ್ಟರ್ ಪದ್ಧತಿಯನ್ನು ಅನುಷ್ಠಾನ ಮಾಡಿಲ್ಲ ಎಂದು ತಿಳಿಸಿದ್ದಾರೆ ಕೆಲವು ಪ್ರತಿಷ್ಠಿತ ಖಾಸಗಿ ಕಾಲೇಜು ಮತ್ತು ಶಾಲೆಗಳು ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ಪತ್ರಕ್ಕೆ ಅಗೌರವವನ್ನು ಸುಚಿಸಿರತಕ್ಕಂಥಾದ್ದನ್ನು ನಾಣು ಪತ್ರಿಕೆಗಳಲ್ಲಿ ಓದಿದ್ದೇನೆ ದಯವಿಟ್ಟು ಸರ್ಕಾರ ಆ ವರದಿಯನ್ನು ತರಿಸಿ ಎಲ್ಲೆಲ್ಲಿ ಈ ರೋಸ್ಟರ್ ಪದ್ಧತಿಯನ್ನು ಅನುಷ್ಠಾನ ಮಾಡಿಲ್ಲ ಅಂತಹ ಕಾಲೇಜುಗಳು ಮತ್ತು ಶಾಲೆಗಳ ಮೇಲೆ ಕ್ರಮವನ್ನು ಕಡ್ಡಾಯವಾಗಿ ತೆಗೆದುಕೊಳ್ಳದೇ ಹೋದರೆ ಈ ಅಲ್ಪಸಂಖ್ಯಾತವರ್ಗದವರಾಗಲಿ ಹಿಂದುಳಿದ ವರ್ಗದವರಾಗಲೀ, ಆರ್ಥಿಕವಾಗಿ ಹಿಂದುಳಿದವರಾಗಲೀ ಇಂತಹ ಶಾಲಾ ಕಾಲೇಜುಗಳಲ್ಲಿ ಪ್ರವೇಶ ಸಿಗುವುದಿಲ್ಲ ಅಂತಹ ಸ್ಥಿತಿಯನ್ನು ನಾವು ಮುಟ್ಟುತಕ್ಕಂಥಾದ್ದು ಆಗುತ್ತದೆ ಮತ್ತೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ ಇತ್ತೀಚೆಗಷ್ಟೇ ಪಿ ಯು ಸಿ ಕಾಲೇಜುಗಳ ಪ್ರವೇಶ ಶುರುವಾಯಿತು ನನ್ನ ಕ್ಷೇತ್ರದಲ್ಲಿ ಸುಮಾರು 92–93 ಪರ್ಸೆಂಟ್ ಅಂಕಗಳನ್ನು

ತೆಗೆದುಕೊಂಡ ವಿದ್ಯಾರ್ಥಿಗಳು ಎಷ್ಟು ಕಾಲೇಜುಗಳಲ್ಲಿ ಪ್ರವೇಶಕೋಸ್ಕರ ಅರ್ಜಿ ಸಲ್ಲಿಸಿರಬಹುದು ಎನ್ನುವುದನ್ನು ತಾವು ಅಲೋಚನೆ ಮಾಡಿ ಕನಿಷ್ಠ ಒಬ್ಬೊಬ್ಬ ವಿದ್ಯಾರ್ಥಿ 5 ಕಾಲೇಜುಗಳಿಗೆ ಅರ್ಜಿಯನ್ನು ಹಾಕಬೇಕಾಯಿತು ಏಕೆ ಅಂತ ಹೇಳಿದರೆ ಇವತ್ತಿನ ವ್ಯವಸ್ಥೆ ಆ ರೀತಿ ಇದೆ ಒಬ್ಬ ವಿದ್ಯಾರ್ಥಿ 93–94–95 ಪರ್ಸೆಂಟ್ ಅಂಕಗಳನ್ನು ತೆಗೆದುಕೊಂಡು ಅರ್ಜಿ ಹಾಕಿದರೂ ಸಹ ಯಾವ ಕಾಲೇಜಿನಲ್ಲಿ ನನಗೆ ಪ್ರವೇಶ ಸಿಗುತ್ತದೆ ಎನ್ನುವ ಖಾತಿ ಇಲ್ಲ ಇವತ್ತು ನಾವು ಸಿ ಇ ಟಿ ಪದ್ಧತಿಯಲ್ಲಿ ಸೆಂಟ್ರಲ್ ಅಡ್ಮಿಷನ್ ಸೆಂಟರ್‌ಗಳನ್ನು ಮಾಡಬೇಕಾಗುತ್ತದೆ ಇಲ್ಲ ಅಂದರೆ ಒಬ್ಬ ವಿದ್ಯಾರ್ಥಿ 150 ರೂಪಾಯಿಗಳಿಂದ 200 ರೂಪಾಯಿಗಳು ಕೊಟ್ಟು ಪ್ರಾಸ್‌ಪೆಕ್ಟ್ಸ್‌ಗೆ ತೆಗೆದುಕೊಳ್ಳಬೇಕು ಆ ಪ್ರಸ್‌ಪೆಕ್ಟ್ಸ್ ತೆಗೆದುಕೊಂಡ ಮೇಲೆ ಪ್ರತಿಯೊಂದನ್ನು ಜೆರಾಕ್ಸ್ ಮಾಡಿ ಹಾಕಬೇಕು ನಂತರ ಆ ಕಾಲೇಜಿನಲ್ಲಿ ಪ್ರವೇಶ ಯಾವಾಗ ಪ್ರಕಟಣೆ ಮಾಡುತ್ತಾರೆ ಎನ್ನುವುದನ್ನು ನೋಡಬೇಕು ಇವತ್ತು ಎಂ ಇ ಎಸ್ ಕಾಲೇಜು, ಸೆಂಟ್ ಜೋಸೆಫ್ಸ್ ಕಾಲೇಜು, ವಿಜಯ ಕಾಲೇಜು, ಕೆ ಎಲ್ ಇ ಕಾಲೇಜು, ಬಸವೇಶ್ವರ ಕಾಲೇಜು ಅಥವಾ ಕ್ರೈಸ್ಟ್ ಕಾಲೇಜು ಅಥವಾ ಯಾವ ಕಾಲೇಜಿನಲ್ಲಿ ಪ್ರವೇಶ ಸಿಗುತ್ತದೆ ಎನ್ನುವ ಖಾತರಿ ಇಲ್ಲ ಅದ್ದರಿಂದ ನಾನು ಹೇಳುತ್ತೇನೆ ಒಬ್ಬ ವಿದ್ಯಾರ್ಥಿ ಎಲ್ಲಿಯಾದರೂ ಒಂದು ಪ್ರವೇಶದ ಅರ್ಜಿಯನ್ನು ಹಾಕಿದರೆ ಅವರು ಅರ್ಡರ್ ಆಫ್ ಪ್ರೆಯಾರಿಟಿಯನ್ನು ಇಟ್ಟುಕೊಂಡು ಅದು ಇಡೀ ಬೆಂಗಳೂರು ನಗರದಲ್ಲಿ ಅದು ಒಂದು ಕಡೆಯೋ ಅಥವಾ ಎರಡು ಕಡೆಯೋ ಪ್ರವೇಶ ಸಿಗುವಂತೆ ಆದರೆ ಅದು ವಿದ್ಯಾರ್ಥಿಗೂ ಸುಲಭ, ಪೋಷಕರಿಗೂ ಸುಲಭ, ಆಡಳಿತ ಮಂಡಳಿಗೂ ಸುಲಭ, ಈ ರೀತಿಯ ಟ್ರಾನ್ಸ್‌ಪೊರೆನ್ಸಿಯನ್ನು ಕಾಪಾಡಲಿಕ್ಕೆ ರಾಜ್ಯ ಸರ್ಕಾರದ ಹಿಂದುಳಿದವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ತನ್ನ ಶಿಫಾರಸ್ಸುಗಳಲ್ಲಿ ಹೇಳಿದೆ ನಾನು ಓದಿದ ಪ್ರಕಾರವಾಗಿ ಅದರಲ್ಲಿ ಮುಂದಿನ ದಿನಗಳಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪಿ ಯು ಸಿ ಪ್ರವೇಶದಲ್ಲಿ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಪ್ರಾಯೋಗಿಕವಾಗಿ ಬೆಂಗಳೂರು ಮಂಗಳೂರು ಮತ್ತು ಮೈಸೂರು ಧಾರವಾಡ ಇಂತಹ ಕೆಲವು ನಗರದಲ್ಲಿ ಸಿ ಇ ಟಿ ಮಾದರಿಯಲ್ಲಿ ಪ್ರವೇಶ ನೀಡುವ ವ್ಯವಸ್ಥೆಯನ್ನು ಮುಂದಿನ ಶೈಕ್ಷಣಿಕ ಸಾಲಿನಿಂದ ಜಾರಿಗೆ ತರಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ ಎನ್ನತಕ್ಕಂಥಾದ್ದನ್ನು ಅವರು ಮಂಡನೆ ಮಾಡಿದ್ದಾರೆ ನಾನು ಏಕೆ ಇಷ್ಟು ಕಳಕಳಿಯಿಂದ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇಎಂದರೆ ಪೋಷಕರ ಮತ್ತು ಆ ವಿದ್ಯಾರ್ಥಿಗಳ ಪಾಡು ಆ ಸಂದರ್ಭದಲ್ಲಿ ಅತಂತ್ರವಾಗಿರುತ್ತದೆ. ಇವತ್ತು 95 ಪರ್ಸೆಂಟ್‌ಗೆ ಪ್ರವೇಶ 4 ಕಾಲೇಜುಗಳಲ್ಲಿ ಅನೌನ್ಸ್ ಆಗುತ್ತದೆ ಆಗ ಅವನು ಎಲ್ಲಾದರು ಒಂದೇ ಕಡೆ ಪ್ರವೇಶ ಪಡೆಯಬೇಕಾಗುತ್ತದೆ ಇನ್ನುಳಿದ ಕಡೆ ಸೀಟು ಲ್ಯಾಪ್ಸ್ ಆಗುತ್ತದೆ ಇಂತಾದ್ದನ್ನು ಆ ಕಾಲೇಜಿನವರು ಬೇರೆ ನೋಟಿಫೈ ಮಾಡುತ್ತಾರೊ ಎನ್ನುವುದನ್ನು ಯಾರೂ ಲೆಕ್ಕ ಇಡುವುದಿಲ್ಲ ದಯವಿಟ್ಟು ಸೆಂಟ್ರಲ್ ಅಡ್ಮಿಷನ್ಸ್ ಸಿ ಇ ಟಿ ತರಹ ಪಿ ಯು ಸಿ ಪ್ರವೇಶಕ್ಕೆ ಬೆಂಗಳೂರು ನಗರದಲ್ಲಿ ಮತ್ತು ರಾಜ್ಯದ ನಾಲ್ಕು ಭಾಗಗಳಲ್ಲಿ ಮಾಡಿ ಎಲ್ಲಿಯಾದರೂ ಒಂದು ಕಡೆ ಅರ್ಜಿಯನ್ನು ಹಾಕಿ ಪ್ರವೇಶವನ್ನು ಪಡೆಯುವುದಲ್ಲಿ ಯಶಸ್ವಿಯಾಗುವ ರೀತಿಯಲ್ಲಿ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕು ಪ್ರತಿಯೊಂದು ಶಾಲಾ ಕಾಲೇಜುಗಳಲ್ಲಿ ಪಿ ಯು ಸಿ ಅಡ್ಮಿಷನ್‌ಗೆ ಆರ್ಟ್ಸ್ ಆಗಲಿ, ಸೈನ್ಸ್ ಆಗಲಿ ಕಾಮರ್ಸ್ ಆಗಲಿ ಪ್ರತಿಯೊಂದು ಕಾಲೇಜುಗಳಲ್ಲಿ ಏನಾಗುತ್ತಿದೆ ಎಂದರೆ ಖಾಸಗಿ ಕಾಲೇಜುಗಳಲ್ಲಿ ಅವರು ಅನುದಾನ ತೆಗೆದುಕೊಂಡಿರುತ್ತಾರೆ ಆ ಏರಿಯಾದಲ್ಲಿ ಸಿ ಎ ಸೈಟ್ ತೆಗೆದುಕೊಂಡಿರುತ್ತಾರೆ ಅಲ್ಲಿನ ಸಾರ್ವಜನಿಕರಿಂದ ಪಡೆದಿರತಕ್ಕಂಥ ಹಣದಲ್ಲಿ ಕಟ್ಟಿಡ ಕಟ್ಟಿರುತ್ತಾರೆ ಆ ಕಟ್ಟಡ ಕಟ್ಟಿದಂತಹ ಕಾಲೇಜಿನಲ್ಲಿ ಕ್ರಮೇಣವಾಗಿ ಏನು ಮಾಡುತ್ತಾರೆ ಶದಷ್ಟು ಬೇಗ ಆ ಕಾಲೇಜುನ್ನು ಮುಚ್ಚಿ ಹಾಕಿ

ಕಾಲೇಜನ್ನು ತೆರೆಯತಕ್ಕಂಥ ಅಂದರೆ ಇಂಡಿಪೆಂಡೆಂಟ್ ಕಾಲೇಜು ತೆಗೆಯುವುದು ನಡೆಯುತ್ತಿದೆ ಅಲ್ಲಿ 20–30 ಸಾವಿರ ಡೊನೇಷನ್ ಕೊಡಬೇಕು ಇಲ್ಲಿ ಸರ್ಕಾರದ ರೇಟ್ ಕಡಿಮೆ ಇದ್ದರೆ ಆ ಕಾಲೇಜುಗಳಲ್ಲಿ ಫ್ಯಾನ್ಸಿರೇಟ್ ಆಗಿ ಅವರು ಜಾಸ್ತಿ ಹಣ ಕೊಡಬೇಕು ಈ ರೀತಿ ಮತ್ತೊಂದು ದಿಕ್ಕಿನಲ್ಲಿ ಬೆಳವಣಿಗೆಯನ್ನು ಮಾಡುತ್ತಿದ್ದಾರೆ ಇನ್ನೊಂದು ಬಹಳ ಆತಂಕಕಾರಿಯಾದ ವಿಷಯ ಅಂದರೆ ಪ್ರಾಥಮಿಕ ತರಗತಿಗಳಲ್ಲಿ ಪ್ರೈಮತಿ ಸ್ಕೂಲ್ ಮತ್ತು ಹೈಸ್ಕೂಲ್‌ಗಳಲ್ಲಿ ಬೆಂಗಳೂರು ನಗರದಲ್ಲಿ ನನ್ನ ಗಮನಕ್ಕೆ ಬಂದಿರುವ ಹಾಗೆ ಸ್ಟೇಟ್ ಸಿಲಬಸ್ ಏನು ಇತ್ತು ಅದನ್ನು ತೆಗೆಯುತ್ತಿದ್ದಾರೆ ತಮಗೆ ಗೊತ್ತಿರಬಹುದು ಶಾಲೆ ಆರಂಭವಾದ ದಿವಸಗಳಲ್ಲಿ ಮತ್ತು ಆ ಶಾಲೆಗೆ ಬೇಕಾದ ನಿವೇಶನವನ್ನು ಪಡೆಯುವಾಗ ಇಲ್ಲಿ ಕನ್ನಡ ಮಿಡಿಯಂ ಶಾಲೆ ಮಾಡಿದ್ದೇವೆ ಸಿ ಎ ಸೈಟ್ ಬೇಕೆಂದು ಸರ್ಕಾರದಿಂದ ಬಿನಿಪಿಟ್ ತೆಗೆದುಕೊಂಡು ಅಲ್ಲಿರತಕ್ಕಂಥ ಸ್ಥಳೀಯ ನಿವೇಶನವನ್ನು ತೆಗೆದುಕೊಂಡು ಶಾಲಾಕಾಲೇಜುಗಳನ್ನು ಆರಂಭ ಮಾಡಿದರು ಅಂತಹವರು ಶ್ರೀಮಂತವಾಗಿ ಬೆಳದ ಮೇಲೆ ಇವತ್ತು ಹೇಳುತ್ತಿದ್ದಾರೆ ಕ್ರಮೇಣವಾಗಿ ನಾವು ಸ್ಟೇಟ್ ಸಿಲಬಸ್‌ನಿಂದಸೆಂಟ್ರಲ್ ಸಿಲಬಸ್‌ಗೆ ಹೋಗುತ್ತಿದ್ದೇವೆ, ಬೇಕಾದರೆ ತಾವು ಕಲಿಯಿರಿ ಬೇಡವಾದರೆ ಬಿಡಿ, ನಿಮ್ಮ ಮಕ್ಕಳನ್ನು ಕಳುಹಿಸಿ ಇಲ್ಲವಾದರೆ ಬೇಡ ಎನ್ನುವ ಧೋರಣೆಯನ್ನು ತಾಳುತ್ತಿದ್ದಾರೆ ಇದಕ್ಕೆ ನಾವು ಕಡಿವಾಣ ಹಾಕದೇ ಮುಂದೆ ಎಲ್ಲೋ ಒಂದು ದಿವಸ ಸಾಮಾನ್ಯ ಜನ ಸ್ಟೇಟ್ ಸಿಲಬಸ್‌ಗೆ ಮಕ್ಕಳನ್ನುಸೇರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಆ ಶಾಲೆಗಳನ್ನು ಹುಡುಕಬೇಕಾಗುತ್ತದೆ ಇವತ್ತು ಹೇಗೆ ಕನ್ನಡ ಮಿಡಿಯಂ ಶಾಲೆಗಳನ್ನು ಹುಡುಕುತ್ತಿದ್ದೇವೆಯೋ ಹಾಗೆಯೇ ಸ್ಟೇಟ್ ಸಿಲಬಸ್ ಶಾಲೆಗಳನ್ನು ಹುಡುಕತಕ್ಕಂಥ ಸ್ಥಿತಿಯು ಬರಬಹುದು ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ ಈ ಸಂದರ್ಭದಲ್ಲಿ ನಾನು ಮತ್ತೊಂದು ವಿನಂತಿ ಮಾಡುವುದೇನೆಂದರೆ ಸರ್ಕಾರದ ಪ್ರತಿಯೊಂದು ಶಾಲೆಗಳಲ್ಲಿ ಉದಾಹರಣೆಗೆ ಒಂದು ಬಡಾವಣೆಯಲ್ಲಿ ಈ ಶಾಲೆಯ ಅವಶ್ಯಕತೆ ಇದೆ ಎಂದು ಅರ್ಜಿ ಹಾಕುತ್ತಾರೋ ಹಾಗೆಯೇ ಸ್ಥಳೀಯರಿಗೆ ಅದ್ಯತೆ ಕೊಡತಕ್ಕಂಥ 3 ಕಿಲೋಮಿಟರ್ ವ್ಯಾಪ್ತಿಯಲ್ಲಿರತಕ್ಕಂಥ ಮಕ್ಕಳಿಗೆ ಮೊದಲ ಅಧ್ಯತೆಯನ್ನು ಕೊಡತಕ್ಕಂಥ ಮತ್ತು ಶೇಕಡ ಇಂತಿಷ್ಟು ಸೀಟುಗಳು ಎಂದು ನಿಗದಿಪಡಿಸಬೇಕು ಇಲ್ಲ ಅಂದರೆ ರಾಜಾಜಿನಗರದ ಮಕ್ಕಳು ಮಲ್ಲೇಶ್ವರಂಗೆ ಹೋಗಬೇಕಾಗುತ್ತದೆ ಮಲ್ಲೇಶ್ವರಣ ಮಕ್ಕಳು ಜಯನಗರಕ್ಕೆ ಹೋಗಬೇಕಾಗುತ್ತದೆ. ಅದರಿಂದ ಹಲವಾರು ರಿಪರ್‌ಕೆಶನ್ಸ್ ಆಗುತ್ತದೆ, ಟ್ರಾನ್ಸ್‌ಪೋರ್ಟೇಷನ್ ತೊಂದರೆ ಇರಬಹುದು, ಹ್ಯೂಮನ್ ಎನರ್ಜಿ ವೇಸ್ಟ್ ಆಗತಕ್ಕಂಥಾದ್ದು ಇರಬಹುದು, ಸಮಯ ದಂಡ, ಪೋಷಕರಿಗೆ ಮುಜಗರವಾಗತಕ್ಕಂಥಾದ್ದು, ಅಪಘಾತಗಳು ಇರಬಹುದು ಇಂತಹ ಹಲವಾರು ಸಂದರ್ಭಗಳು ಒರುತ್ತದೆ ದಯಮಾಡಿ ನಾನು ಹೇಳುತ್ತೇನೆ ಘನ ಸರ್ಕಾರ ಇದರ ಬಗ್ಗೆ ಹೆಚ್ಚು ಒತ್ತನ್ನು ಕೊಟ್ಟು ಮಾನಿಟರಿಂಗ್ ಕಮಿಟಿಗಳನ್ನು ಪ್ರತಿಯೊಂದು ಶಾಲೆಯಲ್ಲು ಆರಂಭಿ ಮಾಡಬೇಕು ಮತ್ತೆ ಸಾರ್ವಜನಿಕರಿಂದ ಶೇಖರಿಸತಕ್ಕಂಥ ಹಣದ ಬಗ್ಗೆ ಪಾರದರ್ಶಕವಾದ ವ್ಯವಸ್ಥೆ ಇರುವ ದೃಷ್ಟಿಯಿಂದ ಅಡಿಟರ್ ಜನರಲ್‌ನಿಂದ ಪ್ಯಾನಲ್ ಆಫ್ ಅಡಿಟಿಂಗ್, ಅಥವಾ ಚಾರ್ಟರ್ಡ್ ಅಕೌಮಟೆಂಟ್ಸ್‌ನಿಂದ ಅಡಿಟಿಂಗ್ ಮಾಡಿ ಅದನ್ನು ಬಹಿರಂಗಪಡಿಸತಕ್ಕಂಥಾದ್ದು ಆಗಬೇಕು ಅದು ಬಿಟ್ಟು ಅವರಿಗೆ ಬೇಕಾಗಿರತಕ್ಕಂಥವರಿಂದ ಅಡಿಟಿಂಗ್ ಮಾಡಿ ಅಡಿಟ್ ಸರ್ಟಿಪಿಕೇಟ್ ಪಡೆದು ಎಷ್ಟು ಹಣ ಬಂತು? ಎಷ್ಟು ಖರ್ಚಾಯಿತು ಎನ್ನುವುದನ್ನು ಮರೆಮಾಚತಕ್ಕಂಥಾದ್ದು ಆಗುತ್ತದೆ ದಯವಿಟ್ಟು ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈ ಒಂದು ಪ್ರಾಥಮಿಕ ಶಿಕ್ಷಣ ಬಡವರಿಗೆ ಮಧ್ಯಮ ವರ್ಗದವರಿಗೆ ಸಿಗಬೇಕು ಎನ್ನುವುದಾದರೆ ಈ ಒಂದು ಸುಧಾರಣಾ ಕ್ರಮಗಳನ್ನು ರಾಜ್ಯ ಸರ್ಕಾರ ತಿಳಂಬ ಮಾಡದೆ

ಅದಷ್ಟು ತ್ವರಿತಗತಿಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ ಇಲ್ಲ ಅಂದರೆ ಮುಂದಿನ ದಿನಗಳಲ್ಲಿಬಹುಶಃ ನಾನು ಹೇಳುತ್ತೇನೆ ಬಡವರಿಗೆ ಎಟುಕದಂತಹ ವಿದ್ಯಾಭ್ಯಾಸವಾಗುತ್ತದೆ ಮಧ್ಯಮ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ ಎಟುಕದಂತಹ ವಿದ್ಯಾಭ್ಯಾಸವಾಗುತ್ತದೆ ಅದಕ್ಕೆ ಅವಕಾಶ ಕೊಡಬಾರದು ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಇನ್ನು ಹಲವಾರು ಹೊಸ ಹೊಸ ಸಮಸ್ಯೆಗಳು ಶುರುವಾಗಿವೆ ಸಿ ಇ ಟಿ ಪ್ರವೇಶದಲ್ಲಿ ಏನಾಗುತ್ತದೆಯೋ ಎನ್ನುವುದು ಪೋಷಕರಿಗೆ ಗೊಂದಲವಾಗಿದೆ ನಾನು ಒಂದು ಮಾತು ಹೇಳುತ್ತೇನೆ ತಮಗೆ ಗೊತ್ತಿರಬಹುದು ಉನ್ನಿಕೃಷ್ಣನ್ ರವರ ಕೇಸ್‌ನಲ್ಲಿ ಹಿಂದೆ ನಿರ್ಮಾಣವಾಗಿದ್ದಂತಹ ಒಂದು ವಿಷಯ ಶೇಕಡ 50ರಷ್ಟು ಮೆರಿಟ್‌ಗೆ ಶೇಕಡ 35 ಪೇಮೆಂಟ್ ಸೀಟ್‌ಗೆ ಕೊಡಬೇಕು 15 ಪರ್ಸೆಂಟ್ ಮ್ಯಾನೇಜ್‌ಮೆಂಟ್ ಎನ್ನತಕ್ಕಂಥಾದ್ದು ಇವತ್ತು ಏನು ಫೀಜು ಫಿಕ್ಸ್ ಮಾಡಿದ್ದಾರೆ ಮುರಗೋಡ್‌ರವರ ವರದಿ ಪ್ರಕಾರವಾಗಿ ಇವತ್ತು ಬಡವರು ಅಷ್ಟು ಫೀಜು ಕಟ್ಟಲು ಸಾಧ್ಯವಿಲ್ಲ ಬಡವರು ಮಧ್ಯಮವರ್ಗದವರು ಮತ್ತು ಅಲ್ಪಸಂಖ್ಯಾತರು ಆರ್ಥಿಕವಾಗಿ ಹಿಂದುಳಿದಿರತಕ್ಕಂಥವರು ಇಷ್ಟು ಹಣವನ್ನು ಖಂಡಿತವಾಗಿ ಕಟ್ಟಲಿಕ್ಕೆ ಸಾಧ್ಯವಿಲ್ಲ ಇವತ್ತು ಪೋಷಕರು ಭಯ ಭೀಳುತ್ತಿದ್ದಾರೆ ಉನ್ನತ ಶಿಕ್ಷಣ ನಮ್ಮ ಮಕ್ಕಳಿಗೆ ಕೊಡಲಿಕ್ಕೆ ಆಗುವುದಿಲ್ಲವೇನೋ ಎನ್ನುವ ಭಯ ಬೀಳುತ್ತಿದ್ದಾರೆ ನಾನು ಒಂದು ಮಾತು ಹೇಳುತ್ತಿದ್ದೇನೆ ಅದಷ್ಟು ಬೇಗ ಸರ್ಕಾರ ಸುಪ್ರೀಂ ಕೋರ್ಟ್ ಮುಂದೆ should seek a review of the order and also the Supreme Court to permit the State to follow the principle laid down in the Unnikrishnan case ಬಹುಶಃ ಹಲವಾರು ವಿಚಾರಗೋಷ್ಠಿಗಳನ್ನು, ಸಮಾವೇಶಗಳನ್ನು ಮಾಡಿದಾಗ ಬಹಳಷ್ಟು ಜನ ಈ ಮಾತು ಹೇಳುತ್ತಾರೆ ಹೀಗಾಗಿ ಮ್ಯಾನೇಜ್‌ಮೆಂಟ್‌ಗೂ ತೊಂದರೆಯಾಗುವುದಿಲ್ಲ ಜೊತೆಗೆ ವಿದ್ಯಾರ್ಥಿಗಳಿಗೂ ತೊಂದರೆಯಾಗುವುದಿಲ್ಲ ಬಹುಶಃ ಮುಂದಿನ ದಿನಗಳಲ್ಲಿ ನಿಮಗೆ ಗೊತ್ತಿರುವ ಹಾಗೆ 12 ಸಾವಿರ ರೂ ಒಳಗಡೆ ಫೀ ಇರುತ್ತಿತ್ತು ಇವತ್ತು 50 ಸಾವಿರ ರೂ ಎಂದರೆ ಹೇಗೆ ಕಟ್ಟಲಿಕ್ಕೆ ಸಾಧ್ಯ? ದಯವಿಟ್ಟು ಸರ್ಕಾರ ಇದರ ಬಗ್ಗೆ ರಿವ್ಯೂ ಪಿಟಿಷನನ್ನು ಹಾಕಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು ನಾನು ಒಟ್ಟಾರೆ ಹೇಳುವುದಾದರೆ ಇವತ್ತು ಪ್ರಾಥಮಿಕ, ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣ ಈ ಮೂರು ಹಂತಗಳಲ್ಲಿ ಇವತ್ತು ವಿದ್ಯಾಭ್ಯಾಸದ ನೆಪದಲ್ಲಿ ಮತ್ತು ವಿದ್ಯೆಯ ನೆಪದಲ್ಲಿ ಆಗುತ್ತಿರುವ ಶೋಷಣೆಯನ್ನು ತಪ್ಪಿಸಬೇಕಾಗುತ್ತದೆ ಇವತ್ತು ಸುಪ್ರೀಂ ಕೋರ್ಟು ಬಹಳ ಚೆನ್ನಾಗಿ ಹೇಳಿದೆ ಇವತ್ತು ಯಾವುದೇ ಕಾರಣಕ್ಕೂ ವಿದ್ಯೆ ಎನ್ನುವುದು ವ್ಯಾಪಾರವಲ್ಲ It can be a profession, but it cannot be a business" ಎಂದು ಹೇಳಿದ್ದಾರೆ ಈ ಸಂದರ್ಭದಲ್ಲಿ ಇವತ್ತು ಸೇವಾ ಮನೋಭಾವನೆಯಿಂದ ಕೆಲಸ ಮಾಡುತ್ತಿರುವ ಸಂಸ್ಥೆಗಳಿಗೂ ಕಳಂಕ ಬರುತ್ತಿರುವಂಥದ್ದು ಆಗುತ್ತಿದೆ ಇವತ್ತು ಜನರು ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಿ ಶಿಕ್ಷಣದ ಬಗ್ಗೆ ವ್ಯವಸ್ಥೆಯನ್ನು ತರಬೇಕು ಇದರ ಬಗ್ಗೆ ಸಂಬಂಧಪಟ್ಟ ಸಚಿವರು ಭರವಸೆಯನ್ನು ಕೊಡಬೇಕು ಇದು ಮುಂದಿನ ದಿನಗಳಲ್ಲಿ ತ್ವರಿತವಾಗಿ ಆಗಬೇಕು ಮತ್ತೆ ರೋಸ್ಟರ್ ಪದ್ಧತಿಯನ್ನು ಅನುಸರಿಸಿದ್ದಾರೆಯೇ ಇಲ್ಲವೇ ಎಂಬುದರ ಬಗ್ಗೆ ಕೂಡ ತನಿಖೆಯಾಗಬೇಕು ಮತ್ತೆ ಅದರ ಬಗ್ಗೆ ಸಂಪೂರ್ಣವಾದ ವರದಿಯನ್ನು ಬೆಂಗಳೂರು ನಗರದ ಶಾಲೆಗಳಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತೆ ಎಷ್ಟೋ ಮ್ಯಾನೇಜ್‌ಮೆಂಟ್‌ನವರು ಕ್ರಮೇಣವಾಗಿ ಏನು ಮಾಡುತ್ತಿದ್ದಾರೆಂದರೆ ಸ್ಟೇಟ್ ಸಿಲಬಸ್‌ನಲ್ಲಿ ಕನ್ನಡ ಮಾಧ್ಯಮವನ್ನು ಮುಚ್ಚುತ್ತಾ ಬಂದರು,

ಸ್ಟೇಟ್ ಸಿಲಬಸ್‌ನ್ನು ಮುಚ್ಚುತ್ತಾ ಬಂದರು ಇವತ್ತು ರಾಜ್ಯಸರ್ಕಾರದಿಂದ ಎಲ್ಲಾ ರೀತಿಯ ರಿಬೇಟ್‌ಗಳನ್ನು ಅದೊಂದು ಸೆಸ್ ಇರಬಹುದು, ಸೇಲ್ಸ್ ಟ್ಯಾಕ್ಸ್ ಎಕ್ಸೆಂಪ್ಷನ್ ಇರಬಹುದು, ಟ್ಯಾಕ್ಸ್ ಎಕ್ಸೆಂಪ್ಷನ್ ಇರಬಹುದು, ಡೊನೇಷನ್ಸ್ ಇರಬಹುದು, ಗ್ರಾಂಟ್ಸ್ ಇರಬಹುದು, ಈ ರೀತಿ ಎಲ್ಲವನ್ನೂ ತೆಗೆದುಕೊಂಡಿದ್ದರೂ ಸಹಾ ಇವತ್ತು ಕ್ರಮೇಣವಾಗಿ ಇವತ್ತು ಶಿಕ್ಷಣ ಸಂಸ್ಥೆಗಳು ಬಡವರಿಗೆ ಎಟುಕದ ರೀತಿಯಲ್ಲಿ ಸೆಂಟ್ರಲ್ ಸಿಲಬಸ್‌ಗೆ ಸ್ವಿಚ್ ಓವರ್ ಮಾಡಿ they wanted to get away from the clutches of the State Government" ಮತ್ತು ಈ ವ್ಯವಸ್ಥೆಯಿಂದ ಹೇಗಾದರೂ ಮಾಡಿ ತಪ್ಪಿಸಿಕೊಳ್ಳಬೇಕೆನ್ನುವ ಹುನ್ನಾರದಲ್ಲಿದ್ದಾರೆ ಇವರೆಲ್ಲಾ ಆರಂಭದಲ್ಲಿ ಏನು ಹೇಳಿ ಶಾಲೆಗಳನ್ನು ಪ್ರಾರಂಭ ಮಾಡಿದ್ದರು, ಅಂಧವುಗಳನ್ನೆಲ್ಲಾ ವಾಪಸ್ ತೆಗೆದುಕೊಳ್ಳಿ ಯಾರ್ಯಾರು ಇಲ್ಲಿ ಸ್ಟೇಟ್ ಸಿಲಬಸ್ ಬೇಡವೆನ್ನುತ್ತಾರೆ, ಅವರದನ್ನು ವಾಪಸ್ ತೆಗೆದುಕೊಳ್ಳಿ ಇವತ್ತು ಈ ರೀತಿಯ ಕಠಿಣವಾದ ನಿಲುವನ್ನು ತೆಗೆದುಕೊಳ್ಳದೇ ಹೋದರೆ, ಇವತ್ತು ಎಷ್ಟು ಜನ ಸೆಂಟ್ರಲ್ ಸಿಲಬಸ್‌ನಲ್ಲಿ ತಮ್ಮ ಮಕ್ಕಳನ್ನು ಓದಿಸಲು ಸಾಧ್ಯ ಎಂದು ನಮ್ಮ ಶಾಸಕರನ್ನೇ ಕೇಳುತ್ತೇನೆ, ಆ ರೀತಿ ಇವತ್ತು ಬಡವರು ಹೇಗೆ ಓದಲಿಕ್ಕೆ ಸಾಧ್ಯ? ಖಂಡಿತಾ ಸಾಧ್ಯವಿಲ್ಲ ಈ ಸ್ಟೇಟ್ ಸಿಲಬಸ್ ಇರುವ ಶಾಲೆಗಳನ್ನು ಉಳಿಸಿಕೊಳ್ಳುವ ದಿಕ್ಕಿನಲ್ಲಿ ತಾವು ಪ್ರಯತ್ನವನ್ನು ಮಾಡಬೇಕು ಇಲ್ಲದಿದ್ದರೆ ಖಂಡಿತವಾಗಿಯೂ ಬಹಳ ಕಷ್ಟವಾಗುತ್ತದೆ ಮುಂದಿನ ದಿನಗಳಲ್ಲಿ ಬಹಳ ಆರ್ಥಿಕವಾಗಿ ಹಿಂದುಳಿದಿರತಕ್ಕ ಮತ್ತು ಸಾಮಾನ್ಯ ವರ್ಗದ ಜನರು ಓದಿಸುವುದು ಕಷ್ಟವಾಗುತ್ತದೆ ಒಂದು ಕಡೆ 'ಶಿಕ್ಷಣದಿಂದ ಶಕ್ತಿ, ಶಿಕ್ಷಣದಿಂದ ಮುಕ್ತಿ, ಈ ದೇಶದ ಪ್ರಗತಿ" ಎಂದು ಒಂದು ಕಡೆ ಹೇಳುತ್ತೇವೆ ಆದರೆ ಶಿಕ್ಷಣ ಕಲಿಯಲಿಕ್ಕೆ ಬರುವ ವಿದ್ಯಾರ್ಥಿ ಸಮುದಾಯಕ್ಕೆ ಅಥವಾ ಮಕ್ಕಳಿಗೆ ಈ ರೀತಿ ಆಗುತ್ತಿರುವ ಶೋಷಣೆಗೆ ಕಡಿವಾಣವನ್ನು ಹಾಕಬೇಕು ಮತ್ತು ಈ ವ್ಯವಸ್ಥೆಯ ಬಗ್ಗೆ ಮುಂದಿನ ಕ್ರಮವನ್ನು ಏನು ತೆಗೆದುಕೊಳ್ಳುತ್ತೀರಿ, ಇದಕ್ಕೆ ಕಡಿವಾಣವನ್ನು ಹಾಕಲಿಕ್ಕೇ ಪಿಯುಸಿ ಅಡ್ಮಿಷನ್‌ಗೆ ಸೆಂಟ್ರಲ್ ಅಡ್ಮಿಷನ್ ಸಿಸ್ಟಂ ಆಗಲೇಬೇಕು ಮತ್ತೆ ಪ್ರಾಥಮಿಕ ಶಿಕ್ಷಣದ ಲೋಕಲ್ ಮಾನಿಟರಿಂಗ್ ಕಮಿಟಿಯಾಗಲೇಬೇಕು, ಮತ್ತು ಅವರೇನು ಹಣವನ್ನು ಇವತ್ತು ದುಂದುವೆಚ್ಚ ಮಾಡುತ್ತಾರೆ, ಅಥವಾ ಬೇರೆ ರೀತಿ ಅವರು ಕಲೆಕ್ಟ್ ಮಾಡಿ ಅವರು ಆಸ್ತಿ ಕೊಂಡುಕೊಳ್ಳುವುದಕ್ಕೆ ಅಥವಾ ಇವರು ವಿದೇಶಿ ಪ್ರವಾಸ ಮಾಡುವುದಕ್ಕೆ ಮತ್ತೊಂದು ಮಗದೊಂದಕ್ಕ ಖರ್ಚು ಮಾಡುವುದಕ್ಕೆ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ಮಾಡುತ್ತಿವೆ, ಅದಕ್ಕೆ ಕಡಿವಾಣವನ್ನು ಹಾಕಬೇಕಾದರೆ ಅವರಿಗೆ ಬರುವ ಹಣ, ಖರ್ಚು ಮಾಡುವ ಹಣ ಇದನ್ನು ಪಾರದರ್ಶಕವಾಗಿ ಇಡುವ ರೀತಿ ಆಡಿಟಿಂಗ್ ಅವರಿಂದ ಆಗಬಾರದು ಅದು ಪ್ರತ್ಯೇಕವಾಗಿ ನಮ್ಮ ಚಾರ್ಟರ್ಡ್ ಅಕೌಂಟೆಂಟ್ ಕಡೆಯಿಂದಲೇ ಆಗಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಿ ಸಂಬಂಧಪಟ್ಟವರು ಇದರ ಬಗ್ಗೆ ಬೆಳಕನ್ನು ಚೆಲ್ಲಿ ಭರವಸೆಯನ್ನು ಕೊಡಬೇಕೆಂದು ನಾನು ಆಗ್ರಹಿಸುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ

ಅಧ್ಯಕ್ಷರು ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು

ಶ್ರೀ ವಾಟಾಳ್ ನಾಗರಾಜ್ ತಾವೇನು ಸದನಕ್ಕೆ ಭರವಸೆಯನ್ನು ಕೊಟ್ಟಿದ್ದಿರಿ, ಮಾನ್ಯ ಮುಖ್ಯಮಂತ್ರಿಗಳು ಬಂದನಂತರ

ಅಧ್ಯಕ್ಷರು ಕೊಡಿಸುತ್ತೇನೆ ಮೊದಲು ಆ ಚರ್ಚೆಗೆ ಉತ್ತರ ಕೊಡಲಿ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇನೆ ದಯಮಾಡಿ ತಾವು ಕುಳಿತುಕೊಳ್ಳಬೇಕು

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದ ನರೇಂದ್ರಬಾಬುರವರು ಅನೇಕ ವಿಷಯಗಳನ್ನು ಹೇಳಿದ್ದಾರೆ ಸರ್ಕಾರ ಇವತ್ತಿನ ದಿವಸ ಎಲ್ಲರಿಗೂ ವಿದ್ಯೆಯನ್ನು ಕೊಡುವುದಕ್ಕಾಗುವುದಿಲ್ಲ ಅದಕ್ಕೆ ನಾವು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನಾವು ಪರವಾನಗಿಯನ್ನು ಕೊಡುತ್ತಿದ್ದೇವೆ ಕೆಲವು ಖಾಸಗಿ ಸಂಸ್ಥೆಗಳು ಚೆನ್ನಾಗಿ ನಡೆಸುತ್ತಿವೆ, ಕೆಲವಂತೂ ಅಧ್ವಾನವಾಗಿಬಿಟ್ಟಿದೆ, ಅದನ್ನು ನಾನು ಒಪ್ಪುತ್ತೇನೆ ಆದರೆ ಏನಾಗಿದೆ, ಇದಕ್ಕೆ ಮೂಲ ಕಾರಣವೆಂದರೆ ಬೆಂಗಳೂರಿನ ಜನರಿಗೆ ಒಂದು ರೀತಿಯ ಇಂಗ್ಲೀಷ್ ಹುಚ್ಚು ಬಂದುಬಿಟ್ಟಿದೆ ಎಲ್ ಕೆ ಜಿಯಿಂದ ಹಿಡಿದು ಯು ಕೆ ಜಿ ಯಿಂದ ಯಿಡಿದು ನಮ್ಮ ಮಕ್ಕಳೆಲ್ಲಾ ಇಂಗ್ಲೀಷ್ ಕಲಿಯಬೇಕು ಎನ್ನುವ ಹುಚ್ಚು ಬಂದುಬಿಟ್ಟಿದೆ ಈ ರೀತಿ ಇವತ್ತಿನ ದಿವಸ ಈ ಹುಚ್ಚು ಹೋಗಬೇಕು ಕನ್ನಡ ಶಾಲೆಗಳೂ ಚೆನ್ನಾಗಿವೆ ಕನ್ನಡ ಶಾಲೆಗಳಿಗೆ ಕಳುಹಿಸುವುದೇ ಇಲ್ಲ ಒಂದು ವಿಷಯವನ್ನು ಹೇಳುತ್ತೇನೆ, ಮೊನ್ನೆ ತಾನೇ ಸಿಇಟಿ ಪರೀಕ್ಷೆ ನಡೆದು ಫಲಿತಾಂಶವೂ ಕುಡ ಬಂತು ಆ ಫಲಿತಾಂಶವನ್ನು ನೋಡಿದಾಗ ಗ್ರಾಮಾಂತರ ಪ್ರದೇಶದ ಹುಡುಗರೇ ಬಹಳ ರ್ಯಾಂಕ್ ಬಂದಿದ್ದರು ಬೆಂಗಳೂರಿನಲ್ಲಿ prestigious ಕಾಲೇಜುಗಳು ಎಂದು ಇದ್ದಾವಲ್ಲಾ ಈ ಕಾಲೇಜುಗಳಲ್ಲಿ ಓದಿರುವ ರ್ಯಾಂಕ್ ಬಂದಿಲ್ಲ ನಮಗೆ ಏನಾಗಿದೆ ಎಂದರೆ ಕೆಲವರಿಗೆ ಈ ಪ್ರೈವೇಟ್ ಕಾಲೇಜುಗಳು, prestigious ಕಾಲೇಜುಗಳು ಎಂದು ಹೋಗಿ ಅವರಿಗೆ ಒತ್ತಾಯವನ್ನು ಹಾಕಿ ಇವತ್ತಿನ ದಿವಸ ಅಡ್ಮಿಷನನ್ನು ಕೇಳುತ್ತಾರೆ, ಅವರು ಕೇಳಿದಷ್ಟೂ ಹಣವನ್ನೂ ಕೊಟ್ಟುಬಿಡುತ್ತಾರೆ ಆದರೆ ಈಗ ಕಾಯ್ದೆ ಏನಾಗಿದೆ, ಮಾನ್ಯತೆ ಪಡೆದು ಪ್ರಾಥಮಿಕ, ಪೌಢ್ರ ಶಾಲೆ, ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಪೋಷಕರಿಂದ ವಂತಿಗೆಯನ್ನು ವಸೂಲಿ ಮಾಡಬಾರದೆಂದು ಇದೆ 1983ರ ಸೆಕ್ಷನ್ 48ರ ಪ್ರಕಾರ ನಿಷೇಧಿಸಲಾಗಿದೆ ಹಾಗೇನಾದರೂ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು ಕ್ರಿಮಿನಲ್ ಕೇಸುಗಳನ್ನೂ ಹಾಕಬಹುದು ಕೇಸುಗಳನ್ನು ಹಾಕಿದ್ದೇವೆ ಕೇಸುಗಳು ಪೆಂಡಿಂಗ್ ಇವೆ ಇವತ್ತು ನಮ್ಮ ಮಾನ್ಯ ನರೇಂದ್ರಬಾಬುರವರು ಅನೇಕ ವಿಷಯಗಳನ್ನು ಹೇಳಿ, ಸಲಹೆಗಳನ್ನೂ ಕೂಡ ಕೊಟ್ಟಿದಾರೆ ಆ ಸಲಹೆಗಳನ್ನು ನಾನು ಖಂಡಿತವಾಗಿಯೂ ಒಪ್ಪುತ್ತೇನೆ ನಾನು ಹೇಳಿದೆ, ಅನೇಕರು ಬರುತ್ತಾರೆ, ನಮಗೆ ಕ್ರೈಸ್ಟ್ ಕಾಲೇಜಿಗೆ ಪ್ರವೇಶ ಬೇಕೆಂದು ಬರುತ್ತಾರೆ ನಮ್ಮ ಸರ್ಕಾರಿ ಕಾಲೇಜುಗಳಿಗೆ ಅರ್ಜಿಯನ್ನು ಹಾಕಿ ಎಂದರು ಹಾಕುವುದಿಲ್ಲ ಇಲ್ಲಾ ಸಾರ್, ನಮಗೇ ಅಲ್ಲೇ ಬೇಕೆನ್ನುತ್ತಾರೆ ಆ ರೀತಿ ನಾವು ಸಹಾ ಇವತ್ತಿನಾ ದಿವಸ ಸರ್ಕಾರ ನಮ್ಮ ಶಾಲೆಗಳನ್ನು, ನಮ್ಮ ಪ್ರೌಢಶಾಲೆಗಳನ್ನು ಸರಿಯಾದ ರೀತಿಯಲ್ಲಿ ನಡೆಸುವ ರೀತಿಯಲ್ಲಿ ನಾವೂ ಕೂಡ ಪ್ರಯತ್ನವನ್ನು ಮಾಡಬೇಕಾಗಿದೆ ಅಲ್ಲಿ ಗುಣಮಟ್ಟ ಸರಿ ಇಲ್ಲ, ಅದೂ ಒಂದು ಹುಚ್ಚು ನಮ್ಮ ಮಕ್ಕಳನ್ನು ನ್ಯಾಷನಲ್ ಕಾಲೇಜಿಗೆ ಸೇರಿಸಬೇಕು, ಕ್ರೈಸ್ಟ್ ಕಾಲೇಜಿಗೆ ಸೇರಬೇಕು, ಈ ರೀತಿ ಹುಚ್ಚು ಜನಗಳಿಗೆ ನಾವು ಕಡ್ಡಾಯವಾಗಿ ಇವತ್ತಿನ ದಿವಸ ಶಿಕ್ಷೆ ಕೊಡಬೇಕೆಂದು ಇದ್ದರು ಸಹಾ ಕೇಸುಗಳನ್ನು ಹಾಕಿದ್ದೇವೆ ಅದಕ್ಕೆಂದೇ ರೆಗ್ಯುಲೇಟೆಡ್ ಅಧಾರಿಟಿ ಎಂದು ಡೆಪ್ಯುಟಿ ಕಮಿಷನರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಕೂಡ ಮಾಡಿದೆ ಆ ಕಮಿಟಿ ಮುಂದೆ ಯಾರರೂ ಹೋಗುವುದಿಲ್ಲ ಯಾರೂ ದೂರನ್ನು ಕೊಡುವುದಿಲ್ಲ ಈ ರೀತಿ ಇವತ್ತಿನ ದಿವಸ ಈ ಪಿಡುಗು ವ್ಯಾಪಕವಾಗಿದೆ ಅವರು ಹೇಳಿದರು ಈ ವರದಕ್ಷಿಣೆ ಎನ್ನುವುದು ಯಾವ ರೀತಿ ಪಿಡುಗಾಗಿದೆಯೋ ಅದೇ ರೀತಿಯಲ್ಲಿ ಇದು ವ್ಯಾಪಾರೀಕರಣವಾಗಿದೆ ಖಾಸಗಿ ಶಾಲೆಗಳಲ್ಲಿ ವ್ಯಾಪಾರೀಕರಣ ವ್ಯಾಪಾರ, ಹಣ ಕೊಟ್ಟರೆ ಮಾತ್ರ ಸೀಟು ಹಣ ಕೊಡದಿದ್ದರೆ ಸೀಟಿಲ್ಲ ಈ ರಈತಿ ಪ್ರಾಥಮಿಕ, ಪ್ರೌಢಶಾಲೆ, ಆಮೇಲೆ ಎಲ್ ಕೆ ಜಿ, ಯು ಕೆ ಜಿಗೆ ಮೂವತ್ತು ನಲವತ್ತು ಸಾವಿರ ರೂ ಗಳನ್ನು ಕೊಡುತ್ತಾರೆ ಜನರಿಗೆ ಏನಾಗಿದೆ

ಎಂದರೆ ನಮ್ಮ ಮಕ್ಕಳು ಮೊದಲಿನಿಂದಲೂ ಇಂಗ್ಲೀಷ್ ಕಲಿಯಬೇಕು, ಈ ಹುಚ್ಚು ಬಂದುಬಿಟ್ಟಿದೆ ಆದ್ದರಿಮದ ಇದಕ್ಕೆ ಕಡಿವಾಣವನ್ನು ಹಾಕುವುದಕ್ಕೆ ನಾವು ಇವತ್ತಿನ ದಿವಸ ಕಾಯುತ್ತಿದ್ದೇವೆ ಕಾಯ್ದೆ ಪ್ರಕಾರ ವಮತಿಗೆಯನ್ನು ವಸೂಲು ಮಡಿದರೆ ಅದನ್ನು ನಿಷೇಧ ಮಾಡುವುದಕ್ಕೂ ಕಾಯ್ದೆ ಇದೆ ಆ ರೀತಿಯಲ್ಲಿ ಇವತ್ತು ಕೆಲವು ಕೇಸುಗಳನ್ನು ಹಾಕಿವೆ ರೆಗ್ಯುಲೇಟೆಡ್ ಅಧಾರಿಟಿ ಎಂದು ಡೆಪ್ಯುಟಿ ಕಮಿಷನರ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ ಅಲ್ಲಿಯೂ ಸಹಾ ಇವತ್ತಿನ ದಿವಸ ನಮ್ಮ ಅಧಿಕರಿಗಳು ಹೋಗಿ ಕೊಡುತ್ತಾರೆ ಆದರೂ ಸಹ ಅದು ಸಮರ್ಪಕವಾಗಿ ಆಗುತ್ತಿಲ್ಲ ಮಾನ್ಯ ಸದಸ್ಯರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ, ಆ ಸೂಚನೆಗಳನ್ನು ನಾನು ಒಪ್ಪುತ್ತೇನೆ ಹೈಯರ್ ಎಜುಕೇಷನ್ ಬಗ್ಗೆ ಸಿಇಟಿ ಇದೆ, ಅದು ಗೊಂದಲವಾಗಿದೆ ಅದನ್ನು ಬಗೆಹರಿಸುವುದಕ್ಕೆ ಈಗಾಗಲೇ ನಾವು ಸಬ್ ಕಮಿಟಿ ನಾಳೇನೂ ಸೇರುತ್ತಿದ್ದೇವೆ ಆ ರಈತಿಯಲ್ಲಿ ಮಾನ್ಯ ಸದಸ್ಯರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ, ಆ ಸೂಚನೆಗಳನ್ನು ಖಂಡಿತವಾಗಿಯೂ ಕೂಡ ನಾನು ಒಪ್ಪುತ್ತೇನೆ ನೀವು ಬಹಳ ಅಧ್ಯಯನ ಮಾಡಿದ್ದೀರಿ ಆದರೆ ನಮಗೆ ಏನಾಗಿದೆ ಎಂದರೆ ಮಾನ್ಯತೆ ಪಡೆದ ಪ್ರಾಥಮಿಕ, ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳು ಇವತ್ತಿನ ದಿವಸ ವಂತಿಗೆಯನ್ನು ವಸೂಲು ಮಾಡುವ ಹಾಗೆ ಇಲ್ಲ ಆದರೆ ನೀವು ಬಹಳ ಪ್ರಮುಖವಾಗಿ ಒಂದನ್ನು ಹೇಳಿದ್ದಿರಿ ಅಲ್ಲಿ ಕೆಲವು ಖಾಸಗಿ ಶಾಲೆಗಳಲ್ಲಿ ಪ್ರೌಢಶಾಲೆಗಳಲ್ಲಿ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ರೋಸ್ಟರ್ ಸಿಸ್ಟಂನ್ನು ಫಾಲೊ ಮಾಡುತ್ತಿಲ್ಲ, ನಾನು ಅದನ್ನು ಹಂಡ್ರೆಡ್ ಪರ್‌ಸೆಂಟ್ ಒಪ್ಪುತ್ತೇನೆ ಹಿಂದೆ ನಾನೇ ಶಿಕ್ಷಣ ಸಚಿವನಾಗಿದ್ದಾಗ ಕೆಲವು ಕಡೆ ರೋಸ್ಟರ್ ಸಿಸ್ಟಂನ್ನು ಫಾಲೊ ಮಾಡುವುದಿಲ್ಲ, ಅದನ್ನು ನಾವು ಈಗ ಅಪ್ರೂವ್ ಮಾಡಬೇಕಾದರೆ ಅಪಾಯಿಂಟ್‌ಮೆಂಟ್‌ಗಳನ್ನು ಅಪ್ರೂವ್ ಮಾಡಬೇಕೆಂದು ಮೇಲ್ಪಟ್ಟಕ್ಕೆ ಬಂದಾಗ ಡಿಡಿಪಿಐ ಲೆವೆಲ್‌ನಲ್ಲೋ, ಜಾಯಿಂಟ್ ಡೈರೆಕ್ಟರ್, ಡೈರೆಕ್ಟರ್ ಲೆವೆಲ್‌ನಲ್ಲೋ ಬಂದಾಗ ರೋಸ್ಟರ್ ಸಿಸ್ಟಂ ಇಲ್ಲದಿದ್ದರೆ ನೀವು ಅಪಾಯಿಂಟ್‌ಮೆಂಟನ್ನು ಅಪ್ರೂವ್ ಮಾಡಕೂಡದು, ಆ ರೀತಿ ಅವರು ರೋಸ್ಟರ್ ಸಿಸ್ಟಂನ್ನು ಕಡ್ಡಾಯವಾಗಿ ಫಾಲೊ ಮಾಡಲೇಬೇಕು, ಅದನ್ನು ಮಾಡದಿದ್ದರೆ ಅನುದಾನಿತ ಕಾಲೇಜುಗಳಿಗೆ ನಾವು ಗ್ರಾಂಟ್ಸ್‌ನ್ನು ಕೊಡದೇ ಇರುವ ಹಾಗೆ ಖಂಡಿತವಾಗಿಯೂ ಸೂಚನೆಯನ್ನು ಕೊಡುತ್ತೇವೆ ಬೇರೆ ಅನೇಕ ವಿಷಯಗಳನ್ನು ನೀವು ಹೇಳಿದಿರಿ, ನೀವು ಕೊಟ್ಟ ಸಲಹೆಗಳನ್ನು ನಾನು ಖಂಡಿತವಾಗಿಯೂ ಒಪ್ಪುತ್ತೇನೆ ಅದನ್ನು ಕಾರ್ಯಗತ ಮಾಡುವುದಕ್ಕೂ ನಾನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ ಮಾನ್ಯ ಸದಸ್ಯರು ಬಹಳ ವಿಷಯಗಳನ್ನು ಹೇಳಿದ್ದಾರೆ, ಬಹಳ ಚೆನ್ನಾಗಿ ಅವರು ಅಧ್ಯಯನ ಮಾಡಿದ್ದಾರೆ ಆದರೆ ಒಂದು ಏನೆಂದರೆ ಈ ಜನಗಳಲ್ಲಿ ಇಂಗ್ಲೀಷ್ ಕಲಿಯಬೇಕು ದು ಬೆಂಗಳೂರು ಹಾಗೂ ಟೌನ್‌ಗಳಲ್ಲಿ ಬಂದು ಇವತ್ತು ಹಳ್ಳಿಗಳಿಗೂ ಕೂಡ ವ್ಯಾಪಿಸಿಬಿಟ್ಟಿದೆ ನಮ್ಮ ಹಳ್ಳಿಗಳಿಂದ ತಾಲ್ಲೂಕು ಮಟ್ಟಕ್ಕೂ ಬಂದಿದೆ ಆ ರೀತಿಯಲ್ಲಿ ನಾವು ಸರ್ಕಾರ ಇವತ್ತಿನ ದಿವಸ ಪ್ರಾಥಮಿಕ ಶಾಲೆಗಳನ್ನು ಸರಿಯಾದ ರೀತಿಯಲ್ಲಿ ನಡೆಸಬೇಕು ಅಲ್ಲಿ ಸರಿಯಾದ ರೀತಿಯಲ್ಲಿ ಸಿಬ್ಬಂದಿಯನ್ನು ಕೊಟ್ಟು ಶಾಲೆಗಳು ಸರಿಯಾಗಿ ನಡೆದರೆ ಅವರು ಹೋಗುವುದಿಲ್ಲ ನಾನು ಅದನ್ನೇ ಹೇಳುತ್ತೇನೆ, ನೋಡಪ್ಪಾ ನಮ್ಮಲ್ಲಿ ಫಸ್ಟ್ ಗ್ರೇಡ್ ಸೈನ್ಸ್ ಕಾಲೇಜುಗಳಿವೆ, ಅಲ್ಲಿಗೆ ಹೋಗಿ ಎಂದರೂ ಹೋಗುವುದಿಲ್ಲ ನಮಗೆ ಅಲ್ಲೇ ಬೇಕೆನ್ನುತ್ತಾರೆ ನಮ್ಮಕ್ರೈಸ್ಟ್ ಕಾಲೇಜು, ನ್ಯಾಷನಲ್ ಕಾಲೇಜು, ಎಂಇಎಸ್ ಕಾಲೇಜುಗಳೇ ಬೇಕೆನ್ನುತ್ತಾರೆ. ಈ ರೀತಿಯಲ್ಲಿ ಸರ್ಕಾರಿ ವತಿಯಿಂದ ಇವತ್ತು ನಡೆಸತಕ್ಕ ಶಾಲೆಗಳು, ಕಾಲೇಜುಗಳು ಸರಿಯಾಗಿ ರೀತಿಯಲ್ಲಿ ನಡೆಸುವುದಕ್ಕೆ ನಾವು ಸರ್ವ ಪ್ರಯತ್ನವನ್ನು ಮಾಡೋಣ ನಿಮ್ಮೆಲ್ಲದ ಸಹಕಾರ ಬೇಕಾಗಿದೆ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಅಧ್ಯಕ್ಷರೆ, ನಿಮಗೆ ಪೂರಕವಾಗಿ ಹೇಳುತ್ತೇನೆ ಈ ಕಾಲೇಜುಗಳಿಗೆ ಬಡವರಿಗೆ ಟ್ಯೂಷನ್ ಫೀ ರೀಇಂಬರ್ಸ್‌ಮೆಂಟ್ ಮಾಡಬೇಕಾಗಿತ್ತು ನಾಲ್ಕು ವರ್ಷದಿಂದ ರೀಇಂಬರ್ಸ್‌ಮೆಂಟ್ ಮಾಡಲಿಲ್ಲ ಫೈನಾನ್ಸ್ ಡಿಪಾರ್ಟಮೆಂಟ್‌ನಲ್ಲಿ ಆ ವಿಚಾರ ಇದೆ ಶಾಲೆಗಳು ಸತ್ತು ಹೋಗಿವೆ ಬಡವರ ಮಕ್ಕಳು ಓದಿರತಕ್ಕ ಟ್ಯೂಷನ್ ಫೀ 50 ಪರ್ಸೆಂಟ್ ರೀಇಂಬರ್ಸ್‌ಮೆಂಟನ್ನು ಎಷ್ಟಫ ಇನ್ಸ್‌ಸ್ಟಿಟ್ಯೂಷನ್‌ಗಳಿಗೆ ಮಾಡಬೇಕಾಗಿತ್ತು ಲಕ್ಷಗಟ್ಟಲೆ ರೂ ಹಣವನ್ನು ವಾಪಸ್ ಕೊಟ್ಟಿಲ್ಲ ಎಸ್‌ಸಿ ಎಸ್‌ಟಿ ಮಕ್ಕಳಿಗೆ, ಬಿಸಿಎಂ ಮಕ್ಕಳಿಗೆ ರೀಇಂಬರ್ಸ್‌ಮೆಂಟ್ ಸರ್ಕಾರದ ಕಡೆಯಿಂದ ಆಗಲಿಲ್ಲ ಇದರಿಂದಾಗಿ ಆ ಮ್ಯಾನೇಜ್‌ಮೆಂಟ್‌ನವರಿಗೆ ಹೊಡೆತ ಬಿದ್ದಿದೆ ಆ ಮ್ಯಾನೇಜ್‌ಮೆಂಟ್‌ನವರು ಇನ್ಸ್‌ಸ್ಟಿಟ್ಯೂಷನ್‌ಗಳನ್ನು ನಡೆಸುವ ಹಾಗೆ ಇಲ್ಲ ಅಪಾಯಿಮೆಂಟ್‌ಗೂ ಹಾಗೆಯೇ ಖಾತಿ ಬಿದ್ದಿದೆ ಅವರಿಗೆ ಅಧಿಕಾರ ಕೊಡುತ್ತಾ ಇಲ್ಲ ಅವರು ಬೇರೆ ಯಾರನ್ನೋ ನೇಮಕ ಮಾಡಿಕೊಂಡು ಪಾರ ಮಾಡಬೇಕಾಗಿದೆ ಅನುದಾನಿತ ಹುದ್ದೆಗಳು ಖಾಲಿ ಬಿದ್ದಿದ್ದಾವೆ ರಿಟೈರ್‌ಮೆಂಟ್ ಆಗಿದ್ದಾವೆ, ಟ್ರಾನ್ಸ್‌ಫರ್ ಆಗಿದ್ದಾವೆ, ಆ ಹುದ್ದೆಗಳನ್ನು ತುಂಬುವುದಕ್ಕೆ ತಾವು ಅವಕಾಶ ಕೊಡಲಿಲ್ಲ ಆ ಇನ್ಸ್‌ಸ್ಟಿಟ್ಯೂಷನ್‌ಗಳನ್ನು ರನ್ ಮಾಡಬೇಕೋ ಬೇಡವೋ? ನಾವೊಂದು ಕಡೆ ಅವರಿಗೆ ಡೊನೇಷನ್ ತೆಗೆದುಕೊಳ್ಳಬೇಡಿ ಎಂದು ಹೇಳಿ ಗುದ್ದುವುದೂ ನಾವೇ ಅವರಿಗೆ ನೀವು ನಿಮ್ಮ ದುಡ್ಡಿನಲ್ಲಿ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಿ ನೀವು ಸಂಸ್ಥೆ ರನ್ ಮಾಡಿ ಎಂದು ಹೇಳಿದರೆ ಯಾರು ಮಾಡುವುದಕ್ಕೆ ಸಾಧ್ಯ ಆಗುತ್ತದೆ? ಎಲ್ಲರೂ ಕೂಡ ಕಮರ್ಷಿಯಲ್ ಆಗಿ ಮಾಡುವಂಥವರು ಇಲ್ಲ ಪ್ರಾಮಾಣಿಕವಾಗಿ ನಡೆಸುವಂತಹ ಇನ್ಸ್‌ಸ್ಟಿಟ್ಯೂಷನ್‌ಗಳಿಗೆ ಇದರಿಂದ ತುಂಬಾ ದೊಡ್ಡ ಹೊಡೆತ ಬಿದ್ದಿದೆ ಮಾನ್ಯ ಸಚಿವರು ಈಕಡೆ ದಯವಿಟ್ಟು ಗಮನ ಹರಿಸಬೇಕು ತತ್‌ಕ್ಷಣ ರೀಇಂಬರ್ಸ್‌ಮೆಂಟ್ ಸಿಗಬೇಕು ಬಿಸಿಎಂ ವಿದ್ಯಾರ್ಥಿಗಳಿಗೆ ಟ್ಯೂಷನ್ ಫೀ ರೀಇಂಬರ್ಸ್‌ಮೆಂಟ್ ಏನು ಇದೆ, ನಾಳೆ ನಾಡಿದ್ದರ ಒಳಗೆ ಅದನ್ನು ಕ್ಲಿಯರ್ ಮಾಡಿಸಿ ನಾಲ್ಕು ವರ್ಷದಿಂದ ಇದೆ, ನಿಮಗೆ ಪುಣ್ಯ ಬರುತ್ತದೆ ಇನ್ಸ್‌ಸ್ಟಿಟ್ಯೂಷನ್‌ಗೂ ತುಂಬಾ ಒಳ್ಳೆಯದಾಗುತ್ತದೆ

†ಶ್ರೀ ಎಸ್ ರಾಜೇಂದ್ರನ್ (ಕೆಜಿಎಫ್) ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ವಿಚಾರ ತೆಗೆದುಕೊಂಡು ಬರುತ್ತೇನೆ ಕೆಜಿಎಫ್‌ನಲ್ಲಿ ಗೋಲ್ಡನ್ ವ್ಯಾಲಿ ಎಜ್ಯುಕೇಶನ್ ಟ್ರಸ್ಟ್ ಎಂದು ಇದೆ ನಮ್ಮ ಪರಿಸ್ಥಿತಿ ಸ್ವಲ್ಪ ನೋಡಿ ಅಲ್ಲಿ 2700 ರೂಪಾಯಿಗಳ ಫೀಸ್ ಕಟ್ಟಬೇಕು, ಇಲ್ಲದಿದ್ದರೆ ನಿಮಗೆ ಸೀಟು ಇಲ್ಲ ಎಂದು ಹೇಳುತ್ತಾರೆ ಅದನ್ನು ನಾವು ಒಂದು ದಿವಸ ಸ್ಕಾಲರಿ ಕೊಟ್ಟು ಕಟ್ಟಿರುವಂತಹ ಕಾಲೇಜು ಇದು ಗ್ರಾಂಟ್-ಇನ್-ಏಡ್ ಕಾಲೇಜು ಅಲ್ಲಿನ ಪ್ರೆಸಿಡೆಂಟ್ ಎಕ್ಸ್ ಎಂಎಲ್‌ಎ ನಾಲ್ಕೂವರೆ ವರ್ಷ ನಮ್ಮ ಬಿಜಿಎಂಎಲ್ ಶಾಲೆ ಮುಚ್ಚಿ ಇನ್ನೂ ಸಂಬಳ ಸೆಟಲ್‌ಮೆಂಟ್ ಆಗಿಲ್ಲ, ವಿಆರ್‌ಎಸ್ ಸೆಟಲ್‌ಮೆಂಟ್ ಆಗಿಲ್ಲ ಒಂದು ರೂಪಾಯಿ ಕುಡಿಯುವ ನೀರು ತೆಗೆದುಕೊಳ್ಳುವುದಕ್ಕೆ ಮಕ್ಕಳಿಗೆ ಇಲ್ಲ ಅಂತಹ ಮಕ್ಕಳು ಓದುವುದಕ್ಕೆ 2700 ರೂಪಾಯಿ ಟ್ಯೂಷನ್ ಫೀಸ್ ಇದೆ ಆಯಿತು ಕಟ್ಟುತ್ತೇವೆ ಆದರೆ ಸ್ಕಾಲರ್‌ಶಿಫ್ ಆದರೂ ಬರುತ್ತಲ್ಲಾ ಅದನ್ನು ಡಿಡಕ್ಷನ್ ಮಾಡಿಕೊಳ್ಳಿ ಎಂದರೆ No First you have to pay Rs 2,700/-" ಎಂದು ಹೇಳುತ್ತಾರೆ Can' you just gıve an ınstructıon to the Presıdent, who ıs lootıng that ınstıtutıon? ಅಂಬೇಡ್ಕರ್ ಮೆಡಿಕಲ್ ಕಾಲೇಜಿನಲ್ಲಿ ಯವುನೋ ಒಬ್ಬ ಹಣ ಲೂಟಿ ಮಾಡಿದ್ದಾನೆ ಅಲ್ಲಿ ಅಡ್ಮಿನಿಸ್ಟ್ರೇಟರ್‌ನ್ನು ಸರ್ಕಾರದವರು ಹಾಕಿದ್ದಾರೆ Don't mınd Crores of rupees money, the crımınal

case is going on in the Court But, nobody has taken action ತಾವು 1994ರಲ್ಲಿ ಎಜ್ಯುಕೇಷನ್ ಮಿನಿಸ್ಟರ್ ಆಗಿದ್ದಂತಹ ಕಾಲದಲ್ಲಿ, I brought to your notice ಆ ವಿಚಾರ ನಂತರ ಮಾತನಾಡುತ್ತೇನೆ At present, for 41/2 years, there is no salary for the BGML employees The entire Scheduled Caste people are depending on that Those children cannot able to pay Rs 2,700/- Not even Rs 200 for them ನಾವು ಹೋಗಿ ಕೇಳಿದರೆ ಪೋಲೀಸ್ ಕಂಪ್ಲೈಂಟ್ ಕೊಡುತ್ತಾರೆ ಪೋಲೀಸ್ ಕಂಪ್ ಕೊಟ್ಟ ತಕ್ಷಣ ಲೀಡರ್‌ಗಳೆಲ್ಲಾ ಹೋಗಿ ಗಲಾಟೆ ಮಾಡಬಾರದು ಎನ್ನುತ್ತಾರೆ ನಾನೊಬ್ಬನೇ ಹೋಗುವುದು ಯಾವುದೇ ಬೇರೆ ಲೀಡರ್‌ಗಲು ಹೋಗುವುದಿಲ್ಲ ಅದರಲ್ಲಿ ಎಕ್ಸ್ ಎಂಎಲ್‌ಎ ಸೆಕ್ರೆಟರಿ, ಆಗಿದ್ದಾರೆ ಅವರಿಗೆ ಗೌರವ ಇದೆ ಅವರನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ It is really a burning issue As a Minister, kindly instruct to-day itself and send a note that for the Scheduled Caste BGML employees' children, let them deduct from the scholarship

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ ಕಾನೂನು ಪ್ರಕಾರ ಯಾರು ವಂತಿಕೆಯನ್ನು ಜಾಸ್ತಿ ವಸೂಲು ಮಾಡುತ್ತಾರೆ, ಅವರ ಬಗ್ಗೆ ನಾವು ಕ್ರಮ ಕೈಗೊಳ್ಳುತ್ತೇವೆ ಅವರನ್ನು ಶಿಕ್ಷೆಗೆ ಒಳಪಡಿಸುವುದಕ್ಕೆ ಅವಕಾಶ ಇದೆ ಎಂದು ಹೇಳಿದ್ದೀರಿ ಎಷ್ಟು ಜನರನ್ನು ನೀವು ಇದುವರೆಗೆ ಜೈಲಿಗೆ ಕಳುಹಿಸಿದ್ದೀರಿ? ನನಗೆ ಅನ್ನಿಸುತ್ತದೆ ಒಬ್ಬ ಖಾಸಗಿ ಶಾಲೆಯವನು ಸಿಕ್ಕಾಪಟ್ಟೆ ವಂತಿಕೆ ವಸೂಲು ಮಾಡತಕ್ಕವರ ಬಗ್ಗೆ ನಿಮಗೆ ಗಮನವೇ ಇಲ್ಲ ಇತ್ತೀಚೆಗೆ ಪತ್ರಿಕೆಯಲ್ಲಿ ಬಂದಿದೆ ವಂತಿಕೆಯನ್ನು ಕೊಡಲಾರದೆ ಇಡೀ ಸಂಸಾರವೇ ವಿಷ ತೆಗೆದುಕೊಂಡು ಸತ್ತಿರತಕ್ಕ ವಿಚಾರ ಪತ್ರಿಕೆಯಲ್ಲಿ ಬಂದಿದೆ ಮತ್ತು ಕನ್ನಡ ಮಾಧ್ಯಮದ ಬಗ್ಗೆ ಪ್ರಾಮಾಣಿಕ ಪ್ರಯತ್ನ ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಇಲ್ಲ ಬರೇ ಮಾತನಾಡುತ್ತಿದ್ದೀರೆ ಹೊರತು, ಹೇಳುತ್ತಿದ್ದೀರೇ ಹೊರತು ಎಷ್ಟು ಪರಿಣಾಮಕಾರಿಯಾಗಿ ಮಾಡಬೇಕು ಎಂದು ಇಲ್ಲ ಖಾಸಗಿ ಶಾಲೆಯವರು ದರೋಡೆ ಮಾಡುತ್ತಿದ್ದಾರೆ, ಲೂಟಿ ಮಾಡುತ್ತಿದ್ದಾರೆ ಎಲ್ಲೂ ಸಹ ಬಡ ವಿದ್ಯಾರ್ಥಿಗಳು ಅಲ್ಲಿ ಬದುಕುವುದಕ್ಕೆ ಸಾಧ್ಯ ಇಲ್ಲ ಆ ಪರಿಸ್ಥಿತಿ ನಿರ್ಮಾಣವಾಗಿರುವಾಗ ಇದನ್ನು ನೀವು ಪ್ರಾಮಾಣಿಕವಾಗಿ ಸಮಾಜದ ಪಿಡುಗನ್ನು ಹೋಗಿಸುವ ವ್ಯವಸ್ಥೆ ಮಾಡುವುದಕ್ಕೆ ನಿಮ್ಮಲ್ಲಿ ಕಾನೂನು ಇದೆ ಕಾನೂನು ಇದೆ ಶಿಕ್ಷೆ ಮಾಡುವುದಕ್ಕೆ ಎಂದು ಹೇಳುತ್ತೀರಿ ಯಾರಿಗಾದರೂ ಒಬ್ಬರಿಗೆ ನೀವು ಜೈಲಿಗೆ ಕಳುಹಿಸಿರತಕ್ಕ ಉದಾಹರಣೆ ಇದ್ದರೆ ತಾವು ಹೇಳಿ

ಶ್ರೀ ಡಿ ಮಂಜುನಾಥ (ಉನ್ನತ ಶಿಕ್ಷಣ ಸಚಿವರು) ಎಷ್ಟು ಜನರನ್ನು ಜೈಲಿಗೆ ಕಳುಹಿಸಿದ್ದೀರಿ? ಎಷ್ಟು ಜನರಿಗೆ ಶಿಕ್ಷೆ ಆಯಿತು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ ಈಗ ಏನಾಗಿದೆ ಎಂದರೆ ಹಣ ಕೊಟ್ಟವರು ಯಾರೂ ಸಾಕ್ಷಿ ಹೇಳುವುದಕ್ಕೆ ತಯಾರು ಇಲ್ಲ ನಾವು ಅನೇಕ ಕಡೆ ವಿಚಾರ ಮಾಡಿದ್ದೇವೆ ಹಣ ಕೊಟ್ಟವರೇ ಸಾಕ್ಷಿ ಹೇಳುವುದಕ್ಕೆ ತಯಾರು ಇಲ್ಲ ಸಾಕ್ಷಿ ಹೇಳದೇ ಇದ್ದರೆ ಕೇಸು ಹೇಗೆ ಆಗುತ್ತದೆ? ಶಿಕ್ಷೆ ಹೇಗೆ ಆಗುತ್ತದೆ ಹೇಳಿ? ನಾನು ಬಹಳ ಜನಗಳಿಂದ, ಎಇ ಓ, ಬಿಇ ಓಗಳಿಂದ ವಿಚಾರ ಮಾಡಿದ್ದೇನೆ ಏನಪ್ಪ ಕೇಸುಗಳನ್ನು ಹಾಕಿದ್ದು ಏನಾಯಿತು ಎಂದರೆ ಸಾರ್ ಸಾಕ್ಷಿನೇ ಹೇಳುವುದಿಲ್ಲ ಎನ್ನುತ್ತಾರೆ ಹಣ ಕೊಟ್ಟರು ಕೊಟ್ಟೇ ಇಲ್ಲ ಎನ್ನುತ್ತಾರೆ ಏನು ಮಾಡುವುದು ಹೇಳಿ? ನೀವು ಹೇಳಿದ್ದಕ್ಕೆ ನನ್ನ ಗಮನಕ್ಕೆ ಬಂದಿದೆ ಏಕೆಂದರೆ ಅಲ್ಲಿ ಮಕ್ಕಳಿಗೆ

ತೊಂದರೆ ಇದೆ ಅದಕ್ಕೋಸ್ಕರ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ನೀವು ಒಂದು ಲೆಟರ್ ಕಳುಹಿಸಿಕೊಡಿ ಆಮೇಲೆ ಮತ್ತೊಂದು ವಿಚಾರ, ರೀಇಂಬರ್ಸ್‌ಮೆಂಟ್ ಆಗಿಲ್ಲ ಎನ್ನುವುದು ನನಗೆ ಅದು ಗೊತ್ತಿದೆ ಅದರ ಜೊತೆಗೆ ನೀವೇನು ಹೇಳುತ್ತೀರಿ, ನೇಮಕಾತಿ ಮಾಡಿಕೊಳ್ಳುವುದಕ್ಕೂ ಅವಕಾಶ ಇಲ್ಲ ಎಂದು ಹೇಳಿದ್ದೀರಿ ಹಿಂದೇನೋ ನೇಮಕಾತಿ ಮಾಡಿದ್ದಾರೆ ಸಧ್ಯಕ್ಕೆ ನಿಲ್ಲಿಸಬೇಕೆಂದು ಹೇಳಿದ್ದರಿಂದ ನಿಲ್ಲಿಸಿದ್ದಾರೆ ಅದರಿಂದ ತೊಂದರೆ ಆಗಿದೆ ಈವನ್ ಕ್ಲಾಸ್–4 ಅನ್ನು ನೇಮಕ ಮಾಡಿಕೊಳ್ಳುವ ಹಾಗೆ ಇಲ್ಲ ಆ ರೀತಿಯಲ್ಲಿ ಇದೆ ಅದನ್ನು ನನ್ನ ಗಮನಕ್ಕೆ ತಂದಿದ್ದಾರೆ ಅದರ ಬಗ್ಗೆ ನಾನು ಅಧಿಕಾರಿಗಳನ್ನು ಕರೆಸಿ ನಾನು ವಿಚಾರ ಮಾಡುತ್ತೇನೆ ರೀಇಂಬರ್ಸ್‌ಮೆಂಟ್ ಆಗಬೇಕು ಶೆಡ್ಯೂಲ್ಡ್ ಕಾಸ್ಟ್ ಸ್ಕಾಲರ್‌ಶಿಪ್ ಸಹ ಕೊಟ್ಟಿಲ್ಲ ಅದನ್ನೆಲ್ಲಾ ವಿಚಾರ ಮಾಡಿ ಆ ಮಕ್ಕಳಿಗೆ ಅನುಕೂಲ ಮಾಡುವುದಕ್ಕೆ ಪ್ರಯತ್ನ ಮಾಡೋಣ ಒಟ್ಟಿನಲ್ಲಿ ಶಿಕ್ಷಣ ವ್ಯಾಪಾರೀಕರನ ಆಗಿದೆ ಎಂದು ನಾನೇ ಹೇಳಿದೆ ಈಗ ಏನಾಗಿದೆ ಎಂದರೆ ಎಲ್ಲಾ ವ್ಯಾಪಾರೀಕರಣ ಆಗಿದೆ ಈ ರೀತಿಯಲ್ಲಿ ಅದರಲ್ಲೂ ಸಿಟ್‌ಗಳಲ್ಲಿ ವಿಪರೀತ ಆಗಿದೆ ಆದರೆ ಏನಾಗಿದೆ ಜನ ದುಡ್ಡು ಕೊಟ್ಟೇ ಅಲ್ಲಿ ಹೋಗುತ್ತಾರೆ ಜನ ನಾವು ದುಡ್ಡು ಕೊಡುತ್ತೇವೆ ಸೀಟು ಕೊಡಿ ಎಂದು ಹೋಗುತ್ತಾರೆ ಆಮೇಲೆ ಸಾಕ್ಷಿಹೇಳುವುದಕ್ಕೆ ಯಾರೂ ಬರುವುದಿಲ್ಲ ಈ ಪರಿಸ್ಥಿತಿ ಇದೆ ಅದಕ್ಕೋಸ್ಕರವೇ ಇದರ ಒಂದು ದೊಡ್ಡ ಚರ್ಚೆ ಆಗಬೇಕು ಇದರ ಬಗ್ಗೆ ಒಂದು ಚರ್ಚೆ ಮಾಡೋಣ ಒಂದು ಸಂಕಿರನ ಮಾಡೋಣ ನಮ್ಮ ಶಾಸಕರು, ನಾವು, ಕೆಲವು ಎಜ್ಯುಕೇಷನಿಸ್ಟ್ ಅವರನ್ನು ಕರೆಸಿ ಒಂದು ದೊಡ್ಡ ಸಂಕಿರಣ ಮಾಡಿ ಏನಾದರು ಒಮದು ಪರಿಹಾರ ಮಾಡಬೇಕಾಗುತ್ತದೆ ಇಲ್ಲದಿದ್ದರೆ ಈ ಪಿಡುಗು ಹೋಗುವುದಿಲ್ಲ ವರದಕ್ಷಿಣ ಪಿಡುಗಿನ ತರಹ ಇದು ಆಗಬಹುದು ಅದಕ್ಕೋಸ್ಕರ ನಾನು ಇವತ್ತು ರೋಚನೆ ಮಾಡುತ್ತಿದೆ ನಮ್ಮ ಕೆಲವು ಶಾಸಕರು, ಟೀಚರ್ಸ್ ಕಾನ್ಸ್‌ಸ್ಟಿಟ್ಯುಯೆನ್ಸಿಯಿಂದ ಬಂದವರು, ಗ್ರಾಜ್ಯುಯೇಟ್ ಕಾನ್ಸ್‌ಸ್ಟಿಟ್ಯುಯೆನ್ಸಿಯಿಂದ ಬಂದವರು, ಅದರ ಜೊತೆಗೆ ಕೆಲವು ಎಜ್ಯುಕೇಷನಿಸ್ಟ್, ನಾವೆಲ್ಲಾ ಸೇರಿಕೊಂಡು ಒಂದು ಸಂಕಿರಣ ನಡೆಸಿ ಇದರ ಬಗ್ಗೆ ಏನಾದರು ಒಂದು ಕ್ರಮ ತೆಗೆದುಕೊಳ್ಳದಿದ್ದರೆ ಈ ಪಿಡುಗನ್ನು ಕಾನೂನು ಪ್ರಕಾರ ಮಾಡುವುದಕ್ಕೆ ಆಗುವುದಿಲ್ಲ ಕಾನುನು ಪ್ರಕಾರ ಶಿಕ್ಷೆ ಇವೆ ಆದರೆ ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಯಾರಿಗೂ ಶಿಕ್ಷೆ ಆಗಿಲ್ಲ ದುಡ್ಡು ಕೊಟ್ಟವರೇ ನಾವು ಕೊಟ್ಟಿದ್ದೇವೆಂದು ಸಾಕ್ಷಿ ಹೇಲುವುದಿಲ್ಲ ಏಕೆಂದರೆ ಮಕ್ಕಳಿಗೆ ತೊಂದರೆ ಆಗುತ್ತದೆ, ಯಾವುದೋ ಒಂದು ಉದ್ದೇಶ ಇರಬಹುದು ಈ ರೀತಿಯಲ್ಲಿ ಇವತ್ತಿನ ದಿವಸ ಸಾರ್ವಜನಿಕರು ಇದರ ಬಗ್ಗೆ ಗಮನ ಹರಿಸಬೇಕು ವಿದ್ಯೆಯನ್ನು ಸರ್ಕಾರವೇ ಎಲ್ಲರಿಗೂ ಕೊಡುವುದಕ್ಕೆ ಆಗುವುದಿಲ್ಲ ಎಂದು ಪರವಾನಗಿಯನ್ನು ಅವರಿಗೆ ಕೊಟ್ಟಿದ್ದೇವೆ ಪರವಾನಗಿ ಕೊಟ್ಟಿದ್ದರೂ ಸಹಿತ ಇವತ್ತಿನ ದಿವಸ ಕೆಲವು ವಿದ್ಯಾ ಸಂಸ್ಥೆಗಳು ಚೆನ್ನಾಗಿ ಇದ್ದಾವೆ 70–80ರಿಂದ ಪರ್ಸೆಂಟ್ ಸಂಸ್ಥೆಗಳು ಸರಿ ಇಲ್ಲ ಇವೆಲ್ಲಾ ಆಗಿರುವಾಗ ಇವೆಲ್ಲಾ ವಂತಿಕೆಯವರೂ ವ್ಯಾಪಾರೀಕರಣದವರೇ ಆದ್ದರಿಂದ ಇದಕ್ಕೆ ಕಡಿವಾಣ ಹಾಕುವುದಕ್ಕೆ, ಒಂದು ಮಾರ್ಗ ಏನು ಎಂದರೆ ಸಾರ್ವಜನಿಕರ ಸಹಕಾರವೂ ಬೇಕಾಗಿದೆ ಅದರ ಜೊತೆಗೆ ನಾನು ಒಂದು ದೊಡ್ಡ ಸಂಕಿರನ ಮಾಡಿ ಇದರ ಬಗ್ಗೆ ಏನಾದರೂ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡೋಣ ಹೈಯರ್ ಎಜ್ಯುಕೇಷನ್ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದರು ಈಗಾಗಲೇ ಸಿಇಟಿ ನಿಗದಿ ಮಾಡಿರುವುದು ನಮಗೆ ಅನಿಸುವುದೂ ಸಹ ಅದು ಜಾಸ್ತಿ ಆಗಿದೆ ಇವತ್ತಿನ ದಿವಸ ಬಡ ಮಕ್ಕಳು ಇಂಜಿನಿಯರಿಂಗ್ ಓದಬೇಕಾದರೆ 30 ಸಾವಿರರೂಪಾಯಿ ಕೊಡಬೇಕೆಂದರೆ ಕಷ್ಟ ಇದೆ ಆದರೆ ಏನು ಮಾಡುವುದು? ಕೋರ್ಟ್ ಡೈರೆಕ್ಷನ್

ಇದೆ ಆದರೂ ಸಹ ನಾವು ಸಬ್ ಕಮಿಟಿಯಲ್ಲಿ ಮತ್ತೆ ಒಂದು ತೀರ್ಮಾನ ಮಾಡಿ ಏನಾದರು ಒಂದು ಪರಿಹಾರ ಕಂಡು ಹಿಡಿಯೋಣ ಎಂದು ಸಲಹೆಗಳನ್ನು ನಾನೀನ ನೋಟ್ ಮಾಡಿಕೊಂಡಿದ್ದೇನೆ ಖಂಡಿತವಾಗಿಯೂ ನಿಮ್ಮ ಸಲಹೆಗಳು ಒಳ್ಳೆಯವು ಇದೆ ನಿಮ್ಮ ಸಲಹೆಗಳನ್ನು ನಾನು ತೆಗೆದುಕೊಂಡು ಇವತ್ತಿನ ದಿವಸ ಕಾರ್ಯೋನ್ಮುಖರಾಗುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ

ಶ್ರೀ ಎಸ್ ಟಿ ಸೋಮಶೇಖರ್ (ಕೃಷ್ಣರಾಜ) ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ಒಂದು ವಿನಂತಿ ಇದೆ ಈಗ ವರ್ಷ ನಾಲ್ಕೂ ಸರ್ಕಾರಿ ಶಾಲೆಗಳನ್ನು ಕೃಷ್ಣರಾಜ ಕ್ಷೇತ್ರ, ಮೈಸೂರು ನಗರದಲ್ಲಿ ಮುಚ್ಚಿದ್ದಾರೆ ಇದಕ್ಕೆ ಕಾರಣ ಅಲ್ಲಿ ಸರಿಯಾದಂತಹ ಒಂದು ಶಿಕ್ಷಣ ವ್ಯವಸ್ಥೆ ಇಲ್ಲದೇ ಇರತಕ್ಕದ್ದು ಅದಕ್ಕಿಂತ ಹೆಚ್ಚಾಗಿ ಖಾಸಗಿ ಶಾಲೆಗಳ ಪಿಡುಗು ಹೆಚ್ಚಾಗಿ ಎಲ್ಲಾ ಕಡೆಗೆ ಕೂಡ ಖಾಸಗಿ ಶಾಲೆಗಳನ್ನು ತೆಗೆದು ಅಲ್ಲಿ ಇಂಗ್ಲೀಷ್‌ನ ಪಾರ ಪ್ರವಚನದ ವ್ಯಾಮೋಹದಿಂದ ಆ ಕಡೆಗೆ ಹೋಗುತ್ತಿದ್ದಾರೆ ನನ್ನ ಸಲಹೆ ಏನೆಂದರೆ ಒಂದನೇ ತರಗತಿಯಿಂದ ಇಂಗ್ಲೀಷ್ ಅನ್ನು ಒಂದು ಸಬ್ಜೆಕ್ಟಾಗಿ ಪ್ರಾರಂಭ ಆದರೆ ಒಳ್ಳೆಯದು ನಾನು ಮಾಧ್ಯಮ ಎಂದು ಹೇಳುತ್ತಿಲ್ಲ ಸರ್ಕಾರಿ ಶಾಲೆಗಳಲ್ಲೂ ಒಂದನೇ ತರಗತಿಯಿಂದ ಇಂಗ್ಲೀಷ್‌ನ್ನು ಕಲಿಸತಕ್ಕ ಒಂದು ವ್ಯವಸ್ಥೆ ಆದಾಗ ಈ ಸರ್ಕಾರಿ ಶಾಲೆಗಳು ಮುಚ್ಚತಕ್ಕ ವ್ಯವಸ್ಥೆ ಕಡಿಮೆ ಆಗುತ್ತದೆ ಆದ್ದರಿಂದ ಒಂದನೇ ತರಗತಿಯಿಂದ ಇಂಗ್ಲೀಷನ್ನೂ ಸಹ ಒಂದು ಭಾಷೆಯಾಗಿ ಕಲಿಸುವುದರಿಂದ ಸರ್ಕಾರಿ ಶಾಲೆಗಳೂ ಮತ್ತೆ ನಡೆಯಲಿಕ್ಕೆ ಅವಕಾಶ ಆಗುತ್ತದೆ ಇದರ ಕಡೆಗೆ ಸರ್ಕಾರ ಗಮನ ಕೊಡಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಡಿ ಮಂಜುನಾಥ್ ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ ಏಕೆಂದರೆ ಈಗ ಏನಾಗಿದೆ ಎಂದರೆ ಸರ್ಕಾರಿ ಶಾಲೆ ಇರುವ ಹತ್ತಿರದಲ್ಲಿಯೇ ಇನ್ನೊಂದು ಇಂಗ್ಲೀಷ್ ಶಾಲೆ ಇದ್ದು ಬಿಟ್ಟರೆ ಜನ ಮಕ್ಕಳನ್ನು ಅಲ್ಲಿಗೇ ಸೇರಿಸುತ್ತಾರೆ ನಾನು ಹೇಳಿದೆನಲ್ಲಾ ಜನರಿಗೆ ಇಂಗ್ಲೀಷ್ ಹುಚ್ಚು ಹೋಗಿಲ್ಲ ಎಂದು ಪ್ರಾಥಮಿಕ ಶಾಲೆಗಳಲ್ಲಿ ನುರಿತ ಉಪಾಧ್ಯಾಯರಿರುವುದರಿಂದ ಅಲ್ಲಿ ಆಂಗ್ಲ ಮಾಧ್ಯಮದ ಪಾರ–ಪ್ರವಚನ ನಡೆಸಬೇಕೆಂದು ತಾವು ನೀಡಿರುವ ಸಲಹೆಯನ್ನು ಗಮನಿಸಿ, ಆ ಕುರಿತು ಯೋಚನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ

2 00 ಪಿ ಎಂ

†ಶ್ರೀ ನೆಲ ನರೇಂದ್ರಬಾಬು (ರಾಜಾಜಿನಗರ) ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಶಿಕ್ಷಣ ಸಚಿವರಲ್ಲಿ ಒಂದು ಸ್ಪಷ್ಟೀಕರಣ ಬಯಸುವುದೇನೆಂದರೆ, ಕಟ್ಟಡದ ನಿಧಿಗೆ ಇಲ್ಲವೇ ಬೇರೊಂದು ಉದ್ದೇಶಕ್ಕೆ ಸಾರ್ವಜನಿಕರಿಂದ ಶೇಖರಿಸಿದ ಹಣಕ್ಕೆ external auditing ಅಥವಾ ಯಾವ ರೀತಿ ಬೇರೆ ಬೇರೆ ಬ್ಯಾಂಕುಗಳಲ್ಲಿ, ಸಂಸ್ಥೆಗಳಲ್ಲಿ, ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಡಿಟಿಂಗ್ ಮಾಡಿ ಬಹಿರಂಗಗೊಳಿಸುತ್ತಾರೋ, ಆ ರೀತಿಯ ಪದ್ಧತಿ ಜಾರಿಗೊಳಿಸುವ ಬಗ್ಗೆ ತಾವು ಸ್ಪಷ್ಟೀಕರಣ ನೀಡಬೇಕು. ಎರಡನೆಯದಾಗಿ, ದಿನಾಂಕ 28 3 2003ರಂದು ಉಭಯ ಸದನಗಳಲ್ಲಿ ಕರ್ನಾಟಕ ವಿಧಾನಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ಸಮಿತಿಯು ಮಂಡಿಸಿರುವ ವರದಿ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ? ಮೂರನೆಯದಾಗಿ, ಸರ್ಕಾರಿ ಮತ್ತು ಮಹಾನಗರ ಪಾಲಿಕೆ ಶಾಲೆಗಳಿಗೆ ಹೋಗಲು ಹಿಂಜರಿಯುತ್ತಿರುತ್ತಾರೆ ಎಂದು ಹೇಳುತ್ತೀರಿ ತಮ್ಮ ಗಮನಕ್ಕೆ ತರುವುದಾದರೆ, ಇವೊತ್ತು ಬೆಂಗಳೂರು ಮಹಾನಗರ ಪಾಲಿಕೆ ಕಾಲೇಜುಗಳಲ್ಲಿ ಪಿಯುಸಿಗೆ ಪ್ರವೇಶ ಸಿಗುತ್ತಿಲ್ಲ ನಾನು ಒಬ್ಬ ಕಾರ್ಪೊರೇಟರ್ ಆಗಿದ್ದಾಗ ನನಗಾಗಿರುವ ಅನುಭವವೇನೆಂದರೆ, ಇವೊತ್ತು ವಿಜಯನಗರದ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಮೊದಲ ವರ್ಷದ ಬಿ ಕಾಂಗೆ ಪ್ರವೇಶವಕಾಶ ಸಿಗುತ್ತಿಲ್ಲ 'ಇಲ್ಲಿ ಸೀಟು

ಸಿಗುತ್ತಿಲ್ಲ' ವೆಂದು ಹೇಳಿದಾಗ 'ಏನು ಮಾಡುವುದು? ಹೇಳಿ' ಎಂದೆನ್ನುತ್ತೇವೆ ಏಕೆಂದರೆ, ಅಲ್ಲಿಯೂ ಮೆರಿಟ್ ಇದ್ದು, ಸೀಟುಗಳು ಮುಗಿದು ಹೋಗಿರುವುದರಿಂದ ಅವರು ಅನಿವಾರ್ಯವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮೊರೆ ಹೋಗಬೇಕಾಗಿದೆ ಆದರೆ, ಖಾಸಗಿ ಶಿಕ್ಷಣ ಸಂಸ್ಥೆಗಳು ನಿಗದಿಪಡಿಸಿದ ಹಣವನ್ನು ಅವರಿಂದ ಭರಿಸಲು ಸಾಧ್ಯವಾಗುತ್ತಿಲ್ಲ ಅದಕಾರಣ, ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಇವೊತ್ತು ನಾನು ಕಾರ್ಪೊರೇಷನ್ ಶಾಲೆಗಳಿಂದ ಅಂಕಿ-ಅಂಶಗಳನ್ನು ತರಿಸಿ ನೋಡಿದೆ ಎಸ್ಎಸ್ಎಲ್ಸಿ ಪಾಸಾದ ಬಳಿಕ ಪಿಯುಸಿ ಪ್ರವೇಶಕ್ಕೆ ಶೇಕಡ 20ರಷ್ಟು ಬೇಡಿಕೆ ಜಾಸ್ತಿಯಾಗಿದೆ ಪಿಯುಸಿ ಪ್ರವೇಶಾವಕಾಶಕ್ಕೆ ಇವೊತ್ತು ಸೀಟು ಸಿಗುತ್ತಿಲ್ಲ ಶಾಲೆಗಳಲ್ಲಿ ಇನ್ನೊಂದು ತರಗತಿ ತೆರೆಯಲು ಹಿಂಜರಿಯುತ್ತಾರೆ ಮತ್ತು ದ್ವಿತೀಯ ಪಿಯುಸಿ(ಕಾಮರ್ಸ್) ಪಾಸಾದ ಬಳಿಕ ಬಿ ಕಾಂ ಗೆ ಅನಿವಾರ್ಯವಾಗಿ ಸೇರಬೇಕಾಗುತ್ತದೆ ಪಿಯುಸಿ ಸೈನ್ಸ್ ವಿಷಯದಲ್ಲಿ ಪಾಸಾದರೆ ಪ್ರೊಫೆಷನಲ್ ಕೋರ್ಸ್ಗ್ ಹೋಗಬಹುದು ಆಸರೆ, ದ್ವಿತೀಯ ಪಿಯುಸಿ(ಕಾಮರ್ಸ್) ಪಾಸಾದ ಬಳಿಕ ಅನಿವಾರ್ಯವಾಗಿ ಬಿ ಕಾಂಗೆ ಹೋಗಬೇಕು ಪಿಯುಸಿಯಲ್ಲಿ ನಾಲ್ಕು ತರಗತಿಗಳಿದ್ದರೆ, ಬಿ ಕಾಂ ನಲ್ಲಿ ಮೂರು ತರಗತಿಗಳಲ್ಲಿರುವ ವಿದ್ಯಾರ್ಥಿಗಳು ಇವೊತ್ತು ಪಾಸಾದರೆ ಅಲ್ಲಿ ಅಕಾಮಡೇಷನ್ ಸಿಗುವುದು ಒಂದೇ ಸೆಕ್ಷನ್ಗೆ ಪರಿಸ್ಥಿತಿ ಹೀಗಿರುವುದರಿಂದ ವಿದ್ಯಾರ್ಥಿಗಳು ಅನಿವಾರ್ಯವಾಗಿ ಬೇರೆ ಕಾಲೇಜುಗಳಿಗೆ ಹೋಗಬೇಕಾಗುತ್ತದೆ ಈ ರೀತಿಯಾಗಿ ಕೆಲವು ಕಾಲೇಜುಗಳವರು ತರಗತಿಗಳನ್ನು ಕಡಿಮೆ ಮಾಡಿಕೊಂಡು artificial demand ಸೃಷ್ಟಿಸುತ್ತಿರುವುದನ್ನು ನೋಡುತ್ತಿದ್ದೇವೆ ಇದಕ್ಕೆ ಕಡಿವಾಣ ಹಾಕಲು ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ? ತಾವು ಆಡಿಟಿಂಗ್ ಬಗ್ಗೆ ಸ್ಪಷ್ಟೀಕರಣ ನೀಡಿದರೆ, 'ನಾವು ಕೊಟ್ಟ ಹಣದಲ್ಲಿ ಮೇಷ್ಟಿಗೆ ಸಂಬಳ ಕೊಡುತ್ತಾರೆ, ಕಟ್ಟಡಕ್ಕೆ ಉಪಯೋಗಿಸುತ್ತಾರೆ, ಕಂಪ್ಯೂಟರ್ ಖರೀದಿಸುವುದಕ್ಕೆ ಕೊಡುತ್ತಾರೆ ನಾವು ಕೊಟ್ಟ ಹಣ ಪ್ರಯೋಜನವಾಯಿತು, ಸಾರ್ಥಕವಾಯಿತು, ಪರವಾಗಿಲ್ಲ' ಎಂಬ ಪರವಾಗಿಲ್ಲ' ಎಂಬ ಮನೋಭಾವನೆ ಜನರಲ್ಲಿ ಉಂಟಾಗುತ್ತದೆ ಎಲ್ಲಿಯೋ ಒಂದು ಕಡೆ ಬಿಲ್ ಕೊಡುವಾಗ ಹೇಳುತ್ತಾರೆ 'ಈ ಶಿಕ್ಷಣ ಸಂಸ್ಥೆಗೆಂದು ಕೊಡಬೇಡಿ, voluntary donation ಎಂದು ಕೊಡಿ, ಯಾವುದೋ ಒಂದು ಸಂಸ್ಥೆಗೆಂದು ಕೊಡಿ' ಎನ್ನುತ್ತಾರೆ ಈ ಬಗ್ಗೆ ಪರಿಶೀಲಿಸಲು ಮಾನ್ಯ ಸಚಿವರು, ಶಾಸಕರು ಖುದ್ದಾಗಿ ಹೋಗುವುದು ಬೇಡ ಈ ರೀತಿ ಗುಪ್ತವಾಗಿ ಜರುಗುತ್ತಿರುವ ಹಲವಾರು ಪ್ರಕರಣಗಳು ಇವೊತ್ತು ಬೆಳಕಿಗೆ ಬಂದಿದೆ ಈ ಹಿಂದೆ ಸಚಿವರಾಗಿದ್ದಂಥ ಸನ್ಮಾನ್ಯ ರಾಮಲಿಂಗಾರೆಡ್ಡಿಯವರು ಸದನದಲ್ಲಿ ಈ ಬಗ್ಗೆ ಏನೇನು ಪ್ರಸ್ತಾಪಿಸಿದರು, ಏನೇನು ಚರ್ಚೆಯಾಯಿತೆಂಬುದನ್ನು ಸಹ ನಾನು ತರಿಸಿ ನೋಡಿದೆ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಹೇಗಾದರೂ ನಾವು ಇದಕ್ಕೆ ಕಡಿವಾಣ ಹಾಕದಿದ್ದರೆ ಖಂಡಿತವಾಗಿಯೂ ಬಡವರು, ಮಧ್ಯಮ ವರ್ಗದವರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಮತ್ತು ವರ್ಗದವರು ಮತ್ತು ಧ್ವನಿ ಇಲ್ಲದ ಜನರಿಗೆ ರೋಸ್ಟರ್ ಸಿಸ್ಟಮ್ನಲ್ಲಿ ಶೇಕಡ 50ರಷ್ಟು ಮೀಸಲಾತಿ ನೀಡಬೇಕೆಂದು ಕಾನೂನು ಹೇಳುವ ರೀತ್ಯಾ ಎಷ್ಟು ಕಡೆಗಳಲ್ಲಿ ಕೊಟ್ಟಿದ್ದೇವೆ? ಇದರ ಬಗ್ಗೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಈ ಕುರಿತು ಕ್ರಮ ತೆಗೆದುಕೊಳ್ಳುವವರೆಗೆ ಶಿಕ್ಷೆ ವಿಧಿಸದೆ ಹೋದರೆ ಅವರಿಗೆ ಭಯ ಬರುವುದಿಲ್ಲ, ಹೇಗೆ ಬೇಕಾದರು ಮಾಡಬಹುದು, 'ನಾವು ಹೇಗೆ ಬೇಕಾದರು ಡಿಕ್ಟೇಟ್ ಮಾಡಬಹುದು' ಎನ್ನುವ ಮನೋಭಾವನೆಯಲ್ಲಿರುವುದರಿಂದ ನಾನು ಈಗಾಗಲೇ ಸಲಹೆ ನೀಡಿದಂತೆ ಪ್ರತಿಯೆಂದು ತಾಲೆಯಲ್ಲೂ ಒಂದು local Monitoring Committeeಯನ್ನು ರಚಿಸಬೇಕು ಇಲ್ಲದಿದ್ದರೆ, ಸಮಿತಿಯನ್ನು ಹೇಗೆ ರಚಿಸಬೇಕು? ಮತ್ತು ಇಬ್ಬರು-ಮೂವರು ಪಾಲಕರಿರುವ ಬಗ್ಗೆ 1983ರ

ಕರ್ನಾಟಕ ಶಿಕ್ಷಣ ಕಾಯ್ದೆಯ ಚಾಪ್ಟರ್ 42ರಲ್ಲಿ ಬಹಳ ಸ್ಪಷ್ಟವಾಗಿ ತಿಳಿಸಲಾಗಿದೆ ಕಾಯ್ದೆಯಲ್ಲಿರುವುದು ಅನುಷ್ಠಾನ ಆಗುತ್ತಾ ಇದೆಯಾ? ಏನು ಮಾಡುತ್ತೀರಿ? ಶಿಕ್ಷಣ ಇಲಾಖಾ ಕಾರ್ಯದರ್ಶಿಯವರು ಏನು ಮಾಡುತ್ತಿದ್ದಾರೆ? ಅವರೊಂದಿಗೆ ಮೊನ್ನೆ ನಾನು ಮಾತನಾಡುತ್ತಾ 'BEOs, DDPIs ಇದನ್ನು ಮಾನಿಟರ್ ಮಾಡುತ್ತಿದ್ದಾರೆಯೇ? ಭೇಟಿ ಕೊಟ್ಟು ರೋಸ್ಟರ್ ಸಿಸ್ಟಮ್ ಅನ್ನು ಪರಿಶೀಲಸುತ್ತಿದ್ದಾರೆಯೇ? ಅವರು ಆಗಿಂದಾಗ್ಗೆ ಸರ್ಕಾರದ ಮೇಲಧಿಕಾರಿಗಳ ಗಮನಕ್ಕೆ ಏಕೆ ತರುವುದಿಲ್ಲ? ಯಾವಾಗಲೋ ಒಮ್ಮೆ ಸದನದಲ್ಲಿ ಪ್ರಸ್ತಾಪಿಸಿದಾಗ ಅಧವಾ ಒಂದು ಸ್ಥಾಯಿ ಸಮಿತಿ ಭೇಟಿ ಕೊಟ್ಟು ತನಿಖೆ ಮಾಡಿದಾಗ ಏಕೆ ಗೊತ್ತಾಗಬೇಕು ಎಂದು ಹೇಳುತ್ತಿದ್ದೆ ಇದರ ಬಗ್ಗೆ ನಾನು ನೊಂದು ಹೇಳುತ್ತಿದ್ದೇನೆ ಸರ್ಕಾರಿ ಶಾಲೆಗಳನ್ನು ನಾವು ಸದೃಢಗೊಳಿಸಬೇಕಾಗುತ್ತದೆ ಸದೃಢಗೊಳಿಸಲು ಹೇಗೆ ಗೊಳಿಸಲು ಸಾಧ್ಯವೆಂದರೆ, ಉದಾಹರಣೆಗೆ, ನನ್ನ ವಿಧಾನಸಭಾ ಕ್ಷೇತ್ರವಾದ ರಾಜಾಜಿನಗರದ ಮಹಾಲಕ್ಷ್ಮಿಪುರಂ ಲೇಔಟ್‌ನಲ್ಲಿ ಖಾಸಗಿ ಕಟ್ಟಡದಲ್ಲೊಂದು ಸರ್ಕಾರಿ ಶಾಲೆ ನಡೆಯುತ್ತಿದೆ ಕೆಳಗಡೆಯ ಕಾರಿಡಾರ್‌ನಲ್ಲಿ, ಮೊನ್ನೆ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರನ್ನು ಭೇಟಿಯಾಗಿ ಹೇಳಿದಾಗ, Your priority is really good ಶಿಕ್ಷಣಕ್ಕೆ ನೀವು ಮೊದಲ ಆದ್ಯತೆ ನೀಡಿದ್ದೀರಿ ಹೇಗಾದರೂ ಮಾಡಿ ಬಿಡಿಎಯಿಂದ ನಿವೇಶನ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡೋಣ' ಎಂಬ ಭರವಸೆ ಕೊಟ್ಟರು ನಿಜವಾಗಿಯೂ ಇದೊಂದು ಸ್ವಾಗತಾರ್ಹವಾದ ಕ್ರಮ ರಾಜಾಜಿನಗರದ ಐದನೇ ಬ್ಲಾಕ್‌ನಲ್ಲಿರುವ ಖಾಸಗಿ ಕಟ್ಟಡದಲ್ಲಿರುವ ಸರ್ಕಾರಿ ಶಾಲೆಯೊಂದರಲ್ಲಿ ಬೆಳಕು ಇಲ್ಲ, ವಿದ್ಯುತ್ ಸೌಲಭ್ಯವಿಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳಿಗಿಂತಲೂ ಹೆಚ್ಚಾಗಿ ಸರ್ಕಾರಿ ಶಾಲೆಗಳಿಗೆ ನಿವೇಶನ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲೆಲ್ಲಿ ಖಾಸಗಿ ಕಟ್ಟಡಗಳಲ್ಲಿ ಸರ್ಕಾರಿ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆಯೋ, ಬೆಳಕು ಮತ್ತು ವಿದ್ಯುತ್ ಸೌಕರ್ಯ ಇಲ್ಲವೋ, ಐದನೇ ಬ್ಲಾಕ್‌ನಲ್ಲಿರುವ ಸರ್ಕಾರಿ ಶಾಲೆಗೆ ಮತ್ತು ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಶಾಲೆಗೆ ಬಿಡಿಎಯಿಂದಾಗಲಿ, ಕಾರ್ಪೊರೇಷನ್‌ನಿಂದಾಗಲಿ ನಿವೇಶನ ಸೌಲಭ್ಯ ಒದಗಿಸಿಕೊಟ್ಟಲ್ಲಿ, ಸ್ವಂತ ಕಟ್ಟಡ ಕಟ್ಟಲು ನಾನು ದಾನಿಯನ್ನು ಗುರ್ತಿಸಿ ಕಟ್ಟಡ ಕಟ್ಟಿಸಿಕೊಡುತ್ತೇನೆ ಆದುದರಿಂದ, ನಿವೇಶನ ಒದಗಿಸಿಕೊಡುವ ಬಗ್ಗೆ ಭರವಸೆ ನೀಡಬೇಕು ಆಡಿಟಿಂಗ್ ಬಗ್ಗೆ ಹೇಳುವುದಾದರೆ, ಎಲ್ಲಾ ತರಹದ Vitamin-M ಬಗ್ಗೆ ಪಾರದರ್ಶಕವಾಗಿದ್ದರೆ ಎಲ್ಲವೂ ಸರಿಹೋಗುತ್ತದೆ, ಸಾರ್ವಜನಿಕರೂ ಒಪ್ಪುತ್ತಾರೆ 'ನಾವು ಕೊಡುತ್ತಿರುವ ಹಣ ಅವರಿಗೆ ನಿಜವಾಗಿಯೂ ಬೇಕಾಗಿದೆ, ಇಲ್ಲದಿದ್ದರೆ, ಅವರು ಮ್ಯಾನೇಜ್‌ಮೆಂಟನ್ನು ನಡೆಸುವುದಕ್ಕಾಗುವುದಿಲ್ಲ' ಎನ್ನುವುದು ಜನರಿಗೆ ಗೊತ್ತಾಗುತ್ತದೆ ದಯವಿಟ್ಟು ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು ಈ ಕುರಿತು ಸರ್ಕಾರ ಮುಂದೆ ಏನು ಮಾಡುತ್ತದೆಂಬುದನ್ನು ತಿಳಿಸಬೇಕು ನಾನು ವೈಸ್ ಚಾನ್ಸಲರ್ ಆದ ಡಾ ತಿಮ್ಮಪ್ಪನವರನ್ನು ಉದ್ದೇಶಿಸಿ, 'ರಾಜಾಜಿನಗರದ ಕೆಎಲ್‌ಇ ಕಾಲೇಜ್‌ನಲ್ಲಿ ಸುಮಾರು 150 ವಿದ್ಯಾರ್ಥಿಗಳು ಜಾಸ್ತಿಯಿರುವುದರಿಂದ ಹೇಗಾದರೂ ಮಡಿ ಇನ್ನೊಂದು ತರಗತಿ ಪ್ರಾರಂಭಿಸಲು ಅನುಮತಿ ಕೊಡಬೇಕು' ಎಂದಾಗ ಸಾಧ್ಯವಿಲ್ಲವೆಂದರು ಬಿಕಾಂ ಪ್ರವೇಶಕ್ಕೆ ಬೇರೆಲ್ಲೂ ಅವರಿಗೆ ಅವಕಾಶ ಸಿಗುತ್ತಿಲ್ಲ ಇಂತಹ ಸಣ್ಣ–ಪುಟ್ಟ ಸಮಸ್ಯೆಗಳನ್ನು ನಿವಾರಿಸಬೇಕಾದರೆ Local Monitoring Committee ಬೇಕಾಗುತ್ತದೆ ಸರ್ಕಾರ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಒಂದು Local Monitoring Committee ರಚಿಸಿದಲ್ಲಿ ಶಾಲೆಗಳಿರಬಹುದು, ಕಾಲೇಜುಗಳಿರಬಹುದು ಆಗ ಒಂದು ಕಾನ್‌ಫಿಡೆನ್ಸ್ ಕ್ರಿಯೇಟ್ ಆಗುತ್ತದೆ ಇಲ್ಲದಿದ್ದರೆ, ಎಲ್ಲಿಯೋ ತೊಂದರೆಯಾದಾಗ, ಕಷ್ಟ

ಬಂದಾಗ, ಸಾಯಂಕಾಲ ಬಂದಾಗ ಸೋರುತ್ತಿದೆ ಎಂದು ಕೊಳ್ಳುತ್ತೇವೆ, ಮತ್ತೆ ಬೆಳಿಗ್ಗೆ ಹೊರಟು ಹೋಗುತ್ತೇವೆ ಶಾಲಾ–ಕಾಲೇಜುಗಳಿಗೆ ಪ್ರವೇಶ ಪ್ರಕ್ರಿಯೆ ಶುರುವಾದಾಗ ನಾವು ಮತ್ತೆ ತಲೆ ಕೆಡಿಸಿಕೊಳ್ಳಬೇಕಾಗುತ್ತದೆ ಆದಕಾರನ, ಇವೊತ್ತು ಸೆಂಟ್ರಲ್ ಅಡ್ಮಿನಿಸ್ಟೇಟಿವ್ ಸಿಸ್ಟಮ್‌ನಲ್ಲಿ ಹೇಗೆ ದೆಹಲಿಯಲ್ಲಿ ಯೂನಿವರ್ಸಿಟಿಯಲ್ಲಿ ಪಿಯುಸಿ ಲೆವೆಲ್‌ನಲ್ಲಿ ಮಾಡಿದ್ದಾರೋ, ಅದೇ ರೀತಿ ರಾಜ್ಯದಲ್ಲಿ ನಾವು ಹೊಸದಾಗಿ ಅಧ್ಯಯನ ಪ್ರಾರಂಭಿಸಿ ಪಿಯುಸಿ ಪ್ರವೇಶಾವಕಾಶಕ್ಕೆ ಅನುಕೂಲ ಮಾಡಿಕೊಡುವಂತಾಗಬೇಕು ನನ್ನ ಅನುಭವದಿಂದ ಇದಕ್ಕೊಂದು ಚಿಕ್ಕ ಉದಾಹರಣೆ ನೀಡುವುದಾದರೆ, ವಿಚಾರ ಸಂಕಿರಣದಲ್ಲಿ ಹಲವಾರು ಜನರೊಂದಿಗೆ ವಿಚಾರ ಮಂಥನ ನಡೆಸಿದಾಗ ಹೊರಹೊಮ್ಮಿದ ವಿಚಾರವೇನೆಂದರೆ, ಬೆಂಗಳೂರನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿ ಅಥವಾ ಯಾವುದೇ ನಗರವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿ, ಒಂದು ಭಾಗದಲ್ಲಿ ಒಂದು ಕಡೆ ಪ್ರವೇಶಕ್ಕೆ ಅರ್ಜಿ ಶುಲ್ಕವೆಂದು ಒಂದು ನೂರು ರೂಪಾಯಿಗಳನ್ನು ಪಾವತಿಸಿದರೆ ಸಾಕು ಬದಲಿಗೆ ಶೇಕಡ 80–90ರಷ್ಟು ಅಂಕಗಳನ್ನು ಗಳಿಸಿಎಉವ ವಿದ್ಯಾರ್ಥಿ 5–6 ಕಡೆಗಳಲ್ಲಿ ಅರ್ಜಿಗಳನ್ನು ಪಡೆದು ಸಲ್ಲಿಸಬೇಕಾದ ಪ್ರಮೇಯ ಬರುವುದಿಲ್ಲ ಮತ್ತು ಅವರಿಗೆ ಪ್ರೈಯಾರಿಟಿ ಸಹ ನಿಗದಿಪಡಿಸಬಹುದು ಮೊದಲನೇ ಕಾಲೇಜಿನಲ್ಲಿ ಯವುದಕ್ಕೆ ಪ್ರಿಪರೆನ್ಸ್ ಬೇಕು? ಎರಡನೆಯ ಕಾಲೇಜಿನಲ್ಲಿ ಯಾವುದಕ್ಕೆ ಪ್ರಿಫರೆನ್ಸ್ ಬೇಕು? ಮೂರನೇಯದು, ನಾಲ್ಕನೆಯದು ಹೀಗೆ ಪ್ರೈಯಾರಿಟಿಯನ್ನು ನಿಗದಿಪಡಿಸಬಹುದಾಗಿದೆ ಆಗ ಏನಾಗುತ್ತದೆಂದರೆ, ಇಪ್ಪತ್ತು ಕಡೆಗಳಲ್ಲಿ ತಂದ ಅರ್ಜಿಗಳಿಗೆ ಇಪ್ಪತ್ತು ಸಲ ದಾಖಾಲಾತಿಗಳನ್ನು ಜೆರಾಕ್ಸ್ ಮಾಡುವುದು, ಶುಲ್ಕ ಕಟ್ಟುವುದು, ಇವರನ್ನು ಶೋಷಣೆಗೊಳಪಡಿಸುವುದು ಮತ್ತು ಹೆಸರು ಬಂತೇ? ಇಲ್ಲವೇ ಎಂಬುದಕ್ಕೆ ಅನೌನ್ಸ್‌ಮೆಂಟ್ ನೋಡುವುದು, ಮುಂತಾದ mental agony, harassment ತಪ್ಪುತ್ತದೆ ಆದಕಾರಣ, ಸನ್ಮಾನ್ಯ ಸಚಿವರು ಇದರ ಬಗ್ಗೆ ಸ್ಪಷ್ಟವಾದ ಒಂದು ನಿಲುವು ತೆಗೆದುಕೊಂಡರೆ, ಶಿಕ್ಷಣ ಕ್ರಾಂತಿಯಿಂದ ಸಮಾಜವನ್ನು ಉದ್ದರಿಸಬೇಕೆಂಬ ಇಡೀ ಸಮುದಾಯದ ನಮ್ಮೆಲ್ಲರ ಕನಸು ಏನಿದೆ, ಮತ್ತು ಶಿಕ್ಷಣವೇ ಶಕ್ತಿ ಎಂದು ಏನು ನಾವು ಕಡೆಯುತ್ತೇವೆ, ಆಗ ಅದಕ್ಕೊಂದು ಅರ್ಥ ಬರುತ್ತದೆ ಈ ದಿಕ್ಕಿನಲ್ಲಿ ನಮ್ಮ ಸರ್ಕಾರ ಈ ಸದನದಲ್ಲಿ ಒಂದು ಸ್ಪಷ್ಟ ನಿಲುವು ತೆಗೆದುಕೊಳ್ಳಲು ತಾವು ಮುಂದಾಗಬೇಕೆಂದು ಮತ್ತು ಆಡಿಟಿಂಗ್ ಬಗ್ಗೆ ಸ್ಪಷ್ಟೀಕರನ ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ

ಅಧ್ಯಕ್ಷರು ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆವರೆಗೆ ಮುಂದೂಡಲಾಗಿದೆ

(ಸದನವು ಮಧ್ಯಾಹ್ನ 2 ಗಂಟೆ 5 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 3 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ 3 27ಕ್ಕೆ ಪ್ರಾರಂಭವಾಯಿತು)

(ಮಾನ್ಯ ಅಧ್ಯಕ್ಷರು ಶ್ರೀ ಕೃಷ್ಣರವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಚರ್ಚೆ

(ಮುಂದುವರಿಸುವುದು)

ವಿಷಯ ರಾಜ್ಯಾದ್ಯಂತ ಶಾಲಾ ಕಾಲೇಜುಗಳಿಗೆ ಪ್ರವೇಶದಲ್ಲಿ ಉಂಟಾಗಿರುವ ತೊಂದರೆ ಬಗ್ಗೆ

†ಶ್ರೀ ಹೆಚ್ ಡಿ. ಬಸವರಾಜು (ವಿರಾಜಪೇಟೆ) ಮಾನ್ಯ ಅಧ್ಯಕ್ಷರೆ, ಇವತ್ತು ರಾಜಾಜಿನಗರದ ಶಾಸಕರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಸರ್ಕಾರಿ ಕಾಲೇಜುಗಳಲ್ಲಿ ದಾಖಲಾತಿಗಳನ್ನು

ನಿಲ್ಲಿಸುವಂತಹ ಪ್ರಕ್ರಿಯೆ ನಡೆಯುತ್ತಿದೆ ದಾಖಲಾತಿಗಳು ಪೂರ್ಣ ಆಗಿ ಹೋಗಿವೆ, ಹೆಚ್ಚುವರಿ ಬಂದಂತಹವರಿಗೆ ಮನೆಗಳಿಗೆ ಕಳುಹಿಸುತ್ತಿದ್ದಾರೆ ಇದರಿಂದ ಕಡು ಬಡ ವಿದ್ಯಾರ್ಥಿಗಳಿಗೆ ತುಮಬ ಅನ್ಯಾಯವಾಗುತ್ತಿದೆ ಎಂದು ಪ್ರಸ್ತಾಪ ಮಾಡಿದ್ದಾರೆ ಇದೇ ಪ್ರಕರಣ ನನ್ನ ತಾಲ್ಲುಕಿನಲ್ಲಿ ಆಗಿದೆ ವಿರಾಜಪೇಟೆ ಸರ್ಕಾರಿ ಕಾಲೇಜಿನಲ್ಲಿ ಕಳೆದ 15 ದಿವಸಗಳಿಂದ ಆಗಿರುವ ವಿಷಯ ಬಹುಶಃ ತಮಗೂ ಕೂಡ ಗೊತ್ತಿರಬಹುದು ವಿರಾಜಪೇಟೆ ಒಂದು ಮೀಸಲು ವಿಧಾನಸಭಾ ಕ್ಷೇತ್ರ ಅಲ್ಲಿ ತೀರಾ ಕಡು ಬಡವರು ಮಾತ್ರಪೇ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಕಾಲೇಜುಗಳಿಗೆ ಹೋಗುವಂಧದ್ದು ಅಲ್ಲಿ ವಿದ್ಯಾರ್ಥಿಗಳು ದಾಖಲಾತಿಗೆ ಹೋದಂತಹ ಸಂದರ್ಭದಲ್ಲಿ ಈಗಾಗಲೇ ದಾಖಲಾತಿ ಪೂರ್ಣ ಆಗಿ ಹೋಗಿವೆ, ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವುದಕ್ಕಾಗುತ್ತಿಲ್ಲ ಅಲ್ಲಿ ಕೊರಡಿಗಳ ಕೊರತೆ ಇದೆ, ಅದೇ ರೀತಿ ಶಿಕ್ಷಕರ ಕೊರತೆ ಇದೆ ಈ ಕೊರತೆಯನ್ನು ತಾವು ಏನಾದರು ನೀಗಿಸಿದರೆ ಏನಾದರೂ ತುಂಬಲಿಕ್ಕೆ ಸಾಧ್ಯವಾಗುತ್ತಿತ್ತೋ ಏನೋ ಅದ್ದರಿಂದ ಈ ಕಾರಣಕ್ಕೋಸ್ಕರ ನಾವು ದಾಖಲಾತಿ ಸಾಧ್ಯವಾಗುತ್ತಿತ್ತೋ ಏನೋ ಆದ್ದರಿಮದ ಈ ಕಾರಣಕ್ಕೋಸ್ಕರ ನಾವು ದಾಖಲಾತಿ ಮಾಡಿಕೊಳ್ಳುವುದಕ್ಕೆ ಆಗುವುತ್ತಿಲ್ಲ ಎಂದು ಬಂದಂತಹ ವಿದ್ಯಾರ್ಥಿಗಳಿಗೆ ವಾಪಸ್ ಕಳುಹಿಸುತ್ತಿದ್ದಾರೆ ಏನು ಸಮಸ್ಯೆ ಆಗಿದೆ ಎಂದರೆ, ಬೇರೆ ಕಾಲೇಜಿಗೆ ಹೋದರೆ ದಾಖಲಾತಿಗೆ ಅಡ್ಮಿಷನ್ ಫೀ ಮತ್ತು ಡೊನೇಷನ್ ಇತ್ಯಾದಿಯಾಗಿ 3,000ರೂ ಯಿಂದ 5,000 ರೂಪಾಯಿವರೆಗೆ ಕಟ್ಟುವಂತಹ ಪರಿಸ್ಥಿತಿ ಬಂದಿದೆ ಈ ಪರಿಸ್ಥಿತಿಯಿಂದಾಗಿ ಆ ವಿದ್ಯಾರ್ಥಿಗಳು ಓದನ್ನು ನಿಲ್ಲಿಸುವಂತಹ ಮಟ್ಟಕ್ಕೆ ಹೋಗಿದ್ದಾರೆ ಆ ದೃಷ್ಟಿಯಿಂದ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ವಿರಾಜಪೇಟೆ ಪದವಿ ಕಾಲೇಜಿನಲ್ಲಿ ಏನು ತೊಂದರೆ ಇದೆ ಅದನ್ನು ಪರಿಹಾರ ಮಾಡಬೇಕು ಪ್ರಾಂಶುಪಾಲರು ಒಂದು ಬೋರ್ಡ್ ಹಾಕಿ ಇಲ್ಲಿ ದಾಖಲಾತಿಗಳನ್ನು ಮಾಡಲಾಗುವುದಿಲ್ಲವೆಂದು ಹೇಳಿದ್ದಾರೆ ಅದನ್ನು ಕೂಡಲೇ ತೆಗೆಬೇಕು ಮಂತ್ರಿಗಳಲ್ಲಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುವುದೇನೆಂದರೆ ಯಾವುದೇ ವಿದ್ಯಾರ್ಥಿಗಳು ಬಂದರೆ ಒಂದು ಸೆಕ್ಷನ್ ಜಾಸ್ತಿ ಆದರೂ ಪರವಾಗಿಲ್ಲ ಅವರೆಲ್ಲರಿಗೂ ದಾಖಲಾತಿ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು ಮತ್ತು ಕೊರಡಿಗಳ ಕೊರತೆಯನ್ನು ನಿವಾರಣೆ ಮಾಡಬೇಕು ಶಿಕ್ಷಕರ ಕೊರತೆ ಏನಿದೆ ಅದನ್ನು ನಿವಾರಣೆ ಮಾಡಲಿಕ್ಕೆ ತಾವು ಏನಾದರೂ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ ಎರಡನೆಯದಾಗಿ, ಕಳೆದ ವಿಧಾನ ಸಭೆ ಸಂದರ್ಭದಲ್ಲಿ ಮಾನ್ಯ ರಮೇಶ್ ಕುಮಾರ್‌ರವರು ಅಧ್ಯಕ್ಷರಾಗಿದ್‌ದರು, ಶಿಕ್ಷಣ ಸಂಸ್ಥೆಗಳಲ್ಲಿ ನಾವು ಏನು ಮೀಸಲಾತಿಗಳನ್ನು ತೆಗೆದುಕೊಂಡು ಬರುತ್ತಿದ್ದೇವೆ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಅವರು ಮಾಡುವಂಧದ್ದನ್ನು ನೋಡಿದ್ದೇವೆ ಆದರೆ ಹಿಂದುಳಿದ ವರ್ಗಕ್ಕೆ ಸಂಬಂಧಪಟ್ಟ ವಿದ್ಯಾರ್ಥಿಗಳ ವಿಚಾರದಲ್ಲಿ ಅಷ್ಟೇ ಗಂಭೀರವಾಗಿ ಅಲ್ಲಿ ದಾಖಲಾತಿಗಳು ನಡೆಯುತ್ತಿಲ್ಲ ಆವಿಚಾರವನ್ನು ಸಮಗ್ರವಾಗಿ ಪರಿಶೀಲನೆ ಮಾಡಬೇಕಾದ ವಿದ್ಯಾ ಇಲಾಖೆಯ ಆ ಅಧಿಕಾರಿಗಳೂ ಕೂಡ ಪ್ರತಿಯೊಂದು ಕಾಲೇಜಿಗೂ ಭೇಟಿ ಕೊಡುತ್ತಿಲ್ಲ ವಿದ್ಯಾರ್ಥಿಗಳ ದಾಖಲಾತಿ ಸಮಯದಲ್ಲಿ ಅವರು ಏನು ಮೀಸಲಾತಿ ನಿಯಮವನ್ನು ಅಳವಡಿಸಿದ್ದಾರೆ ಅದನ್ನೂ ಕೂಡ ಸರಿಯಾಗಿ ಅನುಸರಿಸುತ್ತಿಲ್ಲ ಈ ಒಂದು ವಿಚಾರದಲ್ಲಿ ತಮ್ಮ ಅವಧಿಯಲ್ಲಾದರೂ ಕಟ್ಟುನಿಟ್ಟಿನ ಕ್ರಮವನ್ನು ಜರುಗಿಸ ಬಏಕು ಯಾವ ಯಾವ ವರ್ಗಕ್ಕೆ ಎಷ್ಟಷ್ಟು ವಿದ್ಯಾರ್ಥಿಗಳು ದಾಖಲಾತಿ ಆಗಬೇಕು ಎಂದು ಇದೆಯೋ ಅದೇ ರೀತಿಯಲ್ಲಿ ದಾಖಲಾತಿ ಆಗುವಂತೆ ಮಾನ್ಯ ಮಂತ್ರಿಗಳು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ

†ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಅಧ್ಯಕ್ಷರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ ಆ ಹೇಳಿಕೆಯಲ್ಲಿ ಕಾನೂನಿನ ಪ್ರಕಾರ ಕ್ರಮ

ತೆಗೆದುಕೊಳ್ಳಲಾಗುವುದು ಎಂದಿದ್ದಾರೆ ಆದರೆ ಇದುವರೆಗೆ ಕರ್ನಾಟಕ ರಾಜ್ಯದಲ್ಲಿ ಕಾನೂನು ಪ್ರಕಾರ ಯಾರೇ ಒಬ್ಬರನ್ನಾದರೂ ಖಾಸಗಿ ಕಾಲೇಜಿನ ಮಾಲೀಕರಿಗೆ ಶಿಕ್ಷೆಯನ್ನು ಕೊಡಿಸಿರತಕ್ಕಂಥ, ಶಿಕ್ಷೆಗೆ ಗುರಿಪಡಿಸಿರತಕ್ಕಂಥ ದಾಖಲಾತಿ ಇಲ್ಲವೇ ಇಲ್ಲ ಈ ಡೊನೇಷನ್ ಹೆಸರಿನಲ್ಲಿ ನಡೆಯುತ್ತಿರುವ ದಂಧೆ ಅಥವಾ ಲೂಟಿಯನ್ನು ನಿಲ್ಲಿಸುವುದಕ್ಕೆ ಇದುವರೆಗೆ ಯಾವ ಸರ್ಕಾರಕ್ಕೂ ಸಾಧ್ಯವಾಗಲಿಲ್ಲ ಇದುವರೆಗೆ ಕೂಡ ಇವರು ಯಾವುದೇ ಹೇಳಿಕೆಯನ್ನು ಕೊಟ್ಟರೂ ಕೂಡ ಪ್ರಾಯೋಗಿಕವಾಗಿ ಅದು ಸಾಧ್ಯವಾಗಲಿಲ್ಲ ಏಕೆಂದರೆ ಇವರೇನೊ ಕಾನೂನು, ನಿಯಮ ಎಂದು ಹೇಳುತ್ತಾರೆ ಆದರೆ ಖಾಸಗಿ ಕಾಲೇಜಿನವರು ದುಡ್ಡು ತೆಗೆದುಕೊಂಡಿದ್ದಕ್ಕೇ ರಸೀತಿ ಕೊಟ್ಟರೆ ತಾನೇ ಇವರ ಕಾನೂನು, ನಿಯಮ ಅಪ್ಲೈ ಆಗುವುದಕ್ಕೆ? ಅವರು ತೆಗೆದುಕೊಂಡದ್ದಕ್ಕೂ ದಾಳಲೆ ಇಲ್ಲ, ಇವರು ಕೊಟ್ಟದ್ದಕ್ಕೂ ದಾಖಲೆ ಇಲ್ಲ ದಾಖಲೆ ಎಲ್ಲಿದೆ ಅವರ ಹತ್ತಿರ ಅವೆಲ್ಲವೂ ಈ ವ್ಯವಹಾರವೆಲ್ಲವೂ ಟೇಬಲ್ ಕೆಳಗಡೆ ನಡೆಯುತ್ತದೆ ಒಂದು ವೇಳೆ ಪೇರೆಂಟ್ಸ್ ರಸೀತಿ ಕೇಳಿದರೆ ನಮ್ಮ ಕಾಲೇಜಿನಲ್ಲಿ ಸೀಟ್ ಇಲ್ಲ ಎಂದು ಹೇಳಿಬಿಡುತ್ತಾರೆ ಕಾಣೂನಿನ ಪ್ರಕಾರ ಮಾತನಾಡಿದರೆ ನಮ್ಮಲ್ಲಿ ಸೀಟ್ ಇಲ್ಲ ಎನ್ನುತ್ತಾರೆ ಕಾನೂನಿನ ಪ್ರಕಾರ ಮಾತನಾಡದೇ ಸೀಟ್ ಪಡೆಯಬೇಕು ಹೀಗಿದೆ ಇವೋತ್ತಿನ ಪರಿಸ್ಥಿತಿ ಈಗಾಗಲೇ ಈ ಕಾನೂನು 1983ರಲ್ಲಿ ಬಂದಿದ್ದು ಈಗ ನಾವು 2004ನೇ ಇಸವಿಯಲ್ಲಿ ಇದ್ದೇವೆ ಅಂದರೆ ಈ ಕಾನೂನಿನ ಕಲಂಗೆ 20 ವರ್ಷದ ಇತಿಹಾಸವಿದೆ ಈ 20 ವರ್ಷದ ಅವಧಿಯೊಳಗೆ ಯಾವುದೇ ಸರ್ಕಾರ ಯಾವುದೇ ಖಾಸಗಿ ಕಾಲೇಜಿನ ಮಾಲೀಕರೊಬ್ಬರನ್ನು ಶಿಕ್ಷಗೆ ಗುರಿಪಡಿಸಿದ್ದಾರೆಯೇ ಎಂಬ ಬಗ್ಗೆ ನೀವು ಪರಿಶೀಲನೆ ಮಾಡಿ ನೋಡಬೇಕು ಆದ್ದರಿಂದ ಇದು ಸಾಧ್ಯವಿಲ್ಲದ ಮಾತು ಇದಕ್ಕೆ ಬೇರೆ ದಾರಿಯನ್ನು ಸರ್ಕಾರ ಹುಡುಕಬೇಕು ಏಕೆಂದರೆ ಮೊನ್ನೆ ತಾನೇ ನೀವೇ ಪತ್ರಿಕೆಯಲ್ಲಿ ಓದಿದ್ದೀರಿ ತಾಯಿ ತನ್ನ ಮಗುವಿನ ಡೊನೇಷನ್ ಕಟ್ಟುವುದಕ್ಕೆ ಸಾಧ್ಯವಾಗಲಿಲ್ಲವೆಂದು ರಾಜಾಜಿನಗರದ ಒಂದು ಸ್ಕೂಲ್‌ನಲ್ಲಿ ಅವರು ಅವಮಾನ ಮಾಡಿದರೆಂದು ಹೇಳಿ ತನ್ನ ಮುಗುವಿಗೆ ವಿಷ ಕೊಟ್ಟು ತಾನು ಕೂಡ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಇಂಥ ಯಾವುದೇ ನಾಗರೀಕ ಸಭ್ಯ ಸಮಾಜ ತಲಿ ತಗ್ಗಿಸತಕ್ಕಂಥ ರೀತಿಯ ಘಟನೆಗಳು ಕರ್ನಾಟಕ ರಾಜ್ಯದಲ್ಲಿ ನಡೆದಿದೆ ಆದರೆ ರಾಜಾಜಿನಗರದಲ್ಲಿ ನಡೆದ ಘಟನೆಯೊಂದು ನಮಗೆ ಗೊತ್ತಾಯಿತುಷ್ಟೆ. ಆದರೆ ಈ ರೀತಿ ಗೊತ್ತಾಗದೇ ಆಗುತ್ತಿರುವ ಘಟನೆಗಳು ಸಾವಿರಾರು ಇದೆ ಇದರಿಂದ ಸಾವಿರಾರು ಜನರಿಗೆ ಇವೊತ್ತು ಶಿಕ್ಷಣವನ್ನು ನಿರಾಕರಿಸಲಾಗುತ್ತಿದೆ ಯಾವ ಹೆಸರಿನಲ್ಲಿ ಇವೊತ್ತು ನಿರಾಕರಣೆ ಆಗುತ್ತಿದೆಯೆಂದರೆ ಹಣ ಇಲ್ಲದಿದ್ದರೆ ಅವನಿಗೆ ಶಿಕ್ಷಣ ಇಲ್ಲ ಎನ್ನತಕ್ಕಂಥ ಹೆಸರಿನಲ್ಲಿ ಅವರಿಗೆ ಶಿಕ್ಷಣ ನಿರಾಕರಣೆ ಆಗುತ್ತಿದೆ ಹಾಗಾಗಿ ಸತತವಾಗಿ ನಮ್ಮ ದೇಶದ ಇತಿಹಾಸ ನಮಗೆ ಏನು ಹೇಲುತ್ತಿದೆಯೆಂದರೆ ಹಿಂದೆ ಒಂದು ಹಂತದಲ್ಲಿ ನೂರಾರು ವರ್ಷಗಳ ಕೆಳಗೆ ಶೂದ್ರರಿಗೆ ಶಿಕ್ಷಣವನ್ನು ನಿರಾಕರಣೆ ಮಾಡಿದ್ದು ಏಕೆಂದರೆ ಈ ಜಾತಿಯ ಹೆಸರಿನಲ್ಲಿ 'ನಾ ಶೂದ್ರಾಯ ಮತಿತತಾತಿ' ಆ ಹೆಸರಿನಲ್ಲಿ ಆ ಕಾಲದಲ್ಲಿ ಶೂದ್ರರಿಗೆ ಶಿಕ್ಷಣವನ್ನು ನಿರಾಕರಣೆ ಮಾಡಿದರು ಆದರೆ ಈಗ ಪರಿಸ್ಥಿತಿ ಹಾಗಿಲ್ಲ ಅವರು ಆ ರೀತಿ ಏನಾದರೂ ಹೇಳಿದರೆ ಕಾನೂನು ಪ್ರಕಾರ ಆ ರೀತಿ ಹೇಳಿದವರು ಜೈಲಿಗೆ ಹೋಗಬೇಕಾಗುತ್ತದೆ ಈ ಕಾರಣ ಬಿಟ್ಟುಬಿಟ್ಟು ಈಗ ದುಡ್ಡು ಇದ್ದವರಿಗೆ ಶಿಕ್ಷಣ ಎನ್ನುತ್ತಾರೆ ಅಂದರೆ 'ನಾ ಅರ್ಧಯ ಮತಿತತಾ' ಎನ್ನತಕ್ಕಂಥ ಸ್ಥಿತಿಗೆ ಬಂದಿದೆ ಇದು ಇವೊತ್ತಿನ ಶಿಕ್ಷಣದ ವಾಸ್ತವ ಸ್ಥಿತಿ ಈ ವಾಸ್ತವ ಸ್ಥಿತಿಯನ್ನು ನಾವು ಅರ್ಥ ಮಾಡಿಕೊಳ್ಳದೇ ಇದೊಂದು ಕಾನೂನು ಇದೆಯೆಂದು ಹೇಳಿ ಈ ಹೇಳಿಕೆಯನ್ನು ಕೊಟ್ಟಿದ್ದಾರೆ ಇಂಥ ಹೇಳಿಕೆಯನ್ನು ನಾವು ಇದೇ ಸದನದಲ್ಲಿ ಹಿಂದೆ ಹಲವಾರು ಬಾರಿ ಪಡೆದಿದ್ದೇವೆ ಈ ಸರ್ಕಾರ ಒಂದೇ ಅಲ್ಲ ಬೇರೆ ಬೇರೆ ಸರ್ಕಾರಗಳು ಇದೇ ಹೇಳಿಕೆಯನ್ನು ಕೊಟ್ಟಿದೆ ನಾನು 1994 ರಲ್ಲಿ

ಶಾಸಕನಾಗಿದ್ದಾಗ ಇವೊತ್ತಿನ ಮಂತ್ರಿಗಳಾದ ಮಾನ್ಯ ಡಿ ಮಂಜುನಾಥ್‌ರವರು ಉನ್ನತ ಶಿಕ್ಷಣ ಸಚಿವರಾಗಿದ್ದರು ಆಗ ಮಾನ್ಯ ಗೋವಿಂದೇಗೌ ಪ್ರಾವಾಣಿಕ ಸಚಿವರು ಹಾಗೂ ಡಿ ಮಂಜುನಾಥ್‌ರವರೂ ಕೂಡ ಇದೇ ರೀತಿಯ ಹೇಳಿಕೆಯನ್ನು ಕೊಟ್ಟಿದ್ದಾರೆ ನೀವು ಬೇಕಾದರೆ ತೆಗೆದುನೋಡಿ ಹಿಂದೆ ಇದೇ ಸದನದಲ್ಲಿ ಮಾನ್ಯ ಸುರೇಶ್‌ಕುಮಾರ್‌ರವರು ಮತ್ತು ನಾನು ಶಾಸಕರಾಗಿದ್ದಾಗ ಈ ಪ್ರಶ್ನೆಯನ್ನು ಎತ್ತಿದ್ದಾಗ ಇದೇ ಉತ್ತರ ಕೊಟ್ಟಿದ್ದಾರೆ ಕೆಲವು ಗ್ರಾಮರ್, ಸ್ಪಲ್ಲಿಂಗ್ಸ್ ಬದಲಾವಣೆ ಆಗಿರಬಹುದಷ್ಟೆ. ಉತ್ತರ ಮಾತ್ರ ಇದೇ ಮಾನ್ಯ ಗೋವಿಂದೇಗೌಡ ಇದೇ ಉತ್ತರ ಕೊಟ್ಟಿದ್ದಾರೆ ಮಂಜುನಾಥ್‌ರವರೂ ಇದೇ ಉತ್ತರ ಕೊಟ್ಟಿದ್ದಾರೆ ಅವರು ಬೇಕಾದರೆ ಕಡತಗಳನ್ನು ತರಿಸಿಕೊಂಡು ಪರಿಶೀಲನೆ ಮಾಡಲಿ ಆದರೆ ಈ ಹೇಳಿಕೆಗಳಿಂದ ಏನಾದರೂ ನಿಂತಿದೆಯೇ? ಪ್ರಾಯೋಗಿಕವಾಗಿ ಏನಾದರೂ ಆಗಿದೆಯೇ ಎಂಬ ಬಗ್ಗೆ ನಾವು ಆಲೋಚನೆ ಮಾಡದೆ ನಾವು ಇಲ್ಲಿ ಎಷ್ಟೇ ಚರ್ಚೆ ಮಾಡಿದರೂ ಕೂಡ ಅದು ವ್ಯರ್ಥವಾಗುತ್ತದೆ ಯಾವುದೂ ಚರ್ಚೆ ಉಪಯೋಗಕ್ಕೆ ಬರುತ್ತಿಲ್ಲ ಉಪಯೋಗಕ್ಕೆ ಬೇರೆ ಬೇಕು ಎಂದರೆ ಅದಕ್ಕೆ ಬೇರೆ ದಾರಿಯನ್ನೇ ಹುಡುಕಬೇಕಾಗುತ್ತದೆ ಇದೊಂದು ಕಾನೂನಿನ ಕಲಂ ಹಿಡಿದುಕೊಂಡು ಮಾಡುವುದಕ್ಕೆ ಆಗುವುದಿಲ್ಲ 'ಏಕೆಂದರೆ ಕಾನೂನಿನ ವ್ಯಾಪ್ತಿಗೆ ಅವರು ಸಿಗುವುದೇ ಇಲ್ಲ

ಶ್ರೀ ಡಿ ಮಂಜುನಾಥ್ ನೀವೇ ಏನಾದರೂ ಸಲಹೆ ಕೊಡಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನನ್ನ ಸಲಹೆಯನ್ನು ನೀವು ತೆಗೆದುಕೊಳ್ಳುವುದಿಲ್ಲ ಏಕೆಂದರೆ ನಾನು ಏನು ಹೇಳುತ್ತೇನೆಂದರೆ ಖಾಸಗಿ ಶಿಕ್ಷಣವನ್ನೇ ರದ್ದುಮಾಡಿ ಎನ್ನುತ್ತೇನೆ ನನ್ನ ಸಲಹೆ ಶಿಕ್ಷಣದ ಖಾಸಗೀಕರಣವನ್ನು ನಿಲ್ಲಿಸಿಬಿಡಿ ಇದು ನನ್ನ ಸಲಹೆ ಇದನ್ನು ನೀವು ಒಪ್ಪುತ್ತೀರಾ? ನೀವು ಒಪ್ಪುವುದಿಲ್ಲ, ಯಾರೂ ಒಪ್ಪುವುದಿಲ್ಲ ಈ ಸಲಹೆಯನ್ನು ಶಿಕ್ಷಣದ ಖಾಸಗಿಕರಣ ಮಾಡುವುದು ಬೇಡ, ಖಾಸಗಿಯವರಿಗೆ ಶಿಕ್ಷಣ ಸಂಸ್ಥೆಗಳನ್ನು ಕೊಡಬೇಡಿ ಶಿಕ್ಷಣ ಕೊಡತಕ್ಕಂಥದ್ದು ಯಾವುದೇ ಒಂದು ಸರ್ಕಾರದ ನಾಗರಿಕ ಕನಿಷ್ಟ ಕರ್ತವ್ಯವಾಗಿದೆ ಸರ್ಕಾರ ಉಚಿತ ಶಿಕ್ಷಣವನ್ನು ಕೂಡ ಬೇಕಾದದ್ದು ಎನ್ನುವುದು ನನ್ನ ಅಭಿಪ್ರಾಯ ನನ್ನ ಅಭಿಪ್ರಾಯದಲ್ಲಿ ಯಾವುದೇ ಸರ್ಕಾರವಿರಲಿ ಅದು ಖಾಸಗಿ ಶಿಕ್ಷಣವನ್ನು ಸಂಪೂರ್ಣವಾಗಿ ವ್ಯಾಪಾರೀಕರಣವನ್ನು ನಿಲ್ಲಿಸಬೇಕು ಅಂದರೆ ಶಿಕ್ಷಣವನ್ನು ಖಾಸಗೀಕರಣ ಮಾಡುವುದನ್ನು ನೀವು ನಿಲ್ಲಿಸಿದರೆ ಆಗ ಮಾತ್ರ ಈ ಡೊನೇಶನ್ ಹಾವಳಿ ತಪ್ಪುತ್ತದೆ ಹೊರತು ಕಾನೂನಿನಿಂದ ಇದು ತಪ್ಪುವುದಕ್ಕೆ ಸಾಧ್ಯವಿಲ್ಲ ಇದು ನನ್ನ ಸಲಹೆ ಆದಗೆ ನೀವು ಈ ಸಲಹೆಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ನನಗೆ ಗೊತ್ತಿದೆ ನೀವು ಮತ್ತು ಮೆಜಾರಿಟಿ ಜನರು ಇದನ್ನು ಒಪ್ಪುವುದಿಲ್ಲ ಎಂಬುದೂ ಸಹ ನನಗೆ ಗೊತ್ತಿದೆ ಆದರೆ ನಿಮ್ಮ ವ್ಯಾಪ್ತಿಯಲ್ಲಿ, ನಿಮ್ಮ ಪರಿದಿಯಲ್ಲಾದರೂ ಇದಕ್ಕೆ ಪರಿಹಾರವನ್ನು ಹುಡುಕಬೇಕಾಗುತ್ತದೆ ನಮ್ಮ ಸಲಹೆಯನ್ನು ನೀವು ಒಪ್ಪುವುದಿಲ್ಲ ಅಧ್ಯಕ್ಷರೇ, ಮಂಜೂನಾಥ್‌ರವರೇ ಈ ಬಗ್ಗೆ ಹೇಳಲಿ ಏಕೆಂದರೆ ಅವರು ಹಿಂದೆ ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಇದೇ ಹೇಳಿಕೆಯನ್ನು ಕೊಟ್ಟಿದ್ದಾರೆ ಮಾನ್ಯ ಗೋವಿಂದೇಗೌಡರು ಇದೇ ಹೇಳಿಕೆಯನ್ನು ಕೊಟ್ಟಿದ್ದಾರೆ ಏನಾದರೂ ಇದರಲ್ಲಿ ಬದಲಾವಣೆ ಆಗಿದೆಯೇ? ಎಷ್ಟು ಜನ ಬಡವರು ಇವೊತ್ತು ಶಿಕ್ಷಣವನ್ನು ಪಡೆಯಲು ವಂಚಿತರಾಗಿದ್ದಾರೆ? ಕೇವಲ ಇಂಥ ಗುಂಪಿನವರು ಮಾತ್ರ ಶಿಕ್ಷಣದಿಂದ ' ವಂಚಿತರಾಗಿದ್ದಾರೆ ಎಂದು ಹೇಳುತ್ತಿಲ್ಲ ಎಲ್ಲಾ ವಿಭಾಗದ ಜನರೂ ಕೂಡ ಈ ವಂತಿಗೆ ಹಾವಳಿಯಿಂದ ಯಾರೂ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಇವೊತ್ತು ಕೆಲವು ಸರ್ಕಾರಿ ಅಧಿಕಾರಿಗಳು ಯಾವ ರೀತಿಯಲ್ಲಿ ಮಾತನಾಡುತ್ತಾರೆಂದರೆ ಪ್ರಾಮಾಣಿಕವಾಗಿ ದುಡಿದ ಅವರ ಸಂಬಳವೆಲ್ಲವೂ ಕೂಡ

ಮಕ್ಕಳನ್ನು ಶಾಲಸೆಗೆ ಸೇರಿಸಬೇಕಾದರೆ ಶಾಲೆಗೆ ಕೊಡಬೇಕಾದ ಡೊನೇಶನ್ ಹಗೂ ಫೀಸ್‌ಗೆ ಸಾಕಾಗುವುದಿಲ್ಲವೆನ್ನುತ್ತಾರೆ ಇದು ಸಕಾರಿ ನೌಕರರ ಪರಿಸ್ಥಿತಿ ಈ ರೀತಿಯಲ್ಲಿ ಸರ್ಕಾರಿ ನೌಕರರು ಬಹಿರಂಗವಾಗಿಯೇ ಮಾತನಾಡುತ್ತಾರೆ ಅವರ ಇಡೀ ಸಂಬಳವೆಲ್ಲವೂ ಕೂಡ ಮಕ್ಕಳ ಡೊನೇಶನ್ ಹಾಗೂ ಫೀಸ್‌ಗೆ ಸಾಕಾಗದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ ಅವರ ಪರಿಸ್ಥಿತಿಯೇ ಹಾಗಾದರೆ ಸಾಮಾನ್ಯ ಕೃಷಿ ಕಾರ್ಮಿಕನೋ, ಬಡ ರೈತನ, ಮಧ್ಯಮ ವರ್ಗದ ರೈತನ ಮಕ್ಕಳ ಪರಿಸ್ಥಿತಿ ಏನು ಎಂಬುದನ್ನು ನೋಡಬೇಕಾಗುತ್ತದೆ ಇದು ಒಂದು ಕಡೆ ಹೀಗಾದರೆ ಇನ್ನೊಂದು ಕಡೆ ಪರಿಸ್ಥಿತಿ ಏನಾಗಿದೆಯೆಂದರೆ ಹಳ್ಳಿಗಾಡಿನ ಪ್ರದೇಶದಲ್ಲೂ ಕೂಡ ಶಿಕ್ಷಣವನ್ನು ಕೊಡಲು ಖಾಸಗಿಯವರಿಗೆ ಅವಕಾಶ ಕೊಟ್ಟಿರುವುದರಿಂದ ಒಂದು ಕಡೆ ಅವರ ವ್ಯಾಪಾರ ಯಥೇಚ್ಛವಾಗಿ ನಡೆಯುತ್ತಿದೆ ಸಾಲ ಸೋಲ ಮಾಡಿ ಡೊನೇಶನ್ ಕಟ್ಟುತ್ತಿದ್ದಾರೆ ಇವೊತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅವಕಾಶ ಕೊಟ್ಟು ಸರ್ಕಾರಿ ಶಾಲೆಗೆ, ಹೈಸ್ಕೂಲ್‌ಗೆ ಸರ್ಕಾರವೇ ಕತ್ತನ್ನು ಹಿಚುಕುತ್ತಿದೆ ಯಾವ ರೀತಿಯಲ್ಲಿ ಎಂದರೆ ಸರ್ಕಾರಿ ಶಾಲೆಗಳಿಗೆ ಸಫಿಶಿಯೆಂಟ್ ಸ್ಟಾಫ್‌ನ್ನು ಕೊಡುವುದಿಲ್ಲ ಹೈಸ್ಕೂಲ್‌ನಿಂದ ಹಿಡಿದು ಕಾಲೇಜಿನವರಗೆ ಸಫಿಶಿಯೆಂಟ್ ಸ್ಟಾಫ್ ಇಲ್ಲ ಉದಾಹರಣೆಗೆ ಕೋಲಾರ ಜಿಲ್ಲೆಯ ಬಗ್ಗೆ ಹೇಳಬೇಕೆಂದರೆ ಕಳೆದ ಮೂರು ವರ್ಷಗಳಿಂದ 460 ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆಯೆಂದು ವಿದ್ಯಾರ್ಥಿಗಳು ಹೋರಾಟವನ್ನು ಮಾಡಿದ್ದಾರೆ ಶಿಕ್ಷಣದ ನೇಮಕ ಮಾಡಬೇಕೆಂದು ಹೋರಾಟ ಮಾಡಿದಾಗ ಗಲಾಟೆಯಾಗಿ ಲಾರಿಚಾರ್ಜ್ ಮಾಡಲಾಗಿದೆ ಆದರೆ ಶಿಕ್ಷಕರ ನೇಮಕ ಮಾಡಲಿಲ್ಲ ಕೋಲಾರ ಜಿಲ್ಲೆಯಲ್ಲಿ ಒಟ್ಟು 460 ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇದೆ ಸರ್ಕಾರ ರಿಕ್ರೂಟ್‌ಮೆಂಟ್ ಮಾಡಿಕೊಳ್ಳುತ್ತಿದ್ದೇವೆ ಹುದ್ದೆಗಳನ್ನು ಭರ್ತಿ ಮಡುತ್ತೇವೆ ಎಂದು ಹೇಳಿತು ಆದರೆ ಹೈಸ್ಕೂಲ್ನಲ್ಲಿ ಟೀಚರ್ ಇಲ್ಲ ಒಂದು ಹೈಸ್ಕೂಲ್‌ಗೆ ಒಬ್ಬ ಪಿ ಟಿ ಮಾಸ್ಟರ್ ಇರುತ್ತಾನೆ, ಅದೇ ರೀತಿ ಒಬ್ಬನೇ ಒಬ್ಬ ಆರ್ಟ್ಸ್ ಟೀಚರ್, ಸಯನ್ಸ್ ಟೀಚರ್ ಇರುತ್ತಾರೆ ಒಬ್ಬ ಟೀಚರ್ ಮೂರು ಸೆಕ್ಷನ್‌ಗಳನ್ನು ಮ್ಯಾನೇಜ್ ಮಾಡಬೇಕು ಹೀಗಾಗಿ ಸರ್ಕಾರಿ ಶಾಲೆಗಳಲ್ಲಿ ಸರಿಯಾಗಿ ಪಾಠ ಹೇಳುವುದಿಲ್ಲವೆಂದು ಹೇಳಿಯೇ ನ್ಯಾಚುರಲಿ ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುತ್ತಾರೆ ಅಂದರೆ ವ್ಯವಸ್ಥೆತವಾಗಿ ಖಾಸಗೀಕರಣವನ್ನು ಸಮರ್ಧನೆ ಮಾಡಿಕೊಳ್ಳುವುದಕ್ಕೆ ಸರ್ಕಾರವೇ ಸರ್ಕಾರಿ ಶಾಲಾ ಕಾಲೇಜುಗಳ ಕತ್ತು ಹಿಚುಕುತ್ತಿದೆ ಮಂಜುನಾಥ್‌ರವರೇ ಬೇಕಾದರೆ ಹೇಳಲಿ ಲೆಕ್ಚರರ್ ಪೋಸ್ಟ್ ಎಷ್ಟು ಖಾಲಿ ಇದೆ ಸರ್ಕಾರಿ ಕಾಲೇಜುಗಳಲ್ಲಿ ಎಂದು ಕಾಲೇಜಿನ ಅಡ್ಮಿಶನ್ ಇನ್‌ಟೇಕ್ ಕೆಪ್ಯಾಸಿಟಿಗೆ ಅನುಗುಣವಾಗಿ ಲಿಕ್ಚರರ್ ಪೋಸ್ಟ್‌ಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆಯೇ? ಎಷ್ಟು ಜನ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳುತ್ತೀತಿ ಒಂದು ಕಾಲೇಜಿಗೆ ಅಥವಾ ಹೈಸ್ಕೂಲ್‌ಗೆ ಆ ಪ್ರಮಾಣಕ್ಕನುಗುಣವಾಗಿ ಲೆಕ್ಚರರ್‌ಗಳನ್ನು ಅಥವಾ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳನ್ನು ನೀವು ಸ್ಯಾಂಕ್ಷನ್ ಮಾಡಿದ್ದೀರಾ? ಇಲ್ಲ, ನೀವು ಮಾಡಿಲ್ಲ ಪೋಸ್ಟ್‌ಗಳ ಸಂಕ್ಯೆ ಇನ್‌ಕ್ರೀಸ್ ಆಗಿ ಸುಮಾರು ಹತ್ತು ವರ್ಷಗಳೇ ಆಗಿವೆ ಹತ್ತು ವರ್ಷಗಳಿಂದ ಯಾವುದೇ ಸರ್ಕಾರಿ ಕಾಲೇಜ್ ಹಾಗೂ ಪ್ರೌಢಶಾಲೆಗಳಲ್ಲಿ ಟೀಚಿಂಗ್ ಪೋಸ್ಟ್‌ಗಳನ್ನು ಇನ್‌ಕ್ರೀಸ್ ಮಾಡಲಿಲ್ಲ ಹತ್ತು ವರ್ಷಗಳ ಹಿಂದೆ ಎಷ್ಟು ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಲಾಗಿತ್ತೋ ಈಗಲೂ ಅಷ್ಟೇ ಇದೆ ಆದರೆ ವಿದ್ಯಾರ್ಥಿಗಳ ಸಂಖ್ಯೆ ಮಾತ್ರ ಜಾಸ್ತಿಯಾಗಿದ್ದಾರೆ ಆದರೆ ಅದಕ್ಕೆ ಅನುಗುಣವಾಗಿ ಶಿಕ್ಷಕರು, ಲೆಕ್ಚರರ್ಸ್ ಇಲ್ಲ ಈ ರೀತಿಯಾದಾಗ ಕ್ವಾಂಟಿ ಆಫ್ ಎಜ್ಯುಕೇಷನ್ ಸರ್ಕಾರಿ ಕಾಲೇಜ್‌ಗಳಲ್ಲಿ ಡೌನ್ ಆಗುತ್ತದೆ ಮತ್ತು ಖಾಸಗಿ ಕಾಲೇಜ್‌ಗಳಲ್ಲಿ ಗುಣಮಟ್ಟ ಹೆಚ್ಚಾಗುತ್ತದೆ ಆಗ ನ್ಯಾಚುರಲಿ ಎಲ್ಲರು ಕೂಡ ಖಾಸಗಿ

ಕಾಲೇಜ್‌ಗಳಿಗೆ ತಮ್ಮ ಮಕ್ಕಳನ್ನು ಸೇರಿಸುತ್ತಾರೆ ಪ್ರೈಮತಿ ಸ್ಕೂಲ್ ಟೀಚರ್ಸ್ ಅವರ ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸುತ್ತಾರೆ ಆದರೆ ಅವರು ಮಾತ್ರ ಸರ್ಕಾರಿ ಶಾಲೆಗೆ ಪಾಠ ಮಾಡುವುದಕ್ಕೇ ಹೋಗುತ್ತಾರೆ! ಹೈಸ್ಕೂಲ್ ಟೀಚರ್ಸ್ ಕೂಡ ಅಷ್ಟೆ, ಅವರು ಅವರ ಮಕ್ಕಳನ್ನು ಖಾಸಗಿ ಪ್ರೌಢಶಾಲೆಗೆ ಸೇರಿಸುತ್ತಾರೆ! ಅವರು ಮಾತ್ರ ಸರ್ಕಾರಿ ಪ್ರೌಢಶಾಲೆಯಲ್ಲಿ ಪಾಠ ಮಾಡುತ್ತಾರೆ! ಏಕೆ ಈ ರೀತಿ ಮಾಡುತ್ತೀರಿ ಎಂದು ಪ್ರಶ್ನೆ ಮಾಡಿದರೆ, ಏನ್ ಸಾರ್ ಮಾಡೋದು ನಮ್ಮಲ್ಲಿ ಸ್ಟಾಫ್ ಇಲ್ಲ, ಪಾಠ ಮಾಡುವುದಿಲ್ಲ, ನಮ್ಮ ಮಕ್ಕಳು ಹಾಳಾಗುತ್ತಾರೆ, ಅದಕ್ಕೋಸ್ಕರ ಖಾಸಗಿ ಪ್ರೌಢಶಾಲೆಗೆ ಸೇರಿಸಿದ್ದೇವೆ ಎಂದು ನೇರವಾಗಿಯೇ ಹೇಳುತ್ತಾರೆ ಅಂದರೆ ಇವರ ಮಕ್ಕಳು ಮಾತ್ರ ಖಾಸಗಿ ಶಾಲೆಯಲ್ಲಿ ಓದಬೇಕು ಬೇರೆಯವರ ಮಕ್ಕಳು ಮಾತ್ರ ಸರ್ಕಾರಿ ಹೈಸ್ಕೂಲ್‌ನಲ್ಲಿ ಓದಬೇಕು! ಏಕೆಂದರೆ ಬಡವರ ಮಕ್ಕಳು ಒದತಕ್ಕಂಥ ಶಾಲೆಯಲ್ಲಿ ಸರಿಯಾದ ಟೀಚರ್ ಇಲ್ಲ, ಲೆಕ್ಚರರ್ಸ್ ಇಲ್ಲ, ಮಾನ್ಯ ಮಂಜುನಾಥ್‌ರವರು ಈ ಪ್ರಸ್ತಾಪದ ಬಗ್ಗೆ ಬೇಕಾದರೆ ಹೇಳಲಿ ಹೊಸ ಪೋಸ್ಟ್‌ಗಳನ್ನು ಕರ್ನಾಟಕ ರಾಜ್ಯದ ಯಾವುದೇ ಕಾಲೇಜ್‌ಗಳಲ್ಲಿ ಇನ್‌ಕ್ರೀಸ್ ಮಾಡಿದ್ದಾರೆಯೇ? ಪೋಸ್ಟ್‌ಗಳನ್ನು ಇನ್‌ಕ್ರೀಸ್ ಮಾಡದೇ ಹೇಗೆ ನೀವು ಗುಣಮಟ್ಟದ ಶಿಕ್ಷಣವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ? ಒಂದು ಸೆಕ್ಷನ್‌ಗೆ 150 ರಿಂದ 160 ಜನ ಮಕ್ಕಳನ್ನು ಕೂರಿಸಿಬಿಟ್ಟು ಒಬ್ಬ ಲೆಕ್ಚರರ್‌ಗೆ ಅಥವಾ ಒಬ್ಬ ಮಾಸ್ತರಿಗೆ ಪಾಠ ಮಾಡಿ ಎಂದು ಹೇಳಿದರೆ, ಅವರು ಏನು ಪಾಠ ಮಾಡುವುದು, 150 ಮಕ್ಕಳು ಒಂದು ಶಾಲೆಯಲ್ಲಿ ಕುಳಿತುಕೊಂಡು ಏನು ಕೇಳುತ್ತಾರೆ? ಇದು ವ್ಯವಸ್ಥೆ ಹೇಗೆ ಹೇಳಿ? ಕೊನೇಪಕ್ಷ ವಾತಾವರಣ, ಒಂದು ಸ್ಟೂಡೆಂಟ್ಸ್‌ಗೆ ಹಾಗೂ ಟೀಚರ್ಸ್‌ಗೆ ಪಾಠ ಕೇಳುವುದಕ್ಕೆ ಆಗಲಿ, ಅವರಿಗೆ ಪಾಠ ಮಾಡುವುದಕ್ಕೆ ಆಗಲಿ ಒಂದು ಒಳ್ಳೆಯ ಆರೋಗ್ಯಕರವಾದಂತಹ ಅಟ್‌ಮಾಸಿಯರ್ ಇಲ್ಲದೆಯೋದರೆ ಹೇಗೆ ಆ ವಿದ್ಯಾರ್ಥಿ ಶಿಕ್ಷಣವನ್ನು ಪಡೆಯುತ್ತಾನೆ? ಅದು ಹೇಗೆ ಸಾಧ್ಯವಿದೆ? ಅದರ ಜೊತೆಗೆ ಪರೀಕ್ಷೆಗಳ ಸಂದರ್ಭದಲ್ಲಿಯಂತೂ ಆ ಖಾಸಗಿ ಶಾಲಾ ಕಾಲೇಜುಗಳಲ್ಲಿ ನಡೆಯತಕ್ಕಂಥ ದಂಧೆ ಎಲ್ಲೂ ನಡೆಯುವುದಿಲ್ಲ ಅವರೇ ಬೋರ್ಡ್‌ಗಲ ಮೇಲೆ ಅನ್ಸರ್‌ಗಳನ್ನು ಬರೆಯುತ್ತಾರೆ ಏಕೆಂದರೆ ಅವರ ಶಾಲೆಗೆ ಪ್ರತಿಷ್ಠೆ ಬರಬೇಕು ಅವರ ಶಾಲೆಯ ರಿಸಲ್ಟ್ ಹೆಚ್ಚಾಗಬೇಕು ಎಂದು ಹೇಳಿ ಅವರೇ ಆನ್ಸರ್ ಎಲ್ಲಾ ರೆಡಿ ಮಾಡಿಕೊಳ್ಳುತ್ತಾರೆ ಅದನ್ನು ನಿಯಂತ್ರಣ ಮಾಡುವುದಕ್ಕೆ ಯಾವುದೇ ಮೆಕಾನಿಸಂ ಇವತ್ತಿಗೂ ಸರ್ಕಾರದಲ್ಲಿ ಇಲ್ಲ ಹಾಗಾಗಿ ಇವತ್ತು ಏನಾಗುತ್ತಿದೆ ಎಂದರೆ ಖಾಸಗಿ ಶಾಲಾ ಕಾಲೇಜುಗಳಲ್ಲಿ ರಿಸಲ್ಟ್ ಹೆಚ್ಚು ಬರುತ್ತದೆ ಸರ್ಕಾರ ಕಾಲೇಜುಗಳಲ್ಲಿ ರಿಸಲ್ಟ್ ಬರುವುದಿಲ್ಲ ಹಾಗಾಗಿ ಕ್ರಮೇಣ ಏನಾಗುತ್ತದೆಂದರೆ ಪೋಷಕರು ಅನಿವಾರ್ಯವಾಗಿ ಸರ್ಕಾರಿ ಶಾಲಾ ಕಾಲೇಜುಗಳಿಗೆ ಮಕ್ಕಳನ್ನು ಕಳುಹಿಸುವುದನ್ನು ಬಿಟ್ಟು ಬಿಡುತ್ತಾರೆ ಇದು ವಾಸ್ತವ ಸಂಗತಿ ಇರತಕ್ಕಂಥಾದ್ದು ಇದನ್ನು ಸರಿಪಡಿಸತಕ್ಕಂಥ ನಿಟ್ಟಿನಲ್ಲಿ ಪ್ರಾಮಾಣಿಕವಾದಂತಹ ಕಾಳಜಿ ಏನದರು ಇದ್‌ದರೆ ತಿಳಿಸಿ ನಾನು ಹೇಳಿದ ಸಲಹೆ ಅಂತೂ ಅವರು ಒಪ್ಪುವುದಿಲ್ಲ, ನನಗೆ ಗೊತ್ತಿದೆ ಅವರದೆ ಅದಂತಹ ಗೆರೆ ಎಳೆದು ಕೊಂಡಿದ್ದಾರೆ, ಅದ್ದಲಿಯಾದರೂ ಪರಿಹಾರ ಹುಡುಕಲಿ ಇಲ್ಲವೆಂದರೆ ಇದು ಸುಮ್ಮನೆ ಇಲ್ಲಿ ಏನೋ ಸದನದಲ್ಲಿ ತೃಪ್ತಿಪಡಿಸುವುದಕ್ಕೆ ಯಾವುದೋ ಒಂದು ಹೇಳಿಕೆಯನ್ನು ಕೊಡತಕ್ಕಂಥಾದ್ದು, ಹಾಗೂ ಸದಸ್ಯರು ಸದನದಲ್ಲಿ ಏನೋ ಪ್ರಶ್ನೆ ಕೇಳಿದ್ದೇವೆ ಎಂದು ತೃಪ್ತಿಪಟ್ಟುಕೊಳ್ಳುವುದಕ್ಕೆ ಮಾತ್ರ ಇದು ಪ್ರಯೋಜನವಾಗುತ್ತದೆಯೇ ಹೊರತು ವಾಸ್ತವವಾಗಿ ಇದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ ಸರ್ಕಾರಕ್ಕೆ ಪ್ರಾಮಾಣಿಕವಾದಂತಹ ಕಾಳಜಿ ಏನಾದರು ಇದ್ದರೆ ತಕ್ಷಣ ಸರಿಯಾದಂತಹ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಬೇರೆ ರೀತಿಯಾದಂತಹ ವ್ಯವಸ್ಥೆಯನ್ನು ರೂಪಿಸಬೇಕು ಎಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ

ಶ್ರೀ ರಾಮಲಿಂಗರೆಡ್ಡಿ ಮಾನ್ಯ ಅಧ್ಯಕ್ಷರೆ, ವೆಸ್ಟ್ ಬೆಂಗಾಲ್‌ನಲ್ಲಿ ಯಾವರೀತಿ ಇದೆ?

ಶ್ರೀ ಜಿ ಎ ಶ್ರೀರಾಮರೆಡ್ಡಿ ವರದಿಯನ್ನು ತರಿಸಿ, ನಾನು ಬೇಕಾಗಿಲ್ಲ, ನಿಮ್ಮ ಸರ್ಕಾರ ಇದೆ ಅಧಿಕೃತವಾಗಿ ವರದಿಯನ್ನು ತರಿಸಿಕೊಳ್ಳಿ ಇಲ್ಲಿ ತಪ್ಪಿಸಿ ಕೊಳ್ಳುವುದಕ್ಕೆ ವೆಸ್ಟ್ ಬೆಂಗಾಲ್‌ನಲ್ಲಿ ಹೇಗೆ ಇದೆ, ಬೊಂಬಾಯಿನಲ್ಲಿ ಹೇಗೆ ಇದೆಯೆಂದು ಹೇಳುವುದು, ಅಲ್ಲ, ನಿಮ್ಮ ಸರ್ಕಾರ ಏನು ಮಾಡಿದೆ ಎಂದು ಹೇಳಿ ಅದು ಪ್ರಶ್ನೆ ಬೇಡ ಪಶ್ಚಿಮ ಬಂಗಾಳದ್ದು ಇಲ್ಲಿ ಚರ್ಚೆಯಾಗಬೇಕಾಗಿಲ್ಲ ನಿಮ್ಮ ಸರ್ಕಾರ ಇದೆಯಲ್ಲಾ ಏನು ಮಾಡುತ್ತಿದೆ? ವರದಿ ತರಿಸಿಕೊಳ್ಳಿ

ಅಧ್ಯಕ್ಷರು ನಾನು ಈಗ ಮಾನ್ಯ ರಮೇಶ್ ಕುಮಾರ್ ಅವರನ್ನು ಕರೆದಿದ್ದೇನೆ, ನೀವು ಮಾತನಾಡಿ ಇನ್ನು 63ರ ನಿಯಮದಡಿಯಲ್ಲಿ

ಶ್ರೀ ಜಿ ಎ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಇದು ಕರ್ನಾಟಕ ಅಸೆಂಬ್ಲಿ ಈ ಸರ್ಕಾರದ ಬಗ್ಗೆ ಹೇಳಿ ರಾಜಕೀಯ ಬಗ್ಗೆ ಮಾತನಾಡುವುದಕ್ಕೆ ಆಚೆ ಕಡೆ ಬನ್ನಿ ಪ್ಲಾಟಫಾರಂ ಇದೆ ಮಾತನಾಡೋಣ ಇಲ್ಲಲ್ಲ ಮಾತನಾಡುವುದು ನಿಮ್ಮ ಸರ್ಕಾರ ಇದೆಯಲ್ಲಾ ವರದಿಯನ್ನು ತರಿಸಿಕೊಳ್ಳಿ ವೆಸ್ಟ್ ಬೆಂಗಾಲ್‌ನಲ್ಲಿ
ಹೇಗೆ ಇದೆಯೆಂದು ನೀವು ಮಂತ್ರಿಗಳು ಆಗಿದ್ದವರು ತರಿಸಿಕೊಳ್ಳಿ

ಅಧ್ಯಕ್ಷರು ಮಾನ್ಯ ಶ್ರೀರಾಮರೆಡ್ಡಿಯವರೆ, ದಯಮಾಡಿ ತಾವು ಪೀಠವನ್ನು ಅಲಂಕರಿಸಬೇಕು

ಶ್ರೀ ಜಿ ಎ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಚರ್ಚೆಯನ್ನು ದಾರಿ ತಪ್ಪಿಸುವುದಕ್ಕೆ ಪ್ರಶ್ನೆಯನ್ನು ಕೇಳುವುದಲ್ಲ

ಶ್ರೀ ರಾಮಲಿಂಗರೆಡ್ಡಿ - ನೀವು ಜೋರಾಗಿ ಮಾತನಾಡಿದರೆ ನಾನು ಅವರಿಗಿಂತಲೂ ಜೋರಾಗಿ ಮಾತನಾಡುತ್ತೇನೆ ನೀವು ಕೋಪ ಮಾಡಿಕೊಳ್ಳುವಂತಾದ್ದು ಏನೂ ಇಲ್ಲ ಇದರಲ್ಲಿ ಅಲ್ಲಿ ಹೇಗಿದೆ ಎಂದು ಕೇಳಿದ್ದು

ಶ್ರೀ ಜಿ ಎ ಶ್ರೀರಾಮರೆಡ್ಡಿ ಮಾತನಾಡಿ, ಆದರೆ, ನೀವು ಅದನ್ನು ದಿಕ್ಕು ತಪ್ಪಿಸುವುದಕ್ಕೆ ಕೇಳುತ್ತಿರತಕ್ಕಂಥಾದ್ದು ಈ ಪ್ರಶ್ನೆ ಅಪ್ರಸ್ತುತ

ಶ್ರೀ ರಾಮಲಿಂಗರೆಡ್ಡಿ ನನಗೂ ಗೊತ್ತು ಮಾತನಾಡುವುದಕ್ಕೆ

ಶ್ರೀ ಜಿ ಎ ಶ್ರೀರಾಮರೆಡ್ಡಿ ಮಾತನಾಡಿ, ಯಾರು ಬೇಡ ಎಂದರೂ, ಮಾತನಾಡಿ

ಗೊಂದಲ

ಅಧ್ಯಕ್ಷರು ಮಾನ್ಯ ಶ್ರೀರಾಮರೆಡ್ಡಿಯವರೆ, ಹಾಗೂ ಮಾನ್ಯ ರಾಮಲಿಂಗರೆಡ್ಡಿಯವರೆ ದಯಮಾಡಿ ಕುಳಿತುಕೊಳ್ಳಿ

ಶ್ರೀ ಜಿ ಎ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ನಾನು ಮುಗಿಸಿಲ್ಲ, ನಾನು ಹೇಳುತ್ತಿದ್ದೇನೆ ಪಶ್ಚಿಮ ಬೆಂಗಾಲ್‌ನಲ್ಲಿ ಹೇಗಿದೆ? ಹೌದು ಎಲ್ಲರಿಗೂ ತಿಳಿಯತಕ್ಕಂಥ ಹಕ್ಕಿದೆ ಈಗ ನಿಮ್ಮ ಸರ್ಕಾರ ಇದೆ, ವರದಿ ತರಿಸಿಕೊಳ್ಳಿ ನಿಮ್ಮ ಸರ್ಕಾರದಲ್ಲಿ ಹೀಗಿದೆ ಎಂದು ಹೇಳಬೇಕಾದರೆ ನಾವು ಬೇಡ ಎಂದು ಹೇಳಲಿಲ್ಲ ನಾವು ಅದನ್ನು ಮುಚ್ಚಿಟ್ಟುಬಿಟ್ಟು ಇದನ್ನು ಹೇಳಬೇಕು ಎಂದು ಹೇಳುತ್ತಿಲ್ಲ ಏಕೆಂದರೆ ನಾವು ಚರ್ಚೆ ಮಾಡುತ್ತಿರುವಾಗ ಆ ಪ್ರಶ್ನೆ ಇಲ್ಲಿ ತರತಕ್ಕಂಥಾದ್ದು ಅಪ್ರಸ್ತುತ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಅವರು ಕೋಪ ಮಾಡಿಕೊಳ್ಳುವ ಹಾಗೆ ನೀವು ಹೇಳಿದಿರಿ, ಹೇಳಬಾರದು ನೀವು ತಮಿಳುನಾಡು ಹೇಳಿದ್ದರೆ ಒಪ್ಪಿಕೊಳ್ಳುತ್ತಿದ್ದರು ವೆಸ್ಟ್ ಬೆಂಗಾಲ್ ಏಕೆ ಹೇಳಿದಿರಿ?

ಶ್ರೀ ಜೆ ಏ ಶ್ರೀರಾಮರೆಡ್ಡಿ ನೋಡಿ, ಈಗ ಗೊತ್ತಾಯಿತಾ ನಾನು ಸಿಪಿಎಮ ಎನ್ನುವ ಕಾರಣಕ್ಕೆ ರಾಜಕೀಯ ಮಾಡುವುದಕ್ಕೆ ಬರುತ್ತಾರೆ ಇವರು ಬೇರೆ ಉದ್ದೇಶದಿಂದ ಹೇಳಲಿಲ್ಲ ಅವರು ನಾನು ಅದನ್ನು ಹೇಳುತ್ತಿದ್ದೇನೆ

ಅಧ್ಯಕ್ಷರು ಮಾನ್ಯ ಶ್ರೀರಾಮರೆಡ್ಡಿಯವರೆ, ಕೋಪ ಮಾಡಿಕೊಳ್ಳುವ ಅಗತ್ಯ ಇಲ್ಲ, ದಯಮಾಡಿ ಬೇಗ ಮುಗಿಸಿ ಇನ್ನು ನಿಯಮ 69ರ ಅಡಿಯಲ್ಲಿ ಬೇರೆ ಒಂದು ವಿಚಾರ ಚರ್ಚೆಯಾಗಬೇಕಾಗಿದೆ ಅದಷ್ಟುಬೇಗ ಮುಗಿಸೋಣ ದಯಮಾಡಿ ಸಹಕರಿಸಬೇಕು

ಶ್ರೀ ಜೆ ಏ ಶ್ರೀರಾಮರೆಡ್ಡಿ ಆಯಿತು, ನಾನು ಇಷ್ಟನ್ನು ಹೇಳಿ ಸರ್ಕಾರ ಪರ್ಯಾಯವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಖಾಂತರ ಒತ್ತಾಯ ಮಾಡುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಬೇಕು ಸಮ್ಮಿಶ್ರ ಸರ್ಕಾರದ 11 ಜನ ಒಬ್ಬರು ಮಂತ್ರಿ ಇಲ್ಲಿ ಇದ್ದಾರೆ ಇನ್ನೊಬ್ಬರು ಮಂತ್ರಿಗಳು ಇದ್ದವರು ಎಲ್ಲಿಗೆ ಹೋದರು ಗೊತ್ತಿಲ್ಲ ಅಧಿಕಾರಿಗಳು ಒಬ್ಬರು ಇಲ್ಲ ಈ ಸಭೆ ಉದ್ದೇಶ ಏನು? ತಾವು ಈ ಸದನವನ್ನು ಯಾವ ಉದ್ದೇಶಕ್ಕೆ ಕರೆದಿರಿ? ಕರೆಯಬೇಕಾಗಿರಲಿಲ್ಲ ಈ ಸದನವನ್ನು ಕರೆಯಬೇಕು ಎಂದಾಗ ಪ್ರಾಮಾಣಿಕವಾಗಿ ಸದನವನ್ನು ಕರೆದಿದ್ದೀರಿ ಚರ್ಚೆಯಾಗುವಾಗ ಒಬ್ಬ ಅಧಿಕಾರಿ ಅಲ್ಲಿ ಕುಳಿತಿಲ್ಲ ಕೇಳಿ ಸ್ವಾಮಿ, ಯಾರು ನಿಮ್ಮ ಆಪ್ತ ಸಹಾಯಕರು ನಾಲ್ಕೈದು ಜನ ಬಿಟ್ಟರೆ, ಯಾರಿದ್ದಾರೆ ಸರ್ಕಾರದ ಅಧಿಖಾರಿಗಳು? ನೀವು ಒಬ್ಬರೇ ಮಂತ್ರಿ ಇರುವುದು? ಏಕೆಂದರೆ ಬಹಳ ಅಂತ್ಯಂತ ಕಳಕಳಿಯಿಂದ ಕೇಳುತ್ತೇನೆ, ಇದು ಸದನವೆ? ಇದು ಒಳ್ಳೆಯ ಗೌರವ ತರತಕ್ಕಂಥಾದ್ದು ಅಲ್ಲ ಅಧಿಕಾರಿಗಳು ಎಲ್ಲಿ ಹೋಗಿದ್ದಾರೆ? ಅವರಿಗೆ ಏನಾಗಿದೆ? ನನಗೆ ಅರ್ಥವಾಗಲಿಲ್ಲ ನೀವು 20 ಜನ ಮಂತ್ರಿಗಳಲ್ಲಿ ಇಬ್ಬರು ಈಗ ಇದ್ದಾರೆ

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್ ಅವರೇ ತಾವೇನು ಪ್ರಸ್ತಾಪ ಮಾಡಿದ್ದೀರಿ, ಅದಕ್ಕೆ ನನ್ನ ಸಹಮತ ಇದೆ ಉನ್ನತಾಧಿಕಾರಿಗಳು ಇಲ್ಲಿ ಬಂದು ಕುಳಿತುಕೊಳ್ಳಬೇಕಾಗುತ್ತದೆ ಸದನ ನಡೆಯುವಾಗ ಅನೇಕ ವಿಚಾರಗಳನ್ನು ಅವರು ತಿಳಿದುಕೊಳ್ಳಬೇಕಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಈ ಸದನಕ್ಕೆ ಏನು ಗೌರವ ಕೊಡುತ್ತಾರೆ ಅಧಿಕಾರಿಗಳು? ಒಬ್ಬ ಅಧಿಕಾರಿ ಕೂಡ ಇಲ್ಲ

ಅಧ್ಯಕ್ಷರು ಅದುದರಿಂದ ಇನ್ನು ಮುಂದೆ ನಿಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ನೀವು ಕೊಡಬೇಕೆಂದು ತಮ್ಮಲ್ಲಿ ಮನವಿ ಮಡುತ್ತೇನೆ ಆಯಿತು, ಅಲ್ಲಿಗೆ ನಿಲ್ಲಿಸೋಣ, ಅದನ್ನು ಮುಂದುವರೆಸುವುದು ಬೇಡ, ದಯಮಡಿ ಇನ್ನು ವಿಷಯಗಳು ಇವೆ, ಸಹಕರಿಸಿ

ಶ್ರೀ ಅರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೆ, ಅವರು ಏಕೆ ಬರಲಿಲ್ಲವೆಂದರೆ ಶಿಕ್ಷಣದ ಸಬ್ಜೆಕ್ಟ್ ಅವರಿಗೆ ಸಂಬಂಧಪಟ್ಟದ್ದಲ್ಲ ಬಡವರಿಗೆ ಎಂಜಿನಿಯರಿಂಗ್, ಮೆಡಿಕಲ್ ತಪ್ಪಿಸಿದರಲ್ಲಾ, ಶಿಕ್ಷಣಕ್ಕೂ ಅವರಿಗು ಸಂಬಂಧವಿಲ್ಲ

ಅಧ್ಯಕ್ಷರು ಮಾನ್ಯ ಜ್ಞಾನೇಂದ್ರ ಅವರೆ, ನೀವು ಏಕೆ ಈ ರೀತಿ ಮಡುತ್ತಿದ್ದೀರಿ ಎಂಬುದು ಗೊತ್ತಿಲ್ಲ ನಾನು ಅದನ್ನು ಸರ್ಕಾರಕ್ಕೆ ಮನವಿ ಮಾಡಿದ್ದೇನೆ ಇನ್ನು ಏಕೆ ಮಾತು ಮುಂದುವರೆಸುತ್ತೀರಿ? ಇದಕ್ಕೆ ಅರ್ಥ ಇಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ) ಮಾನ್ಯ ಅಧ್ಯಕ್ಷರೆ, ಮಾನ್ಯ ರೆಡ್ಡಿ ಯವರು ಕೇಳಿದ ಎಲ್ಲಾ ಮಾತುಗಳನ್ನು ನಾನು ಕೇಳಿದೆ ನಾನು ತಮ್ಮ ಅನುಮತಿ ಪಡೆದು ಎರಡೂರು ನಿಮಿಷದಲ್ಲಿ ಮುಗಿಸುತ್ತೇನೆ ಈ ವಿಚಾರ ಆಗಾಗ ಸದನದಲ್ಲಿ ಪ್ರಸ್ತಾಪಕ್ಕೆ ಬರುತ್ತದೆ ಕಾರಣ

ನಮಗೆಲ್ಲರಿಗೂ ಗೊತ್ತಿರತಕ್ಕಂಥ ಸತ್ಯ ಸರ್ಕಾರಿ ಕಾಲೇಜುಗಳಲ್ಲಿ ಶಿಕ್ಷಣದ ಗುಣಮಟ್ಟ ಕಡಿಮೆ ಇದೆ ಬಡವರಾದರೂ ಶಕ್ತಿಯಿಲ್ಲದೆ ಇದ್ದರೂ ತಮ್ಮ ಮಕ್ಕಳ ಭವಿಷ್ಯಕ್ಕೆ ತಮ್ಮ ತೊಗಲನ್ನು ಕಿತ್ತಾದರೂ ಖಾಸಗಿ ಶಾಲಾಕಾಲೇಜುಗಳಿಗೆ ಸೇರಿಸುವುದಕ್ಕೆ ಪ್ರಯತ್ನ ಪಡುತ್ತಾರೆ ಮಾನ್ಯ ರೆಡ್ಡಿಯವರು ಹೇಳಿದ ಎಲ್ಲಾ ಅಂಶಗಳ ಜೊತೆ ನಾನು ಇನ್ನೊಂದು ವಿಚಾರವನ್ನು ಅವರ ಮತ್ತು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಸರ್ಕಾರಿ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುವವರು ಹೆಚ್ಚು ಜವಾಬ್ದಾರಿಯಿಂದ ಮತ್ತು ನಿಷ್ಠೆಯಿಂದ ಕೆಲಸ ಮಾಡಬೇಕಾಗುತ್ತದೆ ಅವರಿಗೆ ಉದ್ಯೋಗದ ಖಾತ್ರಿ ಇದೆ, ಸಂಬಳದ ಖಾತ್ರಿ ಇದೆ ಎನ್ನುವ ಒಂದೇ ಕಾರಣಕ್ಕಾಗಿ ಶಿಕ್ಷಣದ ಗುಣಮಟ್ಟ ಕಾಪಾಡುವ ವಿಚಾರದಲ್ಲಿ ಖಾಸಗಿಯವರ ಜೊತೆಯಲ್ಲಿ ಅವರು ಪೈಪೋಟಿ ಮಾಡುವುದಿಲ್ಲ ಒಂದು ಕಾಲದಲ್ಲಿ ನಮ್ಮ ಸರ್ಕಾರಿ ಕಾಲೇಜುಗಳಲ್ಲಿ ಇದ್ದಂತಹ ಮಾಸ್ಟರುಗಳು ಜಿ ಪಿ ರಾಜರತ್ನಂ ಆಗಿರಬಹುದು, ನಂಜುಂಡಶಾಸ್ತ್ರಿ ಆಗಿರಬಹುದು ಮತ್ತೊಬ್ಬರಾಗಿರಬಹುದು ಬಹಳ ಹೆಸರುವಾಸಿಯಾಗಿದ್ದರು ಪ್ರೈವೇಟ್ ಕಾಲೇಜುಗಳಿಗೆ ಅಷ್ಟು ದೊಡ್ಡ ಹಿರಿಮೆ ಆಗ ಇರಲಿಲ್ಲ ಕ್ರಮೇಣ ಬೇರೆ ರೀತಿಯ ಆ್ಯಕ್ಟಿವಿಟೀಸ್ ಹೆಚ್ಚಾಗಿ ಶಿಕ್ಷಣದ ಗುಣಮಟ್ಟ ಕಾಪಾಡುವ ವಿಚಾರದಲ್ಲಿ ಅವರು ಹೆಚ್ಚು ಆಸಕ್ತಿಯನ್ನು ವಹಿಸುತ್ತಿಲ್ಲ ಯಾರೋ ಒಬ್ಬ ಮನುಷ್ಯ ಒಂದು ಡಿಪಾರ್ಟ್‌ಮೆಂಟ್‌ಗೆ ಲೆಕ್ಚರರ್ ಆಗಿ ಸೇರಿ ಟೈಂ ಬೌಂಡ್ ಪ್ರೊಮೋಷನ್ ಪಡೆದುಕೊಂಡು ಪ್ರೊಫೆಸರ್ ಆಗಿ ಆತನ ಇಡೀ ಜೀವನಾವಧಿ ಸರ್ಕಾರಿ ಸೇವೆಯಲ್ಲಿ ಕೆಲಸ ಮಾಡಿ ಎಂಟು ಅಥವಾ ಒಂಬತ್ತು ಪರ್ಸೆಂಟ್‌ಗೋ ಹೆಚ್ಚು ರಿಸಲ್ಟ್ ಆತನ ಡಿಪಾರ್ಟ್‌ಮೆಂಟ್‌ನಲ್ಲಿ ಕೊಡದೆ ಹೋದರೆ ಅದನ್ನು ನಾವು ಹೇಗೆ ಸಹಿಸಿಕೊಳ್ಳಬೇಕು? ಅದನ್ನೂ 'ಕೂಡ' ನಾವು ಯೋಚನೆ ಮಾಡಬೇಕಾಗುತ್ತದೆ ನಮ್ಮ ಗೌವರ್ನ್‌ಮೆಂಟ್ ಎಜ್ಯುಕೇಷನ್ ಇಸ್‌ಸ್ಟಿಟ್ಯುಷನ್ಸ್‌ಗಳು ರಿಹ್ಯಾಬಿಲಿಟೇಷನ್ ಸೆಂಟರ್ ಆಗಬಾರದು ಆಮೇಲೆ ಮಾನ್ಯ ಮಂತ್ರಿಗಳು ಕೊಟ್ಟಿರುವ ಹೇಳಿಕೆಯಲ್ಲಿ "ಸದರಿ ಸೆಕ್ಷನ್ 48ರಡಿಯಲ್ಲಿ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ಕ್ರಮಬದ್ಧತೆ ಹಾಗೂ ಪರ್ಯಕ್ರಮ ಇತ್ಯಾದಿಯ ನಿಗಧೀಕರಣ) ನಿಯಮಗಳು" ಎಂದು ಹೇಳಿ ಇದರಲ್ಲಿ ರೆಗ್ಯುಲೇಟಿಂಗ್ ಅಧಾರಿಟಿಯನ್ನು ರಚನೆ ಮಾಡಿದ್ದೇವೆ, ಹಾಗೂ ಎಲ್ಲಾ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ ನಿಜ, ಯಾವುದೇ ಸರ್ಕಾರ ಇಂತಹ ಸಮಸ್ಯೆಗಳು ಎದುರಾದಾಗ ಯಾವುದಾದರೂ ಇಂತಹ ಕ್ರಮವನ್ನು ಕೈಗೊಳ್ಳಬೇಕು, ಆ ತರಹವಾಗುತ್ತಿದೆ ಎಂದು ಏನೋ ಒಂದು ಪ್ರಯತ್ನವನ್ನು ಮಾಡಿದ್ದೀರಿ ಅದನ್ನು ನಾವು ಪ್ರಶ್ನೆ ಮಾಡುತ್ತಿಲ್ಲ ಆದರೆ ಕರ್ನಾಟಕ ರಾಜ್ಯದಲ್ಲಿ ಈ ರೆಗ್ಯುಲೇಟಿಂಗ್ ಅಧಾರಿಟಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇರುವಂತಾದ್ದು, ಎಷ್ಟು ಜಿಲ್ಲೆಗಳಲ್ಲಿ ಇದುವರೆಗೆ ಸ್ವಯಂಪ್ರೇರಿತವಾಗಿ ಅಂದರೆ ಸ್ವವೋಮೋಟೋ ವಿಚಾರಣೆಗಳನ್ನು ನಡೆಸಿ ಕ್ರಮ ತೆಗೆದುಕೊಳ್ಳುವಂತಹ ಪ್ರಯತ್ನ ಮಾಡಿದ್ದಾರೆ? ಇದು ನಾಮಾಕವಸ್ಥೆ, ಇದು ಆಲಂಕಾರಿಕ್ಕೋಸರ ಇರತಕ್ಕಂಥ ಆಧಾರಿಟಿಯಾದರೆ ಜನರಿಗೆ ಯಾವುದೇ ಫಾಯಿದೆ ಇರುವುದಿಲ್ಲ ಇಲ್ಲ ಶಿಕ್ಷಣದ ಗುಣಮಟ್ಟ ಕಡಿಮೆಯಾಗುತ್ತದೆ ಬಡವರಿಗೆ ಮಕ್ಕಳ ಭವಿಷ್ಯದ ಆತಂಕ ಅನಿವಾರ್ಯವಾಗಿ ಅವರು, ಅವರಿಗೆ ಶರಣಾಗತಿಯಾಗಬೇಕಾಗುತ್ತದೆ

3 50 ಪಿ ಎಂ

ಈ ಅಧಾರಿಟಿಗಳು ಏನಿವೆ, ಇವುಗಳಿಗೆ ಹೆಚ್ಚು ಶಕ್ತಿಯನ್ನು ಕೊಟ್ಟು, ಇವುಗಳನ್ನು ಮಂತ್ರಿಗಳು ಆಗ್ಗಿಂದಾಗ್ಗೆ ರಿವ್ಯೂ ಮಾಡಿ, ಕಂಪ್ಲೇಂಟ್ಸ್ ಇಲ್ಲವಾ? ರಾಜ್ಯದಲ್ಲಿ ಎಲ್ಲಾ ಸುಭಿಕ್ಷವಾಗಿ ಇದೆಯಾ? ಕಂಪ್ಲೆಂಟ್ಸ್ ಇದ್ದಿದ್ದರೆ, ಇದನ್ನು ಏಕೆ ನಮ್ಮ ಗಮನಕ್ಕೆ ತಂದಿಲ್ಲ, ನಿಮಗೆ ಇಷ್ಟೆಲ್ಲಾ ಅಧಿಕಾರವನ್ನು ಕೊಟ್ಟಿದ್ದೇವಲ್ಲಾ ಎನ್ನುವಂತಹ ಪ್ರಶ್ನೆಯನ್ನು ಸರ್ಕಾರ ಅವರಿಗೆ ಕೇಳಬೇಕಾಗುತ್ತದೆ, ಇಲ್ಲದಿದ್ದರೆ ಅವರಷ್ಟಕ್ಕೆ,

ಅವರು ನಿದ್ದೆ ಮಾಡುತ್ತಾರೆ ಮಾನ್ಯ ಅಧ್ಯಕ್ಷರೇ, ಇನ್ನು ಜನರಲ್ ಕೋಸರ್ಸ್ ವಿಚಾರವಾಗಿ ಒಂದು ಮಾತಿನಲ್ಲಿ ಹೇಳಿ ಮುಗಿಸುತ್ತೇನೆ, ಪದವಿಗಳಾದ ಬಿ ಎ, ಬಿ ಎಸ್.ಸಿ, ಬಿ ಕಾಂ, ಗಳಿಗೆ ತೊಂದರೆಯಾಗಿದೆ, ನಾನು ಮೊನ್ನೆ ದಿವಸ ಆರ್ ಸಿ ಕಾಲೇಜ್‌ನ ಪ್ರಿನ್ಸಿಪಾಲರಿಗೆ, ಫೋನ್ ಮಾಡಿದ್ದೆ, ನನ್ನ ಮತಕ್ಷೇತ್ರದ ಶೆಡ್ಯೂಲ್ ಕಾಸ್ಟ್‌ನ ಹುಡುಗ, ಅವನು ಶೇಕಡಾ 49ರಷ್ಟು ಅಂಕಗಳ ಪಡೆದಿದ್ದಾನೆ, ಇವನಿಗೆ ನೀಟು ನಿಗದೇ ಹೋದರೆ, ಅವನು ಬಿ ಕಾಂ, ಓದಬೇಕೆಂದರೆ ಎಲ್ಲಿಗೆ ಹೋಗಬೇಕು? ಈ ಕಾಲೇಜಿನ ಪ್ರಿನ್ಸಿಪಾಲರು ಏನು ಹೇಲುತ್ತಾರೆಂದರೆ, ಸಾರ್, ನೀವೇ ನೋಡಿ ನನ್ನ ಕೊರಡಿ ನೋಡಿ, ನಮ್ಮ ಸಿಬ್ಬಂದಿವರ್ಗದವರನ್ನು ನೋಡಿ, ನಮ್ಮ ಕಷ್ಟ ನೊಡಿ, ಅಲ್ಲಿರುವವರು ಬಹಳ ಒಳ್ಳೆಯ ಹೆಣ್ಣುಮಗಳು, ಇವರು ಮಾಜಿ ಮೇಯರ್ ಶ್ರೀ ಜೆ ಲಿಂಗಯ್ಯನವರ ಮಗಳು, ಇವರು ಅಲ್ಲಿ ಪ್ರನ್ಸಿಪಾಲರಾಗಿದ್ದಾರೆ ಬಹಳ ಸೌಮ್ಯವಾಗಿ ಮಾತನಾಡುತ್ತಾರೆ, ಅವರು ತಮ್ಮ ಎಲ್ಲಾ ಕಷ್ಟಗಳನ್ನು ಹೇಳಿದರು, ಅವರು ಆ ಸಂಸ್ಥೆಯ ಮುಖ್ಯಸ್ಥರಾಗಿ ಅವರ ಕಷ್ಟ ಹೇಲಿದ ಮೇಲೆ, ನಾವು ಅವರ ಮೇಲೆ ಗಲಾಟೆಯನ್ನು ಮಾಡುವುದಕ್ಕಾಗುವುದಿಲ್ಲ, ಆದರೆ ಮೂಲಭೂತವಾಗಿ ನಾನು ಈ ಸದನದ ಮೂಲಕ, ತಮ್ಮ ಅನುಮತಿಯನ್ನು ಪಡೆದು, ಎತ್ತಿರುವಂತಹ ಪ್ರಶ್ನೆ, ಎಲ್ಲರೂ ಶೇ 90, ಶೇ 92 ರಷ್ಟು ಅಂಕಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಮತ್ತೆ ನಮ್ಮ ಪರೀಕ್ಷಾ ಪದ್ದತಿ ಏನು ಇದೆ, ಇದು ನಮ್ಮ ಬುದ್ಧಿವಂತಿಕೆಯನ್ನು ಪರೀಕ್ಷೆ ಮಾಡುವಂತಹ fool-proof method ಅಲ್ಲ ಯಾವುದೋ ಒಂದು ಕಾರಣಕ್ಕೆ, ಒಂದು ಪರ್ಸೆಂಟೋ, ಎರಡು ಪರ್ಸೆಮಟೋ, ಕಡಿಮೆ ಬಂದ ಮಾತ್ರಕ್ಕ, ಈ ಸರ್ಕಾರಿ ಕಾಲೇಜ್‌ನಲ್ಲೂ ಕೂಡ, ಈ ಸಮಾಜದಲ್ಲಿ ಅತ್ಯಂತ ಕೆಳಹಂತದಲ್ಲಿರುವಂಧವರಿಗೆ, ಸರ್ಕಾರಿ ಇನ್‌ಸ್ಟಿಟ್ಯೂಷನ್‌ನಲ್ಲೂ ಕೂಡ ಪ್ರವೇಶ ಸಿಗದೇ ಹೋದರೆ, ಇಲ್ಲಿ ನಾವೆಲ್ಲರೂ ಇದ್ದು ಪ್ರಯೋಜನ ಏನು? ನಾವೇಲ್ಲರೂ ಸೇರಿ ಏನು ಮಾಡಿದಂತೆ ಆಯಿತು? ಅವನು ಮುಂದೆ ಏನು ಮಾಡಬೇಕು? ಅವನು ಪಿ ಯು ಸಿ ಎಂದು ಅಲ್ಲಿಗೆ ನಿಲ್ಲಬೇಕಾ ಅಧವಾ ಮತ್ತೆ ಇನ್ನೊಂದು ವರ್ಷಕ್ಕೆ ಪ್ರಯತ್ನ ಮಾಡಬೇಕಾ ಅಧವಾ ಅವನು ಹಣವನ್ನು ಕೊಟ್ಟು ಎಲ್ಲಾದರೂ ಪ್ರೈವೇಟ್ ಕಾಲೇಜ್‌ಗೆ ಸೇರಬೇಕಾ? ಆ ರೀತಿ ಅವನು ಪ್ರೈವೇಟ್ ಕಾಲೇಜ್‌ಗೆ ಹೋಗಲು ಸರ್ಕಾರ ಹಣವನ್ನು ತುಂಬಿಕೊಟ್ಟರೆ ತೊಂದರೆ ಇಲ್ಲ ತಾವು ದಯಮಾಡಿ ದೊಡ್ಡ ಮನಸ್ಸು ಮಾಬೇಕು, ನಾನು ಗೌವರ್ನಮೆಂಟ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜ್‌ನಲ್ಲಿ ಓದಿದವನು ತಮಗೂ ಗೊತ್ತಿದೆ, ನಮ್ಮ ಕಾಲೇಜಿಗೆ ಯಾರು ಬರುತ್ತಿದ್ದರೆಂದರೆ, ಬೆಂಗಳೂರಿನಲ್ಲಿ ಯಾವ ಕಾಲೇಜ್‌ನಲ್ಲೂ, ಯಾವ ಲಿಸ್ಟ್‌ನಲ್ಲೂ ಸೀಟು ಸಿಗದೇ ಇರುವವರಿಗೆ ನಮ್ಮ ಕಾಲೇಜ್‌ನಲ್ಲಿ ಸೀಟು ಕೊಡುತ್ತಿದ್ದರು, ನಾವು ಅಲ್ಲಿಂದ ಬಂದಿರುವವರು, ಈಗ ಅಲ್ಲೂ ಸೀಟು ಇಲ್ಲವೆಂದರೆ, ಎಲ್ಲವೂ ತಿರುಗ–ಮುರುಗವಾಗಿದೆ, ಇಲ್ಲೂ ಸೀಟು ಇಲ್ಲವೆಂದರೆ, ಅವನು ಹೋಗುವುದು ಎಲ್ಲಿಗೆ? ಅಲ್ಲಿ ಸೀಟು ಕೊಟ್ಟರೆ ಅಲ್ಲಿಂದ ಇಲ್ಲಿಗೆ ಬರುವುದಕ್ಕೆ ಅನುಕೂಲವಾಗುತ್ತದೆ, ಅದುದರಿಂದ ದಯಮಾಡಿ, ಅಂತಹ ಮಕ್ಕಳಿಗೆ ತಾವು ದೊಡ್ಡ ಮನಸ್ಸು ಮಾಡಿ, ಯವುದೇ ಕಾರಣಕ್ಕೂ ಹೀಗಾಗದಂತೆ ಈ ಸರ್ಕಾರಿ ಕಾಲೇಜ್‌ಗಳಿಗೆ ಇನ್‌ಸ್ಟ್ರಕ್ಷನ್ ಕೊಡಿ Percentage is not the criteria If a boy or a girl is denied admission elsewhere in the State, Government colleges must be ready to received him or her Welcome him ಅವನನ್ನು ಸ್ವಾಗತ ಮಾಡಿ ನೀವು ಕರೆದುಕೊಳ್ಳ ಬೇಕಾಗುತ್ತದೆ, ನೀವು ಆಶ್ರಯ ಕೊಡಬೇಕಾಗುತ್ತದೆ, ಅವನಿಗೆ ಶಿಕ್ಷಣವನ್ನು ಕೊಡಬೇಕಾಗುತ್ತದೆ, ನೀವೂ ಇಲ್ಲವೆಂದರೆ ಅದು ಬಹಳ ದೊಡ್ಡ ಅನ್ಯಾಯವಾಗುತ್ತದೆ, ಅದಕ್ಕೆ ತಾವು ಅವಕಾಶ ಮಾಡಿಕೊಡಬಾರದೆಂದು, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರು ಏನು ಪ್ರಶ್ನೆಯನ್ನು ಎತ್ತಿದ್ದಾರೆ, ಮಾನ್ಯ ಬಸವರಾಜುರವರು ಪ್ರಸ್ತಾಪ ಮಾಡಿದ್ದಾರೆ, ವಿರಾಜಪೇಟೆಯಲ್ಲಿ ಜ್ಯೂನಿಯರ್ ಕಾಲೇಜ್‌ನಲ್ಲಿ ಸೀಟು ಅದು ಸರ್ಕರಿ ಕಾಲೇಜ್‌ನಲ್ಲಿ ಕೊಟ್ಟಿಲ್ಲವೆಂದು ಹೇಳಿದರು, ನಾನು ಈ ಬಗ್ಗೆ ನಿನ್ನೆ ಡೈರೆಕ್ಟರ್ ಅನ್ನು ಕರೆಸಿ, ಸರ್ಕಾರಿ ಕಾಲೇಜ್‌ಗಳಲ್ಲಿ ಎಷ್ಟು ಜನ ಬಂದರೂ ಅವರನ್ನು ಅಡ್‌ಮಿಷನ್ ಮಾಡಿಕೊಳ್ಳಬೇಕೆಂದು, ಹೇಳಿದ್ದೇನೆ, ಬೇಕಾದರೆ ಇನ್ನೊಂದು ಸೆಕ್ಷನ್ ಮಾಡಿಕೊಳ್ಳಿ, ಎಂದು ಹೇಳಿದ್ದೇನೆ, ಅದೇ ರೀತಿಯಯೀಗ ಆರ್ ಸಿ ಕಾಲೇಜ್‌ನಲ್ಲಿ ಅಕಾಮಡೇಶನ್ ಇದೆ

ಶ್ರೀ ಜಿ ಎ ಶ್ರೀರಾಮರೆಡ್ಡಿ ತಾವು ರೂಮ್ ಜಾಸ್ತಿ ಮಾಡಿ ಎಂದು ಹೇಳುತ್ತೀರಿ, ಅದಕ್ಕೆ ಮೇಸ್ಟ್ರು ಎಲ್ಲಿ? ರೂಮ್ ಎಲ್ಲಿ?

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ, ಮೆಸ್ಟ್ ಇಲ್ಲ, ರೂಮ್ ಇಲ್ಲ, ಇಲ್ಲಿ ಕೊರಡಿಗಳು ಇಲ್ಲ, ಸೋರುತ್ತಿದೆ, ತೂತು ಬಿದ್ದಿದೆ, ಇಲಿಗಳ ವಾಸಸ್ಥಾನ, ದನದ ದೊಡ್ಡಿ, ಇಷ್ಟೆಲ್ಲಾ ಆಗಿದೆ, ಅಂದಮೇಲೆ ವಿದ್ಯಾರ್ಥಿಗಳು ಓದಬೇಕೆಂದರೆ ಎಲ್ಲಿ? ಸರ್ಕಾರಿ ಶಾಲೆಗಳು ಸಂಪೂರ್ಣವಾಗಿ ನಾಶವಾಗಿದೆ, ಅದು ಮಾಧ್ಯಮಿಕ ಶಾಲೆಯಾಗಿರಬಹುದು, ಪ್ರೌಢಶಾಲೆಯಾಗಿರಬಹುದು, ಎಲ್ಲಾದರೂ ಒಂದು ಕಡೆ ಉತ್ತಮವಾದಂತಹ ಶಾಲೆಯನ್ನು ದಯಮಾಡಿ ತಾವು ತೋರಿಸಿ

ಶ್ರೀ ಜಿ ಎ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ಸಚಿವರು ಸೆಕ್ಷನ್ ಅನ್ನು ಜಾಸ್ತಿ ಮಾಡಿ ಎಂದು ಹೇಳಿದರು, ಅಲ್ಲಿ ಸೆಕ್ಷನ್ ಅನ್ನು ಜಾಸ್ತಿ ಮಾಡಿದರೆ ಟೀವರ್ ಬೇಕಲ್ಲಾ?

ಶ್ರೀ ಡಿ ಮಂಜುನಾಥ್ ತಾವು ಹೇಳಿದಿರಲ್ಲಾ, ಈಗ ಸರ್ಕಾರಿ ಕಾಲೇಜ್ ಅಡ್ಮಿಷನ್ ಬಗ್ಗೆ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದರು, ಒಬ್ಬ ಹುಡುಗನಿಗೆ ಸರ್ಕಾರಿ ಕಾಲೇಜ್‌ನಲ್ಲಿ ಕೂಡಲೇ ಬೇಕು ಅಡ್ಮಿಷನ್ ಕೊಡದೆ ಹೋದರೆ ಅವನು ಎಲ್ಲಿಗೆ ಹೋಗಬೇಕು ಎಂದು ನಾನು ಈ ಬಗ್ಗೆ ಆಕಾಮಡೇಶನ್ ಇಲ್ಲದಿದ್ದರೆ, ಶಿಫ್ಟ್ ಮಾಡಿ ಈ ಸಿಸ್ಟಂನಲ್ಲಿ ಮಾಡಿ, ಏನೇ ಆದರೂ ಸರ್ಕಾರಿ ಕಾಲೇಜುಗಳಲ್ಲಿ ಅಡ್ಮಿಷನ್ ಅನ್ನು ರೆಫ್ಯೂಸ್ ಮಾಡಬಾರದೆಂದು ಹೇಳಿದ್ದೇನೆ, ಆ ರೀತಿ ಆದೇಶವನ್ನು ಕೊಟ್ಟಿದ್ದೇನೆ, ಈ ಎಜ್ಯುಕೇಶನ್ ಡಿಪಾರ್ಟ್‌ಮೆಂಟ್ ನ್ಯೂನತೆಗಳು ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ, ಇದನ್ನು ಸರಿಮಾಡುವಂಥಾದ್ದಕ್ಕೆ ನಾವು, ನೀವು ಎಲ್ಲರೂ ಸೇರಿ ಸರಿ ಮಾಡೋಣ, ಹೋದ ಸಾರಿ ಎಕಾನಮಿ ಮೆಷರ್ ಎಂದು ಲೆಕ್ಚರ್‌ಗಳನ್ನು ಅಪಾಯಿಂಟ್ ಮಾಡಲಿಲ್ಲ, ಆದರೆ ಈ ಸಾರಿ ನಾವು ಅಪಾಯಿಂಟ್ ಮಾಡಬೇಕಾಗುತ್ತದೆ, ಈ ಬಗ್ಗೆ ನನು ಹಣಕಾಸಿನ ಮಂತ್ರಿಗಳಿಗೆ ಹೇಳಿದ್ದೇನೆ, ಇವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ, ಇದರ ಜೊತೆಗೆದ ಇನ್ನೊಂದು ಮಾತನ್ನು ಹೇಳುವುದೇನೆಂದರೆ, ಕೆಲವು ಲೆಕ್ಚರರ್ಸ್‌ಗಳು ಬೆಂಗಳೂರು ಸಿಟಿ, ಮೈಸೂರು ಸಿಟಿಗಳಲ್ಲಿ ಇಲ್ಲಿ ಸೇರಿಕೊಂಡಿದ್ದಾರೆ, ಇವರು ಹತ್ತು ವರ್ಷಗಳಾದರೂ ಅವರನ್ನು ಬಿಡಿಸುವುದಕ್ಕೆ ಆಗಿಲ್ಲ, ಈ ಸಲರಿ ಏನಾದರು ಮಾಡಿ ಟ್ರಾನ್ಸ್‌ಫರ್ ಮಾಡಬೇಕು, ಎಲ್ಲರಿಗೂ ಟೌನ್‌ಗಳೇ ಬೇಕು, ಸಿಟಿಗಳೇ ಬೇಕು, ಎನ್ನುತ್ತಾರೆ, ಅವರು ರೂರಲ್ ಏರಿಯಾಕ್ಕೂ ಹೋಗಿ ಕೆಲಸವನ್ನು ಮಾಡಬೇಕು, ನಮ್ಮಲ್ಲೂ ಇದ್ದಾರೆ, ಅದರೂ ರೆಕ್ರೂಟ್ ಮೆಂಟ್ ಆಗಬೇಕು, ಇದು ಆಗಿಲ್ಲ, ಈ ಎಕನಾಮಿಕ ಮೆಷರ್ಸ್ ಎಂದು 5 ವರ್ಷಗಳಿಂದ ರೆಕ್ರೂಟ್ ಮೆಂಟ್ ಮಾಡಿಲ್ಲ, ಅದನ್ನು ತೀವ್ರವಾಗಿ ಗಮನಕ್ಕೆ ತೆಗೆದುಕೊಂಡು ಹೊಸದಾಗಿ ನೇಮಕ ಮಾಡುವುದಕ್ಕೆ, ನಾವು ಪ್ರಯತ್ನ ಮಾಡುತ್ತೇವೆಂದು ತಮಗೆ ಆಶ್ವಾಸನೆಯನ್ನು ಕೊಡುತ್ತೇನೆ, ಇದರ ಜೊತೆಗೆ ನಾನು ಆಗಲೇ ಹೇಳಿದೆ, ಈ ಎಜ್ಯುಕೇಶನ್ ಬಗ್ಗೆ, ಪ್ರೈಮರಿ, ಸೆಕೆಂಡರಿ, ಮತ್ತು ಪಿ ಯು ಸಿ ಇದರ ಬಗ್ಗೆ ಒಂದು ಸಂಕಿರಣವನ್ನು ನಡೆಸೋಣ, ನಾನು ನಿಮ್ಮಲ್ಲಿ ಕೆಲವರನ್ನು

ಇದಕ್ಕೆ ಕರೆಯುತ್ತೇನೆ, ಇದರ ಬಗ್ಗೆ ಬಹಳ ಚರ್ಚೆಯಾಗಬೇಕಾಗಿದೆ ಮುಂದಿನ ತಿಂಗಳಲ್ಲಿ ಅಧಿವೇಶನದ ನಂತರ ದೊಡ್ಡ ಸಂಕಿರಣವನ್ನು ಮಾಡಿ, ಇದಕ್ಕೆ ಶಿಕ್ಷಣ ತಜ್ಞರನ್ನು ಕರೆಸೋಣ ಇದಕ್ಕ ಚಿಂತನೆ ಮಾಡಬೇಕಗಿದೆ, ಇದರ ಗುಣಮಟ್ಟ ಬಹಳ ಕೆಳಗೆ ಹೋಗಿದೆ ನಮ್ಮ ಪ್ರೈಮರಿ ಶಾಲೆಗಳಲ್ಲಿ ಇವತ್ತು ಗುಣಮಟ್ಟವಿಲ್ಲ, ಇವರು ಏಕೆ ಖಾಸಗಿ ಶಾಲೆಗಳಿಗೆ ಹೋಗುತ್ತಾರೆಂದರೆ, ನಮ್ಮ ಶಾಲೆಗಳಲ್ಲಿ ಗುಣಮಟ್ಟ ಸರಿಯಾಗಿಲ್ಲವೆಂದು ಹೇಳುತ್ತಾರೆ, ಇದರ ಬಗ್ಗೆ ಹೇಳುವುದಾದರೆ ಶಾಸಕರ ಮಕ್ಕಳನ್ನು ಅಲ್ಲೇ ಸೇರಿಸುತ್ತಾರೆ, ಮಾಸ್ಟರ್‌ಗಳೂ ಸಹ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಾರೆ, ಅದುದರಿಂದ ನಾವೆಲ್ಲರೂ ಸೇರಿ ಈ ವಿಚಾರವಾಗಿ ಚಿಂತನೆ ಮಾಡೋಣ, ನಿಮ್ಮೆಲ್ಲರನ್ನೂ ಕರೆದು, ನಿಮ್ಮಿಂದ ಸಲಹೆ, ಸೂಚನೆಗಳನ್ನು ತೆಗೆದುಕೊಂಡು, ಇದನ್ನು ಎಷ್ಟರ ಮಟ್ಟಿಗೆ ಸರಿಮಾಡುವುದಕ್ಕೆ ಸಾಧ್ಯವಿದೆ, ಅಷ್ಟರಮಟ್ಟಿಗೆ ಸರಿ ಮಾಡೋಣ, ಇನ್ನು ರೆಕ್ರೂಟ್‌ಮೆಂಟ್ ಮಾಡುವುದಕ್ಕೆ ನಾನು ಆಶ್ವಾಸನೆಯನ್ನು ಕೊಡುತ್ತಿದ್ದೇನೆ, ನಾನು ಈ ವಿಷಯವನ್ನು ಫೈನಾನ್ಸ್ ಮಿನಿಸ್ಟರ್‌ರವರಿಗೂ ಹೇಳಿದ್ದೇನೆ, ಈ ಸಾರಿ ಏನಾದರೂ ಮಾಡಬೇಕೆಂದು ಹೇಳಿದ್ದೇನೆ. ಇನ್ನು ಕಟ್ಟಡಗಳ ಬಗ್ಗೆ ಕೆಲವು ಕಡೆಗಳಲ್ಲಿ ಅರ್ಧಬರ್ಧವಾಗಿದೆ, ಅದನ್ನು ಪೂರ್ತಿ ಮಾಡಬೇಕಾಗಿದೆ ಅದನ್ನು ಪೂರ್ತಿ ಮಾಡುವುದಕ್ಕೆ ಫೈನಾನ್ಸ್ ಮಿನಿಸ್ಟರ್ ರವರಿಗೊ ಹಣವನ್ನು ಕೊಡಬೇಕೆಂದು ಹೇಳಿದ್ದೇನೆ, ಇದರ ಬಗ್ಗೆ ಒಂದು ಪ್ರಸ್ತಾವನೆಯನ್ನು ಕಳುಹಿಸುತ್ತಿದ್ದೇನೆ, ಈ ರೀತಿಯಾಗಿ ನಾವೆಲ್ಲರೂ ಸೇರಿ ಇದನ್ನು ಸರಿಮಾಡಬೇಕಾಗಿದೆ, ಇದು ಬಹಳ ಪ್ರಮುಖವಾದಂತಹ ವಿಷಯವಾಗಿದೆ, ಇನ್ನು ಶ್ರೀ ನರೇಂದ್ರಬಾಬುರವರು ಹೇಲಿರುವಂತಹ ವಿಚಾರದ ಬಗ್ಗೆ ಅಡಿಟಿಂಗ್ಸ್ ಸೆಲ್ ಎಂದು ಇದೆಯೆಂತೆ ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಖಾಸಗಿ ಶಾಲೆಗಳಲ್ಲಿ ಎಷ್ಟು ಹಣವನ್ನು ಕಲೆಕ್ಟ್ ಮಾಡಿದರು, ಎಷ್ಟು ಖರ್ಚು ಮಾಡಿದರು ಅದು ಇದೆ, ಅದನ್ನು ಸ್ಪೀಡ್ ಆಫ್ ಮಾಡುವುದಕ್ಕೆ, ನಾನು ನಮ್ಮ ನಿರ್ದೇಶಕರಿಗೆ ಹೇಳಿದ್ದೇನೆ, ಪ್ರತಿಯೊಂದು ಕಡೆಗೂ ನೀವು ಮಾಡಿ, ಪ್ರತಿಯೊಂದು ಅನುದಾನಿತ ಶಾಲೆಗಳಿಗೆ, ಅವರು ಎಷ್ಟು ವಂತಿಗೆ ತೆಗೆದುಕೊಂಡಿದ್ದಾರೆ, ಎಷ್ಟು ಖರ್ಚು ಮಾಡಿದ್ದಾರೆಂಬ, ಬಗ್ಗೆ ನೊಡಬೇಕೆಂದು ಹೇಳಿದ್ದೇನೆ, ಮತ್ತೆ ತಾವು ಮಾನಿಟರ್ ಕಮಿಟಿ ಮಾಡಬೇಕೆಂಬ ಬಗ್ಗೆ ಹೇಳಿದ್ದೀರಿ, ಇದು ತುಂಬಾ ಒಳ್ಳೆಯ ಸಲಹೆಯಗಿದೆ, ಇದು ಬೇಕಾಗುತ್ತದೆ, ಏಕೆಂದರೆ, ಕೆಲವು ಕಡೆಗಳಲ್ಲಿ ಏನಾಗುತ್ತದೆ, ಎಂದರೆ, ನಮ್ಮ ಅಧಿಕಾರಿಗಳು ಹೋಗಿ ನೋಡಬೇಕಾಗುತ್ತದೆ, ಅವರು ಭೇಟಿ ಮಾಡುವುದೇ ಇಲ್ಲ, ನಾನು ಇವತ್ತಿನ ದಿವಸ ಕಡ್ಡಾಯವಾಗಿ, ಪ್ರೈಮೆರಿನಿರ್ದೇಶಕರು, ಪ್ರೌಢ ಶಿಕ್ಷಣ ನಿರ್ದೇಶಕರು, ಪಿಯುಸಿ ಶಿಕ್ಷಣ ನಿರ್ದೇಶಕರು, ಇವರು ಬರೀ ಆಫೀಸರ್‌ಗಳಲ್ಲಿ ಕುಳಿತರೆ ಆಗುವುದಿಲ್ಲ, ಕೊನೆಪಕ್ಷ ತಿಂಗಳಿಗೆ ಒಂದು ಸಲವಾದರೂ, ಎಲ್ಲಾ ಕಡೆ ಹೋಗಿ ವಿಸಿಟ್ ಮಾಡಿ, ಇರುವಂತಹ ನ್ಯೂನ್ಯತೆಗಳನ್ನು ಸರಿಪಡಿಸುವುದು ಹೇಗೆ ಎಂಬುದನ್ನು ನೋಡಬೇಕು, ಇದಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ, ನಾನು ಇಷ್ಟನ್ನು ಹೇಳಿ, ಈ ವಿಷಯದ ಬಗ್ಗೆ ಬಹಳ ಚರ್ಚೆಯಗಿದೆ, ಮಾನ್ಯ ಸದಸ್ಯರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ, ಅದನ್ನು ಖಂಡಿತವಾಗಿ ಮಾಡುತ್ತೇನೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅಧ್ಯಕ್ಷರೇ, ಇದಕ್ಕೆ ಒಂದು ಸಂಕಿರಣವನ್ನು ಮಾಡಲಿ, ಅಧ್ಯಕ್ಷರ ಜೊತೆಗೆ ಚರ್ಚೆ ಮಾಡಿ, ಇಲ್ಲಿ ವಿರೋಧಪಕ್ಷದ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡರು, ನಾವು ಇದಕ್ಕೆ ಒಂದು ಇಡೀ ದಿವಸ ಶನಿವಾರ ಕುಳಿತು ಕೊಳ್ಳೋಣ, ಈ ಸದನದಲ್ಲೂ ಕೂಡ ಪ್ರಾಥಮಿಕ ಶಿಕ್ಷಣದಿಂದ ಪ್ರಾರಂಭಿಸಿ ಡೊನೇಶನ್, ವೃತ್ತಿ ಶಿಕ್ಷಣ, ಇತ್ಯಾದಿಗಳ ಬಗ್ಗೆ ಎಲ್ಲವನ್ನೂ ಚರ್ಚಿಸೋಣ, ತಾವು ಇದಕ್ಕೆ ಟಿಎ, ಡಿಎ, ಕೊಡುವುದು ಬೇಡ, ಇದಕ್ಕೆ ಸಂಬಂಧಪಟ್ಟಂತೆ ಬಹಳ ಡಿಟೈಲ್ ಆಗಿ ಚರ್ಚೆ ಮಾಡೋಣ, ಇದು ಪ್ರಮುಖವಾದಂತಹ ವಿಚಾರವಾಗಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ರಮೇಶ್ ಕುಮಾರ್‌ರವರು, ಈ ವಿಷಯವಾಗಿ ಇಡೀ ಒಂದು ದಿವಸ ಚರ್ಚೆಯಾಗಬೇಕೆಂದು ಹೇಳಿದ್ದಾರೆ, ಇದಕ್ಕೆ ಅವಕಾಶವನ್ನು ಮಾಡಿಕೊಡಿ

ಅಧ್ಯಕ್ಷರು ಈಗ ಈ ಚರ್ಚೆಯನ್ನು ಮುಗಿಸೋಣ, ನಿಯಮ 69ರ ಅಟಿಯಲ್ಲಿ ನೇಕಾರರ ಸಮಸ್ಯೆಯ ಬಗ್ಗೆ ಶ್ರೀ ಗೋವಿಂದ ಎಂ ಕಾರಜೋಳ, ಹಾಗೂ ಶ್ರೀ ಡಿ ಆರ್ ಪಾಟೀಲ್‌ರವರು ಹಾಗೂ ಇನ್ನಿತರ ಸದಸ್ಯರುಗಳು ಪ್ರಸ್ತಾಪಿಸಲು ಕೊಟ್ಟಿದ್ದಾರೆ, ಈಗ ಮಾನ್ಯ ಗೋವಿಂದ ಎಂ ಕಾರಜೋಳ ರವರು ಮಾತನಾಡಬೇಕು

ನಿಯಮ 69ರ ಮೇರೆಗೆ ಚರ್ಚೆ

ವಿಷಯ ಸುಮಾರು 40,000 ಕೈಮಗ್ಗ ನೇಕಾರರು ಕೆಲಸವಿಲ್ಲದೆ ಸಂಕಷ್ಟಗೊಳಗಾಗಿದ್ದು ಅವರನ್ನು "ವಿದ್ಯಾ ವಿಕಾಸ ಯೋಜನೆ ಯಡಿಯಲ್ಲಿ ಮುಂದುವರೆಸುವ ಬಗ್ಗೆ

†ಶ್ರೀ ಗೊವಿಂದ ಎಂ ಕಾರಜೋಳ (ಮುಧೋಳ) ಮಾನ್ಯ ಅಧ್ಯಕ್ಷರೇ, ಇವತ್ತು ನೇಕಾರರ ಸಮಸ್ಯೆಯ ಬಗ್ಗೆ ಮಾಡುವುದಕ್ಕೆ, ತಾವು ನಿಯಮ 69ರ ಅಡಿಯಲ್ಲಿ, ಅನುವು ಮಾಡಿಕೊಟ್ಟಿದ್ದೀರಿ, ಆದರೆ ಆ ಸಮಸ್ಯೆಯನ್ನು ಯಾರ ಮುಂದಿಡುವುದು? ಸದನದಲ್ಲಿ ಮಾನ್ಯ ಕೈಗಾರಿಕಾ ಮಂತ್ರಿಗಳು ಇಲ್ಲ, ಮಾನ್ಯ ಹಣಕಾಸು ಮಂತ್ರಿಯವರು ಇಲ್ಲ, ಮುಖ್ಯಮಂತ್ರಿಗಳು ಇಲ್ಲ, ಸಂಬಂಧಪಟ್ಟ ಅಧಿಕಾರಿಗಳು ಇಲ್ಲ, ಕೆ ಹೆಚ್ ಡಿ.ಸಿ ಅಧಿಕಾರಿಗಳು ಇಲ್ಲ, ಟೆಕ್ಸ್‌ಟೈಲ್ ಕಮಿಷನರ್ ಇಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಸದಸ್ಯರು ಹೇಳಲಿ, ನಾವು ಮಾನ್ಯ ಮಂಸತ್ರಿಯವರನ್ನು ಕರೆಸುತ್ತೇವೆ

ಶ್ರೀ ಗೋವಿಂದ ಎಂ ಕಾರಜೋಳ ಮಾನ್ಯ ಅಧ್ಯಕ್ಷರೇ, ಇದು ಸಣ್ಣ ಸಮಸ್ಯೆಯಲ್ಲ, ದಯಮಾಡಿ ಮಾನ್ಯ ಮಂತ್ರಿಯವರನ್ನು ಕರೆಸಬೇಕು ಬೇಕಿದ್ದರೆ ಸದನದಲ್ಲಿ ಇನ್ನೂ ಹೆಚ್ಚು ಕಾಲ ಕೂಡೋಣ ದಯಮಾಡಿ ಅವರನ್ನು ಕರೆಸಿ ನಾವು ಇಲ್ಲಿ ಖಾಲಿ ಪುರಾಣ ಹೇಳುವ ಹಾಗೆ ಹೇಳಿ ಹೋದರೆ ಏನೂ ಉಪಯೋಗವಾಗುವುದಿಲ್ಲ ಅದಕ್ಕೆ ಪರಿಹಾರ ಕೊಡುವವರು ಇಲ್ಲಿ ಇದ್ದರೆ ಮಾತ್ರ ಮಾತನಾಡುತ್ತೇನೆ, ಇಲ್ಲದಿದ್ದರೆ ಕುಳಿತು ಬಿಡುತ್ತೇನೆ ದಯಮಾಡಿ ತಾವು ಅದನ್ನು ನಿರ್ಧಾರ ಮಾಡಬೇಕಾಗಿದೆ,

ಅಧ್ಯಕ್ಷರು ಕರೆಸುತ್ತೇನೆ, ನೀವು ದಯಮಾಡಿ ಮಾತನಾಡಿ

ಶ್ರೀ ವಾಟಾಳ್ ನಾಗರಾಜ್ ಅಧ್ಯಕ್ಷರೇ, ಅವರು ಹೇಳುತ್ತಿರುವುದು ಕರೆಕ್ಟ್ ಏನಾದರೊಂದು ವಿಷಯವನ್ನು ಚರ್ಚೆ ಮಾಡಿದಾಗ, ಆ ಚರ್ಚೆಯನ್ನು ಕೇಳಿ ಸರ್ಕಾರದಿಂದ ಉತ್ತರ ಕೊಡತಕ್ಕಂಥ ಸಂಬಂಧಪಟ್ಟಂಥ ಸಚಿವರು ಇದ್ದರೆ ಸಂತೋಷ. ಈಗ ಇಲ್ಲಿ ಅವರ್ಯಾರೂ ಇಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ ಚರ್ಚೆಯನ್ನು ಪ್ರಾರಂಭ ಮಾಡಲಿ ಅವರನ್ನು ಕರೆಸೋಣ ಅವರು ಬರುತ್ತಾರೆ ನೀವು ಹೇಳಿದ್ದನ್ನು ನಾವು ನೋಟ್ ಮಾಡಿಕೊಂಡು ಅವರಿಗೆ ಹೇಳುತ್ತೇವೆ, ಅವರು ಬರುತ್ತಾರೆ, ಉತ್ತರ ಕೊಡುತ್ತಾರೆ

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್‌ರವರೇ, ಹಿರಿಯ ಸಚಿವರಾದಂಥ ಮಲ್ಲಿಕಾರ್ಜುನ ಖರ್ಗೆಯವರು ಇಲ್ಲಿದ್ದಾರೆ ವಿಪ್ ಸಂಬಂಧಪಟ್ಟ ಸಚಿವರನ್ನು ಕರೆದುಕೊಂಡು ಬರಲು ಹೋಗಿದ್ದಾರೆ ಚರ್ಚೆ ಆರಂಭವಾಗಲಿ, ಅವರು ಬರುತ್ತಾರೆ ಅಲ್ಲಿಯವರೆಗೆ ಮಾನ್ಯ ಖರ್ಗೆಯವರು ನೋಟ್ ಮಾಡಿಕೊಳ್ಳುತ್ತಿರುತ್ತಾರೆ ದಯಮಾಡಿ ತಾವು ಮಾತನಾಡಿ

ಶ್ರೀ ವಾಟಾಳ್ ನಾಗರಾಜ್ ಹಿಂದೆ ಮಲ್ಲಿಕಾರ್ಜುನ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿ ಇಲ್ಲ ಕುಳಿತಿದ್ದರು ಅವಾಗಿನ ಅವರ ಧ್ವನಿಯೇ ಬೇರೆ, ಇವತ್ತಿನ ಧ್ವನಿಯೇ ಬೇರೆಯಾಗಿದೆ ಅವರು ಹೇಳಲಿ, ಅವರು ಇಲ್ಲಿ ಕುಳಿತಿದ್ದಾಗ ಎಷ್ಟು ಸಲ ಅಧಿಕಾರಿಗಳಿಲ್ಲ, ಸಂಬಂಧಪಟ್ಟ ಸಚಿವರಿಲ್ಲ ಎಂದು ಹೇಳಿಲ್ಲ? ಈಗ ಅವರು ಅಲ್ಲಿಗೆ ಹೋದ ತಕ್ಷಣ ಎಷ್ಟು ಬೇಗ ಬದಲಾವಣೆಯಗಿದ್ದಾರೆ

ಅಧ್ಯಕ್ಷರು ನೀವೇನಾದರೂ ಇಲ್ಲಿಗೆ ಬಂದರೆ ನಿಮ್ಮ ಧ್ವನಿಯೂ ಬದಲಾವಣೆ ಯಾಗುತ್ತದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಆಗ 50 ಜನ ಮಂತ್ರಿಗಳಿಗೆ 5 ಜನ ಇಲ್ಲಿ ಇರುತ್ತಿದ್ದರು ಈಗ ನಾವು ಮಂತ್ರಿಗಳಿರುವುದು ಹತ್ತೇ ಜನ ಆ ಹತ್ತರಲ್ಲಿ ಮೂರು ಜನ ಇಲ್ಲಿದ್ದೇವೆ ಅದಕ್ಕೂ ನೀವು, ನಮಗೆ ಕಳಕಳಿಯಿಲ್ಲ ಎಂದರೆ ಹೇಗೆ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇಲ್ಲವಲ್ಲಾ, ಮೂರು ಜನ ಎಲ್ಲಿದ್ದೀರಿ? ಮಾನ್ಯ ಮಂಜುನಾಥ್‌ರವರು ಆಗಲೇ ಹೊರಟುಹೋಗಿಬಿಟ್ಟರು

ಅಧ್ಯಕ್ಷರು ಆಯಿತು, ಮಾನ್ಯ ಕಾರಜೋಳರವರೇ, ತಾವು ಮಾತನಾಡಿ

ಶ್ರೀ ಗೋವಿಂದ ಎಂ ಕಾರಜೋಳ ಈ ರಾಜ್ಯದಲ್ಲಿ ಬಡ ನೇಕಾರರು, ಹತ್ತಿಯಿಂದ ನೂಲು ತಯಾರಿಸಿ, ಬಟ್ಟೆಯನ್ನು ನೇಯತಕ್ಕಂಥವರು ಸುಮಾರು ಎಂಟು ಲಕ್ಷ ಜನರಿದ್ದಾರೆ 75 ಸಾವಿರ ಕೈಮಗ್ಗಗಳಿವೆ ಅದರಲ್ಲಿ 40 ಸಾವಿರ ಮಗ್ಗಗಳು ಕೆ ಹೆಚ್ ಡಿ.ಸಿ ಗೆ ಸಂಬಂಧಪಟ್ಟ ಮಗ್ಗಗಳಾಗಿವೆ ಉಳಿದ ಇತರ ಮಗ್ಗಗಳಲ್ಲಿ ಪವರ್ ಲೂಂ ಮತ್ತು ಪಿಟ್ಸ್ ಲೂಂಗಳು ಸೇರಿವೆ ಪಿಟ್ಸ್ ಲೂಂ ಎಂದರೆ ಏನು ಎಂದು ಬಹುಶಃ ತಮಗೆ ಗೊತ್ತಿರಲಿಕ್ಕಿಲ್ಲ ಕುಣಿ ಅಂದರೆ ತಗ್ಗು ತೋಡಿ, ಆ ಕುಣಿಯಲ್ಲಿ ಕುಳಿತು ನೇಯುತ್ತಿರುತ್ತಾರೆ ಈ ಮೂರು ತರಹದ ನೇಕಾರರಿದ್ದಾರೆ ಇದರ ಜೊತೆಗೆ, ಶ್ರೀಮಂತರು ಉಡತಕ್ಕಂಥ ಸಿಲ್ಕ್ ಬಟ್ಟೆಗಳನ್ನು ತಯಾರು ಮಾಡತಕ್ಕಂಥ ನೇಕಾರರಿದ್ದಾರೆ ನೇಕಾರರಲ್ಲಿ ಸುಮಾರು ಆರು ಉಪಜಾತಿಗಳು ಬರುತ್ತವೆ ಅವುಗಳೆಮದರೆ, ಹರಗಾರರು, ಕುರುವಿನ ಶೆಟ್ಟಿ, ದೇವಾಂಗ, ಸಾಲೆ, ಸೊಕ್ಕಳ ಸಆಲೆ ಮತ್ತು ಪಟ್ಟಸಾಲೆ ಇವರು ಕುಲದಿಂದ ನೇಕಾರರು ಕುಲದಿಂದ ನೇಕಾರರಲ್ಲದವರು, ಅಂದರೆ ಅವರು ಯಾವುದೇ ಸಮಾಜಕ್ಕೆ ಸೇರಿದವರಾಗಿರಬಹುದು, ಅವರು ಕುರುಬರಿರಬಹುದು, ಹರಿಜನರಿರಬಹುದು, ಮುಸಲ್ಮಾನರಿರಬಹುದು, ಹೀಗೆ ಬೇರೆಯವರೂ ನೇಕಾರಿಕೆ ಮಾಡುತ್ತಿದ್ದಾರೆ ಒಟ್ಟು ಎಂಟು ಲಕ್ಷ ಜನ ಇದರ ಮೇಲೆ ಅವಲಂಬಿತರಾಗಿದ್ದಾರೆ ಇವರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕಾಗಿ ಮತ್ತು ಕೈಮಗ್ಗ ನೇಕಾರಿಕೆಯ ಉದ್ದಿಮೆಯನ್ನು ಅಭಿವೃದಧಿ ಪಡಿಸುವುದಕ್ಕಾಗಿ ಮತ್ತು ನೇಕಾರಿಕೆಯ ಉದ್ದಿಮೆಯನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಮತ್ತು ನೇಕಾರರಿಗೆ ಆರ್ಥಿಕವಾಗಿ ಸಹಾಯ, ಮಾಡುವುದಕ್ಕಾಗಿ, ಸರ್ಕಾರ 1975ರಲ್ಲಿ, ಕರ್ನಾಟಕ ಹ್ಯಾಂಡ್‌ಲೂಂ ಡೆವೆಲಪ್‌ಮೆಂಟ್ ಕಾರ್ಪೊರೇಷನ್‌ಅನ್ನು ಪ್ರಾರಂಭ ಮಾಡಿತು (ಅಂದಿನಿಂದ 1985ರವರೆಗೆ ನೇಕಾರರು ..

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅಧ್ಯಕ್ಷರೇ, ಇದು ಸರಿಯಲ್ಲ ಅವರು ನೇಕಾರರ ಬಗ್ಗೆ ಮಾತನಾಡುತ್ತಿದ್ದಾರೆ ಮಂತ್ರಿಗಳು ಬೇಡ, ಸಂಬಂಧಪಟ್ಟ ಅಧಿಕಾರಿಗಳಾದರೂ ಇರಬೇಕಲ್ಲವೇ? ನೋಟ್ ಮಾಡಿಕೊಳ್ಳಲು ಯಾರು ಇದ್ದಾರೆ? ಈ ಬಗ್ಗೆ ನಾವು ನಿಮಗೆ ಹೇಳಿದರೆ, ಬರುತ್ತಾರೆ, ನೀವು ಚರ್ಚೆ ಪ್ರಾರಂಭ ಮಾಡಿ ಎಂದು ಹೇಳುತ್ತೀರಿ ಇದು ಬಹಳ ಪ್ರಮುಖವಾದಂಥ ಪ್ರಶ್ನೆ ದಯವಿಟ್ಟು ತಾವು ಅಧಿಕಾರಿಗಳ ಗ್ಯಾಲರಿಯನ್ನು ನೋಡಿ ಇದಕ್ಕೆ ಸಂಬಂಧಪಟ್ಟವರು ಯಾರಾದರು ಇದ್ದಾರೆಯೇ ಎಂದು ನೋಡಿ

ಶ್ರೀ ಅರಗ ಜ್ಞಾನೇಂದ್ರ ಇದು ಇವತ್ತಿನ ಅಜೆಂಡಾದಲ್ಲಿ ಬಂದಿದೆ ನೀವು ನಿನ್ನೆಯೇ ಕಳುಹಿಸಿಕೊಟ್ಟಿದ್ದೀರಿ ಇಲ್ಲಿ ಯಾರಿದ್ದಾರೆ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಈ ಸದನ ಇಷ್ಟು ಬೇಜವಾಬ್ದಾರಿತನದಿಂದ ವರ್ತಿಸುವುದಾದರೆ ..

ಅಧ್ಯಕ್ಷರು ಮಾನ್ಯ ಹಿರಿಯ ಸದಸ್ಯರುಗಳಲ್ಲಿ ನನ್ನದೊಂದು ಮನವಿ ನಾವು ಆಗಲೇ ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದೇವೆ ಸಂಬಂಧಪಟ್ಟ ಮಂತ್ರಿಗಳನ್ನು ಕರೆಯುವುದಕ್ಕೆ ಹೋಗಿದ್ದಾರೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಎಂದು ಸೂಚನೆ ಕೊಟ್ಟಿದ್ದೇನೆ ಅವರು ಬರಲಿ ಎನ್ನುವ ಒಂದೇ ಕಾರಣಕ್ಕಾಗಿ ಚರ್ಚೆ ನಿಲ್ಲುವ ಅಗತ್ಯವಿಲ್ಲ ಮಾನ್ಯ ಕಾರಜೋಳರವರೇ, ನೀವು ಮುಂದುವರೆಸಿ ದಯಮಾಡಿ ತಾವು ಕುಳಿತುಕೊಳ್ಳಬೇಕು, ದಯಮಾಡಿ ಸಹಕರಿಸಬೇಕು ನೀವು ಎತ್ತಿರತಕ್ಕಂಥ ವಿಚಾರವನ್ನು ನಾನು ಒಪ್ಪಿ ಸರ್ಕಾರಕ್ಕೆ ಸೂಚನೆ ಕೊಟ್ಟಮೇಲೂ ಪದೇಪದೇ ನೀವು ನಿಂತುಕೊಳ್ಳುವುದು ಸರಿಯಲ್ಲ

ಶ್ರೀ ಅರಗ ಜ್ಞಾನೇಂದ್ರ ಅಧಿಕಾರಿಗಳಿಗೆ ಶಿಕ್ಷೆ ಕೊಡಬೇಕು ಇದು ಯಾವ ರೀತಿ ಸರ್? ನಾವು ಅನಾವಶ್ಯಕವಾಗಿ ಮಾತನಾಡಿದೆವೇ? ಇದು ನಿಮ್ಮ ಪೀರದ ಘನತೆಯ ಪ್ರಶ್ನೆಯಾಗಿದೆ

ಅಧ್ಯಕ್ಷರು ನಾನು ಅವರಿಗೆ ಸೂಚನೆ ಕೊಟ್ಟಿದ್ದೇನೆ ಮಾನ್ಯ ಹಿರಿಯ ಸದಸ್ಯರು ಹೀಗೆ ಮಾಡಿದರೆ ಸದನ ನಡೆಸಲು ಬಹಳ ಕಷ್ಟವಾಗುತ್ತದೆ ಇದು ಸರ್ವೇ ಸಮಾನ್ಯವಾಗಿದೆ ಇಲ್ಲ ಎಂದು ನಾನು ಹೇಳುವುದಿಲ್ಲ ಸಚಿವರನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಲಿಕ್ಕೆ ನಾನು ಸೂಚನೆ ಕೊಟ್ಟಿದ್ದೇನೆ ನಾನು ಹಾಗೆ ಮಾಡಿದಾಗಲೂ ನೀವು ಹೀಗೆ ಮಾಡಿದರೆ ಹೇಗೆ? ದಯಮಾಡಿ ಪೀರವನ್ನು ಅಲಂಕರಿಸಬೇಕು ಇನ್ನೂ ಒಂದು ಗಂಟೆ ಇದೆ ಅವರು ಹೇಳಲಿ, ಸಮಸ್ಯೆಗಳು ಚರ್ಚೆಯಾಗಲಿ

ಶ್ರೀ ಅರಗ ಜ್ಞಾನೇಂದ್ರ ಅವರು ಯಾರಿಗೆ ಹೇಳಬೇಕು? ಪರಿಹಾರ ಕೊಡುವವರು ಯಾರು?

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಬೇಕು ಅವರು ಮಾತನಾಡಲಿ

ಶ್ರೀ ಎಸ್ ಎಸ್ ಪಾಟೀಲ್ ನಾವೂ ಅದಕ್ಕೆ ಸೈನ್ ಮಾಡಿದ್ದೇವೆ, ನಾವು ಅದರ ಬಗ್ಗೆ ಮಾತನಾಡಬೇಕಿದೆ ದುರ್ದೈವದಿಂದ ಏನಾಗಿದೆ ಎಂದರೆ, ಇದೆಲ್ಲಾ ಚರ್ಚೆಯಾದಮೇಲೇ ಅವರು ಮಾತನಾಡಲಿಕ್ಕೆ ನಿಂತಿದ್ದಾರೆ ಪುನಃ ಪುನಃ ಅದನ್ನೇ ತೆಗೆದರೆ ಚರ್ಚೆಯ ಮಹತ್ವವೇ ಹೋಗಿಬಿಡುತ್ತದೆ ಹೀಗೇ ಆಗಿ ರಾಜ್ಯಪಾಲರ ಭಾಷಣದ ಮೇಲೂ ಚರ್ಚೆಯಾಗಲಿಲ್ಲ ದಯಮಾಡಿ ಅವರಿಗೆ ಮಾತನಾಡಲು ಹೇಳಿ

ಶ್ರೀ ಅರಗ ಜ್ಞಾನೇಂದ್ರ ಇಲ್ಲಿರುವ ಖಾಲಿ ಖುರ್ಚಿಗಳಿಗೆ ಮಾತನಾಡಬೇಕೇನು?

ಅಧ್ಯಕ್ಷರು ಹಿರಿಯ ಸದಸ್ಯರುಗಳಲ್ಲಿ ನನ್ನ ಮನವಿ ಇಷ್ಟೇ ನಾನು ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದೇನೆ ಸಂಬಂಧಪಟ್ಟ ಮಂತ್ರಿಗಳು ಬರುತ್ತಾರೆ

ಶ್ರೀ ವಾಟಾಳ್ ನಾಗರಾಜ್ ಅಧಿಕಾರಿಗಳು ಒಬ್ಬರೂ ಇಲ್ಲ ಎಂದರೆ ಏನು ಸದನವಿದು?

ಶ್ರೀ ಅರಗ ಜ್ಞಾನೇಂದ್ರ ಸಂಬಂಧಪಟ್ಟ ಇಲಾಖೆಯ ಒಬ್ಬ ಅಧಿಕಾರಿಯೂ ಇಲ್ಲ ಈ ಸದನದ ಬಗ್ಗೆ ಅವರಿಗೆ ಗೌರವವಿಲ್ಲವೇ?

ಅಧ್ಯಕ್ಷರು ಮಾನ್ಯ ಹಿರಿಯ ಸದಸ್ಯರಲ್ಲಿ ನನ್ನ ಮನವಿ ಏನೆಂದರೆ, ತಆವು ವಿಚಾರವನ್ನು ಎತ್ತಿದ ಮೇಲೆ ನಾನು ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದೇನೆ, ಸ್ವಲ್ಪ ಹೊತ್ತು ಕಾಯೋಣ ಅವರು ಚರ್ಚೆ ಮುಂದುವರೆಸಲಿ ಬೇರೆ ಸಚಿವರಿದ್ದಾರೆ, ಅವರು ಏನು ಮಾತನಾಡುತ್ತಿದ್ದಾರೆ ಎನ್ನುವುದನ್ನು ಅವರು ನೋಟ್ಸ್ ತೆಗೆದು ಕೊಳ್ಳುತ್ತಾರೆ ದಯಮಾಡಿ ತಾವು ಸಹಕರಿಸಿ ಅವರು ವಿಚಾರವನ್ನು ಪ್ರಸ್ತಾಪ

ಮಾಡಲು ಬಹಳ ಕಾಲದಿಂದ ವೈಟ್ ಮಾಡುತ್ತಿದ್ದಾರೆ & ಲಕ್ಷ ಕುಟುಂಬಗಳಿಗೆ ಸಂಬಂಧಪಟ್ಟ ವಿಚಾರವಿದ್ದು ಮಾನ್ಯ ಖರ್ಗೆಯವರೆ, ಇನ್ನು ಮುಂದೆ ಈ ರೀತಿಯಾಗದ ಹಾಗೆ ನೋಡಿಕೊಳ್ಳಬೇಕಾದುದು ನಿಮ್ಮಗಳ ಜವಾಬ್ದಾರಿ ಇಲ್ಲಿ ಎಲ್ಲಾ ಅಧಿಕಾರಿಗಳೂ ಇರಬೇಕೆಂದಿಲ್ಲ ಯಾವ ವಿಷಯ ಇರುತ್ತದೋ, ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಹಾಜರಿರಬೇಕು ಅವರು ಈಗ ಇಲ್ಲಿ ಇದ್ದಾರೋ, ಇಲ್ಲವೋ ಗೊತ್ತಿಲ್ಲ ದಯಮಾಡಿ ಅವರನ್ನು ಕರೆಸತಕ್ಕಂಥ ವ್ಯವಸ್ಥೆ ಮಾಡಬೇಕು ಚರ್ಚೆ ಸರಿಯಾದ ರೀತಿಯಲ್ಲಿ ನಡೆಯಬೇಕು ಎಲ್ಲರಿಗೂ ಅವಕಾಶ ಕೊಡಬೇಕು ನೇಕಾರರ ಸಮಸ್ಯೆ ಚರ್ಚೆಯಾಗಬೇಕು ಎಂದು ಹೇಳಿದ್ದೇನೆ ನೀವು ಹೇಳಿರುವಂಥಾದ್ದಕ್ಕೆ ನಾನು ಸರ್ಕಾರಕ್ಕೆ ಸೂಚನೆಯನ್ನೂ ಕೊಟ್ಟಿದ್ದೇನೆ ಆದ್ದರಿಂದ ದಯಮಾಡಿ ತಾವು ಧೀರವನ್ನು ಅಲಂಕರಿಸಬೇಕು (ಸದನದಲ್ಲಿ ಸಂಬಂಧಪಟ್ಟ ಸಚಿವರು ಮತ್ತು ಅಧಿಕಾರಿಗಳು ಹಾಜರಿಲ್ಲರಿದರುವುದನ್ನು ಪ್ರತಿಭಟಿಸಿ ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಸಿದ್ಧನಗೌಡ ಈಶ್ವರಗೌಡ ಚಿಕ್ಕನಗೌಡ (ಕಲಘಟಗಿ) ಮಾನ್ಯ ಅಧ್ಯಕ್ಷರೇ, ವಿಧಾನಸಭೆಯಲ್ಲೇ ಈ ರೀತಿಯಾದರೆ ಜಿಲ್ಲಾಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಯಾವ ರೀತಿ ಇರುತ್ತದೆ ಎಂದು ತಾವು ವಿಚಾರ ಮಡಿ ಸಚಿವರು, ಶಾಸಕರುಗಳಿರುವ ಕಡೆಯಲ್ಲೇ ಅಧಿಕಾರಿಗಳ ವರ್ತನೆ ಈ ರೀತಿಯಾದರೆ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕುಮಟ್ಟದಲ್ಲಿ ಹೇಗಿರುತ್ತದೆ ಎಂದು ನೋಡಿ ಒಬ್ಬ ಅಧಿಕಾರಿಯಾದರೂ ಇರಬೇಡವೇ? ಈ ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ಹತೋಟಿಯಿಲ್ಲವೇ?

ಅಧ್ಯಕ್ಷರು ಮಾನ್ಯ ಸದಸ್ಯರುಗಳು ಏಕೆ ಈ ರೀತಿ ಮಾಡುತ್ತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ ಚರ್ಚೆ ಆಗಬೇಕೋ, ಬೇಡವೋ? ಏಕೆ ಹೀಗೆ ಅಡ್ಡಿ ಮಾಡುತ್ತಿದ್ದೀರಿ? ನಾನು ಸರ್ಕಾರಕ್ಕೆ ಸ್ಪಷ್ಟವಾಗಿ ಸೂಚನೆ ಕೊಟ್ಟಮೇಲೂ ಇವರು ಹೀಗೆ ಮಾತನಾಡುತ್ತಿರುವುದು ಸರಿಯಿಲ್ಲ ಕಾರಜೋಳರವರೇ, ತಾವು ದಯಮಾಡಿ ಮುಂದುವರೆಸಿ

ಶ್ರೀ ಗೋವಿಂದ ಎಂ ಕಾರಜೋಳ ಸನ್ಮಾನ್ಯ ಅಧ್ಯಕ್ಷರೇ, ನೇಕಾರರಿಗೆ ಆರ್ಥಿಕವಾಗಿ ಸಹಾಯ ಮಾಡುವ ದೃಷ್ಟಿಯಿಂದ ಮತ್ತು ರಾಜ್ಯದಲ್ಲಿ ಕೈಮಗ್ಗ ಕೈಗಾರಿಕೆಗೆ ಉತ್ತೇಜನ ನೀಡುವ ದೃಷ್ಟಿಯಿಂದ ಸರ್ಕಾರ 1975ರಲ್ಲಿ ಕೆ ಹೆಚ್ ಡಿ ಸಿ ಯನ್ನು ಪ್ರಾರಂಭ ಮಾಡಿತು ಇದೊಂದು ರಾಜ್ಯ ಸರ್ಕಾರದ ಸಂಸ್ಥೆ ಇಲ್ಲಿಗೆ ಐ ಎ ಎಸ್ ಅಧಿಕಾರಿಗಳನ್ನು ಎಂ ಡಿ ಎಂದು ನೇಮಕ ಮಾಡುತ್ತಾರೆ ಅನೇಕ ಸರ್ಕಾರಗಳು ತಮ್ಮ ಪಕ್ಷ ಶಾಸಕರನ್ನೋ, ಕಾರ್ಯಕರ್ತರನ್ನೋ ಇದರ ಅಧ್ಯಕ್ಷರನ್ನಾಗಿ ನೇಮಿಸುತ್ತಾರೆ ಇವರೆಲ್ಲರೂ ಕೂಡಿ ಈ ಸಂಸ್ಥೆಯನ್ನು ಯಾವ ಮಟ್ಟಕ್ಕೆ ತಂದಿದ್ದಾರೆ ಎಂದರೆ ಈ ಸಂಸ್ಥೆಯಲ್ಲಿ 1975ರಿಂದ 1999ರವರೆಗೆ 14 ಕೋಟಿ ರೂಪಾಯಿ ಲಾಸ್ ಆಯಿತು ಕಳೆದ ನಾಲ್ಕು ವರ್ಷಗಳಲ್ಲಿ ಅಂದರೆ 1999ರಿಂದ 2003ರವರೆಗಿನ ಅವಧಿಯಲ್ಲಿ ಒಟ್ಟು 29 ಕೋಟಿ ರೂಪಾಯಿಗಳು ಲಾಸ್ ಆಯಿತು ಒಟ್ಟು ಸುಮಾರು 43 ಕೋಟಿ ರೂಪಾಯಿ ಕೆ ಹೆಚ್ ಡಿ ಸಿ ಯಲ್ಲಿ ಹಾನಿಯಾಗಿದೆ ಈ ರಾಜ್ಯದಲ್ಲಿ ಕೆ ಹೆಚ್ ಡಿ ಸಿ ಯನ್ನು ಅವಲಂಬಿಸಿ 40 ಸಾವಿರ ಮಗ್ಗಗಳಲ್ಲಿ ಕೆಲಸ ಮಾಡತಕ್ಕಂಥ ನೇಕಾರರು ಮತ್ತು ಅವರ ಅವಲಂಬಿತರು ಸೇರಿ ಒಟ್ಟು ಎಂಟು ಲಕ್ಷ ಜನರಿದ್ದಾರೆ ಅವಲಂಬಿತರು ಎಂದರೆ ಅದಕ್ಕೆ ಸಂಬಂಧಪಟ್ಟ ಇನ್ನುಳಿದವರು ಬರುತ್ತಾರೆ ಅವರಲ್ಲಿನೂಲು ತರುವವರಿದ್ದಾರೆ, ಬಣ್ಣ ಹಾಕುವವರಿದ್ದಾರೆ, ಗಂಜಿ ಹಾಕುವವರಿದ್ದಾರೆ, ಬೀಮ ಸುತ್ತುವವರಿದ್ದಾರೆ, ಕಂಡಿಕೆ ತಯಾರಿಸುವವರಿದ್ದಾರೆ, ನೇಯುವವರಿದ್ದಾರೆ, ಫಿನಿಷಿಂಗ್ ಮಾಡುವವರಿದ್ದಾರೆ, ಪ್ರಿಂಟಿಂಗ್ ಮಾಡುವವರಿದ್ದಾರೆ, ಮಾರಾಟ ಮಾಡುವವರಿದ್ದಾರೆ ಇವರೆಲ್ಲರೂ ಸೇರಿ ಈ ರಾಜ್ಯದಲ್ಲಿ ಒಟ್ಟು ಎಂಟು ಲಕ್ಷ ಜನರಾಗುತ್ತಾರೆ ಲಾಸ್ ಆಗಿರುವುದರಿಂದಾಗಿ, ಪ್ರತಿತಿಂಗಳು ಅವರು ಎಷ್ಟು ನೇಯುತ್ತಾರೆ,

ಅಷ್ಟು ನೂಲನ್ನು ಕೊಡಲು ಕೆ ಹೆಚ್ ಡಿ ಸಿ ಸಮರ್ಥವಾಗಿಲ್ಲ ತಿಮಗಳಲ್ಲಿ 3–4 ದಿವಸ ಕೆಲಸ ಮಾಡುವಷ್ಟು ನೂಲನ್ನು ಪೂರೈಕೆ ಮಾಡಲೂ ಸಾಧ್ಯವಾಗುತ್ತಿಲ್ಲ ಇದರಿಂದ ಅವರ ವರಮಾನ ಎಷ್ಟಾಗಿದೆ ಎಂದರೆ, ಒಂದು ಕುಟುಂಬದ ಪ್ರತಿ ದಿನದ ಇದರಿಂದ ಅವರ ವರಮಾನ ಎಷ್ಟಾಗಿದೆ ಒಂದು ಕುಟುಂಬದಲ್ಲಿ 4–5 ಜನ ಬದುಕುತ್ತಿರುವಾಗ ಅವರ ಪ್ರತಿ ದಿನದ ವರಮಾನ ರೂ 7 00 ಆದರೆ, ಅವರು ಯಾವ ರೀತಿ ಬದುಕುವುದಕ್ಕೆ ಸಾಧ್ಯ ಇದೆ ಎನ್ನುವುದರ ಬಗ್ಗೆ ದಯವಿಟ್ಟು ತಾವು ಯೋಚನೆ ಮಾಡಿ ನಾನು ಹೇಳುತ್ತಿರುವ ಈ ಅಂಕಿಸಂಖ್ಯೆ ನನ್ನ ಸ್ವಂತ ವಿಚಾರದಿಂದ ಹೇಳುವುದಲ್ಲ ಅವರ ಪಾಸು ಬುಕ್‌ಗಳನ್ನು ನೋಡಿ ಹೇಳುತ್ತಿದ್ದೇನೆ ಕೆ ಹೆಚ್ ಡಿ ಸಿ ಯವರು ಪ್ರತಿ ತಿಂಗಳು ಅವರಿಗೆ ಏನು ಕೂಲಿ, ವೇಜಸ್ ಕೊಡುತ್ತಾರೆ ಅದು ಬ್ಯಾಂಕ್‌ನಲ್ಲಿ ಜಮಾ ಆಗುತ್ತದೆ ಅದನ್ನು average ತೆಗೆದುಕೊಂಡಾಗ ಪ್ರತಿ ದಿನಕ್ಕೆ ಅವರಿಗೆ ರೂ 7–00 ರಂತೆ ಬರುತ್ತಿದೆ ಹಾಗಾದರೆ ಅಷ್ಟು ಹಣದಲ್ಲಿ ಆ ನಾಲ್ಕೈದು ಜನ ಬದುಕಲಿಕ್ಕೆ ಸಾಧ್ಯವೇ? ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡುತ್ತಿಲ್ಲ ಈ ನೇಕಾರರ ಮತ್ತು ಕೈಮಗ್ಗ ಉದ್ಯಮವನ್ನು ಪ್ರೋತ್ಸಾಹಿಸುವುದಕ್ಕಾಗಿ ಸರ್ಕಾರ 1985–86ರಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ 'ವಿದ್ಯಾ ವಿಕಾಸ ಯೋಜನೆ' ಯಲ್ಲಿ ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರವನ್ನು ಕೊಡುವ ಕಾರ್ಯಕಮವನ್ನು ಪ್ರಾರಂಭ ಮಾಡಿದರು ಆ ಉಚಿತ ಸಮವಸ್ತ್ರವನ್ನು ಕೊಡತಕ್ಕಂಥದ್ದೆಲ್ಲವನ್ನೂ ಕೆ ಹೆಚ್ ಡಿ ಸಿ ಮುಖಾಂತರವೇ ಖರೀದಿ ಮಾಡುವುದಕ್ಕೆ ಪ್ರಾರಂಭ ಮಾಡಿದರು ಅದೇ ರೀತಿ ಆಗಿನ ಸರ್ಕಾರ ಬಡವರಿಗೆ ಅಗ್ಗ ದರದಲ್ಲಿ ಸೀರೆ, ಮತ್ತು ದೋತ್ರ ಕೊಡತಕ್ಕಂಥ ಕಾರ್ಯಕ್ರಮವನ್ನೂ ಸಹ ಪ್ರಾರಂಭ ಮಾಡಿದ್ದರು ಅವೆರಡನ್ನೂ ಮಾಡಿಕೊಡಲು ನೇಕಾರರಿಗೆ ಕೊಟ್ಟಿದ್ದರಿಂದ ಅಂದರೆ ಕೆ ಹೆಚ್ ಡಿ ಸಿ ಗೆ ಆ ಆರ್ಡರ್ ಕೊಟ್ಟಿದ್ದರಿಂದ ನೇಕಾರರ ಸ್ಥಿತಿಗತಿ ಸ್ವಲ್ಪಮಟ್ಟಿಗೆ ಉತ್ತಮಪಟ್ಟಿತು ಆದಾದನಂತರ ಮುಂದಿನ ದಿನಗಳಲ್ಲಿ ಕೆ ಹೆಚ್ ಡಿ ಸಿ ಗೆ ಆ ಆರ್ಡರ್ ಕೊಡುವುದನ್ನು ಕೆಲವು ಅಧಿಕಾರಿಗಳು ನಿಲ್ಲಿಸಿದರು ಮತ್ತು ಇನ್ನೂ ಅನೇಕ ವ್ಯಾಪಾರಸ್ಥರು ಸೇರಿಕೊಮಡು ಕೆ ಹೆಚ್ ಡಿ ಸಿ ಗೆ ಆ ಆದೇಶ ಕೊಡುವುದನ್ನು ಕಡಿಮೆ ಮಾಡುತ್ತಾ ಹೋದರು ಆ ಬಟ್ಟೆಯ ಗುಣಮಟ್ಟ ಸರಿಯಿಲ್ಲ ಅವರು ಬೇರೆಯವರ ಜೊತೆ ಕಾಂಪಿಟಿಶನ್ ಮಾಡುವುದಿಲ್ಲ ವೇಳೆಗೆ ಸರಿಯಾಗಿ ಬಟ್ಟೆಗಳನ್ನು ಪೂರೈಸುವುದಿಲ್ಲ ಎನ್ನುವಂಥ ಈ ರೀತಿಯ ಕುಂಟುನೆಪಗಳನ್ನೆಲ್ಲಾ ಒಡ್ಡಿ ಕೆ ಹೆಚ್ ಡಿ.ಸಿ ಗೆ ಆದೇಶ ಕೊಡುವಂಥದ್ದು ಕ್ರಮೇಣವಾಗಿ ಕಡಿಮೆ ಆಗುತ್ತಾ ಬಂತು ಕಳೆದ 9 ತಿಂಗಳಿಂದ ನೇಯ್ಗೆ ಮಾಡಲು ನೇಕಾರರಿಗೆ ಒಂದೇ ಒಂದು ಕೆ ಜಿ ನೂಲು ಸಹ ಕೆ ಹೆಚ್ ಡಿ ಸಿ ಯವರು ಕೊಟ್ಟಿಲ್ಲ ಅಂದಮೇಲೆ ನೇಕಾರರ ಸ್ಥಿತಿಗತಿ ಹೇಗಿರಬಹುದು? ಅವರಿಗೆ ಬೇರೆ ಉದ್ಯೋಗ ಮಾಡುವುದಕ್ಕೆ ಗೊತ್ತಿಲ್ಲ ಅವರು ನೇಕಾರಿಕೆ ಮಾತ್ರ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವುದು ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ. ಮುಸಲ್ಮಾನರಿಗೆ ಅವರ ಧರ್ಮದಲ್ಲಿ ಶ್ರೇಷ್ಠವಾದ ಹಬ್ಬ ರಂಜಾನ್ ಆಗಿರುತ್ತದೆ ತಮಗೂ ಕೂಡ ಗೊತ್ತಿರುವ ಹಾಗೆ ರಂಜಾನ್ ಹಬ್ಬದಲ್ಲಿ ಮುಸ್ಲಿಮರು ಏನು ಮಾಡುತ್ತಾರೆಂದರೆ ತಮ್ಮ ಮನೆಯಲ್ಲಿರತಕ್ಕಂಥ ಮಕ್ಕಳಿಗೆ ಮತ್ತು ಕುಟುಂಬದ ಎಲ್ಲಾ ಸದಸ್ಯರಿಗೆ ಹೊಸ ಬಟ್ಟೆಗಳನ್ನು ಕೊಡಿಸುವಂಥದ್ದು ರೂಢಿಯಲ್ಲಿದೆ ನಮ್ಮ ಬನಹಟ್ಟಿಯಲ್ಲಿ ಕಳೆದ ವರ್ಷ ಅಂದರೆ 2003ರಲ್ಲಿ ರಂಜಾನ್ ಹಬ್ಬದ ದಿವಸ ರಂಜಾನ್ ಸಾಬ್ ಗಡ್ಡಿ ಎನ್ನತಕ್ಕಂಥ ಒಬ್ಬ ನೇಕಾರ ತನ್ನ ಮಕ್ಕಳಿಗೆ ರಂಜಾನ್ ಹಬ್ಬಕ್ಕೆ ಬಟ್ಟೆ ಕೊಡಿಸುವುದಕ್ಕೆ ಆಗಲಾರದಕ್ಕಾಗಿ ಬೆಂಕಿ ಹಚ್ಚಿಕೊಂಡು ಕೈಮಗ್ಗದ ಮೇಲೆ ಬಿದ್ದು ಅವನು ಸತ್ತುಹೋದ ಹೀಗಾಗಿ ಆ ನೇಕಾರರ ಪರಿಸ್ಥಿತಿ ಯಾವ ಮಟ್ಟಕ್ಕೆ ಇಳಿದಿದೆ ಎಂಬುದನು ತಾವು ಆಲೋಚನೆ ಮಾಡಬಹುದು ಕಳೆದ ವರ್ಷ ಇವರ ಸ್ಥಿತಿಗತಿಯನ್ನು

ನೋಡಿ ಹಿಂದಿನ ಸರ್ಕಾರದ ಮುಖ್ಯಮಂತ್ರಿಗಳಾಗಿದ್ದಂಥ ಸನ್ಮಾನ್ಯ ಕೃಷ್ಣರವರು ಆ ನೇಕಾರರ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಮತ್ತು ಕೆ ಹೆಚ್ ಡಿ ಸಿ ಯನ್ನು ಪುನಃಶ್ಚೇತನಗೊಳಿಸುವುದಕ್ಕಾಗಿ 105 ಕೋಟಿ ರೂಪಾಯಿಗಳ ಪ್ಯಾಕೇಜ್‌ನ್ನು ಕೊಡುತ್ತೇವೆಂದು ಅನೌನ್ಸ್ ಮಾಡಿದರು ಆದರೆ ಆ ಪ್ಯಾಕೇಜ್ ಪ್ಯಾಕೇಜ್ ಆಗಿಯೇ ಉಳಿದಿದೆಯೇ ಹೊರತು ಅದರಿಂದ ಆ ನೇಕಾರರಿಗೆ ಯಾವುದೇ ರೀತಿಯ ಪ್ರಯೋಜನವಾಗಿಲ್ಲ ಅದಕ್ಕಾಗಿ ನಾಣು ಇವತ್ತು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಆ 105 ಕೋಟಿ ರೂಪಾಯಿಗಳ ಪ್ಯಾಕೇಜ್‌ನ್ನು ಕೊಡಲೇ ಅದರಲ್ಲಿರತಕ್ಕಂಥ ಯೋಜನೆಗಳು ಏನಿವೆ ಅವೆಲ್ಲವನ್ನೂ ಅನುಷ್ಠಾನಕ್ಕೆ ತಂದು ಬಡ ನೇಕಾರರಿಗೆ ಸಹಾಯ ಮಾಡಬೇಕೆನ್ನುವುದು ಒಂದು ವಿಚಾರ ಇನ್ನು 1975 ರಿಂದ 2003ರ ವರೆಗೆ ಸರ್ಕಾರ ಕೆ ಹೆಚ್ ಡಿ ಸಿ ಗೆ ಸುಮಾರು 28 ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟಿದೆ ಆ 28 ಕೋಟಿ ರೂಪಾಯಿಗಳ ಸಾಲವನ್ನು ಪುನಃ ಸರ್ಕಾರಕ್ಕೆ ವಾಪಸ್ಸು ಕೊಡುವಂಥ ಪರಿಸ್ಥಿತಿಯಲ್ಲಿ ಇವತ್ತು ಕೆ ಹೆಚ್ ಡಿ ಸಿ ಇಲ್ಲ ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಆ 28 ಕೋಟಿ ರೂಪಾಯಿಗಳನ್ನು ಸರ್ಕಾರ ಶೇರು ಬಂಡವಾಳವೆಂದು ಪರಿವರ್ತನೆ ಮಾಡಿ ಅದಕ್ಕೆ ಅಂದರೆ ಕೆ ಹೆಚ್ ಡಿ ಸಿಗೆ ಬಿಟ್ಟುಬಿಡಲಿ ಇಲ್ಲದಿದ್ದರೆ ಅದು 28 ಕೋಟಿ ರೂಪಾಯಿಗಳ ಸಾಲವನ್ನು ವಾಪಸ್ಸು ಕೊಟ್ಟು ಅದು ಉದ್ಯೋಗ ಸೃಷ್ಟಿ ಮಾಡುವಂಥ ಪರಿಸ್ಥಿತಿಯಲ್ಲಿ ಇಲ್ಲ ಅದು ಇವತ್ತು 43 ಕೋಟಿ ರೂಪಾಯಿಗಳ ನಷ್ಟದಲ್ಲಿದೆ ಅದಕ್ಕಾಗಿ ಸರ್ಕಾರದ 105 ಕೋಟಿರೂ ಯೊಳಗೆ ಇದೂ ಒಂದು ಸೇರಿದೆ ಅದೂ ಅಲ್ಲದೆ ಕೆ ಹೆಚ್ ಡಿ ಸಿ ಗೆ 20 ಕೋಟಿ ರೂಪಾಯಿಗಳ ಮಾರ್ಜಿನ್ ಮಾನಿ ಕೊಡಬೇಕಾದಂಥ ಒಂದು ವ್ಯವಸ್ಥೆಯನ್ನು ಸಹ ಸರ್ಕಾರ ಮಾಡಬೇಕಾಗುತ್ತದೆ ಏಕೆಂದರೆ ಕೆ ಹೆಚ್ ಡಿ ಸಿ ಹತ್ತಿರ ದುಡಿಯುವ ಬಂಡವಾಳ ಇಲ್ಲದಿರುವುದರಿಂದ ಅದನ್ನೂ ಇವತ್ತು ಮಾಡಬೇಕಾಗುತ್ತದೆ ಇನ್ನು ಯಾವುದೇ ಪಕ್ಷ ಇರಬಹುದು, ಅದು ತಮ್ಮ ಸರ್ಕಾರ ಇರಬಹುದು ಅಥವಾ ಬೇರೆ ಬೇರೆ ಸರ್ಕಾರ ಇರಬಹುದು, ಕೆ ಹೆಚ್ ಡಿ ಸಿ ಗೆ ಅಧ್ಯಕ್ಷರನ್ನು ನೇಮಕ ಮಾಡುವಾಗ ಯಾರ್ಯಾರನ್ನೊ ಅಂದರೆ ನೇಕಾರರು ಅಲ್ಲದೇ ಇರುವಂಥ ರಾಜಕೀಯ ಪಕ್ಷದ ಕಾರ್ಯಕರ್ತರನ್ನು ನೇಮಕ ಮಾಡುತ್ತಿದ್ದಾರೆ ಅದರಿಂದ ನೇಕಾರರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ ಆದ್ದರಿಂದ ಇವತ್ತು ಕೆ ಹೆಚ್ ಡಿ ಸಿ ಗೆ ನೇಕಾರರನ್ನೇ ಅಧ್ಯಕ್ಷರನ್ನಾಗಿ ನಾಮಿನೇಟ್ ಮಡಿದರೆ ಅದರಿಮದ ನೇಕಾರರಿಗೆ ಹೆಚ್ಚು ಉಪಯುಕ್ತವಾಗುತ್ತದೆ ಮತ್ತು ಆ ಜನಾಂಗದಿಂದ ಬಂದವರಾದ್ದರಿಂದ ಆ ಜನರ ಸಮಸ್ಯೆಯನ್ನು ತಿಳಿದುಕೊಂಡಿರುವುದರಿಂದ ಮಂಡಳಿಗೆ ಹೆಚ್ಚು ಶ್ರಮವಹಿಸಿ ಕೆಲಸ ಮಾಡುತ್ತಾರೆ ಹಾಗಾಗಿ ಈ ಕೆಲಸವನ್ನೂ ಸಹ ಸರ್ಕಾರ ಮಾಡಬೇಕಾಗುತ್ತದೆ ಇನ್ನು ಆ ನೇಕಾರರ ಮಕ್ಕಳು ಯಾರಿದ್ದಾರೆ ಅವರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಸ್ಕಾಲರ್‌ಶಿಪ್ ಕೊಡುವಂಥ ವ್ಯವಸ್ಥೆ ಆಗಬೇಕು ಬಡ ನೇಕಾರರು ಜನ ಮಾಡುತ್ತಾರೆಂದರೆ ಶಾಲೆಗೆ ಕಳುಹಿಸುವುದಕ್ಕೆ ಹಣ ಇಲ್ಲದೆ ತಮ್ಮ ಮಕ್ಕಳಿಗೆ 7–8 ವರ್ಷ ಆದಕೂಡಲೇ ಅವರು ತಾವು ಮಾಡುವಂಥ ಕೆಲಸವನ್ನೇ ಮಾಡುವುದಕ್ಕೆ ಕರೆದುಕೊಂಡು ಹೋಗುತ್ತಾರೆ ನೇಕಾರರು ತಮ್ಮ ಸಹಾಯಕ್ಕಾಗಿ ತಮ್ಮ ಮಕ್ಕಳನ್ನು ಆ ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೆ ಈ ರಾಜ್ಯದಲ್ಲಿ ಬಹಳಷ್ಟು ಜನ ನೇಕಾರರ ಮಕ್ಕಳು ಓದುವುದೇ ಇಲ್ಲ ಆದ್ದರಿಂದ ಶಿಷ್ಯವೇತನವನ್ನು ಕೊಟ್ಟರೆ ಬಡ ನೇಕಾರರು ಏನಿದ್ದಾರೆ ಅವರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲಿಕ್ಕೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ಬಯಸುತ್ತೇನೆ ಇನ್ನು ಕೆ ಹೆಚ್ ಡಿ ಸಿ ಯಲ್ಲಿ ಸುಮಾರು 270 ಜನ ಹೆಚ್ಚುವರಿ ನೌಕರರು ಇದ್ದಾರೆ ಇಂಥ ಒಂದು ಸಣ್ಣ

ಸಂಸ್ಥೆಯಲ್ಲಿ 270 ಹೆಚ್ಚಿಗೆ ಜನರನ್ನು ಯಾರು ನೇಮಕ ಮಾಡಿಕೊಂಡರು? ಏಕೆ ನೇಮಕ ಮಾಡಿಕೊಂಡರು? ಸರ್ಕಾರದಲ್ಲಿ ಒಂದು ವ್ಯವಸ್ಥೆ ಬೇಡವೇ? ಅದು ಸರ್ಕಾರದ ಒಂದು ಸಂಸ್ಥೆ ಇಲ್ಲಿ ಎಷ್ಟು ಜನರಿಗೆ ಉದ್ಯೋಗ ಕೊಡುವುದಕ್ಕೆ ಸಾಧ್ಯ ಇದೆ ಎನ್ನುವುದನ್ನು ನೋಡಬೇಕಲ್ಲವೇ? ಆ ಸಂಸ್ಥೆಯನ್ನು ಮಂಜೂರು ಮಾಡುವ ಕಾಲಕ್ಕೆ ಪ್ರಾರಂಭ ಮಾಡುವ ಕಾಲಕ್ಕೆ ಎಷ್ಟು ಜನ ಸಿಬ್ಬಂದಿ ಬೇಕು, ಎಷ್ಟು ಜನ field ನಲ್ಲಿ ಕೆಲಸ ಮಾಡುವಂಥವರು ಬೇಕು, ಸ್ಯಾಂಕ್ಷನ್ಡ್ ಸ್ಟೆಂಥ್ ಏನಿದೆ, ಅದನ್ನು ಧಾಟಿ ಹೆಚ್ಚಿಗೆ ಯಾರು ನೇಮಕ ಮಾಡಿಕೊಂಡರು? ಏಕೆ ಮಾಡಿಕೊಂಡರು? ಹೆಚ್ಚು ನೇಮಕ ಮಾಡಿಕೊಂಡಿದ್ದರಿಂದ ಆ ಸಂಸ್ಥೆಗೆ ಹೊರೆಯಾಗಿದೆ ಹಾಗಾಗಿ ಹೆಚ್ಚುವರಿ ನೇಮಕ ಮಾಡಿಕೊಂಡಂಥ ಯಾರು ಅಧಿಕಾರಿಗಳು ಇದ್ದಾರೆ, ಅವರು ಯಾರೇ ಇರಬಹುದು, ಅವರ ಮೇಲೆ ಕೂಡ ಕ್ರಮ ತೆಗೆದುಕೊಳ್ಳಬೇಕು ಆ ಅಧಿಕಾರಿಗಳ ವೇತನವನ್ನು ತಡೆಹಿಡಿಯಿರಿ, ಅವನ ಸಂಬಳದಿಂದ ಹಣವನ್ನು ತೆಗೆದುಕೊಡಿ ಆ ಹೆಚ್ಚುವರಿ 270 ಜನರಿಗೆ ಸರ್ಕಾರದಿಂದ ಯಾವ ರೀತಿ ವ್ಯವಸ್ಥೆ ಮಾಡುತ್ತೀರಿ? ಇಲ್ಲದಿದ್ದರೆ ಅವರನ್ನು ಆ ಸಂಸ್ಥೆಯಿಂದ ತೆಗೆದು ಬೇರೆ ಕಡೆಗೆ ಅಂದರೆ ಸರ್ಕಾರದಲ್ಲಿ ಸಾಕಷ್ಟು ದೊಡ್ಡ ದೊಡ್ಡ ಇಲಾಖೆಗಳು ಇವೆ, ಅಲ್ಲಿಗೆ ಅವರನ್ನು ವರ್ಗಾಯಿಸಿ ಫಾರೆಸ್ಟ್ ಇಲಾಖೆ ಇನೆ, PWD ಇಲಾಖೆ ಇದೆ, ರೆವಿನ್ಯೂ ಇಲಾಖೆ ಇದೆ, ಎಲ್ಲೆಲ್ಲಿ ಅವರಿಗೆ ಕೆಲಸ ಕೊಡಲಿಕ್ಕೆ ಸಾಧ್ಯವಿದೆ ಅಲ್ಲಿಗೆ ಅವರನ್ನು ಕಳುಹಿಸುವಂಥ ವ್ಯವಸ್ಥೆಯನ್ನಾದರೂ ಸರ್ಕಾರದಿಂದ ಮಾಡಿ ಈ ರೀತಿ ಮಾಡದಿದ್ದರೆ ಆ 270 ಜನರಿಗೆ ಪ್ರತಿ ತಿಂಗಳು ಸಂಬಳ ಕೊಡುವುದರಿಂದ ಕೆ ಹೆಚ್ ಡಿ ಸಿ ಗೆ ಬರ್ಡನ್ ಆಗುತ್ತದೆ ಇಲ್ಲವೆಂದರೆ ಅವರಿಗೆ ಸ್ವಯಂ ನಿವೃತ್ತಿ ಯೋಜನೆಯನ್ನಾದರು ಘೋಷಣೆ ಮಾಡಿ ಮನೆಗೆ ಕಳುಹಿಸಿದರೆ ಒಳ್ಳೆಯದು ಹಿಂದೆ ಒಂದು ಸಲ ಇದಕ್ಕೆ ಅಂದಾಜು ಎಸ್ಟಿಮೇಟ್ ಮಾಡಿದ್ದರು ಸುಮಾರು 14 ಕೋಟಿ ರೂಪಾಯಿ ಕೊಟ್ಟರೆ 270 ಹೆಚ್ಚಿನ ಸಿಬ್ಬಂದಿ ಏನಿದ್ದಾರೆ ಅವರೆಲ್ಲರೂ ಮನೆಗೆ ಹೋಗುತ್ತಾರೆ ಎನ್ನತಕ್ಕಂಥ ಒಂದು ಪ್ರಪೋಸಲ್ ಸಹ ಇತ್ತು ಅದನ್ನಾದರೂ ಈಗ ಸರ್ಕಾರದ ಕಡೆಯಿಂದ ಮಾಡಲಿ, ಯಾವ ಸಂಸ್ಥೆಗೆ ದುಡಿಯುವ ಬಂಡವಾಳ ಇಲ್ಲ, ಯಾವ ಉದ್ದೇಶಕ್ಕಾಗಿ ಈ ಸಂಸ್ಥೆಯನ್ನು ಪ್ರಾರಂಭ ಮಾಡಿದ್ದೇವೆ ಅಲ್ಲಿಯೇ ಆ ಜನರಿಗೆ ಉದ್ಯೋಗ ಕೊಡಲಿಕ್ಕೆ ಹಣ ಇಲ್ಲ, ಹೀಗಿರುವಾಗ ಆಫೀಸ್‌ನಲ್ಲಿ ಆ 270 ಜನರಿಗೆ ಏನೂ ಕೆಲಸ ಇಲ್ಲದೆ ಖಾಲಿಯಾಗಿ ಕೂರಿಸಿಕೊಂಡು ಸಂಬಳ ಕೊಟ್ಟರೆ ಆ ಸಂಸ್ಥೆ ಉದ್ಧಾರವಾಗಲಿಕ್ಕೆ ಸಾಧ್ಯವೇ? ಈ ರೀತಿ ಆದರೆ ಯಾವ ಸಂಸ್ಥೆಯಾದರೂ ಉದ್ಧಾರವಾಗುವುದೇ? ಇದರಿಂದ ಯಾವ ಬಡವರು ಬದುಕಲಿಕ್ಕೆ ಸಾಧ್ಯ? ಆದ್ದರಿಂದ ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಸರ್ಕಾರ ಹೆಚ್ಚು ಆಸಕ್ತಿವಹಿಸಿ ಆ ಬಡ ನೇಕಾರರ ಸಮಸ್ಯೆಯನ್ನು ಪರಿಹಾರ ಮಾಡಬೇಕು, ಯಾವ ರೀತಿ ಪರಿಹಾರ ಮಾಡಬೇಕೆಂದರೆ, ಒಂದನೆಯದು, ಈ ವಿದ್ಯಾವಿಕಾಸ ಯೋಜನೆ ಅಂದರೆ ಮಕ್ಕಳಿಗೆ ಸಮವಸ್ತ್ರ ಕೊಡುವಂಥದ್ದು ಏನಿದೆ, ಈ ರಾಜ್ಯದ ಸಂಪೂರ್ಣ ಬೇಡಿಕೆ ಏನಿದೆ ಅದೆಲ್ಲವನ್ನೂ ಕೆ ಹೆಚ್ ಡಿ ಸಿ ಗೆ ಕೊಡಬೇಕು

4 20 ಪಿಎಂ

ಬಡವರಿಗೆ ಸೀರೆ ಮತ್ತು ಧೋತಿ ಕೊಡುವ ವ್ಯವಸ್ಥೆ ಇದೆಯಲ್ಲಾ, ಅದನ್ನು ಕೆಹೆಚ್‌ಡಿಸಿ ಮೂಲಕವೇ ಖರೀದಿ ಮಾಡಬೇಕು ಅದಕ್ಕೇನೂ ಹೆಚ್ಚು ಹಣ ಬೇಕಗುವುದಿಲ್ಲ ಸುಮಾರು 16–17 ಕೋಟಿ ರೂಪಾಯಿಯಾದರೆ ಧೋತರ, ಸೀರೆ ಕೊಡುವ ಯೋಜನೆ ಏನಿದೆ, ಅದನ್ನು ಮುಂದುವರಿಸಿಕೊಂಡು ಹೋಗಲಿಕ್ಕೆ ಸಾಧ್ಯವಿದೆ ಸುಮಾರು 72–75 ಕೋಟಿ ರೂಪಾಯಿಗಳ

ವಿದ್ಯಾ ವಿಕಾಸ ಯೋಜನೆಗೆ ಸರ್ಕಾರಿ ಹಣವನ್ನು ಇಟ್ಟಿದ್ದೇ ಆದರೆ, ಸುಮಾರು 8 ಲಕ್ಷ ಜನ ಇವತ್ತು ಆ ಉದ್ಯೋಗದ ಮೇಲೆ ಏನು ಅವಲಂಬಿತರಿದ್ದಾರೆ, ಅವರು ಬದುಕಲಿಕ್ಕೆ ಸಾಧ್ಯವಿದೆ ಮತ್ತು ಸರ್ಕಾರ ಏನು ಬಡವರು ಮಕ್ಕಳಿಗೆ, ಬಡವರಿಗೆ ಹಾಕಿಕೊಂಡ ಕಾರ್ಯಕ್ರಮಗಳಿವೆ, ಅವುಗಳನ್ನು ಮುಂದುವರಿಸಿಕೊಂಡು ಹೋದಂತಾಗುತ್ತದೆ, ಅವರಿಗೆ ಸಹಾಯ ಮಾಡಿದಂತಾಗುತ್ತದೆ ಇನ್ನು, ನೇಕಾರರ ಬಗ್ಗೆ ಸ್ವಲ್ಪ ತಮ್ಮ ಗಮನಕ್ಕೆ ತರಲು ಬಯಸುತ್ತೇನೆ ನೇಕಾರರು ಯಾವ ರೀತಿ ಇದ್ದಾರೆಂದರೆ, ಅವರು 37 ಕೆ ಜಿ ಗಿಂತಲೂ ಹೆಚ್ಚು ತೂಕ ಬರುವುದಕ್ಕೇ ಸಾಧ್ಯವೋ ಇಲ್ಲ ಒಂದು ಹೊತ್ತು ಊಟ ಕೂಡ ಅವರಿಗೆ ಸಿಗಲಾರದ ಪರಿಸ್ಥಿತಿಯೊಳಗೆ ಹೇಗೆ ಬದುಕಿದ್ದಾರೆಂದರೆ, ಕಣ್ಣಿನಲ್ಲಿ ಜೀವ ಇಟ್ಟುಕೊಂಡಿರುತ್ತಾರೆ ಮೈಯೊಳಗೆ ರಕ್ತವಿಲ್ಲ, ಮಾಂಸವಿಲ್ಲ, ಮೈಮೇಲೆ ಸರಿಯಾದ ಬಟ್ಟೆ ಇಲ್ಲ ಈ ಪರಿಸ್ಥಿತಿಯೊಳಗೆ ನೇಕಾರರು ಬದುಕಿದ್ದಾರೆ ನೇಕಾರಿಕೆ ನಿಂತುಹೋದ ಮೇಲೆ ಅವರೇನು ಉದ್ಯೋಗ ಮಾಡುತ್ತಾರೆಂಬುದನ್ನು ತಮ್ಮ ಗಮನಕ್ಕೆ ತಂದರೆ, ಅದು ಸರ್ಕಾರಕ್ಕೂ ಗೊತ್ತಾಗುತ್ತದೆ ನೂಲು ಕೊಡಲಾರದ್ದಕ್ಕೆ ಹಳ್ಳಿಯಲ್ಲಿರುವ ದೊಡ್ಡ ದೊಡ್ಡ ದೇವಸ್ಥಾನಗಳ ಮುಂದೆ ವಿಭೂತಿ ಊದಿನ ಕಡ್ಡಿ ಮತ್ತು ಕರ್ಪೂರ, ಕಡ್ಡಿಪೆಟ್ಟಿಗೆ ತೆಗೆದುಕೊಂಡು ಕೈ ಚೀಲದೊಳಗೆ ಇಟ್ಟುಕೊಂಡು ಬರುತ್ತಾರೆ ಏಕೆಂದರೆ ಅವರ ಹತ್ತಿರ ಹೆಚ್ಚು ಬಂಡವಾಳವಿಲ್ಲ, ದೇವಸ್ಥಾನದ ಮುಂದೆ ಹೇಗೆ ಬರುತ್ತಾರೆಂದರೆ, ಮೆಜೆಸ್ಟಿಕ್‌ನಲ್ಲಿ ಲಾಟರಿ ಮಾರುವವರು ಭಾಗ್ಯದ ಲಕ್ಷ್ಮಿ ಬರುತ್ತಾಳೆ, ತೆಗೆದುಕೊಳ್ಳಿ ಎಂದು ಹೇಳುತ್ತಾರಲ್ಲಾ, ಹಾಗೆ ಓಡಿ ಹೋಗಿ, ಸಾರ್ ಮುಂಜಾನೆಯಿಂದ ಮಕ್ಕಳಿಗೆ ಊಟವಿಲ್ಲ, ಉಪವಾಸವಿದ್ದೇವೆ, ಮನೆಯಲ್ಲಿ ಏನೂ ಇಲ್ಲ, ನಾವು ಇವತ್ತು ಒಲೆ ಹಚ್ಚಿಲ್ಲ, ಅದಕ್ಕಾಗಿ ವಿಭೂತಿ ಉಂಡೆ, ಊದಿನ ಕಡ್ಡಿ, ಕರ್ಪೂರ ತೆಗೆದುಕೊಳ್ಳಿ ಎಂದು ಹೇಳಿ ಕೈ ಕಾಲಿಗೆ ಬೀಳುತ್ತಾರೆ ಅಂದ ಮೇಲೆ ಅವರ ಪರಿಸ್ಥಿತಿ ಹೇಗಿರಬಹುದೆಂಬುದನ್ನು ಊಹಿಸಿಕೊಳ್ಳಿ ಅದಕ್ಕಾಗಿ ಈ ಸಂದರ್ಭದಲ್ಲಿ ನೇಕಾರರಿಗೆ ಒಂದು ವಿಶೇಷವಾದ ಕಾಳಜಿಯನ್ನು ಸರ್ಕಾರ ಮಾಡಬೇಕು ಅವರ ಸ್ಥಿತಿಗತಿ ಉತ್ತಮವಾಗಬೇಕು ಕೈಗಾರಿಕಾ ಅಭಿವೃದ್ಧಿಯಾಗಬೇಕು ಮತ್ತು ಧಿಕವಗಿ ನೇಕಾರರು ಸಬಲರಾಗಬೇಕು ಅಂತಹ ಒಂದು ಯೋಜನೆಯನ್ನು ಸರ್ಕಾರ ಮಾಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಾ, ನನಗೇನು ನಿಯಮ 69ರ ಅಡಿಯಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕೆ ನಾನು ತಮಗೆ ಧನ್ಯವಾದಗಳನ್ನರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ

†ಶ್ರೀ ಡಿ ಆರ್ ಪಾಟೀಲ್ (ಗದಗ) ಸ್ನೇಹಿತರಾದ ಕಾರಜೋಳರವರು ನೇಕಾರರ ಪರಿಸ್ಥಿತಿ ಬಗ್ಗೆ ಮನಮುಟ್ಟುವ ಹಾಗೆ ಮಾತನಾಡಿದ್ದಾರೆ ಅವರ ಪ್ರತಿನಿಧಿಯಾಗಿ ನಾನು ಆ ಕ್ಷೇತ್ರವನ್ನು ಪ್ರತಿನಿಧಿ ಮಾಡುತ್ತಿದ್ದೇನೆ ಬಹುತೇಕ ಸರ್ಕಾರದೊಳಗೆ ಯಾವ ಸರ್ಕಾರವೇ ಇರಲಿ, ಮಂತ್ರಿ–ಮಾನ್ಯರು ನಮ್ಮ ಮಾತಿಗೆ ಗೌರವ ಕೊಡುತ್ತಾರೆ ಅನುಕೂಲವಾಗುವಂಥ ನಿರ್ಣಯಗಳನ್ನು ಮಾಡುತ್ತಾರೆ, ಆದರೆ, ದುರ್ದೈವದಿಂದ ಈ ವ್ಯವಸ್ಥೆಯೊಳಗೆ ಮಂತ್ರಿಮಂಡಲ ತೆಗೆದುಕೊಮಡಂಥ ನಿರ್ಣಯವನ್ನು ಆ ಜನರಿಗೆ ಮುಟ್ಟಿಸಲಾರದ ಪರಿಸ್ಥಿತಿಗೆ ನಾವು ಬಂದಿದ್ದೇವ ಅವರು ಹೇಳಿದ ಹಾಗೆ, ಹೋದ ವರ್ಷ 9 ತಿಂಗಳು ಉದ್ಯೋಗ ಕೊಡುವುದಕ್ಕಾಗಲಿಲ್ಲ ನಾವು ಅವರ ಹತ್ತಿರ ಯಾವ ಮುಖ ಇಟ್ಟುಕೊಂಡು ಹೋಗಬೇಕು? ಅವರು ನಮಗೆ ಇಷ್ಟು ಶಕ್ತಿ ಕೊಟ್ಟಿದ್ದಾರೆ ಆದರು, ಏನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ಒಮ್ಮೆ ಮನಸ್ಸಿಗೆ ನೋವು ಅನ್ನಿಸುತ್ತದೆ ಈ ಉದ್ಯೋಗ ಬಿಟ್ಟರೆ, ಮತ್ತೊಂದು ಉದ್ಯೋಗ ಮಾಡುವುದಕ್ಕೆ ಬರುವುದಿಲ್ಲ ನಾವು ಹಳ್ಳಿಯಲ್ಲಿ ರೈತರಿಗಾಗಲಿ, ಕೃಷಿ ಕಾರ್ಮಿಕರಿಗಾಗಲಿ ಬರಗಾಲದೊಳಗೆ ವಾರಕ್ಕೆ 2 ದಿವಸ ಉದ್ಯೋಗ ಕೊಡುವುದಕ್ಕಾಗುವುದಿಲ್ಲ, ಹೊಟ್ಟೆ ತುಂಬಾ ಊಟಕ್ಕೆ

ಕಾಳುಕಡ್ಡಿ ಕೊಡುವುದಕ್ಕಾಗಲಿಲ್ಲ ಇವರಿಗೆ ಅದೂ ಸಾಧ್ಯವಾಗುವುದಿಲ್ಲ ಇಂಥ ಪರಿಸ್ಥಿತಿಯಲ್ಲಿ ಏಕೆ ಸರ್ಕಾರ ಹೀಗೆ ಮಾಡುತ್ತದೆ? ಸರ್ಕಾರಿ ಅಧಿಕಾರಿಗಳು ಏಕೆ ಹೀಗೆ ಮಾಡುತ್ತಾರೆ? ಅವರಿಗೆ ಮನಷ್ಯತ್ವ ಇಲ್ಲವೇ ಎಂದು ಒಮ್ಮೊಮ್ಮೆ ಅನ್ನಿಸುತ್ತದೆ ಅದಕ್ಕೆ ದಯವಿಟ್ಟು ಹಿಂದೆ ಏನಾಗಿತ್ತು ಅದರ ಬಗ್ಗೆ ಇವತ್ತು ಮಾತನಾಡಿದರೆ ಏನೂ ಉಪಯೋಗ ಇಲ್ಲ ಇನ್ನು ಮೇಲಾದರೂ ಸರ್ಕಾರ ಏನು ಖರೀದಿ ಮಾಡುತ್ತಾದೆ, ಅದು ತನ್ನ ಇಲಾಖೆಯೊಳಗಾಗಲಿ, ಇಲಾಖೆಗೆ ಸಂಬಂಧಪಟ್ಟಂಥ ಯಾವುದೇ ಸಂಘ–ಸಂಸ್ಥೆಯೊಳಗಾಗಲಿ ಖರೀದಿ ಮಾಡುವ ಬಟ್ಟೆಯನ್ನು ಇಲ್ಲೇ ಕೆಹೆಚ್‌ಡಿಸಿಯಿಂದ ಉತ್ಪಾದನೆ ಮಾಡುವುದಕ್ಕೆ, ಅಡ್ವಾನ್ಸ್ ಕೊಟ್ಟರೆ ಅವರು, ಬ್ಯಾಂಕ್ ಫೈನಾನ್ಸ್, ಅದೂ, ಇದೂ ಜೋಡಿಸಿಕೊಂಡು ನಿರಂತರ ಉದ್ಯೋಗ ಕೊಡುವುದಕ್ಕೆ ಸಾಧ್ಯವಾಗುತ್ತದೆ 1975ರಲ್ಲಿ ಆಗಿನ ದೇವರಾಜ ಅರಸುರವರ ಸರ್ಕಾರ ಇದ್ದಾಗ ಇವರು ಪ್ರೈವೇಟ್ ನೊಳಗೆ ಮಾಸ್ಟರ್ಸ್ ವೀವರ್ಸ್ ಕೆಳಗೆ ಬಹಳಷ್ಟು ಎಕ್ಸ್‌ಪ್ಲಾಯಿಟೇಷನ್ ಶೋಷಣೆ, ಆಗುತ್ತದೆ ಎಂದು ಹೇಳಿ, ಆ ಎಕ್ಸ್‌ಪ್ಲಾಯಿಟೇಷನ್ ತಪ್ಪಿಸಬೇಕೆಮದು ಕೆಹೆಚ್‌ಡಿಸಿ ಮಾಡಿದ್ದಾರೆ. ನೇಕಾರರು ಬಹಳ ಖುಷಿಯಲ್ಲಿ ಬಂದಿದ್ದರು ಒಂದು ಕಾಲಕ್ಕೆ ಸುಮಾರು 40 ಸಾವಿರ ಜನ ಕೆಹೆಚ್‌ಡಿಸಿಯಲ್ಲಿ ಕೆಲಸ ಮಾಡುತ್ತಿದ್ದರು 40 ಸಾವಿರ ನೇಕಾರರೆಮದರೆ ಮತ್ತೆ ಅವರಿಗೆ 2–3 ಕುಟುಂಬಗಳು ಅಟ್ಯಾಚ್ ಇರುತ್ತಾರೆ ಅಷ್ಟು ಜನ ಅದರಲ್ಲಿ ಕೆಲಸ ಮಾಡುತ್ತಿದ್ದರು ಇವತ್ತು ಬಹುತೇಕ 10 ಸಾವಿರದೊಳಗೆ ಇರಬಹುದು

ಶ್ರೀ ಗೋವಿಂದ ಎಂ ಕಾರಜೋಳ ಕಳೆದ ವರ್ಷ 2002ರಲ್ಲಿ ಸುಮಾರು 15 ಸಾವಿರ ಮಗ್ಗಗಳು ಉಳಿದಿದ್ದವು, ಇವತ್ತು ಆರೂವರೆ ಸಾವಿರಕ್ಕೆ ಬಂದಿವೆ

ಶ್ರೀ ಡಿ ಆರ್ ಪಾಟೀಲ್ ಏನೂ ಮಾಡುವುದು ಬೇಕಾಗಿಲ್ಲ ಇಂಥ ತೊಂದರೆ ಇದ್ದ ನೇಕಾರರಿಗೆ ಉದ್ಯೋಗ ಕೊಡುವ ಈ ಸಂಸ್ಥೆಗೆ ಸರ್ಕಾರವೇನು ಖರೀದಿ ಮಾಡುತ್ತದೆ ಅದು ಹೆಲ್ತ್, ಪೋಲೀಸ್ ಇಲಾಖೆಗಳಿರಲಿ, ಕೆಪಿಟಿಸಿರಲ್, ಕೆಎಸ್‌ಆರ್‌ಟಿಸಿ ಇರಲಿ, ಯೂನಿಫಾರ್ಮ್ ಬಟ್ಟೆ ಇರಲಿ, ಅವರೆಲ್ಲಾ ಇಲ್ಲೇ ಖರೀದಿ ಮಾಡಿ ಎಂದು ನೀವು ಹೇಳಿದರೆ, ನಿರಂತರವಾಗಿ ಉದ್ಯೋಗ ಕೊಡುವುದಕ್ಕೆ ಸಾಧ್ಯವಾಗುತ್ತದೆ ಒಂದು ಏನು ತೊಂದರೆಯಾಗುಗಿದೆ ಎಂದರೆ ಈ ವ್ಯವಸ್ಥೆಯಲ್ಲಿ ಕೆಲಸ ಮಾಡುವವರಿಗೆ ಎಂದರೆ, ಮಾರ್ಕೆಟ್‌ನಿಂದ ಖರೀದಿ ಮಾಡಿದರೆ ನಿರ್ಣಯ ಮಾಡುವವರಿಗೆ ಒಂದು ಅನುಕೂಲ ವಿರುತ್ತದೆ ಕೆಹೆಚ್‌ಡಿಸಿಯಿಂದ ಖರೀದಿ ಮಡಿದರೆ ಆ ಅನುಕೂಲ ಆಗುವುದಿಲ್ಲ ನಾನು ಸಂಬಂಧಿಸಿದ ಎಲ್ಲರಿಗೂ ಕೈ ಮುಗಿದು ಕೇಳುತ್ತೇನೆ, ದಯವಿಟ್ಟು ಇದರಲ್ಲಿ ನೀವು ಆಸೆ ಮಾಡುವುದು ಬಿಡಿ, ಮತ್ತೊಬ್ಬರು ಉಪವಾಸ ಸಾಯುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಸರ್ಕಾರ ನಿಮಗೆ ಬೇಕಾಗಲಿ, ಬೇಡದಿರಲಿ, 6 ತಿಂಗಳಿಗೊಮ್ಮೆ ಡಿ ಎ ಏರಿಸುತ್ತದೆ, ವರ್ಷಕ್ಕೊಮ್ಮೆ ಪಗಾರ ಏರಿಸುತ್ತದೆ 5 ವರ್ಷಗಳಿಗೊಮ್ಮೆ ಪೇ ಕಮಿಷನ್ ಪೇ ಮಡುತ್ತದೆ ನಿಮಗೆ ಪಗಾರ ಹೆಚ್ಚು ಮಡೇ ಮಡುತ್ತದೆ ನಿಮಗೆ ಏನೂ ತೊಂದರೆಯಾಗುವುದಿಲ್ಲ ಮತ್ತೇಕೆ ಹೆಚ್ಚಿನ ಆಸೆ ಮಾಡುತ್ತೀರಿ? ನನಗೆ ನೋವು ಅನಿಸುತ್ತದೆ ಕ್ಯಾಬಿನೆಟ್ ಡಿಸಿಷನ್ ಮಾಡಿದ್ದಾರೆ ಹೋದ ಸರ್ಕಾರದೊಳಗೆ ಕ್ಯಾಬಿನೆಟ್ ಡಿಸಿಷನ್ ಮಾಡಿಸಬೇಕಾದರೆ 2 ವರ್ಷ ನಾವು ಸುಮಾರು 15 ಎಂಎಲ್‌ಎಗಳು ಏಕ ಗಂಟು ಬಿದ್ದಿದ್ದೆವು ಕ್ಯಾಬಿನೆಟ್ ನಿರ್ಣಯವಾಗುತ್ತದೆ ಕ್ಯಾಬಿನೆಟ್ ನಿರ್ಣಯವಾದ ನಂತರ, ಇವತ್ತಿಗೂ ಎಫ್ ಡಿ ಯಲ್ಲಿ ಅದು ಕ್ಲಿಯರ್ ಆಗುತ್ತಿಲ್ಲ ಸರ್ಕಾರ ನಡೆಸುವವರು ಕ್ಯಾಬಿನೆಟ್‌ನವರೋ, ಫೈನಾನ್ಸ್ ಡಿಪಾರ್ಟ್‌ಮೆಂಟನವರೋ ನಾವು ಎಷ್ಟು ಸಾರಿ ಅದನ್ನು ಕೇಳುವುದಕ್ಕೆ ಹೋಗಬಬೇಕು? ನಮಗೂ ಸ್ವಾಭಿಮಾನ ಇರುವುದಿಲ್ಲವೇ? ಗೌರವ ಇರುವುದಿಲ್ಲವೇ? ನಾಚಿಕೆ ಎನಿಸುತ್ತದೆ ಒಂದು ಸಾರಿ ಬಿಟ್ಟು

2ನೇ ಬಾರಿ ಕೇಳುವುದಕ್ಕೆ ಹೋಗಿ ಕೆಲಸವಾಗಲಿಲ್ಲವೆಂದರೆ, ಅವರು ನಮ್ಮನ್ನು ಹಚ್ಚಿಕೊಳ್ಳುವುದಿಲ್ಲ, ನಮ್ಮ ಮಾತಿಗೆ ಗೌರವವಿಲ್ಲವೆಂದು ಹೇಳಿ, ಸುಮ್ಮನಿರುವ ಹಾಗೆ ನಮಗೆ ಅನಿಸುತ್ತದೆ ಮನಸ್ಸಿಗೆ ಬಹಳಷ್ಟು ನೋವು ಮಾಡುವಂಥ ಕೆಲಸ ಈ ಒಂದು ವ್ಯವಸ್ಥೆಯೊಳಗೆ ಆಗುತ್ತಿದೆ ದಯವಿಟ್ಟು ಇವತ್ತು ಮಾನ್ಯ ಪ್ರಕಾಶ್ ಸಾಹೇಬರು ಒಬ್ಬರೇ ಇದ್ದೀರಿ ಯಾರೂ ಇಲ್ಲ ನೀವು ಈ ಜವಾಬ್ದಾರಿ ಹೊರಬೇಕು ಇವತ್ತಿನಿಂದ ಈ ಸರ್ಕಾರದೊಳಗೆ ನಾವೇನು ಬಟ್ಟೆಯನ್ನು ಖರೀದಿ ಮಾಡುತ್ತೇವೆ, ಅದನ್ನು ಕೆಹೆಚ್‌ಡಿಸಿಯಿಂದಲೇ ಖರೀದಿ ಮಾಡಬೇಕೆನ್ನುವ ನಿರ್ಣಯವನ್ನು ನೀವು ಮಾಡಲೇಬೇಕು ಕೆಹೆಚ್‌ಡಿಸಿಯಲ್ಲಿ ಉತ್ಪಾದನೆಯಾಗಲಿಲ್ಲವೆಂದರೆ ಮಾತ್ರ ನೀವು ಓಪನ್ ಮಾರ್ಕೆಟ್ ಟೆಂಡರ್‌ಗೆ ಹೋಗಬೇಕು ಇಲ್ಲವೆಂದರೆ, ನಿಮಗೆ ಗೊತ್ತು, ನೇಕಾರರು ನಿಮ್ಮ ಜಿಲ್ಲೆಯೊಳಗೂ ಇದ್ದಾರೆ ನಮ್ಮ ಕಡೆ ಗಾದೆ ಮಾತಿದೆ, 'ನೇಕಾರರ ಹೆಂಡತಿ ಯಾವಾಗಲೂ ಬೆತ್ತಲೆ' ಎಂದು ಹಾಗೆ ಅವರ ಪರಿಸ್ಥಿತಿ ಇದೆ. ಹಾಗೆ ಅವರು ಅಷ್ಟು ತೊಂದರೆ ಯಲ್ಲಿರುತ್ತಾರೆ ಮಾನ್ಯ ಕಾರಜೋಳರವರು ಬಹಳ ಚೆನ್ನಾಗಿ ಹೇಳಿದರು ತೂಕ, ಅವರು ಯಾವಾಗಲೂ ಟಿಬಿ ಅದವರ ತರಹ ಇರುತ್ತಾರೆ ಆದರೆ, ಭಾರೀ ಬುದ್ಧಿವಂತರು ಅವರಿಗಾಗುವಂಥ ಅನ್ಯಾಯವನ್ನು ಪ್ರತಿಭಟನೆ ಮಾಡುತ್ತಾರೆ ಆದರೆ, ನೀವು ಗೌರವ ಕೊಟ್ಟರೆ, ಪ್ರತಿಭಟನೆ ಮಾಡಿದರೆ ಕಿಮ್ಮತ್ತು ಇರುತ್ತದೆಯೇ? ನೀವು ಗೌರವಾನೇ ಕೊಟ್ಟಿಲ್ಲವೆಂದರೆ ಏನು ಮಾಡುತ್ತಾರೆ ಆ ಪ್ರತಿಭಟನೆಗೆ ನೀವು ಸ್ಪಂದನೆ ಮಾಡಲಿಲ್ಲವೆಂದರೆ ಎನೂ ಮಾಡುತ್ತಾರೆ? ಏನು ಮಾಡಬೇಕು? ನೀವು ಬೇಕಾದ್ದು ಮಾಡಿಕೊಳ್ಳಿ, ನಾವು ಹೀಗೇ ಮಾಡುವವರು ಎಂದರೆ ಏನು ಮಾಡುವುದು? ಇಷ್ಟೆಲ್ಲಾ ಆಗಿ ವಿದ್ಯಾ ವಿಕಾಸ ಸ್ಕೀಂ ಕ್ಯಾಬಿನೆಟ್‌ನಲ್ಲಿ ಮಂಜೂರಾಗಿ ಆರ್ಡರ್ ಕೊಟ್ಟಿದ್ದಾರೆ ಆ ಯೂನಿಫಾರ್ಮ್ ಬಟ್ಟೆಯನ್ನು ನಾವು ಕೊಡುತ್ತೇವೆಂದು ಹೇಳಿ ಹೋದ ಬಡ್ಜೆಟ್‌ನಲ್ಲಿ ಆ ಸ್ಕೀಂ ಅಪ್ರೂವ್ ಆಗಿದೆ

ಶ್ರೀ ಗೋವಿಂದ ಎಂ ಕಾರಜೋಳ ಮೊನ್ನೆ ವಿದ್ಯಾ ವಿಕಾಸ ಯೋಜನೆಗೆ ಆರ್ಡರ್ ಕೊಟ್ಟಿದ್ದಾರೆ ಒಂದು ತಿಂಗಳೊಳಗೆ ಸಪ್ಲೈ ಮಾಡಲು ಅವಕಾಶವಿದೆ ಒಂದು ತಿಂಗಳಲ್ಲಿ ಪೂರೈಸಬೇಕೆಂದು ಹೇಳಿದ್ದಾರೆ ಕಳೆದ 9 ತಿಂಗಳಿಂದ ನೂಲು ಕೊಡಲಾರದ್ದಕ್ಕೆ ಇಲ್ಲಿ ಉದ್ಯೋಗ ಮಾಡಲಿಕ್ಕಾಗಲಿಲ್ಲ ಅಂಥ ಸಂಸ್ಥೆ ಒಂದು ತಿಂಗಳೊಳಗೆ ಪೂರೈಸಲಿಕ್ಕೆ ಆಗುವುದಿಲ್ಲ ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ, ಹೆಚ್ಚು ಅವಧಿ ಕೊಡಿ ಅವರಿಗೆ 4ನೇ ಕಂತಿನ ಹಣವನ್ನು ಅಡ್ವಾನ್ಸ್ ಕೊಡಿ

ಶ್ರೀ ಡಿ ಆರ್ ಪಾಟೀಲ್ (ಗದಗ್) ಮಾನ್ಯ ಅಧ್ಯಕ್ಷರೆ, ಮಾನ್ಯ ಕಾರಜೋಳ್‌ರವರೇ, ನಾವು ಹಾಗೆ ಹೇಳುವುದು ಬೇಡ ಸರ್ಕಾರಕ್ಕೆ ಕಮಿಟ್‌ಮೆಂಟ್ ಇದೆಯೋ ಇಲ್ಲವೋ? ನೀವು ಗೌರ್ನರ್ ಭಾಷಣದಲ್ಲಿ ಹೇಳುತ್ತೀರಿ, "ಪ್ರಾಥಮಿಕ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡುವುದು ನನ್ನ ಸರ್ಕಾರದ ಶಿಕ್ಷಣ ನೀತಿಯ ಪ್ರಮುಖ ಅಂಶವಾಗಿದೆ ಶಾಲೆಗಳ ಮತ್ತು ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸುವ ಮತ್ತು ಶಾಲೆಗೆ ಮಕ್ಕಳ ದಾಖಲಾತಿಯನ್ನು ಹೆಚ್ಚಿಸುವ ಪ್ರಯತ್ನವನ್ನು ನನ್ನ ಸರ್ಕಾರ ನಿರಂತರವಾಗಿ ಮಾಡುತ್ತದೆ ಉಚಿತ ಸವವಸ್ತ್ರಗಳನ್ನು, "ಕೊಡುತ್ತೇವೆಂದು ಕಮೆಟ್‌ಮೆಂಟ್ ಮಾಡಿದ್ದೀರಿ ಈ ಸರ್ಕಾರ ಅಧಿಕಾರಿ ಇರುವವರೆಗೆ ಈ ಉಚಿತ ಸಮವಸ್ತ್ರ ಸ್ಕೀಂ ರನ್ ಆಗುತ್ತದೆ ಎಂದು ಇವರು ಪ್ಲಾನ್ ಮಾಡಿ ಆರ್ಡರ್ ಮಾಡುವುದಕ್ಕೆ ಏನಾಗುತ್ತದೆ? ಹೋದ ಮಾರ್ಚಿನೊಳಗೆ ಬಜೆಟ್‌ನೊಳಗೆ ವಿದ್ಯಾ ವಿಕಾಸ ಯೋಜನೆಗೆಂದು ಪ್ರಾವಿಷನ್ ಮಾಡಿದ್ದಾರೆ ಏಪ್ರಿಲ್ ಒಂದನೇ ತಾರೀಖಿಗೆ ಆರ್ಡರ್ ಕೊಡುವುದು ಅವರ ಜವಾಬ್ದಾರಿ ಹೌದೋ ಅಲ್ಲವೋ? ಅದು ಆರ್ಡರ್ ಹೋಗಿದಿಯೋ ಇಲ್ಲವೆ[illegible]

ಚೀಫ್ ಮಿನಿಸ್ಟರ್ ನೋಡಬೇಕೇ? ಏನು ನಾವು ಎಂಎಲ್ಎ ಗಳು ಹೋಗಿ ಅಡ್ಡಾಡಿ ಅಡ್ಡಾಡಿ ಆರ್ಡರ್ ಹೋಗಿದೆಯೋ ಇಲ್ಲವೋ ಎಂದು ನೋಡಬೇಕೆ? ನಾವು ಹೋಗಿ ಅಡ್ಡಾಡಿ ಅಡ್ಡಾಡಿ ನೋಡಿದರೂ ಸಹಿತ ನಮಗೆ ಕಿಮ್ಮತ್ತು ಕೊಡುವುದಿಲ್ಲವೆಂದು ನಾವು ಹೇಳುವಷ್ಟು ಹೇಳಿ ಬಿಡುತ್ತೇವೆ ಇಷ್ಟಾಗಿಯೂ ವಿದ್ಯಾ ವಿಕಾಸ ಸ್ಕೀಂನಲ್ಲಿ ಮೂರು ಡಿವಿಜನ್‌ದ್ದು ಮಾತ್ರ ಕೊಟ್ಟಿದ್ದಾರೆ ಪುನಃ ಎರಡು ಡಿವಿಜನ್‌ದ್ದು ಅವರೇ ಇಟ್ಟು ಕೊಂಡಿದ್ದಾರೆ ಮಾರ್ಕೆಟ್‌ನಲ್ಲಿ ಖರೀದಿ ಮಾಡಲಿಕ್ಕೆ ಏಕೆ? ಆ ಮಾಸ್ಟರ್ ವೀವರ್ಸ್ ಚಲೋ ಇದ್ದರಲ್ರೀ, ಅವರು ದುಡಿಯದೇ ಇದ್ದರೂ ಅಡ್ವಾನ್ಸ್ ಅದ್ರೂ ಕೊಡುತ್ತಿದ್ದರು ನಿರಂತರವಾಗಿ ನೇಕಾರರು ಸಾಲಗಾರರಾಗಿ ಇರುತ್ತಿದ್ದರು ಆದರೆ, ಅವರ ಹೊಟ್ಟೆ ಬಟ್ಟೆ ನಡೆಯುತ್ತಿತ್ತು, ಅವರ ಮನೆಯಲ್ಲಿ ಏನಾದರೂ ಲಗ್ನ ಪಗ್ನ ಆದರೆ ಮಾಡಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತಿತ್ತು ಅವರಿಗೆ ಒಳ್ಳೆಯವರು ಅಂತ ಆಯಿತಲ್ಲಾ ಯಾರ ಕಪಿಮಿಷ್ಠಿಯಿಂದ ಬಿಡಿಸಿಕೊಂಡು ಬಂದು, ಸರಕಾರ ಅಂದ್ರೆ ದೊಡ್ಡ ಮನಸ್ಸು ಮಾಡಿ ಇವರಿಗೆ ಅನುಕೂಲ ಮಾಡುತ್ತದೆ ಎಂದು ಇವರನ್ನು ಇಲ್ಲಿ ತಂದು ಏನು ಮಾಡಿದೆವಿ ಇವರು ಅವರ ಅಪ್ಪ, ಈ ವ್ಯವಸ್ಥೆ ನಿಜವಾಗಿಯಾದರೂ ಮಂತ್ರಿಯವರಿಗೆ ಏನಾದರೂ ಮಾಡಬಾರದಾಗಿತ್ತು ಎಂದು ಏನಾದರೂ ಇತ್ತೆ? ಇಲ್ಲ, ಮಾಡಬೇಕೆಂದು ಇತ್ತು ಆದರೆ ನಾವು ಎಂಥ ವ್ಯವಸ್ಥೆಯನ್ನು ಕ್ರಿಯೇಟ್ ಮಾಡಿದ್ದೇವೆ ನೀವೇ ನೋಡ್ರಿ ದಯಮಾಡಿ ವಾಣ್ಯ ಪ್ರಕಾಶ್ ಸಾಹೇಬ್ರೇ, ತಾವು ಒಂದು ನಿರ್ಣಯವನ್ನು ಮುಂದಿನ ಕ್ಯಾಬಿನೆಟ್ ಮೀಟಿಂಗ್‌ನೊಳಗಾಗಲಿ ಅಥವಾ ಈ ತಿಮಗಳೊಳಗೆ ಒಂದು ನಿರ್ಣಯವನ್ನು ತಾವು ದಯವಿಟ್ಟು ಮಾಡಿಸಿರಿ ಕೆಎಸ್ಆರ್‌ಟಿಸಿ, ಕೆಪಿಟಿಸಿಎಲ್, ಪೋಲಿಸ್, ನಿಮ್ಮ ಯೂನಿಫಾರಂ, ಸಆರಿ ಧೋತಿಸ್ಕೀಂ, ನಿಮ್ಮ ಹೆಲ್ತ್ ಡಿಪಾರ್ಟ್‌ಮೆಂಟಿನ ರಿಕ್ವೈರ್‌ಮೆಂಟ್, ನಿಮ್ಮ ಪಿಡಬ್ಲೂಡಿ, ಸರ್ಕಾರ ಖರೀದಿ ಮಾಡುವುದೆಲ್ಲವನ್ನೂ ಕೆಹೆಚ್‌ಡಿಸಿ ಗೆ ನಿಮ್ಮ ಪ್ಲಾನ್ ಕೊಡ್ರಿ, ನಿಮಗೆ ಏನೇನು ಬೇಕು? ನಿಮಗೆ ಬೇಕಾದಂಥ ಕ್ವಾಲಿಟಿ ಪ್ರೊಡ್ಯೂಸ್ ಮಾಡಿ ಕೊಡಲಿಕ್ಕೆ ಸಆಧ್ಯವಾಗುತ್ತದೆ ನೇಕಾರರಿಗೆ ನಿರಂತರವಾಗಿ ನೀವು ಉದ್ಯೋಗ ಕೊಡುತ್ತೀರಿ ದಯವಿಟ್ಟು ಈ ನಿರ್ಣಯ ನಾವು ಮಡಲಿಲ್ಲವೆಂದರೆ, ಈ ನಿರ್ಣಯ ಅನುಷ್ಠಾನಬ ಆಗುತ್ತದೆಯೋ ಇಲ್ಲವೋ ಎಂದು ನಾವು ಮಾನಿಟರ್ ಮಾಡಲಿಲ್ಲವೆಂದರೆ ಈ ನೇಕಾರರಿಗೆ ದಯಮಾಡಿ ನೀವು ನಮ್ಮ ರಾಜ್ಯದಲ್ಲಿ ಬದುಕಿ ಇರಬೇಡಿ, ಬೇರೆ ರಾಜ್ಯಕ್ಕೆ ಹೋಗಿ ಬಿಡಿ ಎಂದು ಕೈ ಮುಗಿದು ಅದನ್ನಾದರೂ ಹೇಳೋಣ ಏಕೆಂದರೆ ಇಲಿಯೇ ನೆರೆ ರಾಜ್ಯವಾದ ಆಂಧ್ರಪ್ರದೇಶದೊಳಗೆ ಸರಕಾರ ತನ್ನ ಎಲ್ಲಾ ಎಕ್ವೈರ್‌ಮೆಂಟ್‌ನ್ನು ಅಪ್ಕೋ ಮೂಲಕವೇ ತೆಗೆದುಕೊಳ್ಳುತ್ತದೆ ಮೂರು ವರ್ಷದ್ದು 33 ಪರ್ಸೆಂಟ್ ಅಡ್ವಾನ್ಸ್ ಕೊಟ್ಟು, ಮೂರು ವರ್ಷಕ್ಕೆ ಏನೇನು ಬೇಕು ಎಂಬುದನ್ನೇ ವೆಲ್ ಇನ್ ಅಡ್ವಾನ್ಸ್ ಆರ್ಡರ್ ಮಾಡುತ್ತಾರೆ ಮಾಡ ಬೇಕು ಎನ್ನುವುದಕ್ಕೇ ಮನಸ್ಸು ಬೇಕು ಇಲ್ಲಾಂದ್ರೆ ಇನ್ನು ಮೇಲೆ ಬರುವಂಥ ಸರ್ಕಾರದೊಳಗೆ ಬಡವರಿಗೆ ಬದುಕುವಂಥ ವ್ಯವಸ್ಥೆ ಮಾಡುವುದಕ್ಕೆ ಆಗುವುದಿಲ್ಲ ದಯವಿಟ್ಟು ಎಲ್ಲರು ಸ್ವಲ್ಪ ಏನಾದರೂ ತೆಗೆದುಕೊಂಡು ಹಾಳಾಗಿ ಹೋಗಿ ಬಿಡಿ ಎಂದು ನಾವು ಹೇಳುವುದಾದರೂ ಕಲಿಯಬೇಕಾಗುತ್ತದೆ ಇಲ್ಲಾಂದ್ರೆ ನಾವು ಅವರನ್ನು ಹೇಗೆ ಪ್ರತಿನಿಧಿಸಬೇಕು ನೀವೋ ಹೇಳಿ ಸಾಹೇಬ್ರೆ This is my fourth term, They had never voted against me This time, they did not vote and I deserve that anger ಮನಸ್ಸಿಗೆ ನೋವಾಗುತ್ತದೆ ನಮ್ಮಂಥವರಿಗೆ ಅವರಿಗೆ ಉದ್ಯೋಗ ಕೊಡಿಸಲಿಕ್ಕೆ ಆಗಲಿಲ್ಲವೆಂದರೆ ಈ ವ್ಯವಸ್ಥೆಯನ್ನು ಯಾರು ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆ? ನೀವು ಏನೋ ದೊಡ್ಡ ಮನಸ್ಸು ಮಾಡಿ, ನವು ಹೋದ ಅಸೆಂಬ್ಲಿ ಅಧಿವೇಶನದಲ್ಲಿ

ಕೊಡಬೇಕೆಂದು ನಾವು ಕೇಳಿದಿರಿ, ಆಗ ಎರಡು ದಿವಸ ನಮ್ಮ ಸ್ನೇಹಿತರು ಇಲ್ಲಿ ಮಾಡಿಸಲು ಕೊಡಲಿಲ್ಲ ದಯಮಾಡಿ ನಮ್ಮ ಬಿಜೆಪಿ ಸ್ನೇಹಿತರಿಗೆ ನಾನು ಕೇಳಿಕೊಳ್ಳುತ್ತೇನೆ ಧರಣಿ ಪರಣ ಏನೇ ಮಾಡಿದರೂ ಸಾಂಕೇತಿಕವಾಗಿ ಮಾಡಿರಿ, ಇಲ್ಲಾಂದ್ರೆ ಜನರ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೇ ಆಗುವುದಿಲ್ಲ ಸರ್ಕಾರಕ್ಕೆ ನೀವು ಅಷ್ಟು ಮಾಡುವುದೇ ಚಲೋ, ಬಹಳ ಆರಾಮ

ಶ್ರೀ ಆರಗ ಜ್ಞಾನೇಂದ್ರ ನೀವು ಏನು ಆಪಾದನೆ ಮಾಡುತ್ತಿದ್ದಿರಿ, ಏನು ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಕೆಲಸ ಮಾಡುವುದಕ್ಕೂ ಇಲ್ಲಿ ಪಾರ ಕಲಿಯ ಬೇಕಾದಂಥ ಅವಶ್ಯಕತೆ ಇಲ್ಲ

ಶ್ರೀ ಡಿ ಆರ್ ಪಾಟೀಲ್ ಕೆಲಸ ಮಾಡುವುದಕ್ಕೆ ಪದ್ಧತಿ ಇರುತ್ತೆ ರೀ

ಅಧ್ಯಕ್ಷರು ಮಾನ್ಯ ಪಾಟೇಲರೆ, ಅದು ಈಗ ಬೇಡ, ವಿಷಯಕ್ಕೆ ಸೀಮಿತವಾಗಿ ಮಾತನಾಡಿ ಅಡ್ಡಮಾತು ಬೇಡ

ಶ್ರೀ ಆರಗ ಜ್ಞಾನೇಂದ್ರ ಸ್ವಾಮಿ ಪದ್ಧತಿ ಅಲ್ಲ ಇಲ್ಲಿ ಸರ್ಕಾರಕ್ಕೆ ಏನು ಚುಚ್ಚಿದರೂ, ಏನು ಧರಣ ಮಾಡಿದರೂ ಸರ್ಕಾರಕ್ಕೆ ಅರ್ಥವಾಗಲಿಲ್ಲವೆಂದರೆ ಏನು ಮಾಡುವುದಕ್ಕೆ ಆಗುತ್ತದೆ? ಮಾನ್ಯ ಪಾಟೀಲರು ಆಡಳಿತ ಪಕ್ಷದಲ್ಲಿದ್ದುಕೊಂಡು ಬಹಳ ದುಃಖದಿಂದ ಸ್ವತಹ ಅವರೇ ಈ ಮಾತುಗಳನ್ನು ಹೇಳುತ್ತಿದ್ದಾರೆ ಸ್ವತಃ ಅವರೇ ಎಷ್ಟು ಸಲ ತಿರುಗಾಟ ಮಾಡಿದ್ದಾರೆ, ಕ್ಯಾಬಿನೆಟ್ ಡಿಷಿಷನ್ ಆಗಿದೆ, ಎಲ್ಲಾ ಮಾಡಿದರೂ ಕೂಡ ಆ ನೇಕಾರರಿಗೆ ನ್ಯಾಯ ಒದಗಿಸಲಿಕ್ಕೆ ಲಗದಿರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆಡಳಿತ ಪಕ್ಷದ ಇಬ್ಬರು ಮಾನ್ಯ ಸದಸ್ಯರು ಬಹಳ ದುಃಖದಿಂದ, ಬಹಳ ನೋವಿನಿಂದ ಇವತ್ತು ಮಾತನಾಡುತ್ತಿದ್ದಾರೆ, ಅವರೇ ಮಾಡುವುದಕ್ಕಾಗುವುದಿಲ್ಲ, ನಾವು ಹೇಳಿದರೆ ಏನು ಮಾಡುತ್ತಾರೆ? ಧರಣಿ ಮಾಡುವುದು ಬಿಟ್ಟು ನಾವು ಏನು ಮಾಡಿದರೂ ನಾವು ಹೀಗೆಯೇ ಇರುವುದು ಎಂದು ತಿಳಿದುಕೊಮಡವರಿಗೆ, ನಾವು ಏನು ಮಾಡೋಣ ಹೇಲಿ ಪಾಟೀಲರೆ? ನಾವು ಧರಣಿ ಮಾಡದಿದ್ದರೆ ಇವರು ಮಾಡುತ್ತಾರೆಯೇ?

ಅಧ್ಯಕ್ಷರು ಮಾನ್ಯ ಆರಗ ಜ್ಞಾನೇಂದ್ರ ಅವರೇ, ಆಯಿತು ಬಿಡಿ, ಮಾನ್ಯ ಪಾಟೀಲರೆ, ನಿಮ್ ಸಬ್ಜೆಕ್ಟ್‌ಗೆ ಸೀಮಿತವಾಗಿ ಮಾತನಾಡಿ, ಅಡ್ಡ ಮಾತುಗಳನ್ನು ಅಡಿದರೆ ನೋಡ್ರಿ, ಎಂಟು ಲಕ್ಷ ಕುಟುಂಬಗಳು, ಎಷ್ಟು ಮನವೀಯವಾಗಿ, ಅವರ ಸಮಸ್ಯೆಗಳನ್ನೆಲ್ಲಾ ಹೇಲುತ್ತಿದ್ದೀರಿ, ಇದರ ಬಗ್ಗೆ ಚರ್ಚೆಯಾಗಲಿ ಅಡ್ಡ ಮಾತು ಬೇಡ ಅಡ್ಡ ಮಾತು ಏಕೆ ಬೇಕು? ನನಗೆ ಅರ್ಥವಾಗುವುದಿಲ್ಲ ದಯಮಾಡಿ ಮಾನ್ಯ ಉದಾಸಿಯವರೇ, ಅಡ್ಡ ಮಾತು ಬೇಡ ..

ಶ್ರೀ ಸಿ ಎಂ ಉದಾಸಿ ಅಡ್ಡ ಮಾತು ಏನೂ ಹೇಳುವುದಿಲ್ಲ ಅಳುವ ಪಕ್ಷದಲ್ಲಿದ್ದವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದಾರೆ? ಹಳದಿ ಕಾರ್ಡುಗಳು ಇದ್ದಂಥ ಕುಟುಂಬದವರಿಗೆ ಆರು ತಿಂಗಳಿಗೊಂದು ಸೀರೆ ಕೊಡುತ್ತೇವೆ ಎನ್ನುವ ಮಾತುಗಳನ್ನು ಹೇಲಿದ್ದಾರೆ, ಹಾಗೆ ಹೇಳಿರಬೇಕಾದಾಗ ಅದನ್ನಾದರೂ ಕಾರ್ಯಗತ–ಗೊಳಿಸುವ ಯೋಜನೆಯನ್ನು ಇವರು ತಕ್ಷಣ ಮಾಡಿದ್ದೇ ಆದರೆ ನೇಕಾರರಿಗೆ ಕೆಲಸ ಕೊಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಭಾವನೆ ಇರುವುದರಿಂದ ಇದನ್ನು ಅವರಿಗೆ ನೆನಪು ತರುವಂಥ ವಿಚಾರವನ್ನು ಹೇಳಿದನೇ ಹೊರತು ಬಾಕಿ ಏನೂ ಇಲ್ಲ

ಶ್ರೀ ಡಿ ಆರ್ ಪಾಟೀಲ್ ಹೋದ ಸರ್ಕಾರ ಕೆಹೆಚ್‌ಡಿಸಿ ರೀಹ್ಯಾಬಿಲಿಟೇಟ್ ಮಾಡಬೇಕು, ಅದನ್ನು ಸ್ಟೆಂಥನ್ ಮಾಡಬೇಕು, ಅದರ ಮುಖೇನ ನಾವು ನೇಕಾರರಿಗೆ ನಿರಂತರವಾಗಿ ನಾವು

ಉದ್ಯೋಗವನ್ನು ಕೊಡುವಂಥ ವ್ಯವಸ್ಥೆ ಮಾಡಬೇಕು ಎಂದು ತಿಳಿಸುಕೊಂಡೇ ಒಂದು ನಿರ್ಣಯ ಮಾಡಿತು ಆ ನಿರ್ಣಯ ಇಂಪ್ಲಿಮೆಂಟ್ ಆಗುತ್ತಿಲ್ಲ, ಆರು ತಿಂಗಳಾಯಿತು ಅದು ಇಂಪ್ಲಿಮೆಂಟ್ ಆಗಲಿಲ್ಲ ಬೆಳಿಗ್ಗೆ ಯಾವುದೋ ಒಂದು ಪ್ರಸಂಗದೊಳಗೆ ಮಾನ್ಯ ಪ್ರಕಾಶ್ ಸಾಹೇಬ್ರು ಹೇಳಿದರು Government is a continous ಹಿಂದಿನ ಸರ್ಕಾರ ಮಾಡಿದೆ ಎಂದು ಈಗಿನ ಸರ್ಕಾರ ಬದಲು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು ದಯವಿಟ್ಟು ಆ ನಿರ್ಣಯವನ್ನು ಕೂಡಲೇ ಇಂಪ್ಲಿಮೆಂಟ್ ಮಾಡಿಸಿ ಹೇಗೆ ನಿಮ್ಮ ಎಇಡ ಹೆಚ್ಚು ಆದಾಗ, ಸರ್ಕಾರಿ ನೌಕರರ ಸಂಬಳ ಹೆಚ್ಚು ಅದಾಗ ಫೈನಾನ್ಸಿನ ಹೊಂದಾಣಿಕೆ ಹೇಗೆ ಆಗುತ್ತದೋ ಹಾಗೆ ಬಡಜನರಿಗೆ ಅನುಕೂಲವಾಗುವಂಥ ಇಂಥ ಯೋಜನೆಗಳು ನಿರಂತರವಾಗಿ ನಡೆಯಲಿಕ್ಕೆ ಬೇಕಾಗುವಂಥ ಫೈನಾನ್ಸ್‌ನ್ನು ಹೊಂದಿಸುವಂಥ ಫೈನಾನ್ಸ್ ಸೆಕ್ರೆಟರಿಯನ್ನು ತಂದು ಇಡಿರಿ ಅಲ್ಲಿಯವರೆಗೆ ಅವರ ಸಂಬಳ ಸ್ವಲ್ಪ ನಿಲ್ಲಿಸಿರಿ, ಅಂದರೆ ಆ ಬಡವರ ಏನು ನೋವು ಇದೆ ಅನ್ನುವುದು ಇವರಿಗೆ ಅರಿವು ಆಗುತ್ತದೆ ಇಲ್ಲಾಂದ್ರೆ ಇದು ಏನು ಯಾವುದೇ ಪರಿಸ್ಥಿತಿಯಲ್ಲಿಯೂ ಸಹ ಸ್ಪಂದನೆ ಮಾಡದೇ ಇರುವಂಥ ಒಂದು ವ್ಯವಸ್ಥೆ ಹುಟ್ಟು ಹಾಕುತ್ತಿದ್ದೇವೆಲ್ಲಾ, ನಾವು ಇದನ್ನು ನೋಡುತ್ತಿದ್ದೇವೆಲ್ಲಾ, ಎಷ್ಟು ನಿರ್ವೀರ್ಯರಾಗಿದ್ದೇವೆ, ನಾವು ಜನಪ್ರತಿನಿಧಿಗಳು ಎನ್ನುವಂಥ ನೋವು ನಮಗೆ ಆಗುತ್ತದೆ ದಯವಿಟ್ಟು ಇದು ಕೊನೆಯದಾಗಬೇಕು, ಪ್ರತಿ ವರ್ಷ ಈ ಕೆಲಸವನ್ನು ಮಾಡಬೇಕು ನೇಕಾರರನ್ನು ಪ್ರತಿನಿಧಿಸತಕ್ಕಂಥ ಶಾಸಕರು ಪ್ರತಿ ವರ್ಷ ನಾವು ಆಗಸ್ಟ್‌ನಿಂದ ನಿಮಗೆ ಗಂಟು ಬೀಳಬೇಕು, ಇದು ತಪ್ಪಬೇಕು ಇನ್ನು ಮೇಲೆ ಈ ವಿಷಯದ ಮೇಲೆ ಚರ್ಚೆಯಾಗಲಾರದ ಹಾಗೆ ಈ ವ್ಯವಸ್ಥೆಯನ್ನು ಸಬಲಗೊಳಿಸುವಂಥ ಕೆಲಸ, ಅವರಿಗೆ ಬೇಕಾಗುವಂಥ ಹಣಕಸನ್ನು ಜೋಡಿಸುವಂಥ ಕೆಲಸ ಸರ್ಕಾರಿ ಮಾಡುತ್ತದೆ ಎನ್ನುವಂಥ ಭರವಸೆಯನ್ನು ಮಾನ್ಯ ಪ್ರಕಾಶ್ ಸಾಹೇಬ್ರು ಕೊಡಬೇಕು, ಅಂದರೆ ಖುಷಿಯಿಂದ ಊರಿಗೆ ಹೋಗಿ ನಮ್ಮ ನೇಕಾರ ಬಾಂಧವರಿಗೆ ಈ ಸರ್ಕಾರದ ನಿರ್ಣಯವನ್ನು ಹೇಳಲಿಕ್ಕೆ ಸಆಧ್ಯವಾಗುತ್ತದೆ ಇಲ್ಲಾಂದ್ರೆ ಕ್ಯಾಬಿನೆಟ್‌ನಲ್ಲಿ ಪಾಸಾಗಿದೆ, ಗಬರ್ನಮೆಂಟ್ ಅರ್ಡ್‌ರ್ ಆಗಿದೆ ಎಂದು ಹೇಲಿದರೆ ನಮ್ಮನ್ನು ನಂಬಲಾರದಂಥ ಪರಿಸ್ಥಿತಿ ಆಗಿದೆ ಈ ಗೌರ್ನಮೆಂಟ್ ಅರ್ಡ್‌ರ್, ಕ್ಯಾಬಿನೆಟ್ ನಿರ್ಣಯ, ಇದರ ಮೇಲೆ ಅವರ ಹೊಟ್ಟೆ ತುಂಬುವುದಿಲ್ಲ, ಅವರಿಗೆ ಉದ್ಯೋಗ ಸಿಕ್ಕರೆ ಮಾತ್ರ ಹೊಟ್ಟೆ ತುಂಬುತ್ತದೆ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತಂದು, ದಯವಿಟ್ಟು ಆ ಕೆಲಸ ತೀವ್ರವಾಗಿ ತಾವು ಮಾಡಬೇಕೆಂದು ನಾನು ಕೇಳಿಕೊಂಡು ನನ್ನ ಮಾತನ್ನು ನಾನು ಮುಗಿಸುತ್ತೇನೆ

†ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಅಧ್ಯಕ್ಷರೆ, ಯಾವ ರೀತಿ ದೇಶಕ್ಕೆ ಅನ್ನ ನೀಡುವ ರೈತನ ಬಗ್ಗೆ ಕಾಳಜಿ ಇದೆಯೋ ಅದೇರೀತಿ ದೇಶದ ಮಾರ್ಯಾದೆಯನ್ನು ಮುಚ್ಚುವಂಥ ನೇಕಾರನ ಬಗ್ಗೆ ಇಲ್ಲಿಯವರೆವಿಗೂ ಮಲತಾಯಿ ದೋರಣೆಯನ್ನು ತಾಳಿದೆ ಎಂದು ನಾನು ಸರ್ಕಾರದ ಮೇಲೆ ಆಪಾದನೆ ಮಾಡುತ್ತೇನೆ ಏಕೆಂದರೆ, ಒಂಬತ್ತು ತಿಂಗಳುಗಳಿಂದ ಆ ಬಡ ನೇಕಾರನ ಮಗ್ಗಗಳು ಬಂದ್ ಇದ್ದರೆ ಅಲ್ಲಿ ಯಾವ ರೀತಿ ಅವನು ಬದುಕಿದ್ದಾನೋ ಸತ್ತಿದ್ದಾನೋ ಎಂದು ನೋಡುವಂಥ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಇಲ್ಲಿಯವರೆವಿಗೂ ಮಾಡಲಿಲ್ಲ ಕಳೆದ ಒಂಬತ್ತು ತಿಂಗಳುಗಳಿಂದಷ್ಟೇ ಅಲ್ಲ, ಇವತ್ತಿನವರೆವಿಗೂ ಆ ಬಡ ನೇಕಾರನ ಮಗ್ಗ, ಆ ಕೆಹೆಚ್‌ಡಿಸಿಯ ನೇಕಾರನ ಮಗ್ಗ, ಇವತ್ತಿನವರೆವಿಗೂ ಬಂದ್ ಇವೆ ಈ ನಡುವೆ ನಾವು ಮೂರ ತಿಂಗಳವರೆಗೆ ತಿರುಗಿಪಟ್ಟಿ ಹಾಕಿ ಬಿಕೆ ಬೇಡಿ ಗಂಜಿ ಕೇಂದ್ರದ ಮುಖಾಂತರ ಆ ನೇಕಾರರನ್ನು ಸಲಹುವಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ, ಜನಪ್ರತಿನಿಧಿಗಳು ಅಲ್ಲಿ ಕೂಡಿಕೊಂಡು ಆ ಕೆಲಸ ಮಾಡಿದ್ದೇವೆ ಇಲ್ಲಿಯವರೆವಿಗೂ ಆ

ನೇಕಾರರ ಮಗ್ಗಗಳು ಬಂದ್ ಇವೆ ಸರ್ಕಾರದ ಅದೇಶದ ಪ್ರಕಾರ ಆ ವಿದ್ಯಾ ವಿಕಾಸ ಯೋಜನೆಯಲ್ಲಿ ಅವರಿಗೆ ಅದ್ಯತೆ ಕೊಡಬೇಕೆನ್ನುವ ಪದ್ಧತಿ ಇದ್ದರು ಸಹಿತ ಅದನ್ನು ಹಣಕಾಸು ಇಲಾಖೆಯ ಆಯುಕ್ತರು ತಡೆ ಹಿಡಿದಿದ್ದಾರೆ ಅದನ್ನು ಏಕೆ ತಡೆಹಿಡಿದ್ದೀರಿ, ಯಾವುದರ ಸಲುವಾಗಿ ಎಂದು ಹೇಳುವಂಥ ವಿಷಯವನ್ನು ಸಹಿತ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿಲ್ಲ ಮೊನ್ನೆ ಪತ್ರಿಕೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಹಿತ ಈ ವಿಚಾರದಲ್ಲಿ ಈ ಮಾತನ್ನು ಹೇಳಿರುವಂಥದ್ದನ್ನು ತಮ್ಮ ಗಮನಕ್ಕೆ ನಾನು ತರಬಯಸುತ್ತೇನೆ ಏಕೆ ಈ ರೀತಿ ನೇಕಾರರನ್ನು ಮತ್ತು ಬಡ ನೇಕಾರರನ್ನು ಈ ರೀತಿ ಸತಾಯಿಸುವಂಥ ವ್ಯವಸ್ಥೆ ಏನು ಇದೆ ನಮಗೆ ಅರ್ಥವಾಗುವುದಿಲ್ಲ ಮಾನ್ಯ ಕಾರಜೋಳರವರು ಮೊನ್ನೆಒಂದು ಮಾತು ಹೇಳಿದರು ಹಿಂದಿನ ಮಾನ್ಯ ಕೃಷ್ಣ ಅವರ ಸರ್ಕಾರ 50 ಕೋಟಿ ರೂಪಾಯಿಗಳ ಅರ್ಡರ್‌ನ್ನು ವಿದ್ಯಾ ವಿಕಾಸ ಯೋಜನೆಯಲ್ಲಿ ಕೊಟ್ಟಿತ್ತು ಆದರೆ, ಅವರು ಸಪ್ಲೈ ಮಾಡಿದಂಥ ಬಟ್ಟೆ ಹಣವನ್ನು ಒಂದು ವರ್ಷದ ನಂತರ ಅದನ್ನು ಪಾವತಿ ಮಾಡುವಂಥ ವ್ಯವಸ್ಥೆ ಈ ಸರ್ಕಾರದಿಂದ ಆಗಿದೆ ಕೇವಲ ಈ ಹಣಜಾಸಿನ ಡಿಲೇಯಿಂದ, ಆ ಕೆಹೆಚ್‌ಡಿಸಿ ಸಂಸ್ಥೆಗೆ ಐದು ಕೋಟಿ ರೂಪಾಯಿ ಲಿಕ್ವಾನು ಆಗಿದೆ ಇದೇ ರೀತಿಯ ಸರ್ಕಾರದ ಒಂದು ಧೋರಣೆಯಿಂದ ಆ ಸಂಸ್ಥೆ ಇವತ್ತಿನ ಸ್ಥಿತಿಯಲ್ಲಿ 44 ಕೋಟಿ ರೂಪಾಯಿಃ ಲಿಕ್ವಾನು ಇದ್ದಂಥ ಸ್ಥಿತಿಯಲ್ಲಿ ನೇಕಾರರನ್ನು ಸಲಹುವಂಥ ಸಾಧ್ಯತೆ ಆ ಸಂಸ್ಥೆಗೆ ಬರುವುದಿಲ್ಲ. ಈ ಎಲ್ಲಾ ವ್ಯವಸ್ಥೆಯನ್ನು ತಾವು ಗಮನದಲ್ಲಿ. ಕೊಂಡು ವಿದ್ಯಾ ವಿಕಾಸ ಯೋಜನೆಗೆ ಏನೊಂದು ಅರ್ಡರ್ ಕೊಡುತ್ತೀರಿ ಅದಕ್ಕೆ 50 ಪರ್ಸೆಂಟ್ ಅಡ್ವಾನ್ಸ್ ಮುಖಾಂತರ ಅರ್ಡರ್ ಕೊಡುವುದಕ್ಕೆ ಈ ಸರ್ಕಾರದಿಂದ ಆದೇಶ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಮತ್ತೆ ಇನ್ನು ಸಹಿತ ಅನೇಕ ಯೋಜನೆಗಳನ್ನು ಹಾಕುವುದರ ಮುಖಾಂತರ ಬಡ ನೇಕಾರರನ್ನು ಬದುಕಿಸುವ ಸಲುವಾಗಿ ತಾವು ಪ್ರಾಮಾಣಿಕ ಪ್ರಯತ್ನ ಮಾಡಬೇಕು ರಂಜಾನ್ ಸಾಬ್‌ಗಡ್ಡಿ ಎನ್ನುವಂಥ ನೇಕಾರ ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ಒಂದು ಉದಾಹರಣೆಯನ್ನು ಈಗಾಗಲೇ ಮಾನ್ಯ ಸದಸ್ಯರು ಇಲ್ಲಿ ಹೇಳಿದ್ದಾರೆ ಮತ್ತೆ, ಇದೂ ಅಲ್ಲದೆ ಕೇವಲ 100 ರೂಪಾಯಿ ಸಾಲ ಮಾಡಿಕೊಂಡು ಈ ಸಾಲವನ್ನು ತೀರಿಸುವುದಕ್ಕೆ ಉದ್ಯೋಗ ನಡೆಯದೆ ಇರುವುದರಿಂದ ನುರಾರು ನೇಕಾರರು ಈ ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಸಾಲದ ಭಾದೆಯಿಂದ ಆತ್ಮಹತ್ಯೆ ಮಾಡಿ ಕೊಂಡಂಥ ರೈತರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುವ ರೀತಿಯಲ್ಲಿಯೇ ನಮ್ಮ ದೇಶದ ಮತ್ತು ಈ ರಾಜ್ಯದ ಪ್ರಜೆಯಾಗಿರುವ ನೇಕಾರರಿಗೆ ಬೇರೆ ದೃಷ್ಟಿಕೋನ ನೋಡನೆ ಅವರಿಗೂ ಕೂಡ ಪರಿಹಾರ ಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ ಈ ಒಂದು ವ್ಯವಸ್ಥೆ ಸರ್ಕಾರದಿಂದ ಆಗಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತೆ ಇದೂ ಅಲ್ಲದೆ ಇವತ್ತಿನದಿವಸ ರಾಜ್ಯದಲ್ಲಿರತಕ್ಕಂಥ ಪವರ್‌ಲೂಮ್ ನೇಕಾರರ ಉದ್ಯೋಗ ಕೂಡ ನಿಂತು ಹೋಗುವ ದಯನೀಯ ಸ್ಥಿತಿ ನಮ್ಮ ರಾಜ್ಯದಲ್ಲಿ ನಿರ್ಮಾಣವಾಗಿದೆ ಇನ್ನು ಆರು ತಿಂಗಳಲ್ಲಿ ಪವರ್‌ಲೂಮ್ಸ್ ನಿಂತು ಹೋಗಿ ಅವರೂ ಕುಡ ರಸ್ತೆಗೆ ಬರತಕ್ಕಂಥ ಪರಿಸ್ಥಿತಿ ಬರುತ್ತದೆ ಏಕೆಂದರೆ, ಮಹರಾಷ್ಟ್ರ ಮತ್ತು ನಮ್ಮ ರಾಜ್ಯದ ಸುತ್ತಮುತ್ತಲಿನ ರಾಜ್ಯಗಳಲ್ಲಿ ಮಗ್ಗಗಳಿಗೆ ಸರಬರಾಜು ಮಾಡತಕ್ಕಂಥ ವಿದ್ಯುತ್‌ಗೆ ಸಬ್ಸಿಡಿ ಕೊಡುತ್ತಾರೆ ಅಂದರೆ ಒಂದು ಯುನಿಟ್‌ಗೆ 1 50 ಅಥವಾ 1 40 ಪೈಸೆಗೆ ವಿದ್ಯುತ್ ಸರಬರಾಜು ಮಾಡುತ್ತಾರೆ ಆದರೆ ನಮ್ಮ ರಾಜ್ಯದಲ್ಲಿರತಕ್ಕಂಥ ಪವರ್‌ಲೂಮ್ಸ್‌ಗೆ ಒಂದು ಯುನಿಟ್ ವಿದ್ಯುತ್‌ಗೆ 3 ರಿಂದ ನಾಲ್ಕು ರೂಪಾಯಿ ದರದಲ್ಲಿ ಸರಬರಾಜು ಮಾಡುತ್ತಾರೆ ಒಂದು ಯುನಿಟ್‌ಗೆ 3 ರಿಂದ 4 ರೂಪಾಯಿ ಕೊಡುವುದರಿಂದ ಅವರ ಜೊತೆಯಲ್ಲಿ ನಮ್ಮ ರಾಜ್ಯದ ನೇಕಾರರು ಕಾಂಪಿಟ್

ಮಾಡುವುದಕ್ಕೆ ಆಗದೇ ಇರುವುದರಿಂದ ಇವತ್ತಿನದಿವಸ ಲುಕ್ಸಾನ್ ಆಗತಕ್ಕಂಥ ಪರಿಸ್ಥಿತಿಗೆ ಬಂದು ಸಂಪೂರ್ಣವಾಗಿ ಮುಳುಗಿ ಹೋಗುವಂಥ ಸ್ಥಿತಿಗೆ ಬಂದಿದ್ದಾರೆ ಆದ್ದರಿಂದ, ಪಕ್ಕದ ರಾಜ್ಯಗಳಲ್ಲಿ ಯಾವರೀತಿಯಾಗಿ ಪವರ್ ಲೂಮ್ಸ್‌ಗೆ ವಿದ್ಯುತ್ ಸಬ್ಸಿಡಿ ಮುಖಾಂತರ ಕೊಡುತ್ತಿದ್ದಾರೆಯೋ ಅದೇ ರೀತಿಯಾಗಿ ನಮ್ಮ ರಾಜ್ಯದಲ್ಲಿ ಮುಂದುವರಿಸುವುದಾದರೆ, ಸುಮಾರು ಹತ್ತಾರು ಲಕ್ಷ ನೇಕಾರರನ್ನು ಉಳಿಸಿಕೊಳ್ಳಬಹುದೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿಮಾಡಿಕೊಳ್ಳುತ್ತೇನೆ ಮೊನ್ನೆದಿವಸ ತಾವು ವಿದ್ಯಾ ವಿಕಾಸ ಯೋಜನೆಗೆ ಅರ್ಡರ್ ಮಾಡಿದ್ದೀರಿ ಆದರೆ, ಇದಕ್ಕೆ 50 ಪರ್ಸೆಂಟ್ ಅಡ್ವಾನ್ಸ್ ಮುಖಾಂತರ ಆರ್ಡರ್ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿ ಕೊಳ್ಳುತ್ತೇನೆ

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ (ಹುಕ್ಕೇರಿ) ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿರತಕ್ಕಂಥ ನೇಕಾರರೂ ಕೂಡ

ಅಧ್ಯಕ್ಷರು ಯಾರ್ಯಾರು ಸಿಗ್ನೇಟರಿಸ್ ಇದ್ದಿರೋ ಅವರು ಮಾತ್ರ ದಯವಿಟ್ಟು ಮಾತನಾಡಬೇಕು ಏಕೆಂದರೆ ಈಗಾಗಲೇ ಸಮಯ ಆಗುತ್ತಿದೆ ನಿಯಮ 69ರ ಅಡಿಯಲ್ಲಿ ಮಾನ್ಯ ಮುರುಗೇಶ್ ಆರ್ ನಿರಾಣಿರವರು ಮಾತನಾಡಿದ್ದಾರೆಯೇ?

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು ತಾವು ಇದಕ್ಕೆ ಸಿಗ್ನೇಟರಿಸ್ ಆಗಿದ್ದೀರಾ?

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ನನ್ನ ತಾಲ್ಲೂಕಿನಲ್ಲಿರುವ ನೇಕಾರರ ಬಗ್ಗೆ ಮಾತನಾಡಬೇಕಾಗಿದೆ

ಅಧ್ಯಕ್ಷರು ತಾವು ಇದಕ್ಕೆ ಸಹಿ ಮಾಡಿದ್ದೀರಾ?

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ ಇದಕ್ಕೆ ನಾನು ಸಹಿ ಮಾಡಿಲ್ಲ ಆದರೂ ಸಹಿತ ಇದರ ಬಗ್ಗೆ ನಾನು ಮಾತನಾಡಬೇಕಾಗಿದೆ ನಾನು ಈಗಾಗಲೇ ಹೇಳಿದಂತೆ ನನ್ನ ತಾಲ್ಲೂಕಿನಲ್ಲಿರುವ ನೇಕಾರರ ಬಗ್ಗೆ ಮಾತನಾಡಬೇಕಾಗಿದೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅಧ್ಯಕ್ಷರೆ, ಹೊಸ ಸದಸ್ಯರಿಗೆ ಮತ್ತು ಸಾಮಾನ್ಯವಾಗಿ ಆ ಭಾಗದ ಕಡೆಯಿಂದ ಬಂದವರು ಇದಕ್ಕೆ ಸಹಿ ಮಡದೇ ಇದ್ದರೂ ಕೂಡ ಅವರು ಮಾತನಾಡುವುದಕ್ಕೆ ತಾವು ಅವಕಾಶ ಕೊಡಬಹುದು

ಅಧ್ಯಕ್ಷರು ಬೇಗ ಮಾತನಾಡಿ ಮುಗಿಸಿ ಏಕೆಂದರೆ, ಇನ್ನೂ ಇದರ ಬಗ್ಗೆ ಚರ್ಚೆ ಆಗಬೇಕು ಮತ್ತೆ ಇದಕ್ಕೆ ಸರ್ಕಾರದ ಕಡೆಯಿಂದ ಉತ್ತರ ಕೂಡ ಕೊಡಬೇಕಾಗಿದೆ ಆದ್ದರಿಂದ ಬೇಗ ಮಾತನಾಡಿ ಮುಗಿಸಿ

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ (ಹುಕ್ಕೇರಿ) ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದ ನೇಕಾರರಿಗೆ ಬಹಳ ತೊಂದರೆಯಾಗಿದೆ ಕಾರಣ ಏನೆಂದರೆ, ನಮ್ಮಲ್ಲಿ ಪವರ್ ಸ್ಟೇಷನ್ ಕಡಿಮೆಯಿರುವುದರಿಂದ ಇಲ್ಲಿರತಕ್ಕಂಥ ಮಗ್ಗಗಳಿಗೆ ಮೇಲಿಂದೆಮೇಲೆ ವಿದ್ಯುತ್ ವ್ಯತ್ಯಯ ಆಗುವುದರಿಂದ ಇದನ್ನು ನಂಬಿರತಕ್ಕಂಥ ನೇಕಾರರ ಬದುಕಿನ ಮೇಲೆ ಬಹಳ ಹೀನಾಯವಾದ ಸ್ಥಿತಿ ಉಂಟಾಗಿದೆ ಈ ಒಂದು ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ನಮ್ಮಲ್ಲಿ ಇನ್ನೂ ಸಾಕಷ್ಟು ಸ್ಟೇಷನ್‌ಗಳು ಆಗಬೇಕಾಗಿದೆ ಇದು ಆದರೆ ಮಾತ್ರ ಅಲ್ಲಿರುವ ನೇಕಾರರಿಗೆ ಅನುಕೂಲ ಮತ್ತು ಅವರ ಬದುಕಿಗೆ ಉತ್ತಮವಾದಂಥ ವ್ಯವಸ್ಥೆ ಮಾಡಿದಂತೆ ಆಗುತ್ತದೆಂದು ಈ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ

†ಶ್ರೀ ಬಿ ಎಸ್ ಗಡ್ಡದೇವರಮಠ್ (ಶಿರಹಟ್ಟಿ) ಮಾನ್ಯ ಅಧ್ಯಕ್ಷರೆ, ಈಗಾಗಲೇ ನೇಕಾರರ ಬದುಕಿನ ಸ್ಥಿತಿಗತಿ ಬಗ್ಗೆ ಅನೇಕ ಹಿರಿಯ ಸದಸ್ಯರು ಮಾತನಾಡಿದ್ದಾರೆ ಆದ್ದರಿಂದ, ನಾನು ವಿಶೇಷವಾಗಿ ಮತ್ತೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ ಆದರೆ, ಕಳೆದಸಾರಿ ಈ ಸದನದಲ್ಲಿ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದೆವು ಇದು ಏನೆಂದರೆ, ಆಗ ಇದ್ದಂಥ ಹಸಿರು ಕಾರ್ಡ್‌ಗಳನ್ನು ಕಡ್ಡಾಯವಾಗಿ ನೇಕಾರ ಕೂಲಿಕಾರ್ಮಿಕರಿಗೆ ಕೊಟ್ಟರೆ ಇವರಿಗೆ ಒಂದು ರೀತಿಯಲ್ಲಿ ಸಹಾಯವಾಗುತ್ತದೆ ಎಂಬ ವಿಷಯದ ಬಗ್ಗೆ ಮನವಿ ಕೊಡಲಾಗಿತ್ತು ಮತ್ತೆ ಈ ಸರ್ಕಾರಕ್ಕೂ ಕೂಡ ತಮ್ಮ ಮುಖೇನ ಮನವಿ ಮಾಡುವುದೇನೆಂದರೆ, ನೇಕಾರ ಕೂಲಿ ಕಾರ್ಮಿಕರಿಗೆ ಅಂಥದ್ದೇ ಕಾರ್ಡ್‌ಗಳನ್ನು ಕೊಡಬೇಕು ಈಗಾಗಲೇ ಹಿರಿಯ ಸದಸ್ಯರಾದಂಥ ಶ್ರೀ ಗೋವಿಂದ ಎಂ ಕಾರಜೋಳ ಮತ್ತು ಡಿ ಆರ್ ಪಾಟೀಲರವರು ಹೇಳಿದ ಹಾಗೆ, ನೇಕಾರರ ಬಡತನದ ಬದುಕಿಗೆ ಅನುಕೂಲವಾಗುತ್ತದೆ ಎನ್ನತಕ್ಕಂಥ ವಿಚಾರದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ಆಗ್ರಹ ಮಾಡುತ್ತೇನೆ. ಮತ್ತೆ ಇದರ ಜೊತೆಗೆ ಇವತ್ತಿನದಿವಸ ನೇಕಾರ ಕೂಲಿಕಾರ್ಮಿಕರ ಸಮಸ್ಯೆ ಎಷ್ಟಿದೆಯೋ ಮತ್ತು ಇವರಿಗೆ ಒಂದು ಹೊತ್ತಿನ ಊಟವಿಲ್ಲದೆ ಯಾವರೀತಿಯಾಗಿ ಸೊರಗಿದ್ದಾರೆಯೋ ಅದೇ ರೀತಿಯಲ್ಲಿ ಮತ್ತು ಅಷ್ಟೇ ಪ್ರಮಾಣದಲ್ಲಿ ಇವತ್ತಿನದಿವಸ ಬೀಡಿ ಕಾರ್ಮಿಕರ ಸಮಸ್ಯೆ ಕೂಡ ಇದೆ ಆದ್ದರಿಂದ ನೇಕಾರ ಮತ್ತು ಬೀಡಿ ಕಾರ್ಮಿಕರಿಗೆ ಈ ಸರ್ಕಾರ ಅಂಥದ್ದೇ ಕಾರ್ಡ್‌ಗಳನ್ನು ಈ ಕೂಡಲೇ ಕೊಡುವಂಥ ವ್ಯವಸ್ಥೆ ಮಾಡಿದರೆ ಬಡತನದಿಂದ ನೊಂದಿರತಕ್ಕಂಥ ಅವರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ತಮ್ಮ ಮುಖೇನ ಸರ್ಕಾರಕೆ ಆಗ್ರಹ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ

†ಶ್ರೀ ಎಸ್ ಎಸ್ ಪಾಟೀಲ್ (ಮುಂಡರಗಿ) ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ನಮ್ಮ ದೇಶದಲ್ಲಿ ಏನಾಗಿದೆ ಎಂದರೆ, ಈ ದೇಶದ ಜನರಿಗೆ ಯಾರು ಊಟ ಮಾಡಲಿಕ್ಕೆ ಅನ್ನ ಹಾಕುತ್ತಾನೆಯೋ, ಆತನಿಗೇನೇ ಊಣ್ಣಲಿಕ್ಕೆ ಇಲ್ಲದಂಥ ಸ್ಥಿತಿ ಈ ದೇಶದಲ್ಲಿ ನಿರ್ಮಾಣವಾಗಿದೆ ಮತ್ತೆ ಯಾರು ಈ ದೇಶದ ಎಲ್ಲಾ ಜನರ ಮರ್ಯಾದೆ ಮುಚ್ಚುವುದಕ್ಕೆ ಬಟ್ಟೆಯನ್ನು ಒದಗಿಸುತ್ತಿದ್ದರೋ ಅವರಿಗೆ ಇವತ್ತಿನದಿವಸ ಬಟ್ಟೆ ಹಾಕಿಕೊಳ್ಳದೆ ಇರತಕ್ಕಂಥ ಪರಿಸ್ಥಿತಿ ಉಂಟಾಗಿದೆ ಇದಕ್ಕೆಲ್ಲಾ ಕಾರಣ ಏನೆಂದರೆ, ಗಾಂಧೀಜಿ ಕಂಡಂಥ ಗ್ರಾಮ ಸ್ವರಾಜ್ಯದ ಕನಸನ್ನು ನಾವು ನನಸು ಮಾಡಲಿಲ್ಲ ಇವತ್ತಿನದಿವಸ ನಮ್ಮ ಹಳ್ಳಿಗಾಡಿನಲ್ಲಿ, ನೇಕಾರರು, ಕಮ್ಮಾರರು ಮತ್ತು ಚಮ್ಮಾರರು, ಬಿಡಿಗರು ಹಾಗೂ ಮೇದಾರರು ಇಲ್ಲದಂತಾಗುತ್ತಿದೆ ಕಾರಣ ಏನೆಂದರೆ, ಸ್ವಾತಂತ್ರ್ಯ ಬಂದು ಇಲ್ಲಿಯವರೆಗೆ ಗಾಂಧೀಜಿಯವರು ಯಾವ ಒಂದು ಉದ್ದೇಶಕ್ಕಾಗಿ ಗ್ರಾಮೀಣ ಸ್ವರಾಜ್ಯದ ಒಂದು ಕನಸು ಇಟ್ಟುಕೊಂಡು ಯಾವರೀತಿಯಾಗಿ ಗ್ರಾಮೀಣ ಕೈಗಾರಿಕೆಗಳನ್ನು ಬೆಳಸಬೇಕೆಂದು ಅವರು ಏನೊಂದು ವಿಚಾರ ಮಾಡಿದಂಥದ್ದನ್ನು ಅಲ್ಲಿಂದ ಇಲ್ಲಿಯವರಿಗೆ ಬಂದಂಥ ಎಲ್ಲಾ ಸರ್ಕಾರಗಳನ್ನು ನಡೆಸಿದಂಥವರು ಗಾಂಧೀಜಿಯವರು ಕಂಡಂಥ ಕನಸನ್ನು ನನಸು ಮಾಡುವುದನ್ನು ಬಿಟ್ಟು ಇವತ್ತಿನದಿವಸ ಏನೇನೋ ಮಾಡುವುದಕ್ಕೆ ಹೋಗಿದ್ದರಿಂದಲೇ ಈ ದೇಶದ ಸ್ಥಿತಿ ಈ ರೀತಿಯಾಗಿದೆ ಇವತ್ತಿನದಿವಸ ನೇಕಾರರನ್ನು ನಾವು ಹಾಳು ಮಾಡಿದ್ದೇವೆ ಮತ್ತೆ ಅವರು ಹಾಳು ಮಾಡುವುದರ ಜೊತೆಗೆ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಇಲ್ಲಿಗೆ ತಂದವು ಆದರೆ, ಇಲ್ಲಿಗೆ ಬಂದಂಥ ಟೆಕ್ಸ್‌ಟೈಲ್ ಮಿಲ್‌ಗಳೆಲ್ಲಾ ಕೂಡ ಇವತ್ತಿನದಿವಸ ಮುಚ್ಚಿಕೊಂಡು ಹೋಗಿವೆ ಇವತ್ತಿನದಿವಸ ಅವರೂ ಕೂಡ ಹೋದರು ಮತ್ತು ಇವರೂ ಕೂಡ ಸತ್ತರು ನಾವು ಮಾಡಿಕೊಂಡು ಬಂದಿರತಕ್ಕಂಥ ಪರಿಸ್ಥಿತಿ ಇದಾಗಿದೆ ಈ ರೀತಿಯಾದ ಪರಿಸ್ಥಿತಿ ಇಡೀ ದೇಶದಲ್ಲಿಯೇ ನಿರ್ಮಾಣವಾಗಿದೆ ಇವತ್ತಿನದಿವಸ ಅನ್ನ ಹಾಕುವಂಥ ರೈತನ ಮತ್ತು

ನೇಕಾರರ ಪರಿಸ್ಥಿತಿ ಏನಾಗಿದೆ? ಮತ್ತೆ ಈತನ ಮೇಲೆ ಅವಲಂಬಿತವಾಗಿರತಕ್ಕಂಥ ಉದ್ಯಮಗಳೆಲ್ಲವೂ ಹಾಳಾಗಿವೆ ಇವತ್ತಿನದಿವಸ ನೇಕಾರರ ಬಗ್ಗೆ ಚರ್ಚೆ ಮಾಡೋಣ 'ಕಾಯಕವೇ ಕೈಲಾಸ' ಎಂಬ ತತ್ವದ ಆಧಾರದ ಮೇಲೆ ಸಂಕಷ್ಟದಲ್ಲಿರತಕ್ಕಂಥ ನೇಕಾರರ ಸೂಲಿನ ಸಲುವಾಗಿ ಶರಣದ ಕಾಲದಲ್ಲಿಯೂ ಕೂಡ ಚಂದಾ ಎತ್ತುತ್ತಿದ್ದರು ಅಷ್ಟಮಿ ಹಬ್ಬದ ದಿವಸ ಮನೆಯಲ್ಲಿ ನೂಲು ಮತ್ತು ರಾಟೆಯನ್ನು ಇಟ್ಟು ಪೂಜೆ ಮಾಡುವ ಪದ್ಧರಿ ಉತ್ತರ ಕರ್ನಾಟಕ ಬಹುಭಾಗದಲ್ಲಿ ಇವತ್ತಿಗೂ ಕೂಡ ಇದೆ ಈ ಪದ್ಧತಿ ಇಲ್ಲಿಯೂ ಕೂಡ ಇರಬಹುದು ಇವತ್ತಿನದಿವಸ ಕುರಿ ಉಣ್ಣೆ ತೆಗೆಯುವಂಥ ನೇಕಾರರೂ ಕೂಡ ಹೋದರು ಈ ಎಲ್ಲಾ ನೇಕಾರಿಕೆಗಳು ನಶಿಸಿ ಹೋಗಲು ಕಾರಣವೇನೆಂದರೆ, ಇವತ್ತಿನದಿವಸ ಕೇಂದ್ರ ಅಥವಾ ರಾಜ್ಯ ಸರ್ಕಾರ ಕೂಡ ಈ ಒಂದು ಬಡ ಜನತೆಯ ಬಗ್ಗೆ ಕಾಳಜಿ ಮಾಡಲಿಲ್ಲ ಈ ಒಂದು ಕಾರಣದಿಂದ ಈ ರೀತಿಯಾಗಿದೆ ಹಿಂದೆ ನಾನು ಕೂಡ ಮಂತ್ರಿಮಂಡಲದಲ್ಲಿದ್ದೆ ನಮ್ಮ ಸುದೈವದಿಂದ ಈಗಿನ ಮಂತ್ರಿಮಂಡಲದಲ್ಲಿ ಒಬ್ಬ ಸರ್ವಜ್ಞ ಇರುವುದು ನಮಗೆಲ್ಲಾ ಸಂತೋಷವಾಗಿದೆ ಸರ್ವಜ್ಞ ಏನು ಹೇಳಿದಾರೆಂದರೆ, "ಸರ್ವಜ್ಞ ಎಂಬುವವನು ಗರ್ವದಿಂದ ಆದವನೇ ಎಲ್ಲರೊಳಗೊಂದು ನುಡಿಗಲಿತು ವಿದ್ಯಾಪರ್ವತವೇ ಆದೆ ಸರ್ವಜ್ಞ" ಎಂದು ಹೇಳುತ್ತಾರೆ ನಮ್ಮ ಮಾನ್ಯ ಶ್ರೀರಾಮರೆಡ್ಡಿ ನಾನು ದಯಮಾಡಿ ಹೇಳುವುದೇನೆಂದರೆ, ಇಲ್ಲಿ ಯಾರು ಇಲ್ಲದಿದ್ದರೂ ಸಹ ಕೈಗೊಬ್ಬ ಸರ್ವಜ್ಞನಾದರೂ ನಮ್ಮ ಮುಂದೆ ಕುಳಿತಿದ್ದಾನೆ ನಮಗೆಲ್ಲಾ ಅಷ್ಟೇ ಸಾಕು ಯಾರೂ ಏನೇ ಪ್ರಶ್ನೆ ಕೇಳಲಿ ಅದಕ್ಕೆಲ್ಲಾ ಅವರೊಬ್ಬರೇ ಉತ್ತರ ಕೊಡತಕ್ಕಂಥದ್ದನ್ನು ನಾವು ಬೆಳಿಗ್ಗೆಯಿಂದ ನೋಡುತ್ತಿದ್ದೇವೆ ಕನಿಷ್ಟ ಇಂಥವರು ಒಬ್ಬರಾದರೂ ಇಲ್ಲಿದಾರೆಂದು ನಾವು ಸಂತೋಷಪಡುತ್ತೇವೆ ಆದ್ದರಿಂದ ಇಲ್ಲಿ ಮಂತ್ರಿಗಳು ಇಲ್ಲವೆಂದು ಮಾನ್ಯ ಶ್ರೀರಾಮರೆಡ್ಡಿಯವರು ಹೇಲುವುದಕ್ಕೇ ಹೋಗಬೇಡಿ ಎಂದು ಹೇಳುತ್ತಿದ್ದೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ, 8 ಲಕ್ಷ ಕುಟುಂಬಗಳು ಇವತ್ತಿನದಿವಸ ಬೀದಿಪಾಲಾಗುವಂಥ ಗಂಭೀರವಾದಂಥ ವಿಚಾರ ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ಸಂಬಂಧಪಟ್ಟಂಥ ಮಂತ್ರಿಗಳು ಮತ್ತು ಅಧಿಕಾರಿಗಳು ಇಲ್ಲದೇ ಹೋದರೆ ಆ ವಿಷಯದ ಘಟನೆ ಮತ್ತು ಪ್ರಾಮುಖ್ಯತೆಯನ್ನು ಕಳೆದು ಕೊಳ್ಳುತ್ತದೆ ಈ ಒಂದು ಉದ್ದೇಶಕ್ಕಾಗಿ ನಾವು ಹೇಳಿದ್ದೇವೆ ಹೊರತು ಬೇರೆ ಕಾರಣಕ್ಕೊಸ್ಕರವಲ್ಲ ಮಹತ್ವವಾದಂಥ ಚರ್ಚೆ ಆಗಬಾರದು ಎಂಬುದಲ್ಲಿ ಮಹತ್ವವಾದಂಥ ವಿಷಯ ಚರ್ಚೆಯಾಗುವಾಗ ಸಂಬಂಧಪಟ್ಟಂಥ ಮಂತ್ರಿಗಳು ಮತ್ತು ಅಧಿಕಾರಿಗಳು ಇದ್ದರೆ ಅದಕ್ಕೊಂಡು ಹೆಚ್ಚು ಮಹತ್ವ ಮತ್ತು ಶಕ್ತಿ ಬರುತ್ತದೆ ಈ ಒಂದು ಉದ್ದೇಶದಿಂದ ನಾನು ಹೇಳಿದ್ದೇನೆ ಬೇರೆ ಉದ್ದೇಶ ಇಟ್ಟುಕೊಂಡು ನಾನು ಇದನ್ನು ಹೇಳಿಲ್ಲ

ಶ್ರೀ ಎಸ್ ಎಸ್ ಪಾಟೀಲ್ ಶ್ರೀರಾಮರೆಡ್ಡಿಯವರೇ ಮತ್ತು ಅರಗಜ್ಞಾನೇಂದ್ರರವರೇ, ನಾನೂ ಕೂಡ ಆ ಕಡೆ ಕುಳಿತುಕೊಂಡು ನೀವು ಈಗ ಏನು ಮಾಡಿದ್ದಿರೋ ಅದನ್ನು ನಾನೂ ಕೂಡ ಮಾಡಿದ್ದೇನೆ

ಶ್ರೀ ಆರಗ ಜ್ಞಾನೇಂದ್ರ ಅದನ್ನು ತಾವು ನೆನಪು ಮಾಡಿಕೊಂಡರೆ ಸಾಕು ಏಕೆಂದರೆ ಅವರು ಈ ಕಡೆ ಕುಳಿತುಕೊಂಡು ಸಂಬಂಧಪಟ್ಟಂಥ ಮಂತ್ರಿಗಳು ಮತ್ತು ಅಧಿಕಾರಿಗಳು ಇಲ್ಲವೆಂದು ನಿತ್ಯ ಹೇಳುತ್ತಿದ್ದರು

ಶ್ರೀ ಎಸ್ ಎಸ್ ಪಾಟೀಲ್ ನೀವು ಏನು ಹೇಳುತ್ತೀರಿ ಎನ್ನತಕ್ಕಂಥದ್ದು ನನಗೆ ಗೊತ್ತು

ಶ್ರೀ ಅರಗ ಜ್ಞಾನೇಂದ್ರ ಮತ್ತೆ ತಾವು ಅತ್ತ ಕಡೆ ಕುಳಿತೂ ಕೂಡ ಅದನ್ನೇ ಹೇಳುವಂತಾಯಿತ್ತಲ್ಲಾ

ಶ್ರೀ ಜಿ ಎ ಶ್ರೀರಾಮರೆಡ್ಡಿ ನಾವು ಏನು ಹೇಳುತ್ತೇವೆ ಎನ್ನತಕ್ಕಂಧದ್ದನ್ನು ತಾವು ಮೊದಲೇ ಹೇಳುವುದಾದರೆ ಅಧವಾ ಗೊತ್ತಾಗುವುದಾದರೆ ಎಲ್ಲರಿಗಿಂತ ನೀವೇ ಸರ್ವಜ್ಞರು ಎಂದು ಹೇಳಬೇಕಾಗಿದೆ

ಶ್ರೀ ಎಸ್ ಎಸ್ ಪಾಟೀಲ್ ನಾನು ಇಲ್ಲಿ ಕುಳಿತರೂ ಕೂಡ ಅದನ್ನೇ ಹೇಳುತ್ತೇನೆ ಮಾನ್ಯ ವಾಟಾಳ್ ನಾಗರಾಜ್‌ರವರು ಕನ್ನಡದ ಬಗ್ಗೆ ಮಾತನಾಡುತ್ತಾರೆ ಅದಕ್ಕೆ ನಾಣು ಅವರಿಗೆ ಸಪೋರ್ಟ್ ಮಾಡುತ್ತೇನೆ ಇಲ್ಲ ಎಂದು ನಾನು ಹೇಳುವುದಿಲ್ಲ

4 50 ಪಿಎಂ

ನಾನು ಇಲ್ಲಿ ಕುಳಿತುಕೊಂಡರೂ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುವುದು ತಪ್ಪು ಎಂದು ಅನ್ನುವುದಿಲ್ಲ

ಶ್ರೀ ಜಿ ವಿ ಶ್ರೀರಾಮರಡ್ಡಿ ನಾವು ನಿಮಗೆ ಸಹಾಯ ಮಾಡುವುದಕ್ಕಾಗಿ ಆ ವಿಷಯ ಹೇಳಿದೆವೇ ಹೊರತು, ನಾವು ನಿಮಗೆ ವಿರೋಧ ಮಾಡುವುದಕ್ಕೆ ಅಲ್ಲ,

ಶ್ರೀ ಎಸ್ ಎಸ್ ಪಾಟೀಲ್ ನೀವು ಮಾಡುವ ಪ್ರತಿಯೊಂದಕ್ಕೂ ನಮ್ಮ ಸಹಕಾರ ಇದೆ ತಾವೂ ಕೂಡ ಜನರ ಮತ್ತು ರಾಜ್ಯದ ಹಿತದ ಬಗ್ಗೆ ವಿಚಾರವನ್ನು ಮಾಡುತ್ತಿದ್ದೀರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನೀವು ಜನರ ಬಗ್ಗೆ ಮಾಡತಕ್ಕಂಧ ಒಳ್ಳೆಯ ಕೇಸಕ್ಕೆ ನಮ್ಮ ಸಹಕಾರ ಕೂಡ ನಿಮಗೆ ಯಾವಗಲೂ ಇದೆ ಅದರ ಬಗ್ಗೆ ವಿರೋಧ ಮಾಡತಕ್ಕಂಧ ಪ್ರಶ್ನೆಯೇ ಇಲ್ಲ

ಶ್ರೀ ಎಸ್ ಎಸ್ ಪಾಟೀಲ್ ಇಲ್ಲವೇ ಇಲ್ಲ ಆ ಕಡೆ ಇದ್ದಾಗ ನಾನು ಹೇಳಿದ್ದೇನೆಂದರೆ,

ಶ್ರೀ ಜಿ ವಿ ಶ್ರೀರಾಮರೆಡ್ಡಿ ಹಾಗಾದರೆ ತಕರಾರು ಏಕೆ?

ಶ್ರೀ ವಾಟಾಳ್ ನಾಗರಾಜ್ ಆ ವಿಷಯ ಹೋಗಲಿ ಬಿಡಿ, ನೀವು ಮಂತ್ರಿಯಾಗುತ್ತೀರಾ ಅಷ್ಟು ಹೇಳಿ ನಮಗೆ ಸಂತೋಷವಾಗುತ್ತದೆ

ಶ್ರೀ ಎಸ್ ಎಸ್ ಪಾಟೀಲ್ ಇಲ್ಲವಲ್ಲರಿ, ಮೊನ್ನೆ ನಮ್ಮನ್ನು ಮಾಡುತ್ತೇವೆಂದು ಹೇಳಿ

ಗೊಂದಲ

ಇರಲಿ, ವಿಷಯ ಬೇರ ಕಡೆಗೆ ಹೋಗುತ್ತದೆ ನಾನು ನಿಮಗೆ ಹೇಳಿದ್ದೆನೆಂದರೆ ಒಂದು ವಿಷಯ ಚರ್ಚೆ ಪ್ರಾರಂಭವಾದ ಮೇಲೆ, ಅಂದರೆ ಮಾತನಾಡುವುದಕ್ಕೆ ಪ್ರಾರಂಭವಾದ ಮೇಲೆ ಯಾರು ಇಲ್ಲವೆಂದು ಹೇಳುವುದು ಬೇಡ, ನಾನು ಮಾತನಾಡುತ್ತೇನೆ

(ಈ ಹಂತದಲ್ಲಿ ಶ್ರೀ ಅರಗ ಜ್ಞಾನೇಂದ್ರರವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿರು)

ಬಹುಶಃ ಹಿಂದೊಮ್ಮೆ ನಾವೂ ಕೂಡ ಮಂತ್ರಿಮಂಡಲದಲ್ಲಿ ಇದ್ದಾಗ ಈ ಶಾಲಾಮಕ್ಕಳಿಗೆ ಉಚಿತ ಸಮವಸ್ತ್ರವನ್ನು ಕೊಡುವುದು ಬೇಡ ಇದನ್ನು ಬಂದ್ ಮಾಡಿಬಿಡೋಣ ಎಂಬ ವಿಷಯ ಬಂತು, ಆಗ ಮಾನ್ಯ ಎಂ ಪಿ ಪ್ರಕಾಶ್‌ರವರು ಆಗ ಇದ್ದರು, ಇದಕ್ಕೆ ನಾವೆಲ್ಲರೂ ಸಪೋರ್ಟ್ ಮಾಡಿದ್ದೆವು ಇದನ್ನು ಏಕೆ ಮಾಡಿದ್ದು ಎಂದರೆ, ಬಡಮಕ್ಕಳು ಸಮವಸ್ತ್ರವನ್ನು ಕೊಡುವುದರ ಜೊತೆಗ ನಮ್ಮ ನೇಕಾರರು ಬದುಕುತ್ತಾರೆ, ಅವರಿಗೆ ಉದ್ಯೋಗವಿಲ್ಲ, ಏನೂ ಕೆಲಸವಿಲ್ಲವೆಂದು ಅವರಿಗೆ ಅದನ್ನು ಮಾಡಿದ್ದು ಅದನ್ನು ಪುನಃ ಮುಂದುವರೆಸಿದೆವು ಇವರು ಹೇಳುವಂತೆ ಏನೂ ಮಾಡಿಲ್ಲ, ಅದನ್ನು ಫೈನಾನ್ಸ್‌ನಲ್ಲಿಟ್ಟಿದ್ದಾರೆಂದು ಹೇಲಿದರೆ ಅದರ ಬಗ್ಗೆ ನಾವು ನಿಜವಾಗಲೂ ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗುತ್ತದೆ ಖಂಡಿತವಾಗಿ ಅದರ ಬಗ್ಗೆ ನಾನು ಈಗಾಗಲೇ ಹೇಳುತ್ತೇನೆ, ಆಡಳಿತ ಪಕ್ಷದಲ್ಲಿ ನಾವು ಕುಳಿತುಕೊಂಡಿದ್ದೇವೆಂದು ಸರ್ಕಾರದವರು ಮಾಡಿದ್ದು ಎಲ್ಲಾ ಸರಿ ಎಂದು ಎನ್ನಬೇಕಾದಗ್ದು ಏನೂ ಇಲ್ಲ ನಾವೂ ಕೂಡ ಹೇಳುತ್ತೇವೆ, ಖಂಡಿತವಾಗಿ ನಾವು ಕುಡ ಆ ಒಂದು ಪ ಕ

ಹೋಗುವುದಿಲ್ಲ ಇಡೀ ಸದನದಲ್ಲಿರುವ ನಾವೆಲ್ಲರೂ ಪಕ್ಷಾತೀತವಾಗಿ ಈ ರಾಜ್ಯದ ಒಳಿತಿಗಾಗಿ, ಈ ರಆಜ್ಯದಲ್ಲಿ ತುಳಿಯಲ್ಪಟ್ಟವರಿಗಾಗಿ ನಾವೆಲ್ಲರೂ ಒಟ್ಟಾಗಿ ಕೆಲಸವನ್ನು ಮಾಡಬೇಕಾಗುತ್ತದೆ ಅಂತಹದ್ದಕ್ಕೆಲ್ಲಾ ಸರ್ಕಾರದ ವಿರೋಧವೇನೂ ಇಲ್ಲ ಆ ಕಾರಣಕ್ಕಾಗಿ ನಾನು ಇವತ್ತು ಹೇಳುತ್ತೇನೆ, ಕೆಹೆಚ್‌ಡಿಸಿಯಲ್ಲಿ 270 ನೌಕರರು ಹೆಚ್ಚಿಗೆ ಆಗಿದ್ದಾರೆಂದು ಹೇಳಿದರು,ಅದಕ್ಕೆ ಒಬ್ಬರು ಕಾರಣರಲ್ಲ, ಅದಕ್ಕೆ ಬಹಳ ಜನ ಕಾರಣರಸ್ಥರಿದ್ದಾರೆ, ಮೊದಲನೆಯದಾಗಿ ಕೆಹೆಚ್‌ಡಿಸಿ ಗೆ ನಾಮಿನೇಶನ್ ಮಾಡುವಾಗ ಅದನ್ನು ರಾಜಕೀಯ ಮೇಲೆ ನಾವೆಲ್ಲರೂ ಮಾಡಿ ಕೊಂಡು ಬಂದಿರುತ್ತೇವೆ, ಇದರಲ್ಲಿ ಎಲ್ಲಾ ಪಾರ್ಟಿಯವರು ಇರಬಹುದು, ಯಾರು ನಿಜವಾದ ನೇಕಾರರು ಇರುತ್ತಾರೋ ಅವರನ್ನು ಮಾಡಬೇಕೇ ವಿನಃ ಯಾರನ್ನೋ ತೆಗೆದುಕೊಂಡು ಹೋಗಿ ಅಲ್ಲಿ ಕೊಡಿಸಿಬಿಟ್ಟರೆ, ಆಮೇಲೆ ಅಲ್ಲಿರುವಂಥ ಎಂ ಡಿ ಯವರು ಇದೊಂದು ಸಾರ್ವಜನಿಕ ಉದ್ದಿಮೆಗಳು ಹಾಳಾಗುವುದಕ್ಕೆ ಒಂದು ಕಾರಣವಾಗಿರುತ್ತದೆ ಸಾರ್ವಜನಿಕ ಇಂತಹ ಉದ್ದಿಮೆಗಳನ್ನು ಎಲ್ಲಾ ನೋಡಿದ್ದೇವೆ, ಅಲ್ಲಿ ಏನಾಗಿದೆ ಎಂದರೆ, ಅಲ್ಲಿಗೆ ಒಬ್ಬ ಎಂ ಡಿ ಯನ್ನು ಹಾಕುತ್ತೇವೆ, ಆ ಎಂ ಡಿ ಇದ್ದಾಗ ಲಾಭ ಮಾಡುತ್ತಾನೆ, ಅಲ್ಲಿಗೆ ಮತ್ತೊಬ್ಬ ಎಂ ಡಿ ಯನ್ನು ಹಾಕಿದಾಗ ಅದನ್ನು ಹಾಳು ಮಾಡಿ ಮುಚ್ಚಿಹೋಗಿರುವುದು ನಮಗೆ ಎಷ್ಟೋ ಉದಾಹರಣೆಗಳು ಇವೆ ಅದರ ಬಗ್ಗೆ ನಮ್ಮ ರಿಪೋರ್ಟ್‌ನಲ್ಲಿ ನಾವು ಬರೆದಿದ್ದೇವೆ ಅದಕ್ಕಾಗಿ ನಾಣು ಹೇಳುವುದು, ಯಾವ ಇಂತಹ ಸಾರ್ವಜನಿಕ ಉದ್ದಿಮೆಗಳು ಇವೆ, ಅದರಲ್ಲಿಯೂ ಕೆಹೆಚ್‌ಡಿಸಿ ಬಗ್ಗೆ ನಾನು ಹೇಳುವುದು ಅದಆ ಮೇಲೆ ಲಾಭವನ್ನು ಮಾಡಿ ಅದರ ಮೇಲೆ ಬದುಕತಕ್ಕಂಥ ಅದರ ಮೇಲೆ ಪಗಾರವನ್ನು ತೆಗೆದುಕೊಳ್ಳುವಂಥ ಎಂ ಡಿ ಇರಬೇಕೇ ವಿನಹಃ ಸರ್ಕಾರದಿಂದ ಪಗಾರವನ್ನು ತೆಗೆದುಕೊಳ್ಳುವವರು ಅಲ್ಲಿ ಇರಬಾರದು, ನಾನು ಮಾನ್ಯ ಎಂ ಪಿ ಪ್ರಕಾಶ್‌ರವರಿಗೆ ಇದರ ಬಗ್ಗೆ ನಾನು ಸಲಹೆಯನ್ನು ಮಾಡುತ್ತೇನೆ ದಯವಿಟ್ಟು ಇದರ ಬಗ್ಗೆ ತಾವೂ ಕೂಡ ಕ್ಯಾಬಿನೆಟ್‌ನಲ್ಲಿ ಮಾತನಾಡಿ, ಸುಮ್ಮನೆ ಎಲ್ಲದ್ದಕ್ಕೂ ಐ ಎ ಎಸ್ ಆಫೀಸರ್‌ನ್ನು ಹಾಕುವುದು, ಎಲ್ಲದ್ದಕ್ಕೂ ಸರ್ಕಾರಿ ನೌಕರರನ್ನು ಹಾಕುವುದು, ಪ್ರತಿಯೊಂದು ಹಂತದಲ್ಲಿ ಅದು ಬೆಳೆದುಬಿಟ್ಟಿದೆ, ಅಲ್ಲಿ ಒಳ್ಳೆಯವರು ಇಲ್ಲವೆಂದು ನಾನು ಹೇಳುವುದಿಲ್ಲ, ಒಳ್ಳೆಯವರು ಇದ್ದಾಗ ಬಹಳ ಚೆನ್ನಾಗಿ ಮಾಡಿದ್ದಾರೆ ಸೋಪ್‌ಫ್ಯಾಕ್ಟರಿ ಬಗ್ಗೆ ನನಗೂ ಮತ್ತು ಮಾನ್ಯ ದೇಶಪಾಂಡೆಯವರಿಗೆ ಕಳೆದ ಸಲ ಜಗಳವಾಯಿತು, ಒಬ್ಬ ಅಧಿಕಾರಿ ಲಾಭವನ್ನು ಮಾಡಿ ಬ್ಯಾಂಕಿನಲ್ಲಿ 6 ಕೋಟಿ ರೂ ಗಳನ್ನು ಇಟ್ಟುಹೋದರೆ, ಮತ್ತೊಬ್ಬರನ್ನು ಹಾಕಿದಾಗ 6 ಕೋಟಿ ರೂಪಾಯಿಗಳನ್ನು ಮುಚ್ಚಿಹಾಕಿದರು ಅದು ಮುಚ್ಚಿಹೊಯಿತು ಇದು ಇವತ್ತು ಆಗುತ್ತಿರುವುದನ್ನು ನಾವು ನೋಡಬೇಕಾಗಿರುತ್ತದೆ ಈ ಕೆಹೆಚ್‌ಡಿಸಿ ಯಾರದೋ ಒಬ್ಬರ ಸ್ವತ್ತಲ್ಲ ಇಡೀ ರಾಜ್ಯದ ನೇಕಾರರ ಒಂದು ಭವಿಷ್ಯವನ್ನು ಬರೆಯುತಕ್ಕಂಥ ಅವನಿಗೆ ಅನ್ನವನ್ನು ಹಾಕತಕ್ಕಂಥ ಒಂದು ಉದ್ದೆಮೆ ಇರುವುದರಿಂದ ಖಂಡಿತವಾಗಿ ಆ ಕೆಹೆಚ್‌ಡಿಸಿಯ ಸಲುವಾಗಿ ನಾನು ಮಾನ್ಯ ಎಂ ಪಿ ಪ್ರಕಾಶ್‌ರವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ಅಲ್ಲಿಗೆ ಎಂತಹ ಒಬ್ಬ ಅಧಿಕಾರಿಯನ್ನು ಹಾಕಬೇಕೆಂದರೆ, ಆ ಅಧಿಕಾರಿ ಅದರಲ್ಲಿಯೇ ಲಾಭ ಮಾಡಿಕೊಂಡು ಅದರ ಮೇಲೆಯೇ ಅವರ ಪಗಾರ ಬರುತ್ತಿರಬೇಕು ಅಲ್ಲಿಗೆ ಬರುವ ನೌಕರರು ಸರ್ಕಾರದಿಂದ 3–4 ತಿಂಗಳಿಗೆ ವರ್ಗಾವಣೆ ಮಾಡಿಸಿಕೊಂಡು ಹೋಗುವವರಿದ್ದರೆ ಖಂಡಿತವಾಗಿ ಅದು ಉದ್ಧಾರವಾಗುವುದಿಲ್ಲ ಅಲ್ಲಿ ಬಹುತೇಕ ಬಹಳಷ್ಟು ಜನ ಸರ್ಕಾರಿ ನೌಕರರಿದ್ದಾರೆ, ಇವತ್ತು ಇದೂ ಕೂಡ ಹೋಗಬೇಕು ಈ ಕಾರಣದಿಂದ ನಾನು ಇಷ್ಟ ಹೊತ್ತಿನವರೆಗೆ ಬಹಳ ಜನ ಮಾತ ನಾಡಿರುವುದರಿಂದ ನಾನು ಹೆಚ್ಚು ಸಮಯ ಮಾತನಾಡುವುದಕ್ಕೆ ಹೋಗುವುದಿಲ್ಲ ಇವತ್ತು ಏನಾಗಿದೆ ಎಂದರೆ, ಅದನ್ನು ನಾವು ನೋಡುತ್ತಿದ್ದೇವೆ,

ಈ ದೇಶದಲ್ಲಿ, ಇಲ್ಲ ಎಲ್ಲಾ ನಾವು ಮಾತನಾಡುತ್ತೇವೆ ನಿಜ, ಅದನ್ನು ಮಾಡುವುದಕ್ಕಾಗಿರುವುದಿಲ್ಲ ಅವರೆ ಬಹಳ ನೊಂದ ಮನಸ್ಸಿನಿಂದ ಹೇಳಿದರು ನಾವು 15 ಜನ ಎಂಎಲ್‌ಎ ಗಳು ಹೋಗಿ ಕ್ಯಾಬಿನೆಟ್ ಡಿಸಿಷನ್ ಮಾಡಿ ಆ ಮೇಲೆ ಅದು ಹೋಯಿತೆಂದರೆ, ಇದು ಯಾರದ್ದು, ನಾವು ಇವತ್ತು, ಆಡಳಿತ ಪಕ್ಷದಲ್ಲಿ ನಿಂತುಕೊಂಡು ಮಾತನಾಡುವುದಕ್ಕೆ ಬಹಳ ಮುಜುಗರವಾಗುತ್ತದೆ ನಾವು ಅಂದು ವಿರೋಧ ಪಕ್ಷದಲ್ಲಿದ್ದೆವು ಈ ಪರಿಸ್ಥಿತಿ ನಿರ್ಮಾಣವಾದರೆ, ಮುಂದೆ ಇದನ್ನು ನಡೆಸುವುದು ಹೇಗೆ, ಕೆಲವೊಂದು ಬದಲಾವಣೆಯಾಗಬೇಕು, ನಾನು ಬಜೆಟ್ ಮೇಲೆ ಮಾತನಾಡುವಾಗ ಕೆಲವೊಂದು ಸಲಹೆ ಮಾಡುತ್ತೇನೆ ಪ್ರತಿಯೊಂದು ಹಿಂದೆ ಬೇರೆಬೇರೆಯಾಗಿತ್ತು, ಇಲಾಖೆ ಕೊಟ್ಟಾಗ ಅವರೆ ಹಣವನ್ನು ಬಿಡುಗಡೆ ಮಾಡುತ್ತಿದ್ದರು ಇವತ್ತು ಆ ರೀತಿ ಇಲ್ಲ, 50 ರಿಂದ 100 ರೂ ಗಳನ್ನು ಬಿಡುಗಡೆ ಮಾಡಬೇಕಾದರು ಇವತ್ತು ಅದು ಫೈನಾನ್ಸಿಗೆ ಹೋಗಬೇಕು ಪ್ರತಿಯೊಂದನ್ನು ಈ ರೀತಿಯಾಗಿ ಏಕೆ ಮಾಡಿ ತಂದರೊ ಗೊತ್ತಿಲ್ಲ ಮಾನ್ಯ ಮಹದೇವ ಪ್ರಸಾದ್‌ರವರೆ, ತಮಗೆ ಹೇಳುತ್ತೇನೆ ಮಾನ್ಯ ಎಂ ಪಿ ಪ್ರಕಾಶ್ ಒಬ್ಬರಾದರೂ ಸಚಿವರು ಇರುವುದರಿಂದ ಅವರಿಗೆ ಅದಕ್ಕಾಗಿಯೇ ನಾನು ಅವರಿಗೆ ಸರ್ವಜ್ಞರು ಎಂದು ಹೇಳಿದೆ ಅದು ಖರೆ ಇರುವುದರಿಂದ ಹೇಳಿದೆ, ಅದನ್ನು ಏನೋ ಒಂದು ದೊಡ್ಡ ವರ್ಣನೆ ಮಾಡುವುದಕ್ಕೆ ಹೇಲಿರುವುದಿಲ್ಲ ಇದು ಬಹಳ ಮಹತ್ವದ್ದು, ಏಕೆಂದರೆ ನಮ್ಮ ಊರ ಕಡೆ ನೇಕಾರರ ಪರಿಸ್ಥಿತಿಯನ್ನು ನೋಡಿದರೆ, ಅವರ ಮುಖ ನೋಡಿ, ಬೆಳಿಗ್ಗೆ ಅವರು ಉತ್ತರವನ್ನು ಕೊಡುವಾಗ ಎಲ್ಲರೂ ನಗುತ್ತಿದ್ದೆವು, ಯಾವುದನ್ನು ಕೇಳಿದರೂ ಹೇಳುತ್ತಾರೆ ಅದಕ್ಕಾಗಿ ಅವರಿಗೆ ನಾನು ಸರ್ವಜ್ಞ ಎಂದು ಹೇಳಿದ್ದೆ ಅದು ತಪ್ಪು ಏನಿಲ್ಲ, ಅವರ ಜಾಣ್ಮೆ ಅವರ ಅನುಭವ ಅವರ ಅನುಭವ ಮೇಲೆ ಅದನ್ನು ನಾವು ಒಪ್ಪಿಕೊಳ್ಳೋಣ ಅವರು ಹಿರಿಯರಿದ್ದಾರೆ, ಹಿಂದೆ ಇದ್ದಾಗ ನಾವೆಲ್ಲಾ ಬಡಿದಾಡಿ ಕೆಹೆಚ್‌ಡಿಸಿ ಯನ್ನು ಉಳಿಸಿದ್ದೇವೆ ಅವರ ರಾಜ್ಯದ ತುಂಬಾ ನೇಕಾರರ ಸೊಸೈಟಿಗಳು ಇವೆ, ಆ ಸೊಸೈಟಿಗಳನ್ನು ನಾನು ಮಂತ್ರಿಯಾಗಿದ್ದಾಗ ಹೊಗಿ ನೋಡಿದ್ದೇನೆ, ಎಷ್ಟು ಉತ್ತಮವಾದ ಬಟ್ಟೆಗಳನ್ನು ತಯಾರು ಮಾಡುತ್ತಾರೆ, ನಮ್ಮ ಸರ್ಕಾರದಿಂದ ಒಂದು ರೂ ಗಳಷ್ಟು ಅಲ್ಲಿ ಖರೀದಿಯನ್ನು ಮಾಡುವುದಿಲ್ಲ ಜಮಾಖಾನ್ ಅಥವಾ ಬಟ್ಟೆಯನ್ನು ತೆಗೆದುಕೊಳ್ಳಿ, ಹಾಸ್ಟೆಲ್‌ದ್ದನ್ನು ತೆಗೆದುಕೊಳ್ಳಿ, ನಾನು ಹೇಳುವುದು ಸರ್ಕಾರಕ್ಕೆ ತೆಗೆದುಕೊಳ್ಳುವುದರ ಬಗ್ಗೆ, ಈಗ ಒಂದು ಆರ್ಡರ್‌ನ್ನು ಮಾಡಿದ್ದಾರೆ, ಕೆಲವೊಂದು ಅಲ್ಲಿಯೇ ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ ಆದರೂ ಕೂಡ ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಮನಸ್ಸಿಲ್ಲ ಅವರು ಆ ರೀತಿ ಕೊಡುತ್ತಾರೆ ಹೀಗೆ ಕೊಡುತ್ತಾರೆಂದು ಏನೇನೋ ಹಚ್ಚುತ್ತಾರೆ, ಆ ಆದೇಶದಲ್ಲಿ ಅವರು ಹೇಳಿದ್ದಾರೆ, ಆ ಆದೇಶವನ್ನು ನಾನು ನೋಡಿದ್ದೇನೆ, ಒಂದು ತಿಂಗಳಲ್ಲಿ ಅವರು ಕೊಡಬೇಕೆಂದು ಹೇಳಿದ್ದಾರೆ, ಕೆಹೆಚ್‌ಡಿಸಿ ಯವರು ಒಂದು ತಿಂಗಳಲ್ಲಿ ಕೊಡಲಿಲ್ಲ ಅದನ್ನು ಬಂದು ಮಾಡಿಬಿಡುತ್ತಾರೆ 6 ತಿಂಗಳಿನಿಂದ ಏನು ಮಾಡುತ್ತಿದ್ದರು, ಚುನಾವಣೆ ಬಂದಿರಬಹುದು, ಅಧಿಕಾರಿಗಳು ನೀವು ಏನು ಮಾಡುತ್ತಿದ್ದರು, ಹುಡುಗರಿಗೆ ಇವತ್ತಿನವರೆಗೆ ನೀವು ಏನು ಮಾಡಿದಿರಿ, ಅದಕ್ಕೆ ಏನು ಸರ್ಕಾರ ಬೇಕೇ ಅಥವಾ ಮಂತ್ರಿಗಳೇ ಬೇಕು ಎಂದು ಇದೆಯಾ? ಸರ್ಕಾರದ ಕಾರ್ಯದರ್ಶಿಗಳು, ಇವತ್ತು ನಮ್ಮ ನಡೆಯುತ್ತಿರುವ ಆಡಳಿತದ ಪದ್ಧತಿಯಾಗಿದೆ 6 ತಿಂಗಳಿಂದ ಇವರು ಇದನ್ನೆಲ್ಲಾ ಮಾಡದೆ ಈಗ ಕೆಹೆಚ್‌ಡಿಸಿಯವರು ಒಂದು ತಿಂಗಳಲ್ಲಿ ಹೇಗೆ ಕೊಡಬೇಕು ಅದು ಮೊದಲೇ ದುಸ್ಥಿತಿಯಲ್ಲಿದೆ ಅದರ ಪರಿಸ್ಥಿತಿ ಕೆಟ್ಟದಾಗಿದೆ ಎಲ್ಲಿಂದ ಹಣ ತರುವುದು ಅವರು ಎಲ್ಲಿಂದಾರೊ ಕೊಂಡುಕೊಂಡು ಬಂದು ಇವರಿಗೆ ಕೊಡಬೇಕು, ಅದು ಕೂಡ ಈ ರೀತಿಯಾದರೆ ಕೆಟ್ಟು ಹಾಳಾಗಿ ಹೋಗುತ್ತದೆ

ಏನು ಇರುತ್ತವೆ, ಅವರು ಕೊನೆಗೆ ಬೇರೆ ರಾಜ್ಯದಿಂದ ತರಿಸಿಕೊಳ್ಳುತ್ತಾರೆ, ತಿಂಗಳಲ್ಲಿ ಇವ್ವೋ ಕೂಡ ಬರುತ್ತವೆ ಕೆಹೆಚ್‌ಡಿಸಿ ಯನ್ನು ಯಾವುದೇ ಪರಿಸ್ಥಿತಿಯೊಳಗಿದ್ದರೂ ಅದನ್ನು ಮುಂದುವರೆಸಿಕೊಂಡು ಹೋಗಬೇಕು, ಅದು ಇವತ್ತು ಉಳಿಯದಿದ್ದರೆ ಈ ರಾಜ್ಯದಲ್ಲಿ ನೇಕಾರರೂ ಉಳಿಯುವುದಿಲ್ಲ ಈ ಒಮದು ಹಿನ್ನೆಲೆಯಲ್ಲಿ ನಾನು ಹೇಳುವುದು, "ನೇಕಾರನ ಹೆಂಡತಿ ಬೆತ್ತಲೆ' ಎಂದು ಮಾತನಾಡಿದ್ದಾಯಿತು ಅದು ನಿಜವಾಗಿಯೂ ಇದೆ ಈ ಕಡೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ, ನಮ್ಮ ಕಡೆಯ ನೇಕಾರರು ನೇಯ್ದಿರುವ ಸೀರೆಯನ್ನು ಬೇರೊಬ್ಬರು ಉಟ್ಟು ಕೊಂಡು ಅಡ್ಡಾಡುವಾಗ ಅವರ ಜೊತೆಯಲ್ಲಿ ಇವರು ಹಳೆಯ ಹರಿದ ಸೀರೆಯನ್ನು ಉಟ್ಟು ಕೊಂಡು ಅಡಾಜಡುತ್ತಾರೆ ಅದನ್ನು ನೋಡಿದರೆ ನಾಚಿಗೆ ಬರುತ್ತದೆ, ಹಳೆಯ ಸೀರೆಯನ್ನು ಉಟ್ಟುಕೊಳ್ಳಬೇಕು ಏಕೆಂದರೆ ಹೊಸ ಸೀರೆಯನ್ನು ಮಡಿ ಉಪಜೀವನ ಮಾಡಬೇಕು ಒಂದನ್ನು ಇಟ್ಟಿರುತ್ತಾರೆ ಪಾಪ, ತವರು ಮನೆಯವರೋ ಯಾರೊ ಕೊಟ್ಟ ಸೀರೆಯನ್ನು ಇಟ್ಟುಕೊಂಡು ಇರುತ್ತಾರೆ ಅಂತಹ ಕೆಟ್ಟ ಪರಿಸ್ಥಿತಿ ಇವತ್ತು ಇದೆ ಇನ್ನು ಗಂಡುಮಕ್ಕಳು, ಅದು ಎಂತಹ ಉದ್ಯೋಗವೆಂದರೆ, ಬೇಸಾಯಗಾರರು ಇನ್ನುಳಿಗ ಕೂಲಿಗಾರರು ಸದೃಡವಾಗಿಯಾದರೂ ಇರುತ್ತೇವೆ ಆದರೆ ಅವರ ಉದ್ಯೋಗ ಸದೃಢವಾಗಿಲ್ಲ ಅವರ ಉದ್ಯೋಗವೇ ಅಂತಹದ್ದು, ಅವರ ಮಾಡತಕ್ಕಂಧ ವ್ಯವಹಾರ ಅಂತಹದ್ದು, ಅದಕ್ಕಾಗಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಗಮನವನ್ನು ಸೆಳೆಯ ಬೇಕು, ಮಾನ್ಯ ಶ್ರೀರಾಮರೆಡ್ಡಿಯವರೆ, ನೀವು ಕುಡ ಕೇಂದ್ರ ಸರ್ಕಾರಕ್ಕೆ ಸಪೋರ್ಟ್‌ನ್ನು ಕೊಟ್ಟಿದ್ದೀರಿ, ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡಿದಂತೆ ನೀವು ಮಾತನಾಡುವುದಕ್ಕಾಗುವುದಿಲ್ಲ ಬರೀ ರಾಜ್ಯ ಸರ್ಕಾರವೇ ಮಾಡಬೇಕೆಂದರೆ ಆಗುವುದಿಲ್ಲ, ಕೇಂದ್ರ ಸರ್ಕಾರದ ಮೇಲೆ ನಾವೆಲ್ಲರೂ ಇಂದು ಒತ್ತಡವನ್ನು ತಂದು, ರಐತರ ಇನ್‌ಶ್ಯೂರೆನ್ಸ್ ಮೇಲೆ ಅದನ್ನು ಮಾತನಾಡುವಾಗ ನಾನು ಮಾತನಾಡುತ್ತೇನೆ ಅದನ್ನು ತೆಗೆದುಕೊಂಡು ಏನು ಮಾಡುವುದು? ರೈತರಿಗೆ ಅದರಿಂದ ದೊಡ್ಡ ಮೋಸ ಥ್ರೆಷೋಲ್ಡ್ ಅಂತೆ! ಬರಗಾಲ ಬಿದ್ದಿರುವ ಮುಂಡರಗಿ ಮತ್ತು ಹಡಗಲಿ ತಾಲ್ಲೂಕಿಗ ಇನ್‌ಷುರೆನ್ಸ್ ಸಿಗುವುದಿಲ್ಲ ಆ ಪದ್ಧತಿಯೇ ಬದಲಾವಣೆಯಾಗಬೇಕು ಒಂದು ಥ್ರೆಷೋಲ್ಡ್‌ಯೀಲ್ಡ್ ಅಂತೆ ಕಾರ್‌ಎಕ್ಸಿಡೆಂಡ್ ಆದರೆ ತಕ್ಷಣ ರೋಕ್ಕವನ್ನು ಕೊಡುತ್ತಾರೆ, ರೈತರಿಗೆ ಇಲ್ಲ, ಒಂದು ಎಕರೆ 25 ಕೆಜಿ ಜೋಳ ಬಂದರೆ ಆ ಇನ್‌ಶ್ಯೂರೆನ್ಸ್ ನಮ್ಮ ತಾಲ್ಲೂಕಿನಲ್ಲಿ ಸಿಕ್ಕಿರುವುದಿಲ್ಲ ಏಕೆಂದರೆ ಥ್ರೆಷೋಲ್ಡ್ ಯೀಲ್ಡ್ 24 ಕೆ ಜಿ ಇದೆ ಒಂದು ಕೆಜಿ ಖಿಲಾಸ್, ಇದು ಇನ್‌ಷೂರೆನ್ಸ್ ಅಂತೆ, ಮಾನ್ಯ ಉದಾಸಿಯವರೆ, ಇದರ ಬಗ್ಗೆ ಸಮಗ್ರವಾದ ಬದಲಾವಣೆಯಾಗಬೇಕೆಆಗಿದೆ ಇವರೇ ರೊಕ್ಕ ತುಂಬುತ್ತೇವೆಂದು ಹೇಳುತ್ತಾರೆ, ಯಾರದೋ ಮನೆ ಎಂದು ಕೂರುವುದಲ್ಲ, ಇಮ್ಮೀಡಿಯೇಟ್ ಆಗಿ ರೊಕ್ಕವನ್ನು ತುಂಬಬೇಕು ಯಾವ ಸರ್ಕಾರವೇ ಇರಲಿ, ಯಾರೇ ಇರಲಿ, ಮೂಲತಃ ಮಾತನಾಡುವುದಕ್ಕೇ ಮುಂಚೆ ಬದಲಾವಣೆಯಾಗಬೇಕಾಗಿದೆ ಇವತ್ತು ಕೇಂದ್ರ ಸರ್ಕಾರವಿರಬಹುದು, ಅದು ಬದಲಾವಣೆಯಾಗಬೇಕಾಗಿದೆ ನೇಕಾರರ ಸಮಸ್ಯೆಯನ್ನು ರಾಜ್ಯ ಸರ್ಕಾರವೇ ಬಗೆಹರಿಸುತ್ತದೆಂದರೆ ನಾನಂತೂ ನಂಬುವುದಿಲ್ಲ ಆ ಕಾರಣದಿಂದಾಗಿ ಕೇಂದ್ರ ಸರ್ಕಾರವೂ ಕೂಡ ಬಗೆಹರಿಸಬೇಕಾಗುತ್ತದೆ ರಾಜ್ಯದಲ್ಲಿ ಹಲವಾರು ನೇಕಾರರ ಸೊಸೈಟಿಗಳು ಇವೆ, ಅದರ ಬಗ್ಗೆ ಏನಾದರೊಂದು ಸ್ಪೆಷಲ್ ಕಾಂಪೊನೆಂಟನ್ನು ತಂದು ಅದಕ್ಕೊಂದು ಪ್ಯಾಕೇಜ್ ಮಾಡಿ ಅವರೂ ಕೂಡ ಅಭಿವೃದ್ಧಿಯಾಗತಕ್ಕಂತಹ ಕೆಲಸ ಮಾಡಬೇಕಾಗಿದೆ ಅವುಗಳ ಪರಿಸ್ಥಿತಿಯೂ ಕೆಟ್ಟುಹೋಗಿ ಅವುಗಳ ಮಾರಾಟವಾಗುವ ಹಾದಿಗೆ ಬಂದಿದೆ ಹೀಗಾಗಿ ಆ ಎಲ್ಲಾ ಸೊಸೈಟಿಗಳೆಲ್ಲವೂ ಮುಚ್ಚಿ ಹೋಗುವಂತಹ ಬಂದಿರುವುದರಿಂದಾಗಿ ಆ ಕಾರನದಿಂದಾಗಿ ನಾನು ಹೇಳುತ್ತಿದ್ದೇನೆ, ಕೆಹೆಚ್‌ಡಿಸಿ

ಯವರೂ ಕೂಡ ಅವರು ಎಲ್ಲವನ್ನೂ ನೇಕಾರರ ಸೊಸೈಟಿಯಿಂದಲೇ ಖರೀದಿಯನ್ನು ಮಾಡಬೇಕು ಅದರ ಬಗ್ಗೆಯೂ ಕೂಡ ಕಂಡೀಷನ್‌ನ್ನು ಡಾಕ್ಯುಮೆಂಟು, ಇವೆಲ್ಲವನ್ನೂ ನೋಡಿರುವುದರಿಂದ, ಮೊದಲು ಏನಾಯಿತೆಂದರೆ, ಅದು ಬಂದದ್ದು ಕ್ಯಾಬಿನೇಟ್‌ನಿಂದಲೇ ಇವರು ಕೂಡ ತಕ್ಕಂತಹ ಲುಪೆ ಒಹಳ ಕಳಪೆ ಇರುತ್ತದೆ, ಎಲ್ಲಿಂದಲೋ ತಂದು ಕೊಡುತ್ತಾರೆ, ಇವರೆಲ್ಲರ ಬಗ್ಗೆ ಹೇಳಿದರು, ನೇಕಾರರು ಉತ್ತಮವಾದಂತಹ ಬಟ್ಟೆಗಳನ್ನು ನೇಯುತ್ತಾರೆ, ನೀವು ಬೇರೆ ಕಡೆ ಬಟ್ಟೆಗಳನ್ನು ತೆಗೆದುಕೊಳ್ಳುವುದಕ್ಕಿಂತ ಕಡಿಮೆಗೆ ಕೊಡುತ್ತಾರೆ ಆದರೆ ಅವರು ಸರಿಯಾಗಿ ರೊಕ್ಕವನ್ನು ವೇಳೆಗೆ ಸರಿಯಾಗಿ ಕೊಡುವುದಿಲ್ಲ ಖರೀದಿ ಮಾಡಿದ ನಂತರ ಆ ಸೊಸೈಟಿಗೆ ರೊಕ್ಕವನ್ನು ಸರಿಯಾಗಿ ತುಂಬುವುದಿಲ್ಲ ಇದು ಇವತ್ತಿನದಿವಸ ಅಗತಕ್ಕಂತಹ ಪರಿಸ್ಥಿತಿಗೆ ಯಾಗಿದೆ ಕೇಂದ್ರ ಮತ್ತು ರಾಜ್ಯಸರ್ಕಾರಗಳಿಂದಲೂ ಸೇರಿ ಪುನಃ ಗಾಂಧೀಜಿಯವರು ಕಂಡಂತಹ ಕನಸು, ಏನೂ ಗ್ರಾಮಸ್ವರಾಜ್ಯದಲ್ಲಿ ಕನಸು ಇತ್ತು, ಅದನ್ನು ನನಸು ಮಾಡಿದರೆ ಮಾತ್ರ ಇವರೆ ಎಲ್ಲರೂ ಉದ್ಧಾರವಾಗುತ್ತಾರೆ, ನಾವು ಇದೇ ರೀತಿಯಾಗಿ ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗಿ, ನಾವು ಇದೇ ರೀತಿಯಾಗಿ ಮುಂದುವರಿದರೆ ಖಂಡಿತವಾಗಿ ಈ ದೇಶದ ನಮಗೆ ಅನ್ನಹಾಕತಕ್ಕಂತಹ ರೈತರು ಇರಬಹುದು ಅವನ ಮೇಲೆ ಅವಲಂಬಿತವಾದ ನೇಕಾರರು ಇರಬಹುದು ಕಮ್ಮಾರರು ಚಮ್ಮಾರರು ಮತ್ತು ಗಾಣಿಗರು ಇರಬಹುದು ಇವರು ಯಾರೂ ಕೂಡ ಉಳಿದಿಲ್ಲ ಯಾವ ಹಳ್ಳಿಯಲ್ಲೂ ಇವರಿಗೆ ತಿನ್ನುವುದಕ್ಕೆ ಕೂಳಿಲ್ಲ ಆ ಕಾರಣದಿಂದಾಗಿ ಗಾಂಧೀಜಿಯವರು ಕಂಡಂತಹ ಏನೂ ಒಂದು ಗ್ರಾಮಸ್ವರಾಜ್ಯದ ಕನಸು ಇತ್ತು, ಆ ವಿಷಯದ ಬಗ್ಗೆ ಕೇಂದ್ರ ಹಾಗು ರಾಜ್ಯ ಸರ್ಕಾರಗಳಿಗಾದರೂ ಕೂಡ ಇವತ್ತಿನದಿವಸ ಪ್ರಯತ್ನ ಮಾಡಬೇಕಾಗಿತ್ತದೆ ಅದರಲ್ಲಿ ನಮ್ಮ ರಾಜ್ಯ ಸರ್ಕಾರದವರಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ ಇವತ್ತಿನ ದಿವಸ ಆ ನೇಕಾರರ ಬಗ್ಗೆ ನಾವೆಲ್ಲರೂ ಕೂಲಂಕುಷವಾಗಿ ಚರ್ಚೆ ಮಾಡಿ ಇವತ್ತು ಬಳಿಗ್ಗೆ ನಮ್ಮ ಹೈಯರ್ ಎಜ್ಯುಕೇಷನ್ ಮಿನಿಸ್ಟರ್‌ರವರು ಹೇಳಿದರಲ್ಲಾ ಎಲ್ಲರನ್ನೂ ಕೂರಿಸಿ ಸರ ಮಾಡುತ್ತೇನೆ, ಎಲ್ಲರೂ ಕುಳಿತುಕೊಂಡು ಒಂದು ಕಾರ್ಯಗಾರವನ್ನು ಮಾಡೋಣ ಹಾಗೆಯೇ ಈ ನೇಕಾರರ ಬಗ್ಗೆಯೂ ಕೂಡ ಒಂದು ಅನುಭವಿಕರ ಒಂದು ಕಾರ್ಯಗಾರವನ್ನು ಮಾಡಿ ಸುಮ್ಮನೆ ಹಾಗೆಯೇ ಎಲ್ಲೋ ಕುಳಿತುಕೊಂಡು ಮಾತನಾಡಿದರೆ ಆಗುವುದಿಲ್ಲ ಅದರಲ್ಲಿರತಕ್ಕಂಥ ಎಲ್ಲಾ ಅನುಭವಿಕರನ್ನು ಮತ್ತು ಇತರರನ್ನು ಕರೆಸಿ ನಮ್ಮ ಬನಹಟ್ಟಿ ಟೆಕ್ಸ್‌ಟೈಲ್ ಏನಿದೆ ಅದು ಈಗ ಲಾಭದಲ್ಲಿದೆ ಕಾರಣವೇನೆಂದರೆ ಅಲ್ಲಿ ಅಲ್ಲಿ ದುಡಿಯತಕ್ಕಂತಹ ನೇಕಾರರೆಲ್ಲರೂ ಸೇರಿ ಕಟ್ಟಿಕೊಂಡಿದ್ದಾರೆ ಹಾಗಾಗಿ ಆ ಟೆಕ್ಸ್‌ಟೈಲ್ ಲಾಭದಲ್ಲಿದೆ, ಈ ಹನ್ನೆಲೆಯಲ್ಲಿ ಅಂತಹ ಒಂದು ಅನುಭವಿಕರನ್ನು ಕರೆಸಿಕೊಂಡು, ಒಂದು ಕಾರ್ಯಗಾರ ಮಾಡಿದರೆ ನೇಕಾರರ ಬಗ್ಗೆ ಒಂದು ಶಾಶ್ವತವಾದಂತಹ ಪರಿಹಾರ ಮಾಡತಕ್ಕಂತಹ ಒಂದು ಯೋಜನೆಯನ್ನು ಸರ್ಕಾರ ತಯಾರು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಂತಹ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ

†ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿಯೂ ಕೂಡ ಸುಮಾರು 40 ಸಾವಿರ ಜನ ನೇಕಾರರು ಇದ್ದಾರೆ ಅವರ ಪರಿಸ್ಥಿತಿಯ ಬಗ್ಗೆ ಈಗಾಗಲೇ ಹಿರಿಯ ಸದಸ್ಯರು ವಿವರಣೆಯನ್ನೂ ಕೂಡ ಮಾಡಿದ್ದಾರೆ ಆದರೆ ಈ ಸಂದರ್ಭದಲ್ಲಿ ಪ್ರಾಮುಖ್ಯವಾದಂತಹ ಒಂದು ನಾಲ್ಕು ಅಂಶಗಳನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ ಬೇರೆ ರಾಜ್ಯದಲ್ಲಿ ಕಡಿಮೆದರದಲ್ಲಿ ವಿದ್ಯುತ್‌ನ್ನು ಪೂರೈಕೆ ಮಾಡುತ್ತಾರೆ ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ಪ್ರತಿಯೂನಿಟ್‌ಗೆ 3 50 ಪೈಸೆಯನ್ನು ತೆಗೆದುಕೊಳ್ಳುತ್ತಾರೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ಈ ಸಭೆಯಲ್ಲಿ ಶಕ್ತಿಯೂ ಹೊರಟು ಹೋಗಿದೆ, ಮಾನ್ಯ ಸದಸ್ಯರು ಮಾತನಾಡುವುದಕ್ಕಾದರೂ ಕೂಡ ಒಂದು ಸ್ಫೂರ್ತಿ ಬೇಕಲ್ಲವೇ? ಏನೂ ಈ ಸದನದಲ್ಲಿ ನಿಮ್ಮ ಆಡಳಿತ ಪಕ್ಷ ಮತ್ತು ಸರ್ಕಾರ ಹೇಗೇ ಇದೆ ನೋಡಿ? ಸ್ವಲ್ಪ ಅಲ್ಲಿಬ್ಬರು, ಅಲ್ಲಿಬ್ಬರು ಕುಳಿತಿದ್ದೀರಿ, ಪಾಪ, ಇಂತಹ ಅವ್ಯವಸ್ಥೆಯಲ್ಲಿ ಕುಳಿದ್ದೀರಿ, ನಿಮ್ಮ ಪರಿಸ್ಥಿತಿಗಳು ಏನು? ಅಲ್ಲಾ ಎಷ್ಟು ಅವ್ಯವಸ್ಥೆಯಲ್ಲಿದ್ದೀರಿ ನನಗೆ ಅರ್ಥವಾಗಲಿಲ್ಲ, ಇದರ ಬಗ್ಗೆ ತಾವು ಹೇಳಿ, ಈ ಸದನ ನೋಡಿ ಏನಾಗಿದೆ, ಒಂದು ರೀತಿಯಲ್ಲಿ ಕಣ್ಣೀರಿನ ಕಥೆಯಾಗಿದೆ ನಮಗೆ ನಿಮ್ಮ ಪರಿಸ್ಥಿತಿ ಶೋಚನಿಯವಾಗಿದೆ

ಶ್ರೀ ಕೆ ಆರ್ ರಮೇಶ್ ಕುಮಾರ್ ನೀವು ನಮ್ಮ ಅವಿಭಾಜ್ಯ ಅಂಗವಾಗಿದ್ದೀರಿ?

ಶ್ರೀ ವಾಟಾಳ್ ನಾಗರಾಜ್ ಇರಲಿ, ಇರಲಿ ನಿಮ್ಮ ನಮ್ಮ ಅವಿಭಾಜ್ಯದ ಅಂಗದ ಬಗ್ಗೆ ಆಮೇಲೆ ಮಾತನಾಡೋಣ ಮಾನ್ಯ ಸಚಿವರಾದ ಶ್ರೀ ಪ್ರಕಾಶ್‌ರವರು ತಾವು ಇದರ ಬಗ್ಗೆ ಹೇಳಿ ತಾವು ಸಂಸದೀಯ ಸಚಿವರಾಗಿದ್ದೀರಿ ಏತಕ್ಕಾಗಿ ಹೀಗೆ ಕುಳಿತಿದ್ದೀರಿ? ಏತಕ್ಕೋಸ್ಕರ ಕುಳಿತಿದ್ದೀರಿ, ಏನು ಲಾಭ ಈ ಸದನ ನಡೆಯುತ್ತಿರುವುದು, ಇದರ ಬಗ್ಗೆ ನನಗೆ ಅರ್ಥವಾಗಲಿಲ್ಲ ಒಂದು ಕಡೆ ನೋಡಿದರೆ ಅಧಿಕಾರಿಗಳು ಇಲ್ಲ, ಮತ್ತೊಂದು ಕಡೆ ನೋಡಿದರೆ ಮಂತ್ರಿಗಳು ಇಲ್ಲ, ಈ ಸದನ ನಡೆಯುವುದರಿಂದ ಬೆಲೆಯಿಲ್ಲ ಈ ಸದನದ ಗೌರವ ಹೋಗುತ್ತಿದೆ

ಶ್ರೀ ಎಂ ಪಿ ಪ್ರಾಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ವ್ಯಕ್ತಪಡಿಸಿರುವ ಅಭಿಪ್ರಾಯದ ಬಗ್ಗೆ ನಮ್ಮೆಲ್ಲರಿಗೂ ಸಹಮತವಿದೆ ಇದನ್ನು ಗಂಭೀರವಾಗಿ ಪರಿಗಣಿಸಬೇಕಾದುದರ ಬಗ್ಗೆ ಆಗಲಿಲ್ಲ, ಆದರೆ ಇದಕ್ಕೊಂದು ಬೇರೆ ಕಾರಣವಿದೆ, ನಿಜವಾಗಿಯೂ ಕೂಡ 28ನೇ ತಾರೀಖು ನಮಗೇನೂ ಸಂಸದೀಯ ಕಾರ್ಯಕಲಾಪಗಳು ಇರಲಿಲ್ಲ ಅದ್ದರಿಂದ ಹಿಂದೆ ಈ ತರಹದ ಚುನಾವಣೆಗಳು ಬಂದ ಸಂದರ್ಭದಲ್ಲಿ ಸಮಿತಿಗಳ ಸಭೆಗಳನ್ನು ಕರೆಯುತ್ತಿದ್ದೆವು ಆದ್ದರಿಂದ ಮಾನ್ಯ ಸದಸ್ಯರುಗಳಿಗೆ ಕಡ್ಡಾಯವಾಗಿ ಹಾಜರಾತಿ ಆಗಬೇಕೆಂಬ ಕಾರಣಕ್ಕಾಗಿಯೇ ಎಲ್ಲರ ಸಲಹೆಯ ಆಧಾರದ ಮೇಲೆ ಇವತ್ತು 28ನೇ ತಾರೀಖು ನಡೆಯತಕ್ಕಂತಹ ಈ ಸದನದಲ್ಲಿ ಕೇವಲ ಎರಡು ಮೂರು ವಿಷಯಗಳನ್ನು ಪ್ರಸ್ತಾಪ ಮಾಡುವುದು ಕೆಲವು ದಾಖಲೆಗಳನ್ನು ಸದನದ ಮೂಲಕ ಮಂಡಿಸತಕ್ಕಂತಹದ್ದು, ಆದರೆ ನಿಯಮ 69ರ ಕೆಳಗಡೆ ಎರಡೂ ನೋಟೀಸ್ ಗಳು ಬಂದವು, ಶೂನ್ಯವೇಳೆಯಲ್ಲಿ ಎಲ್ಲರಿಗೂ ಅವಕಾಶ ಸಿಗಲಿ ಎಂದು ಆಯಿತು, ಆ ಕಾರಣಕ್ಕಾಗಿ ಸ್ವಲ್ಪ ಚ್ಯುತಿಯಾಗಿದೆ, ದಯವಿಟ್ಟು, ತಾವು ಮನ್ನಿಸಬೇಕು, ಮುಂದೆ ನಡೆಯತಕ್ಕಂತಹ ಆಯವ್ಯಯದ ಸದನದ ಸಂದರ್ಭದಲ್ಲಿ ಈ ತರಹದ ಚ್ಯುತಿ ಆಗದೆ ಇರುವ ಹಾಗೆ ನೋಡಿಕೊಳ್ಳುತ್ತೇವೆ

ಶ್ರೀ ವಾಟಾಳ್ ನಾಗರಾಜ್ ಆಯವ್ಯಯದ ಬಗ್ಗೆ 19ನೇ ತಾರೀಖಿನ ದಿವಸ ಕರೆದಿದ್ದೀರಿ ಇದರ ಬಗ್ಗೆ ಅಧಿವೇಶನವನ್ನು 19 ರಿಂದ 10 ದಿವಸ ಕರೆಯುತ್ತಿದ್ದೀರಿ ಆಯವ್ಯಯವು ಆ ತಿಂಗಳಲ್ಲಿ ಮುಗಿಯಬೇಕಲ್ಲಾ ಆ ತಿಂಗಳೇ ಕೊನೆಯಾಗುತ್ತದೆ ಆದಾದ ಮೇಲೆ ಇನ್ನೇನು ಚರ್ಚೆ ಮಾಡುತ್ತೀರಿ? ಬೇಡಿಕೆಗಳು, ಇಲಾಖೆಯ ಬೇಡಿಕೆಗಳು ಇದರ ಬಗ್ಗೆ ಅನೇಕ ಚರ್ಚೆಗಳಾಗಬೇಕಾಗಿದೆ ಆದರೆ 19ನೇ ತಾರೀಖು ಅಧಿವೇಶನ ಎಂದು ಹೇಳುತ್ತೀರಿ, ನಿಮ್ಮ ಹೊಸಮಂತ್ರಿಮಂಡಲ 14ನೇ ತಾರೀಖು ರಚನೆಯಾಗುತ್ತದೆಂದು ಪತ್ರಿಕೆಗಳಲ್ಲಿ ಹೇಳಿದ್ದೀರಿ, ಇದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ ಎಲ್ಲೋ ಒಂದು ಕಡೆ ಕಗ್ಗಂಟಾಗಿದೆ, ಕತ್ತಲೆಯಾಗಿ ಕುಳಿತಿದೆ ಈ ರಾಜ್ಯವನ್ನು ಕತ್ತಲೆಯಲ್ಲಿ ನಿಲ್ಲಿಸಿದ್ದೀರಿ ತಾವು ಸಂಸದೀಯ ಸಚಿವರಾಗಿದ್ದೀರಿ ಈ ಬಗ್ಗೆ ಏನಾದರೂ ಹೇಳಿ

ಶ್ರೀ ಎಂ ಪಿ ಪ್ರಕಾಶ್ ಸರ್ಕಾರ ನಿಜವಾಗಿಯೂ ಕೂಡ ಸಂಪೂರ್ಣವಾದಂತಹ ಗಮನವನ್ನು ಕೊಟ್ಟಿದೆ ಕತ್ತಲೆಯಲ್ಲೂ ಕೂಡ ಇಲ್ಲ, ಕಗ್ಗಂಟು ಕೂಡ ಇಲ್ಲ ಅದು ತಮ್ಮ ಅಭಿಪ್ರಾಯವಾಗಿರಬಹುದು, ಆದರೆ ಆ ಅಭಿಪ್ರಾಯಕ್ಕೆ ಯಾವುದೇ ಸಕಾರಣಗಳಿಲ್ಲ 19ನೇ ತಾರೀಖು ಆಯವ್ಯಯ ಮಂಡನೆಯಾದ ಮೇಲೆ ಸುಮಾರು 20–25 ದಿವಸಗಳ ಕಾಲ ಅಧಿವೇಶವನ್ನು ಖಂಡಿತವಾಗಿಯೂ ನಡೆಸುತ್ತೇವೆ ಅಂದರೆ ರಜಾ ದಿನಗಳನ್ನು ಬಿಟ್ಟು ಆದರೆ ತಾವು ಹೇಳಿದಂತೆ 10 ದಿವಸದೊಳಗಾಗಿಯೇ ಅದಕ್ಕೇ ನಾವು ಮನ್ನಣೆಯನ್ನು ಕೊಡಬೇಕಾಗುತ್ತದೆ, ಅದನ್ನು ಪಾಸು ಮಾಡಿಕೊಡಬೇಕಾಗುತ್ತದೆ ಆದರೆ ಇಲಾಖೆಯ ಚರ್ಚೆಗಳು ಏನಿರುತ್ತವೆ, ಆದಾದನಂತರ ಅದನ್ನೂ ಕೂಡ ತೆಗೆದುಕೊಳ್ಳಬೇಕಾಗುತ್ತದೆ ತಾವೆಲ್ಲರೂ ಕೊಡತಕ್ಕಂತಹ ಅಮೂಲ್ಯವಾದಂತಹ ಸಲಹೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಅದನ್ನು ಆಯವ್ಯಯದಲ್ಲಿ ಒಳಪಡಿಸುವಂತಹ ವ್ಯವಸ್ಥೆ ಇಲ್ಲದಿದ್ದರೂ ಕೂಡ ಅಲೋಕೇಷನ್ಸ್‌ನಲ್ಲಿ ಏನೇನು ವ್ಯತ್ಯಾಸಗಳು ಆಗುತ್ತದೆಯೋ ಅದನ್ನು ಮಾತ್ರ ಮಾಡುತ್ತೇವೆ

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಇಲಕಲ್) ಮಾನ್ಯ ಅಧ್ಯಕ್ಷರೆ, ಬೇರೆ ರಾಜ್ಯದಲ್ಲಿ ಕಡಿಮೆ ದರದಲ್ಲಿ ವಿದ್ಯುತ್ ಪೂರೈಕೆಯನ್ನು ಮಾಡುತ್ತಾರೆ ಆದರೆ ನಮ್ಮ ರಾಜ್ಯದಲ್ಲಿ ಮಾತ್ರ ನೇಕಾರರಿಗೆ ಮಾಡುತ್ತಿಲ್ಲ ಆ ಒಂದು ನಿಟ್ಟಿನಲ್ಲಿಯೂ ಕೂಡ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ 60 ವರ್ಷದ ನೇಕಾರರಿಗೆ ಮೈದಾಪ್ಯವೇತನವನ್ನು ಕೊಡಬೇಕೆಂದು ಸರ್ಕಾರವನ್ನು ತಮ್ಮ ಮುಖಾಂತರ ಒತ್ತಾಯವನ್ನು ಮಾಡುತ್ತೇನೆ ಸರ್ಕಾರದ ಸಂಬಂಧಪಟ್ಟಂತಹ ಎಲ್ಲಾ ಇಲಾಖೆಗಳೂ ಕೂಡ ಕನಿಷ್ಟ ಮೂರು ವರ್ಷ ಕೆಹೆಚ್‌ಡಿಸಿಯಿಂದ ಈ ಒಂದು ಬಟ್ಟೆಯನ್ನು ಖರೀರಿ ಮಾಡಲು ಒಪ್ಪಂದವನ್ನು ತಾವು ಮಾಡಿಸಿಕೊಡಬೇಕಾಗಿ ತಮ್ಮ ಮುಖಾಮತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಏಕೆಂದರೆ, ಬಡ ನೇಕಾರರ ಪರಿಸ್ಥಿತಿಯ ಬಗ್ಗೆ ಈಗಾಗಲೇ ಮಾನ್ಯ ಹಿರಿಯ ಸದಸ್ಯರುಗಳು, ಆಡಳಿತ ಪಕ್ಷದ ಸದಸ್ಯರುಗಳು ಕೂಡ ಸವಿವರವಾಗಿ ಪ್ರಸ್ತಾಪ ಮಾಡಿದ್ದಾರೆ ಈ ಮೂರು ಅಂಶಗಳನ್ನು ತಮ್ಮ ಮೂಖಾಂತರ ಸರ್ಕಾರದ ಗಮನಕ್ಕೆ ತಂದು ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಬಹಳ ಗಹನವಾದಂತಹ ಮತ್ತು ಅನೇಕ ಲಕ್ಷಾಂತರ ಕುಟುಂಬಗಳ ಭವಿಷ್ಯದ ಬಗ್ಗೆ ಮಾನ್ಯ ಸದಸ್ಯರುಗಳು ವ್ಯಕ್ತಮಾಡಿರುವಂತಹ ಕಳಕಳಿ ಏನಿದೆ, ಅದು ನಿರಂತರವಾಗಿರತಕ್ಕಂಥ ಕಳಕಳಿಯಾಗಿದೆ ಈಗಾಗಲೇ ಇದರ ಬಗ್ಗೆ ಎಲ್ಲಾ ಶಾಸಕರುಗಳು ಕೂಡ ಪ್ರಸ್ತಾಪ ಮಾಡಿದ್ದಾರೆ, ನಾಣು ಮತ್ತೆ ಆ ಪದವನ್ನು ಬಳಸುವುದಿಲ್ಲ "ನೇಕಾರರ ಹೆಂಡತಿ ಬೆತ್ತಲೆ " ಎನ್ನುವಂತಹದ್ದು ಅವರು ಬಡತನದ ಕಿತ್ತು ತಿನ್ನುವಂತಹ ಬಡತನದ ವಿಚಾರದಲ್ಲಿರುವಂತಹ ಗಾದೆ ಮಾತಾಗಿದೆ "ವೇದ ಸುಳ್ಳಾದರು ಗಾದೆ ಸುಳ್ಳಾಗುವುದಿಲ್ಲ" ಎಂದು ಮಾತಿನಂತೆ ಅವರ ಬಡತನವನ್ನು ತೆಗೆದುಹಾಕುವಂತಹ ಪ್ರಯತ್ನ ಎಷ್ಟೇ ಮಾಡಿದರೂ ಕೂಡ ಅದು ಸಾಧ್ಯವಾಗಲಿಲ್ಲ ಇದು ಒಂದು ನಿಜವಾಗಿಯೂ ಕೂಡ ನಾಗರೀಕ ಸಮಾಜವು ತಲೆ ತಗ್ಗಿಸುವಂತಹ ವಿಚಾರವಾಗಿದೆ ಆದರೆ ಬದಲಾಗುವಂತಹ ಅಭಿಲಾಷೆಗಳು, ಅಭಿರುಚಿಗಳು, ಉತ್ತಮಗುಣಮಟ್ಟದ ಬಟ್ಟೆಯ ಬಗ್ಗೆ ಇರತಕ್ಕಂತಹ ಒಂದು ಅಭಿಲಾಷೆ, ಬಣ್ಣಬಣ್ಣದ ಬಟ್ಟೆಗಳನ್ನು ತೊಡತಕ್ಕಂತಹ ಒಂದು ಪ್ರಯತ್ನ ಇವುಗಳ ಮೂಲಕವಾಗಿಯೂ ಕೂಡ ನೇಕಾರರಿಗೆ ಬಹಳ ಕಷ್ಟದ ದಿನಗಳು ಬಂದಿದೆ ಹಿಂದೆ ಲಿವರ್ ಪೂಲ್ ಮತ್ತು ಮ್ಯಾಂಚೆಸ್ಟರ್‌ನಿಂದ ಆದಂತಹ

ಒಂದು ಸಂದರ್ಭದಲ್ಲಿ ಕೈಗಾರಿಕಾ ಕ್ರಾಂತಿಯಾಗಿದ್ದೇ ಪಶ್ಚಿಮ ಗಿರಣಿಗಳಿಗೆ ಸಂಬಂಧಪಟ್ಟಿರತಕ್ಕಂತಹದ್ದು ಇದು ಅನೇಕ ವರ್ಷಗಳ ಕಾಲದಲ್ಲಿ ಹತ್ತಿ ಗಿರಣಿಗಳನ್ನು ಕೂಡ ಮುಚ್ಚುವಂಥ ಪರಿಸ್ಥಿತಿ ಈ ಕಾಲದಲ್ಲಿ ಬಂದಿದೆ ಸಿಂಥೆಟಿಕ್ ಫ್ಯಾಬ್ರಿಕ್ ಎನ್ನತಕ್ಕಂಥ ಕೃತಕ ನೂಲನ್ನು ತಯಾರು ಮಾಡತಕ್ಕಂಥಾದ್ದು ಏನಿದೆ ಅದರಿಂದ ಕೂಡ ನಮ್ಮ ಹತ್ತಿಯ ಬೆಳೆಗೆ ಅಲ್ಲಿಯ ಕೃಷಿಕನಿಗೆ ಮತ್ತು ಅದರ ಆಧಾರಿತವಾಗಿರತಕ್ಕಂಥ ಹತ್ತಿ ಗಿರಣಿಗಳಿಗೆ ಅದು ಮುಳುವು ಆಗಿರತಕ್ಕಂಥಾದ್ದನ್ನೂ ಕೂಡ ನಾವು ಕಂಡಿದ್ದೇವೆ ಆದರೆ ಈ ಎಲ್ಲಾ ಬೆಳಣಿಗೆಳ ನಡುವೆಯೂ ಕೂಡ ಸುಮಾರು ಎಪ್ಪತ್ತೈದು ಲಕ್ಷ ಕುಟುಂಬಗಳಿಗೆ ಒಂದು ಉದ್ಯೋಗ ಅವಕಾಶವನ್ನು ಕೂಡತಕ್ಕಂಥಾದ್ದು ಈ ಕೈಮಗ್ಗದ ವ್ಯವಸ್ಥೆ. ಅದು ವಿದ್ಯುತ್ ಚಾಲಿತವಾದ ಯಂತ್ರಗಳಿಂದ ನಡೆಯುವ ಮಗ್ಗ ಆಗಿರಬಹುದು, ಅಥವಾ ಕೈಮಗ್ಗವೇ ಆಗಿರಬಹುದು ಆದರೆ ಇಡೀ ಮಾರುಕಟ್ಟೆಯ ಬೇಡಿಕೆಯ ಶೇಕಡಾ ಹತ್ತರಷ್ಟನ್ನು ಪೂರೈಸುವಂಥ ಈ ಕೈಮಗ್ಗದ ವಲಯ ಎಪ್ಪತ್ತೈದು ಲಕ್ಷ ಕುಟುಂಬಗಳಿಗೆ ಅನ್ನವನ್ನು ಕೊಡತ್ತಿದೆ ಆದರೆ ನೂರಕ್ಕೆ ತೊಂಬತ್ತರಷ್ಟು ಇಡೀ ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸುವಂಥ ಗಿರಣಿಗಳು ಕೇವಲ ಹತ್ತು ಪರ್ಸೆಂಟ್‌ನಷ್ಟು ಉದ್ಯೋಗವನ್ನು ಮಾತ್ರ ಕೊಡುತ್ತಿವೆ ಆ ಕಾರಣಕ್ಕೆ ವ್ಯಾಪಕವಾದಂಥ ಉದ್ಯೋಗ ಕೊಡುವಂಥಾದ್ದು ಆಗಬೇಕಾಗಿದೆ ಇದರಲ್ಲ ವಿದ್ಯುತ್ ಚಾಲಿತ ಯಂತ್ರಗಳನ್ನು ಇಟ್ಟುಕೊಂಡಿರತಕ್ಕಂಥ ಮತ್ತು ಕೈಮಗ್ಗಗಳನ್ನು ಇಟ್ಟುಕೊಂಡಿರತಕ್ಕಂಥ ಹೀಚಲುಗಾರಂಜೆಗೆ ನಮ್ಮ ಸೆಚ್ಚಿನ ಬೇಡಿಕೆ ಹೋಗತಕ್ಕದ್ದನ್ನು ನೋಡಿದ್ದೇವೆ ಆದರ ಇದು ಮಹಾರಾಷ್ಟ್ರದಲ್ಲಿ ಇಲ್ಲತಕ್ಕಂಥಾದ್ದು ಅದು ಕೂಡ ಇವತ್ತು ಕೈಗಾರಿಕೆಯ ಒಂದು ಕ್ಷೇತ್ರವಾಗಿ ಉಳಿದಿಲ್ಲ ಇಡೀರೀತಿಯಾಗಿ ಆಂಧ್ರಪ್ರದೇಶದಲ್ಲಿ ಆಫ್ಕೊ ಮತ್ತು ತಮಿಳುನಾಡಿನಲ್ಲಿ ಕೋಪರೇಟಿವ್ ಸೊಸೈಟಿಗಳಲ್ಲಿ ಆದಂಥ ಒಂದು ಶಿಸ್ತು ಮತ್ತು ಸಂಘಟನೆ ಏನಿದೆ ಅದರ ಪರಿಣಾಮವಾಗಿ ಸಹಜವಾಗಿ ಇರತಕ್ಕಂಥ ಬೇಡಿಕೆ ನಮ್ಮಲ್ಲಿ ಬಹಳ ಕಡಿಮೆಯಾಗಿರತಕ್ಕಂಥಾದ್ದು ಏನಿದೆ, ಅದೂ ಕೂಡ ಅವರ ಕಷ್ಟದ ಪರಿಸ್ಥಿತಿ ಕಾರಣೀಭೂತವಾಗಿದೆ. ಆದರೆ ನಾವು ಅಂದರೆ ಸರ್ಕಾರ ಈ ಸಂದರ್ಭದಲ್ಲಿ ಅವರ ನೆರವಿಗೆ ಬರಲೇಬೇಕಾಗಿರತಕ್ಕಂಥಾದ್ದು ನಮ್ಮ ಆದ್ಯ ಕರ್ತವ್ಯ ಈಗಾಗಲೇ ಮಾನ್ಯ ಹಿರಿಯ ಸದಸ್ಯರುಗಳು ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಕಾರಜೋಳರು, ಡಿ ಆರ್ ಪಾಟೀಲ್, ಎಸ್ ಎಸ್ ಪಾಟೀಲ್ ಮತ್ತು ಅನೇಕರು ಈ ವಿಚಾರದಲ್ಲಿ ಹೇಳಿದ್ದು ಅವರೆಲ್ಲರೂ ರಬಕವಿ, ಬನಹಟ್ಟಿ ಮೊದಲಾದ ಈ ಪ್ರದೇಶಗಳ ಭಾಗದಿಂದ ಬರುತ್ತಾರೆ ಅಲ್ಲಿ ಬಹಳ ದೊಡ್ಡ ಕೈಗಾರಿಕೆಗಳು ಎಂದರೆ ಈ ನೇಕಾರಿಕೆ ಒಂದೇ ಆದರೆ ಅಲ್ಲಿಯ ನೇಕಾರಿಕೆಗೆ ಸಂಬಂಧಪಟ್ಟಂತೆ ಮೌಲ್ಯವರ್ಧಿತ ತೆರಿಗೆ ಹಾಕಬೇಡಿ ಎನ್ನುವಂಥ ವಿಚಾರ ಬಂದಾಗ ಅಲ್ಲಿ ಹತ್ತು ಕೈಮಗ್ಗಕ್ಕಿಂತ ಹೆಚ್ಚು ಇರತಕ್ಕಂಥಾದ್ದು ಇದ್ದರ ಆ ಲೆಕ್ಕಪತ್ರಗಳನ್ನು ಇಡಬೇಕು ಆ ಮೌಲ್ಯವರ್ಧಿತ ತೆರಿಗೆಗೆ ಸಂಬಂಧಪಟ್ಟಂತೆ ಆಮೂಲಾಗ್ರ ಬದಲಾವಣೆಗಳು ಆದಂಥ ಸಂದರ್ಭದಲ್ಲಿ ಮಾನ್ಯ ಕಾರಜೋಳರವರೇ, ರಬಕವಿ ಮತ್ತು ಬನಹಟ್ಟಿಗೆ ಸಮ್ಮನ್ನೆಲ್ಲಾ ಕರೆದುಕೊಂಡುಹೋಗಿ ಅಲ್ಲಿ ಒಂದು ದೊಡ್ಡ ಪ್ರತಿಭಟನೆ ಆಯಿತು ಮಾನ್ಯ ಎಸ್ ಎಸ್ ಪಾಟೀಲರು ತಿಳಿಸಿದಂತೆ ಅಲ್ಲಿ ಬನಹಟ್ಟಿಯ ಹತ್ತಿಯ ಗಿರಣಿ ಏನಿದೆ ಅದು ಭಾರತ ದೇಶದಲ್ಲಿಯೇ ಉತ್ತಮ ಗುಣಮಟ್ಟದ ನೂಲನ್ನು ಗಳಿಸಿಕೊಡುತ್ತದೆ ಮತ್ತು ಅದರ ಜತೆಗೆ ಲಾಭಾಂಶವನ್ನೂ ಮಾಡುತ್ತಿದ ಪ್ರತಿಯೊಬ್ಬ ಶೇರುದಾರರಾಗಿರತಕ್ಕಂಥ ನೇಕಾರರಿಗೆ ಐದು ಕೆ ಜಿ ಗಿಂತ ಕಡಿಮೆ ಇಲ್ಲದಂಥ ರೀತಿಯಲ್ಲಿ ನೂಲನ್ನು ರಿಯಾಯ್ತಿ ದರದಲ್ಲಿ ಅದು ಕೊಡುತ್ತಿದೆ ಅಲ್ಲಿ ಭದ್ರಣ್ಣನವರು ಅಂತ ಹೇಳಿ ಅಲ್ಲಿಗತಕ್ಕಂಥ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಅಧ್ಯಕ್ಷರು ನಮ್ಮಿಬ್ಬರಿಗೂ ಸೊತ್ತಿರತಕ್ಕಂಥವರು ಆದ್ದರಿಂದ ಅವರು ಮಾಡಿದಂಥ ಶ್ರಮದ ಪ್ರತಿಫಲ ಮತ್ತು ಅದರ ಜತೆಗೆ

ದಿವಂಗತ ಜಮಖಂಡಿಯವರು ಬಾಗಲಕೋಟೆಯವರು ನಮ್ಮಲ್ಲಿ ಶಾಸಕರಾಗಿದ್ದರು ಮತ್ತು ಮಂತ್ರಿಗಳಾಗಿದ್ದರು ಅವರು ಆ ನೂಲಿನ ಗಿರಣಿಯನ್ನು ಮಾಡುವಾಗ ಬಿ ಡಿ ಜತ್ತಿಯವರ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದರು ಮತ್ತು ಅವರು ರೈಲಿನಲ್ಲಿ ಎರಡನೇ ತರಗತಿಯ ಬೋಗಿನಲ್ಲಿಯೇ ಪ್ರಯಾಣ ಮಾಡುತ್ತಿದ್ದರು ಅವರು ಒಂದು ದಿವಸ ಕೂಡ ಕಾರನ್ನು ಇಟ್ಟುಕೊಂಡು ಬೆಂಗಳೂರಿಗೆ ಬರಲಿಲ್ಲ ಈ ರೀತಿಯಾಗಿ ಬಹಳ ಪ್ರಾಮಾಣಿಕವಾದ ಮತ್ತು ಒಂದು ದಕ್ಷರಾದಂಥ ಗುಂಪನ್ನು ಅವರು ನಿರ್ಮಾಣ ಮಾಡಿದ್ದರಿಂದ ಕರ್ನಾಟಕದಲ್ಲಿರತಕ್ಕಂಥ ಎಲ್ಲಾ ಸಹಕಾರದ ನೂಲಿನ ಗಿರಣಿಗಳು ಮುಳುಗಿ ಹೋಗಿದ್ದರೂ ಕೂಡ ನೇಕಾರರಿಗೆ ಹತ್ತಿರವಾಗುವಂಥ ರೀತಿಯಲ್ಲಿದ್ದು ಇವತ್ತಿಗೂ ಕೂಡ ಅವರ ಪರ್ಯಾಯವಾಗಿರತಕ್ಕಂಥ ಆ ಭದ್ರಣ್ಣನವರು ಬಹಳ ಒಳ್ಳೆಯ ಕೆಲಸ ಮಾಡುತ್ತಾ ಇರುವುದರಿಂದ ಅಲ್ಲಿರುವಂತಹ ಬನಹಟ್ಟಿ, ರಬಕವಿಯ ಆ ಹತ್ತಿಯ ಗಿರಣಿ ನಮಗೆ ಒಳ್ಳೆಯ ಮಾರ್ಗದರ್ಶನ ಮಾಡತಕ್ಕಂಥಾದ್ದು ಆಗಿದೆ ಅದನ್ನು ನಾವು ಉಳಿಸಿಕೊಂಡು ಹೋಗುತ್ತಿದ್ದೇವೆ ಅವರೂ ಕೂಡ ಅಲ್ಲಿರತಕ್ಕಂಥ ನೇಕಾರರಿಗೆ ದೊಡ್ಡ ಮಾರ್ಗದರ್ಶನವನ್ನು ಮಾಡುತ್ತಲೇ ಇದ್ದಾರೆ ಸುಮಾರು ನಲ್ವತ್ತು ಸಾವಿರ ಜನರು ಆ ಕಾಲದಲ್ಲಿ ಕೆಲಸ ಮಾಡುತ್ತಿದ್ದರು ಎಂದು ಮಾನ್ಯ ಡಿ ಆರ್ ಪಾಟೀಲರು ಹೇಳಿದರು ಇವತ್ತು ಹತ್ತು ಸಾವಿರಕ್ಕೆ ಆ ಉದ್ಯೋಗ ಇಳಿದಿರತಕ್ಕಂಥಾದ್ದು ಏನಿದೆ, ಇದಕ್ಕೆ ಅನೇಕ ಕಾರಣಗಳು ಇವೆ ಸನ್ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದ ಅನೇಕ ಶಾಸಕರು ಈ ಬಗ್ಗೆ ಹೋರಾಟವನ್ನು ಮಾಡಿದ್ದರು ಹಿಂದೆ ಜವಳಿ ಮಂತ್ರಿಗಳಾಗಿದ್ದ ಮಾನ್ಯ ಎಂ ಎಸ್ ಪಾಟೀಲ್ ಅವರು ರಾಯಚೂರು ಶಾಸಕರಾಗಿದ್ದರು ಅವರು ಮಂತ್ರಿಗಳಾಗಿದ್ದಾಗ ಹೋರಾಟ ಮಾಡಿದಮೇಲೆ ಇದರ ಕೇಂದ್ರ ಸ್ಥಳವನ್ನು ಬೆಂಗಳೂರನ್ನು ಬಿಟ್ಟು ಹುಬ್ಬಳ್ಳಿಗೆ ವರ್ಗಾವಣೆ ಮಾಡತಕ್ಕಂಥ ಆಜ್ಞೆ ಆಯಿತು ಅಲ್ಲಿ ಒಂದು ಬೋರ್ಡನ್ನು ಹಾಕುವಂತಹ ಕೆಲಸವನ್ನು ಬಿಟ್ಟರೆ ಇನ್ನು ಯಾವ ಕೆಲಸವೂ ಕೂಡ ಅಲ್ಲಿಗೆ ವರ್ಗಾವಣೆಯಾಗಲಿಲ್ಲ, ಇದಕ್ಕೆ ಬೇರೆ ಬೇರೆ ಕಾರಣಗಳು ಇವೆ ಅದನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾದ ಅಗತ್ಯತೆ ಇಲ್ಲ ಆದರೆ ಈ ಸಂದರ್ಭದಲ್ಲಿ ನಾನು ಇಷ್ಟು ಮಾತ್ರ ಹೇಳುತ್ತೇನೆ ಈಗ ಈ ಸರ್ಕಾರ ಬಹಳ ಬದ್ಧವಾಗಿರತಕ್ಕಂಥಾದ್ದು ಆಗಿ ಇದೀಗ 'ವಿದ್ಯಾವಿಕಾಸ ಯೋಜನೆ'ಗೆ ಸಂಬಂಧಪಟ್ಟಂತೆ ಈಗ 71 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಏಳನೇ ತರಗತಿವರೆಗೆ ಇರತಕ್ಕಂಥ ಬಾಲಕ–ಬಾಲಕಿಯರಿಗೆ ಸಮವಸ್ತ್ರವನ್ನು ಉಚಿತವಾಗಿ ಕೊಡತಕ್ಕಂಥದ್ದು, ಹಾಗೆಯೇ ಹತ್ತನೇ ತರಗತಿವರೆಗೆ ಇರತಕ್ಕಂಥ ಬಾಲಕಿಯರಿಗೆ ಸಮವಸ್ತ್ರವನ್ನು ಹಂಚುವ ಏನು ಕಾರ್ಯಕ್ರಮ ಇದೆ, ಇದರಿಂದ 71 ಕೋಟಿ ರೂಪಾಯಿಗಳಷ್ಟು ಹಣ ಖರ್ಚಾಗುತ್ತದೆ ಅದಕ್ಕೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ಮಂಡಲಿ ಅಥವಾ ಈ ಕರ್ನಾಟಕ ಹ್ಯಾಂಡಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಕೆ ಹೆಚ್ ಡಿ ಸಿ) ಇದರ ಮೂಲಕವಾಗಿಯೇ ಮಾಡತಕ್ಕಂಥ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ಮಾನ್ಯ ಡಿ ಆರ್ ಪಾಟೀಲರು ಒಂದು ಮಾತನ್ನು ಹೇಳಿದರು ನೀವು ಸರ್ಕಾದವರು ಖರೀದಿ ಮಾಡತಕ್ಕಂಥಾದ್ದು ಏನಿದೆ, ಆ ಎಲ್ಲಾ ಬಟ್ಟೆಯನ್ನೂ ಕೂಡ ಅದು ನಮ್ಮ ಲೋಕೋಪಯೋಗಿ ಇಲಾಖೆಯಲ್ಲಿ ಇರತಕ್ಕಂಥ ಅತಿಥಿ ಗೃಹಗಳಾಗಿರಬಹುದು, ಪ್ರವಾಸಿ ಮಂದಿರಗಳಾಗಿರಬಹುದು, ನಿರೀಕ್ಷಣಾ ಮಂದಿರಗಳು ಆಗಿರಬಹುದು, ಇಲ್ಲೆಲ್ಲಾ ಉಪಯೋಗಿಸತಕ್ಕಂಥ ಪ್ರತಿಯೊಂದು ಕಿಟಕಿ ಪರದೆಗಳು ಆಗಿರಬಹುದು ಮತ್ತು ಸೋಫಾಗಳಿಗೆ ಉಪಯೋಗಿಸತಕ್ಕಂಥ ಬಟ್ಟೆ ಇರಬಹುದು, ಇವೆಲ್ಲದಕ್ಕೂ ಕೂಡ ಇದನ್ನೇ ಉಪಯೋಗಿಸಬೇಕು ಎನ್ನತಕ್ಕಂಥ ಮಾತಿದೆ ಈಗ ಕೈದಿಗಳಿಗೆ ಸಮವಸ್ತ್ರ ಬಟ್ಟೆಯನ್ನು ಖಾದಿಯಲ್ಲೇ ತೆಗೆದುಕೊಳ್ಳುತ್ತಿದ್ದೇವೆ ಬೇರೆಬೇರೆ ಆಸ್ಪತ್ರೆಗಳಿಗೆ ಬಟ್ಟೆ ಕೊಡತಕ್ಕಂಥಾದ್ದು

ಕೂಡ ಖಾದಿಯಲ್ಲಿ ತೆಗೆದುಕೊಳ್ಳತಕ್ಕಂಥಾದ್ದು ಇದೆ ಅದು ಶೇಕಡಾ 20–30–40 ರಷ್ಟು ಅಕ್ಟೋಬರ್ 2ನೇ ತಾರೀಖಿನಿಂದ ಒಂದು ತಿಂಗಳವರೆಗೆ ರಿಬೇಟ್ ಕೊಡತಕ್ಕಂಥಾದ್ದರಲ್ಲಿ ಈ ಕೆಲಸಕಾರ್ಯಗಳೂ ಕೂಡ ಆಗುತ್ತವೆ ಆದರೆ, ಯಾವುದಾದರೂ ಒಂದು ಬಹುಜನಗಳಿಗೆ ಉಪಯೋಗಿಸತಕ್ಕಂಥ ಯೋಜನೆಯನ್ನು ಮಾಡಿದ ತಕ್ಷಣವೇ ಬಹಳ ಬುದ್ಧಿವಂತರಾಗಿರತಕ್ಕಂಥ ಜನ ಹೇಗೆ ಇದರ ದುರುಪಯೋಗ ಮಾಡಿಕೊಳ್ಳುತ್ತಾರೆ ಎನ್ನುವುದಕ್ಕೆ ಒಂದು ಉದಾಹರಣೆ ಎಂದರೆ, ಮೆಟ್ರೊ ಚಪ್ಪಲಿಗಳಿಗೆ ಸಂಬಂಧಪಟ್ಟಂತೆ ಒಬ್ಬ ಮಾಲೀಕನ ಮೇಲೆ ಭಾರತದೇಶದ ಉದ್ದಗಲದ ಎಲ್ಲಾ ರಾಜ್ಯಗಳಲ್ಲೂ ಕೂಡ ಆಪಾದನೆಗಳು ಇವೆ ಮತ್ತು ಅವರ ಮೇಲೆ ಕೇಸುಗಳನ್ನು ಹಾಕಿದ್ದಾರೆ ಹತ್ತು ಲಕ್ಷ ರೂಪಾಯಿಗಳನ್ನು ಹಾಕಿ ಖಾದಿ ಗ್ರಾಮಾದ್ಯೋಗದಿಂದ ಚರ್ಮ ಪಾದರಕ್ಷೆಗಳನ್ನು ಮಾಡತಕ್ಕಂಥಾದ್ದು ಏನಾದರೂ ಮಾಡಿದರೆ ಅದಕ್ಕೆ ಎರಡೂವರೆ ಲಕ್ಷ ರೂಪಾಯಿ ಸಬ್ಸಿಡಿ ಬರುತ್ತದೆ ಆದರೆ ಯಂತ್ರಚಾಳಿತವಾಗಿರತಕ್ಕಂಥ ಬಾಟಾ ಮತ್ತು ಕೆರೋನಾ ಕಂಪನಿಗಳಿಗೆ ಸಮಾನವಾಗಿರುವಂತಹ ಮೆಟ್ರೊ ಕಂಪನಿಯವರು ಅಥವಾ ಬೇರೆ ಕಂಪನಿಯಲ್ಲಿ ಇರತಕ್ಕಂಥ ಮಾಲೀಕರುಗಳೂ ಕೂಡ ಇದರ ಲಾಭವನ್ನು ಪಡೆದಿರತಕ್ಕಂಥಾದ್ದನ್ನು ನಾವು ಅನೇಕ ಸಂದರ್ಭದಲ್ಲಿ ಕೂಡ ಕಂಡಿದ್ದೇವೆ ಈ ಖಾದಿ ಗ್ರಾಮೋದ್ಯೋಗದಲ್ಲಿ ಏನಾಗಿದೆ ಎಂದರೆ, ಕೈಮಗ್ಗದ ಉತ್ಪಾದನೆ ಮಾಡತಕ್ಕಂಥ ಒಂದು ಘಟಕದ ಪಕ್ಕದಲ್ಲೇ ಅದರ ಮಾರಾಟ ಮಳಿಗೆಯ ಘಟಕವನ್ನು ಕೂಡ ಇಟ್ಟುಕೊಂಡಿರುತ್ತಾರೆ ಅಲ್ಲಿ ಕೈಮಗ್ಗದ ಖಾದಿ ಬಟ್ಟೆ ಉತ್ಪಾದನೆ ಆಯಿತು ಎಂದು ಹೇಳಿ ಸುಳ್ಳು ಲೆಕ್ಕಪತ್ರಗಳನ್ನು ತಯಾರು ಮಾಡುತ್ತಾರೆ ಮಾರಾಟ ಮಳಿಗೆಯಲ್ಲಿ ಎಲ್ಲಾ ಮಾರಾಟ ಆಯಿತು ಎಂದು ರಾಮಪ್ಪ–ಭೀಮಪ್ಪ ಅಂತ ಹೇಳಿ ಸುಳ್ಳು ಲೆಕ್ಕಪತ್ರಗಳನ್ನು ಇಟ್ಟು ಅಲ್ಲಿಂದ 30–40 ಪರ್ಸೆಂಟ್ ರಿಬೇಟ್‌ನ್ನು ಪಡೆಯತಕ್ಕಂಥ ಸಂಸ್ಥೆಗಳು, ಅವುಗಳು ನಮ್ಮಂಥವರಿಂದಲೇ ಪ್ರೋತ್ಸಾಹಿಸಲ್ಪಟ್ಟಿರತಕ್ಕಂಥಾದ್ದನ್ನೂ ಕೂಡ ನಾವು ಕಂಡಿದ್ದೇವೆ ಆ ಕಾರಣಕ್ಕ ನೈಟಿಕ ಅಧಃಪತನ ಹೊಂದಿರುವಂತಹ ಈ ವ್ಯವಸ್ಥೆಯ ಹಿನ್ನಲೆಯಲ್ಲಿ ನೇಕಾರರ ಬವಣೆಯನ್ನು ನಾವು ನೀಗಿಸಲೇಬೇಕಾಗಿರತಕ್ಕಂಥ ಕರ್ತವ್ಯ ಇರುವುದರಿಂದ ಮಾನ್ಯ ಡಿ ಆರ್ ಪಾಟೀಲರು ಕೊಟ್ಟಿರುವಂಥಾದ್ದು ಸಲಹೆ ನಾನು ಇವತ್ತು ನೇರವಾಗಿ ಆ ಮಾತನ್ನು ಒಪ್ಪುತ್ತೇನೆ ಎನ್ನುವಂಥ ಅಭಿಪ್ರಾಯ ನನಗಿದ್ದರೂ ಕೂಡ ನಾನು ಲಾಲೂ ಪ್ರಸಾದ್ ಯಾದವ್ ಅಲ್ಲ ಆತನಿಗಿದ್ದಂಥ ಧೈರ್ಯ ಅಥವಾ ಆತನಿಗಿದ್ದಂಥ ಅಧಿಕಾರದ ರೀತಿಯಲ್ಲಿ ಅವರು ರೈಲ್ವೆಯಲ್ಲಿ ನಾಣು ಮಣ್ಣಿನ ಕುಡಿಕೆಗಳ ಮೂಲಕವಾಗಿ 'ಟೀ' ಕೊಡುತ್ತೇನೆ, ನೀರು ಕೊಡುತ್ತೇನೆ ಅಂತ ಹೇಳಿ ಪ್ಲಾಸ್ಟಿಕ್‌ನ್ನು ನಿರಾಕರಿಸಿದರು ಹಾಗೆಯೇ ರೈಲ್ವೆಯಲ್ಲಿ ಇರತಕ್ಕಂಥ ಎಲ್ಲಾ ಇಲಾಖೆಗಳಲ್ಲಿ ಖಾದಿ ಬಟ್ಟೆಯನ್ನೇ ತೆಗೆದುಕೊಳ್ಳಬೇಕೆಂದು ಹೇಲಿದರು ಅದೇರೀತಿಯಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ನಿಮ್ಮ ಅಭಿಪ್ರಾಯವನ್ನು ತಿಳಿಸುತ್ತೇನೆ ಮತ್ತು ನಾವೆಲ್ಲರೂ ಕೂಡ ಒತ್ತಾಯವನ್ನು ಮಾಡುತ್ತೇವೆ ಈಗಾಗಲೇ ಮಾನ್ಯ ಎಸ್ ಎಸ್ ಪಾಟೀಲರು ಹೇಳಿದಂತೆ ಪಾಟೀಲ್ ಎನ್ನುವ ಒಬ್ಬ ಉತ್ತಮ ಅಧಿಕಾರಿ ಮೈಸೂರು ಸೋಪ್ಸ್ ಅಂಡ್ ಡಿಟರ್‌ಜೆಂಟ್ಸ ಕಾರ್ಖಾನೆಯಲ್ಲಿ ಇದ್ದರು ಅವರು ಇದ್ದಾಗ ಅಲ್ಲಿದ್ದಂತಹ ನಷ್ಟ ಸಂಪೂರ್ಣವಾಗಿ ಪರಿಹಾರವಾಯಿತು ಎಲ್ಲಾ ಕಡೆಗೂ ತಾವು ನೋಡಿರಬಹುದು ಲೋಕೋಪಯೋಗಿ ಇಲಾಖೆಯಿಂದ ಹಿಡಿದು ನಮ್ಮ ಸರ್ಕಾರದ ಸ್ವಾಮ್ಯದಲ್ಲಿರುವಂತಹ ಪ್ರತಿಯೊಂದು ಕಡೆಗೂ ಕೂಡ ಮೈಸೂರು ಸ್ಯಾಂಡಲ್ ಸೋಪನ್ನು ಉಪಯೋಗಿಸಬೇಕೆಂದು ಅವರು ಹೇಳಿದರು ಆ ತರಹದ ಒಬ್ಬ ಅಧಿಕಾರಿ ಸ್ವಲ್ಪಮಟ್ಟಿಗೆ ಅದರ ಬಗ್ಗೆ ಹೆಚ್ಚು ಗಮನ ಕೊಟ್ಟರೆ ಸರ್ಕಾರದಿಂದಲೇ ಇಂತಹ ಉದ್ಯೋಗಗಳು ಉಳಿಯುವುದಕ್ಕೆ ಸಾಧ್ಯವಾಗುತ್ತದೆ

ಶ್ರೀ ಡಿ ಆರ್ ಪಾಟೀಲ್ ಸುದ್ದೆವದಿಂದ ಕೆ ಹೆಚ್ ಡಿ ಸಿ ಯಲ್ಲಿ ಪ್ರಾಮಾಣಿಕೆ ಅಧಿಕಾರಿಗಳು ಬಂದಿದ್ದಾರೆ ಕನಿಷ್ಟಪಕ್ಷ ಮೂರು ವರ್ಷವಾದರೂ ಅವರು ಅಲ್ಲಿರುವಂತೆ ಆಗಬೇಕು ಆದ್ದರಿಂದ ನೀವು ಸರ್ಕಾರದವರು ಅವರ ಮೇಲೆ ಪೂರ್ತಿಯಾಗಿ ಭರವಸೆಯನ್ನು ಇಟ್ಟು ಸರ್ಕಾರದ ಅಧೀನದಲ್ಲಿ ಕೆಲಸ ಮಾಡುವಂತಹ ಎಲ್ಲಾ ಸಂಘಸಂಸ್ಥೆಗಳು ಖರೀದಿ ಮಾಡುವಂತಹ ಬಟ್ಟೆಯನ್ನು ಕೆ ಹೆಚ್ ಡಿ ಸಿ ಮುಖಾಂತರವೇ ಖರೀದಿ ಮಾಡುವಂತಹ ವ್ಯವಸ್ಥೆಯಾಗಬೇಕು ಅದಕ್ಕೆ ಏನು ಆರ್ಡರ್ ಕೊಡುತ್ತಾರೆ ಅದಕ್ಕೆ ಅಷ್ಟು ಅಡ್ವಾನ್ಸ್ ಅಮೌಂಟ್‌ನ್ನು ಕೊಡುವಂತಾದ್ದು ಆಗಬೇಕು ಇಷ್ಟು ಮಾಡಿದರೆ ಸಲಕು ಹೆಚ್ಚಿಗೆ ನಾವು ಎನೂ ಕೇಳುವುದಿಲ್ಲ ಇದರಿಂದ ಅವರಿಗೆ ನಿರಂತರವಾಗಿ ಉದ್ಯೋಗ ಸಿಗುತ್ತದೆ ಇಷ್ಟು ಮಾಡುವುದಕ್ಕೆ ನೀವು ಮತ್ತು ಮಾನ್ಯ ಸಿಂಧ್ಯಾ ಸಹೇಬರು ಕೂತು ಇನ್ನೂ ಯೋಚನೆ ಮಾಡುತ್ತೇವೆ ಎಂದರೆ ಅದು ಸಿಯಲ್ಲ ಮಾನ್ಯ ಸಿಂಧ್ಯಾ ಸಾಹೇಬರ ಕೈಯ್ಯಲ್ಲೇ ಈ ಇಲ್ಲಾಖೆ ಬರುತ್ತದೆ ನಾವು ಮಾಡುತ್ತೇವೆ ಎನ್ನುವಂತಹ ಭರವಸೆಯನ್ನು ಅವರು ಕೊಟ್ಟರೆ ನಾವು ಸಮಾಧಾನದಿಂದ ಊರಿಗೆ ಹೋಗುತ್ತೇವೆ ಇಲ್ಲದಿದ್ದರೆ 'ನೀವು ನಮ್ಮ ರಾಜ್ಯ ಬಿಟ್ಟು ಬೇರೆ ರಾಜ್ಯಕ್ಕೆ ಹೋಗಿಬಿಡ್ರಪ್ಪ, ನಿಮ್ಮ ಹಿತರಕ್ಷಣೆ ಮಾಡುವುದಕ್ಕೆ ನಮಗೆ ಆಗುವುದಿಲ್ಲ' ಅಂತ ಕೈಮ್ಮುಗಿದು ಹೇಳಿಯಾದರೂ ಬರುತ್ತೇವೆ ಸಿಂಧ್ಯಾರವರೇ, ಇದು ನಿಮ್ಮಿಂದ ಆಗದ ಕೆಲಸ ಏನೂ ಅಲ್ಲ 'ಸರ್ಕಾರದ ಅಧೀನದಲ್ಲಿ ಕೆಲಸ ಮಾಡುವಂತಹ ಸಂಘಸಂಸ್ಥೆಗಳು ತಾವು ಖರೀದಿ ಮ್ಮಾಡುವ ಎಲ್ಲಾ ಬಟ್ಟೆಯನ್ನು ಕೆ ಹೆಚ್ ಡಿ ಸಿ ಯಲ್ಲಿಯೇ ಉತ್ಪಾದನೆ ಮಾಡಿಸಿ ಖರೀದಿ ಮಾಡುತ್ತಾರೆ. ಅದಕ್ಕೆ ಅಡ್ವಾನ್ಸ್‌ಗೆ ಬೇಕಾಗುವಂತಹ ಹಣ ಕೊಡುತ್ತೇವೆ' ಎಂದು ಇಷ್ಟು ಹೇಳಿದರೆ ಸಾಕು ಬೇರೆ ಏನೂ ಉಪಕಾರ ನಿಮ್ಮಿಂದ ಬೇಕಾಗಿಲ್ಲ

520 ಪಿಎಂ

†ಶ್ರೀ ಪಿ ಜಿ ಆರ್ ಸಿಂಧ್ಯಾ (ಬೃಹತ್ ಕೈಗಾರಿಕೆ ಸಚಿವರು) ಮಾನ್ಯ ಅಧ್ಯಕ್ಷರೇ, ನಾನು ಈಗಾತಾನೆ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇನೆ ನಾನು ಈಗಾಗಲೇ ರೋಗಗ್ರಸ್ಥ ಕಾರ್ಖಾನೆಗಳನ್ನು, ರೋಗಗ್ರಸ್ಥ ಎಲ್ಲಾ ಸಣ್ಣ ಕೈಗಾರಿಕೆಗಳನ್ನು ಗುರುತಿಸಿ, ಅವುಗಳಿಗೆ ಜೀವ ಕೊಡುವುದಕ್ಕೆ ಒಂದು ಪ್ರಯತ್ನ ಮಾಡುತ್ತಿದ್ದೇನೆ ವಿಶೇಷವಾಗಿ, ಸದನದಲ್ಲಿ ಈ ವಿಚಾರ ಚರ್ಚೆಯಾಗತಕ್ಕ ಸಂದರ್ಭದಲ್ಲಿ ಪೂರ್ಣ ಸಮಯ ಕೊಟ್ಟು ಮಾನ್ಯ ಗೌರವಾನ್ವಿತ ಸದಸ್ಯರು ಅಭಿಪ್ರಾಯಗಳನ್ನು ನನಗೆ ತಿಳಿದುಕೊಳ್ಳುವುದಕ್ಕಾಗಲಿಲ್ಲ ಮಾನ್ಯ ಡಿ ಆರ್ ಪಾಟೀಲರು ಕೆ.ಹೆಚ್ ಡಿ.ಸಿ.ಗೆ ಸಂಬಂಧಪಟ್ಟ ಹಾಗೆ ಏನು ಹೇಳಿದ್ದಾರೆ, ಖಂಡಿತವಾಗಿಯೂ ಸಹಿತ ನಾನು ಬರೀ ಈ ಖಾದಿ ಗ್ರಾಮೋದ್ಯೋಗಕ್ಕೆ ಸಂಬಂಧಪಟ್ಟ ಹಾಗೆ ಅಥವಾ ಕೆ ಹೆಚ್ ಡಿ ಸಿ ಗೆ ಸಂಬಂಧಪಟ್ಟಹಾಗೆ ಮತ್ತು ನೇಕಾರರಿಗೆ ಸಂಬಂಧಪಟ್ಟಹಾಗೆ ಅಷ್ಟೇ ಅಲ್ಲ ನಮ್ಮ ರಾಜ್ಯ ಪ್ರಗತಿಯಾಗಬೇಕಾದರೆ ಈ ಕೈಗಾರಿಕೆಗಳಿಗೆ, ಗುಡಿ ಕೈಗಾರಿಕೆಗಳಿಗೆ, ಗ್ರಾಮೀಣ ಪ್ರದೇಶದಲ್ಲಿರತಕ್ಕ ಕೈಗಾರಿಕೆಗಳಿಗೆ, ಸಣ್ಣ ಕೈಗಾರಿಕೆಗಳಿಗೆ ಆದ್ಯತೆಯನ್ನು ಕೊಟ್ಟು ಏನಾದರೂ ಜೀವತಂದರೆ ಅದು ಬದುಕತಕ್ಕಂಥಾದ್ದು ಮೊನ್ನೆ ಡೆಲ್ಲಿಯಲ್ಲಿ ನಡೆದಂಥ ಸಣ್ಣ ಕೈಗಾರಿಕೆಗಳ ಮತ್ತು ವಿಶೇಷವಾಗಿ ಖಾದಿ ಕಮಿಷನ್‌ಗೆ ಸಂಬಂಧಪಟ್ಟಂಥ ಸಭೆಯಲ್ಲೂ ಸಹಿತ ನಾನು ಭಾಗವಹಿಸಿದ್ದೇನೆ ಈ ಸಭೆಯನ್ನು ಕೇಂದ್ರ ಸರ್ಕಾರದ ಮಂತ್ರಿಗಳು ಕರೆದಿದ್ದರು ಅಲ್ಲಿಯೂ ನಾನು ಇದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ ಖಂಡಿತವಾಗಿಯೂ ಸರ್ಕಾರ, ಆ ಅಧಿಕಾರಿಯನ್ನು ಅಲ್ಲಿರಿಸಿ, ಅವರಿಗೆ ಬೇಕಾಗಿರತಕ್ಕಂಥ ಪ್ರೋತ್ಸಾಹವನ್ನು ಕೊಡುವುದಷ್ಟೇ ಅಲ್ಲ ಇವತ್ತು ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ಎಲ್ಲಾ ಕೈಗಾರಿಕೆಗಳಿಗೂ ಸಹಿತ ಪ್ರೋತ್ಸಾಹ ಕೊಡಬೇಕಾಗಿದೆ ಹಿಂದೆ ಶ್ರೀಮಾನ್

ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ "ಇಶ್ವ" ಎನ್ನತಕ್ಕಂಥ ಒಂದು ಕಾನ್ಸೆಪ್ಟ್ ಕೊಟ್ಟು ಕಾರ್ಯಕ್ರಮ ಶುರು ಮಾಡಿದರು ನನ್ನ ಅಭಿಪ್ರಾಯದಲ್ಲಿ ಅದು ಒಳ್ಳೆಯ ಕಾರ್ಯಕ್ರಮ ಆದ್ದರಿಂದ, ಈ ತರಹದ ಎಲ್ಲಾ ಕೈಗಾರಿಕೆಗಳಿಗೂ ನಾವು ಉತ್ತೇಜನ ಕೊಡುತ್ತೇವೆ ಅವರ ಅಭಿಪ್ರಾಯ ಏನಿದೆ, ಅವರೇ ಈ ಸ್ಥಾನದಲ್ಲಿ ಕುಳಿತಿದ್ದರೆ ಮಾಡಬಹುದೋ ಅದನ್ನು ನಾನೂ ಮಾಡುತ್ತೇನೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಸಿಂಧ್ಯಾರವರ ಉತ್ತರದಿಂದ ಮಾನ್ಯ ಡಿ ಆರ್ ಪಾಟೀಲರಿಗೆ ಸಮಾಧಾನವಾಗಿದೆ ಎಂದು ಭಾವಿಸಿಕೊಂಡಿದ್ದೇನೆ ಖಂಡಿತವಾಗಿಯೂ ನಾವು ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡುತ್ತೇವೆ ಈಗಾಗಲೇ ಕ ಎಸ್ ಆರ್ ಟಿ ಸಿ ಯವರು ಮೂರೂವರೆ ಕೋಟಿ ರೂಪಾಯಿಗಳ ಒಂದು ಬೇಡಿಕೆಗಯನ್ನು ಕೆ ಹೆಚ್ ಡಿ.ಸಿ ಗೆ ಕೊಟ್ಟಿದ್ದಾರೆ ಅವರು ತಮಗೆ ಬೇಕಾಗಿರತಕ್ಕಂಥ ಬಟ್ಟೆ, ಸಮವಸ್ತ್ರಗಳ ಪೂರೈಕೆಗಾಗಿ ಮೂರುವಾರೆ ಕೋಟಿ ರೂಪಾಯಿಗಳಷ್ಟು ಬೇಡಿಕೆಯನ್ನು ಕೊಟ್ಟಿದ್ದಾರೆ ಆಗಲೇ ನೀರೆ ಮತ್ತು ಕುಪ್ಪಸ ಬಟ್ಟೆಯ ಕೈಮಗ್ಗದ ವಿಚಾರದ ಬಗ್ಗೆ ಮಾನ್ಯ ಕಾರಜೋಳರವರು ಪ್ರಸ್ತಾಪ ಮಾಡಿದರು ನಮ್ಮ ಸಮಾನ ಕಾರ್ಯಕ್ರಮಗಳೇನಿವೆ, ಕಾಮನ್ ಮಿನಿಮಮ್ ಪ್ರೋಗ್ರಾಂ ಅನ್ನು ನಾವು ಇಷ್ಟರಲ್ಲೇ ಪ್ರಕಟಗೊಳಿಸುವವರಿದ್ದೇವೆ ಅವರಲ್ಲಿ ಹಸಿರು ಕಾರ್ಡನ್ನು ಪಡೆದಿರತಕ್ಕಂಥವರು ಅಥವಾ ಬಡತನ ಸೀಮಾರೇಖೆಯ ಕೆಳಿಗಡೆ ಇರತಕ್ಕಂಥ ಎಲ್ಲಾ ಜನಗಳಿಗೆ ನಾವು ವರ್ಷವೊಂದಕ್ಕೆ ಒಂದು ಜೊತೆ ಸೀರೆ, ಕುಪ್ಪಸದ ಕಣ, ಒಂದು ಜೊತೆ ಪಂಚೆ ಮತ್ತು ಟವಲ್ ಕೊಡತಕ್ಕ ಕಾರ್ಯಕ್ರಮವನ್ನು ರೂಪಿಸಿದ್ದೇವೆ ಅದು ಒಪ್ಪಿಗೆಯಾದ ತಕ್ಷಣ ಬಿಡುಗಡೆಯಾಗುತ್ತದೆ ಇದೆಲ್ಲದರ ಉದ್ದೇಶವೂ ಕೂಡ ಅವರಿಗೆ ಪ್ರೋತ್ಸಾಹ ಕೊಡುವುದೇ ಆಗಿದೆ ಇವುಗಳನ್ನು ನಾವು ಉಚಿತವಾಗಿ ಕೊಡತಕ್ಕಂಥಾದ್ದು ಇದನ್ನು ಕೈಮಗ್ಗದ ಕೆ ಹೆಚ್ ಡಿ.ಸಿ ಮೂಲಕವೇ ಮಾಡತಕ್ಕಂಥಾದ್ದು ಇದೆ ಈ ಯೋಜನೆಯನ್ನು ಈ ವರ್ಷವೇ ನಾವು ಜಾರಿಗೊಳಿಸುತ್ತೇವೆಂಬ ಮಾತನ್ನೂ ಕೂಡ ಈ ಸಂದರ್ಭದಲ್ಲಿ ಹೇಳುತ್ತೇನೆ ಈಗೇನು ನಾವು ನೂಲನ್ನು ನೇಕಾರರಿಗೆ ಕೊಡಬೇಕಾಗಿದೆ, ಆ ನೂಲನ್ನು ಕೊಡುವುದರಲ್ಲಿ, ಒಂದು ಚೂಟಿ ಎಪ್ಪತ್ತೈದು ಲಕ್ಷ ರೂಪಾಯಿಗಳ ಮೌಲ್ಯದಷ್ಟು ನೂಲನ್ನು ಈಗಾಗಲೇ ಕೈಮಗ್ಗದ ನೇಕಾರರಿಗೆ ಕೊಟ್ಟಿರತಕ್ಕಂಥಾದ್ದು ಇದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಾ, ಅವರು ಹೇಳಿದಂತೆ ಉತ್ತಮವಾದಂಥ ಅಧಿಕಾರಿ ಆ ಕೆ.ಹೆಚ್ ಡಿ ಸಿ ಯಲ್ಲಿ ಪ್ರಾಯಶಃ ಈ ಕೆಲಸವನ್ನು ಮಾಡುತ್ತಿರಬಹುದು ಅವರನ್ನು ಮೂರು ವರ್ಷಗಳ ಕಾಲ ಅಲ್ಲಿಯೇ ಉಳಿಸತಕ್ಕಂಥ ಕೆಲಸವನ್ನು ಮಾಡುತ್ತೇವೆ ಯಾವುದೇ ಐ ಎ ಎಸ್ ಅಧಿಕಾರಿ ಅಲ್ಲಿಗೆ ಬರಲೇಬೇಕೆಂದು ಬಯಸುವುದಿಲ್ಲ ಪ್ರಾಯಶಃ ಅಷ್ಟು ಲಾಭದಾಯಕ ಅಲ್ಲ ಎಂದರೆ, ಅಲ್ಲಿ ಯಾವ ಐ ಎ ಎಸ್ ಅಧಿಕಾರಿ ಬರುತ್ತಾನೆ ಎಂಬ ಅನುಮಾನ ಕೂಡ ನಮಗೆ ಇದೆ ಅಲ್ಲಿ ನಮ್ಮ ರಾಜ್ಯದ ಅಧಿಕಾರಿಗಳೇ ಬೇಕಾಗುತ್ತದೆ ಆದ್ದರಿಂದ, ಅವರು ಉತ್ತಮವಾದಂಥ ಕೆಲಸವನ್ನು ಮಾಡುತ್ತಾರೆ ಅದನ್ನು ನಾವು ಖಂಡಿತ ಮಾಡುತ್ತೇವೆ ಮತ್ತು ನೇಕಾರರ ಬಗ್ಗೆ ಕಾರ್ಯಾಗಾರವನ್ನು ಮಾಡಬೇಕೆಂದು ಮಾನ್ಯ ಹಿರಿಯ ಸದಸ್ಯರಾದ ಎಸ್ ಎಸ್ ಪಾಟೀಲರು ಹೇಳಿದ್ದಾರೆ ಖಂಡಿತವಾಗಿಯೂ ಕಾರ್ಯಾಗಾರವನ್ನು ಮಾಡುವುದರ ಕಡೆಗೆ ನಾವು ಗಮನವನ್ನು ಕೊಟ್ಟು ಕೆಲಸ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಈ ಯೋಜನೆಯನ್ನು ಮುಂದುವರಿಸಬೇಕೆಂದು ಹೇಳಿದ್ದಾರೆ ಇಲ್ಲಿಯವರೆಗೂ ನಮ್ಮ ಕೆ ಹೆಚ್ ಡಿ ಸಿ ನಲ್ಲಿ ಸುಮಾರು 40 ಕೋಟಿ ರೂಪಾಯಿಗಳ ಬಟ್ಟೆಯ ದಾಸ್ತಾನು ಇದೆ ಈ ಜುಲೈ

ತಿಂಗಳ ಅಂತ್ಯದೊಳಗಾಗಿ ಸಮವಸ್ತ್ರವನ್ನು ಎಲ್ಲಾ ಮಕ್ಕಳಿಗೆ ಹಂಚುವುದಕ್ಕಾಗದೇ ಇದ್ದರೂ, ಬಹುತೇಕ ಮಕ್ಕಳಿಗೆ ಹಂಚುವುದಕ್ಕೆ ಸಾಧ್ಯತೆ ಆಗುತ್ತದೆ ಉಳಿದಿರತಕ್ಕಂಥಾದ್ದನ್ನು ಸ್ವಲ್ಪ ಹೆಚ್ಚುಕಡಿಮೆ ಅಕ್ಟೋಬರ್ ತಿಂಗಳೊಳಗಾಗಿ ಅಂದರೆ, ಆಗಸ್ಟ್ ಸೆಪ್ಟಂಬರ್ ತಿಂಗಳಲ್ಲಿ ಸಂಪೂರ್ಣವಾಗಿ ಹಂಚತಕ್ಕ ಕೆಲಸ ಮಾಡುತ್ತೇವೆ ನೇಕಾರರ ಪರವಾಗಿ ಈ ಸರ್ಕಾರ ಬದ್ಧವಾಗಿದೆ, ಅವರಿಗೆ ಪೂರಕವಾಗಿರತಕ್ಕಂಥ ಎಲ್ಲಾ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆಂಬ ಮಾತನ್ನು ಹೇಳಿ, ನಿಯಮ 69ರ ಮೇಲಿನ ಚರ್ಚೆಗೆ ಸರ್ಕಾರದ ನಿಲವು ಇದಾಗಿದೆಯೆಂದು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ ಬಟ್ಟೆಯನ್ನು ನೀವು ಇಲ್ಲಿಂದಲೇ ಹೊಲಿಸಿ ಕಳುಹಿಸುತ್ತೀರಿ ಅವು ಆ ಹುಡುಗರಿಗೆ ಆಗುವುದೇ ಇಲ್ಲ ಅದಕ್ಕಾಗಿ, ಬಟ್ಟೆಯನ್ನೇ ಕೊಡಬೇಕೆಂದು ಮಾಡಿದ್ದೆವು ಇದರಿಂದ, ಹಳ್ಳಿಯಲ್ಲಿ ಬಟ್ಟೆ ಹೊಲಿಯುವರಿಗೂ ಅನುಕೂಲವಾಗುತ್ತದೆ ಮತ್ತು ಅವರಿಗೆ ಬೇಕಾದ ಮತ್ತು ಸರಿಯಾದ ಸೈಜು ಹೊಲಿಸಿಕೊಳ್ಳಲು ಅನುಕೂಲವಾಗುತ್ತದೆ ಎಂದು ಮಾಡಿದ್ದೆವು ಇವತ್ತು, ಇಲ್ಲಿಂದಲೇ ಹೊಲಿಸಿ ಕಳುಹಿಸಿದರೆ, ಒಬ್ಬರಿಗೆ ಸೈಜು ಆಗುತ್ತದೆ, ಒಬ್ಬರಿಗೆ ಆಗುವುದಿಲ್ಲ ಅವು, ಆ ಹುಡುಗರಿಗೆ ಆಗುವುದೇ ಇಲ್ಲ ಅದಕ್ಕಾಗಿ, ತಾನ್ರ ಇದನ್ನೂ ಕೂಡ ಕನ್‌ಸಿಡರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಈಗಾಗಲೇ ಅವರು ಹೇಳಿದಂತೆ, ಇಲ್ಲಿಯೇ ಆಯಾ ಸೈಜಿನ ವ್ಯವಸ್ಥೆ ಮಾಡಿ ಬಟ್ಟೆ ಕೊಡಿಸುವುದಕ್ಕಾಗುವುದಿಲ್ಲ ಈಗ ರೆಡಿಮೇಡ್ ಬಟ್ಟೆಗಳ ಬಗ್ಗೆ ಒಂದು ಗಾದೆ ಮಾತು ಇದೆ It suits all and and its suits none" ಎಂದು ಎಲ್ಲರಿಗೂ ರೆಡಿಮೇಡ್ ಹೊಂದಿಕೆಯಾಗುತ್ತದೆ, ಆದರೆ ಯಾರಿಗೂ ಹೊಂದಿಕೆಯಾಗುವುದಿಲ್ಲ ಆದ್ದರಿಂದ, ನಾವು ಇಲ್ಲಿಯೇ ರೆಡಿ ಕಳುಹಿಸತಕ್ಕಂಥಾದ್ದು ಇಲ್ಲ ಆದರೆ, ಬಟ್ಟೆಗಳನ್ನು ಅವರ ವಯೋಮಾನಕ್ಕೆ ಅನುಗುಣವಾಗಿ ಕತ್ತರಿಸಿ ಕಳುಹಿಸಿ ಕೊಡುತ್ತಾರೆ ಅಲ್ಲಿರತಕ್ಕಂಥ ಸ್ವಸಹಾಯ ಗುಂಪುಗಳು, ಮಹಿಳಾ ಸಂಘಗಳನ್ನು ಗುರುತಿಸಿ ಅವರ ಮೂಲಕ ಹೊಲಿಸಬೇಕೆಂಬುದು ಇದೆ ಇದರ ಮೇಲೆ ಮತ್ತೆ ಏನಾದರು ಸಲಹೆಗಳಿದ್ದರೆ ಅದಕ್ಕೂ ಕೂಡ ಸರ್ಕಾರ ಗಮನ ಕೊಟ್ಟು, ಕೆಲಸ ಮಾಡುತ್ತದೆಂದು ಹೇಳುತ್ತೇನೆ

ಶ್ರೀ ಸಿದ್ದು ಸಾವದಿ (ಜಮಖಂಡಿ) 71 ಕೋಟಿ ರೂಪಾಯಿಗಳ ಅರ್ಡರನ್ನು ಈ ವಿದ್ಯಾವಿಕಾಸ ಯೋಜನೆಯಲ್ಲಿ ಕೊಡಲು ನಿರ್ಧರಿಸಲಾಗಿದೆಯೆಂದು ಹೇಳಿದ್ದೀರಿ ಈ ರೀತಿ ಕೊಟ್ಟಿರುವ ಆರ್ಡರ್ ಕೇವಲ ಮೂರು ಡಿವಿಜನ್‌ಗೆ ಮಾತ್ರ ಕೊಡಲಾಗಿದೆಯೆಂದು ತಿಳಿಸು ಬಂದಿದೆ ಈ ಆರ್ಡರನ್ನು ಐದು ಡಿವಿಜನ್‌ಗಳಿಗೂ, ಕೆ ಹೆಚ್ ಡಿ ಸಿ ಗೆ ಕೊಡಬೇಕೆಂದು ನಾನು ವಿನಂತಿ ಮಾಡಿ ಕೊಳ್ಳುತ್ತೇನೆ ಕಾರ್ಖಾನೆಗಳಿಗೆ ಕೊಡುವುದರಿಂದ, ಲಕ್ಷಾವಧಿ ನೇಕಾರರು ಬೀದಿಪಾಲಾಗುತ್ತಾರೆ ಆ ರೀತಿ ಆಗದಹಾಗೆ, ಎಲ್ಲಾ ಆರ್ಡರನ್ನು ಕೆ ಹೆಚ್ ಡಿ ಸಿ ಗೇ ಕೊಡಬೇಕು ಮೂರು ವರ್ಷಗಳವರೆಗೆ ಒಪ್ಪಂದ ಮಾಡಿಕೊಂಡು, ಪ್ರತಿ ವರ್ಷ ಈ ಸಮಸ್ಯೆ ಉದ್ಭವವಾಗದಹಾಗೆ ಮಾನ್ಯಸಚಿವರು ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ ಎರಡನೆಯದಾಗಿ ಅಗ್ಗದ ದರದ ಸೀರೆ ಮತ್ತು ಪಂಚೆ ಯೋಜನೆಯಲ್ಲಿ ಕೇವಲ ನಮ್ಮ ರಾಜ್ಯದಲ್ಲಿ ಆಯವ್ಯಯದಲ್ಲಿ ಒಂದು ಕೋಟಿ ಹತ್ತು ಲಕ್ಷ ರೂ ಮಾತ್ರ ಬಜೆಟ್‌ನಲ್ಲಿ ಇಟ್ಟಿದ್ದಾರೆ ಅದಕ್ಕೆ ಸಮವಾಗಿ ನೇಕಾರರಿರತಕ್ಕ ನಮ್ಮ ರಾಜ್ಯದಲ್ಲಿ ಬಹಳಷ್ಟು ಕಡಿಮೆ ಹಣವನ್ನು ಇಡಲಾಗಿದೆ ಈ ಹಿಂದೆ 1997ರಲ್ಲಿ ಇಟ್ಟಿದ್ದಂಥ 17 ಕೋಟಿ ರೂಪಾಯಿಗಳನ್ನು ಈ ಅಗ್ಗದ ದರದ ಸೀರೆ ಪಂಚೆ ಯೋಜನೆಗೆ ಇಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ

ಅದಲ್ಲದೆ, ಇನ್ನೊಂದು ವಿಷಯ ಈ ಚರ್ಚೆಯಲ್ಲಿ ಬರಲಿಲ್ಲ ಅದೇನೆಂದರೆ, ಪವರಲೂಮ್ ಮಗ್ಗದ ಸಲುವಾಗಿ ರಿಯಾಯಿತಿ ದರದಲ್ಲಿ ವಿದ್ಯುತ್ ಕೊಡುವ ಬಗ್ಗೆ ತಮ್ಮ ಪ್ರಣಾಳಿಕೆಯಲ್ಲಿ ತೋರಿಸಿದ್ದರಿ ತಮ್ಮ ಪ್ರಣಾಳಿಕೆಯ 45ನೇ ಪುಟ್ಟದಲ್ಲಿ ಹೊರ ರಾಜ್ಯಗಳಲ್ಲಿ ಈಗಾಗಲೇ ಜಾರಿಗೆ ತಂದಿರುವಂತೆ ರಾಜ್ಯದ ವಿದ್ಯುತ್ ಮಗ್ಗಗಳಿಗೂ ಯಾವುದೇ ವಿದ್ಯುತ್ ಮಿತಿ ಹಾಕದೆ ರಿಯಾಯಿತಿ ದರದಲ್ಲಿ ವಿದ್ಯುತ್ ಭರಿಸಲಾಗುವುದು ಎಂದು ಹೇಳಿದ್ದೀರಿ ಈ ರೀತಿಯಾಗಿ ತಾವು ಹೇಳಿದ ಪ್ರಕಾರವೇ ಪವರ್ ಲೂಮ್‌ಗಳಿಗೂ ಸಹಿತ ತಾವು ರಿಯಾಯಿತಿ ದರದಲ್ಲಿ ವಿದ್ಯುತ್ ಕೊಡುವ ಮುಖಾಂತರ ಆ ಉದ್ದಿಮೆಗಳನ್ನು ಉಳಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಇನ್ನೊಂದು ನಮ್ಮ ಹಿರಿಯರಾದಂಥ ಪಾಟೀಲ್‌ರವರು ಹೇಳಿದರು ಕೇಂದ್ರ ಸರ್ಕಾರವೂ ಸಹ ಇದರ ಬಗ್ಗೆ ಗಮನ ಕೊಡಬೇಕೆಂದು ಹೇಳಿದರು ಈಗಾಗಲೇ ಎರಡು ವರ್ಷಗಳ ಹಿಂದೆ ಕೇಂದ್ರಸರ್ಕಾರ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವನ್ನು, ಆರ್ಥಿಕವಾಗಿ ಪುನಶ್ಚೇತನಗೊಳಿಸುವ ಸಲುವಾಗಿ 20 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಈ ಬಗ್ಗೆ 2–3 ಪತ್ರಗಳನ್ನು ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಬರೆಯಲಾಗಿದ ಆದರೆ, ಕೆಲವೊಂದು ಕಂಡೀಷನ್‌ಗಳಿಗೆ ಮಾತ್ರ ಅವರು ಆ ಹಣವನ್ನು ಬಿಡುಗಡೆ ಮಾಡಿದ್ದಾರೆ ಆ ಕಂಡೀಷನ್ ಎಂದರೆ 28 55 ಕೋಟಿ ರೂಾಯಿಗಳನ್ನು ಸಾಲ ಮತ್ತು ಬಡ್ಡಿ, ನೇಕಾರರಿಗೆ ಕೊಟ್ಟಂಥಾದ್ದನ್ನು ಷೇರು ಬಂಡವಾಳವನ್ನಾಗಿ ಮಾರ್ಪಾಡು ಮಾಡುವುದು ಮತ್ತೊಂದು 20 ಕೋಟಿ ರೂಪಾಯಿಗಳನ್ನು ಮಾರ್ಜಿನ್ ಹಣವನ್ನು ಬಿಡುಗಡೆ ಮಾಡುವುದು ಮತ್ತು ಮೂರನೆಯದಾಗಿ ನಿಗಮದಲ್ಲಿರತಕ್ಕ 270 ಹೆಚ್ಚುವರಿ ಸಿಬ್ಬಂದಿಯನ್ನು ಸ್ವಯಂನಿವೃತ್ತಿ ಯೋಜನೆಯಲ್ಲಿ ಅಳವಡಿಸಲು 14 03 ಕೋಟಿ ರೂಾ ಹಣವನ್ನು ಶೀಘ್ರವಾಗಿ ಬಿಡುಗಡೆ ಮಾಡುವುದು ಈ ಮೂರು ಕಂಡಿಷನ್‌ಗಳಿಗೆ ಅವರು ಒಪ್ಪಿಕೊಂಡು, ರಾಜ್ಯಸರ್ಕಾರ ಮಾನ್ಯ ಮಾಡಿದರೆ, ಆ ಕೇಂದ್ರ ಸರ್ಕಾರದ ಹಣವನ್ನು ನಾವು ತೆಗೆದು ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಈ ನಿಟ್ಟಿನೊಳಗೆ ತಮ್ಮ ಮುಖಾಂತರ ಸರ್ಕಾರದರವನ್ನು ಕೇಳಿಕೊಳ್ಳುತ್ತೇನೆ ಈ ಎಲ್ಲಾ ಯೋಜನೆಗಳೂ ಹಿಂಡಿ ಘೋಷಿಸಿದ ಪ್ಯಾಕೇಜ್‌ನಲ್ಲಿವೆ ಇದಕ್ಕೆ ಸರ್ಕಾರದ ಅಪ್ರೂವಲ್ ಸಹಿತ ಆಗಿದೆ ಅದನ್ನು ತಕ್ಷಣ ಜಾರಿಯಲ್ಲಿ ತಂದರೆ ಈ ನೇಕಾರರ ಸಮಗ್ರ ಸುಧಾರಣೆಯನ್ನು ಮತ್ತು ಅವರ ಸ್ಥತಿಯನ್ನು ಉತ್ತಮಪಡಿಸಿದಹಾಗೆ ಆಗುತ್ತದೆಂಬ ಮಾತನ್ನು ಹೇಲುತ್ತೇನೆ ಈ ಎಲ್ಲಾ ಬೇಡಿಕೆಗಳನ್ನು ನೆರವೇರಿಸುವ ನಿಟ್ಟಿನಲ್ಲಿ ಕ್ರಮ ಕೈಗೂಂಡು, ಕಾರ್ಯರೂಪದಲ್ಲಿ ಬರಬೇಕೆಂದು ನಾಣು ಕೇಲಿ ಕೊಳ್ಳುತ್ತೇನೆ ಅಕಸ್ಮಾತ್ ಇದು ಚರ್ಚೆಯಾಗಿ ಉಳಿದರೆ ಯಾವರೀತಿ ಈ ನೂಲಿನಿಂದ ನೇಕಾರ ಬದುಕುತ್ತಾನೋ? ಕೊನೆಗೆ ಅವನು ಈ ನೂಲಿನಿಂದಲೇ, ಆತ್ಮಹತ್ಯೆ ಮಾಡಿ ಕೊಳ್ಳುವಂಥ ದಯನೀಯ ಪ್ರಸಂಗ ಬರುತ್ತದೆ ದಯವಿಟ್ಟು, ಇಲ್ಲಿ ಚರ್ಚೆಯಾಗಿ ಉಳಿಯದೆ ನಾಳೆಯೇ ಇದು ಕಾರ್ಯರೂಪಕ್ಕೆ ಬಂದು, ಅವರಿಗೆ ಉದ್ಯೋಗ ಇರುವಂತೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ ಮಾನ್ಯ ಅಧ್ಯಕ್ಷರೇ, ಮೊದಲಿನಿಂದಲೂ ಕೂಡ ಈ ಮೂರು ಡಿವಿಜನ್‌ಗಳಿಗೆ, ಕೆ ಹೆಚ್ ಡಿ ಸಿ ಗೆ ಕೊಡುತ್ತೇವೆ ಮತ್ತೆ ಬೆಳಗಾಮ್ ಡಿವಿಜನ್‌ಗೆ ಮಾತ್ರ ಕರ್ನಾಟಕ ಹ್ಯಾಂಡ್ ಲೂಮ್ ಪವರ್ ಕಾರ್ಪೊರೇಷನ್‌ಗೆ ಕೊಡತಕ್ಕಂಥ ಪದ್ಧತಿ ಇದೆ ಆ ಕಾರಣಕ್ಕಾಗಿಯೇ ಅಲ್ಲಿ ಕೈಮಗ್ಗದ ನಿಗಮಕ್ಕೆ ಕೊಡುತ್ತೇವೆ ಣಿವು ಹೇಳಿದಂತಹ ಸಲಹೆಗೆ ಅನುಗುಣವಾಗ ರೀತಿಯಲ್ಲಿಯೇ ಕೆಲಸ ಮಾಡುತ್ತೇವೆ ಆಗ್ಗದ ದರದ ಸೀರೆಯ ವಿಚಾರದಲ್ಲಿಯೂ ತಾವೇನು ಹೇಳಿದ್ದೀರಿ, ಈ ಸಲ ಹೆಚ್ಚಿನ ಹಣವನ್ನು ಇಟ್ಟೇ ಇಡುತ್ತೇವೆ ಅದನ್ನು ಪ್ರತಿಯೊಬ್ಬ ಬಡತನರೇಖೆಗಿಂತ ಕೆಳಗಿರತಕ್ಕಂಥವರಿಗೆ

ಉಚಿತವಾಗಿ ಕೊಡಬೇಕಾಗಿರುವ ಕಾರ್ಯಕ್ರಮವಾಗಿರುವುದರಿಂದ ಅದರ ಜವಾಬ್ದಾರಿ ಎಷ್ಟು ಬೀಳುತ್ತದೆ ಎನ್ನತಕ್ಕದನ್ನು ಲೆಕ್ಕ ಹಾಕುತ್ತೇವೆ ಆ ಜವಾಬ್ದಾರಿಗೆ ಅನುಗುಣವಾದಂಥ ರೀತಿಯಲ್ಲಿ ನಮ್ಮ ಆಯವ್ಯಯದಲ್ಲಿ ಕೂಡ ನಾವು ಹಣವನ್ನು ಒದಗಿಸುತ್ತೇವೆ

5 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ ಗೋವಾದ ಕನ್ನಡ ನಿರಾಶ್ರಿತರ ಬಗ್ಗೆ

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮನ್ಯ ಅಧ್ಯಕ್ಷರೆ, ಗೋವಾದ ಕನ್ನಡ ನಿರಾಶ್ರಿತರ ಬಗ್ಗೆ ಈ ಸದನದಲ್ಲಿ ನಾನೊಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ ಅದಾದನಂತರ ಮಾನ್ಯ ಮುಖ್ಯಮಂತ್ರಿಯವರು ಐದು ದಿವಸದ ನಂತರ ಒಂದು ನಿಯೋಗವನ್ನು ಗೋವಾಕ್ಕೆ ಕಳಿಸಿದ್ದರು ಆದರೆ ನಾವೆಲ್ಲಾ ಪತ್ರಿಕೆಗಳ ಮೂಲಕ ನೋಡಿದಾಗ ಫಲಿತಾಂಶವೇನೂ ಕಾಣಲಿಲ್ಲ ಬಹುಶಃ ಅಲ್ಲಿ ಇದುವರೆಗೆ ಪುನರ್ವಸತಿಯನ್ನು ಅವರು ಮಾಡಿಯೇ ಇಲ್ಲ ಇದು ಬಹಳ ಕಣ್ಣೀರಿನ ಕತೆ ಅಲ್ಲಿನ ಮುಖ್ಯಮಂತ್ರಿಯವರು ನಮ್ಮ ನಿಯೋಗಕ್ಕೆ ಅಷ್ಟೊಂದು ಗೌರವವನ್ನು, ನೀಡಿದ್ದಾರೆಂದು ನಾನು ಅಂದುಕೊಂಡಿಲ್ಲ ಈ ಪರಿಸ್ಥಿತಿ ಇರುವಾಗ ನನಗನ್ನಿಸುತ್ತದೆ ಕೇಂದ್ರ ಸರ್ಕಾರದ ಜೊತೆ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಇಲ್ಲವೆ ಮಾನವ ಹಕ್ಕುಗಳ ಅಧ್ಯಕ್ಷರನ್ನು ಭೇಟಿ ಮಾಡಿ ಅಲ್ಲಿರತಕ್ಕ ಗೃಹ ಸಚಿವರನ್ನು ಭೇಟಿ ಮಾಡಿ, ಗೋವಾ ಎನ್ನತಕ್ಕದ್ದು ಬೇರೆ ದೇಶವೇನಲ್ಲ ಈ ದೇಶದಲ್ಲಿರುವ ಒಂದು ಸಣ್ಣ ರಾಜ್ಯ ಅಲ್ಲಿರತಕ್ಕಂಥ ಮುಖ್ಯಮಂತ್ರಿಗಳಾಗಲಿ, ಅಲ್ಲಿರತಕ್ಕ ಆಡಳಿತವನ್ನು ನಡೆಸತಕ್ಕವರು ಅದೇ ಒಂದು ದೇಶವೆಂದು ತಿಳಿದುಕೊಂಡು ಒಂದು ಮಿಲಿಟರಿಯ ಪ್ರಭುತ್ವದ ರೀತಿಯಲ್ಲಿ ಅವರು ನಡೆದುಕೊಳ್ಳುವ ರೀತಿಯೇನಿದೆ ಅದು ಒಳ್ಳೆಯ ನೀತಿಯೇನಲ್ಲ ಅತ್ಯಂತ ನೋವಿನ ಪ್ರಸಂಗ, ಮಳೆ ಸುರಿಯುತ್ತಿದ್ದರೂ ಬುಲ್ಡೋಜರ್‌ಗಳನ್ನು ತಂದು ಮನೆಗಳನ್ನೆಲ್ಲಾ ಉರುಳಿಸಿ, ಅಂಗಡಿಗಳನ್ನು ಉರುಳಿಸಿ, ಜಾಗ ಇಲ್ಲದೆ ಬೀದಿಬೀದಿಯಲ್ಲಿ ಕನ್ನಡಿಗರು ಇರತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ ನಮ್ಮಿಂದ ಅನೇಕ ಪತ್ರಕರ್ತರು, ರಾಜಕಾರಣಿಗಳು, ಸಂಘಸಂಸ್ಥೆಯವರುಗಳು ಹೋಗಿದ್ದಾರ ಎಲ್ಲರು ಹೋಗಿದ್ದರೂ ಅಲ್ಲಿನ ಪರಿಸ್ಥಿತಿ ಮಾತ್ರ ಕಣ್ಣೀರಿನ ಕತೆ ನನಗನ್ನಿಸುತ್ತದೆ ಅವರು ಪರಿಹಾರವನ್ನು ಕೊಡದಿದ್ದರೂ ಕನಿಷ್ಟ ನಾವು ಕೊಟ್ಟರೂ ಚಿಂತೆ ಇಲ್ಲ, ನಮ್ಮ ಜನರಿಗೆ ಅಲ್ಲಿ ಏನು ಅನುಕೂಲ ಮಾಡಬೇಕು ಎನ್ನತಕ್ಕದ್ದನ್ನು ಪರಿಣಾಮಕಾರಿಯಾಗಿ ಮಾಡಬೇಕಗಿದೆ ಅಲ್ಲಿರತಕ್ಕ ಸರ್ಕಾರ ಪ್ರಾಮಾಣಿಕವಾಗಿ ನಡೆದುಕೊಂಡಿಲ್ಲ ಕನ್ನಡಿಗರನ್ನು ಒಕ್ಕಲೆಬ್ಬಿಸುವ ದೊಡ್ಡ ಪಿತೂರಿ ನಡೆದಿದೆ ಇದರ ಬಗ್ಗೆ ಸಮರ್ಗವಾಗಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಧೀಶರಿಂದ ಒಂದು ಸಮಗ್ರವಾದಂಥ ತನಿಖೆ ಆ ಪಿತೂರಿಯ ಬಗ್ಗೆ, ಒಕ್ಕಲೆಬ್ಬಿಸಿರುವ ಬಗ್ಗೆ ಆಗಲೇ ಬೇಕು ಅವರು ವಿನಾಕಾರಣ ಆ ಜನರನ್ನು ಹೊರಕ್ಕೆ ಹಾಕಿದ್ದಾರೆ ಮಾನ್ಯ ಸಿಂಧ್ಯಾರವರ ನೇತ್ರತ್ವದಲ್ಲಿ ಅಲ್ಲಿಗೆ ನಿಯೋಗ ಹೋಗಿತ್ತು ಆ ನಿಯೋಗದ ಬಗ್ಗೆ ಸಹ ನಾನು ನೋಡಿದ್ದೇನೆ, ಆ ನಿಯೋಗ ಹೋಗಿ ಬಂದಮೇಲೂ ಪರಿಣಾಮಕಾರಿಯಾದಂಥ ಕೆಲಸಕಾರ್ಯಗಳು ಅಲ್ಲಿ ಆಗಿಲ್ಲ ಬಹುಶಃ ನಿಯೋಗಕ್ಕೂ ಪ್ರತಿಫಲ ದೊರೆತಿಲ್ಲ ಎನ್ನತಕ್ಕದ್ದು, ನನ್ನ ಪ್ರಾಮಾಣಿಕವಾದ ನಿಸಿಕೆ ಆದ್ದರಿಂದ ಕರ್ನಾಟಕ ಸರ್ಕಾರ ನೀವೇನು ಮಾಡಿದ್ದೀರಿ? ಕೇವಲ ನಿಯೋಗ ಹೋಗಿ ಬಂದಿರಾ? ಪರಿಹಾರ ಎಷ್ಟು ಕೊಟ್ಟಿದ್ದೀರಿ? ಪರಿಹಾರಕ್ಕೆ ಏನು ತೀರ್ಮಾನ ತೆಗೆದುಕೊಂಡಿದ್ದೀರಿ? ಅವರು ಕೊಡಲಿಲ್ಲವಂದು ನಾವೇನು ಮಾಡುತ್ತಿದ್ದೇವೆ? ಇದರ ಜೊತೆಗೆ ಯಾವ ಸ್ಥಳದಲ್ಲಿ ಆ ಜನರು ವಾಸ ಮಾಡುತ್ತಿದ್ದರು ಆ ಸ್ಥಳವನ್ನು ಬಿಡಿಸಿ ಇನ್ನೂ ಅವರುಗಳು ಬೀದಿಯಲ್ಲಿ ಅನಾಥರಾಗಿ ಇವತ್ತು ಕುಳಿತಿದ್ದಾರೆ ಇದರ ಬಗ್ಗೆ ಪರಿಣಾಮಕಾರಿಯಾಗಿ ಇಲ್ಲಿ ಆಗಲಿಲ್ಲ

ಸರ್ವ ನಿಯೋಗವಾದರೂ ಕೇಂದ್ರ ಸರ್ಕಾರಕ್ಕೆ ಹೋಗಬೇಕು ಇದು ಸಾಮಾನ್ಯ ಎನ್ನತಕ್ಕದಲ್ಲ, ಮುನ್ನೂರು ಸಂಸಾರ ಇರಬಹುದು, ಐವತ್ತು ಸಂಸಾರವಿರಬಹುದು, ಒಂದು ರಾಜ್ಯ ಬೇರೆ ಕನ್ನಡಿಗರು ಎನ್ನತಕ್ಕ ಪರಿಸ್ಥಿತಿಯಲ್ಲಿ, ನಲವತ್ತು ವರ್ಷಗಳಿಂದ ಅವರುಗಳು ಅಲ್ಲಿದ್ದಾರೆ ಅಷ್ಟು ವರ್ಷಗಳಿಂದ ಅಲ್ಲಿರುವ ಕನ್ನಡಿಗರನ್ನು ಏಕಾಏಕಿ ಬುಲ್ಡೋಜರ್ ಮೂಲಕ ಹೊರಕ್ಕೆ ಹಾಕಬೇಕಾಗಿದ್ದರೆ ನಲವತ್ತು ವರ್ಷ ಇಲ್ಲದೇ ಇರತಕ್ಕ ಪರಿಸ್ಥಿತಿ ಈಗೇನಿತ್ತು? ಇದನ್ನು ಅಷ್ಟು ಲಘವಾಗಿ ತೆಗೆದುಕೊಳ್ಳತಕ್ಕದಲ್ಲ ಸರ್ವ ಪಕ್ಷಗಳ ನಿಯೋಗ ಕೇಂದ್ರಕ್ಕೆ ಹೋಗೋಣ, ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡೋಣ, ಗೃಹ ಸಚಿವರನ್ನು ಭೇಟಿ ಮಾಡೋಣ, ಅಲ್ಲಿಂದ ಏನಾಗಬೇಕು ಎನ್ನತಕ್ಕದನ್ನು ನಾವು ಪ್ರಯತ್ನ ಪಡೋಣ ಆದ್ದರಿಂದ ನಿಮ್ಮ ನಿಯೋಗ ಹೋಗಿ ಏನು ನಡೆಯಿತು, ಅಲ್ಲಿನ ವಸ್ತು ಸ್ಥಿತಿ ಏನು ಎಂಬ ಪ್ರಾಮಾಣಿಕವಾದ ಚಿತ್ರಣ ತಮಗೆ ಗೊತ್ತಿದೆ, ಅದನ್ನು ಈ ಸದನದ ಮುಂದೆ ತಾವು ಹೇಲಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ

ಶ್ರೀ ಪಿ ಜಿ ಆರ್ ಸಿಂಧ್ಯಾ (ಕೈಗಾರಿಕಾ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾಗಿರತಕ್ಕ ವಾಟಾಳ್ ನಾಗರಾಜ್‌ರವರು ಗೋವಾದಲ್ಲಿ ಮನೆಗಳನ್ನು ಕಳೆದುಕೊಂಡು ಗೋವಾ ಸರ್ಕಾರದ ಗಮನವನ್ನು ಸೆಳೆದಿದ್ದಾರೆ ಈ ಹಿಂದೆ ಸಹ ಅವರು ಈ ಸದನಸ ಒಳಗಡೆ ಮತ್ತು ಹೊರಗಡೆ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರು ಇನ್ನು ಅನೇಕ ಗೌರವಾನ್ವಿತ ಸದಸ್ಯರುಗಳು, ಕನ್ನಡ ಪರವಾಗಿ ಇರತಕ್ಕ ಸಂಘಟನೆಗಳು ಪ್ರತಿಯೊಬ್ಬರೂ ಇದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ ನಾವಾದರೂ ಮಾನ್ಯ ಮುಖ್ಯಮಂತ್ರಿಯವರ ಆದೇಶದ ಮೇರೆಗೆ ನನ್ನ ಅಧ್ಯಕ್ಷತೆಯಲ್ಲಿ ಗೋವಾಕ್ಕೆ ಒಂದು ನಿಯೋಗ ಹೋಗಿದ್ದೆವು ಆ ನಿಯೋಗದಲ್ಲಿ ನಮ್ಮ ರಾಜ್ಯದ ಗೃಹ ಇಲಾಖೆಯ ಕಾರ್ಯದರ್ಶಿಗಳಾಗಿದ್ದಂಥ ಮಾನ್ಯ ಪಾಂಡೆಯವರು, ಮೇಲ್ಮನೆಯ ಸದದಸ್ಯರು ಹಾಗೂ ಹಿರಿಯ ನಾಯಕರಾಗಿರುವ ಹೆಚ್ ಕೆ ಪಾಟೀಲರು, ಏಕೆಂದರೆ, ಆ ಭಾಗದಲ್ಲಿ ಈ ರೀತಿ ಪುನರ್ವಸತಿ ಬೇಕಾಗಿರತಕ್ಕ ಜನ ಬೀದರ್, ಗುಲ್ಬರ್ಗಾದಿಂದ ಹಿಡಿದು ಕೊಪ್ಪಳ, ಬಳ್ಳಾರಿ, ರಾಯಚೂರು, ಗದಗ್, ಧಾರವಾಡ, ಬಿಜಾಪುರ, ಬೆಳಗಾವಿ, ಹವೇರಿ, ಬಾಗಲಕೋಟಿ ಮುಂತಾದ ಸ್ಥಳಗಳಿಂದಲೇ ಹೆಚ್ಚಾಗಿ ಜನರು ಹೋಗಿರತಕ್ಕದ್ದು ನಮ್ಮ ನಿಯೋಗದಲ್ಲಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾಗಿರುವಂಥ ಶ್ರೀಮತಿ ಫಿಲೋಮಿನಾಫೆರೀಸ್ ಸಹ ಇದ್ದರು ನಾವು ನಾಲ್ಕೂ ಜನ ಹೋಗಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದೆವು ಮುಖ್ಯಮಂತ್ರಿಯವರನ್ನು ಭೇಟಿ ಮಾಡುವುದಕ್ಕೆ ಮುನ್ನ ಯಾರು ತೊಂದರೆಗೆ ಈಗಾಗಿದ್ದಾರೆ ಅವರನ್ನೆಲ್ಲಾ ಭೇಟಿ ಮಾಡಿದೆವು ಅವರಿಗೆ ಪುನರ್ವಸತಿ ಎಲ್ಲಿ ಕೊಟ್ಟಿದ್ದಾರೆ ಆ ಜಾಗಕ್ಕೂ ನಾವು ಭೇಟಿ ಮಾಡಿದೆವು ಆದಾದಮೇಲೆ ಮುಖ್ಯಮಂತ್ರಿಯವರ ಜೊತೆಯಲ್ಲಿ ನಮ್ಮ ನಿಯೋಗದ ಸದಸ್ಯರು, ನಾನು ನಮ್ಮ ಅಧಿಕಾರಿಗಳು ಸುಮಾರು ಒಂದೂವರೆ ಗಂಟೆಗಳ ಕಾಲ ಚರ್ಚೆಯನ್ನು ಮಾಡಿದೆವು ಆ ಸಂದರ್ಭದಲ್ಲಿ ನಾಲ್ಕು ಭರವಸೆಗಳನ್ನು ಗೋವಾದ ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ ಅವರು ಮಾತನಾಡುವ ಮೊದಲು ಪೀಠಿಕೆಯಾಗಿ ಏನು ಹೇಳಿದರೆಂದರೆ, ಯಾರ್ಯಾರು ಗೋವಾದಲ್ಲಿದ್ದಾರೆ ಅವರೆಲ್ಲಾ ಗೋವಾದ ನಾಗರೀಕರು, ಅದು ಕನ್ನಡ ಮೂಲದವರು ಇರಬಹುದು, ಕರ್ನಾಟಕದ ಮೂಲದವರಿರಬಹುದು, ಆಂಧ್ರದ, ಉತ್ತೆ ಪ್ರದೇಶದ ಮೂಲದವರಿರಬಹುದು, ಯಾರೇ ಇದ್ದರೂ ಅವರೆಲ್ಲರಿಗೂ ಸಂರಕ್ಷಣೆಯನ್ನು ಕೊಡತಕ್ಕದ್ದು ನನ್ನ ಜವಾಬ್ದಾರಿ, ತಲವು ಕರ್ನಾಕದಿಂದ ಕನ್ನಡಿಗರ ಪರವಾಗಿ ಏನು ಬಂದಿದ್ದೀರಿ ತಮಗೆ ನಾನು ಭರವಸೆಯನ್ನು ಕೊಡುತ್ತೇನೆ, ಗೋವಾದಲ್ಲಿ ಸುಮಾರು 12 ಲಕ್ಷ ಜನಸಂಖ್ಯೆಯಲ್ಲಿ ಸುಮಾರು

ಮೂರು ಲಕ್ಷ ಜನರು ಕನ್ನಡಿಗರಿದ್ದಾರೆ, ಪ್ರತಿಯೊಬ್ಬರಿಗೂ ನಾನು ಸಂಪೂರ್ಣವಾದ ರಕ್ಷಣೆಯನ್ನು ಕೊಡತಕ್ಕದ್ದು ನನ್ನ ಜವಾಬ್ದಾರಿ, ಅದು ನನ್ನ ಕರ್ತವ್ಯ ಅದನ್ನು ನಾಣು ಮಾಡುತ್ತೇನೆ ಎಂಬ ಭರವಸೆಯನ್ನು ಮೊದಲಯದಾಗಿ ಅವರು ಕೊಟ್ಟಿದ್ದಾರೆ ಎರಡನೆಯದಾಗಿ, ಅಕ್ಟೋಬರ್–ನವೆಂಬರ್ ತಿಂಗಳ ಒಳಗಾಗಿ ಇದರ ಬಗ್ಗೆ ಒಂದು ವಾದವಿದೆ, ಕೆಲವರು ಹೇಳುತ್ತಾರೆ ಅಲ್ಲಿ ಬಹಳಷ್ಟು ಕನ್ನಡಪರವಾಗಿರತಕ್ಕ ಸಂಘನೆಗಳು ಕೆಲಸ ಮಾಡುತ್ತಿವೆ, ಜೊತೆಗೆ ಸರ್ಕಾರೇತರ ಸಂಸ್ಥೆಗಳು ಎನ್ ಜಿ ಓಸ್ ಗಳು ಬಹಳ ಒಳ್ಳೆಯ ಕೆಲಸವನ್ನು ಆ ಬಯಾನ ಬೀಚ್‌ನ ಕೊಳಗೇರಿ ಪ್ರದೇಶದಲ್ಲಿ ಮಾಡುತ್ತಿವೆ ಬಡವರ ಪರವಾಗಿ ಮತ್ತು ಅಲ್ಲಿ ದುಡಿಯುತ್ತಿರುವ ಜನರ ಪರವಾಗಿ, ಆ ಪ್ರದೇಶದಲ್ಲಿರತಕ್ಕ ಜನರ ಪರವಾಗಿ non government organisations ಒಳ್ಳೆಯ ಕೆಲಸವನ್ನು ಮಾಡುತ್ತಿವೆ ಅವರು 75 ಅಲ್ಲ ಇನ್ನೂ ಹೆಚ್ಚಿನ ಕುಟುಂಬಗಳು ನಿರಾಶ್ರಿತರಾಗಿದ್ದಾರೆಂದು ಹೇಳುತ್ತಾರೆ ಅಲ್ಲಿನ ಮುಖ್ಯಮಂತ್ರಿಯವರು ಯಾರು ಮನೆಗಳನ್ನು ಕಳೆದುಕೊಂಡಿದ್ದಾರೆ ಆ ಎಲ್ಲಾ ಜನರಿಗೂ ಬಯಾಣಾ ಬೀಚ್‌ನ ಎರಡು ಮೂರು ಕಿಲೊಮೀಟರ್‌ನ ಒಳಗಡೆ ಬೇರೆ ಜಾಗವನ್ನು ಹುಡುಕಿ ನವೆಂಬರ್ ಒಳಗೆ ಎಲ್ಲರಿಗೂ ಪಕ್ಕಾ ಮನೆಗಳನ್ನು ಕಟ್ಟಿಕೊಡುತ್ತೇನೆ ಎಂಬ ಭರವಸೆಯನ್ನು ಮೊದಲನೆಯದಾಗಿ ಅವರು ನಮಗೆ ಕೊಟ್ಟಿದ್ದಾರೆ ಎರಡನೆಯದಾಗಿ, ನಾನು ಸರ್ಕಾರೇತರ ಸಂಸ್ಥೆಗಳು, ಕನ್ನಡಪರವಾಗಿರತಕ್ಕ ಸಂಘಟನೆಗಳು, ನಾವುಗಳೆಲ್ಲಾ ಇಲ್ಲಾ 75 ಕುಟುಂಬಗಳಲ್ಲಾ ಇನ್ನೂ ಬಹಳ ಜನರು, ಸುಮಾರು 150 ಕುಟುಂಬಗಳು ನಿರಾಶ್ರಿತರಾಗಿರಬಹುದು, ಎಲ್ಲರಿಗೂ ತಾವು rehabilitation packageಗೆ ಸೇರಿಸಬೇಕು ಎನ್ನತಕ್ಕ ಒತ್ತಾಯವನನು ನಾವು ಮಾಡಿದೆವು ಆಗ ಅವರು ಹೇಳಿದರು ಅಲ್ಲಿ ಇದ್ದರು ಎನ್ನುವುದಕ್ಕೆ ರೇಷನ್ ಕಾರ್ಡ್‌ನಲ್ಲಿ ಹೆಸರು ಇರಬೇಕು ಅಥವಾ ಓಟರ್ಸ್ ಲಿಸ್ಟ್‌ನಲ್ಲಿ ಹೆಸರು ಇರಬೇಕು, ಅಥವಾ ಎಲೆಕ್ಟ್ರಿಕ್ ಸಿಟಿ ಬಿಲ್ಲನ್ನು ಅಥವಾ ವಾಟರ್ ಬಿಲ್ಲನ್ನು ಕಟ್ಟಿರಬೇಕು, ಏನಾದರೂ ಒಂದು ಪ್ರೋಫ್‌ನ್ನು ನನಗೆ ಅಥವಾ ನನ್ನ ಅಧಿಕಾರಿಗಳಿಗೆ ತೋರಿಸಿದರೆ ಸಾಕು ಅವರೆಲ್ಲರಿಗೂ ಮನೆಗಳನ್ನು ನವೆಂಬರ್‌ನಲ್ಲಿ ಕಟ್ಟಿಕೊಡತಕ್ಕ ಭರವಸೆಯನ್ನು ಕೊಟ್ಟಿದ್ದೇನೆ, ಬಜೆಟ್‌ನಲ್ಲೂ ಇದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ನಾನು ಕೊಟ್ಟಿದ್ದೇನೆ, ಇದು ಗೋವಾ ಸರ್ಕಾರದ ತೀರ್ಮಾನವೇನಲ್ಲ, ಬಾಂಬೆ ಕೋರ್ಟ್‌ನಲ್ಲಿರುವ ಗೋವಾ ಬೆಂಚ್ ಏನಿದೆ, ಗೋವಾದ ಹೈಕೋರ್ಟ್ ಎಂದರೆ ಮುಂಬೈನಲ್ಲಿರುವ ಗೋವಾಬೆಂಚ್, ಅಲ್ಲಿ ಕೊಟ್ಟಿರುವ ತೀರ್ಮಾನ ಇದು, ಒಂದು ವರ್ಷ ಅವಧಿ ಕೊಟ್ಟು ಒಂದು ವರ್ಷದ ಒಳಗಡೆ ಈ ಬಯಾನ ಬೀಚ್‌ನಲ್ಲಿರುವ ಪ್ರದೇಶವನ್ನೆಲ್ಲಾ ಸ್ವಚ್ಚ ಮಾಡಬೇಕು ಎನ್ನತಕ್ಕದ್ದು ಮತ್ತು ಅಲ್ಲಿರತಕ್ಕಂಥ ಸೆಕ್ಸ್ ವರ್ಕರ್ಸ್ ಯಾರಿದ್ದಾರೆ ಅವರನ್ನೆಲ್ಲಾ ಆಯಾ ರಾಜ್ಯಗಳಿಗೇ ಡಿಲೋರ್ಟ್ ಮಾಡಿ ಅಂದರೆ ಕಳಿಸಿಕೊಟ್ಟು ಅವರಿಗೆ ಆಯಾಯ ರಾಜ್ಯಗಳೇ rehabilitation ಮಾಡಬೇಕು ಎನ್ನತಕ್ಕ ಒಂದು order copy ನ್ನು ನಮಗೆ ತೋರಿಸಿದರು ಅದನ್ನು ನಾವು ಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಯವರಿಗೆ ಕೊಟ್ಟಿದ್ದೇವೆ ಮತ್ತು ಯಾರು ಫರವಾರಿಗಳೆಂದು ಇದ್ದಾರೆ ಅಂದರೆ ಸೆಕ್ಸ್ ವರ್ಕರ್ಸ್‌ನ್ನು ಇಟ್ಟುಕೊಂಡು ವ್ಯವಹಾರ ಮಾಡತಕ್ಕ ಜನರೇನಿದ್ದಾರೆ, ಅವರನ್ನೂ ಸಹ ಓಡಿಸಬೇಕು, ಅವರನ್ನು ಅಲ್ಲಿ ಇಡಬಾರದು ಎಂದು ಹೈಕೋರ್ಟ್‌ನ ಆದೇಶವಿದೆ ಆದರೆ ಹೈಕೋರ್ಟ್‌ನ ಆ ಆದೇಶದಲ್ಲಿ ಮಳೆಗಾಲದಲ್ಲಿ ಈ ಡೆಮಾಲಿಷನ್ ಕೆಲಸವನ್ನು ಮಾಡಬಾರದು ಎಂದು ಇದೆ, ಇದನ್ನು ಗೋವಾ ಮುಖ್ಯಮಂತ್ರಿಯವರ ಗಮನಕ್ಕೆ ನಾವು ತಂದೆವು ಮತ್ತು ಫರ್ಯಾಯವಾದ ವ್ಯವಸ್ಥೆಯನ್ನು ಮಾಡದೆ ಇದನ್ನು ಮಾಡಬಾರದೆಂದು ಸಹ ಆದೇಶದಲ್ಲಿ ಹೇಳಿದ್ದಾರೆ, ಗೋವಾದ ಮುಖ್ಯಮಂತ್ರಿಯವರು ಅವರದ್ದೇ ಆದ ವಿವರಣೆಯನ್ನು ಕೊಟ್ಟಿದ್ದಾರೆ ಅದಕ್ಕಿಂತ ಹೆಚ್ಚಾಗಿ ಈ

ಸಂದರ್ಭದಲ್ಲಿ ಅವರು ನಾಲ್ಕು ಭರವಸೆಗಳನ್ನು ಕೊಟ್ಟಿದ್ದಾರೆ ಪುನರ್ವಸತಿಯನ್ನು ಮಾಡತಕ್ಕದ್ದು ಏನಾದರೂ ಅಂಕಿಗಳಲ್ಲಿ ಯಾರಾದರು ಬಿಟ್ಟುಹೋಗಿದ್ದರೆ ಪುನರ್ವಸತಿ ಕಲ್ಪಿಸಿಕೊಡುವಲ್ಲಿ ಹೆಚ್ಚಿಗೆ ಸೇರಿಸುವ ಭರವಸೆಯನ್ನು ಕೊಟ್ಟಿದ್ದಾರೆ ತಾತ್ಕಾಲಿಕವಾಗಿ ಕೊಟ್ಟಿರುವ ಪರಿಹಾರ ಸಾಲದು ಎಂಬುದನ್ನು ನಾವು ಅವರ ಗಮನಕ್ಕೆ ತಂದಿದ್ದೇವೆ ಈಗ ಊಟದ ವ್ಯವಸ್ಥೆ ಸರಿಯಿಲ್ಲ ಶೌಚಾಲಯದ ವ್ಯವಸ್ಥೆ ಸರಿ ಇಲ್ಲ, ಕುಡಿಯುವ ನೀರಿನ ವ್ಯವಸ್ಥೆ ಸರಿ ಇಲ್ಲ ಇದನ್ನು ತಾವು ತಕ್ಷಣ ಸರಿ ಮಾಡಬೇಕೆಂದು ಹೇಳಿದ್ದೇವೆ ಅವರು ಒಂದು ವಾರ, ಹದಿನೈದು ದಿನಗಳೊಳಗಡೆ ಇವರಿಗೆಲ್ಲಾ ಪಕ್ಕಾ ಕೆಲವು ಶಾಲೆಗಳನ್ನು ತೆರವು ಮಾಡಿಸಿ ಆ ಶಾಲೆಗಳಲ್ಲಿ ಅವರನ್ನು ಇಟ್ಟು ಅವರ ಆರೋಗ್ಯ ಅವರಿಗೆ ಕುಡಿಯುವ ನೀರು, ಅವರಿಗೆ ಊಟದ ವ್ಯವಸ್ಥೆಯನ್ನು ನವಂಬರ್ ತಿಂಗಳವರೆಗು ಸಹಿತ ಗೋವಾ ಸರ್ಕಾರದಿಂದಲೇ ಮಾಡತಕ್ಕ ಭರವಸೆಯನ್ನೂ ಸಹಿತ ಅವರು ಕೊಟ್ಟಿದ್ದಾರೆ ಮತ್ತು ಅಲ್ಲಿ ಯಾರು ನಮ್ಮ ಕನ್ನಡಿಗರು ನಿರಾಶ್ರಿತರಾಗಿದ್ದಾರೆ, ಅವರ ಮಕ್ಕಳನ್ನು ಶಾಲೆಗೆ ಸೇರಿಸತಕ್ಕಂಥದ್ದರ ಬಗ್ಗೆಯೂ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನೂ ಸಹಿತ ಅವರು ಕೊಟ್ಟಿದ್ದಾರೆ ಇದೆಲ್ಲದರ ಜೊತೆಗೆ ಕನ್ನಡಪ್ರಭ ದಲ್ಲಿ ಬಹಳ ಚೆನ್ನಾಗಿ ವರದಿಯನ್ನು ಮಾಡಿದರು ನಾಣಸು ಈ ಸಂದರ್ಭದಲ್ಲಿ ನಮ್ಮ ಪತ್ರಿಕೆಗಳು ಮಾಡಿರತಕ್ಕ ವರದಿಯನ್ನೂ ಸಹಿತ ಸರ್ಕಾರದ ಗಮನಕ್ಕೆ ಮತ್ತು ಸಾರ್ವಜನಿಕರ ಗಮನಕ್ಕೆ ತಂದಿರತಕ್ಕ ಅವರಿಗೂ ಸಹಾ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಮತ್ತೊಂದು ಕಡೆಯಲ್ಲಿ ಕನ್ನಡಿಗರ ಮೇಲೆ ಹಲ್ಲೆಯಾಯಿತು ಎನ್ನತಕ್ಕ ವಿಚಾರ ಕೂಡ ಬಂದಿದೆ ಅಲ್ಲಿ ಕೇಂದ್ರಸರ್ಕಾರದ ಸೂಚನೆ ಮೇರೆಗೆ ಅಲ್ಲಿ ಯಾರೋ ಭಯೋತ್ಪಾದಕರಿದ್ದಾರೆ ಎಂದು ಹೇಳಿ ಆ ಭಯೋತ್ಪಾದಕರನ್ನು ಗುರುತಿಸಬೇಕು ಎನ್ನುವ ಸಂದರ್ಭದಲ್ಲಿ ಕೆಲವರಿಗೆ ತೊಂದರೆಯಾಗಿರತಕ್ಕಂಥದ್ದು ನಿಜ ನಾಣು ಇನ್ನು ಮೇಲೆ ಅದು ಆಗದೇ ಇರುವ ಹಾಗೆ ನೋಡಿಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ಸಹಿತ ನಮಗೆ ಈ ಸಂದರ್ಭದಲ್ಲಿ ಕೊಟ್ಟಿದ್ದಾರೆ ಇದಿಷ್ಟೂ ವಸ್ತುಸ್ಥಿತಿ ಅಲ್ಲಿ ನಡೆದಿರತಕ್ಕಂಥದ್ದು ನಾವೇನು ಹೇಳಿದ್ದೇವೆಂದು ಹೇಳಿದರೆ ಅವರ ಭರವಸೆಯನ್ನು ಕೇಳಿಕೊಂಡು ಬರುವುದಷ್ಟೇ ಅಲ್ಲ, ನಾವು ಹೇಳಿದ್ದೇವೆ , ನಮಗೆ ಮುಖ್ಯಮಂತ್ರಿಗಳೇ ಹೇಳಿದ್ದರು, ಅವರಿಗೇನಾದರೂ ಹಣ ಬೇಕಾದರೆ ರೀಹಾಬಿಲಿಟೇಟ್ ಮಾಡಲು ಅಥವಾ ಮನೆಗಳನ್ನು ಕಟ್ಟಿಕೊಡುವ ವಿಚಾರದಲ್ಲಿ ತಾತ್ಕಾಲಿಕ ಪರಿಹಾರವನ್ನು ಕೊಡುವ ವಿಚಾರದಲ್ಲಿ ನಿಮಗೆ ಹಣ ಬೇಕಾದರೆ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಗೋವಾದ ಮುಖ್ಯಮಂತ್ರಿಗಳಿಗೆ ನಮ್ಮ ನಿಯೋಗ ತಿಳಿಸಿತು ಅವರು ಹೇಳಿದರು, ನಮ್ಮ ಸರ್ಕಾರಕ್ಕೆ ಹಣದ ಅವಶ್ಯಕತೆ ಇಲ್ಲ, ನಮ್ಮ ಹತ್ತಿರ ಹಣ ಇದೆ, ನಾವೆಲ್ಲಾ ವ್ಯವಸ್ಥೆಯನ್ನು ಸಹಿತ ಮಾಡುತ್ತೇವೆ, ನಿಮ್ಮ ಹಣದ ಅವಶ್ಯಕತೆ ಇಲ್ಲ ಎನ್ನತಕ್ಕ ಮಾತನ್ನು ಗೋವಾದ ಮುಖ್ಯಮಂತ್ರಿಗಳಾದ ಶ್ರೀಮಾನ್ ಪೆರಿಕ್ಕರ್‌ರವರು ನಮಗೆ ಭರವಸೆಯನ್ನು ಕೊಟ್ಟಿದ್ದಾರೆ ನಾನು ಇದಕ್ಕೆ ತೃಪ್ತಿ ಇದೆ ಎಂದು ಹೇಳುವುದಿಲ್ಲ ಆದರೆ ನಮ್ಮ ಮುಖ್ಯಮಂತ್ರಿಗಳಿಗೆ, ನಮ್ಮ ಹೊರ ರಾಜ್ಯದ ಮುಖ್ಯಮಂತ್ರಿಗಳು ನಮಗೊಂದು ಭರವಸೆಯನ್ನು ಕೊಟ್ಟಿರುವುದರಿಂದ ಆ ಭರವಸೆಗಳ ಬಗ್ಗೆ ನಾನು ಸಮಾಧಾನವನ್ನು ವ್ಯಕ್ತಮಾಡಿದ್ದೇನೆ, ನಾವು ಕಾದು ನೋಡುತ್ತೇವೆ ಸರ್ಕಾರ ತಾವು ಹೇಳಿದ ಹಾಗೆ ಅವಶ್ಯಕತೆ ಬಿದ್ದಲ್ಲಿ ಈಗ ಪುನರ್‌ವಸತಿ ವಿಚಾರ ಇರಬಹುದು, ಅಥವಾ ಅವರಿಗೆ ತಾತ್ಕಾಲಿಕವಾಗಿ ಕೊಡತಕ್ಕಂಥದ್ದರ ಬಗ್ಗೆ ನಾವು ಕಾದು ನೋಡುತ್ತಿದ್ದೇವೆಂದು ಹೇಳಿದಾಗ ನಾನು ಅಲ್ಲಿಗೆ ಹೋಗಲಿಕ್ಕೆ ಮುನ್ನ ಕಾರವಾರ ಜಿಲ್ಲೆಯ ಅಧಿಕಾರಿಗಳನ್ನೆಲ್ಲಾ ಕರೆಸಿಕೊಂಡಿದ್ದೆ, ಜಿಲ್ಲಾ ಪೋಲೀಷ್ ವರಿಷ್ಟರನ್ನು ಕರೆಸಿಕೊಂಡಿದ್ದೆ ಜಿಲ್ಲಾಧಿಕಾರಿಗಳನ್ನೂ ಕರೆಸಿಕೊಂಡಿದ್ದೆ ಮತ್ತು ಅಲ್ಲಿ ಬೇರೆ ಬೇರೆ ಕನ್ನಡಿಗರ ಸಂಘ ಸಂಸ್ಥೆಗಳು,

ಕನ್ನಡ ಸಂಘದ ಜೊತೆಯಲ್ಲಿ ಸಮಾಲೋಚನೆಯನ್ನೂ ಮಾಡಿದೆವು ಕನ್ನಡ ಸಂಘಕ್ಕೂ ಸಹಿತ ನಾವು ವಿನಂತಿಯನ್ನು ಮಾಡಿಕೊಂಡಿದ್ದೇವೆ ಅವರು ಮಾಡುತ್ತಿದ್ದಾರೆ ಅಲ್ಲಿ ಯಾರು ತಾತ್ಕಾಲಿಕ ಪುನರ್‌ವಸತಿಯನ್ನು ಆಹಾರ ಮತ್ತು ಕುಡಿಯುವ ನೀರನ್ನು ಕೊಡುವ ವಿಚಾರದಲ್ಲಿ ಅವರಿಗ ಸಹಕಾರ ಬೇಕಾದರೆ ಕೊಡತಕ್ಕಂಥದ್ದಕ್ಕೆ ಅಲ್ಲಿಯ ಕನ್ನಡ ಸಂಘಗಳು ಮುಂದೆ ಬಂದಿವೆ ಅವರಿಗೂ ಸಹಿತ ನಾವು ಭೇಟಿ ಮಾಡಿ ಅವರ ವಿಚಾರಗಳನ್ನು ಸಹಿತ ನಾವು ಗಮನದಲ್ಲಿಟ್ಟುಕೊಂಡಿದ್ದೇವ ಅದರಿಂದ ಈಗ ಕೇಂದ್ರಸರ್ಕಾರಕ್ಕೆ ಹೋಗತಕ್ಕ ವಿಚಾರ ಮತ್ತು ಕೇಂದ್ರದ ಗೃಹಸಚಿವರನ್ನು ಭೇಟಿ ಮಾಡುವ ವಿಚಾರ, ಮಾನವ ಹಕ್ಕುಗಳ ಆಯೋಗದ ಗಮನಕ್ಕೆ ಇದನ್ನು ಸಲ್ಲಿಸುವ ವಿಚಾರ ಇವೆಲ್ಲವೂ ಸಹಿತ ಯಾವಾಗ ಪ್ರಶ್ನೆ ಬರುತ್ತದೆಂದು ಹೇಳಿದರೆ ಗೋವಾದ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಭರವಸೆಯನ್ನು ಈಡೇರಿಸದೇ ಇರುವ ಸಂದರ್ಭದಲ್ಲಿ ಖಂಡಿತವಾಗಿಯೂ ಸಹ ರಾಜ್ಯಸರ್ಕಾರ ಕೈಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ ನಾನು ಖಾಸಗಿಯಾಗಿ ನಮ್ಮ ಹಿರಿಯ ನಾಯಕರಾಗಿರತಕ್ಕ ಶ್ರೀಮಾನ್ ವಾಟಾಳ್ ನಾಗರಾಜ್‌ರವರ ಜೊತೆಯಲ್ಲಿ ಮಾತನಾಡಿದಾಗ ಅವರೊಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ ನೀವು ಗೋವಾಕ್ಕ ಹೋಗುವುದಕ್ಕಿಂದ ಹೆಚ್ಚಾಗಿ ಕೇಂದ್ರಸರ್ಕಾರದ ಜೊತೆಯಲ್ಲಿ ಇದರ ಬಗ್ಗೆ ವ್ಯವಹಾರವನ್ನು ಮಾಡಬೇಕು ಕೇಂದ್ರಸರ್ಕಾರದ ಗೃಹಮಂತ್ರಿಗಲ ಜೊತೆಯಲ್ಲಿ ಇದರ ಬಗ್ಗೆ ವ್ಯವಹಾರವನ್ನು ಮಾಡಬೇಕೆಂದು ಹೇಳಿದ್ದಾರೆ ನಾನು ಅದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ ಈ ವಿಚಾರವನ್ನು ನಮ್ಮ ಅಂತರರಾಜ್ಯ ಅಲ್ಲಿ ಮೂರು ಲಕ್ಷ ಜನ ಕನ್ನಡಿಗರಿದ್ದಾರೆ ಮತ್ತೆ ನಮ್ಮ ಅನೇಕ ಕನ್ನಡ ಪರವಾಗಿರತಕ್ಕ ಸಂಘಟನೆಗಳು ಈಗಾಗಲೇ ಕರ್ನಾಟಕದಲ್ಲಿ ಪ್ರತಿಭಟನೆಯನ್ನು ಮಾಡಿದೆ ಶಾಂತಿಯನನು ಕಾಪಾಡಿಕೊಂಡು ಹೋಗಬೇಕಾಗುತ್ತದ ಆ ರೀತಿ ಕಾಪಾಡಿಕೊಂಡು ಹೋಗಬೇಕೆಂದು ಹೇಳಿದಾಗ ನೀವೆಲ್ಲಾ ಶಾಂತಿಯಿಂದ ಇರಿ, ನಮ್ಮ ಕನ್ನಡಿಗರಿಗೆ ಅಲ್ಲಿ ತೊಂದರೆಯಾಗಲಿ ಎಂದು ಹೇಳುವುದಕ್ಕಾಗುವುದಿಲ್ಲ ಅವರ ರಕ್ಷಣೆಯನ್ನೂ ಸಹಿತ ನಾವು ಮಾಡಬೇಕಾಗುತ್ತದೆ ಅದು ನಮ್ಮ ಸರ್ಕಾರದ ಕರ್ತವ್ಯ ಮತ್ತು ಧರ್ಮ ಅದು ನಮ್ಮ ಕರ್ತವ್ಯ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಅದರಿಂದಲೇ ಗೋವಾದಲ್ಲಿ ಆಗುತ್ತಿರುವ ಬಳಬಣಿಗೆಗಳನ್ನು ಸರ್ಕಾರ ಸೂಕ್ಷ್ಮವಾಗಿ ಗಮನಿಸುತ್ತಿದೆ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಮತ್ತು ಮಾನ್ಯ ಹೆಚ್ ಕ ಪಾಟೀಲರು ಹಾಗೂ ನಮ್ಮ ನಿಯೋಗದ ಇತರೇ ಸದಸ್ಯರುಗಳು ಭೇಟಿ ಮಾಡಿ ಅವರಿಗಲ್ಲಾ ವಿಷಯವನ್ನೂ ತಿಳಿಸಿದ್ದೇವೆ ನಾನೂ ಸಹಿತ ನಿಯೋಗ ಹೋಗಿ ಬಂತು, ನಿಯೋಗ ವಿಸರ್ಜನೆ ಆಯಿತು ಎಂದು ಸುಮ್ಮನೆ ಕುಳಿತುಕೊಂಡಿಲ್ಲ ಮಾನ್ಯ ಅಧ್ಯಕ್ಷರೇ ನಾನು ಅದನ್ನು ತಿಳಿದುಕೂಂಡು ಅಲ್ಲೇನು ಬೆಳವಣಿಗೆಗಳಾಗುತ್ತಿವೆ ನಮ್ಮ ಪರವಾಗಿರತಕ್ಕಂಥ ಜನರು ಯಾರಿದ್ದಾರೆ, ಅವರ ಹೊತಯಿಲ್ಲಿ ಸಂಪರ್ಕವನ್ನು ಇಟ್ಟುಕೊಂಡು ಅಲ್ಲಿ ಪರಿಹಾರದ ವಿಚಾರದಲ್ಲಿ ಮತ್ತೊಂದು ವಿಚಾರದಲ್ಲಿ ಗಮನವನ್ನು ಇಟ್ಟಿರುತ್ತೇನೆ ಈ ಸರ್ಕಾರ ಪರಿಹಾರ ಅಗತ್ಯ ಬಿದ್ದಲ್ಲಿ ಎಲ್ಲಾ ರೀತಿಯ ನೆರವನ್ನೂ ಗೋವಾ ಸರ್ಕಾರದ ಮೂಲಕ ಅವರಿಗೆ ಕೊಡಲಿಕ್ಕೆ ತಯಾರಿದ್ದೇವೆ ಎನ್ನತಕ್ಕ ಮಾತನ್ನು ಹೇಲಿ ಈ ಸಂದರ್ಭದಲ್ಲಿ ನಮಗೂ ನೋವು ಇದೆ ಇದು ಆಗಬಾರದಾಗಿತ್ತು ಆದರೆ ಅಲ್ಲೇನಾಗಿದೆ ಎಂದು ಹೇಳಿದರೆ ಕೆಲವು ಸಕ್ ವರ್ಕರ್ಸ್ ಎನ್ನುವ ನೆಪದಲ್ಲಿ ಕೆಲವರು ಅದನ್ನು ದುರುಪಯೋಗ ಮಾಡಿಕೊಂಡಿರತಕ್ಕಂಥದ್ದು ವಾಸ್ತವಾಂಶ ಆದರೆ ಪಾಪ ಬಡವರು, ಕೂಲಿ ಮಾಡತಕ್ಕಂಥವರು ಗೋವಾಗೆ ಹೋಗಿರತಕ್ಕಂಥವರು ಯಾರು ನಮ್ಮ ಕನ್ನಡಿಗರು ಹೊಟ್ಟೆ ಪಾಡಿಗೋಸ್ಕರ ಹೋಗಿರತಕ್ಕ ಜನ, ಎಲ್ಲಾ ಉತ್ತರ ಕರ್ನಾಟಕದಿಂದ ಕೂಲಿಗೋಸ್ಕರ ಹೋಗಿರತಕ್ಕ ಜನ ಇವರು ಇವತ್ತು ಎನ್ನೆ ಹೋಗಿರತಕ್ಕಂಥವರಲ್ಲ 40 ವರ್ಷ

ವರ್ಷಗಳಿಂದ ಹೋಗಿ ಅಲ್ಲೆಲ್ಲಾ ನೆಲೆಯಾಗಿದ್ದಾರೆ ಅವರನ್ನು ಏಕಾಏಕಿ ಆಚೆಗೆ ಹಾಕಲಿಕ್ಕೆ ನಾವು ಬಿಡುವುದಕ್ಕಾಗುವುದಿಲ್ಲ ಆದ್ದರಿಂದ ಅವರನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಎಲ್ಲಾ ರೀತಿಯ ಕ್ರಮಗಳನ್ನೂ ಸಹಿತ ತೆಗೆದುಕೊಳ್ಳುತ್ತದೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರ್ಕಾರ ಅದರ ಬಗ್ಗೆ ನಾವು ಗಮನವನ್ನು ಹರಿಸಿದ್ದೇವೆ ನಿಗಾವನ್ನು ಇಟ್ಟಿದ್ದೇವೆ ಅಗತ್ಯಬಿದ್ದಲ್ಲಿ ತಮ್ಮನ್ನೂ ಸಹಿತ ವಿಶ್ವಾಸಕ್ಕೆ ತೆಗೆದುಕೊಂಡು ಸರ್ವಪಕ್ಷದವರನ್ನೂ ಸಹಿತ ಕರೆಸಿ ಇದರ ಬಗ್ಗೆ ಅವರ ಅಭಿಪ್ರಾಯಗಳನ್ನೂ ಸಹಿತ ತೆಗೆದುಕೊಂಡು ನಿಮ್ಮನ್ನೂ ಸಹಿತ ಕರೆಸಿ, ಬೇರೆ ಬೇರೆ ಪಕ್ಷದ ಮುಖಂಡರುಗಳನ್ನೂ ಸಹಿತ ಕರೆಸಿ ನಮ್ಮ ಸರ್ಕಾರ ನಿಮ್ಮ ಅಭಿಪ್ರಾಯದ ಮೇರೆಗೆ ನಾವು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಬದ್ಧವಾಗಿದ್ದೇವೆ ಎನ್ನುವ ಭರವಸೆಯನ್ನು ಈ ಸಭೆಯ ಮೂಲಕ ತಮಗೆ ಮತ್ತು ಗೌರವಾನ್ವಿತ ಸದಸ್ಯರುಗಳಿಗೆ ನಾನು ಕೊಡುತ್ತೇನೆ

6 ಪ್ರಕಟಣೆ

ಛೇರ್ಮನ್ ಹನ್ನೆರಡನೇ ವಿಧಾನಸಭೆಯಲ್ಲಿ ನಡೆದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹನ್ನೆರಡನೇ ವಿಧಾನ ಸಭೆಯ ಪ್ರಥಮ ಅಧಿವೇಶನವು ದಿನಾಂಕ 9ನೇ ಜೂನ್, 2004 ರಿಂದ 18ನೇ ಜೂನ್, 2004 ರವರೆಗೆ ಹಾಗೂ 28ನೇ ಜೂನ್, 2004 ರಂದು ಸಮಾವೇಶಗೊಂಡು ಒಟ್ಟು 9 ದಿನಗಳು ಕಾರ್ಯಕಲಾಪಗಳನ್ನು ನಡೆಸಿ 26 38+5 30=32 08 ಗಂಟೆಗಳು ನಿಮಿಷಗಳ ಕಾಲ ಸಭೆಯನ್ನು ನಡೆಸಿರುತ್ತದೆ

ಅಧಿವೇಶನದ ಪ್ರಾರಂಭದ ದಿನವಾದ 09 06 2004ರಂದು ಹನ್ನೆರಡನೇ ವಿಧಾನ ಸಭೆಗೆ ಚುನಾಯಿತರಾದ 177 ಸದಸ್ಯರುಗಳು ಹಾಗೂ ದಿನಾಂಕ 10 06 2004 ರಂದು 44 ಸದಸ್ಯರು, ಹಂಗಾಮಿ ಸಭಾಧ್ಯಕ್ಷರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು ದಿನಾಂಕ 14 06 2004 ರಂದು 3 ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು. ಹಾಗೂ ನಾಮ ನಿರ್ದೇಶನಗೊಂಡ ಸದಸ್ಯರಾದ ಶ್ರೀ ಐವಾನ್ ನಿಗ್ಲಿ ಅವರು ಇಂದು ಪ್ರಮಾಣ ವಚನ ಸ್ವೀಕರಿಸಿದರು

ದಿನಾಂಕ 11ನೇ ಜೂನ್, 2004 ರಂದು ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ಜಂಟಿ ಸದನವನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ ರಾಜ್ಯಪಾಲರ ಭಾಷಣದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆಯಾಗದೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ನೀಡುವ ಮೂಲಕ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿದೆ

ಇತ್ತೀಚೆಗೆ ನಿಧಾನರಾದ ವಿಧಾನಸಭೆಯ ಮಾಜಿ ಸದಸ್ಯರುಗಳಾದ ಹಾಗೂ ಸಚಿವರಾಗಿದ್ದ ಶ್ರೀ ಜಿ ರಾಜುಗೌಡ, ಶ್ರೀ ಡಿ ಬಿ ಕಲ್ಮಣ್‌ಕರ್, ಶ್ರೀ ಪಿ ವೆಂಕಟರಮಣ ಹಾಗೂ ಮಾಜಿ ಸದಸ್ಯರಾದ ಶ್ರೀ ಎನ್ ಗಂಗಾಧರ್, ಶ್ರೀ ಎಂ ಜಿ ಜರತಾರಘರ ಹಾಗೂ ಚಲನಚಿತ್ರ ತಾರೆ ಶ್ರೀಮತಿ ಸೌಂದರ್ಯ ಹಾಗೂ ಇತರ ಮೂವರು ಲಘ ವಿಮಾನ ಅಪಘಾತದಲ್ಲಿ ಮರಣ ಹೊಂದಿರುವ ಮೃತರ ಗೌರವಾರ್ಥ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಗಿದೆ

ನಿಯಮ 60ರ ಮೇರೆಗೆ ಬರಗಾಲ ಪೀಡಿತ ಪ್ರದೇಶಗಳಲ್ಲಿ "ಕೂಲಿಗಾಗಿ ಕಾಳು" ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಬಡ ಕೂಲಿ ಕಾರ್ಮಿಕರಿಗೆ ಹಂಚಲೆಂದು ಮೀಸಲಾದ ಅಕ್ಕಿಯು ಅವರಿಗೆ ತಲುಪದೇ ದೊಡ್ಡ ಹಗರಣವಾಗಿರುವ ನಿಲುವಳಿ ಸೂಚನೆಯನ್ನು ಸ್ವೀಕರಿಸಿದ್ದು, ಮಾನ್ಯ ಸದಸ್ಯರುಗಳಿಗೆ ಪ್ರಾರಂಭಿಕವಾಗಿ ಪ್ರಸ್ತಾಪಿಸಲು ಅವಕಾಶ ನೀಡಿ, ನಿಯಮ 69ರ ರನ್ನಾಗಿ ಪರಿವರ್ತಿಸಿ

ಚರ್ಚಿಸಲು ಅವಕಾಶ ಕಲ್ಪಿಸಲಾಯಿತು ಅಲ್ಲದೆ, 69ನೇ ನಿಯಮದಡಿಯಲ್ಲಿ ಮೂರು ಸೂಚನೆಗಳನ್ನು ಸ್ವೀಕರಿಸಿದ್ದು, ಚರ್ಚೆಗೆ ಅವಕಾಶ ನೀಡಲಾಯಿತು

ಪ್ರಸಕ್ತ ಅಧಿವೇಶನದಲ್ಲಿ 107 ಕಾಗದ ಪತ್ರಗಳನ್ನು ಸಭೆಯು ಮುಂದೆ ಮಂಡಿಸಲಾಗಿರುತ್ತದೆ ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳಂತೆ 2004–2005ನೇ ಸಾಲಿನ ಸ್ಥಾಯಿ ಸಮಿತಿಗಳಿಗೆ ಮತ್ತು ಅನಾಥಾಲಯ ಹಾಗೂ ಧರ್ಮಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡಲು ಸದನವು ಸಭಾಧ್ಯಕ್ಷರಿಗೆ ಅಧಿಕಾರವನ್ನು ವಹಿಸಿದೆ ಈ ಅವಧಿಯಲ್ಲಿ ಭಾರತದ ಲೆಕ್ಕಪತ್ರ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ದಿನಾಂಕ 31ನೇ ಮಾರ್ಚ್ 2003ಕ್ಕೆ ಕೊನೆಗೊಂಡ ವಾಣಿಜ್ಯ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ನನ್ನೊಡನೆ ಸಹಕರಿಸಿದ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳೀಗೂ, ವಿರೋಧ ಪಕ್ಷದ ನಾಯಕರಿಗೂ, ಸಚಿವ ಸಂಪುಟದ ಸದಸ್ಯರುಗಳಿಗೂ, ವಿವಿಧ ಪಕ್ಷಗಳ ನಾಯಕರುಗಳಿಗೂ, ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೂ, ಪತ್ರಕರ್ತರಿಗೂ, ಆಕಾಶವಾಣಿ ಮತ್ತು ಎಲ್ಲಾ ದೂರದರ್ಶನ ಮಾಧ್ಯಮಗಳಿಗೂ, ಅಂತರ್ಜಾಲದಲ್ಲಿ ಬರಲು ಸಹಕರಿಸಿದ ಮಾಧ್ಯಮಗಳಿಗೂ, ವಿವಿಧ ಇಲಾಖಾ ಅಧಿಕಾರಿಗಳು ಹಾಗೂ ವಿಶೇಷವಾಗಿ ಕರ್ನಾಟಕ ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ

ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತೇನೆ

(ಸದನವು 5 50 ಘಂಟೆಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

ಮುದ್ರಕರು ನಿರ್ದೇಶಕರು ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು
ಸಜೆಮುತು ಕಾಸೂ 109 350 ಪುಸ್ತಕಗಳು ದಿನಾಂಕ 03-09-2005

†ಈ ಚಿಹ್ನೆ ಮಾನ್ಯ ಸದಸ್ಯರ ಅಪ್ಪಣೆ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತೆವೆ

(B) 025240